ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಭಾಷಾ ನಿಖಾಯಕ್ಕೆ ಪಿ.ಎಚ್‌ಡಿ ಪದವಿಗಾಗಿ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕ

ಬಾಲಪ್ಪ ಗೂಳಪ್ಪ ಜೋಗಿನ

ಮಾರ್ಗದರ್ಶಕರು

ಡಾ. ಸಂಗಮೇಶ ಬಿರಾದಾರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ

ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ

ಸಂಶೋಧನ ಕೇಂದ್ರ

ವಿಜಾಪುರ-೫೮೬೧೦೨.

೨೦೧೦

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಭಾಷಾ ನಿಖಾಯಕ್ಕೆ ಪಿ.ಎಚ್‌ಡಿ ಪದವಿಗಾಗಿ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕ

ಬಾಲಪ್ಪ ಗೂಳಪ್ಪ ಜೋಗಿನ

ಮಾರ್ಗದರ್ಶಕರು

ಡಾ. ಸಂಗಮೇಶ ಬಿರಾದಾರ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಭಾಷಾ ನಿಕಾಯ
ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ
ಸಂಶೋಧನ ಕೇಂದ್ರ
ವಿಜಾಪುರ-೫೮೬೧೦೩
೨೦೧೦

ದೃಢೀಕರಣ ಪತ್ರ

'ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು' ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಬಾಲಪ್ಪ ಗೂಳಪ್ಪ ಜೋಗಿನ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಸಂಗಮೇಶ ಬಿರಾದಾರ
ಮಾರ್ಗದರ್ಶಕರು

ಸ್ಥಳ : ಜಮಖಂಡಿ
ದಿನಾಂಕ : ೧೦.೧೨.೨೦೧೦

ಪ್ರಮಾಣ ಪತ್ರ

'ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು' ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಸಂಗಮೇಶ ಬಿರಾದಾರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಬಾಗಲಕೋಟೆ

ದಿನಾಂಕ : ೧೮.೧೨.೨೦೧೦

ಬಾಲಪ್ಪ ಗೂಳಪ್ಪ ಜೋಗಿನ

ಸಂಶೋಧನ ವಿದ್ಯಾರ್ಥಿ

ಕೃತಜ್ಞತೆಗಳು

'ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು' ಕುರಿತು ಕೈಕೊಂಡ ಸಂಶೋಧನ ಮಹಾಪ್ರಬಂಧವನ್ನು 'ಕನ್ನಡ ವಿ.ವಿ. ಹಂಪಿ'ಗೆ ಸಲ್ಲಿಸುತ್ತಿರುವ ಈ ಸಂದರ್ಭವು ನನ್ನ ಜೀವನದ ಪ್ರಮುಖ ಘಟ್ಟಗಳ ಲ್ಲೊಂದಾಗಿದೆ. ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗಲೇ ಸಂಶೋಧನೆಯ ಕ್ಷೇತ್ರದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡಿದ್ದೆನು. ಆದರೆ ಸಂಶೋಧನೆ ನಡೆಸಲು ಅಧಿಕೃತವಾಗಿ ಯಾವುದೇ ವಿಶ್ವವಿದ್ಯಾಲಯದ ಅಡಿಯಲ್ಲಿ ನನಗೆ ಅವಕಾಶ ದೊರೆಯಲಿಲ್ಲವಾದರೂ, ನನ್ನಲ್ಲಿರುವ ಸಂಶೋಧನೆಯ ಭಾವವು ಸ್ಥಳನಾಮಗಳ ನಿಷ್ಪತ್ತಿ ಬಗ್ಗೆ ಅರ್ಥಗಳ ಬಗ್ಗೆ ಯಾವಾಗಲೂ ಚಿಂತಿಸುತ್ತಿತ್ತು. ಈ ಚಿಂತನೆಗೆ ವೇಳೆಯ ನಿಶ್ಚಿತತೆ ಇರಲಿಲ್ಲ. ಆಸಕ್ತಿ, ಕುತೂಹಲ ಹಾಗೂ ಚಿಂತನೆಗಳು ನನ್ನನ್ನು ಸ್ಥಳನಾಮಗಳ ಅಧ್ಯಯನಕ್ಕೆ ಪ್ರಚೋದಿಸಿದವು. ಹೀಗಾಗಿ ಪ್ರಯತ್ನ ಮಾಡುವುದು ಪ್ರತಿಯೊಬ್ಬನ ಕರ್ತವ್ಯವೇ ಆಗಿದೆ ಎಂಬುದನ್ನು ಮನಗಂಡ ನಾನು ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಬಿ.ಎಲ್.ಡಿ.ಇ. ಸಂಸ್ಥೆಯ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆ ಕೈಕೊಳ್ಳಲು ಅವಕಾಶ ಹಾಗೂ ಮಾರ್ಗದರ್ಶಕರೂ ದೊರೆತು ಸಂತೋಷವಾಯಿತು.

ಸಂಶೋಧನೆ ಎನ್ನುವುದು ನನ್ನ ಒಂದು ಪ್ರಯತ್ನ. ಈ ಪ್ರಯತ್ನದಲ್ಲಿ ನಾನು ಸಾಕಷ್ಟು ಜನರಿಂದ ಮಾಹಿತಿ, ಸಹಾಯ ಪಡೆದೆನು. ಮೊದಲಿಗೆ ನನ್ನ ಮಾಗದರ್ಶಕರಾದ ಹಿರಿಯ ವಿದ್ವಾಂಸರಾದ ಡಾ. ಸಂಗಮೇಶ ಬಿರಾದಾರ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುವೆನು. ಅವರನ್ನು ನಾನು ಸಾಕಷ್ಟು ಸಾರೆ ಸಂದಿಸಿ ಮಾರ್ಗದರ್ಶನ ಪಡೆದಿದ್ದೇನೆ. ಸ್ವಲ್ಪವೂ ಬೇಸರಿಸದೇ ಪ್ರತಿಯೊಂದು ಬಾರಿಯೂ ಹಲವಾರು ತಾಸಿನವರೆಗೆ ನನ್ನನ್ನು ಕೂಡಿಸಿಕೊಂಡು ವಿಷಯದ ಬಗ್ಗೆ ಚರ್ಚೆ ನಡೆಸಿ ಮಾರ್ಗದರ್ಶನ ನೀಡಿದ್ದಾರೆ. ಅವರ ಕುಟುಂಬದವರೂ ನನ್ನನ್ನು ಮನೆಯ ಸದಸ್ಯನಂತೆ ಕಂಡಿದ್ದಾರೆ. ಅವರಿಗೂ ನನ್ನ ಕೃತಜ್ಞತೆ ಅರ್ಪಿಸುವೆನು.

ಪ್ರತಿಯೊಂದು ಹಳ್ಳಿಗೂ ಆ ಊರಿನ ನಿಷ್ಪತ್ತಿ ಹಾಗೂ ಐತಿಹ್ಯಗಳೇನಾದರೂ ಇವೆಯೇ ಎಂದು ತಿಳಿಯಲು ಅವುಗಳನ್ನು ಸಂದರ್ಶಿಸಿದೆ. ಆಗ ಕೆಲವರು ನಾಮನಿಷ್ಪತ್ತಿ ಬಗ್ಗೆ ಉದಾಸೀನತೆ ತೋರಿದರೆ

ಮತ್ತೆ ಕೆಲವರು ಉತ್ಸಾಹದಿಂದ ಐತಿಹ್ಯಗಳನ್ನು, ಊರಿನ ನಿಷ್ಪತ್ತಿಯನ್ನು ಹೇಳಿದರು. ಕೆಲವರು ಹೆಸರಿನ ಬಗ್ಗೆ ಇರುವ ಪ್ರಚಲಿತ ಕತೆಯನ್ನು ಹೇಳಿದರು. ಜನರ ಉದಾಸೀನತೆ ನೋಡಿದಾಗ 'ಇದು ನಿರುಪಯುಕ್ತ ಅಥವಾ ಯಾರಿಗೂ ಬೇಕಿಲ್ಲದ ವಿಷಯ' ಎಂದೆನಿಸಿ ನಿರಾಸೆಯಾಯಿತು. ಆದರೂ 'ಒಮ್ಮೆ ಒರಳಲ್ಲಿ ತಲೆ ಇರಿಸಿದ್ದೇನೆ' ಕೈಬಿಡಬಾರದು ಎಂದುಕೊಂಡು ಸ್ಥಳನಾಮ ಅಧ್ಯಯನ ಮುಂದುವರೆಸಿದೆನು.

ಭಾಷಿಕ ವಿಶ್ಲೇಷಣೆ, ಸಾಂಸ್ಕೃತಿಕ ಅಧ್ಯಯನ ಮಾಡುತ್ತಾ ಹೋದಂತೆ ನಾಮನಿಷ್ಪತ್ತಿ ಹಾಗೂ ಅವುಗಳ ಅರ್ಥಗಳನ್ನು ಕಂಡು ಅಶ್ಚರ್ಯವಾಯಿತು. ಏಕೆಂದರೆ ಕೆಲವೊಂದು ದೇಶಿ ಪದಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ–ಭಿನ್ನವಾಗಿರುತ್ತವೆ. ಪ್ರಾದೇಶಿಕ ಪದಗಳು ಇಂದು ಜನರಿಂದ ದೂರವಾಗು ತ್ತಿದ್ದು, ಸಾರ್ವತ್ರಿಕ ಭಾಷೆಯನ್ನು ಎಲ್ಲರೂ ಅನುಸರಿಸುತ್ತಿದ್ದಾರೆ. ಕಾರಣ ಶಿಕ್ಷಣ ಹಾಗೂ ಸಮೂಹ ಮಾಧ್ಯಮಗಳು. ಇಂತಹ ಸಂದರ್ಭದಲ್ಲಿ ಸ್ಥಳನಾಮ ನಿಷ್ಪತ್ತಿ ಗುರುತಿಸಲು ಅನೇಕ ನಿಘಂಟಗಳ ಸಹಾಯ ಪಡೆದೆನು.

ಹಾಗೆಯೇ ಪ್ರತಿಯೊಂದು ತಾಲೂಕಿನ ಸ್ಥಳನಾಮಗಳ ಅಧ್ಯಯನ ಮಾಡುವಾಗ ಆಯಾ ತಾಲೂಕಿನಲ್ಲಿ ಹೆಸರು ಮಾಡಿರುವ ವಿದ್ವಾಂಸರನ್ನು ಭೆಟ್ಟಿಯಾಗಿ ಮಾರ್ಗದರ್ಶನ ಹಾಗೂ ಗ್ರಂಥಗಳ ಸಹಾಯ ಪಡೆದಿರುವೆನು. ಅವರುಗಳಲ್ಲಿ ಶ್ರೀ ಎಸ್.ಜಿ.ಕೋಟಿ, ಶ್ರೀ ವಿಶ್ವನಾಥ ವಂಶಾಕೃತಮಠ. ಡಾ. ಎಂ.ಜಿ.ವಾರಿ, ಡಾ. ಶೀಲಾಕಾಂತ ಪತ್ತಾರ, ಡಾ. ವೀರಭದ್ರಗೌಡ, ದೊಡ್ಡಣ್ಣ ಗದ್ದನಕೇರಿ ಪ್ರಮುಖರಾಗಿದ್ದಾರೆ. ಹಾಗೆಯೇ ಬಾಗಲಕೋಟೆ ಜಿಲ್ಲೆಯ ಎಲ್ಲ ಊರುಗಳ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳು ಊರಿನ ಬಗ್ಗೆ ಮಾಹಿತಿ ನೀಡಿದ್ದಾರೆ.

ಅಲ್ಲದೆ ಕಾಲಕಾಲಕ್ಕೆ ಸಭೆಕರೆದು ನಮ್ಮ ಪ್ರಗತಿವರದಿ ಪರಿಶೀಲನೆ ನಡೆಸಿ ಮಾರ್ಗದರ್ಶನ ನೀಡಿದ ಬಿ.ಎಲ್.ಡಿ.ಇ. ಸಂಸ್ಥೆಯ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ, ಸಂಶೋಧನ ಕೇಂದ್ರ ವಿಜಾಪೂರ ಇಲ್ಲಿಗೆ ಹಂಪಿ ಕನ್ನಡ ವಿ.ವಿ.ಯಿಂದ ನಿಯೋಜನೆಗೊಂಡ ಡಾ. ಎಫ್.ಟಿ.ಹಳ್ಳಿಕೇರಿ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ, ಕಾರ್ಯಾದರ್ಶಿಗಳಾದ ಡಾ. ಎಂ.ಎಸ್. ಮದಭಾವಿ, ಹಿರಿಯ ವಿದ್ವಾಂಸರಾದ ಪ್ರೊ. ಎ.ಎಸ್.ಹಿಪ್ಪರಗಿ, ಮಾರ್ಗದರ್ಶಕರಾದ ಡಾ. ಶ್ರೀರಾಮ ಇಟ್ಟಣ್ಣವರ, ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ, ಡಾ. ಎಸ್.ಕೆ.ಕೊಪ್ಪಾ, ಡಾ. ಎಂ.ಎಂ.ಪಡಶೆಟ್ಟಿ, ಡಾ. ವಸಂತ ಗುಮಾಸ್ತೆ, ಸಂಶೋಧನ ಕೇಂದ್ರದ ಗ್ರಂಥಾಲಯ ಸಿಬ್ಬಂದಿಯವರಿಗೂ ಹಾಗೂ ಇವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನಾನು ಸೇವೆಸಲ್ಲಿಸುತ್ತಿರುವ ಶ್ರೀಕಾಳಿದಾಸ ಶಿಕ್ಷಣ ಸಂಸ್ಥೆಯ, ಎಸ್.ಬಿ.ಪಾಟೀಲ, ಸಂ.ಪ.ಪೂ. ಕಾಲೇಜಿನ ಅಧ್ಯಕ್ಷರಾದ ಶ್ರೀ ಎಸ್.ಎಸ್.ಪಾಟೀಲರು ಆಡಳಿತ ಮಂಡಳಿಯವರು, ಪ್ರಾಚಾರ್ಯರಾದ ಶ್ರೀ ಆರ್.ಬಿ.ಪೂಜೇರ ಹಾಗೂ ಎಲ್ಲ ಸಿಬ್ಬಂದಿಯವರಿಗೂ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುವೆನು.

ಕೊನೆಯದಾಗಿ ಮನೆಯಲ್ಲಿ ನನಗೆ ಸಹಾಯ ಸಹಕಾರ ಮಾಡಿದ ನನ್ನ ಶ್ರೀಮತಿಯವರಾದ ಡಾ. ನಿಂಗಮ್ಮ ಬಿ. ಜೋಗಿನ, ತಾಯಿ ಕರಿಯಮ್ಮ ಮತ್ತು ಸಹೋದರರಾದ ಗೌಡಪ್ಪ, ರಾಮಣ್ಣ, ಬಸವರಾಜ, ಬನ್ನಿಹಣಮಂತ ಇವರು, ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ ಮಾಡಿದ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಶ್ರೀಮತಿ ಸವಿತಾ ಯಾಜಿ ಮತ್ತು ಶ್ರೀ ಗಣೇಶ ಯಾಜಿ ಅವರಿಗೆ ಹಾಗೂ ನನ್ನ ಸಂಶೋಧನಾಕಾರ್ಯಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾದವರಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬಾಲಪ್ಪ ಗೂಳಪ್ಪ ಜೋಗಿನ

ಪರಿವಿಡಿ

ಪ್ರಸ್ತಾವನೆ

ಮಾನವನಿಗೆ ಬೇಸಾಯ ತಿಳಿಯುವ ಮೊದಲು ಪಶುಪಾಲನೆ ಮಾಡಿಕೊಂಡು ನಿಸರ್ಗದಿಂದ ದೊರೆಯುವ ಆಹಾರ ಪದಾರ್ಥಗಳನ್ನು ನೇರವಾಗಿ ಸ್ವೀಕರಿಸಿ, ವಸತಿಗಾಗಿ ನಿಸರ್ಗ ನಿರ್ಮಿತ ಗವಿ, ಗಿಡಗಳ ಹೊದರನ್ನು ಆಶ್ರಯಿಸಿ ಜೀವನ ನಡೆಸುತ್ತಿದ್ದ ಹಾಗೂ ಅಲೆಮಾರಿಯಾಗಿದ್ದ. ಯಾವಾಗ ಅನುಭವ ಹಾಗೂ ಬುದ್ಧಿ ಶಕ್ತಿಗಳನ್ನು ಉಪಯೋಗಿಸಿಕೊಂಡು ಕೃಷಿ ಜೀವನ ಪ್ರಾರಂಭಿಸಿದನೋ ಆವಾಗ ಸ್ಥಿರವಾಗಿ ಒಂದು ಕಡೆ ನೆಲೆಸತೊಡಗಿದ. ಮನೆ, ಕೊಟ್ಟಿಗೆ ನಿರ್ಮಿಸಲು ಪ್ರಾರಂಭಿಸಿದ. ಹಾಗೆ ನೆಲೆನಿಂತ ಸ್ಥಳಗಳು ಹಟ್ಟಿ, ಊರು, ಗ್ರಾಮಗಳಾದುವು.

ಜೀವನಕ್ಕೆ ಅವಶ್ಯವಾಗಿ ಆಹಾರಕ್ಕಿಂತ ನೀರೇ ಮುಖ್ಯವೆಂದು ಕಂಡುಕೊಂಡ ಅಲೆಮಾರಿ ಮಾನವ, ನೀರು ಲಭ್ಯವಿರುವ ಪರಿಕರಗಳ ಸಮೀಪ ವಾಸಿಸತೊಡಗಿದ. ಹಾಗಾಗಿ ಮೊದಲಿನ ನೆಲೆಗಳು ನಿಸರ್ಗಾಧಾರಿತ ಹೆಸರನ್ನು ಹೊಂದಿವೆ. ಉದಾಹರಣೆ: ತೆಗ್ಗಿ, ದೋಣಿ , ಮೆಟಗುಡ್ಡ. ಇತ್ಯಾದಿ.

ಆಯಾ ಊರುಗಳ ಹೆಸರುಗಳು ಆಯಾ ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರ–ಗಿಡ, ಕೋಟೆ, ದೇವಾಲಯಗಳು ಆಯಾ ಪ್ರದೇಶದ ಚರಿತ್ರೆ ಹೇಳಲು ಸಹಾಯಕವಾಗುವುದರ ಜೊತೆಗೆ ಸ್ಥಳನಾಮ ಚರಿತ್ರೆಗೆ ಪೂರಕವಾಗುವ ಮಾಹಿತಿಯನ್ನು ಒದಗಿಸುತ್ತವೆ.

ಸ್ಥಳನಾಮ ಅಧ್ಯಯನವು ಶಿಸ್ತಿಗೊಳಪಟ್ಟು ರಚನೆಯಾಗಬೇಕು. ಆದರೆ ಕೇವಲ ಕುತೂಹಲದಿಂದ, ಹವ್ಯಾಸದಿಂದ, ವಿನೋದಕ್ಕಾಗಿ, ಜನಪದ ಐತಿಹ್ಯಗಳನ್ನು, ಸ್ಥಳಪುರಾಣಗಳನ್ನು ಮೆಚ್ಚಿಕೊಂಡು ಸ್ಥಳನಾಮಗಳ ಬಗ್ಗೆ ಲೇಖನಗಳನ್ನು ಬರೆದದ್ದುಂಟು. ಇಂತಹ ಬರಹಗಳಿಗೂ ಸಂಶೋಧನ ಬರಹಕ್ಕೂ ತುಂಬಾ ವ್ಯತ್ಯಾಸವಿದೆ. ಕೇವಲ ಐತಿಹ್ಯ, ಸ್ಥಳಪುರಾಣಗಳ ಆಧಾರದ ಮೇಲೆ ಸ್ಥಳನಾಮ ನಿಷ್ಪತ್ತಿ ನೀಡುವುದು ಅವೈಜ್ಞಾನಿಕವೆನಿಸುತ್ತದೆ. ಬದಲಾಗಿ ಕ್ಷೇತ್ರಸಮೀಕ್ಷೆ, ಪರಿಶೀಲನೆಯನ್ನು ಮಾಡಿ ಸ್ಥಳನಾಮ ನಿಷ್ಪತ್ತಿ ಹೇಳಬೇಕಾಗುವುದು. ಸ್ಥಳನಾಮಗಳನ್ನು ಸಾಂಸ್ಕೃತಿಕ, ಮಾನವ ಶಾಸ್ತ್ರೀಯ, ನೈಸರ್ಗಿಕ ದೃಷ್ಟಿಯಿಂದ ಶೋಧಿಸಬೇಕು. ಹಾಗೆ ಶೋಧಿಸುವಾಗ ಪ್ರವಾಹದ ವಿರುದ್ಧ ಈಜಿ ನದಿಮೂಲವನ್ನು ಶೋಧಿಸುವ ಪ್ರಯಾಸದಂತಹ ಅನುಭವವಾಗುವುದು.

'ಸ್ಥಳನಾಮ' ಎಂದರೆ ಊರಿನ ಹೆಸರು ಎಂದು ಹೇಳುವರು. ಗ್ರೀಕ್ ಭಾಷೆಯಲ್ಲಿ 'Topes' ಎಂದರೆ ಸ್ಥಳಗಳು. 'Nomos' ಎಂದರೆ ಹೆಸರುಗಳು. ಆದ್ದರಿಂದ ಸ್ಥಳಗಳ ಹೆಸರುಗಳನ್ನು ಅಧ್ಯಯನ ಮಾಡುವ ವಿಜ್ಞಾನಕ್ಕೆ 'Toponomy' ಎಂದು ಕರೆಯಲಾಗಿದೆ. 'Topos' ಮೂಲತಃ ಭೂವಿವರವನ್ನು ಸೂಚಿಸುವ ಅರ್ಥಹೊಂದಿದ್ದರೂ, ಪಾರಿಭಾಷಿಕವಾಗಿ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಲಕ್ಷಣಗಳೆರಡನ್ನೂ ಇದು ಒಳಗೊಂಡಿದೆ. ಸ್ಥಳನಾಮವೆಂಬ ಪದವು ಮಾನವರ ಸಣ್ಣ ನೆಲೆಯಿಂದ ಆರಂಭಿಸಿ ಅತಿ ದೊಡ್ಡ ಮಾನವ ವಸಾಹತು ನೆಲೆಗಳ ಅರ್ಥವನ್ನು ಹೊಂದಿದೆ. ಈ ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ಪೂರ್ವಪದ ಹಾಗೂ ಉತ್ತರಪದ ಎಂಬ ಎರಡು ಘಟಕಗಳು ಕೂಡಿ ಸ್ಥಳನಾಮಗಳು ಸಿದ್ಧಗೊಳ್ಳುತ್ತವೆ. ಒಮ್ಮೊಮ್ಮೆ ಎರಡಕ್ಕಿಂತ ಹೆಚ್ಚು ಘಟಕಗಳೂ ಇರಬಹುದು ಇಲ್ಲವೆ ಒಂದೇ ಘಟಕವೂ ಇರಬಹುದು.

ಅಧ್ಯಾಯ ೧

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೨. ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ೧

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸ್ಥಳನಾಮ ಹುಟ್ಟಿದ ಸಂದರ್ಭದ ಅರ್ಥವನ್ನು ಗ್ರಹಿಸುವುದೇ ಸ್ಥಳನಾಮ ಅಧ್ಯಯನದ ಮುಖ್ಯಗುರಿ. ಈಚೆಗೆ ಸ್ಥಳನಾಮ ಅಧ್ಯಯನ ವಿಜ್ಞಾನವಾಗಿ ಬೆಳೆಯುತ್ತಿದೆ. ಸ್ಥಳನಾಮಗಳ ಹಿನ್ನೆಲೆಯಲ್ಲಿ ರೋಚಕವಾದ ಐತಿಹ್ಯಗಳು ಹುಟ್ಟಿಕೊಳ್ಳುತ್ತವೆ. ಇವುಗಳು ಕೆಲವು ಅಪಾರ್ಥ, ತಪ್ಪುಗ್ರಹಿಕೆ, ಉತ್ಪ್ರೇಕ್ಷೆ ಮೊದಲಾದ ಅವೈಜ್ಞಾನಿಕ ಅಂಶಗಳನ್ನು ಒಳಗೊಂಡರೂ ಅಧ್ಯಯನಕ್ಕೆ ಒಳಪಟ್ಟಾಗ ಕನಿಷ್ಠಮಟ್ಟದ ಸತ್ಯದ ಸುಳಿವು ಸಿಗುವುದು.

ಸ್ಥಳನಾಮಗಳ ಅಧ್ಯಯನದಿಂದ ಒಂದು ಜನಾಂಗದ ಅಭಿರುಚಿ, ಸೃಜನಶೀಲಗುಣ, ಸಾಂಸ್ಕೃತಿಕ ಸಂವಹನವನ್ನು ಗುರುತಿಸಬಹುದು. ಸ್ಥಳನಾಮಗಳು ಒಂದು ನಿರ್ದಿಷ್ಟ ಅರ್ಥ ಹೊಂದಿದ್ದು, ವಾಸ್ತವ ಅಂಶಗಳಿಂದ ಕೂಡಿರುವವು. ಕೆಲವು ಸ್ಥಳನಾಮಗಳು ತೀರಾ ಸವೆದ ರೂಪದಲ್ಲಿದ್ದು, ಸವಕಳಿಯಿಂದ ಅರ್ಥವಾಗದ ಸ್ಥಿತಿಯಲ್ಲಿಯೂ ಸಿಗುತ್ತವೆ. ಅವು ಶಬ್ದ ನಿಷ್ಪತ್ತಿಯನ್ನು ಗುರುತಿಸಬೇಕೆಂಬ ಕುತೂಹಲ ಕೆರಳಿಸುವವು. ಸ್ಥಳನಾಮದ ಉದ್ದೇಶ ಒಂದು ನಿರ್ದಿಷ್ಟ ಸ್ಥಳವನ್ನು ಗುರುತಿಸುವುದು. ಅದರಿಂದ ಅದರ ಭಿನ್ನಾರ್ಥದ ಪ್ರಶ್ನೆ ಯಾರಿಗೂ ಉಂಟಾಗದು. ಅವು ಅತ್ಯಂತ ವಸ್ತುನಿಷ್ಠಗುಣ ಹೊಂದಿರುವುದರಿಂದ ಎಷ್ಟೋ ಪ್ರಶ್ನೆಗಳಿಗೆ ಉತ್ತರಿಸಬಲ್ಲವು. ಹೆಸರಿನ ಅಧ್ಯಯನ ಮಾಡುವುದೆಂದರೆ ಮಾನವನ ಇತಿಹಾಸ ಹಾಗೂ ವಿವಿಧ ಹೆಜ್ಜೆಗಳನ್ನು ಅಧ್ಯಯನ ಮಾಡುವುದೆಂದರ್ಥ.

ಬೇರೆ ಜಿಲ್ಲೆಯ, ತಾಲೂಕಿನ ಸ್ಥಳನಾಮಗಳನ್ನು ಕುರಿತು ಅಧ್ಯಯನವು ಆಗಿರುವುದನ್ನು ಅವಲೋಕಿಸಿದಾಗ ಬಾಗಲಕೋಟೆ ಜಿಲ್ಲೆಯವನಾದ ನಾನು ಈ ಜಿಲ್ಲೆಯನ್ನು ಕುರಿತು ಏಕೆ ಅಭ್ಯಸಿಸಬಾರದು ಎನ್ನುವ ಕುತೂಹಲ ನನ್ನಲ್ಲಿ ಉತ್ಪನ್ನವಾಯಿತು. ಈ ಜಿಲ್ಲೆಯು ಪ್ರಾಗೈತಿಹಾಸಿಕ, ಐತಿಹಾಸಿಕ, ಪ್ರಾಕೃತಿಕ, ಸಾಂಸ್ಕೃತಿಕ ಮಹತ್ವ ಹೊಂದಿದ್ದು ಇವು ನನ್ನ ಆಸೆಯನ್ನು ಅಂಕುರಿಸಲು

ಕಾರಣವಾದವು. ಆದ್ದರಿಂದ 'ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು' ಎಂಬ ಶೀರ್ಷಿಕೆಯನ್ನು ನನ್ನ ಅಧ್ಯಯನಕ್ಕೆ ಇರಿಸಿಕೊಂಡೆ.

ಪ್ರಾಗೈತಿಹಾಸಿಕ ತಾಣವಾದ ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲು, ಐಹೊಳೆ, ಬಾದಾಮಿಯ ಶಿಲ್ಪವೈಭವವು ವಿಶ್ವ ಪರಂಪರೆಯ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಅಲ್ಲದೆ ಖ್ಯಾಡ, ತೇರದಾಳದ ಗುಡ್ಡದಸಾಲು, ಬಾದಾಮಿಯ ರಂಗನಾಥನ ಬೆಟ್ಟ, ಇವುಗಳಲ್ಲಿ ಕಲ್ಗೋರಿಗಳು, ಗೊಂಬಿಗುಡ್ಡದ ರೇಖಾಚಿತ್ರಗಳು ಇತಿಹಾಸ ಸಂಶೋಧಕರನ್ನು ಆಕರ್ಷಿಸುತ್ತವೆ. ವ್ಯವಸಾಯಪೂರ್ವ ಯುಗವಾದ ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ, ಸೂಕ್ಷ್ಮ ಅಥವಾ ಸ್ಥಿತ್ಯಂತರ ಶಿಲಾಯುಗಗಳ ಪ್ರಾಗೈತಿಹಾಸ ಹೊಂದಿದ ಸ್ಥಳಗಳು ಮಾತ್ರ ಯಾವುದೇ ಹೆಸರನ್ನು ಹೊಂದದೆ ಉಳಿದಿವೆ ಉದಾ: ಖ್ಯಾಡದ ಸಮೀಪದ ಪ್ರಾಗೈತಿಹಾಸಿಕ ಪ್ರದೇಶ, ಬಾದಾಮಿ ಸಮೀಪ ಸಿಡಿಲುಪಡೆಯ ಪ್ರದೇಶ. ಮಾನವ ತನ್ನ ಅಲೆಮಾರಿ ಜೀವನ ಬಿಟ್ಟು ಕೃಷಿ ಮಾಡುತ್ತಾ ಒಂದೆಡೆ ನೆಲೆ ನಿಂತಾಗ ಸ್ಥಳಗಳಿಗೆ ಹೆಸರಿಡುವ ಅಗತ್ಯ ಕಂಡುಕೊಂಡು ಹೆಸರಿಟ್ಟ.

ಸಾಂಸ್ಕೃತಿಕವಾಗಿ ಸ್ಥಳನಾಮಗಳನ್ನು ಅಧ್ಯಯನ ಮಾಡುವಾಗ, ಶಾಸನಗಳಲ್ಲಿ ಸ್ಥಳನಾಮಗಳ ಉಲ್ಲೇಖ ಹಾಗೂ ಅವುಗಳ ರೂಪಗಳನ್ನು ಅಧ್ಯಯನ ಮಾಡುವಾಗ, ಮಾನವ ನಾಗರಿಕನಾದಂತೆ, ಸ್ಥಳನಾಮಗಳೂ ಆ ಸಂಸ್ಕೃತಿಯನ್ನು ಬಿಂಬಿಸುತ್ತವೆ. ನಮಗೆ ದೊರೆಯುವ ಪ್ರಾಚೀನ ಆಕರಗಳೆಂದರೆ ಲಿಪಿಗಳು. ಲಿಪಿಗಳಿರುವ ಶಾಸನಗಳಲ್ಲಿ ಕೆಲವು ಸ್ಥಳನಾಮಗಳ ಉಲ್ಲೇಖ ಬರುವವು. ಹೀಗೆ ಸಿಕ್ಕಂಥ ಉಲ್ಲೇಖಗಳ ರೂಪ ಹಾಗೂ ಇಂದಿನ ಪರಿವರ್ತಿತ ರೂಪಗಳನ್ನು ಪರಸ್ಪರ ಹೋಲಿಕೆ ಮಾಡಿ ಹಾಗೂ ಅವುಗಳಲ್ಲಿನ ಬದಲಾವಣೆಯನ್ನು ಗುರುತಿಸಲಾಗುವುದು. ಶಾಸನಗಳಲ್ಲಿ ದೊರೆತ ಸ್ಥಳನಾಮಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನಮಾಡುವಾಗ ಮಾನವ ನಾಗರಿಕನಾದಂತೆ ಸ್ಥಳನಾಮಗಳನ್ನು ಪ್ರಾಕೃತಿಕ ನೆಲೆಯಲ್ಲಿ ಕರೆಯದೇ ಸಾಂಸ್ಕೃತಿಕ ನೆಲೆಯಿಂದ ಕರೆದದ್ದನ್ನು ಗಮನಿಸುತ್ತೇವೆ. ಉದಾ: ದೇವನೂರು, ಮಂಗಳೂರು, ಕಳಸ, ಅಮರಾವತಿ ಮುಂತಾದವು.

ವರ್ಣನಾತ್ಮಕವಾಗಿ ಸ್ಥಳನಾಮಗಳನ್ನು ಅವಲೋಕಿಸಿದಾಗ– ಅವು ಬಹಳ ಸುಂದರವಾಗಿವೆ, ಹಾಗೂ ಪ್ರದೇಶವನ್ನು ವಿಶೇಷಣಗಳಿಂದ ವರ್ಣಿಸುತ್ತವೆ. ಹಾಗೂ ಆನ್ವಯಿಕವಾಗಿವೆ. ವಿಶೇಷಣ ಹೊಂದಿರುವ ಸ್ಥಳನಾಮಗಳಿಗೆ ಉದಾ: ಬೇಕಮಲದಿನ್ನಿ, ಜಾಕಮಲದಿನ್ನಿ, ಚೌಕಮಲದಿನ್ನಿ, ತೇರದಾಳ ಇತ್ಯಾದಿ. ಇನ್ನು ಆನ್ವಯಿಕಗಳಿಗೆ ಉದಾ: ಸಿದ್ಧಾಪೂರ, ಬನಹಟ್ಟಿ, ಹನುಮಸಾಗರ, ಗುಡೂರು, ಬೆನಕನವಾರಿ, ಚಿನವಾಲಕೊಪ್ಪ ಇತ್ಯಾದಿ.

ಇನ್ನು ಭಾಷಿಕವಾಗಿ ಸಾಮಾಜಿಕವಾಗಿ ಸ್ಥಳನಾಮಗಳನ್ನು ಪರಿಚಯಿಸುವುದು. ಭಾಷಿಕ ನೆಲೆಯಲ್ಲಿ ಸಂಧಿ, ಸಮಾಸ, ರೂಪನಿರ್ಮಾಣ ಮುಂತಾದುವನ್ನು ಅಭ್ಯಸಿಸುವುದಾಗಿದೆ.

ಒಂದು ಊರಿನ ಇತಿಹಾಸ ಅರಿಯಲು, ಸ್ಥಳನಾಮವು ಆಕರ ಸಾಮಗ್ರಿಯಾಗಿ ಬಹುತೇಕ ನೆರವಾಗುತ್ತದೆ. ವ್ಯಕ್ತಿಯ ಹೆಸರಿನಿಂದ, ಸಸ್ಯ, ಕಲ್ಲು, ಹಳ್ಳ-ನದಿ, ಪ್ರಾಣಿ-ಪಕ್ಷಿಗಳ ಹೆಸರಿನಿಂದ, ದಿಕ್ಕುಗಳು, ಭೂಸ್ವರೂಪ, ವೃತ್ತಿ, ಜನಾಂಗ, ಕೈಗಾರಿಕೆಗಳ ಹೆಸರಿನಿಂದ ಆಯಾ ಊರುಗಳನ್ನು ಕರೆದಿದ್ದು ತಿಳಿಯುತ್ತದೆ.

ಸಾಂಸ್ಕೃತಿಕ ಮಾಹಿತಿಯು ಸ್ಥಳನಾಮಗಳಿಂದ ಹೆಚ್ಚು ಖಚಿತವಾಗಿ ದೊರೆಯುತ್ತದೆ. ಕಾರಣ ಮಾನವ ಒಂದೆಡೆ ಸ್ಥಾಯಿಯಾಗಿ ನಿಲ್ಲಲು ಬೆಟ್ಟ-ಗುಡ್ಡ, ಕಾಡು-ಕಣಿವೆ, ಬಂಡೆ-ನದಿತಟ ಮೊದಲಾದ ಪೂರ್ವಾಶ್ರಮದ ನೆಲೆಗಳು ಕುರುಹುಗಳಾದವು. ಜೊತೆಗೆ ಪ್ರಕೃತಿಯ ಪಂಚಭೂತಗಳೇ ಮನುಷ್ಯನ ಆರಾಧ್ಯ ದೈವಗಳಾದವು. ಮಾನವನ ಬದುಕು ವಿಸ್ತಾರವಾದಂತೆಲ್ಲಾ ಪ್ರಾಕೃತಿಕ, ಭೌಗೋಳಿಕ, ಚಾರಿತ್ರಿಕ, ಐತಿಹಾಸಿಕ, ಜಾನಪದೀಯ, ಪುರಾಣ-ಐತಿಹ್ಯಗಳ ಮೂಲಕ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಸಹಜವಾಗಿ ಹಾಗೂ ವಸ್ತುನಿಷ್ಠವಾಗಿ ಹುಟ್ಟಿಕೊಳ್ಳುತ್ತವೆ. ಸ್ಥಳನಾಮಗಳನ್ನು ಸಂಸ್ಕೃತೀಕರಣ ಗೊಳಿಸಲು ಶಿಷ್ಟಭಾಷೆಗೆ ಪರಿವರ್ತಿಸಿದರೂ ಮೂಲನಾಮಗಳ ಸ್ವರೂಪಕ್ಕೇನೂ ಧಕ್ಕೆ ಉಂಟಾದದ್ದು ಕಂಡುಬರುವುದಿಲ್ಲ. ಉದಾ: ಮರನೂರು-ಶೂರ್ಪಾಲಿ.

ಬಾಗಲಕೋಟೆ ಜಿಲ್ಲೆಯಲ್ಲಿ ಭೌಗೋಳಿಕ ಅಂಶಗಳ ಮೇಲೆ ಹೆಚ್ಚಾಗಿ ಸ್ಥಳನಾಮಗಳು ಇರುವುದನ್ನು ಕಾಣುತ್ತೇವೆ. ಗುಡ್ಡ, ಹೊಳೆ, ಕಲ್ಲು, ಕಣಿವೆ, ಕೆರೆ ಮುಂತಾದವು ಹೆಸರುಗಳ ಕೊನೆಗೆ ಬರುತ್ತವೆ. ಇವು ವ್ಯಕ್ತಿ, ಕುಲ, ವೃತ್ತಿಗಳ ಹೆಸರುಗಳಿಗಿಂತ ಪೂರ್ವದಲ್ಲಿಯೇ ಹುಟ್ಟಿದ ಊರುಗಳು ಎಂಬುದು ತಿಳಿಯುತ್ತದೆ.

ಸ್ಥಳನಾಮಾಧ್ಯಯನದ ಮಹತ್ವ ಅಪರಿಮಿತವಾಗಿದೆ. ಇದರಲ್ಲಿ ಜ್ಞಾನದ ತಿರುಳಿದೆ, ನೋಟದ ಸವಿಯಿದೆ, ಕ್ಷೇತ್ರದ ಹರವಿದೆ, ಭಾಷೆಯ ಸೊಗಡಿದೆ, ಸಂಸ್ಕೃತಿಗಳ ಪ್ರತಿಬಿಂಬವಿದೆ. ಇಂಥ ಸ್ಥಳನಾಮಗಳ ಅಧ್ಯಯನದಿಂದ ಭಾಷಿಕ, ಐತಿಹಾಸಿಕ, ಜೈವಿಕ, ಭೌಗೋಳಿಕ, ಸಾಂಸ್ಕೃತಿಕ ವಿವರಗಳು ದೊರೆಯುತ್ತವೆ.

ಬಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ಕೃಷ್ಣಾನದಿ ಬೇರ್ಪಡಿಸುತ್ತದೆ. ಕಾವ್ಯ ಮತ್ತು ಶಾಸನಗಳಲ್ಲಿ ಪೆರ್ದೊರೆ, ಹಿರಿಹೊಳೆ, ಕೃಷ್ಣವೇಣಿ ಎಂದು ಈ ನದಿ ಕರೆಸಿಕೊಂಡಿದೆ. ಮಲಪ್ರಭಾ ಹಾಗೂ ಘಟಪ್ರಭಾ ನದಿಗಳು ಕೃಷ್ಣೆಯನ್ನು ಸೇರುವ (ಸಂಗಮ) ಸ್ಥಳಗಳು ಪ್ರಸಿದ್ಧವಾಗಿವೆ. ಈ ನದಿಗಳ ದಂಡೆಯ ಮೇಲೆ ಅನೇಕ ಗ್ರಾಮಗಳು ಸ್ಥಾಪಿತವಾಗಿವೆ. ಬಾದಾಮಿ, ಐಹೊಳೆ, ಪಟ್ಟದಕಲ್ಲು ವಿಶ್ವವಿಖ್ಯಾತ ಕಲಾಕೇಂದ್ರಗಳಾಗಿವೆ. ಐಹೊಳೆ 'ವಾಸ್ತುಶಿಲ್ಪದ ತೊಟ್ಟಿಲು' ಎಂದು ಕರೆಸಿಕೊಂಡಿದೆ. ಅಲ್ಲದೆ ಹುಲಗೆಮ್ಮನಕೊಳ್ಳ, ಬನಶಂಕರಿ, ಮಾಹಾಕೂಟ, ಸಿದ್ಧನಕೊಳ್ಳ ಇವು ಪುಣ್ಯಕ್ಷೇತ್ರಗಳಾಗಿವೆ. ಜಮಖಂಡಿ ತಾಲೂಕಿನ ಶೂರ್ಪಾಲಿಯ ನರಸಿಂಹದೇವರು, ಕಂಕಣವಾಡಿಯ ಗುಹೇಶ್ವರ, ತೇರದಾಳದ

ಪ್ರಭುದೇವರು ಹೇಳಿಕೊಳ್ಳುವಂತಹವು. ಮುಧೋಳ ತಾಲೂಕಿನ ಮಹಾಲಿಂಗೇಶ್ವರ, ಲೋಕಾಪೂರದ ಲೋಕನಾಥ ಪ್ರಸಿದ್ಧ.

೨. ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ

'ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು' ಎಂಬ ಮಹಾಪ್ರಬಂಧವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಸ್ಥಳನಾಮಗಳ ಬಗ್ಗೆ ಪ್ರಸ್ತಾವನೆ ಜೊತೆಗೆ ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳನ್ನು ಅಧ್ಯಯನ ಮಾಡುವ ಉದ್ದೇಶ ಹಾಗೂ ವ್ಯಾಪ್ತಿಯು ಬರುತ್ತದೆ.

ಎರಡನೆಯ ಅಧ್ಯಾಯದಲ್ಲಿ ಸ್ಥಳನಾಮಗಳ ಬಗ್ಗೆ ಅಧ್ಯಯನದ ಇತಿಹಾಸ ಹಾಗೂ ಅಧ್ಯಯನ ನಡೆದು ಬಂದ ಮಾರ್ಗವನ್ನು ನಿರೂಪಿಸಲಾಗುವದು.

ಮೂರನೆಯ ಅಧ್ಯಾಯದಲ್ಲಿ 'ಸ್ಥಳನಾಮಗಳ ವರ್ಗೀಕರಣ ಬರುತ್ತದೆ' ಇಲ್ಲಿ ಸ್ಥಳನಾಮಗಳ ಅಧ್ಯಯನಕ್ಕೆ ಹಿನ್ನೆಲೆಗಳಾದ ಜಲಸಂಪತ್ತು, ಬೆಟ್ಟಶ್ರೇಣಿ, ಮಣ್ಣುಗಳು ಪ್ರಾಗೈತಿಹಾಸಿಕ, ಐತಿಹಾಸಿಕ, ನೆಲೆಗಳನ್ನು ಅಧ್ಯಯನಮಾಡಿ ಆ ಹಿನ್ನೆಲೆಯಲ್ಲಿ 'ಪ್ರಾಗೈತಿಹಾಸಿಕ ಪ್ರಾಕೃತಿಕ, ಸಾಂಸ್ಕೃತಿಕ, ನಿರ್ವಸತಿ ವಾಚಕ, ವಸತಿವಾಚಕ'ವೆಂದು, ವಿಭಾಗಿಸಲಾಗುವುದು. ಮತ್ತು ಸ್ಥಳನಾಮಗಳ ವರ್ಗೀಕರಣ'ವನ್ನು ಮಾಡಿ ಕೂಲಂಕಷವಾಗಿ ಅಧ್ಯಯನ ಮಾಡಲಾಗುವುದು.

ನಾಲ್ಕನೆಯ ಅಧ್ಯಾಯದಲ್ಲಿ 'ಸ್ಥಳನಾಮಗಳ ಭಾಷಿಕ ವಿವೇಚನೆ ಮಾಡಲಾಗುವುದು.' ಸ್ಥಳಗಳಿಗೆ ಯಾವ ಮೂಲದಿಂದ ಹೆಸರನ್ನು ಇಟ್ಟರು. ಆಯಾ ಹೆಸರನ್ನು ಇಡುವಲ್ಲಿ ಅಥವಾ ಆಯಾ ಹೆಸರಿನಿಂದ ಸ್ಥಳಗಳನ್ನು ಕರೆಯುವಲ್ಲಿ ಸಂಧಿ, ಸಮಾಸಾದಿಗಳು ಹೇಗೆ ಕಾರ್ಯನಿರ್ವಹಿಸುವವು ಎಂಬುದನ್ನು ವಿವರಿಸಲಾಗುವುದು.

ಐದನೆಯ ಅಧ್ಯಾಯದಲ್ಲಿ ಸ್ಥಳನಾಮಗಳ ನಿಷ್ಪತ್ತಿ ನಿರುಪಣೆ ಮಾಡಲಾಗುವುದು. ಶಾಸನಗಳಲ್ಲಿ, ಜನಪದರ ನುಡಿಯಲ್ಲಿ, ಆಯಾ ಸ್ಥಳನಾಮಗಳು ವ್ಯಕ್ತವಾದ ಬಗೆಯನ್ನು ಪರಸ್ಪರ ಹೋಲಿಸಿ ವ್ಯಾಕರಣ ದೃಷ್ಟಿಯಿಂದ ಸರಿಯಾದ ಮೂಲ ಅರ್ಥ ಗ್ರಹಿಸಲು ಪ್ರಯತ್ನಿಸಲಾಗುವುದು.

ಆರನೆಯ ಅಧ್ಯಾಯದಲ್ಲಿ 'ಸ್ಥಳನಾಮಗಳ ಸಾಂಸ್ಕೃತಿ ಸ್ವರೂಪ ದರ್ಶನ' ಮಾಡಲಾಗುವುದು. ಸಂಸ್ಕೃತಿಯ ಹಿನ್ನೆಲೆಯಲ್ಲಿ ಸ್ಥಳನಾಮಗಳು ಹೇಗೆ ಕರೆಯಲ್ಪಟ್ಟವು ಹಾಗೂ ಅವುಗಳಲ್ಲಿ ಜಿಲ್ಲೆಯ ಸಂಸ್ಕೃತಿಯ ಪ್ರತಿಬಿಂಬವನ್ನು ಕಾಣುವ ಬಗೆಯನ್ನು ವಿವೇಚಿಸಲಾಗುವದು.

ಕೊನೆಯ ಹಾಗೂ ಏಳನೆಯ ಅಧ್ಯಾಯವು ಸಮಾರೋಪಕ್ಕಾಗಿ ಮೀಸಲಿದೆ. ಈ ಅಧ್ಯಾಯದಲ್ಲಿ ಮೊದಲಿನ ಎಲ್ಲ ಅಧ್ಯಾಯಗಳ ಪಕ್ಷಿ ನೋಟದ ಜೊತೆಗೆ ಸ್ಥಳನಾಮಗಳ ಅಧ್ಯಯನದ ಬಗ್ಗೆ ಒಂದು ನಿರ್ಣಯಕ್ಕೆ ಬರಲಾಗುವುದು.

ಕೊನೆಯಲ್ಲಿ ಸಂಶೋಧನೆಯ ಅಂಗವಾಗಿ ತೆಗೆದುಕೊಂಡ ಸಹಾಯಕ ಗ್ರಂಥಗಳ ಹಾಗೂ ಜಿಲ್ಲೆಯ ನಕಾಶೆಯ ವಿನ್ಯಾಸವನ್ನು ನೀಡಲಾಗುದು.

ನಮ್ಮ ಅಧ್ಯಯನ ಬಾಗಲಕೋಟೆ ಜಿಲ್ಲೆಗೆ ಸೀಮಿತವಾಗಿದೆ. ಇದು ೬ ತಾಲೂಕು, ೧೨ ಪಟ್ಟಣ, ೬೪೦ ಹಳ್ಳಿಗಳನ್ನು ಹೊಂದಿದೆ. ತಾಲೂಕುವಾರು ಗ್ರಾಮಗಳನ್ನು ನೋಡಿದಾಗ, ಜಮಖಂಡಿ–೭೭, ಬಾಗಲಕೋಟೆ–೧೦೧, ಬಾದಾಮಿ–೧೫೫, ಬೀಳಗಿ–೬೮, ಮುಧೋಳ–೮೨, ಹುನಗುಂದ–೧೬೯ ಗ್ರಾಮಗಳಿರುತ್ತವೆ.

ಇಲ್ಲಿ ಕೃಷ್ಣಾ, ಘಟಪ್ರಭಾ, ಮಲಪ್ರಭಾನದಿಗಳು ಪ್ರವಹಿಸುತ್ತಿವೆ. ಇವುಗಳ ತಟಗಳ ಮೇಲೆ ಅನೇಕ ಪ್ರಾಗೈತಿಹಾಸಿಕ, ಐತಿಹಾಸಿಕ ನೆಲೆಗಳು ಇವೆ. ಅವುಗಳು ಸಸ್ಯ–ಪ್ರಾಣಿ, ಧರ್ಮ, ಸಮೃದ್ಧಿಯನ್ನು ಆಧರಿಸಿ ಹೆಸರನ್ನು ಹೊಂದಿವೆ. ಈ ಜಿಲ್ಲೆಯಲ್ಲಿ ಅನೇಕ ಬೆಟ್ಟಶ್ರೇಣಿಗಳಿವೆ. ವಿವಿಧ ತರಹದ ಮಣ್ಣು, ಜಲ ಸಂಪತ್ತು, ವಿವಿಧ ಸಂಸ್ಕೃತಿ ಇದೆ. ಇವುಗಳನ್ನು ಅನುಸರಿಸಿ ಅನೇಕ ನೆಲೆಗಳ ಹೆಸರನ್ನು ಕರೆದಿದ್ದಾರೆ(ಕುಳಗೇರಿ, ಕೆರೂರು, ಕಂದಗಲ್ಲು ಇತ್ಯಾದಿ).

ಈ ಜಿಲ್ಲೆ ಅನೇಕ ರೀತಿಯ ಸಸ್ಯ ಸಂಪತ್ತು ಹೊಂದಿದ್ದು, ಕೆಲವೊಂದು ನೆಲೆಗಳನ್ನು ಸಸ್ಯಗಳ ಹೆಸರಿನಿಂದ ಗುರುತಿಸಿದ್ದಾರೆ.(ಕಡವಾಲು, ಬಿದರಿ, ಬೇವೂರ, ನುಗ್ಗೇವಾಡ).

ಇನ್ನು ಪ್ರಾಕೃತಿಕವಾಗಿ– ಹಳ್ಳ, ಕುಳಿ, ದಿನ್ನಿ, ಗುಡ್ಡ, ಕಲ್ಲು, ಮರಳು, ಕಪ್ಪು–ಕೆಂಪು ಬಣ್ಣ ಹೊಂದಿದ ಭೂಸ್ವರೂಪವಿದ್ದು, ಅವುಗಳನ್ನು ಸೂಚಿಸುವ ಊರುಗಳಿವೆ. ಅವುಗಳ ವಿವಿಧತೆಯನ್ನು ಅಧ್ಯಯನ ಮಾಡಲಾಗುವುದು.

ಜಿಲ್ಲೆಯ ಕೆಲವು ಕಡೆ ಹುಲ್ಲೆ, ಹುಲಿ, ಬಸವ ಮುಂತಾದ ಪ್ರಾಣಿಗಳು, ಹದ್ದು, ಹಂಸ, ನವಿಲು, ಕೋಗಿಲೆಯಂಥ ಪಕ್ಷಿಗಳು ನದಿಗಳ ತಟಗಳಲ್ಲಿ ಆಶ್ರಯ ಪಡೆದಿದ್ದರಿಂದ ಅವುಗಳ ಹೆಸರಿನಿಂದ ಕೆಲವೊಂದು ನೆಲೆಗಳನ್ನು ಕರೆದಿದ್ದಾರೆ.

ಈ ಜಿಲ್ಲೆ ಕೃಷಿ ಪ್ರಧಾನವಾದುದು. ಆದುದರಿಂದ ಸಮೃದ್ಧ ಬೆಳೆ ಬೆಳೆದು ಸಿರಿಸಂಪತ್ತನ್ನು ಹೊಂದಿದ್ದಾರೆ. ಅಂಥ ಸಂಪತ್ತನ್ನು ಹೊಂದಿದ ನೆಲೆಗಳು ತಮ್ಮ ಹೆಸರಿನಲ್ಲಿ ಅದನ್ನು ಬಿಂಬಿಸುತ್ತವೆ.

ಈ ಜಿಲ್ಲೆಯಲ್ಲಿ ದಾನವೀರರು, ಧರ್ಮವೀರರು, ಶೂರರು, ಕಲಿಗಳು ಆಗಿ ಹೋಗಿದ್ದಾರೆ ಅವರ ಹೆಸರನ್ನು ಸೂಚಿಸುವ ಊರುಗಳಿವೆ.

ಇನ್ನು ಈ ಜಿಲ್ಲೆಯ ಸ್ಥಳನಾಮಗಳ ಮೇಲೆ ಶೈವ, ವೈಷ್ಣವ ಮತಗಳ ಪ್ರಭಾವವಿದೆ. ಅಲ್ಲದೆ ಈ ಧರ್ಮಗಳ ಶಾಸನ, ದೇವಾಲಯಗಳನ್ನು ಕಾಣುವೆವು. ಈ ಮತಗಳನ್ನು ಅನುಸರಿಸಿ ಇಲ್ಲವೆ ಆಯಾ ಧರ್ಮವನ್ನು ಊರಿನ ಹೆಸರಿನಲ್ಲಿ ಕಾಣುವೆವು.

ಹೀಗೆ ಸ್ಥಳನಾಮಗಳನ್ನು ಅಧ್ಯಯನ ಮಾಡುವಾಗ ಬಾಗಲಕೋಟೆ ಜಿಲ್ಲೆಯ ಭೂಸ್ವರೂಪ, ಕೃಷಿ, ಕೈಗಾರಿಕೆ, ಧರ್ಮ, ಭಾಷೆ, ಸಂಸ್ಕೃತಿ ಮುಂತಾದವುಗಳ ಜೊತೆ ಸ್ಥಳನಾಮಗಳು ಗುರುತಿಸಿ ಕೊಳ್ಳುವುದನ್ನು ನೋಡುವುದಾಗಿದೆ. ಹಾಗಾಗಿ ಸಾಕಷ್ಟು ವಿಶಾಲ ಸ್ವರೂಪ ಪಡೆದಿದೆ ಎನ್ನಬೇಕು.

ಜಗತ್ತು ನಾಮ ಮೂಲವಾದುದು. ಮನುಷ್ಯನಿಗೆ ಭಾಷೆ ಗೊತ್ತಾದಂದಿನಿಂದ ನಾಮ ಪ್ರಾರಂಭ ವಾಗಿದೆ. ಒಂದು ವಸ್ತವನ್ನು ಒಂದು ವಿಷಯವನ್ನು ಇನ್ನೊಂದು ವಸ್ತುವಿನಿಂದ, ವಿಷಯದಿಂದ ಪ್ರತ್ಯೇಕಿಸುವಾಗ ನಾಮದ ಆವಶ್ಯಕತೆಯಿದೆ. ಗುಡ್ಡ–ಬೆಟ್ಟಗಳು, ಗಿರಿ–ಗಂವರಗಳು, ಕಾಡು–ಮೇಡಗಳು, ಹೊಳೆ–ಹಳ್ಳಗಳು, ಕೆರೆ–ಬಾವಿಗಳು ತೀರ್ಥಕ್ಷೇತ್ರಗಳು, ಊರು–ಕೇರಿಗಳು, ಪುರ–ಪಟ್ಟಣಗಳು ಇವೆಲ್ಲವೂ ನಾಮಗಳೇ, ಅದರಲ್ಲಿಯೂ ಸ್ಥಳನಾಮಗಳೇ. ನಾವು ಈ ಪ್ರಬಂಧದಲ್ಲಿ ಈ ಎಲ್ಲ ಸ್ಥಳನಾಮಗಳನ್ನು ಕುರಿತು ವಿವೇಚಿಸಲಾರದೆ, ಗ್ರಾಮ ನಾಮಗಳನ್ನು ಕುರಿತು ಮಾತ್ರ ಚಿಂತನೆ ಮಾಡುತ್ತೇವೆ. ಅದಕ್ಕೊಂದು ಪರಿಧಿ ನಿರ್ಮಿಸುತ್ತೇವೆ. ಇಲ್ಲದಿದ್ದರೆ, ಅದು ಅತಿವ್ಯಾಪ್ತಿಯಾಗಿ ಹಿಡಿತದಿಂದ ಹೊರ ಹೋಗುತ್ತದೆ. ಹಾಗಾಗದಂತೆ ಮಾಡಬೇಕಾದರೆ, ಅದಕ್ಕೊಂದು ನಿರ್ದಿಷ್ಟ ವ್ಯಾಪ್ತಿಯ ಆವಶ್ಯಕತೆಯಿದೆ.

ಅಧ್ಯಾಯ ೨

ಸ್ಥಳನಾಮ ಅಧ್ಯಯನದ ಇತಿಹಾಸ

ಅಧ್ಯಾಯ ೨

ಸ್ಥಳನಾಮ ಅಧ್ಯಯನದ ಇತಿಹಾಸ

ನಾಮ ವಿಜ್ಞಾನವು ಒಂದು ಶಾಸ್ತ್ರವಾಗಿ ಇತ್ತೀಚೆಗೆ ಬೆಳೆದು ಬಂದಿದ್ದರೂ ಇದರ ಬೇರು ಬಹಳಷ್ಟು ಆಳವಾಗಿವೆ. ಭಾರತದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಬೇರೆ ಹೆಸರಿನಿಂದ ಇರುವುದನ್ನು ಕಾಣುತ್ತೇವೆ.

ಶಬ್ದ(ರೂಪ), ಅರ್ಥ ಮತ್ತು ಅದರ ಹಿಂದಿರುವ ಸಂಸ್ಕೃತಿಯನ್ನು ತಿಳಿಸುವದಕ್ಕೆ ಬೇರೆ ಬೇರೆ ಶಾಸ್ತ್ರಗಳೆ ಇರುವದುಂಟು. ವ್ಯಾಕರಣವು ಶಬ್ದವನ್ನು, ಕೋಶವು ಅರ್ಥವನ್ನು ತಿಳಿಸಿದರೆ, ನಿರುಕ್ತಿಯು ಶಬ್ದದ ಮೂಲ ಸ್ವರೂಪವನ್ನು ವಿಶದೀಕರಿಸುತ್ತದೆ. ಇದರಿಂದ ಆ ಶಬ್ದವು ಎಂಥದು ಎನ್ನುವದು ವ್ಯಕ್ತವಾಗುತ್ತದೆ. ಮತ್ತು ಆ ಶಬ್ದದ ಸಾಂಸ್ಕೃತಿಕ ಸ್ಥಿತಿಗತಿಯನ್ನು ಎತ್ತಿ ಹೇಳುತ್ತದೆ.

ಈ ನಿರುಕ್ತಿಯು ಒಂದು ಶಾಸ್ತ್ರವಾಗಿ ಪ್ರಾಚೀನ ಕಾಲದಿಂದಲೇ ಭಾರತದಲ್ಲಿ ಬೆಳೆದು ಬಂದಿದೆ. ಒಂದರ್ಥದಲ್ಲಿ ಇದು 'ನಾಮವಿಜ್ಞಾನ'ವೇ ಆಗಿದೆ. 'ನಾಮವಿಜ್ಞಾನ'ವೆಂದು ಹೆಸರಿಟ್ಟು ಕರೆದಾಗ ಅದು ನಿರುಕ್ತಿಶಾಸ್ತ್ರದಿಂದ ಭಿನ್ನವಾಗದು. ನಮ್ಮ ಗುರಿಯಿದ್ದುದು ನಾಮವಿಜ್ಞಾನದ ವಿವೇಚನೆಯಲ್ಲ; ಸ್ಥಳನಾಮಗಳಿಂದ ವ್ಯಕ್ತವಾಗುವ ಸಂಸ್ಕೃತಿಯ ವಿಷಯ. ಆದ್ದರಿಂದ ನಾಮವಿಜ್ಞಾನದ ಇತಿಹಾಸವನ್ನು ಸಂಕ್ಷಿಪ್ತವಾಗಿ ಇಲ್ಲಿ ಕೊಡಲಾಗಿದೆ.

ಸ್ಥಳನಾಮಗಳ ಕುರಿತು ಅಧ್ಯಯನ ನಡೆಸುವುದೇ ಸ್ಥಳನಾಮ ಚರಿತ್ರೆ, ಸ್ಥಳನಾಮಗಳ ಕುರಿತು ಚಿಂತನೆ, ಅಧ್ಯಯನ ನಡೆಯಲು ಪ್ರಾರಂಭವಾದದ್ದು ಎರಡು ಶತಮಾನಗಳ ಹಿಂದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಶಾಸ್ತ್ರಬದ್ಧವಾಗಿ ಅಧ್ಯಯನ ಪ್ರಾರಂಭವಾದದ್ದು ಪಾಶ್ಚಾತ್ಯ ವಿದ್ವಾಂಸರಿಂದ. ಅದೂ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಎಂಬ ಅಭಿಪ್ರಾಯವಿದೆ.

ಅಮೆರಿಕೆಗೆ ಯುರೋಪ್ ಖಂಡದ ವಿವಿಧ ದೇಶಗಳಿಂದ ಹೋದವರು ಅಲ್ಲಿಯೇ ನೆಲೆಸಿದರು. ಹಾಗೂ ನೆಲೆಸಿದ ನೆಲೆಗಳಿಗೆ ತಮ್ಮ ಸ್ವಂತ ಊರಿನ ಮತ್ತು ತಮ್ಮ ಭಾಷೆಯ ಹೆಸರನ್ನು ಡಲು

ಪ್ರಾರಂಭಿಸಿದರು. ಇದರಿಂದ ಫ್ರೆಂಚರು, ಡಚ್ಚರು, ಜರ್ಮನ್‌ರು, ಇಂಗ್ಲೀಷರು ಪರಸ್ಪರ ಅವುಗಳನ್ನು ಬದಲಾಯಿಸಲು ಪ್ರಯತ್ನಿಸಿದಾಗ ಗೊಂದಲ ಉಂಟಾಯಿತು. ಎರಡನೇ ಮಹಾಯುದ್ಧದ ನಂತರ ಸಂಯುಕ್ತರಾಷ್ಟ್ರ ಸಂಘವು ಊರುಗಳ ಹೆಸರನ್ನು ಬದಲಾಯಿಸಬಾರದೆಂದೂ, ಅವಶ್ಯವಿದ್ದಲ್ಲಿ ಶಾಸನಗಳ ಮೂಲಕ ಮಾತ್ರ ಬದಲಾಯಿಸಬೇಕೆಂದೂ ತೀರ್ಮಾನಿಸಿತು. ಹಾಗಾಗಿ ಈ ಘಟನೆಗಳಿಂದ ಸ್ಥಳನಾಮ ಅಧ್ಯಯನ ಮಾಡುವ ಸಂದರ್ಭವೊದಗಿತು.

೧೮೪೧ರಲ್ಲಿ ಶಾಸ್ತ್ರಬದ್ಧವಾಗಿ ಸ್ಥಳನಾಮವಿಜ್ಞಾನ ಅಧ್ಯಯನ ಆರಂಭವಾಯಿತು. ಮೊದಲು ಹಾಗೆ ಆರಂಭಿಸಿದವರು ಫಾಸ್ಟರ್‌ಮೆಲ್ ಮತ್ತು ಐಸಾಕ್ ಟೇಲರ್. ನಂತರ ಅನೇಕರು ಈ ಸ್ಥಳನಾಮಗಳ ಬಗ್ಗೆ ಅಧ್ಯಯನ ಮಾಡಿದರು. ಇಂಗ್ಲೆಂಡ್‌ನಲ್ಲಿ ೧೯೨೧ರಲ್ಲಿ 'ಇಂಗ್ಲಿಷ್ ಪ್ಲೇಸ್ ನೇಮ್ಸ್ ಸೊಸೈಟಿ' ಸ್ಥಾಪನೆ ಆಯಿತು. ನಂತರ ೧೯೫೩ರಲ್ಲಿ ಅಮೇರಿಕದಲ್ಲಿ 'ಅಮೇರಿಕನ್ ನೇಮ್ಸ್ ಸೊಸೈಟಿ' ಸ್ಥಾಪಿತವಾಯಿತು. ಇಂದು ಯೂರೋಪಿನ ಅನೇಕ ವಿಶ್ವವಿದ್ಯಾಲಯಗಳಲ್ಲಿ ನಾಮ ವಿಜ್ಞಾನವು ಅಧ್ಯಯನ ಶಾಸ್ತ್ರವಾಗಿದೆ.

ಪ್ರಾಚೀನ ಕಾಲದ ಭಾರತದಲ್ಲಿ ಪಾಣಿನಿ, ಯಾಸ್ಕರು ಪ್ರತಿಯೊಂದು ಪದಕ್ಕೂ ಅರ್ಥ ಹೇಳಿದ್ದಾರೆ. ಭೌಗೋಳಿಕ ನಾಮಗಳಿಗೂ ಅರ್ಥ ನೀಡಿದ್ದಾರೆ. ಆಧುನಿಕ ಭಾರತದಲ್ಲಿ ಪಾಶ್ಚಾತ್ಯರ ಪ್ರಭಾವದಿಂದ ಪತ್ರಿಕೆಗಳಲ್ಲಿ ಕ್ವಚಿತ್ತಾಗಿ ಸ್ಥಳನಾಮಗಳ ಬಗ್ಗೆ ಲೇಖನಗಳು ಪ್ರಕಟವಾಗುತ್ತಿವೆ. ಆದರೆ ಸಂಪೂರ್ಣವಾಗಿ ಸ್ಥಳನಾಮಗಳ ಅಧ್ಯಯನಕ್ಕೆ ಪೂರ್ಣಸ್ವರೂಪ ನೀಡಿ ಭದ್ರಬುನಾದಿ ನಿರ್ಮಿಸಿದ ಕೀರ್ತಿ ಪೂನಾದ ಡೆಕ್ಕನ್ ಕಾಲೇಜಿನ ಪುರಾತತ್ವ ಇಲಾಖೆಯ ಅಧ್ಯಕ್ಷರೂ ನಾಡಿನ ವಿದ್ವಾಂಸರೂ ಆದ ಡಾ.ಎಚ್.ಡಿ. ಸಂಕಾಲಿಯಾ ಅವರಿಗೆ ಸಲ್ಲುತ್ತದೆ.

ಕನ್ನಡದಲ್ಲಿ ಸ್ಥಳನಾಮ ಅಧ್ಯಯನ ಪ್ರಾರಂಭಿಸಿದವರು, ಹುಲ್ಲೂರ ಶ್ರೀನಿವಾಸ, ಸೇಡಿಯಾಪು ಕೃಷ್ಣಭಟ್ಟ, ಪಂಜೆ, ಎಂ.ವಿ.ಸೀತಾರಾಮಯ್ಯ ಮುಂತಾದವರು. ಕೆಮ್ತೂರು ರಘುಪತಿ ಭಟ್ಟರು ಬರೆದ 'ತುಳುನಾಡಿನ ಸ್ಥಳನಾಮಗಳು' ಎಂಬ ಪುಸ್ತಕ ಹೊಸ ತಿರುವನ್ನು ನೀಡಿತು. ಶಂಬಾ ಜೋಷಿಯವರ 'ಎಡೆಗಳು ಹೇಳುವ ಕಂನಾಡ ಕಥೆ' ಸ್ಥಳನಾಮ ಅಧ್ಯಯನದ ಕುತೂಹಲ ಮೂಡಿಸಿತು. ಹಾಗಾಗಿ ಸ್ಥಳನಾಮ ಅಧ್ಯಯನದ ಆವಶ್ಯಕತೆಯಿಂದಾಗಿ ೧೯೭೮ರಲ್ಲಿ ಮೈಸೂರಿನಲ್ಲಿ ಅಂತಾರಾಷ್ಟ್ರೀಯಮಟ್ಟದ 'ಭಾರತೀಯ ಸ್ಥಳನಾಮ ಪರಿಷತ್ತು' ಸ್ಥಾಪಿತವಾಯಿತು. ಈ ಸಂಸ್ಥೆಯ ಮೂಲಕ ದೇಜಗೌ ಇವರು ಭಾರತದಾದ್ಯಂತ ಸ್ಥಳನಾಮ ಸಂಶೋಧನೆಗೆ ಗಮನ ಹರಿಸಿದರು. ಈ ಸಂಸ್ಥೆ ಆಯಾ ಪ್ರಾದೇಶಿಕ ವೈಶಿಷ್ಟ್ಯಗಳೊಂದಿಗೆ ಸ್ಥಳನಾಮ ಕುರಿತಾದ ಲೇಖನಗಳ ಕೃತಿಗಳನ್ನು ಪ್ರಕಟಿಸುತ್ತಾ ಬಂದಿದೆ.

ಚರ್ವಿತಚರ್ವಣವಾಗಬಾರದೆಂಬ ಉದ್ದೇಶದಿಂದ ಸ್ಥಳನಾಮ ಅಧ್ಯಯನದ ಇತಿಹಾಸವನ್ನು ಹೆಚ್ಚು ವಿವರಿಸಲು ಹೋಗದೆ, ಅದರ ಹುಟ್ಟು ಬೆಳವಣಿಗೆಯನ್ನು ತೋರಿಸಿ, ದಿಕ್ಸೂಚಿಯಾಗುವಂತೆ, ಸ್ಥಳನಾಮಾಧ್ಯಯನದ ಇತಿಹಾಸವನ್ನು ವಿವರವಾಗಿ ನಿರೂಪಿಸಿದ ೬೭ ಪುಸ್ತಕಗಳನ್ನು, ಕರ್ನಾಟಕ ಭಾರತಿ, ಸಾಧನೆ, ಜೀವನ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಮೊದಲಾದ ನಿಯತಕಾಲಿಕೆಗಳಲ್ಲಿ ಬಂದಿರುವ ಲೇಖನಗಳನ್ನು ಪಟ್ಟಿಮಾಡಿ ಕೊಡಲಾಗಿದೆ. ಈವರೆಗೆ ನಡೆದಂತಹ ಸ್ಥಳನಾಮಗಳ ಅಧ್ಯಯನ ಕುರಿತಾದ ಕೃತಿಗಳು ಹಾಗೂ ಲೇಖನಗಳ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

ಕೃತಿಗಳು

೧. ಎಡೆಗಳು ಹೇಳುವ ಕಂನಾಡ ಕತೆ: ಡಾ. ಶಂ.ಬಾ.ಜೋಶಿ, ೧೯೪೭

೨. ಸಂಶೋಧನ ತರಂಗ. ಸಂಪುಟ–೨ ಡಾ.ಎಂ.ಚಿದಾನಂದಮೂರ್ತಿ, ೧೯೭೦

೩. ಕೆಲವು ದೇಶನಾಮಗಳು: ಸೇಡಿಯಾಪು ಕೃಷ್ಣಭಟ್ಟ, ೧೯೭೫

೪. ಶ್ರವಣಬೆಳ್ಗೊಳ: ಡಾ.ಬಿ.ವಿ.ಶಿರೂರು, ೧೯೭೬

೫. ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು: (ಸಂ) ಲಕ್ಷ್ಮಣ ತೆಲಗಾವಿ, ಎಂ.ವಿ.ಶ್ರೀನಿವಾಸ, ೧೯೭೬

೬. ಚಿತ್ರದುರ್ಗದ ಬಖೈರು: ಸಂಗ್ರಹ, ಹುಲ್ಲೂರು ಶ್ರೀನಿವಾಸ ಜೋಯಿಸ, ೧೯೭೮

೭. ಕನ್ನಡ ಐತಿಹ್ಯಗಳು: ಜಿ.ವಿ.ಡಿ., ೧೯೭೮

೮. ತುಳುನಾಡಿನ ಸ್ಥಳನಾಮಗಳು: ಕೆಮ್ತೂರು ರಘುಪತಿ ಭಟ್ಟ, ೧೯೭೯

೯. ಚಿತ್ತೂರು ಜಿಲ್ಲಾ ಗ್ರಾಮನಾಮಾಲು: ಭಾಷಾ ಸಾಮಾಜಿಕ ಪರಿಶೀಲನೆ, ಡಿ.ಚೆಂಗಾರೆಡ್ಡಿ, ೧೯೮೧

೧೦. ವಾಗರ್ಥ: ಡಾ. ಎಂ.ಚಿದಾನಂದಮೂರ್ತಿ, ೧೯೮೧

೧೧. ಅನಂತಪುರಂ ಜಿಲ್ಲಾ ಗ್ರಾಮನಾಮಾಲು: ಭಾಷಾ ಸಮಾಜಿಕ ಪರಿಶೀಲನಯಂ. ಗೋವಿಂದಸ್ವಾಮಿ ನಾಯುಡು, ೧೯೮೨

೧೨. ಆಸ್ವಾದ : ಪ್ರೊ. ಎಂ.ವಿ.ಸೀತಾರಾಮಯ್ಯ ಅಭಿನಂದನ ಗ್ರಂಥ, ೧೯೮೩

೧೩. ಜಾನಪದ : (ಸಂ) ಜಿ.ಎಸ್.ಭಟ್ಟ, ೧೯೮೩

೧೪. ಮಲೆನಾಡು ಜಾನಪದ : (ಸಂ) ಎಚ್.ಜೆ ಲಕ್ಕಪ್ಪಗೌಡ, ೧೯೮೩

೧೫. ಬೆಂಗಳೂರಿನ ಇತಿಹಾಸ : ಬ.ನ. ಸುಂದರರಾವ್, ೧೯೮೫

೧೬. ಕರ್ನಾಟಕ ಗ್ರಾಮಸೂಚಿ : ಡಾ. ಶ್ರೀನಿವಾಸ ರಿತ್ತಿ, ೧೯೮೫

೧೭. ಶರಣ ಸಾಹಿತ್ಯದಲ್ಲಿ ಪಂಪಾಕ್ಷೇತ್ರದ ವರ್ಣನೆ : ಕೆ.ಶ್ರೀಕಂಠಯ್ಯ, ೧೯೮೬

೧೮. ಹರತಿಸಿರಿ: (ಸಂ) ಲಕ್ಷ್ಮಣ ತೆಲಗಾವಿ, ೧೯೮೭

೧೯. ಸ್ಥಳನಾಮ ಅಧ್ಯಯನಗಳು: ವಿ.ಗೋಪಾಲಕೃಷ್ಣ, ೧೯೮೭
೨೦. ಕೋಲಾರ ಜಿಲ್ಲೆಯ ಸ್ಥಳನಾಮಗಳು ಸಾಮಾಜಿಕ ಭಾಷಾಶಾಸ್ತ್ರ ಅಧ್ಯಯನ: ವಿ.ಗೋಪಾಲಕೃಷ್ಣ, ೧೯೮೮
೨೧. A Glossary of place name elements in Tulu and Kannada: Raghupathi Kemtoor, 1989.
೨೨. ಕನ್ನಡ ನಾಮ ವಿಜ್ಞಾನ: ಡಾ. ಎಂ.ಎಂ.ಕಲ್ಬುರ್ಗಿ, ೧೯೮೯
೨೩. ತೆಲುಗು ಮೀದ ಕನ್ನಡ ಭಾಷಾ ಪ್ರಭಾವಂ: ಡಾ. ಆದವಾನಿ ಹನಮಂತಪ್ಪ, ೧೯೮೯
೨೪. ಹೆಸರಿನಲ್ಲೇನಿದೆ? ಡಾ.ಆರ್ಕೆ ಮಣಿಪಾಲ, ೧೯೮೯
೨೫. ಬೀದರ ಜಿಲ್ಲೆಯ ಸ್ಥಳನಾಮಗಳು: ಭಂಡೆ ವೈಜನಾಥ, ೧೯೯೦
೨೬. ಸ್ಥಳನಾಮ ವ್ಯಾಸಂಗ: ದೇಜಗೌ, ೧೯೯೦
೨೭. ಗಡಿನಾಡಿನ ಕಿಡಿ: (ಪ್ರಸಂ) ವೈ.ಎಸ್.ವಿ.ಭಟ್ಟ, ೧೯೯೦
೨೮. ಜಾನಪದ ಸಿರಿ: ಡಾ. ಬಸವರಾಜ ಪೊಲೀಸ ಪಾಟೀಲ, ೧೯೯೦
೨೯. ತರ್ದವಾಡಿ ನಾಡು ಒಂದು ಅಧ್ಯಯನ: ಡಾ. ಎಸ್.ಕೆ. ಕೊಪ್ಪಾ, ೧೯೯೦
೩೦. ಅಭ್ಯಾಸ: ವಸಂತಕುಮಾರ ಪೆರ್ಲ, ೧೯೯೧
೩೧. ಚಿತ್ರದುರ್ಗ ಜಿಲ್ಲಾದರ್ಶಿನಿ: ಟಿ.ಗಿರಿಜ, ೧೯೯೧
೩೨. ಸಂಶೋಧನ: (ಸಂ) ಲಕ್ಷ್ಮಣ ತೆಲಗಾವಿ, ೧೯೯೧
೩೩. ಸ್ಥಳನಾಮ ಐತಿಹ್ಯಗಳು: ಡಾ. ಎಂ. ಭೈರೇಗೌಡ, ಕಿ.ಪಿ.ದೊಡ್ಡಿ, ೧೯೯೧
೩೪. ಜಾನಪದ ಸ್ಪಂದನ: ಪ್ರೊ.ಸಿ.ಕೆ.ನಾವಲಗಿ, ೧೯೯೨
೩೫. ಶಿಕ್ಷಣ ಸಂಪದ: ಪ್ರೊ. ವಿ.ಜಿ.ಮಾರಿಹಾಳ ಅವರ ಅಭಿನಂದನ ಗ್ರಂಥ, ೧೯೯೨
೩೬. ಹೊಸತು ಹೊಸತು: ಡಾ. ಎಂ.ಚಿದಾನಂದಮೂರ್ತಿ, ೧೯೯೩
೩೭. ಜನಪ್ರಿಯ ೨೦೦ ಸ್ಥಳನಾಮಗಳು: ಬೇ.ಗೋ.ರಮೇಶ, ೧೯೯೪
೩೮. ಅಮೃತ ವರ್ಷ: (ಸಂ) ಎಚ್.ಕೆ.ರಾಜೇಗೌಡ. ಡಿ.ಕೆ.ರಾಜೇಂದ್ರ, ೧೯೯೫
೩೯. ಐತಿಹಾಸಿಕ: ಡಾ. ಎಂ.ಎಂ.ಕಲ್ಬುರ್ಗಿ, ೧೯೯೫
೪೦. ಕನ್ನಡ ಸಾಹಿತ್ಯ ಸಂಬಂಧ: ಡಾ. ವಿ.ಜಿ.ಪೂಜಾರ, ೧೯೯೫
೪೧. ಕೈಫಿಯತ್ತುಗಳಲ್ಲಿ ನಿರೂಪಿತವಾದ ಸ್ಥಳನಾಮಗಳ ಅಧ್ಯಯನಗಳು: ಜಗದೀಶ ಮಠದ, ೧೯೯೫ (ಅಪ್ರಕಟಿತ).
೪೨. ಗೋವಿಂದ ಪೈ ಸಂಶೋಧನ ಸಂಪುಟ: (ಸಂ) ಹೆರಂಜೆ ಕೃಷ್ಣಭಟ್ಟ, ಮುರಳೀಧರ ಉಪಾಧ್ಯ, ೧೯೯೫

೪೩. ಮಾರ್ಗ-೨: ಡಾ. ಎಂ.ಎಂ.ಕಲ್ಬುರ್ಗಿ, ೧೯೯೫

೪೪. ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು: (ಸಂ) ಲಕ್ಷ್ಮಣ ತೆಲಗಾವಿ, ಎಂ.ವಿ.ಶ್ರೀನಿವಾಸನ್, ೧೯೯೫

೪೫. ಸಕಲೇಶಪುರ ಪರಿಸರದ ಸ್ಥಳನಾಮಗಳು: ಡಾ. ವಿಶ್ವನಾಥ, ೧೯೯೬

೪೬. ಸ್ಥಳನಾಮಗಳು: ಡಾ. ವಿಶ್ವನಾಥ, ೧೯೯೬

೪೭. ಜಾನಪದ ಜಗತ್ತು: (ಸಂ) ಪ್ರೊ. ಡಿ.ಲಿಂಗಯ್ಯ, ಡಾ.ಚಿಕ್ಕೆರೆ ಶಿವಶಂಕರ, ೧೯೯೬

೪೮. ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು: ಡಾ. ಕೆ.ಎಂ.ವೀರಭದ್ರಶರ್ಮ, ೧೯೯೬

೪೯. ಚಂದ್ರಕೊಡೆ: ಹಂಪ ನಾಗರಾಜಯ್ಯ, ೧೯೯೭

೫೦. ಮಹಾಮಾರ್ಗ: (ಸಂ) ಸದಾನಂದ ಕನವಳ್ಳಿ, ವೀರಣ್ಣ ರಾಜೂರ, ೧೯೯೮

೫೧. ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ: ಡಾ. ಸಿ.ನಾಗಭೂಷಣ, ೧೯೯೯

೫೨. ನೇಗಿನಹಾಳ ಪ್ರಬಂಧಗಳು: ಎಂ.ಬಿ. ನೇಗಿನಹಾಳ, ೧೯೯೯

೫೩. ಮಿಶನರಿಗಳ ದ್ವಿಭಾಷಿಕ ನಿಘಂಟುಗಳು ತೌಲನಿಕ ಅಧ್ಯಯನ, ಎಸ್.ಎಸ್.ಅಂಗಡಿ, ೧೯೯೯ (ಅಪ್ರಕಟಿತ)

೫೪. ಭಾಷಾಲೇಖ: ಡಾ. ಸಂಗಮೇಶ ಸವದತ್ತಿಮಠ, ೧೯೯೯

೫೫. ಸ್ಥಳನಾಮಗಳ ಪರಿವರ್ತನೆ ಮತ್ತು ಪ್ರಭಾವ: ಸಂ.ಕೆ.ವಿ.ನಾರಾಯಣ, ೧೯೯೯

೫೬. ಒಕ ಊರಿನ ಕಥ: ಪ್ರೊ.ವೈ.ಬಾಲಗಂಗಾಧರರಾವ್: ೨೦೦೦

೫೭. ಕನ್ನಡ ಪರ ಚಿಂತನೆ ಮತ್ತು ಪರಂಪರೆ: ಡಾ. ಕಾ.ವೆಂ.ಶ್ರೀನಿವಾಸಮೂರ್ತಿ, ೨೦೦೦

೫೮. ಚಾಮರಾಜನಗರ ತಾಲೂಕಿನ ಸ್ಥಳನಾಮಗಳು: ಎಂ.ನಂಜಯ್ಯ, ೨೦೦೦

೫೯. ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ: ಡಾ. ವಿಶ್ವನಾಥ, ೨೦೦೦

೬೦. ಭಾಷೆ: ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ, ಸಂ.ಕೆ.ವಿ.ನಾರಾಯಣ, ೨೦೦೦

೬೧. ಡಾ. ಶಂಬಾ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಎಸ್.ಎಂ.ಗಂಗಾಧರಯ್ಯ, ೨೦೦೦ ಪಿಎಚ್.ಡಿ. ಪ್ರಬಂಧ(ಅಪ್ರಕಟಿತ)

೬೨. ಶತಮಾನದ ಲಲಿತ ಪ್ರಬಂಧ: ಸಂ.ಗುರುಲಿಂಗ ಕಾಪಸೆ, ೨೦೦೧

೬೩. ಗೋದಾವರಿವರಂ ಇರ್ದ ಕನ್ನಡನಾಡು: ಡಾ. ಜಿ.ಎನ್.ಉಪಾಧ್ಯ, ೨೦೦೨

೬೪. ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು: ಡಾ. ಜಾಜಿ ದೇವೇಂದ್ರಪ್ಪ, ೨೦೦೪

೬೫. ಸ್ಥಳನಾಮಗಳ ಅಧ್ಯಯನ: (ಸಂ) ಪ್ರೊ. ಡಿ.ಲಿಂಗಯ್ಯ, ಡಾ. ಚಕ್ಕೆರೆ ಶಿವಶಂಕರ, ೨೦೦೮

೬೬. ಕರ್ನಾಟಕದ ಸ್ಥಳನಾಮಗಳು ಒಂದು ಅಧ್ಯಯನ: ಲೇ: ಎಸ್.ಎಲ್.ದೇಶಪಾಂಡೆ, ೨೦೦೮

೬೭. ಕರ್ನಾಟಕದ ಶಾಸನೋಕ್ತ ಸ್ಥಳನಾಮಗಳು: ಭಾಷಾಭಿವೃದ್ಧಿ ವಿಭಾಗ, ಹಂಪಿ ಕನ್ನಡ ವಿ.ವಿ.(ಅಪ್ರಕಟಿತ)

ಲೇಖನಗಳು

೧. ಕೆಲವು ವಸ್ತ್ರನಾಮ ವಿಶೇಷಗಳು: ಹಂಪ ನಾಗರಾಜಯ್ಯ (ಸಾಧನೆ ಪತ್ರಿಕೆ) Vol–1, No–1, Jan-march, 1972

೨. ತುಳುನಾಡಿನ 'ಕಾರ್' ಊರುಗಳ ಒಂದು ಸ್ಥಳನಾಮಾಧ್ಯಯನ, ಕೆಮ್ತೂರು ರಘುಪತಿ ಭಟ್ಟ, (ಸಾಧನೆ ಪತ್ರಿಕೆ) Vol–7, No–7, April-June, 1978

೩. ವರ, ವಾರ, ಎಂದು ಕೊನೆಯಾಗುವ ಊರ ಹೆಸರುಗಳು: ಎಂ.ಚಿದಾನಂದಮೂರ್ತಿ (ಸಾಧನೆ ಪತ್ರಿಕೆ) Vol–7: No–1: Jan- March, 1978

೪. ಸ್ಥಳನಾಮಾಧ್ಯನ ಸಮಸ್ಯೆ ಹಾಗೂ ನಿವಾರಣೆ: ವಿ.ಗೋಪಾಲಕೃಷ್ಣ (ಸಾಧನೆ ಪತ್ರಿಕೆ) Vol–7: No-2: April- June, 1978

೫. ಸ್ಥಳನಾಮ ರೂಪುರೇಷೆ: ಕೆಮ್ತೂರು ರಘುಪತಿ ಭಟ್ಟ (ಸಾಧನೆ ಪತ್ರಿಕೆ) Vol–8: No–7: April-June, 1979

೬. ಪುರ>ವರ–ವಾರ ಎಂಬುದೇ ಸರಿ, ಎಂ.ಚಿದಾನಂದಮೂರ್ತಿ(ಸಾಧನೆ ಪತ್ರಿಕೆ) Vol–9: No–4: Oct-Dec, 1980

೭. ಊರ ಹೆಸರುಗಳ ಕೊನೆಯ–ವರ,–ವಾರ– ಎಂ.ಎಂ.ಕಲಬುರ್ಗಿ(ಸಾಧನೆ ಪತ್ರಿಕೆ) Vol–9: No–1: Jan-March, 1980

೮. ಕರ್ನಾಟಕ ನಾಮ ಶಾಸ್ತ್ರ: ಒಂದು ಸ್ಥೂಲ ಪರಿಚಯ, ಕೆಮ್ತೂರು ರಘುಪತಿ ಭಟ್ಟ (ಸಾಧನೆ ಪತ್ರಿಕೆ) ಅನು: ರೇಣುಕಾ ಆರ್ಕೆ, Vol–11: No–3: July-Sep, 1982

೯. ಹಿಂದಿನ ನೆಲವತ್ತಿಯೇ ಈಗಿನ ನ್ಯಾಮತಿ: ಎಚ್.ದೇವೀರಪ್ಪ (ಸಾಧನೆ ಪತ್ರಿಕೆ) Vol–11, No–2: April-Jane, 1982

೧೦. ಸ್ಥಳನಾಮಗಳಲ್ಲಿ ಧ್ವನಿ ಬದಲಾವಣೆ: ಆರ್.ಎಂ.ಕರ್ಜಗಿ (ಸಾಧನೆ ಪತ್ರಿಕೆ), Vol–12, No–3, July-Sep, 1983

೧೧. ಬನವಾಸಿ–ಸ್ಥಳನಾಮ ವಿವೇಚನೆ: ಎಂ.ಚಿದಾನಂದಮೂರ್ತಿ (ಸಾಧನೆ ಪತ್ರಿಕೆ) Vol–12, No–2, April-June, 1983

೧೨. ಬೆಂಗಳೂರು ಜಿಲ್ಲೆಯ ಹಲವು ಸ್ಥಳನಾಮಾಂತ್ಯಗಳ ವೈಶಿಷ್ಟ್ಯ: ಕೆ.ಆರ್.ಮೋಹನ್ (ಸಾಧನೆ ಪತ್ರಿಕೆ) Vol–13, No–2, April-June, 1984

೧೩. ಚಿತ್ರದುರ್ಗದ ಪ್ರಾಚೀನ ಹೆಸರಿನ ಪ್ರಥಮ ಅಕ್ಷರ 'ಬೆ' ಅಲ್ಲ 'ಚಿ': ಬಿ.ರಾಜಶೇಖರಪ್ಪ, (ಸಾಧನೆ ಪತ್ರಿಕೆ) Vol-13: No–4: Oct-Dec –1984

೧೪. ಕೆಜಿ : ಗ್ರಾಮನಾಮ ವಿವೇಚನೆ–ಚನ್ನಕ್ಕ ಎಲಿಗಾರ (ಸಾಧನೆ ಪತ್ರಿಕೆ) Vol–14: No–3: June-Sep – 1985

೧೫. ಎರಡು ಹೆಸರುಗಳು: ಚಿತ್ರದುರ್ಗ ಮತ್ತು ಮುಕ್ತಾಯಕ್ಕ – ಎಂ.ಚಿದಾನಂದಮೂರ್ತಿ (ಸಾಧನೆ ಪತ್ರಿಕೆ) Vol–14: No–2: April-June –1985

೧೬. ಉಡುಪಿ ತಾಲೂಕಿನ ಸ್ಥಳನಾಮಗಳು: ಕೆಲವು ಪರಿಶೀಲನೆಗಳು, ಕೆಮ್ತೂರು ರಘುಪತಿಭಟ್ಟ, (ಸಾಧನೆ ಪತ್ರಿಕೆ) Vol-14: No-3: July-Sep – 1985

೧೭. ಶ್ರವಣಬೆಳಗೊಳಕ್ಕೆ ಮೂಲ, ಹಳೆಯ ಬೆಳ್ಗೊಳ– ಎಂ.ಚಿದಾನಂದಮೂರ್ತಿ (ಸಾಧನೆ ಪತ್ರಿಕೆ) Vol–14: No-1: Jan-March –1985

ಕರ್ನಾಟಕ ಭಾರತಿ ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನಗಳು

೧. ಮನೆಗಳ ಹೆಸರುಗಳು: ಎಂ.ರಾಮರಾವ್, ಸಂ–೪೩, ಸಂ–೩, ೧೯೬೧

೨. ಸ್ಥಳನಾಮಗಳಲ್ಲಿ ದೇಶ್ಯೀಕರಣದ ಪ್ರಕ್ರಿಯೆ: ಆರ್ಕೆ ಮಣಿಪಾಲ, ಸಂ–೨೧, ಸಂ–೩. ೪, ೧೯೬೩

೩. ತಮ್ಮ ಕೊನೆಯಲ್ಲಿರುವ ಹೆಸರುಗಳು: ಎಂ.ಚಿದಾನಂದಮೂರ್ತಿ ಸಂ–೨, ಸಂ–೨, ೧೯೭೦

೪. ಕರ್ನಾಟಕದ ಅಗ್ರಹಾರಗಳು: ಎಸ್.ಎಲ್.ಶಾಂತಕುಮಾರಿ, ಸಂ–೪, ಸಂ–೨, ೧೯೭೧

೫. ಮನೆತನದ ಅಡ್ಡಹೆಸರುಗಳು: ಸಂಗಮೇಶ ಸವದತ್ತಿಮಠ, ಸಂ–೫, ಸಂ–೪, ಮೇ, ೧೯೭೩

೬. ಸ್ಥಳನಾಮ ಸ್ವರೂಪ: ಒಂದು ಸ್ಥೂಲ ವಿವೇಚನೆ, ಕೆಮ್ತೂರು ರಘುಪತಿಭಟ್ಟ, ಸಂ–೧೦, ಸಂ–೨, ೧೯೭೭

೭. ಕರ್ನಾಟಕದ ಗ್ರಾಮವೊಂದರ ಹಾಗೂ ಅದರ ಸುತ್ತಮುತ್ತಲಿನ ಸ್ಥಳನಾಮಗಳು, ಎಚ್.ಎಂ. ಮಹೇಶ್ವರಯ್ಯ, ಸಂ–೭, ಸಂ–೧, ೧೯೮೬

೮. ಒರೆಗಲ್ಲು–ಕೇಸಿ–ಕೇರಿ, ಎಂ.ಎಂ.ಕಲ್ಬುರ್ಗಿ

೯. ಮಲೆಯಾಳಿ ಸ್ಥಳನಾಮಗಳಲ್ಲಿ ತುಳು ಭಾಷೆಯ ಪ್ರಭಾವ: ಎಂ.ರಾಮ್, ಸಂ–೨೨, ಸಂ–೩,ಜೂನ್–೧೯೯೦

ಜೀವನ ಪತ್ರಿಕೆ

೧. ಊರ ಹೆಸರುಗಳು: ಮಾಸಿ, ೧೯೫೦

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

೧. ಕರ್ನಾಟಕದ ೧೦ನೆಯ ಶತಮಾನದ ಕೆಲವು ಸ್ಥಳನಾಮಗಳು: ಡಾ. ದೇವರಕೊಂಡಾರೆಡ್ಡಿ, ೧೯೭೮

೨. ತೌಳವ ಪ್ರಾದೇಶಿಕ ನಾಮಗಳು: ಕೆ.ವೆಂಕಟರಾಮಾಚಾರ್ಯ, ೧೯೬೬

೩. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ವಿಶೇಷ ಸ್ಥಳಗಳು: ಪಿ.ಶಿವರಾಮಯ್ಯ, ೧೯೨೭, ಸಂ-೨, ಸಂ-೨ -೧೯೨೭

ಇವಲ್ಲದೆ ರುಜುವಾತು, ಜೀವನ, ಸಾಕ್ಷಿ, ಶೂದ್ರ, ಕಲಾದರ್ಶನ, ಪ್ರಭಾತ, ಸ್ವದೇಶಾಭಿಮಾನ, ಕಲಾಗಂಗಾ, ಮಾನವಿಕ, ಕರ್ನಾಟಕ, ಯುಗಪುರುಷ, ಸತ್ಯಶುದ್ಧ ನಾಯಕ, ಬಸವಪಥ, ನಮ್ಮ ಕನ್ನಡ, ಇತಿಹಾಸ ದರ್ಶನ, ಸ್ಮರಣ ಸಂಚಿಕೆ(೭ನೆಯ ಜಿಲ್ಲಾ ಸಾಹಿತ್ಯ ಸಮ್ಮೆಳನ ಬೆಂಗಳೂರ ಗ್ರಾಮಾಂತರ). ಈ ಪತ್ರಿಕೆಗಳಲ್ಲಿ ಸ್ಥಳನಾಮ ಕುರಿತು ಲೇಖನಗಳು ಪ್ರಕಟವಾಗಿವೆ.

ಅಧ್ಯಾಯ ೩

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳ ವರ್ಗೀಕರಣ

ಅ. ವರ್ಗೀಕರಣದ ಹಿನ್ನೆಲೆ

೧. ಜಲ ಸಂಪತ್ತು

೨. ಬೆಟ್ಟ ಶ್ರೇಣಿ

೩. ಮಣ್ಣುಗಳು

೪. ವನಸ್ಪತಿಗಳು

೫. ಪ್ರಾಣಿ–ಪಕ್ಷಿಗಳು

೬. ಪ್ರಾಗೈತಿಹಾಸಿಕ

೭. ಐತಿಹಾಸಿಕ

೮. ಸಾಂಸ್ಕೃತಿಕ

ಆ. ಸ್ಥಳನಾಮಗಳ ವರ್ಗೀಕರಣ

೧. ಪ್ರಾಕೃತಿಕ

೨. ಸಾಂಸ್ಕೃತಿಕ

೩. ನಿರ್ವಸತಿವಾಚಕ

೪. ವಸತಿವಾಚಕ

ಅಧ್ಯಾಯ ೩

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳ ವರ್ಗೀಕರಣ

ಅ. ವರ್ಗೀಕರಣದ ಹಿನ್ನೆಲೆ

೧. ಜಲಸಂಪತ್ತು

ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣಾನದಿ ಅತ್ಯಂತ ದೊಡ್ಡ ನದಿ. ಇದಕ್ಕೆ ಘಟಪ್ರಭಾ ಹಾಗೂ ಮಲಪ್ರಭಾ ಎಂಬ ಎರಡು ಉಪನದಿಗಳು ಇವೆ. ಕೃಷ್ಣಾ ನದಿಯು ಮಹಾರಾಷ್ಟ್ರದ ಮಹಾಬಳೇಶ್ವರದ ಸಹ್ಯಾದ್ರಿ ಬೆಟ್ಟಗಳಲ್ಲಿ ಉಗಮಿಸಿದೆ. ಇದು ಬೆಳಗಾಂವಿ ಜಿಲ್ಲೆಯ ಮುಖಾಂತರ ಹರಿದು ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಹಳಿಂಗಳಿಯ ಬಳಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಬಸವನ ಬಾಗೇವಾಡಿ ತಾಲೂಕಿನ ಚಿಮ್ಮಲಗಿಯ ಬಳಿ ದಕ್ಷಿಣಕ್ಕೆ ತಿರುಗಿ ಘಟಪ್ರಭಾವನ್ನು ಸೇರಿಸಿಕೊಂಡು ೫೦೦ ಮೀ. ಅಗಲ ಪಾತ್ರಹೊಂದಿ ಹರಿಯುತ್ತದೆ. ಕೃಷ್ಣೆಗೆ ಮಲಪ್ರಭಾ ಸೇರಿದಾಗ ೬೦೦ರಿಂದ ೭೦೦ ಮೀ. ಅಗಲದ ಪಾತ್ರಹೊಂದುತ್ತದೆ. ಒಟ್ಟು ಬಾಗಲಕೋಟೆ ಜಿಲ್ಲೆಯಲ್ಲಿ ೧೮೦ ಕಿ.ಮೀ. ಹರಿದು ಮುಂದೆ ಗುಲ್ಬರ್ಗಾ, ರಾಯಚೂರು, ಜಿಲ್ಲೆಗಳ ಮುಖಾಂತರ ಆಂಧ್ರವನ್ನು ಸೇರಿ ಅಲ್ಲಿಂದ ಬಂಗಾಲ ಉಪಸಾಗರವನ್ನು ಕೂಡುತ್ತದೆ.

ದಕ್ಷಿಣದ ಗಂಗೆ ಎಂದೇ ಪ್ರಸಿದ್ಧವಾದ ಈ ನದಿ ದಂಡೆ ಮೇಲೆ ತೀರ್ಥಕ್ಷೇತ್ರಗಳಾದ ಮೂತ್ತುರು ಮಹಾಲಕ್ಷ್ಮಿ, ಶೂರ್ಪಾಲಿಯ ನರಸಿಂಹ ದೇವಾಲಯ, ಗಾಲವ ಮುನಿಗಳ ಗಲಗಲಿ, ಬಸವಣ್ಣನವರ ಕೂಡಲ ಸಂಗಮಗಳಿವೆ. ಸ್ಕಂದ, ಪದ್ಮ, ಬ್ರಹ್ಮ ಪುರಾಣಗಳಲ್ಲಿ ಈ ನದಿಯ ಮಹಾತ್ಮೆಯ ಬಗ್ಗೆ ವಿವರಿಸಲಾಗಿದೆ.ಭಗವಾನ ಕೃಷ್ಣ ಈ ನದಿಯನ್ನು ನಿರ್ಮಿಸಿದನೆಂದು ಪ್ರತೀತಿ ಇದೆ.

ಘಟಪ್ರಭೆಯು ಕೃಷ್ಣೆಯ ಉಪನದಿಯಾಗಿದೆ. ಇದು ಬೆಳಗಾಂವಿ ಸಮೀಪ ರಾಮಘಟ್ಟದ ಸಹ್ಯಾದ್ರಿಯಲ್ಲಿ ಉಗಮವಾಗಿದೆ. ಪೂರ್ವಾಭಿಮುಖವಾಗಿ ಹರಿದು ಬಾಗಲಕೋಟೆ ಜಿಲ್ಲೆಯ ಗಿರಿಸಾಗರ

ಬಳಿ ಕೃಷ್ಣೆಯನ್ನು ಸೇರುತ್ತದೆ. ಒಟ್ಟು ೧೧೨ ಕಿ.ಮೀ. ಉದ್ದ ಜಿಲ್ಲೆಯಲ್ಲಿ ಹರಿದಿದೆ. ಈ ನದಿ ದಂಡೆಯ ಅನಗವಾಡಿ, ಹೆರಕಲ್ಲಗಳಲ್ಲಿ ಅಪರೂಪದ ಪುರಾತತ್ವ ನೆಲೆಗಳಿವೆ.

ಮಲಪ್ರಭಾ ನದಿಯು ಕೃಷ್ಣೆಯ ಇನ್ನೊಂದು ಉಪನದಿಯಾಗಿದೆ. ಇದು ಬೆಳಗಾವಿ ಜಿಲ್ಲೆಯ ಖಾನಾಪುರ ಬಳಿ ಕಣಕುಂಬಿಯ ಸಹ್ಯಾದ್ರಿ ಶಿಖರಗಳಲ್ಲಿ ಉಗಮಿಸಿದೆ. ಬಾದಾಮಿ ತಾಲೂಕಿನ ಮುಖಾಂತರ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಬಾದಾಮಿ, ಹುನಗುಂದ ತಾಲೂಕುಗಳಲ್ಲಿ ಹರಿದು ಕೂಡಲ ಸಂಗಮದಲ್ಲಿ ಕೃಷ್ಣಾನದಿಯನ್ನು ಸೇರುತ್ತದೆ. ಈ ನದಿಯ ದಂಡೆ ಮೇಲೆ ಐಹೊಳೆ, ಪಟ್ಟದಕಲ್ಲು, ನಂದಿಕೇಶ್ವರಗಳು ಐತಿಹಾಸಿಕ ಸ್ಥಳಗಳಾಗಿವೆ. ಕೂಡಲಸಂಗಮವು ತೀರ್ಥಕ್ಷೇತ್ರವಾಗಿದೆ. ಈ ನದಿಯ ತೀರದುದ್ದಕ್ಕೂ ಪುರಾತತ್ವ ನೆಲೆಗಳು ಕಂಡುಬಂದಿವೆ.

ಜಲಸಂಪತ್ತು ಈ ಜಿಲ್ಲೆಯಲ್ಲಿ ನದಿ, ಹಳ್ಳ, ತೊರೆಗಳಿಂದ ಹೆಚ್ಚಿದೆ. ನದಿ ತೀರಗಳಲ್ಲಿ ನೆಲೆಗಳು ಮೊದಲು ಪ್ರಾರಂಭವಾದುದ್ದು ತಿಳಿದು ಬಂದಿದೆ. ಹಾಗಾಗಿ ಆ ನೆಲೆಗಳು ಜಲವಾಚಿ ನಾಮವನ್ನು ಹೊಂದಿವೆ. ಉದಾ: ಹಳ್ಳದೂರು, ಹಳಗೇರಿ, ನವಿಲುಹೊಳೆ, ಗಿರಿಸಾಗರ, ಹನಮಸಾಗರ ಹಾಗಾಗಿ ಈ ಹಿನ್ನೆಲೆಯನ್ನು ಅಧ್ಯಯನ ಮಾಡಬೇಕಾಗುವದು.

೨. ಬೆಟ್ಟಶ್ರೇಣಿ

ಹೆರಕಲ್ಲ ಬೆಟ್ಟಶ್ರೇಣಿ, ಮುಚಖಂಡಿ ಬೆಟ್ಟಶ್ರೇಣಿ, ಬೆನಕಟ್ಟಿ ಬೆಟ್ಟಶ್ರೇಣಿ ಮುಖ್ಯವಾಗಿವೆ. ಕೆರೂರು ಗುಡ್ಡ, ಗಜೇಂದ್ರಗಡ ಶ್ರೇಣಿ, ಬಾದಾಮಿ ಶ್ರೇಣಿ ತೇರದಾಳ-ಜಮಖಂಡಿ ಬೆಟ್ಟಶ್ರೇಣಿ ಹೀಗೆ ಬೇರೆ ಬೇರೆ ಹೆಸರಿನಿಂದ ಗುರುತಿಸಲ್ಪಟ್ಟಿವೆ. ಸಮುದ್ರ ಮಟ್ಟದಿಂದ ೨೩೦೦ ಅಡಿ ಎತ್ತರವಾಗಿರುವ ಬಾದಾಮಿ ಬೆಟ್ಟ ಅತ್ಯಂತ ಎತ್ತರವಾದದ್ದು.

೩. ಮಣ್ಣುಗಳು

ಮೂರು ನದಿಗಳ ದಂಡೆಗುಂಟ ಎರಿರೇವೆಮಣ್ಣು, ಬಯಲು ಪ್ರದೇಶದ ಎರೆ ಭೂಮಿ, ಅರಣ್ಯಕ್ಕೆ ಹತ್ತಿರದ ಮಸಾರಿ, ಹಾಗೂ ಉಸುಕುಭೂಮಿ, ಮತ್ತು ಗರಸು ಭೂಮಿ ಹೀಗೆ ವಿವಿಧ ಮಣ್ಣುಗಳನ್ನು ಒಳಗೊಂಡ ಪ್ರದೇಶವಾಗಿದೆ.

೪. ವನಸ್ಪತಿ

ಜಿಲ್ಲೆಯಲ್ಲಿ ದಟ್ಟವಾದ ಕಾಡುಗಳೇನೂ ಇಲ್ಲ. ಆದರೆ ಸಾಧಾರಣ ಅರಣ್ಯ ಪ್ರದೇಶವಿದ್ದು ಅನೇಕ ರೀತಿಯ ವನಸ್ಪತಿ ಬೆಳೆಯುತ್ತವೆ. ಹುನಗುಂದ ಹಾಗೂ ಬಾಗಲಕೋಟೆ ತಾಲೂಕುಗಳಲ್ಲಿ ಅರಣ್ಯವಿರುವುದಿಲ್ಲ. ಬಾದಾಮಿ, ಜಮಖಂಡಿ, ಮುಧೋಳ, ಬೀಳಗಿ ತಾಲೂಕಗಳಲ್ಲಿ ಅಲ್ಲಲ್ಲಿ ದಟ್ಟ ಅರಣ್ಯವಿದ್ದು ವನಸ್ಪತಿ ಬೆಳೆಯುತ್ತಿದೆ. ಅರಣ್ಯದ ಪ್ರಮುಖ ವನಸ್ಪತಿಗಳೆಂದರೆ: ಕಕ್ಕೆ, ಖೈರ್, ಗಂಧ,

ಚುಚ್ಚಿಲ, ಹಲಗತ್ತಿ, ಜಾಲಿ, ತುಮ್ರ, ದಿಂಡಲು, ಅಕೇಶಿಯ, ನೀಲಗಿರಿ, ಶಿಸು, ಶಿರಸ್ಯಾಲ ಸಂಕೇಶ್ವರ, ಸುಬಾಬುಲ್, ಆಲ, ಸಿಂದಿಗಿಡ, ಹುಣಸೆ, ಮಾವು, ಬೇವು. ಇತ್ತಿಚಿಗೆ ನೀಲಗಿರಿ, ಸಾಗವಾನಿ ಮರಗಳನ್ನು ಬೆಳಸಲಾಗುತ್ತದೆ. ನದಿ ದಂಡೆಗಳಲ್ಲಿ ಬಿದರಿನ ಸಾಲುಗಳು ಗೋಚರಿಸುವುದುಂಟು. ಕಳ್ಳಿ, ನಾರು, ರಟಗೋಳಿಯಂತಹ ಸಸ್ಯ ಒಳನಾಡ ಪ್ರದೇಶದಲ್ಲಿ ಕಾಣುತ್ತವೆ.

೫. ಪ್ರಾಣಿ–ಪಕ್ಷಿಗಳು

ಮಾನವ ಕೆಲವೊಂದು ಸಾಧು ಪ್ರಾಣಿಗಳನ್ನು ಪಳಗಿಸಿ ತನ್ನ ಸಹಾಯಕ್ಕಾಗಿ, ಆಹಾರಕ್ಕಾಗಿ ಸಾಕಿಕೊಂಡನು. ಅವು ನಾಯಿ, ಎತ್ತು, ಎಮ್ಮೆ, ಗೋವು, ಕೋಣ ಇತ್ಯಾದಿ. ಅದೇ ರೀತಿ ನಿಸರ್ಗ ಹಾಗೂ ಹವಾಮಾನ ಕಾರಣವಾಗಿ ಕೆಲವೊಂದು ಪ್ರದೇಶದಲ್ಲಿ ಕಾಗೆ, ಬಾವಲಿ, ಓತಿಕಾಟ, ಕೌಜಗ, ಕರಡಿ ಮುಂತಾದ ಪ್ರಾಣಿ–ಪಕ್ಷಿಗಳು ಹೆಚ್ಚಾಗಿ ವಾಸಿಸುತ್ತಿರುವುದರಿಂದ ಅವುಗಳ ಹೆಸರಿನಿಂದ ಆಯಾ ನೆಲೆಗಳನ್ನು ಕರೆದನು. ಪ್ರಾಣಿ–ಪಕ್ಷಿಗಳ ಹೆಸರಿನಿಂದ ಕರೆದ ಸ್ಥಳನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿ ಸಾಕಷ್ಟಿವೆ.

೬. ಪ್ರಾಗೈತಿಹಾಸಿಕ

ಮಾನವ ಬರವಣಿಗೆ ತಂತ್ರ ರಾಜಕೀಯ ಹಾಗೂ ಆಡಳಿತಾತ್ಮಕ ವ್ಯವಸ್ಥೆಯನ್ನು ರೂಪಿಸಿಕೊಂಡ ಹಂತವೇ ಇತಿಹಾಸ ಆರಂಭಕಾಲ ಎನ್ನುವುದಾದರೆ ಅದರ ಹಿಂದಿನ ಏಳು ಹಂತಗಳನ್ನು ಪ್ರಾಕ್+ಐತಿಹಾಸಿಕ = ಪ್ರಾಗೈತಿಹಾಸಿಕ ಎಂದು ಪುರಾತತ್ವ ಶಾಸ್ತ್ರ ಜ್ಞರು ಪರಿಗಣಿಸಿದ್ದಾರೆ.

ಪುರಾತತ್ವ ಶಾಸ್ತ್ರ ಜ್ಞರು ಬಾಗಲಕೋಟೆಜಿಲ್ಲೆಯ ಮಲಪ್ರಭಾ, ಘಟಪ್ರಭಾ, ಕೃಷ್ಣಾನದಿ ಬಯಲಿನಲ್ಲಿ ಸರ್ವೇಕ್ಷಣೆ ನಡೆಸಿ ಪ್ರಾಗೈತಿಹಾಸಿಕದ ಕಾಲಕ್ಕೆ ಸೇರಿದ್ದ ನೂರಾರು ನೆಲೆಗಳನ್ನು ಬೆಳಕಿಗೆ ತಂದಿರುವರು. ಪ್ರಾಗೈತಿಹಾಸಿಕವು ಸುಮಾರು ಐದು ಲಕ್ಷ ವರ್ಷಗಳಷ್ಟು ಹಿಂದಕ್ಕೆ ಸರಿಯುತ್ತದೆ. ಪುರಾತತ್ವ ಶಾಸ್ತ್ರಜ್ಞರು ಮಾನವ ವಿಕಾಸದ ಏಳು ಹಂತಗಳಾದ ೧. ಆದಿ ಹಳೆ ಶಿಲಾಯುಗ ೨. ಮಧ್ಯ ಹಳೆ ಶಿಲಾಯುಗ ೩. ಅಂತ್ಯ ಹಳೆ ಶಿಲಾಯುಗ ೪. ಸೂಕ್ಷ್ಮ ಅಥವಾ ಸ್ಥಿತ್ಯಂತರ ಶಿಲಾಯುಗ ೫. ನೂತನ ಶಿಲಾಯುಗ ೬. ಶಿಲಾ–ತಾಮ್ರಯುಗ ೭. ಕಬ್ಬಿಣ ಯುಗದ ಬೃಹತ್ ಶಿಲಾಯುಗ. ಇವುಗಳಿಗೆ ಸೇರಿದ ನೆಲೆಗಳನ್ನು ಈ ಜಿಲ್ಲೆಯಲ್ಲಿ ಗುರುತಿಸುತ್ತಾರೆ. ಆದಿ ಹಳೆಯ ಸಂಸ್ಕೃತಿಯಿಂದ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು ಇಲ್ಲಿ ಕಂಡು ಬರುತ್ತವೆ.

೧೮೫೧–೬೦ರಲ್ಲಿ ಕರ್ನಲ್ ಮೇಡೋಸ್ ಟೇಲರ್ 'ಗುಳೆದಗುಡ್ಡದಲ್ಲಿ' ಪ್ರಾಗೈತಿಹಾಸಿಕದ ನೆಲೆಯನ್ನು ಪತ್ತೆ ಹಚ್ಚಿದ. ಇದಕ್ಕೂ ಸ್ವಲ್ಪ ಮೊದಲು ಕೀಸರು 'ಹಿರೆಬೆನಕಲ್ಲ'ದಲ್ಲಿ ಕಬ್ಬಿಣಯುಗದ ಬೃಹತ್ ಶಿಲಾಯುಗದ ಕಲ್ಗೋರಿಗಳನ್ನು ಪತ್ತೆ ಹಚ್ಚಿದರು. ರಾಬರ್ಟ ಬ್ರೂಸ್‌ಫುಟ್‌ರು ೧೮೮೮ರಲ್ಲಿ ಬಾದಾಮಿ

ತಾಲೂಕಿನ ಖ್ಯಾಡ, ಡಾನಕ್‌ಶಿರೂರು ಹಾಗೂ ಯಡಹಳ್ಳಿಗಳಲ್ಲಿ ಎರಡು ಲಕ್ಷ್ಯ ವರ್ಷಗಳಷ್ಟು ಹಿಂದಿನ ಆದಿ ಹಳೆಯ ಶಿಲಾಯುಗದ ಶಿಲಾಯುಧಗಳನ್ನು ಪತ್ತೆ ಹಚ್ಚಿ ದಾಖಲಿಸುವದ ರೊಂದಿಗೆ ಜಿಲ್ಲೆಯ ಪ್ರಾಗೈತಿಹಾಸಿಕದ ಅಧ್ಯಯನಕ್ಕೆ ಬ್ರೂಸ್‌ಪುಟ್ ನಾಂದಿ ಹಾಡಿದರು. ೧೯೮೦ರ ದಶಕದಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ಪಂಚಮುಖಿ ಮತ್ತು ಅಣ್ಣಿಗೇರಿಯವರು ತೇರದಾಳ, ಹಳಿಂಗಳಿ, ರೊಳ್ಳಿ, ಗರುಡದನ್ನಿ, ಮೊದಲಾದೆಡೆಗಳಲ್ಲಿ ಶಿಲಾ-ತಾಮ್ರಯುಗ ಹಾಗೂ ಬೃಹತ್ ಶಿಲಾಗೋರಿಗಳ ನೆಲೆಗಳನ್ನು, ಕುಳ್ಳಳ್ಳಿಯಲ್ಲಿ ಬಂಡೆಮೇಲಿನ ಗೀರು ಚಿತ್ರಗಳನ್ನು ಪತ್ತೆ ಹಚ್ಚಿದರು. ೧೯೪೯ರಲ್ಲಿ ಲಂಡನದ ಎಫ್.ಇ.ಝುಯಿಸರು ಖ್ಯಾಡದಲ್ಲಿ ಪ್ರಾಗೈತಿಹಾಸಿಕದ ನೆಲೆ ಗುರುತಿಸಿದರು. ೧೯೫೬ರಲ್ಲಿ ಹಿರೇಮೂಲಂಗಿ, ಮನ್ನೇರಿ, ಡಾನಕ್‌ಶಿರೂರ, ತಮಿನಾಳ, ಹೊಳೆಆಲೂರುಗಳಲ್ಲಿ, ಆರ್.ವ್ಹಿ. ಜೋಶಿಯವರು ಹಳೆಶಿಲಾಯುಗದ ಮಾನವನ ಉಪಕರಣಗಳನ್ನು ಸಂಗ್ರಹಿಸಿದರು. ಎಮ್.ಎನ್. ದೇಶಪಾಂಡೆಯವರು ೧೯೬೭ರಲ್ಲಿ ನಂದಿಕೇಶ್ವರ, ಬಿ.ಎನ್.ಜಾಲಿಹಾಳ, ಐಹೊಳೆಗಳಲ್ಲಿ ಶಿಲಾಯುಧ ಗಳನ್ನು ಶೋಧಿಸಿದರು. ಬಾದಾಮಿ ಸಿಡಿಲಪಡಿ, ಪಟ್ಟದಕಲ್ಲು ಇವು ಕೂಡ ಆದಿ ಹಳೆಯ ಶಿಲಾಯುಗದ ನೆಲೆಗಳಾಗಿದ್ದವೆಂದು ತಿಳಿದುಬಂದಿದೆ. ಪಟ್ಟದಕಲ್ಲು, ಅಕ್ಕರಗಲ್ಲು, ಐಹೊಳೆ, ಸಿದ್ಧನಕೊಳ್ಳ, ಕ್ಯಾದಿಗ್ಗೇರಿ, ಚೀಲಾಪೂರ ಇವುಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳಿವೆ.

ಸುಮಾರು ಕ್ರಿ.ಪೂ. ೨೦೦೦-೧೮೦೦ರ ಅವಧಿಯ ಉತ್ತರ ಕಾಲೀನ ಸಿಂಧೂ-ಸರಸ್ವತಿ ನಾಗರಿಕತೆಯ ಹಂತದ ಹಿಂದಿನದೇ ಸಾವಳ್ಗಾ ಸಂಸ್ಕೃತಿ. ಇದರ ಕಾಲಮಾನ ಸುಮಾರು ಕ್ರಿ ಪೂ. ೧೮೦೦-೧೯೦೦. ಈ ಸಂಸ್ಕೃತಿಯ ಕುರುಹುಗಳು ಕಡೋಳಿಯಿಂದ ಹಿಡಿದು ಸತ್ತಿ, ಮಂಗಸೂಳಿ, ತೇರದಾಳ, ಕುಲ್ಲೊಳ್ಳಿವರೆಗೆ ಸುಮಾರು ೨೫ ನೆಲೆಗಳಲ್ಲಿ ದೊರೆತಿವೆ. ಸತ್ತಿಯಲ್ಲಿ ಸಿಕ್ಕ ಮೃತ್ಪಾತ್ರೆಯ ಮೇಲೆ ಕೊಕ್ಕರೆಯ ಚಿತ್ರ ಅಳತೆ ಮೀರದಂತೆ ಇದೆ. ಮಂಗಸೂಳಿಯಲ್ಲಿ ವಾಸದ ಮನೆಗಳು ದೊರೆತಿವೆ. ಈ ಸಂಸ್ಕೃತಿಯ ತೇರದಾಳ ಮತ್ತು ಕುಲ್ಲೊಳ್ಳಿ(ಜಮಖಂಡಿ ತಾಲ್ಲೂಕ)ಗಳಲ್ಲಿ ಬೂದಿದಿನ್ನಿಗಳು ಇವೆ. ೧೯೯೨-೧೯೯೬ರಲ್ಲಿ ಬೂದಿದಿನ್ನಿಗಳು ಬೂದಿಹಾಳದಲ್ಲಿ ಸಂಶೋಧನೆ ಗೊಂಡಿವೆ.

ತೇರದಾಳ, ಹಳಿಂಗಳ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಕಲ್ಗೋರಿಗಳ ನೆಲೆ ದೊರೆತಿವೆ. ಈ ಸಂಸ್ಕೃತಿಯ ಕಾಲ ಸುಮಾರು ಕ್ರಿ.ಪೂ. ೧೪೦೦ರಿಂದ ಕ್ರಿ.ಶ. ೧ನೆಯ ಶತಮಾನದವರೆಗೆ ಇದೆ ಎಂದು ತಿಳಿಯಲಾಗಿದೆ ಇಲ್ಲಿ ಕಬ್ಬಿಣದ ಬೇಟೆಯ ಉಪಕರಣಗಳು ಮೃತ್ಪಾತ್ರೆಗಳು ದೊರೆತಿವೆ. ಕುಳ್ಳೊಳ್ಳಿ, ಬಾದಾಮಿ, ಐಹೊಳಿ, ಕುಟಕನಕೆರೆಯಲ್ಲಿ ಕೆಲವು ವರ್ಣ ಚಿತ್ರಗಳು ಸೂಕ್ಷ್ಮ ಶಿಲಾಯುಗದ ಕಾಲದವು ಎಂದು ತಿಳಿಯಲಾಗಿದೆ.

೭. ಐತಿಹಾಸಿಕ

ಐತಿಹಾಸಿಕವಾಗಿ ಬಾಗಲಕೋಟೆ ಪ್ರದೇಶವು ಕುಂತಳನಾಡಿಗೆ ಒಳಪಟ್ಟಿರುತ್ತದೆ. ದಖ್ಖನ್ ಪ್ರಸ್ಥಭೂಮಿಗೆ ಕುಂತಳನಾಡೆಂದು ತಿಳಿಯಲಾಗಿದೆ, "ರಾಮಾಯಣದಲ್ಲಿ ವರ್ಣಿತವಾಗಿರುವ ದಂಡಕಾರಣ್ಯದ ವ್ಯಾಪ್ತಿಯೊಳಗೆ ಐಹೊಳೆ, ಬಾದಾಮಿ, ಬಾಗಲಕೋಟೆ, ಧೂಳಖೇಡ, ಗಲಗಲಿ, ಹಿಪ್ಪರಗಿ ಮತ್ತು ಮಹಾಕೂಟಗಳು ಸೇರ್ಪಡೆಯಾಗಿವೆ."[೧]

ಇನ್ನೊಂದು ಐತಿಹ್ಯ, ಅಗಸ್ತ್ಯ ಋಷಿಗಳು 'ವಾತಾಪಿ', 'ಇಲ್ವಲ'ರೆಂಬ ಸಹೋದರರನ್ನು ಸಂಹರಿಸಿದ್ದು. ಜಮಖಂಡಿ ತಾಲೂಕಿನ ಆಸಂಗಿ ಗ್ರಾಮದ ಬಳಿ ಅಗಸ್ತ್ಯ ಮುನಿಗಳ ಆಶ್ರಮವಿತ್ತೆಂದು ಹೇಳುತ್ತಾರೆ. ಮತ್ತೊಂದು, ಐಹೊಳೆಗೆ ಸಂಬಂಧಿಸಿದ ಐತಿಹ್ಯವೆಂದರೆ ರೇಣುಕೆಯ ಮಗ ಪರಶುರಾಮನು ೨೧ ಸಲ ಭೂಮಿಯನ್ನು ಸುತ್ತಿ ಕಂಡ ಕಂಡ ಕ್ಷತ್ರಿಯರನ್ನು ಸಂಹರಿಸಿ ತನ್ನ ಪ್ರತಿಜ್ಞೆ ಇಡೇರಿಸಿಕೊಂಡ ನಂತರ ಬಂದು ರಕ್ತಮಯವಾದ ತನ್ನ 'ಪರಶು'ವನ್ನು ಮಲಪ್ರಭಾ ನದಿಯಲ್ಲಿ ತೊಳೆಯುತ್ತಿರಲು, ಹೊಳೆನೀರು ಕೆಂಪಾಗಲು ಅದನ್ನು ಕಂಡ ಜನ ಅಯ್ಯೋಹೊಳೆ! ಎನ್ನಲು ಇಂದಿನ 'ಐಹೊಳೆಯಾಗಿ' ನಿರ್ಮಾಣಗೊಂಡಿದೆ. ಜಮಖಂಡಿ ತಾಲೂಕಿನ ಹಿಪ್ಪರಗಿಯ ಒಂದು ಮಂದಿರವನ್ನು ಪರಶುರಾಮನ ತಂದೆ ಜಮದಗ್ನಿ ಋಷಿ ಕಟ್ಟಿಸಿದನೆಂದು ಹೇಳುತ್ತಾರೆ. ರಾವಣನು ತನ್ನ ಆಸ್ಥಾನದ ಸಂಗೀತಗಾರನಿಗೆ ಬಾಗಲಕೋಟೆಯನ್ನು ದತ್ತಿ ನೀಡಿದ್ದನಂತೆ. "ಪುರಾಣಕಾಲದ ಶಿವನ ಮಾವ ದಕ್ಷಪ್ರಜಾಪತಿಯು ಭೀಮಾನದಿ ತೀರದ ಧೂಳಖೇಡದಲ್ಲಿ ಯಜ್ಞ ನಡೆಸಿದನೆಂದು ಈ ಸಂದರ್ಭದಲ್ಲಿ ಶಿವನನ್ನು ಅವಮಾನಿಸಿದ್ದಕ್ಕಾಗಿ ಶಿವನ ಹೆಂಡತಿ ಹಾಗೂ ದಕ್ಷನ ಮಗಳಾದ ಗಿರಿಜೆ ಯಜ್ಞಕುಂಡ ಪ್ರವೇಶಿಸಿ ಆತ್ಮಹತ್ಯೆ ಮಾಡಿಕೊಂಡಳೆಂಬ ಪ್ರತೀತಿ ಇದೆ."[೨] ಇಂದಿನ ಗಲಗಲಿಗೆ ಈ ಹೆಸರು ಬರಲು ಕಾರಣ ಅಲ್ಲಿ ಗಾಲವ ಋಷಿಗಳು ನೆಲೆಸಿದ್ದರೆಂಬ ಪ್ರತೀತಿ ಇದೆ. ಇನ್ನು ಮಹಾಭಾರತದಲ್ಲಿ ಪ್ರಸ್ತಾಪವಾಗುವ ಕುಂತಳವು ಇಂದಿನ ಉತ್ತರ ಕರ್ನಾಟಕ ಪ್ರದೇಶವೆಂದು ನಂಬಲಾಗುತ್ತದೆ.

ಈ ಕುಂತಳ ಪ್ರದೇಶವು ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತು. ನಂತರ ಈ ಪ್ರದೇಶ ಶಾತವಾಹನರ ಆಳಿಕ್ವೆಗೆ ಒಳಗಾಗಿತ್ತು. ಇದಕ್ಕೆ ಆಧಾರವಾಗಿ ಶಾತವಾಹನರ ಕಾಲದ ಮೃತ್ಪಾತ್ರೆಗಳು, ನಾಣ್ಯಗಳು ಐಹೊಳೆಯ ಹುಚ್ಚಪ್ಪಯ್ಯ ಮಠದ ಸಂಕೀರ್ಣದ ಅಗೆತದಲ್ಲಿ ದೊರೆತಿವೆ. ಇತ್ತೀಚೆಗೆ ಬಾಚನ ಗುಡ್ಡದ ಉತ್ಖನನದಲ್ಲಿ ದೊರೆತ ಇಟ್ಟಿಗೆಗಳುಳ್ಳ ತಳಪಾಯ ಹೊಂದಿದ ದೇವಾಲಯವಿತ್ತೆಂದೂ ಅದು ಸುಮಾರು ಕ್ರಿ.ಶ. ೪ನೆಯ ಶತಮಾನದ್ದೆಂದು ತಿಳಿದಿದೆ. ಗ್ರೀಕ್ ಪ್ರವಾಸಿ ಟೋಲೆಮಿ ಕ್ರಿ. ಶ ೧೫೦ರ ಕಾಲದಲ್ಲಿ ಭಾರತಕ್ಕೆ ಭೇಟಿನೀಡಿದ್ದನು. ಈತ ರಚಿಸಿದ 'A Guide to Geography' ಗ್ರಂಥದಲ್ಲಿ ಬಾದಾಮಿ, ಪಟ್ಟದಕಲ್ಲು, ಸಿಂದಗಿಗಳನ್ನು ಉಲ್ಲೇಖಿಸಿದ್ದಾನೆ. ಶಾತವಾಹನರ ದೊರೆ ಯೊಬ್ಬನನ್ನು 'ಕುಂತಲ ಸಾತಕರ್ಣಿ' ಎಂದು ಇತಿಹಾಸದಲ್ಲಿ ಪ್ರಸ್ತಾಪಿಸಲಾಗಿದೆ. 'ಹಾಲ' ಎಂಬ ದೊರೆ 'ಗಾಥಾ ಸಪ್ತಶತಿ' ಎಂಬ ಕೃತಿಯನ್ನು ಬರೆದನು ಎಂದು ಇತಿಹಾಸಕಾರರು ಹೇಳುತ್ತಾರೆ.

ಶಾತವಾಹನ ಪ್ರಾಬಲ್ಯ ಕಡಿಮೆ ಆದಂತೆ ಕದಂಬರು ಅಧಿಕಾರಸ್ಥರಾದರು. ಕದಂಬರು ಈಗಿನ ಕರ್ನಾಟಕದ ಐಹೊಳೆ, ಪಟ್ಟದಕಲ್ಲುಗಳಲ್ಲಿ ಕೆಲವೊಂದು ಶಿಲ್ಪ ಹಾಗೂ ಕಟ್ಟಡಗಳ ನಿರ್ಮಾಣಕ್ಕೆ ಕಾರಣರಾದರು ಎಂದು ಶಿಲ್ಪಗಳ ಹಾಗೂ ಕಟ್ಟಡಗಳ ಸ್ವರೂಪಗಳ ಮೇಲಿಂದ ಊಹಿಸಲಾಗಿದೆ.

ನಂತರ ಕದಂಬರು ಅಶಕ್ತರಾದಂತೆ ಚಾಲುಕ್ಯರು ಅಂದಿನ ಕುಂತಲ ನಾಡನ್ನು ಸುಮಾರು ೫-೬ ಶತಮಾನಗಳ ಕಾಲ ಆಳಿದರು. ೬ನೆಯ ವಿಕ್ರಮಾದಿತ್ಯನ ಕಾಲದ ಕವಿ ಬಿಲ್ಹಣನ 'ವಿಕ್ರಮಾಂಕದೇವ ಚರಿತಂ' ಹಾಗೂ ೩ನೆಯ ಸೋಮೇಶ್ವರನ 'ವಿಕ್ರಮಾಂಕಾಭ್ಯುದಯಂ' ಕಾವ್ಯಗಳಲ್ಲಿ ಚಾಲುಕ್ಯ ವಂಶಾವಳಿ ದೊರೆಯುವುದು. ಚಾಲುಕ್ಯ ವಂಶದ ಮೂಲ ಪುರುಷರು ಜಯಸಿಂಹ ಮತ್ತು ಅವನ ಮಗ ರಣರಾಗ. ರಣರಾಗನ ಮಗ ೧ನೆಯ ಪುಲಿಕೇಶಿಯು ಸ್ಥಿರವಾದ ಚಾಲುಕ್ಯ ಸಾಮ್ರಾಜ್ಯ ಸ್ಥಾಪಕನಾದನು.

ಕ್ರಿ.ಶ. ೫೪೩ರಲ್ಲಿ ೧ನೆಯ ಪುಲಿಕೇಶಿ ಬಾದಾಮಿಯಲ್ಲಿ ಕೋಟೆಯನ್ನು ಕಟ್ಟಿಸಿದನೆಂದು ಬಾದಾಮಿಯ 'ಬಂಡೆಗಲ್ಲು ಶಾಸನ'ದಿಂದ ತಿಳಿಯುವುದು. ಇವನ ಮಗ ೧ನೆಯ ಕೀರ್ತಿವರ್ಮ, ಇವನ ಕಾಲಾವಧಿ ಕ್ರಿ.ಶ. ೫೭೮. ಈತ ವಂಗ, ಕಳಿಂಗ, ವತ್ತೂರು, ಮಗಧ, ಮಾದ್ರಕ, ಕೇರಳ, ಗಂಗ, ಮಹಿಷಿಕ, ಪಾಂಡ್ಯ, ಗ್ರಾಮಿಲ, ಚೋಳ, ಆಲೋಕ ಮತ್ತು ವೈಜಯಂತಿ ಅರಸರನ್ನು ಸೋಲಿಸಿದನೆಂದು ಮಾಹಾಕೂಟ ಸ್ಥಂಭ ಶಿಲಾಶಾಸನದಲ್ಲಿ ಉಲ್ಲೇಖವಿದೆ. ಈತನ ಕಿರಿಯ ಸೋದರ ಮಂಗಳೇಶ ಈತ ಬಾದಾಮಿಯಲ್ಲಿ ಗುಹಾಲಯ ನಿರ್ಮಿಸಿದನು. ಈತನಿಗೂ ೨ನೆಯ ಪುಲಿಕೇಶಿಗೂ ಯುದ್ಧ ಸಂಭವಿಸಿ ಯುದ್ಧದಲ್ಲಿ ಮಡಿದನು. ೨ನೆಯ ಪುಲಿಕೇಶಿಯ ಬಗ್ಗೆ ಹೂಯೆನ್‌ತ್ಸಾಂಗ್ ಹೇಳಿದ್ದಾನೆ. ಪರ್ಶಿಯನ್ ದೊರೆ ಇಮ್ಮಡಿ ಖುಸ್ರು ೨ನೆಯ ಪುಲಿಕೇಶಿಯ ಜೊತೆ ಪತ್ರ ವ್ಯವಹಾರ ನಡೆಸಿದ್ದರ ಬಗ್ಗೆ, ಅರೆಬಿಕ್ ವೃತ್ತಾಂತ ಒಂದರಲ್ಲಿ ದಾಖಲಿಸಿದ್ದಾರೆ. ಪಲ್ಲವ ದೊರೆ ೧ನೆಯ ನರಸಿಂಹ ಪುಲಿಕೇಶಿಯನ್ನು ಸೋಲಿಸಿದ ಬಗ್ಗೆ ಬಾದಾಮಿಯ ಮಲ್ಲಿಕಾರ್ಜುನ ಗುಡಿಯ ಹಿಂಬದಿಯ ಶಿಲಾಲೇಖ ತಿಳಿಸುತ್ತದೆ. ಚಾಲುಕ್ಯರ ವಾಸ್ತುಶಿಲ್ಪವನ್ನು 'ವೇಸರ ಶೈಲಿ'ಯ ಹೆಸರಿನಿಂದ ಕರೆಯುತ್ತಾರೆ. ವಾಸ್ತುಶಿಲ್ಪದ ತೊಟ್ಟಿಲು ಎನ್ನಿಸಿರುವ "ಐಹೊಳೆ ದಕ್ಷಿಣ ಭಾರತದ ವಿಜ್ಞಾನದ ಮೊದಲ ಪ್ರಯೋಗಶಾಲೆ ಎನ್ನಿಸಿದೆ. ನೂರಾರು ಶಿಲ್ಪಿಗಳು ಇಲ್ಲಿ ಕಲಾಸೃಷ್ಟಿ ಮಾಡಿದರು. ಪಟ್ಟದಕಲ್ಲು ವಿಶ್ವ ಪರಂಪರೆಯ ತಾಣವಾಗಿದೆ. ಅಧಿಷ್ಠಾನವಾಗಿದ್ದ ಬಾದಾಮಿ ವಿಶ್ವ ಪ್ರಸಿದ್ಧ ಗುಹಾಲಯಗಳಿಂದ ಕೂಡಿದ ಕಲಾ ನೆಲೆಯಾಗಿದೆ. ಚಾಲುಕ್ಯ ಅರಸರ ಆಶ್ರಯದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಶಿಲ್ಪಗಳು, ದೇವಾಲಯಗಳು ನಿರ್ಮಾಣಗೊಂಡವು"[೩] ಸರ್ವಧರ್ಮ ಸಮನ್ವಯತೆ ಚಾಲುಕ್ಯರ ಸಂದೇಶವಾದಂತಿದೆ. ಬಾದಾಮಿ, ಐಹೊಳೆ ಮೊದಲಾದವುಗಳಲ್ಲಿ ದೇವಾಲಯಗಳನ್ನು ನಿರ್ಮಿಸಿ ದುರ್ಲಭಾದೇವಿ, ವಿಜ್ಜಿಕೆ, ಕುಂಕುಮ ಮಹಾದೇವಿ, ವಿನಯವತಿ, ಲೋಕ ಮಹಾದೇವಿ, ತ್ರೈಲೋಕ ಮಾಹಾದೇವಿ, ರವಿಕೀರ್ತಿ, ಮಂಗಳೇಶ, ಅರೇಮಂಚಿ ಉಪಾಧ್ಯಾಯ ಮುಂತಾದವರು ಅಮರರಾಗಿದ್ದಾರೆ.

ಚಾಲುಕ್ಯರ ನಂತರ ಈ ಕುಂತಲ ನಾಡನ್ನು ರಾಷ್ಟ್ರಕೂಟರು ಆಳಿದರು. ಈ ಮನೆತನದ ಮೊದಲ ಅರಸ ದಂತಿದುರ್ಗ. ರಾಷ್ಟ್ರಕೂಟರ ಹಲವಾರು ಶಾಸನಗಳು ಬಾಗಲಕೋಟೆ ಜಿಲ್ಲೆಯಲ್ಲಿ ದೊರೆತಿವೆ. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿ ಧಾರಾವರ್ಷ ಕಲಿವಲ್ಲಭನ ಪ್ರಸ್ತಾಪವಿದೆ. ರಾಷ್ಟ್ರಕೂಟರ ಕಾಲದ ದೇವದಾಸಿ ಬಾದಿಪೊಡ್ಡಿ, ಶಾಂತಗಾವುಂಡ, ಲೋಕಾದಿತ್ಯ ಮುಂತಾದವರು ದೇವಾಲಯಗಳನ್ನು ಕಟ್ಟಿಸಿ, ಗೋಸಾಹಸದಂತಹ ಶ್ರೇಷ್ಠ ದಾನ ಮಾಡಿದ್ದಾರೆ. ಬಾದಾಮಿ, ಪಟ್ಟದಕಲ್ಲು, ಬನಶಂಕರಿ, ಬೇಲೂರು, ಮಹಾಕೂಟ ಮುಂತಾದ ಕಡೆಗಳಲ್ಲಿ ವಿವಿಧ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಕಲ್ಯಾಣದ ಚಾಲುಕ್ಯರು ರಾಷ್ಟ್ರಕೂಟರನ್ನೂ ಪದಚ್ಯುತಿಗೊಳಿಸಿ ಕಲ್ಯಾಣವನ್ನು ರಾಜಧಾನಿಯಾಗಿಸಿಕೊಂಡು ಕರ್ನಾಟಕ ಪ್ರದೇಶವನ್ನು ಆಳಿದರು. ಕಲ್ಯಾಣವನ್ನು ರಾಜಧಾನಿ ಯಾನ್ನಾಗಿಸಿಕೊಂಡಿದ್ದಕ್ಕೆ ಇವರನ್ನು ಕಲ್ಯಾಣದ ಚಾಲುಕ್ಯರೆಂದು ಕರೆದರು. ಜಗದೇಕಮಲ್ಲ ಜಯಸಿಂಹನ ಕಾಲದಲ್ಲಿ ಅನೇಕ ಧಾರ್ಮಿಕ ಚಟುವಟಿಕೆಗಳು ನಡೆದುವು. ಜಗದೇಕಮಲ್ಲನ ತಂಗಿ ಅಕ್ಕಾದೇವಿಯು 'ಕಿಸುಕಾಡು-೭೦' ನಾಡನ್ನು ಆಳುತ್ತಿದ್ದು, ಅರಸಿಬೀದಿಯ ಶಾಸನಗಳಲ್ಲಿ ಇವಳನ್ನು ಅನೇಕ ವಿಶೇಷಣಗಳಿಂದ ಹೊಗಳಲಾಗಿದೆ. ಇವರ ಕಾಲದ ಮಹಾಮಂಡಳೇಶ್ವರ ಲಕ್ಷ್ಮರಸ, ೬ನೆಯ ವಿಕ್ರಮಾದಿತ್ಯನ ಹೆಂಡತಿ ಚಂದಲದೇವಿ, ವಾದಿಯಣ್ಣ ಮೊದಲಾದವರು ದೇವಾಲಯ ನಿರ್ಮಿಸಿ, ದಾನ, ದತ್ತಿ ನೀಡಿದ್ದಾರೆ.

ಕಳಚೂರ್ಯರು ಉತ್ತರ ಕರ್ನಾಟಕ ಪ್ರದೇಶವನ್ನು ಅಲ್ಪಾವಧಿ ಆಳಿದರು, ಹಾಗೂ ಮೊದಲು ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದರು. ಕಲ್ಯಾಣದ ದೊರೆ ಮುಮ್ಮಡಿ ತೈಲಪನ ನಂತರ ಇಮ್ಮಡಿ ಬಿಜ್ಜಳನ ನಾಯಕತ್ವದಲ್ಲಿ ಪರಮಾಧಿಕಾರವನ್ನು ಸಂಪಾದಿಸಿದರು. ಇವರ ಕಾಲದಲ್ಲಿ ಸಾಮಾಜಿಕ, ಧಾರ್ಮಿಕ ಕಾರಣಗಳಿಂದ ರಾಜ್ಯವು ಶಾಂತಿಯಿಂದ ಕೂಡಿರಲಿಲ್ಲ. ಇನ್ನೊಂದೆಡೆ ಬಿಜ್ಜಳನ ಮಕ್ಕಳು ಅಧಿಕಾರಕ್ಕಾಗಿ ಕಲಹ ನಡೆಸಿದರು.

ಇವರು ತಮ್ಮನ್ನು ಯದುಕುಲ ಸಂಜಾತರೆಂದು ಶಾಸನಗಳಲ್ಲಿ ಕರೆದುಕೊಂಡಿದ್ದಾರೆ. ಇಮ್ಮಡಿ ಬಿಜ್ಜಳನು ೧೧೫೩ರ ಸುಮಾರಿಗೆ ಮುಮ್ಮಡಿ ತೈಲಪ ಕಲ್ಯಾಣವನ್ನು ಆಳುತ್ತಿರುವಾಗಲೇ ರಾಜಕೀಯ ಪ್ರಬಲತೆ ಪಡೆದನು. ಈ ಅಂಶವನ್ನು ಇವನ ಕಾಲದ ಯಾಳವಾರ, ಮುತ್ತಗಿ, ಕಣ್ಣೂರು ಶಾಸನಗಳು ವಿಶದಪಡಿಸುತ್ತವೆ. ಇವರು ೧೧೮೪ರವರೆಗೆ ಕಲ್ಯಾಣವನ್ನು ರಾಜಧಾನಿಯನ್ನಾಗಿಸಿಕೊಂಡು ಆಳ್ವಿಕೆ ನಡೆಸಿದರು.

ಬಸವೇಶ್ವರರು ಕಲಚೂರಿಗಳ ಕಾಲದಲ್ಲಿ ಸಾಮಾಜಿಕ ಚಳುವಳಿ ನಡೆಸಿದರು. ಶರಣ ಸಮುದಾಯ ರೂಪಗೊಂಡಿತು. ವಚನ ಸಾಹಿತ್ಯವೆಂಬ ವಿಶೇಷ ಲಕ್ಷಣವುಳ್ಳ ಸಾಹಿತ್ಯ ರಚನೆಯಾಯಿತು, ಅದು ಉಪನಿಷತ್ತಾಗಿ ಪರಿಣಮಿಸಿತು. ಬಸವಣ್ಣನು ಸಮಾಜ ಸುಧಾರಿಸಲು ಬಹಳ ಶ್ರಮವಹಿಸಿದನು.

ಇಮ್ಮಡಿ ಬಿಜ್ಜಳನನ್ನು ಜಮಖಂಡಿಯ ೧೧೬೪ರ ಶಾಸನವು 'ತ್ರಿಭುವನಮಲ್ಲ'ನೆಂದೂ, ಅರಸಿಬೀದಿ ಶಾಸನವು 'ಭುಜಬಳದೇವ'ನೆಂದೂ ವರ್ಣಿಸಿವೆ. ಇವರ ಕಾಲದಲ್ಲಿ ದಂಡನಾಯಕ ಸಿಂಧ ಚೌಂಡರಸ 'ಕಡಕೇರಿ'ಯನ್ನು ೫೦೦ ಮಾಹಾಜನರಿಗೆ ಗ್ರಾಮವನ್ನು ದತ್ತಿನೀಡಿದ್ದನ್ನು ಕಟಗೇರಿ ಶಾಸನ ತಿಳಿಸುತ್ತದೆ. ಕಟಗೇರಿಯ ಇನ್ನೊಂದು ಶಾಸನದಲ್ಲಿ ಮಹಾಪ್ರಧಾನ ತೇಜಮಯ್ಯ ದಂಡನಾಯಕನು ದಾನ ನೀಡಿದ್ದನ್ನು ತಿಳಿಸುತ್ತದೆ. ಸೋವಿದೇವರಸನ ಮಹಾಮಂಡಳೇಶ್ವರ ಸಿಂಗಿದೇವರಸನು ಕಡಲೆವಾಡದ ದೇವರಿಗೆ ದಾನ ನೀಡಿದ ವಿಷಯವನ್ನು ಕಡಲೆವಾಡದ ಶಿವಾಯಲದ ಮುಂದಿರುವ ೧೧೭೪ರ ಶಾಸನ ತಿಳಿಸುವುದು.

ಸೇವುಣರು ಈ ಜಿಲ್ಲೆಯ ಪ್ರದೇಶವನ್ನು ಆಳಿದ್ದನ್ನು ಕಂದಗಲ್ಲಿನ ೧೨೦೭ರ ಶಾಸನ ಹಾಗೂ ಜಮಖಂಡಿಯ ೧೨೧೦ರ ಶಾಸನ ತಿಳಿಸುತ್ತವೆ. ಸೇವುಣ ಮನೆತನದ ಬಿಲ್ಲಮ, ಜೈತುಗಿ, ಮೈಲುಗಿಗಳು, ವಿಶೇಷ ವ್ಯಕ್ತಿಗಳು. ಇವರು ಕಲಚೂರಿಗಳ ೪ನೇ ಸೋಮೇಶ್ವರನ ಕಾಲದಲ್ಲಿ ತಾವು ಸ್ವತಂತ್ರರೆಂದು ಘೋಷಿಸಿಕೊಂಡರು. ಇವರ ಬಗ್ಗೆ ಚಾರಿತ್ರಿಕ ಮಾಹಿತಿಯನ್ನು ಇವರ ಆಸ್ಥಾನದಲ್ಲಿದ್ದ ಹೇಮಾದ್ರಿ ಪಂಡಿತನ 'ಚಾತುರ್ವರ್ಗ ಚಿಂತಾಮಣಿ' ಹಾಗೂ ಶಾಸನಗಳಿಂದ ತಿಳಿಯುತ್ತೇವೆ.

ಭಿಲ್ಲಮನು ಆರಂಭದಲ್ಲಿ ಹೊಯ್ಸಳರ ಬಲ್ಲಾಳನನ್ನು ಸೋಲಿಸಿ ಕಲ್ಯಾಣದಿಂದ ಓಡಿಸಿದನು. ಆದರೆ ಅದೇ ಬಲ್ಲಾಳನು ೧೧೯೧ರಲ್ಲಿ ಭಿಲ್ಲಮನನ್ನು ಸೊರಟೂರಿನಲ್ಲಿ ಸೋಲಿಸಿದನು. ಇದರಿಂದ ಸೇವುಣರು ಕಲ್ಯಾಣದ ಆಸೆಯನ್ನು ಬಿಟ್ಟು ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಇವರು ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ ಹೊಂದಿರುವುದು ಕೆಲವು ಶಾಸನಗಳಿಂದ ತಿಳಿಯುತ್ತದೆ. ಮಂಕಣಿಯ ೧೨೦೬ರ ಶಾಸನದಲ್ಲಿ ಕೇಶವನೆಂಬುವನು ಮಂಕಣಿಯಲ್ಲಿ 'ಭಾಸ್ಕರ ದೇವನ', ತ್ರಿಕೂಟವನ್ನು ನಿರ್ಮಿಸಿದ ಎಂಬುದು ತಿಳಿದುಬರುತ್ತದೆ. ಕಂದಗಲ್ಲಿನ ೧೨೦೭ರ ಶಾಸನದಲ್ಲಿ ಕಂದಗಾಲೆಯ ತೆಲ್ಲಿಗರು ತೆಲ್ಲಿಗೇಶ್ವರ ದೇವಸ್ಥಾನ ಕಟ್ಟಿಸಿ, ಅದಕ್ಕೆ ಐವತ್ತು ಮತ್ತರು ಭೂಮಿ ಬಿಟ್ಟಿದ್ದು ಹಾಗೂ ಐಯ್ಯಾ ಹೊಳೆ-೫೦೦ ಸ್ವಾಮಿಗಳು ದಾನ ಬಿಟ್ಟಿದ್ದು ತಿಳಿಯುತ್ತದೆ. ಶಿರೂರಿನ ೧೨೪೯ರ ಶಾಸನ ಅಲ್ಲಿಯ ಹರಳಗಾವುಂಡನ ಮಡದಿಯರು ಮೂಲಸ್ಥಾನ ದೇವರಿಗೆ ದಾನ ಬಿಟ್ಟ ವಿಷಯ ತಿಳಿಸುವುದು. ಕಡಲೆವಾಡ ಮುತ್ತಗಿ ಮುಂತಾದ ಸ್ಥಳಗಳು ಧಾರ್ಮಿಕ ಮಹತ್ವವನ್ನು ಸೇವುಣರ ಕಾಲದಲ್ಲಿ ಪಡೆದಿದ್ದವು.

ವಿಜಯನಗರದ ಅರಸರು ಈ ಜಿಲ್ಲೆಯ ಪ್ರದೇಶವನ್ನು ಆಳಿದುದನ್ನು ಬಾದಾಮಿಯ ನಾಲ್ಕಾರು ಶಾಸನಗಳಿಂದ ತಿಳಿಯುತ್ತೇವೆ. ಸಂಗಮ ವಂಶದ ಒಂದನೆಯ ಹರಿಹರನ ದಂಡನಾಯಕ, ಚಾಮೆಯ ನಾಯಕನು ೧೩೪೦ರ ಶಾಸನದ ಪ್ರಕಾರ ಬಾದಾಮಿಯಲ್ಲಿ ಕೋಟೆಯನ್ನು ಕಟ್ಟಿಸಿದ್ದು, ಅಲ್ಲದೇ ಚಾಮೆಯ ನಾಯಕನು ಬಾದಾಮಿ ಹಾಗೂ ಮುಂಡಗನೂರು ಗ್ರಾಮಗಳನ್ನು ಬಾದಾಮಿ

ಎರಡು ಸಾವಿರ ಮಹಾಜನರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಹಾಳಾಗುತ್ತಿದ್ದ ಬಾದಾಮಿಯ ಕೋಟೆಗಳನ್ನು ದೇವಾಲಯಗಳನ್ನು ಮಂತ್ರಿ ಚಿನ್ನಪ್ಪನಾಯಕ ತನ್ನ ಮಗ ಚಿಕ್ಕ ಚಿನ್ನಪ್ಪನ ಮೂಲಕ ಜೀರ್ಣೋದ್ಧಾರ ಮಾಡಿಸಿದ್ದನ್ನು ೧೫೩೨ರ ಬನಶಂಕರಿ ಶಾಸನ ತಿಳಿಸುವುದು. ಗುಹೆಗಳ ಪಕ್ಕದಲ್ಲಿ ಕೊಂಡರಾಜ, ಮಾಲೆಗಿತ್ತಿ ಶಿವಾಲಯದ ಎದುರಲ್ಲಿ ಹಡಪದ ಎರೆ ಕೃಷ್ಣಪ್ಪ ನಾಯಕನು ಕೋಟೆ-ಕೊತ್ತಲಗಳನ್ನು ಕಟ್ಟಿಸಿದುದನ್ನು ಶಾಸನಗಳು ತಿಳಿಸುತ್ತವೆ. ಬನಶಂಕರಿ ದೇವಾಲಯಕ್ಕೆ ಥಾಣಕಶಿರೂರ ಗ್ರಾಮವನ್ನು ಕೃಷ್ಣಪ್ಪನಾಯಕ ದಾನ ಮಾಡಿದ ವಿಷಯವು ೧೫೪೨ ಶಾಸನದಿಂದ ತಿಳಿದುಬರುತ್ತದೆ. ಸದಾಶಿವರಾಯನ ಕಾಲಕ್ಕೆ ಸೇರಿದ ಮೂರು ದತ್ತಿ ಶಾಸನಗಳು 'ಹೆಬ್ಬಳ್ಳಿ', 'ಕರಡಿ'ಯಲ್ಲಿ ದೊರೆತಿವೆ. ೧೬ನೆಯ ಶತಮಾನದ ಎರಡು ತೆಲುಗು ಶಾಸನಗಳು ಬಾದಾಮಿಯ ಮೂರನೇ ಗುಹೆಯಲ್ಲಿವೆ. ಅವು ಹರಿಲರಡ ವೆಂಕಟಯ್ಯನು ಹನ್ನೆರಡು ಆಳ್ವಾರರ ಮೂರ್ತಿ ಸ್ಥಾಪಿಸಿದ್ದು, ಹಾಗೂ ಜೆಂತಿಕುಪ್ಪ ರಂಗಯ್ಯ ರುಕ್ಮಿಣಿ ಸತ್ಯಭಾಮೆಯರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿರುವುದನ್ನು ತಿಳಿಸುತ್ತವೆ.

ಬಾಗಲಕೋಟೆ ಜಿಲ್ಲೆಯ ಕೆಲವು ಪ್ರದೇಶಗಳು ಸುಲ್ತಾನರ ಆಳ್ವಿಕೆಗೆ ಒಳಪಟ್ಟಿದ್ದವು. ಈ ಪ್ರದೇಶಗಳ ಮೇಲೆ ಹಿಡಿತ ಸಾಧಿಸುವ ಸಲುವಾಗಿಯೆ ವಿಜಯನಗರ ಅರಸರಿಗೆ ಮತ್ತು ಬಿಜಾಪುರದ ಬಹಮನಿ ದೊರೆಗಳ ನಡುವೆ ರಕ್ಕಸ-ತಂಗಡಿಗಿ ಯುದ್ಧಗಳು ಸಂಭವಿಸಿದವು. ೧೫೬೫ರ ರಕ್ಕಸ-ತಂಗಡಿಗಿ ಕದನದ ನಂತರ ಬಾದಾಮಿ ಪ್ರದೇಶವು ಆದಿಲಶಾಹಿಗಳ ಒಡೆತನಕ್ಕೆ ಸೇರಿತು. ನಂತರ ಮೊಘಲರು ಮರಾಠರ ಮೇಲೆ ಯುದ್ಧ ಸಾರಿ ಗೆಲುವು ಸಾಧಿಸಿದರು. ಮೊಘಲ್ ದೊರೆ ಬಹಾದ್ದೂರ್ ಷಾ, ತನಗೆ ನೆರವಾದ ಥೂಳಪಿಕರ್ ಖಾನ್‌ನ್ನು ೧೭೦೮ರಲ್ಲಿ ದಖ್ಖನ್ನಿನ ವೈಸರಾಯ್‌ನನ್ನಾಗಿ ಮಾಡಿದನು. ಮನ್‌ಸೂರ್ ಖಾನ್ ಅಂದಿನ ವಿಜಾಪುರ ಸುಬಾದ ಆಡಳಿತ ನಿರ್ವಹಿಸುತ್ತಿದ್ದನು.

ಹೈದ್ರಾಬಾದ ನಿಜಾಮನು (ಅಸಫ್ ಜಾ ಮನೆತನ) ೧೭೨೪ರ ನಂತರ ಸ್ವತಂತ್ರವಾಗಿ ರಾಜ್ಯ ವಾಳುವಾಗ ಬಿಜಾಪುರ ಪ್ರಾಂತವು ಇವನ ಆಧೀನಕ್ಕೆ ಒಳಪಟ್ಟಿತ್ತು. ೧೭೪೪ರ ವರೆಗೆ ಕೃಷ್ಣೆಯ ದಕ್ಷಿಣ ಭಾಗವನ್ನು ಸವಣೂರಿನ ನವಾಬನಿಗೆ ಆಡಳಿತ ನೋಡಿಕೊಳ್ಳಲು ನಿಜಾಮನು ವಹಿಸಿದ್ದನು. ಸುಮಾರು ೧೭೪೬ ಬಾಗಲಕೋಟೆ ಹಾಗೂ ಬಾದಾಮಿ ಪ್ರದೇಶಗಳನ್ನು ಸವಣೂರಿನ ನವಾಬನು ಒಪ್ಪಂದದಂತೆ ಮರಾಠಾ ಪೇಶ್ವೆಗಳಿಗೆ ಒಪ್ಪಿಸಬೇಕಾಯಿತು.

೧೭೬೧ರಲ್ಲಿ ಮರಾಠರು ಪಾಣಿಪತ್ತ ಯುದ್ಧದಲ್ಲಿ ತಮ್ಮ ಪ್ರಾಬಲ್ಯ ಕಳೆದುಕೊಂಡರು. ಇದನ್ನು ಮನಗಂಡ, ಹೈದರಾಲಿಯು ಉತ್ತರದ ಮಲಪ್ರಭಾ ಹಾಗೂ ಘಟಪ್ರಭಾದವರೆಗೆ ತನ್ನ ರಾಜ್ಯ ವ್ಯಾಪಿಸಿದನು. ಆದರೆ ಮರಾಠರು ಮಾಧವರಾವ ಹಾಗೂ ರಘುನಾಥ ರಾಯರ ನಾಯಕತ್ವದಲ್ಲಿ ಹೈದರಅಲಿಯನ್ನು ಉತ್ತರಭಾಗದಿಂದ ಹಿಮ್ಮೆಟ್ಟಿಸಿದರು. ಇದರಿಂದಾಗಿ ೧೭೬೫ರಲ್ಲಿ ಮೈತ್ರಿ ಏರ್ಪಟ್ಟಿತ್ತು ಮಾಧವರಾವನ ಮರಣಾನಂತರ ೧೭೭೬ರಲ್ಲಿ ಹೈದರಾಲಿಯು ಮರಾಠ-ನಿಜಾಮಕೂಟವನ್ನು

ಹಿಮ್ಮೆಟ್ಟಿಸಿ ೧೭೭೮ರಲ್ಲಿ ಗಜೇಂದ್ರಗಡ, ಬಾದಾಮಿ ಹಾಗೂ ಜಾಲಿಹಾಳಗಳನ್ನು ವಶಪಡಿಸಿಕೊಂಡನು. ನಂತರ ಹೈದರಾಲಿಯ ಸಾರ್ವಭೌಮತ್ವ ಒಪ್ಪಿದ ಸವಣೂರಿನ ನವಾಬನಿಗೆ ಬಾಗಲಕೋಟೆಯನ್ನು ಮತ್ತೆ ವಹಿಸಿಕೊಟ್ಟನು. ಮುಂದೆ ಮರಾಠರ ನಾನಾಪಡ್ನವಿಸನು ಬಾದಾಮಿಯನ್ನು ಮುತ್ತಿ ೧೭೮೯ ವಶಪಡಿಸಿಕೊಂಡನು. ೧೭೮೭ರಲ್ಲಿ ಹುನಗುಂದ ಪ್ರದೇಶ ನಿಜಾಮರ ಕೈ ಸೇರಿತು.

ಕೊನೆಯ ಪೇಶ್ವೆ ಬಾಜಿರಾಯನ ಅಧಿಕಾರಾವಧಿಯಲ್ಲಿ (೧೭೯೭–೧೮೧೭) ರಾಸ್ತಿಯ ಕುಟುಂಬದ ಮೇಲಿನ ದ್ವೇಷದಿಂದಾಗಿ ಪೇಶ್ವೆಗಳು ಬಾಗಲಕೋಟೆಯ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡರು. ಆದರೆ ಬಾದಾಮಿ, ಬಾಗಲಕೋಟೆ ಹಾಗೂ ಜಾಲಿಹಾಳಗಳು ರಾಸ್ತಿಯ ಕುಟುಂಬದ ವಶದಲ್ಲಿದ್ದವು. ರಾಸ್ತಿಯ ಮನೆತನದ ಆನಂದರಾವ್ ಭಿಕಾಜಿಯು ೧೮೦೦ರಲ್ಲಿ ಬಾಗಲಕೋಟೆಯಲ್ಲಿ ಅರಮನೆಯೊಂದನ್ನು ನಿರ್ಮಿಸಿದನು. ಅರಮನೆಯ ಅವಶೇಷಗಳು ಇನ್ನೂ ಬಾಗಲಕೋಟೆಯಲ್ಲಿವೆ. ರಾಸ್ತಿಯಾನಿಂದ ೧೮೧೦ರಲ್ಲಿ ಪೇಶ್ವೆಬಾಜಿರಾಯ ಬಾಗಲಕೋಟೆಯನ್ನು ಕಸಿದುಕೊಂಡನು. ೧೮೧೭ರಲ್ಲಿ ಪೇಶ್ವೆ ವಿರುದ್ಧ ಜನರಲ್ ಮನ್ರೋ ಬೃಹತ್ ಸೈನ್ಯದೊಂದಿಗೆ ಬಾದಾಮಿಗೆ ಮುತ್ತಿಗೆ ಹಾಕಿದನು. ಆಗ ಸುಮಾರು ೨೦ ದಿನಗಳಲ್ಲಿ ಬಾದಾಮಿ, ಬಾಗಲಕೋಟೆಗಳು ಮನ್ರೋನ ವಶವಾದವು.

ಕರ್ನಾಟಕದ ವಿವಿಧ ಭಾಗಗಳಲ್ಲಿ ಸ್ಥಾನಿಕ ಮನೆತನಗಳ ಅಧೀನದಲ್ಲಿ ಸಂಸ್ಥಾನಗಳು ರಾಜಕೀಯ ಪ್ರಾಬಲ್ಯತೆಯನ್ನು ಹೊಂದಿದ್ದವು. ಸಂಸ್ಥಾನಗಳು ಆಡಳಿತಕ್ಕೆ ಒಳಪಟ್ಟ ಪ್ರದೇಶಗಳು ಸಾಕಷ್ಟು ಸುಧಾರಣೆಗಳನ್ನು ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ವಿಷಯಗಳಲ್ಲಿ ಕಂಡವು. ಬಾಗಲಕೋಟೆ ಜಿಲ್ಲೆಯ ಮುಧೋಳ ಜಮಖಂಡಿಯಂತಹ ಸಂಸ್ಥಾನಗಳು ಅಭ್ಯುದಯ ಸಾಧಿಸಿದವು. ತೇರದಾಳ, ರಬಕವಿಗಳು, ಸಾಂಗ್ಲಿ ಸಂಸ್ಥಾನಕ್ಕೆ, ಕೆಲವು ಪ್ರದೇಶಗಳು ರಾಮದುರ್ಗ ಸಂಸ್ಥಾನಕ್ಕೆ ಸೇರಿದವು. ಮುಂದೆ ಇವು ಮುಂಬಯಿ ಪ್ರಾಂತ್ಯಕ್ಕೆ ಸೇರಿದವು.

೮. ಸಾಂಸ್ಕೃತಿಕ

ಬಾಗಲಕೋಟೆ ಜಿಲ್ಲೆಯು ಸಮೃದ್ಧ ಹಾಗೂ ಶ್ರೀಮಂತವಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ಸಂಸ್ಕೃತಿ ಎಂಬ ಪರಿಕಲ್ಪನೆಯು ಒಂದು ದೇಶದ ಆಡಳಿತ, ಆರ್ಥಿಕವ್ಯವಸ್ಥೆ, ಸಾಮಾಜಿಕ ಜೀವನ, ಧರ್ಮ, ಸಾಹಿತ್ಯ, ಕಲೆ ಮುಂತಾದ ಅಂಶಗಳನ್ನು ಒಳಗೊಂಡಿದೆ. ಬಾಗಲಕೋಟೆ ಜಿಲ್ಲೆಯ ಸ್ಥಳನಾಮ ಅಧ್ಯಯನ ಮಾಡುವಾಗ ಸಾಂಸ್ಕೃತಿಕ ಹಿನ್ನೆಲೆ ಕೂಡಾ ಅವಶ್ಯ ಎನಿಸಿತು. ಏಕೆಂದರೆ ಸಂಸ್ಕೃತಿಯ ಆಧಾರದ ಮೇಲಿಂದ ಕೆಲವೊಂದು ಸ್ಥಳನಾಮಗಳು ಕರೆಯಲ್ಪಟ್ಟಿರುವುದು ಗಮನಕ್ಕೆ ಬಂದಿತು.

ಸಂಸ್ಕೃತಿ ಎನ್ನುವುದು ಮೂಲತಃ ಮಾನವನ ವ್ಯಕ್ತಿತ್ವಕ್ಕೆ ಸಂಬಂಧಿಸಿದೆ. ಬಡವನೆ ಇರಲಿ, ಶ್ರೀಮಂತನೇ ಇರಲಿ ಅಕ್ಷರಸ್ಥನಿರಲಿ, ನಿರಕ್ಷರಸ್ಥನಾಗಿರಲಿ ಅದು ವ್ಯಕ್ತಿಗತವಾಗಿದ್ದು ಮಾನವನ ನಡೆ

–ನುಡಿ, ಆಚಾರ–ವಿಚಾರಗಳಲ್ಲಿ, ಬದುಕುವ ಕಲೆಯಲ್ಲಿ ಸಂಸ್ಕೃತಿ ಕಂಡುಬರುವದು. ಈ ಜಿಲ್ಲೆಯಲ್ಲಿ ಸಾಂಸ್ಕೃತಿಕ ಕುರುಹುಗಳನ್ನು ಪ್ರಾಗಿತಿಹಾಸ ಕಾಲದಿಂದಲೇ ಕಾಣುತ್ತೇವೆ. ಈ ಜಿಲ್ಲೆಯ ಬಾದಾಮಿಯ ಉತ್ತರಕ್ಕೆ ಸುಮಾರು ೫ ಕಿ.ಮೀ. ಅಂತರದಲ್ಲಿರುವ ನೈಸರ್ಗಿಕ ಶಿಲಾಸೇತುವೆ ಹಾಗೂ ನೈಸರ್ಗಿಕ ಗುಹೆಗಳಿವೆ. ಈ ಸ್ಥಳವನ್ನು 'ಸಿಡಿಲಫಡಿ' ಎನ್ನುವರು. ಇಲ್ಲಿ ಎಮ್ಮೆ, ಕೋಣ, ಗೂಳಿಗಳ ಚಿತ್ರ ಬರೆಯಲಾಗಿದೆ. ದನಗಳ ಕೋಡು, ಮೇಲೆತ್ತಿದ ಬಾಲಗಳನ್ನು ಗಮನಿಸಿದರೆ ಇವು ಒಂದು ಬಗೆಯ ಪ್ರಭೇದಕ್ಕೆ ಸೇರಿದ ದನಗಳೆನ್ನಬಹುದು. ಹಾಗೆಯೇ ಸಣ್ಣ–ದೊಡ್ಡ, ಪಕ್ಷಿ–ಪ್ರಾಣಿ ಹಾವು ಇವುಗಳ ನಡುವೆ ಮಾನವಾಕೃತಿಗಳಿವೆ. ಗುಹೆಯ ಇನ್ನೊಂದು ಬದಿಯಲ್ಲಿ ಕೈಹಿಡಿದು ಕುಣಿಯುವ ಮಾನವರ ರೇಖಾಚಿತ್ರಗಳಿವೆ, ಅಸ್ಪಷ್ಟ ಶಿಲಾಲಿಪಿಗಳಿವೆ. ಆದ್ದರಿಂದ ಇದು ಜನವಸತಿಯ ಸ್ಥಳವಾಗಿರಬೇಕೆಂಬುದು ಸ್ಪಷ್ಟ. ಹಾಗೆಯೇ ಬಾದಾಮಿಯಿಂದ ಸಿಡಿಲಫಡಿಗೆ ಹೋಗುವಾಗ ಮಾರ್ಗ ಮಧ್ಯದಲ್ಲಿ 'ಗೌಡರಫಡಿ' ಎಂಬ ಸ್ಥಳವಿದೆ. ಅಲ್ಲಿ ಕೆಮ್ಮಣ್ಣಿನಿಂದ ಬಲೆಯಚಿತ್ರ ತೆಗೆದಿದ್ದಾರೆ. ಬಲೆಯಲ್ಲಿ ಎರಡು ಜಿಂಕೆಗಳಿದ್ದು ಬಲೆಯ ಹೊರಗೆ ಕೋಣನಂತಹ ಪ್ರಾಣಿಯೊಂದು ನಿಂತಿರುವಂತೆ ಚಿತ್ರಿಸಿದ್ದಾರೆ. ಬಾದಾಮಿಯ ಉತ್ತರ ಬೆಟ್ಟದ ಗವಿಯಲ್ಲಿ ನಾಯಿ, ದನಗಳು, ಮಾನವಾಕೃತಿಗಳನ್ನು ಕಪ್ಪು ರೇಖೆಗಳಿಂದ ಬಿಡಿಸಿ ಒಳಗೆ ಬಿಳಿಬಣ್ಣ ಬಳೆದಿದ್ದಾರೆ. ಬಾದಾಮಿಯ ದಕ್ಷಿಣ ಬೆಟ್ಟದ ಸಾಲಿನಲ್ಲಿ ರಂಗನಾಥ ಗುಡ್ಡದ ಬಂಡೆಗಳ ಮೇಲೆ ಮನುಷ್ಯರ ಪ್ರಾಣಿಗಳ ಗುಂಪಿನ ಚಿತ್ರ ಇವೆ. ಇವುಗಳನ್ನು ಕೆಮ್ಮಣ್ಣಿನಿಂದ ರಚಿಸಲಾಗಿದೆ. ಕುಟುಕನ ಕೆರೆ ಮಹಾಕೂಟದ ಕೊಳ್ಳದ ದೇವಾಲಯದ ಹಿಂಬದಿಯ ಬಂಡೆ ಮೇಲೆ ರೇಖಾ ಚಿತ್ರಗಳಿವೆ. ರಾವಣಫಡಿ ಚಿತ್ರಗಳು, ವಿಷ್ಣುಗುಹೆಯ ಚಿತ್ರಗಳು ಮಾನವನ ಸಂಸ್ಕೃತಿಯ ವಿವಿಧ ಹಂತಗಳನ್ನು ಹೇಳುತ್ತವೆ.

ಶಿಲ್ಪಕಲೆಯು ಈ ಜಿಲ್ಲೆಯಲ್ಲಿ ವಿವಿಧ ದೊರೆಗಳ ಆಳ್ವಿಕೆಯಲ್ಲಿ ಸಮೃದ್ಧವಾಗಿ ಬೆಳೆದು ಬಂದಿದೆ. ಬಾದಾಮಿಯ ಗುಹೆಗಳಲ್ಲಿ ಬೃಹತ್ ಶಿಲಾ ಮೂರ್ತಿಗಳಿವೆ. ಹಾಗೆಯೇ ಮಾಲಗಿತ್ತಿ ಶಿವಾಲಯ, ಮೇಗಣಶಿವಾಲಯ, ಕೋಪ್ಪರಾಯನ ಗುಹೆ, ಭೂತನಾಥ ಗುಡಿಗಳ ಗುಂಪು, ಮಹಾಕೂಟದ ದೇವಾಲಯ ಐಹೊಳೆ, ಪಟ್ಟದಕಲ್ಲಿನ ದೇವಾಲಯಗಳು ಚಾಲುಕ್ಯರ ಕಾಲದಲ್ಲಿ ನಿರ್ಮಿತವಾದರೆ, ಇಂದಿನ ಬಾದಾಮಿಯ ಪುರಾತತ್ವ ವಸ್ತು ಸಂಗ್ರಾಹಾಲಯದ ಆವರಣದಲ್ಲಿರುವ ಪುಟ್ಟ ಏಕಶಿಲಾ ನಿರ್ಮಿತ ಗುಹೆ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾಗಿದೆ. ಎಂಬುದು ವಿದ್ವಾಂಸರ ಅಭಿಪ್ರಾಯ. ಈ ಗುಹೆಯಲ್ಲಿ ಗಣೇಶ ಹಾಗೂ ಮಹಿಷಮರ್ಧಿನಿಯರ ಶಿಲ್ಪಗಳು ಉತ್ಕೃಷ್ಟವಾಗಿವೆ. ಮಹಾಕೂಟದಲ್ಲಿ ರಾಷ್ಟ್ರಕೂಟರ ಕಾಲದ ಅಖಂಡೇಶ್ವರ ದೇವಾಲಯ ನಿರ್ಮಿತವಾಗಿದೆ. ಬಾದಾಮಿಯ ಅಗಸ್ತ್ಯ ತೀರ್ಥದ ಪೂರ್ವಕ್ಕಿರುವ ಬೆಟ್ಟದ ಕಲ್ಲಾಸರೆಯಲ್ಲಿ ಸುಮಾರು ಇಪ್ಪತ್ತು ಶಿಲ್ಪಗಳ ಸಮೂಹ ಇವೆ. ಇವು ವಿಜಯನಗರದ ಅರಸರ ಕಾಲದವು ಎಂದು ತಿಳಿಯಲಾಗಿದೆ. ಇಲ್ಲಿ ಸೂರ್ಯ, ಸರಸ್ವತಿ, ಮಹಾಲಕ್ಷ್ಮಿ ಭೈರವ ಮುಂತಾದ ಮೂರ್ತಿಗಳಿವೆ.

ವಾಸ್ತುಶಿಲ್ಪ

ಐಹೊಳೆಯ ಅಂಬಿಗೇರ ಗುಡಿಯ ಅಧಿಷ್ಠಾನದ ಕೆಳಗೆ, ಹಾಗೂ ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯಗಳ ಅಧಿಷ್ಠಾನದ ಕೆಳಗೆ ಇಟ್ಟಿಗೆಗಳ ಕಟ್ಟಡದ ರಚನೆ ಕಂಡು ಬಂದಿವೆ. ಇವು ಚಾಲುಕ್ಯರ ಪೂರ್ವದ ಶಾತವಾಹನರ ಕಾಲದವು ಎಂದು ನಂಬಲಾಗಿದೆ.

ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಬೇಲೂರು, ಕಟಗೇರಿ, ಐಹೊಳೆ ಮುಂತಾದ ಕಡೆ ದೇವಾಲಯಗಳು ನಿರ್ಮಾಣವಾದವು. ವಿಜಯನಗರ ಅರಸರ ಕಾಲದಲ್ಲಿ ಬಾದಾಮಿಯ ವೆಂಕಟೇಶ್ವರ ದೇವಾಲಯವು ಇಂದು ಊರಿನ ಮಧ್ಯದಲ್ಲಿರುವ ದರ್ಗಾ ಆಗಿದೆ ಎಂದು ಇತಿಹಾಸಜ್ಞರ ಅಭಿಪ್ರಾಯ. ವಿಜಯನಗರದ ಅರಸರ ಕಾಲದಲ್ಲಿ ರಂಗನಾಥ ಗುಡ್ಡದಲ್ಲಿರುವ ಚಿಕ್ಕ ದೇಗುಲ, ಬಾದಾಮಿದುರ್ಗಗಳ ರಚನೆಯಾದವು. ಹಳೆಯ ಬನಶಂಕರಿ ದೇವಾಲಯ ರಾಷ್ಟ್ರಕೂಟರ ಕಾಲಕ್ಕೆ ನಿರ್ಮಾಣವಾಗಿದ್ದು ಇಂದು ನೆಲದಲ್ಲಿ ಅರ್ಧದಷ್ಟು ಹೂತು ಹೋಗಿದೆ, ಈಗಿರುವ ಬನಶಂಕರಿ ದೇಗುಲವನ್ನು ಸಾತಾರೆಯ ಪರಶುರಾಮ ನಾಯಿಕ ಅಗಳೆ ಎಂಬುವವನು ಕ್ರಿ.ಶ. ೧೭೫೦ರಲ್ಲಿ ಕಟ್ಟಿಸಿದನೆಂದು ಹೇಳಲಾಗುತ್ತದೆ. ಬಾದಾಮಿಯ ಕೋಟೆಗಳನ್ನು ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರದ ಅರಸರು, ಹೈದರ್–ಟೀಪುಗಳು ಕಟ್ಟಿಸಿದ್ದಾರೆ. ಇವುಗಳ ರಚನೆ ಬೇರೆ ಬೇರೆಯಾಗಿಯೇ ಇವೆ. ಕೋಟೆ ಎಂಬ ಹೆಸರಿನಿಂದ ಕೋಟೆಕಲ್ಲು, ಬಾಗಿಲಕೋಟೆ, ಹೊಸಕೋಟೆ ಎಂಬ ಸ್ಥಳನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿ ಇವೆ. ಹಾಗಾಗಿ ಈ ಜಿಲ್ಲೆಯ ಸಾಂಸ್ಕೃತಿಕ ಹಿನ್ನೆಲೆಯನ್ನು ಅಧ್ಯಯನ ಮಾಡಲಾಯಿತು. ಸಂಗೀತ ವಾದ್ಯಗಳನ್ನು, ನೃತ್ಯಗಾರರನ್ನು ಬಾದಾಮಿ, ಮಹಾಕೂಟ, ಐಹೊಳೆ ಶಿಲ್ಪಗಳಲ್ಲಿ ಕಾಣುತ್ತವೆ. ಅಂದರೆ ಸಂಗೀತಕ್ಕೆ ಇಲ್ಲಿ ಹೆಚ್ಚಿನ ಮಹತ್ವವಿತ್ತೆಂದು ಕಾಣುತ್ತದೆ.

ಸಂಸ್ಕೃತಿಯ ಇನ್ನೊಂದು ಮುಖ್ಯ ಅಂಶವೆಂದರೆ ಸಾಹಿತ್ಯ. ಈ ಜಿಲ್ಲೆಯಲ್ಲಿ ಹಿಂದಿನಿಂದಲೂ ಸಾಹಿತ್ಯ ಸಮೃದ್ಧವಾಗಿತ್ತು ಎನ್ನಲು ಅನೇಕ ಶಾಸನಾಧಾರಗಳಿವೆ. ಚಾಲುಕ್ಯರ ಕಾಲದಲ್ಲಿ ಐಹೊಳೆಯ ರವಿಕೀರ್ತಿಶಾಸನ, ಬಾದಾಮಿಯ ಕಪ್ಪೆಅರಭಟ್ಟನ ಶಾಸನ, ಮಹಾಕೂಟದ ಶಾಸನಗಳಿವೆ. ಅಲ್ಲದೆ ಚಾಲುಕ್ಯರ ಅರಿಕೇಸರಿ ಆಶ್ರಯಿತ ಪಂಪ–ವಿಕ್ರಮಾರ್ಜುನ ವಿಜಯ ಹಾಗೂ ಆದಿಪುರಾಣಗಳನ್ನು, ಕಲ್ಯಾಣ ಚಾಲುಕ್ಯರ ಆಶ್ರಯ ಪಡೆದ ರನ್ನ–ಗದಾಯುದ್ಧ ಅಜಿತನಾಥ ಪುರಾಣ ಎಂಬ ಕೃತಿಗಳನ್ನು ಬರೆದರು. ವಿಜಯನಗರ ದೊರೆಗಳು ಪೋಷಿತ ಮಗ್ಗೆಯ ಮಾಯಿದೇವ ಐಹೊಳೆಯವನು. ಇವನು 'ಅನುಭವ ಸೂತ್ರ' ಹಾಗೂ 'ವಿಶೇಷಾರ್ಥ ಪ್ರಕಾಶಿಕೆ' ಬರೆದನು. ಗುಳೇದಗುಡ್ಡದ ಮುರಿಗೆ ದೇಶಿಕೇಂದ್ರರು ಹಮ್ಮೀರಕಾವ್ಯ ಎಂಬ ಚಂಪೂಕೃತಿ ಬರೆದರು.

ರಾಜ್ಯಭಾರ

ಈ ಪ್ರದೇಶದಲ್ಲಿ ಹಿಂದೆ "ಸುರಿಗೆಯಲ್ಲಿ ಇರಿದಡೆ, ಸಣ್ಣ ಪುಟ್ಟ ಕಳ್ಳತನ ಮಾಡಿದರೆ, ದೊಡ್ಡಕಳ್ಳತನ ಮಾಡಿದರೆ, ಜಾತಿ ಹಾಳು ಮಾಡಿದರೆ ಮುಂತಾದವಕ್ಕೆ ಇಂತಿಷ್ಟು ಗದ್ಯಾಣವೆಂದು ನಿಗದಿಪಡಿಸಲಾಗಿದೆ."[೬] ಎಂದರೆ ರಾಜ್ಯದ ಆಡಳಿತದ ಬಗ್ಗೆ ತಿಳಿಯುವುದು. ಕೆರೆಗಳ ಸಂರಕ್ಷಣೆಗೆ, ದೇವಾಲಯಗಳಿಗೆ, ವಿದ್ಯಾರ್ಥಿಗಳ ಊಟ ಮತ್ತು ಬಟ್ಟೆಗಾಗಿ ಭೂಮಿ ಮತ್ತು ಮನೆಗಳನ್ನು ಜಯಸಿಂಹನ ಅಕ್ಕ, ಅಕ್ಕಾದೇವಿ ದಾನಬಿಟ್ಟ ವಿಷಯ ಬಾದಾಮಿ ತಾಲೂಕು ಬೇಲೂರಿನ ಹನಮಂತ ದೇವಾಲಯದ ಸಮೀಪದಲ್ಲಿರುವ ಶಾಸನದಲ್ಲಿದೆ.

ಬಾದಾಮಿಯ ಜಂಬುಲಿಂಗ ದೇವಾಲಯದ ಶಾಸನವು ೨೦೦೦ ಸಮಗಾರರಿಗೆ ಕರ(ಸುಂಕ) ವಿನಾಯಿತಿ ಮಾಡಿದುದನ್ನು ದಾಖಲಿಸಿದೆ. ಗಡಿಸುಂಕಾಪುರ (ಹುನ) ಸಾಕ್ಷಿಯಾಗಿದೆ. ಗಾವುಂಡ, ಮಹಾಜನ, ಲೆಕ್ಕಾಧಿಕಾರಿಗಳು ಗ್ರಾಮ ಮಟ್ಟದ ಆಡಳಿತಗಾರರಾಗಿದ್ದರು. ಚಾಲುಕ್ಯರ ಕಾಲದಲ್ಲಿ ವರಾಹ ಚಿತ್ರವಿರುವ ನಾಣ್ಯ ಚಲಾವಣೆಯಲ್ಲಿದ್ದವು. ಸಮುದ್ರವನ್ನು ದಾಟಲು ನೌಕೆಗಳನ್ನು ಸೇತುವೆಯಂತೆ ಮಂಗಳೇಶನು ಬಳಸಿರುವ ಬಗ್ಗೆ ಐಹೊಳೆ (ಹುನ) ಶಾಸನವು ದಾಖಲೆ ಒದಗಿಸುತ್ತದೆ. ಪುಲಕೇಶಿಯು ಪುರಿ ಬಂದರನ್ನು ವಶಪಡಿಸಿಕೊಳ್ಳಲು ಮದ್ದಾನೆಯಂತಹ ಭೀಕರವಾದ ಬೃಹತ್ ನೌಕೆಗಳನ್ನು ಬಳಸಿದ ವಿಷಯ ಐಹೊಳೆಯ ಶಾಸನದಿಂದ ತಿಳಿಯುತ್ತದೆ. 'ಹಡಗಲಿ' (ಹುನ) ಎಂಬ ಸ್ಥಳನಾಮದಿಂದ ಇದು ಸತ್ಯವೆನಿಸುತ್ತದೆ. ವಿಜಯ ಭಟ್ಟರಿಕೆಯ ಶಾಸನದಲ್ಲಿ ಖಜ್ಜನ (ಉಪ್ಪಿನ) ಭೂಮಿಯನ್ನು ದಾನಮಾಡಲಾಗಿದೆ. 'ಖಜ್ಜಿಡೋಣಿ' ಎಂಬ ಸ್ಥಳನಾಮ ತಿಳಿಯಲು ಇದು ಸಹಾಯವಾಗುತ್ತದೆ. ಇಮ್ಮಡಿ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ 'ರೇವಡಿ'ಎಂಬಾತನು ತೆರಿಗೆಗೆ ಸಂಬಂಧಿಸಿದ ಅಧಿಕಾರಿಯಾದದ್ದು ಐಹೊಳೆಯ ದುರ್ಗಗುಡಿ ಶಾಸನದಿಂದ ತಿಳಿದುಬರುವುದು. 'ರೇವಡಿಹಾಳ' (ಹುನ) ಎಂಬ ಗ್ರಾಮನಾಮದ ನಿಷ್ಪತ್ತಿ ತಿಳಿಯಲು ಇದು ಸಹಾಯಕವಾಗುವುದು.

ಸಾಮಾಜಿಕ

ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳಿದ್ದವು. ಅಯ್ಯಾವೊಳೆ ೫೦೦ ಸ್ವಾಮಿಗಳಾದ ನಾನಾದೇಶದ ಗವರೆ, ಗಾತ್ರಿಗರು, ಸೆಟ್ಟಿಯರು, ಸೆಟ್ಟಿಗುತ್ತರು...... ಗೊಂಕ ಜಿನಾಲಯಕ್ಕೆ ದಾನ ಬಿಟ್ಟರು ಎಂದು ತೇರದಾಳ(ಜಮ)ದ ನೇಮಿನಾಥ ಬಸದಿಯ ಮಂಟಪದ ಹೊರಗೋಡೆಗೆ ಸೇರಿಸಿರುವ ಕಲ್ಲಿನ ಮೇಲೆ ಶಾಸನ ಬರೆಯಲಾಗಿದೆ ಇಲ್ಲಿ ಅಯ್ಯವೊಳೆ ೫೦೦ ಎಂದರೆ ವ್ಯಾಪಾರಿಗಳು (ವೈಶ್ಯರು) ಎಂದರ್ಥ, ಸಮಾಜದಲ್ಲಿ ಸ್ತ್ರೀಯರಿಗೆ ಗೌರವವಿತ್ತು ಅದಕ್ಕಾಗಿ ಅವರು ಮುಂದುವರಿದು ದಾನಧರ್ಮ, ಮಾಡಿದುದು ಪಟ್ಟಣಗಳನ್ನು ನಿರ್ಮಿಸಿದುದು ತಿಳಿದು ಬರುವುದು. 'ಅರಸಿಬೀದಿ' ಅರಸಿಕಟ್ಟಿದುದು. ಇದನ್ನು ಅಕ್ಕಾದೇವಿ ಎಂಬರಾಣಿ ಕಟ್ಟಿಸಿದಳು 'ಸೂಳೆ

ಗೋಯಿಂದ ಪೊಡ್ಡಿಯ ಮಗಳು ಬಾದಿಪೊಡಿ ಎಂಬುವಳು ಗೋಸಾಸ, ಅಶ್ವರಥ, ಹಸ್ತಿರಥ, ಭೂಮಿ ಮತ್ತು ಉಭಯ ಮುಖಿ ದಾನವನ್ನು ನೀಡಿದಂತೆ' ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಉತ್ತರ ದಿಕ್ಕಿನ ಮಂಟಪದ ಎಡಗಡೆಯ ಕಂಬದ ಮೇಲೆ ಶಾಸನ ಬರೆಯಲಾಗಿದೆ. ಬಾದಿಪೊಡ್ಡಿ ಒಬ್ಬ ಸೂಳೆ ಎಂಬುದನ್ನು ಗಮನಿಸಬೇಕು. ವೇಶ್ಯೆಯರಿಗೂ ಗೌರವದ ಸ್ಥಾನ ಅಂದು ಇರುವುದು ತಿಳಿಯುತ್ತದೆ. ಸೂಳೆಕೇರಿ(ಬಾದಾ), ಸೂಳಿಭಾವಿ(ಹುನ)ಗಳು ಇವರಿಂದ ಬಂದ ಸ್ಥಳನಾಮಗಳು.

ಕ್ರೀಡಾ

ಮಾಲೆಗಿತ್ತಿ ಶಿವಾಲಯ(ಬಾದಾ)ದ ಹೊರಭಿತ್ತಿಯಲ್ಲಿ ಹಾವಾಡಿಗನ ಶಿಲ್ಪವಿದೆ. ಹಾವು ಬಿದಿರಿನ ಬುಟ್ಟಿಯಿಂದ ಹೊರಬಂದಿರುವ ಈ ದೃಶ್ಯ ಇಂದಿನ ಹಾವಾಡಿಗರ ಆಟವನ್ನು ನೆನಪಿಸುತ್ತದೆ. ಬಾದಾಮಿಯ ಎರಡನೆಯ ಗುಹೆಯಲ್ಲಿ ಹಾವುಗಳೊಂದಿಗೆ ಆಟಆಡುವ ಗಣರಿದ್ದಾರೆ. ನಾಗನಾಥನ (ಬಾದಾ) ಗುಡಿಯ ತೊಲೆಯ ಮೇಲೆ ಹಾವಾಡಿಗನೊಬ್ಬನ ಶಿಲ್ಪ ಇದೆ. ಈ ಶಿಲ್ಪಗಳನ್ನು ಅವಲೋಕಿಸಿದಾಗ ಅಂದು ನಾಗರು, ನಾಗರ ಹಾವು ಆಡಿಸುವವರು ಇದ್ದರೆಂದು ತಿಳಿಯುವುದು. 'ನಾಗರಾಳ' 'ನಾಗನೂರು' 'ನಾಗೂರು' ಎಂಬ ಸ್ಥಳನಾಮಗಳೂ ಇವೆ. ಈ ಸ್ಥಳನಾಮ ನಿಷ್ಪತ್ತಿ ತಿಳಿಯಲು ಈ ಶಿಲ್ಪಗಳು ಸಹಾಯವಾಗುತ್ತವೆ. ನಾಗಾರಾಧನೆ ಈ ಪ್ರದೇಶದಲ್ಲಿ ಇದ್ದಿತೆಂದು ಹೇಳಲು ಅನೇಕ ಶಿಲ್ಪ ಆಧಾರಗಳಿವೆ. ಬಾದಾಮಿಯ ಶೈವ ಗುಹೆಗಳಲ್ಲಿ, ವಿಷ್ಣುಗುಹೆಯಲ್ಲಿ ಐದು ಹೆಡೆಯುಳ್ಳ ನಾಗ, ಭೂವರಾಹ ಶಿಲ್ಪಗಳಲ್ಲಿ ನಾಗದಂಪತಿಗಳು ಚಿತ್ರಿತರಾಗಿದ್ದಾರೆ. ಚಾಲುಕ್ಯ ದೇವಾಲಯಗಳ ಬಾಗಿಲುವಾಡಗಳಲ್ಲಿ ನಾಗಪ್ರತಿಮೆ ಸಾಮಾನ್ಯವಾಗಿವೆ ರಾಷ್ಟ್ರಕೂಟರ ಕಾಲದ ಅಗಸ್ತ್ಯ ತೀರ್ಥದ ಪೂರ್ವದಂಡೆಯ ಮೇಲಿನ ಅನಂತಶಯನ ಶಿಲ್ಪ ಕೆತ್ತನೆಗೊಂಡಿದೆ. ಇದರಿಂದ ನಾಗಾರಾಧನೆಯು ಜನಪದದಲ್ಲಿ ಪ್ರಚಲಿತದಲ್ಲಿರಬೇಕು ಎನಿಸುತ್ತದೆ.

ಪಟ್ಟದಕಲ್ಲಿನ 'ವಿರೂಪಾಕ್ಷ ಗುಡಿ'ಯ ನಂದಿಮಂಟಪ ದಕ್ಷಿಣ ಭಾಗದ ಕಂಬದ ಶಿಲ್ಪದಲ್ಲಿ ಸ್ತ್ರೀಯು ಅಂಗೈಯಲ್ಲಿ ಹಿಡಿದ ಗಿಳಿಗೆ ಹಣ್ಣು ನೀಡಿದ್ದಾಳೆ. ಅದೇ ಮಂಟಪದ ಇನ್ನೊಂದು ಕಂಬದ ಮೇಲೆ ಪಕ್ಷಿಗೆ ಹಣ್ಣು ತ್ತಿನ್ನಿಸುವ ಶಿಲ್ಪಇದೆ. ಇಲ್ಲಿ 'ಶುಕನಾದಗಿ' ಸ್ಥಳನಾಮ ನೆನಪಿಗೆ ಬರುವುದು.

'ಮಹಾಕೂಟೇಶ್ವರ' ಗುಡಿಯ ದಕ್ಷಿಣ ಗೋಡೆಯ ವಾಯವ್ಯ ಮೂಲೆಯಲ್ಲಿ ಚಲುವೆಯೊಬ್ಬಳು ನಾಯಿಯೊಂದಿಗೆ ವಿಹಾರಹೊರಟಿರುವ ದೃಶ್ಯ ಕೆತ್ತನೆಗೊಂಡಿದೆ. ಮಹಾಕೂಟದ 'ಮಹಾಲಿಂಗ'ನ ಗುಡಿಯ ಹಿಂಬಾಗದಲ್ಲಿ ಇಂಥ ಇನ್ನೊಂದು ಶಿಲ್ಪ ಇದೆ. ಈ ದೃಶ್ಯಗಳು 'ಸುನಗ' ಎಂಬ ಸ್ಥಳನಾಮಗಳ ನಿಷ್ಪತ್ತಿಗೆ ಹಿನ್ನೆಲೆ ಒದಗಿಸುತ್ತವೆ.

ಧಾರ್ಮಿಕ

ಧರ್ಮವು ಸಂಸ್ಕೃತಿಯ ಜೀವಾಳ ಎನಿಸಿದೆ. ಈ ಜಿಲ್ಲೆಯಲ್ಲಿ ಬೌದ್ಧ ಶಿಲ್ಪ ಒಂದೇ ಒಂದು. ಬಾದಾಮಿಯ ೨ ಹಾಗೂ ೩ನೆಯ ಗುಹೆಯ ನಡುವೆ ಒಂದು ನೈಸರ್ಗಿಕ ಗುಹೆ ಇದೆ. 'ಅಲ್ಲಿ ಬೋಧಿಸತ್ವ ಪದ್ಮ ಪಾಣಿ' ಎಂದು ಗುರುತಿಸಲಾಗಿದೆ. ಬೌದ್ಧ ಸಂಪ್ರದಾಯಕ್ಕೆ ಸಂಬಂಧಿಸಿದ ವಾಸ್ತುರಚನೆ ಐಹೊಳೆಯಲ್ಲಿದೆ. ಈ ಚೈತ್ಯವು ಭಾಗಶಃ ಕೊರೆದು ಭಾಗಶಃ ಕಟ್ಟಿದ್ದಾರೆ. ಎರಡು ಅಂತಸ್ತನ್ನು ಹೊಂದಿದೆ. ಇದರ ಗರ್ಭಗೃಹದ ಬಾಗಿಲು ಎದುರಿಗೆ 'ವ್ಯಾಖ್ಯಾನ ಮುದ್ರೆಯ' ಬುದ್ಧನ ಸುಂದರ ಉಬ್ಬು ಶಿಲ್ಪವಿದೆ. ಕೆಳ ಅಂತಸ್ತಿನ ಬಾಗಿಲುವಾಡದಲ್ಲಿ ಬುದ್ಧನ ಜೀವನ ಘಟನೆ ಮತ್ತು ಜಾತಕ ಕತೆಗಳ ಸನ್ನಿವೇಶಗಳಿವೆ.

ಈ ಪ್ರದೇಶದಲ್ಲಿ ವೈಷ್ಣವಧರ್ಮ ಉತ್ಕೃಷ್ಟ ಸ್ಥಿತಿಯಲ್ಲಿತ್ತು ಎನ್ನುವುದಕ್ಕೆ ಮಹಾಕೂಟ ಸ್ತಂಭಶಾಸನದಲ್ಲಿ ಮೊದಲನೆಯ ಪುಲಕೇಶಿಯು ಹಾಗೂ ಕೀರ್ತಿವರ್ಮರು ಅಗ್ನಿಷ್ಟೋಮ, ಅಗ್ನಿಚಯನ, ವಾಜಪೇಯ, ಸುವರ್ಣ, ಪೌಂಡರಿಕ ಯಜ್ಞಗಳನ್ನು ಮಾಡಿದುದನ್ನು ಹೇಳಲಾಗಿದೆ. ಹಾಗೂ ಮಂಗಲೀಶನು 'ನಾರಾಯಣಬಲಿ'ಯನ್ನು ನೆರವೇರಿಸಿ ಆ ಸಂದರ್ಭದಲ್ಲಿ ಉಪಕಾರಾರ್ಥ ಹದಿನಾರು ಬ್ರಾಹ್ಮಣರ ಸತ್ಯಕ್ಕಾಗಿ ಮತ್ತು ಪಾರಿವ್ರಾಜಕರ ಭೋಜನಕ್ಕಾಗಿ ಬಾದಾಮಿ ಪಕ್ಕದ ನಂದಿಕೇಶ್ವರ ಗ್ರಾಮದಾನ ಮಾಡಿದನು ಎಂದಿದೆ. ಮಹಾಕೂಟದ ದ್ವಿಬಾಹು ನರಸಿಂಹ ಶಿಲ್ಪವು ಆದಿಕದಂಬರ ಕಾಲದ್ದೆಂದು ಡಾ. ಅ.ಸುಂದರ ಅವರು ಗುರುತಿಸಿದ್ದಾರೆ. ಚಾಲುಕ್ಯರು ವಿಷ್ಣುವಿನ ಅವತಾರವಾದ ವರಾಹವನ್ನು ಲಾಂಛನವಾಗಿ ಸ್ವೀಕರಿಸಿದ್ದಾರೆ. ಮಂಗಳೇಶನು ಮಹಾವಿಷ್ಣುವಿನ ಗುಹೆ ಕೊರೆಯಿಸಿದನು. ಬಾದಾಮಿಯ ಮೇಗಣ ಶಿವಾಲಯದ ಹೊರಗೋಡೆ ಮೇಲೆ ಗೋವರ್ಧನ ಗಿರಿಧಾರಿ, ಕಾಳಿಯ ಮರ್ಧನ, ನರಸಿಂಹ ಶಿಲ್ಪ, ಶ್ರೀಕೃಷ್ಣಚರಿತದ ಸನ್ನಿವೇಶಗಳನ್ನು ಕೆತ್ತಿದ್ದಾರೆ.

ಮಹಾಕೂಟವು ಶೈವರ ಕೇಂದ್ರವಾಗಿದೆ. ಬಾದಾಮಿಯ ಒಂದು ಮತ್ತು ಎರಡನೆಯ ಗುಹೆಗಳು ಶೈವಧರ್ಮದವಾಗಿವೆ. ಇಲ್ಲಿ ಏಕಶಿಲಾಲಿಂಗ, ನಟರಾಜ, ಅರ್ಧನಾರೀಶ್ವರ, ಮಹೀಷಮರ್ಧಿನಿ ಗಣಪತಿ, ಕಾರ್ತಿಕೇಯರ ಶಿಲ್ಪಗಳು ಇವೆ. ಐಹೊಳೆಯ ರಾವಣಪಥಿಯ ಗುಹಾಲಯದಲ್ಲಿ ಶಿವಲಿಂಗವಿದೆ. ನಟರಾಜ, ಪಾರ್ವತಿ, ಗಣೇಶ ಇದ್ದಾರೆ. ಗೋಡೆ ಮೇಲೆ ಗಂಗಾಧರ, ಅರ್ಧನಾರೀಶ್ವರ ಮುಂತಾದ ಶಿಲ್ಪಗಳಿವೆ. ಮಂಗಳೇಶನು ವೈಷ್ಣವ ಧರ್ಮಾವಲಂಬಿಯಾದರೂ "ಕಲತ್ತೂರಿ ಅರಸರಿಂದ ವಶಪಡಿಸಿಕೊಂಡ ಯುದ್ದ ಸಂಪತ್ತನ್ನು ಮತ್ತು ಶ್ರೀಯಂಬಾಟಕ(ಸಿರಬಡಗಿ), ವ್ರೀಹಿ ಮುಖಗ್ರಾಮ (ನೆಲುವಿಗಿ), ಕಿಸುವೊಳಲ್(ಪಟ್ಟದಕಲ್ಲು), ಕೆಂದೂರುಮಾನ್ಯ(ಕೆಂದೂರು), ನಂದಿಗ್ರಾಮ(ನಂದಿಕೇಶ್ವರ), ಆರ್ಯಪುರ(ಐಹೊಳೆ), ಮೊದಲಾದ ಹತ್ತು ಊರುಗಳನ್ನು ಮಕುಟೇಶ್ವರನಾಥ ದೇವಾಲಯಕ್ಕೆ ತನ್ನ ಮಲತಾಯಿಯ ಅನುಮತಿಯ ಮೇರೆಗೆ ದತ್ತಿಯಾಗಿ ನೀಡಿದ್ದಾನೆ. ಪರಮ ಭಾಗವತನೆಂದು

ಹೊಗಳಲ್ಪಟ್ಟ ಮಂಗಲೇಶನ ಈ ಶಿವಭಕ್ತಿ ವಿಶಿಷ್ಟವಾದುದಾಗಿದೆ”[೫] ಇಮ್ಮಡಿ ವಿಕ್ರಮಾದಿತ್ಯನ ಅರಸಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ ಮಹಾದೇವಿಯರು ಲೋಕೇಶ್ವರ ಹಾಗೂ ತ್ರೈಲೋಕೇಶ್ವರ ದೇವಾಲಯ ನಿರ್ಮಿಸಿದರು. ಜೈನಧರ್ಮಕ್ಕೂ ಬಾದಮಿ ಚಾಲುಕ್ಯರು ಆಶ್ರಯ ನೀಡಿದ್ದರೆಂಬುದಕ್ಕೆ ಜೈನಗುಹೆಯು ನಿದರ್ಶನವಾಗಿದೆ. ರಾಣಿಅಕ್ಕಾದೇವಿ ಕಿಸುಕಾಡನ್ನು ಆಳುತ್ತಿದ್ದಾಗ ಜಿನಾಲಯಕ್ಕೆ ಭೂದಾನ ಹಾಗೂ ಸುಂಕದಾನ ಮಾಡಿದ್ದನ್ನು ಅರಸಿಬೀದಿಯ ಸೂಳಿಗುಡಿ ಶಾಸನ ತಿಳಿಸುತ್ತದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಸರ್ವಧರ್ಮಕ್ಕೂ ಆಶ್ರಯವನ್ನು ಈ ಜಿಲ್ಲೆಯು ಆಶ್ರಯ ನೀಡಿರುವುದು ತಿಳಿದುಬರುವುದು.

ಒಟ್ಟಾರೆ ಪ್ರಾಚೀನ ಕಾಲದಿಂದಲೂ ಬಾಗಲಕೋಟೆ ಜಿಲ್ಲೆಯಲ್ಲಿ ಸಾಹಿತ್ಯ, ಆಡಳಿತ, ಧರ್ಮ, ಕಲೆ ಸಂಗೀತ ಮುಂತಾದ ಸಾಂಸ್ಕೃತಿಕ ಅಂಶಗಳು ಮಾನವನ ಜೊತೆ–ಜೊತೆಯಾಗಿ ಹುಟ್ಟಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಈ ಸಾಂಸ್ಕೃತಿಕ ಅಂಶಗಳನ್ನು ಅಧ್ಯಯನ ಮಾಡುವುದರಿಂದ ಸ್ಥಳನಾಮಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುತ್ತದೆ.

ಈ ವರ್ಗೀಕರಣದಲ್ಲಿ ಸ್ಥಳನಾಮಗಳ ಪುನರುಕ್ತಿಯಾಗಬಹುದು. ಆದರೆ ಆಯಾ ಗುಂಪಿನಿಂದ ಅವನ್ನು ಅಭ್ಯಾಸಮಾಡಬೇಕಾದುದರಿಂದ ಇಂತಹ ವಿಭಾಗಕ್ರಮ ಅನಿವಾರ್ಯವೆಂದು ಹೇಳಬಹುದು.

ಆ. ಸ್ಥಳನಾಮಗಳ ವರ್ಗೀಕರಣ

ಸ್ಥಳನಾಮಗಳ ವರ್ಗೀಕರಣಕ್ಕೆ ಸಾಮಾನ್ಯ ನಿಯಮವನ್ನು ಹೇಳಲು ಆಗುವದಿಲ್ಲ. ಏಕೆಂದರೆ ದೇಶದಿಂದ ದೇಶಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಸಾಂಸ್ಕೃತಿಕವಾದ ವ್ಯತ್ಯಾಸಗಳು ಕಂಡುಬರುತ್ತವೆ. ಏನಿದ್ದರೂ ಆಯಾ ಪ್ರದೇಶದ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಪರಿಸರವನ್ನು ಗಮನಿಸಿಕೊಂಡು ಸ್ಥಳನಾಮ ವರ್ಗೀಕರಣ ಮಾಡಲಾಗುವುದು. ಪ್ರಸ್ತುತ ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

ಸ್ಥಳನಾಮಗಳ ವರ್ಗೀಕರಣ

೧. ಪ್ರಾಕೃತಿಕ

ಜಲವಾಚಿ

↓

ಶಿಲಾವಾಚಿ

↓

ಭೂಸ್ವರೂಪವಾಚಿ(ಎತ್ತರ, ತಗ್ಗು, ಬಯಲು)

↓

ದಿಗ್ವಾಚಕ

↓

ಸಸ್ಯ (ಗಿಡ, ಮರ, ಹೂ, ಬಳ್ಳಿ, ಅರಣ್ಯ)

↓

ಪ್ರಾಣಿ, ಪಕ್ಷಿ

↓

ಭೌತ ವಸ್ತು (ಲೋಹ ಸಂಪತ್ತು, ಕಬ್ಬಿಣ

↓

ಮಣ್ಣು, ಉಪ್ಪು)

↓

ವರ್ಣ

↓

ಕ್ಷೇತ್ರ ವಾಚಕ

೨. ಸಾಂಸ್ಕೃತಿಕ

ವ್ಯಕ್ತಿ

↓

ದೈವ

↓

ಜನಾಂಗ, ವೃತ್ತಿ, ಜಾತಿ

↓

ನಿರ್ಮಾಣ (ಪಟ್ಟಣ, ಬೀದಿ, ಪೇಟೆ)

↓

ವಾಣಿಜ್ಯ, (ಅಂಕಿ, ಸಂಖ್ಯೆ)

↓

ಶುಭ ಸೂಚಕ (ಕಲ್ಯಾಣ, ಮಂಗಳ, ಆನಂದ)

↓

ವಸ್ತುವಾಚಕ

↓

ಪ್ರಮಾಣ ವಾಚಕ

↓

ದೇಹದ ಅಂಗಾಂಗ

೩. ನಿರ್ವಸತಿವಾಚಕ ಸ್ಥಳನಾಮಗಳು

↓

ಏರಿ

↓

ಕಟ್ಟೆ/ಕಟ್ಟಿ

↓

ಕಲಿ/ಗಲಿ

↓

ಕಲ್ಲು/ಗಲ್ಲು

↓

ಕಿಂಡಿ/ಖಂಡಿ/ಗಂಡಿ

↓

↓

ಕುಂಟೆ/ಕುಂಟಿ

↓

ಕುಂದ/ಗುಂದ/ಗುಂದಿ/ಗೊಂದಿ

↓

ಕೆರೆ/ಕೆರಿ

೪. ವಸತಿವಾಚಕ ಸ್ಥಳನಾಮಗಳು

↓

ಊರು

↓

ಕೇರಿ/ಗೇರಿ

↓

ಕೊಪ್ಪ/ಗುಪ್ಪಿ/ಗೊಪ

↓

ಕೋಟೆ ಕೋಟಿ

↓

ಗಡ

↓

↓

ಗಾವ/ಗಾವಿ

↓

ದಾಳ

↓

ಪಟ್ಟಿ>ಹಟ್ಟಿ/ಮೆಟ್ಟಿ/ಮಟ್ಟಿ/ವಟ್ಟಿ

↓

ಕೋಡ/ಖೋಡ/ಗೋಡ/ಗೋಡಿ

↓

ಗಟ್ಟೆ/ಗಟ್ಟ

↓

ಗಣಿ

↓

ಗಿರಿ

↓

ಗುಡ್ಡ

↓

ಗುಂಡಿ

↓

ಗುತ್ತಿ

↓

ಡೋಣ/ದೋಣ

↓

ನಾಳ

↓

ಬಾವಿ

↓

ಮರಿ

↓

ವಾರಿ

↓

ಸಾಗರ/ಹೊಳೆ/ಹೊಳಿ

↓

ಈಶ್ವರ

↓

ಪಳ್ಳಿ>ವಳ್ಳಿ>ಒಳಿ

↓

ಪಳ್ಳಿ>ಹಳ್ಳಿ

↓

ಪಾಳ>ಹಾಳ

↓

ಪುರ

↓

ಪೂರ

↓

ಬಾಡ/ವಾಡ/ವಾಡಿ

↓

ಬಾಳ

↓

ವಾಟ

೧. ಪ್ರಾಕೃತಿಕ ಸ್ಥಳನಾಮಗಳು

ಸ್ವಾಭಾವಿಕವಾಗಿ ನಿರ್ಮಾಣಗೊಂಡ ಪ್ರಕೃತಿಯು ನದಿ, ಸಾಗರ,ಬೆಟ್ಟಗುಡ್ಡ,ಪ್ರಾಣಿ-ಪಕ್ಷಿ, ಭೌತವಸ್ತು, ವರ್ಣಮುಂತಾದ ಘಟಕಗಳನ್ನು ಒಳಗೊಂಡಿದೆ.

ಜಲವಾಚಿ ಸ್ಥಳನಾಮಗಳು

ಆದಿಮಾನವನು "ಹೆಚ್ಚು ಕಾಲವನ್ನು ಬೇಟೆಯಾಡುವುದರಲ್ಲಿ ಮೀನು ಹಿಡಿಯುವುದರಲ್ಲಿ ಕಳೆಯುತ್ತಿದ್ದನು. ತನಗೆ ಆಹಾರ ದೊರೆಯುವವರೆಗೆ ಒಂದು ಸ್ಥಳದಲ್ಲಿದ್ದು, ಅಲ್ಲಿ ಆಹಾರ ಮುಗಿದ ಮೇಲೆ ಮತ್ತೊಂದು ಸ್ಥಳವನ್ನು ಅರಸಿ"[೬] ಹೋಗುತ್ತಿದ್ದ. ಹೀಗೆ ಆದಿಮಾನವನು ಅಲೆಮಾರಿ ಜೀವನ ನಡೆಸುತ್ತಿದ್ದನು. ಒಂದು ಕಡೆ ಸುವ್ಯವಸ್ಥಿತ ನೆಲೆಯಲ್ಲಿ ನಿಲ್ಲಲು ಪ್ರಯತ್ನಪಟ್ಟರೂ, ನೀರು ಅಭಾವವಾದಾಗ ನೀರು ಹುಡುಕಿಕೊಂಡು ನೀರು ಸಿಗುವ ಕಡೆಗೆ ಹೋಗಿ ನೆಲೆ ನಿಲ್ಲುತ್ತಿದ್ದನು.

ಜಗತ್ತಿನ ಎಲ್ಲ ಸಂಸ್ಕೃತಿಯ ನೆಲೆಗಳು ನದಿ ಇಲ್ಲವೆ ಜಲಮೂಲಗಳ ಸಮೀಪ ಬೆಳೆದು ಬಂದದ್ದು ತಿಳಿದು ಬರುತ್ತದೆ. ದನಗಾಹಿಯಾದ ಮಾನವ ಒಕ್ಕಲುತನ ಪ್ರಾರಂಭಿಸಿದ ಮೇಲೆ ಒಂದು ಕಡೆ ನಿಲ್ಲಲು ಜಲ ಆಧಾರವಾಯಿತು. ಆತ ಅಲೆಯುವದನ್ನು ನಿಲ್ಲಿಸಿ ಕೃಷಿಯನ್ನು ಮಾಡುತ್ತಾ ಮುಂದು ವರೆದನು. ಜಲವಾಚಿಗಳಾದ ಹೊಳೆ, ಹಳ್ಳ, ಕೊಳ, ನದಿ, ಸರೋವರ, ಸಮುದ್ರ, ಕೆರೆ, ತೊರೆ, ಭಾವಿ, ಝುರಿ, ಕುಂಟೆ, ಹೊಂಡ ಇವುಗಳನ್ನು ಆಶ್ರಯಿಸಿದನು. ಅಂತೆಯೇ ಅವನು ವಾಸಿಸುವ ಗ್ರಾಮಗಳಿಗೆ ಈ ಹೆಸರುಗಳು ಬರಲು ಕಾರಣವಾಯಿತು. ಬಾಗಲಕೋಟೆ ಜಿಲ್ಲೆಯಲ್ಲಿಯೂ ಇಂತಹ ಹೆಸರುಗಳನ್ನು ಕಾಣುತ್ತೇವೆ.

ಕೆಸರನೂರ	(ಬಾಗ)	ತಿಮ್ಮಸಾಗರ	(ಬಾದಾ)	ಕೆಸರಕೊಪ್ಪ	(ಮುಧೋ)
ಖಜ್ಜಿಡೋಣಿ	(ಬಾಗ)	ನವಿಲಹೊಳೆ	(ಬಾದಾ)	ಕೆಸರಭಾವಿ	(ಹುನ)
ಅಮಲಝುರಿ	(ಬಾಗ)	ನೀರುಬೂದಿಹಾಳ	(ಬಾದಾ)	ಸೂಳಿಭಾವಿ	(ಹುನ)
ಗಿರಿಸಾಗರ	(ಬಾಗ)	ಹನಮಸಾಗರ	(ಬಾದಾ)	ಹಿರೇಯರನಕೆರೆ	(ಹುನ)
ಜಲಗೇರಿ	(ಬಾದಾ)	ಹಳದೂರು	(ಮುಧೋ)	ಹಿರೇಹುನಕುಂಟೆ	(ಹುನ)

ಶಿಲಾವಾಚಿ ಸ್ಥಳನಾಮಗಳು

ಕಲ್ಲು, ಬಂಡೆ, ಗುಂಡು ಅರೆ (ಬಂಡೆಕಲ್ಲು) ಇವು ಶಿಲಾವಾಚಿ ಪದಗಳು, ಪೂರ್ವಪದಗಳಿಗಿಂತ ಉತ್ತರ ಪದದಲ್ಲಿ ಇವು ಹೆಚ್ಚು ಕಂಡುಬರುತ್ತವೆ. ಅದರಲ್ಲಿಯೂ "ಕಲ್ಲು" ಎಂಬುದು ಹೆಚ್ಚಿನ ಪ್ರಮಾಣದಲ್ಲಿದ್ದುದು ತಿಳಿಯುತ್ತದೆ.

ಆಡಗಲ್ಲು	(ಬಾದಾ)	ಕಲಬೆಳ್ಳಿಗೆ	(ಜಮ)	ಕೆಂಗಲ್ಲ ಕಡಪಟ್ಟಿ	(ಹುನ)
ಕೋಟಿಕಲ್ಲು	(ಬಾದಾ)	ಬಂಡಿಗಣಿ	(ಜಮ)	ಕೆಂಗಲ್ಲ	(ಹುನ)
ಅರಕೇರಿ	(ಬಾಗ)	ವರ್ಚಗಲ್ಲು	(ಮುಧೋ)	ಖಜಗಲ್ಲ	(ಹುನ)
ಕೊಂತಿಕಲ್ಲು	(ಬಾಗ)	ಇಳಕಲ್ಲ	(ಹುನ)	ಬೆಳಗಲ್ಲ	(ಹುನ)
ಕಂದಗಲ್ಲು	(ಬಾಗ)	ಕಲ್ಲಗೋನಾಳ	(ಹುನ)	ಸುರಳಿ ಕಲ್ಲ	(ಹುನ)
ಹೆರಕಲ್ಲು	(ಬಾಗ)	ಕುಣಬೆಂಚ	(ಹುನ)	ಹಂಟರಗಲ್ಲ	(ಹುನ)

ಭೂಸ್ವರೂಪವಾಚಿ ಸ್ಥಳನಾಮಗಳು

ಬೆಟ್ಟ ,ಗುಡ್ಡ, ಗಿರಿ, ಕುಂದ, ಗುಂದ, ದಿನ್ನೆ, ಕೋಡು(ಗೋಡು), ಮಟ್ಟಿ, ಕೊಳ್ಳ, ಕಣಿವೆ, ಕಂದರ, ಖಂಡಿ, ಇವುಗಳು ಭೂಸ್ವರೂಪವನ್ನು ತಿಳಿಸುತ್ತವೆ. ಇವು ಹೆಚ್ಚಾಗಿ ಉತ್ತರಪದಗಳಾಗಿವೆ ಇವು ಕೆಲವೊಮ್ಮೆ ಪೂರ್ವಪದವಾಗಿಯೂ ಬರುವುದುಂಟು.

ಗುಡ್ಡದ ಮಲ್ಲಾಪೂರ	(ಬಾದಾ)	ಸಂಗೊಂದಿ	(ಬಾಗ)	ಗುಡದಿನ್ನಿ	(ಬಾಗ)
ಗುಳೇದಗುಡ್ಡ	(ಬಾದಾ)	ನಕ್ಕರಗೊಂದಿ	(ಬಾಗ)	ಗೋವಿನದಿನ್ನಿ	(ಬಾಗ)
ಮುಚ್ಚಳಗುಡ್ಡ	(ಬಾದಾ)	ಬೈರಮಟ್ಟಿ	(ಬಾಗ)	ಬಾದರದಿನ್ನಿ	(ಬಾಗ)
ಚೊಳಚಗುಡ್ಡ	(ಬಾದಾ)	ಬೇವಿನ ಮಟ್ಟಿ	(ಬಾಗ)	ಮುತ್ತಲದಿನ್ನಿ	(ಬಾಗ)
ನೀಲಗುಂದ	(ಬಾದಾ)	ಆನದಿನ್ನಿ	(ಬಾಗ)	ನಿಂಬಲದಿನ್ನಿ	(ಬಾಗ)
ಬಾಚಿನಗುಡ್ಡ	(ಬಾದಾ)	ಬೋಡನಾಯಕನ ದಿನ್ನಿ	(ಬಾಗ)	ಬಾಡಗಂಡಿ	(ಬೀಳ)
ಮಂಗಳಗುಡ್ಡ	(ಬಾದಾ)	ಬನ್ನಿದಿನ್ನಿ	(ಬಾಗ)	ಮೆಟಗುಡ್ಡ	(ಮುಧೋ)
ಲಾಯದಗುಂದಿ	(ಬಾದಾ)	ಮುಚಖಂಡಿ	(ಬಾಗ)	ವಜ್ಜರಮಟ್ಟಿ	(ಮುಧೋ)
ಕೆರಕಲಮಟ್ಟಿ	(ಬಾದಾ)	ತುಂಬರ ಮಟ್ಟಿ	(ಬಾಗ)	ಜಾನಮಟ್ಟಿ	(ಬೀಳ)
ಸೀಪರಮಟ್ಟಿ	(ಬಾದಾ)	ಜಾನಮಟ್ಟಿ	(ಬಾಗ)	ಕೆಸರಕೊಪ್ಪ	(ಮುಧೋ)
ಹವಳಕೋಡ	(ಬಾದಾ)	ತೋಳಮಟ್ಟಿ	(ಬಾಗ)	ಮುಗಳಖೊಡ	(ಮುಧೋ)
ಬೆಳ್ಳಿ ಕಿಂಡಿ	(ಬಾಗ)	ಕಡ್ಲಿಮಟ್ಟಿ	(ಬಾಗ)	ಚಿಂಚಖಂಡಿ	(ಮುಧೋ)
ಸಾಲಗುಂದ	(ಬಾಗ)	ಗರಡದಿನ್ನಿ	(ಬಾಗ)		

ಕ್ಷೇತ್ರವಾಚಕ ಸ್ಥಳನಾಮಗಳು

ಗದ್ದೆ, ಹೊಲ, ತೋಪು, ತೋಟ, ಬಾಳು, ಬೈಲು ಈ ರೀತಿಯಾಗಿ ಬಯಲು ಸೀಮೆಯಲ್ಲಿ ಕ್ಷೇತ್ರ ವಿಷಯಗಳು ಅವಕಾಶವನ್ನು ಪಡದಿವೆ. ಇವುಗಳ ಹಿಂದೆ ಪೂರ್ವಪದವಾಗಿ ಪ್ರಾಣಿ-ಪಕ್ಷಿ, ವ್ಯಕ್ತಿ ಹಾಗೂ ಕೆಲವು ವಿಶೇಷಣಗಳು ಬಂದಿರುತ್ತವೆ. "ಸ್ಥಳನಾಮಗಳ ಅಧ್ಯಯನದ ಮೂಲಕ ಹಲವು ಮುಖಗಳನ್ನು ಶೋಧಿಸುವುದು............. ಕ್ಷೇತ್ರನಾಮಗಳು ಸಾಂಸ್ಕೃತಿಕ ಆಶಯ ಹಾಗೂ ಸಾಂಸ್ಕೃತಿಕ ಮಟ್ಟವನ್ನು ಏಕಕಾಲದಲ್ಲಿ ಪ್ರತಿಬಿಂಬಸುತ್ತವೆ. .... ಈ ನಿಟ್ಟಿನಲ್ಲಿ ಜನತೆಯ ಜೀವನ ದರ್ಶನ ತಾತ್ವಿಕ ಗ್ರಹಿಕೆ ಎಲ್ಲವೂ ವ್ಯಕ್ತವಾಗುತ್ತದೆ. ಎನ್ನಬಹುದು."[೭]

ಗದ್ಯಾಳ (ಜಮ)

ಸಸ್ಯವಾಚಿ ಸ್ಥಳನಾಮಗಳು

ನಮ್ಮ ನಾಡಿನಲ್ಲಿ ಅನೇಕರೀತಿಯ ಸಸ್ಯಗಳು ಬಗೆಬಗೆಯ ಹೂಬಳ್ಳಿ ಬೆಳೆಯುತ್ತವೆ. ಸಸ್ಯಗಳ ಹೆಸರುಗಳನ್ನು ನಿರ್ದೇಶಿಸುವ ಊರುಗಳು ಬಾಗಲಕೋಟೆ ಜಿಲ್ಲೆಯಲ್ಲಿ ಹಲವಾರು ಇವೆ.

ನೀರಲಕೇರಿ	(ಬಾಗ)	ಮುತ್ತಲಗೇರಿ	(ಬಾದಾ)	ಕಮಲದಿನ್ನಿ	(ಹುನ)
ಆಲೂರ	(ಬಾಗ)	ಮುತ್ತಲದಿನ್ನಿ	(ಬೀಳ)	ಖ್ಯಾದಿಗೇರಿ	(ಹುನ)
ಇಂಗಳಗಿ	(ಬಾಗ)	ತುಂಬರಮಟ್ಟಿ	(ಬೀಳ)	ಚೌಕಮಲದಿನ್ನಿ	(ಹುನ)
ಕಡ್ಲಿಮಟ್ಟಿ	(ಬಾಗ)	ಹೊನ್ನಿಹಾಳ	(ಬೀಳ)	ಜಾಕಮಲದಿನ್ನಿ	(ಹುನ)
ಗುಳಬಾಳ	(ಬಾಗ)	ಆಲಗೂರು	(ಜಮ)	ತಾರಿವಾಳ	(ಹುನ)
ತುಳಸಿಗೇರಿ	(ಬಾಗ)	ಹುಣಸಿಕಟ್ಟಿ	(ಜಮ)	ತೊಂಡಿಹಾಳ	(ಹುನ)
ನಾಗಸಂಪಿಗೆ	(ಬಾಗ)	ಮರನೂರ	(ಜಮ)	ದಾಸವಾಳ	(ಹುನ)
ಬನ್ನಿದಿನ್ನಿ	(ಬಾಗ)	ಬಿದರಿ	(ಜಮ)	ಬನ್ನಿಹಟ್ಟಿ	(ಹುನ)
ಬೇವಿನಮಟ್ಟಿ	(ಬಾಗ)	ಬನಹಟ್ಟಿ	(ಜಮ)	ಬಸರಿಕಟ್ಟಿ	(ಹುನ)
ಬೇವೂರ	(ಬಾಗ)	ಅಕ್ಕಿಮರಡಿ	(ಮುಧೋ)	ಬೇವಿನಾಳ	(ಹುನ)
ಬನ್ನಿಕಟ್ಟಿ	(ಬಾಗ)	ಆಲಗುಂಡಿ	(ಮುಧೋ)	ಮಲ್ಲಿಗಿಹಾಳ	(ಹುನ)
ಸೀಗಿಕೇರಿ	(ಬಾಗ)	ಜಾಲಿಕಟ್ಟಿ	(ಮುಧೋ)	ಮುಳ್ಳೂರ	(ಹುನ)
ಆಲದಕಟ್ಟಿ	(ಬಾದಾ)	ಜಾಲಿಬೇರು	(ಮುಧೋ)	ಲವಳಸರ	(ಹುನ)
ನಸಗುನ್ನಿ	(ಬಾದಾ)	ಜೀರಗಾಳ	(ಮುಧೋ)	ಹೂವಿನೂರು	(ಹುನ)
ನೀರಲಗಿ	(ಬಾದಾ)	ಕಳ್ಳಿಗುಡ್ಡ	(ಹುನ)	ಹೂವಿನಹಳ್ಳಿ	(ಹುನ)

ಪ್ರಾಣಿ–ಪಕ್ಷಿವಾಚಕ ಸ್ಥಳನಾಮಗಳು

ಸ್ಥಳ ನಾಮಗಳಲ್ಲಿ ಪ್ರಾಣಿ ಪಕ್ಷಿಗಳನ್ನು ಹೆಸರಿಸುವ ಊರುಗಳು ಅನೇಕ ಇವೆ. ಅವುಗಳು ತಮ್ಮ ವಾಸದ ನೆಲೆಗಳನ್ನು ಸೇರಿಸಿಕೊಂಡು ನಿರ್ದೇಶಿಸಲ್ಪಡುತ್ತವೆ.

ಕರಡಿಗುಡ್ಡ	(ಬಾದಾ)	ನಾಗಸಂಪಿಗೆ	(ಬಾಗ)	ನಂದಗಾಂವ್	(ಹುನ)
ಕಾಕನೂರು	(ಬಾದಾ)	ನಾಗರಾಳ	(ಬಾಗ)	ಎಮ್ಮೆಟ್ಟಿ	(ಹುನ)
ಗೋನಾಳ	(ಬಾದಾ)	ಸುಕನಾದಗಿ	(ಬಾಗ)	ಕರಡಿ	(ಹುನ)

ಗೋವಿನಕೊಪ್ಪ	(ಬಾದಾ)	ಗರಡದಿನ್ನಿ	(ಬೀಳ)	ಕಲ್ಲಗೋನಾಳ	(ಹುನ)
ಗೋವನಕಿ	(ಬಾದಾ)	ಗೋವಿನದಿನ್ನಿ	(ಬೀಳ)	ಕೌಜಗನೂರ	(ಹುನ)
ನವಿಲಹೊಳೆ	(ಬಾದಾ)	ತೋಳಮಟ್ಟಿ	(ಬೀಳ)	ಸಿಂಗನಗುತ್ತಿ	(ಹುನ)
ನರೇನೂರು	(ಬಾದಾ)	ಬಾವಲತ್ತಿ	(ಬೀಳ)	ಜಂಬಲದಿನ್ನಿ	(ಹುನ)
ನಾಗನೂರು	(ಬಾದಾ)	ಕೊಣ್ಣೂರ	(ಜಮ)	ಬಸವನಾಳ	(ಹುನ)
ಮಣಿನಾಗರ	(ಬಾದಾ)	ನಾಗನೂರ	(ಜಮ)	ಹರಿಣಾಪುರ	(ಹುನ)
ಹುಲ್ಲಿಕೇರಿ	(ಬಾದಾ)	ಹುಲ್ಯಾಳ	(ಜಮ)	ಓತಗೇರಿ	(ಹುನ)
ನಾಗನಪುರ	(ಮುಧೋ)				

ಭೌತಿಕ ವಸ್ತುವಾಚಕ ಸ್ಥಳನಾಮಗಳು

ನಮ್ಮ ನಾಡಿನಲ್ಲಿ ಅಲ್ಲಲ್ಲಿ ಭೌತಿಕ ವಸ್ತುಗಳನ್ನು ಮಾಡುತ್ತಿದ್ದರು. ಹಾಗೂ ಬಂಗಾರ, ಕಬ್ಬಿಣ, ಮುಂತಾದ ಲೋಹಗಳೂ ದೊರೆಯುತ್ತವೆ. ಪ್ರಾಚೀನ ಕಾಲದಲ್ಲಿ ಈ ಲೋಹಗಳಿಗೆ ಸಂಬಂಧಿಸಿದ ಕೈಗಾರಿಕೆಗಳು ನಿರ್ಮಾಣಗೊಂಡು ಅದರಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿರಬೇಕು. ಈ ಕಾರಣಗಳಿಂದ ಆಯಾ ಸ್ಥಳಗಳಿಗೆ, ಆಯಾ ಲೋಹಗಳ ಹೆಸರಿನಿಂದ ಕರೆದಿರಬಹುದು. ಉದಾ:

ಹೊನ್ನರಳ್ಳಿ	(ಬಾಗ)	ಮಣಿನಾಗರ	(ಬಾದಾ)	ಹನಗಂಡಿ	(ಜಮ)
ಹೊನ್ನಿಕಟ್ಟಿ	(ಬಾಗ)	ಹಾಗನೂರು	(ಬಾದಾ)	ವಜ್ಜರಮಟ್ಟಿ	(ಮುಧೋ)
ಕಳಸ	(ಬಾಗ)	ಸೊನ್ನ	(ಬೀಳ)	ಇದ್ದಲಗಿ	(ಹುನ)
ಬೆಳ್ಳಿಕಿಂಡಿ	(ಬಾದಾ)	ಹೊನ್ನಿಹಾಳ	(ಬೀಳ)	ಚಿನ್ನಾಪೂರ	(ಹುನ)
ಹವಳಕೋಡ	(ಬಾದಾ)	ಹೊನ್ನೂರು	(ಜಮ)	ಹೇಮವಾಡಗಿ	(ಹುನ)
ಮಣ್ಣೇರಿ	(ಬಾದಾ)	ಚಿನಗುಂಡಿ	(ಜಮ)	ಹುನಗುಂದ	(ಹುನ)

ವರ್ಣವಾಚಕ ಸ್ಥಳನಾಮಗಳು

ಬಾಗಲಕೋಟೆ ಜಿಲ್ಲೆಯಲ್ಲಿ ಕೆಂಪು, ಕಪ್ಪು (ಎರಿ–ಯರಿ) ಬಿಳಿ, ಬೂದು, ಮುಂತಾದ ವರ್ಣ ಸೂಚಿಸುವ ಕಲ್ಲು–ಮಣ್ಣುಗಳನ್ನು ನಿರ್ದೇಶಿಸುವ ಸ್ಥಳನಾಮಗಳು ಕಂಡು ಬರುತ್ತವೆ.

ಕೆಂದೂರು	(ಬಾದಾ)	ಕಿಸುವೊಳಲು	(ಬಾದಾ)	ಬೆಳಗಲಿ	(ಬೀಳ)
ನೀಲಗುಂದ	(ಬಾದಾ)	ಕಂದಗಲ್ಲ	(ಬೀಳ)	ಕೆಂಗಲ್ ಕಡಪಟ್ಟಿ	(ಹುನ)
ಯರಗೊಪ್ಪ	(ಬಾದಾ)	ಬೂದಿಹಾಳ	(ಬೀಳ)	ಬೆಳಗಲ್ಲ	(ಹುನ)

೨. ಸಂಸ್ಕೃತಿವಾಚಕ ಸ್ಥಳನಾಮಗಳು

ಸಂಸ್ಕೃತಿಯೆಂಬ ಪರಿಕಲ್ಪನೆಗೆ ಅರ್ಥ ವಿವರಿಸುವುದು ಪ್ರಯಾಸದ ಕೆಲಸ. ಈ ಪರಿಕಲ್ಪನೆಯಲ್ಲಿ ರಾಷ್ಟ್ರ, ಅರ್ಥ, ಪರಿಸರ, ವರ್ಣ, ವರ್ಗ, ವೃತ್ತಿ, ಧರ್ಮ, ಅಧಿಕಾರ ಮುಂತಾದವುಗಳು ಸೇರುತ್ತವೆ. ಸಂಸ್ಕೃತಿ ಎನ್ನುವುದು ಮನುಷ್ಯನ ಜೀವನ ಅನುಭವದಿಂದ ಮೂಡಿಬಂದದ್ದು. ಸಂಸ್ಕೃತಿಯ ರಚನೆ ಮನುಷ್ಯನ ಒಳಗೆ ಮೂಡುತ್ತದೆ. ಜನರ ಆಚಾರ-ವಿಚಾರ, ನೀತಿ ನಡವಳಿಕೆ ವೃತ್ತಿಗಳ ಅರ್ಥಪೂರ್ಣ ವ್ಯವಸ್ಥೆಯನ್ನು ಸಂಸ್ಕೃತಿಯೆಂದು ಗುರುತಿಸುವಂತೆಯೇ ಪರಸ್ಪರ ಸಾಮಾಜಿಕ ಕೊಡು ಕೊಳ್ಳುವಿಕೆಯ ಅಂತಸ್ಸಂಬಂಧದ ವ್ಯವಸ್ಥೆಯನ್ನು ಸಂಸ್ಕೃತಿ ಹೊಂದಿರುತ್ತದೆ.

ವ್ಯಕ್ತಿವಾಚಕ ಸ್ಥಳನಾಮಗಳು

ಐತಿಹಾಸಿಕ ವ್ಯಕ್ತಿಗಳು, ಪೌರಾಣಿಕ ಋಷಿಮುನಿಗಳು ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯಕ್ತಿಗಳ ಹೆಸರಿನಿಂದ ಗ್ರಾಮಗಳನ್ನು ಗುರುತಿಸುವರು. " 'ನಿಸರ್ಗ' ನಿಷ್ಠತೆಯಿಂದ ಜನಾಂಗ ನಿಷ್ಠೆತೆಗೆ ಸರಿದ ಮನುಷ್ಯ ಕಾಲಕ್ರಮದಲ್ಲಿ ವ್ಯಕ್ತಿ ನಿಷ್ಠತೆಯ ಅಂಚನ್ನು ತಲುಪಿದ ಈ ಅವಧಿಯಲ್ಲಿ ಅವರು ಊರುಗಳಿಗೆ 'ಪರೋಕ್ಷ ವಿನಯ'ಕ್ಕೋಸುಗ ಗತಿಸಿ ಹೋದ ತನ್ನ ಕುಟುಂಬದ ಹಿರಿಯರ ಹೆಸರನ್ನು ಇಡತೊಡಗಿದ. ಈ ಅಹಂ ಮೂಲಧೋರಣೆಯಿಂದಾಗಿ........... ಊರುಗಳು ಹುಟ್ಟಿಕೊಂಡಿವೆ........ ವ್ಯಕ್ತಿ ವಾಚಿ ಪದಗಳು ಪೂರ್ವ ಸ್ಥಾನದಲ್ಲಿರುತ್ತವೆ."[೮]

ಬೋಡನಾಯಕನದಿನ್ನಿ	(ಬಾಗ)	ರಡ್ಡೇರ ತಿಮ್ಮಾಪೂರ	(ಬಾದಾ)	ರಾಮತೀರ್ಥ	(ಮುಧೋ)
ಮಲ್ಲಾಪೂರ	(ಬಾಗ)	ಸೋಮನಕೊಪ್ಪ	(ಬಾದಾ)	ಸಿದ್ಧಾಪೂರ	(ಮುಧೋ)
ತಿಮ್ಮಾಪೂರ	(ಬಾಗ)	ಖಾಜಿ ಬೂದಿಹಾಳ	(ಬಾದಾ)	ನಿಂಗಾಪೂರ	(ಮುಧೋ)
ಮಾರಾಪೂರ	(ಬಾಗ)	ರಾಘಾಪೂರ	(ಬಾದಾ)	ಮಹಾಲಿಂಗಪೂರ	(ಮುಧೋ)
ರಾಂಪೂರ	(ಬಾಗ)	ಖಾನಾಪೂರ	(ಬಾದಾ)	ಸಮೀರವಾಡಿ	(ಮುಧೋ)
ಸೀತಿಮನಿ	(ಬಾಗ)	ಗುಡ್ಡದಮಲ್ಲಾಪೂರ	(ಬಾದಾ)	ಮಾರಾಪೂರ	(ಮುಧೋ)
ಸೋಮಕೊಪ್ಪ	(ಬಾಗ)	ಅನಂತಗಿರಿ	(ಬಾದಾ)	ಮುದ್ದಾಪೂರ	(ಮುಧೋ)

ಸಂಗಾಪೂರ	(ಬಾಗ)	ಬೀರಕಬ್ಬಿ	(ಬೀಳ)	ಸೈದಾಪೂರ	(ಮುಧೋ)
ಜಡ್ರಾಮಕುಂಟಿ	(ಬಾಗ)	ಜಾನಮಟ್ಟಿ	(ಬೀಳ)	ಸಂಗಾನಟ್ಟಿ	(ಮುಧೋ)
ಶಾರದಾಳ	(ಬಾಗ)	ರಬಕವಿ	(ಬೀಳ)	ಗಂಗೂರ	(ಹುನ)
ಸಿದ್ನಾಳ	(ಬಾಗ)	ಸಿದ್ದಾಪೂರ	(ಬೀಳ)	ಚೆನ್ನಾಪೂರ	(ಹುನ)
ಗಂಗನಬೂದಿಹಾಳ	(ಬಾದಾ)	ಬಿಸನಾಳ	(ಬೀಳ)	ಭೀಮನಗಡ	(ಹುನ)
ಗಿಡ್ಡನಾಯಕನಾಳ	(ಬಾದಾ)	ಖಾಜಿಬೆಳ್ಳಗೆ	(ಜಮ)	ರಾಮವಾಡಗಿ	(ಹುನ)
ತಿಮ್ಮಸಾಗರ	(ಬಾದಾ)	ಜಕನೂರ	(ಜಮ)	ಸಿದ್ಧನಕೊಳ್ಳ	(ಹುನ)
ನಾಗನೂರ	(ಬಾದಾ)	ತಮ್ಮದಡ್ಡಿ	(ಜಮ)	ಅರಸಿಬೀದಿ	(ಹುನ)
ಬೀರನೂರ	(ಬಾದಾ)	ನಾಗನೂರ	(ಜಮ)	ಚಾಮಲಾಪೂರ	(ಹುನ)
ಭದ್ರನಾಯಕನ	(ಬಾದಾ)	ರಾಮಪೂರ	(ಜಮ)	ಗೋಪಸಾನಿ	(ಹುನ)
ಜಾಲಿಹಾಳ	(ಬಾದಾ)	ಯಲ್ಲಟ್ಟಿ	(ಜಮ)	ಮಾದಾಪೂರ	(ಹುನ)
ಲಿಂಗಾಪೂರ	(ಬಾದಾ)	ದೇಸಾಯಿಕೆರೆ	(ಜಮ)		
ನರಸಾಪೂರ	(ಬಾದಾ)				

ದೈವವಾಚಕ ಸ್ಥಳನಾಮಗಳು

ಆದಿಕಾಲದ ಮಾನವನು ನಿಸರ್ಗದ ವಿಕೋಪಗಳಿಗೆ ಹೆದರಿ ನಿಸರ್ಗವನ್ನೇ ದೇವರೆಂದು ಬಗೆದು ತನ್ನನ್ನು ರಕ್ಷಿಸೆಂದು ಮೊರೆಹೋದನು. ಕ್ರಮೇಣ ದೇವರು ಅವನ ಜೀವನದ ಭಾಗವಾಗಿ ಅವಕಾಶ ಪಡೆದನು. ನಂತರ ತಮ್ಮ ವಸತಿ ಸ್ಥಳಗಳಲ್ಲಿ, ನಂಬಿದ ಆ ದೇವರನ್ನು ಪ್ರತಿಷ್ಠಾಪಿಸಿದನು. ಇದೇ ಗ್ರಾಮದೇವತೆ ಆಯಿತು. ಈ ಗ್ರಾಮದೇವತೆಯ ಹೆಸರಿನಿಂದ ತನ್ನ ಗ್ರಾಮವನ್ನು ಗುರುತಿಸಿದನು. ಉದಾ: ಢವಳೇಶ್ವರ (ಬೀಳ, ಮುಧೋ) ನಂದಿಕೇಶ್ವರ (ಬಾದಾ) ಭಗವತಿ, (ಬಾಗ) ತುಂಗಳ. (ಜಮ) ಲವಳೇಶ್ವರ (ಬಾಗ)

ಪುರವಾಚಕ ಸ್ಥಳನಾಮಗಳು

"ಪುರವೆಂದರೆ ಪಟ್ಟಣ, ಅನೇಕ ಮಾರುಕಟ್ಟೆಗಳಿಂದ ಕೂಡಿದ ದೊಡ್ಡ ಊರಿಗೆ ಪುರ ಎನ್ನುತ್ತಾರೆ."[೯] ಆದರೆ ಕಲಬುರ್ಗಿಯವರು "ದೇವಾಲಯದ ಅನುಕೂಲಕ್ಕಾಗಿ ಕಟ್ಟಿದ ಬಡಾವಣೆಯೇ ಪುರ. ಇಲ್ಲಿ ಪೂಜಾರಿ, ವಾದ್ಯ, ಓಲಗದವರು, ಹೂಗಾರರು ಕಸಗುಡಿಸುವವರು, ಸೇವಕರು ಬಂದ ಭಕ್ತರಿಗೆ ಪೂಜಾ ಸಾಮಗ್ರಿ ಒದಗಿಸುವ ಅಂಗಡಿ ಇತ್ಯಾದಿಗಳು ಇರುತ್ತಿದ್ದವು. ಇದು ಪುರ"[೧೦] ಎಂದು ಅಭಿಪ್ರಾಯಪಡುತ್ತಾರೆ.

ಪತ್ತನ, ನಿಗಮ, ನಗರ, ಪುಟಭೇದನ, ನಗರೀ, ಪೂಃ ಸಮಾಹ್ವಯಂ, ಪುರಮಕ್ಕುಂ(ವಸ್ತುಕೋಶ ೪೬-೫). ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿ ಎಂಬ ಮೂರು ಜನ ದೈತ್ಯರು ಕಟ್ಟಿಕೊಂಡ ಚಿನ್ನ, ಬೆಳ್ಳಿ, ಕಬ್ಬಿಣದ ಮೂರು ಪಟ್ಟಣಗಳು 'ತ್ರಿಪುರ'ವೆಂದು ಪ್ರಸಿದ್ಧವಾಗಿವೆ. ಇವನ್ನು ನಾಶಮಾಡಿದ ಶಿವನಿಗೆ ಪುರಹರ, ತ್ರಿಪುರಾಂತಕ ಎಂಬ ಹೆಸರುಗಳಿವೆ. 'ಹಸ್ತಿನಾಪುರ'ವೆಂಬುದು ಪಾಂಡವರ ರಾಜಧಾನಿಯಾಗಿದ್ದಿತು. ಹೀಗಿರುವುದರಿಂದ ಡಾ. ಕಲಬುರ್ಗಿಯವರ ಅಭಿಪ್ರಾಯ ಒಪ್ಪುವುದು ಕಷ್ಟಸಾಧ್ಯ.

ಕದಾಮಪುರ (ಬಾಗ)	ಚಾಮಲಾಪುರ (ಹುನ)
ದೇವಲಾಪುರ (ಬಾಗ)	ನಾಗಣಾಪುರ (ಮುಧೋ)
ಮೇದಿನಾಪುರ (ಹುನ)	ಸಂಕ್ಲಾಪುರ (ಹುನ)
ಸೋಮಲಾಪುರ (ಹುನ)	ಹರಿಣಾಪುರ (ಹುನ)

ಜನಾಂಗ, ವೃತ್ತಿ, ಜಾತಿವಾಚಕ ಸ್ಥಳ ನಾಮಗಳು

ನಿಸರ್ಗ ಮೆಚ್ಚಿಕೊಂಡ ಜನ ಅಲ್ಲಿಯೇ ವಾಸಿಸತೊಡಗಿದಾಗ ಆ ಪರಿಸರವನ್ನೆ ತಮ್ಮ ವಸತಿಗಳಿಗೆ ಹೆಸರನ್ನಿಟ್ಟುಕೊಂಡಿರುವುದನ್ನು ಹಿಂದೆಯೇ ನೋಡಿದ್ದೇವೆ. ಹಾಗೇಯೇ ಕಾಲ ಕ್ರಮೇಣ ಜಾನಂಗನಿಷ್ಠೆ ಬೆಳದು ಜನಾಂಗವಾಚಿ ಗ್ರಾಮಗಳು ಬೆಳೆದು ಬಂದಿದ್ದು ಕಂಡುಬರುವುದು. ಒಂದು ವೃತ್ತಿಯನ್ನು ಕೈಗೊಂಡಿರುವ ಜನರ ಗುಂಪು ಒಂದೇ ಕಡೆ ನೆಲೆಸಿರುವುದರಿಂದ ಆ ವೃತ್ತಿಯ ಹೆಸರಿನಿಂದಲೇ ಆ ವಸತಿ ಸ್ಥಳವನ್ನು ಕರೆದಿರುವರು. ಕೃಷಿಯ ಆಧಾರಗಳ ಮೇಲಿಂದ ಬದುಕುವ ಜನರಿಗೆ ಇನ್ನಿತರ ವಸ್ತುಗಳ ಅಗತ್ಯತೆವುಂಟಾಗಿ ಆ ವಸ್ತುಗಳನ್ನು ಮಾಡುವ ವೃತ್ತಿ ಕೈಗೊಂಡಿರುವ ಜನಾಂಗದಿಂದ ಊರುಗಳನ್ನು ಕರೆಯುವ ವಾಡಿಕೆ ಕಂಡು ಬಂದಿದೆ. ನಮ್ಮ ನಾಡಿನಲ್ಲಿ ಸೊನ್ನಗಾರರು, ಕಮ್ಮಾರರು, ಉಪ್ಪಾರರು ಮುಂತಾದವರಿಗೆ ಮಹತ್ವದ ಸ್ಥಾನವಿದೆ. ಆಯಾ ವೃತ್ತಿಗಳು ಭೌಗೋಳಿಕ ಹಾಗೂ ನೈಸರ್ಗಿಕ ಪರಿಸರವನ್ನು ಅವಲಂಬಿಸಿರುತ್ತವೆ.

ಕಬ್ಬಲಗೇರಿ (ಬಾದಾ)	ಅಗಸರಕೊಪ್ಪ ಬಾದಾ)	ಐಹೊಳೆ (ಹುನ)
ಕುಂದರಗಿ (ಬೀಳ)	ಕಟಗೇರಿ (ಬಾದಾ)	ಬೇಡರಬೂದಿಹಾಳ (ಬಾದಾ)
ಕಾತರಕಿ (ಬೀಳ)	ಸೂಳಿಕೇರಿ (ಬಾದಾ)	ದಾಸರಟ್ಟಿ (ಜಮ)
ಹಿಪ್ಪರಗಿ (ಜಮ)	ಚಿನಿವಾಲಕೊಪ್ಪ (ಬೀಳ)	ಬೇಡರ ಅರಳಿಕಟ್ಟಿ (ಮುಧೋ)

ಚಿತ್ತರಗಿ	(ಹುನ)	ಕುಂಬಾರಹಳ್ಳ	(ಜಮ)	ಜಾಡರ ಅರಳಿಕಟ್ಟಿ	(ಮುಧೋ)
ಹಾವರಗಿ	(ಹುನ)	ಗಾಣದಾಳ	(ಹುನ)		

ಒಮ್ಮೊಮ್ಮೆ ಒಂದೊಂದು ಜನಾಂಗದವರು ಅಗತ್ಯಕ್ಕನುಗುಣವಾಗಿ ಅತ್ತಿತ್ತ ವಲಸೆ ಹೊಗುವದೂ ಉಂಟು. ಆಗ ಆ ಜನಾಂಗ ಅಲ್ಲಿ ನೆಲೆನಿಂತ ಸ್ಥಳಗಳೂ ಆ ಜನಾಂಗದ ಹೆಸರಿನಿಂದಲೆ ಕರೆಯಿಸಿಕೊಳ್ಳುತ್ತವೆ. ಉದಾ: ಹಿಪ್ಪರು ಒಂದು ಜನಾಂಗ. ಇವರು ವಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ವ್ಯಾಪಿಸಿದ್ದಾರೆ. ವಿಜಾಪೂರ ಜಿಲ್ಲೆಯಲ್ಲಿ ದೇವರಹಿಪ್ಪರಗಿ, ಹೂವಿನಹಿಪ್ಪರಗಿ ಎಂದು ಕರೆಯಿಸಿಕೊಂಡರೆ ಬಾಗಲಕೋಟೆ ಜಿಲ್ಲೆಯಲ್ಲಿ ಹೊಳೆಯಹಿಪ್ಪರಗಿ ಎಂದು ಕರೆಸಿಕೊಂಡಿದೆ.

ನಿರ್ಮಾಣವಾಚಿ ಸ್ಥಳನಾಮಗಳು

ಇವು ಮನುಷ್ಯನಿಂದ ನಿರ್ಮಾಣಗೊಂಡಿದ್ದನ್ನು ನಿರ್ದೇಶಿಸುತ್ತವೆ. ಇವುಗಳಲ್ಲಿ ಪ್ರಾಚೀನ ಕರ್ನಾಟಕದ ರಾಜಧಾನಿಗಳು ವ್ಯಾಪಾರ ಕೇಂದ್ರಗಳಾದ ಪಟ್ಟಣಗಳು, ನಗರಗಳು, ಕೊಪ್ಪ ಪೇಟೆಗಳು, ಕೆರೆ, ಏರಿ, ಕಟ್ಟೆ, ಕೊಳ, ಗುಂಡಿ, ಬೆಂಚಿ, ಹೊಂಡ, ಕುಳಿ, ಭಾವಿ, ಕೋಟೆ, ದುರ್ಗ, ಗಡ, ಮಠ ಇವುಗಳು ಬರುತ್ತವೆ. ಇವು ಸಾಮನ್ಯವಾಗಿ ಗ್ರಾಮಗಳ ಉತ್ತರಪದದಲ್ಲಿ ಕಂಡು ಬರುತ್ತವೆ.

ಬಾಗಲಕೋಟೆ	(ಬಾಗ)	ಪಾದನಕಟ್ಟಿ	(ಬಾದಾ)	ಯರಗಟ್ಟಿ	(ಜಮ)
ಉದಗಟ್ಟಿ	(ಬಾಗ)	ಬಂಕನೇರಿ	(ಬಾದಾ)	ಹುಣಸಿಕಟ್ಟಿ	(ಜಮ)
ಗದ್ದನಕೇರಿ	(ಬಾಗ)	ಬಂಧಕೇರಿ	(ಬಾದಾ)	ದೇಸಾಯಿಕೆರೆ	(ಜಮ)
ಶೆಲ್ಲಿಕೇರಿ	(ಬಾಗ)	ಮಮ್ಮಟಗೇರಿ	(ಬಾದಾ)	ಕನಸಗೇರಿ	(ಮುಧೋ)
ಮ್ಯಾಗೇರಿ	(ಬಾಗ)	ಮಣ್ಣೇರಿ	(ಬಾದಾ)	ಚಿತ್ರಬಾಣ ಕೋಟೆ	(ಮುಧೋ)
ಜಡ್ರಾಮಕುಂಟಿ	(ಬಾಗ)	ಮುಷ್ಠಿಗೇರಿ	(ಬಾದಾ)	ಜಾಡರ ಅರಳಿಕಟ್ಟಿ	(ಮುಧೋ)
ನೀರಲಕೇರಿ	(ಬಾಗ)	ಮುತ್ತಲಗೇರಿ	(ಬಾದಾ)	ಜಾಲಿಕಟ್ಟಿ	(ಮುಧೋ)
ಬೆನಕಟ್ಟಿ	(ಬಾಗ)	ಯಂಡಿಗೇರಿ	(ಬಾದಾ)	ಬೇಡರ ಅರಳಿಕಟ್ಟಿ	(ಮುಧೋ)
ಬನ್ನಿಕಟ್ಟಿ	(ಬಾಗ)	ಹನಮನೇರಿ	(ಬಾದಾ)	ಮೆಳ್ಳಿಗೇರಿ	(ಮುಧೋ)
ಹೊನ್ನಕಟ್ಟಿ	(ಬಾಗ)	ಸೂಳಿಕೇರಿ	(ಬಾದಾ)	ಹೊಸಕೋಟೆ	(ಮುಧೋ)
ಕುಳಗೇರಿ	(ಬಾದಾ)	ಹುಲಸಗೇರಿ	(ಬಾದಾ)	ಅರಸಿಬೀದಿ	(ಹುನ)

ಕಟಗೇರಿ	(ಬಾದಾ)	ಹುಲ್ಲಿಕೇರಿ	(ಬಾದಾ)	ಓತಗೇರಿ	(ಹುನ)
ಕುಟಕನಕೇರಿ	(ಬಾದಾ)	ಅರಕೇರಿ	(ಬಾದಾ)	ಕುಣಬೆಂಚಿ	(ಹುನ)
ಕಲಬಂಧಕೇರಿ	(ಬಾದಾ)	ಮನ್ನಿಕೇರಿ	(ಬೀಳ)	ಕೆಸರಭಾವಿ	(ಹುನ)
ಕೈನಕಟ್ಟಿ	(ಬಾದಾ)	ಗೋಡಿಹಾಳ	(ಬೀಳ)	ತಳ್ಳಿಕೇರಿ	(ಹುನ)
ಚಿಂಚಲಕಟ್ಟಿ	(ಬಾದಾ)	ಗುಂಡನಪಲ್ಲಿ	(ಬೀಳ)	ಬಸರಿಕಟ್ಟಿ	(ಹುನ)
ಚಿಮ್ಮನಕಟ್ಟಿ	(ಬಾದಾ)	ಗೋಲಭಾವಿ	(ಜಮ)	ಯರನಕೇರಿ	(ಹುನ)
ಜಮ್ಮನಕಟ್ಟಿ	(ಬಾದಾ)	ಕುರಗೋಡ	(ಜಮ)	ಹಿರೇಹುನಕುಂಟಿ	(ಹುನ)
ಜಲಗೇರಿ	(ಬಾದಾ)	ಟಕ್ಕೋಡ	(ಜಮ)	ಸೂಳಿಭಾವಿ	(ಹುನ)

ಅಂಕಿ-ಸಂಖ್ಯಾವಾಚಕ ಸ್ಥಳನಾಮಗಳು

ಜನರು ವ್ಯಾಪಾರ ಮಾಡುವ ಕೇಂದ್ರಗಳನ್ನೇ ನಗರ, ಪೇಟೆ, ಸಂತೆ, ಪಟ್ಟಣ ಎಂದು ಕರೆದಂತೆ ತೋರುವುದು. ಪೂರ್ವಪದ ಅಂಕಿ-ಸಂಖ್ಯೆಯಿಂದ ಕೂಡಿದ್ದು, ಕಟ್ಟಿ, ಮಟ್ಟಿ ಎಂಬ ಉತ್ತರ ಪದ ಗಳಿಂದ ಕೂಡಿದ ಕೆಲವು ಊರುಗಳು ಬಾಗಲಕೋಟೆ ಜಿಲ್ಲೆಯಲ್ಲಿ ಕಂಡುಬರುವುವು.

ಚಿಕ್ಕಮೂರಮಟ್ಟಿ	(ಬಾಗ)	ಒಂಟಗೋಡಿ	(ಮುಧೋ)
ಮುಮ್ಮಣಗಿ	(ಬಾಗ)	ಚೌಕಮಲದಿನ್ನಿ	(ಹುನ)
ಹಿರೇಮೂರಮಟ್ಟಿ	(ಬಾಗ)		

ಶುಭಸೂಚಕ ಸ್ಥಳನಾಮಗಳು

ಜನರು ಮಂಗಲಪ್ರಿಯರು. ಯಾವುದೇ ಕಾರ್ಯ ಮಾಡುವಾಗ ಮಂಗಲದಿಂದಲೇ ಪ್ರಾರಂಭಿಸುತ್ತಾರೆ. ಮಂಗಲದಿಂದಲೇ ಮುಗಿಸುತ್ತಾರೆ. ಹಾಗೆಯೇ ತಾವಿರುವ ಊರುಗಳಿಗೂ ಮಂಗಳಕರವಾದ ಹೆಸರನ್ನೇ ಇಟ್ಟಿರುವುದನ್ನು ಕಾಣುತ್ತೇವೆ.

ಮಂಗಳಗುಡ್ಡ (ಬಾದಾ) ಮಂಗಳೂರ (ಬಾದಾ)

ವಸ್ತುವಾಚಕ ಸ್ಥಳನಾಮಗಳು

ವಸ್ತುಗಳನ್ನು ಪ್ರತಿನಿಧಿಸುವ ಗ್ರಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿ ಹಲವಾರು ಇವೆ. ವಸ್ತುಗಳು ವ್ಯಾಪಾರಿಗಳನ್ನು ಕೃಷಿಯನ್ನು ಪ್ರತಿನಿಧಿಸುತ್ತವೆ ಹಾಗೂ ದಿನ ಬಳಕೆಯ ವಸ್ತುಗಳು ಮಾನವನ ಸಂಸ್ಕೃತಿಯನ್ನು ಸೂಚಿಸುತ್ತವೆ.

ಕಳಸ	(ಬಾದಾ)	ಒಳಕಲ್ಲದಿನ್ನಿ	(ಹುನ)
ಮುಚ್ಚಳಗುಡ್ಡ	(ಬಾದಾ)	ಕಂಬ್ಳಿಹಾಳ	(ಹುನ)

ಪ್ರಮಾಣವಾಚಕ ಸ್ಥಳನಾಮಗಳು

ಕೆಲವೊಂದು ಊರುಗಳು ಗಾತ್ರ ಪ್ರಮಾಣವನ್ನು ಸೂಚಿಸುತ್ತವೆ. ಹೆಸರಿನ ಪೂರ್ವದಲ್ಲಿ ಚಿಕ್ಕ, ಹಿರೇ ಅರೆ, ಕಿರ, ದೊಡ್ಡ, ಮಹಾ, ಎಂಬ ಪದಗಳು ಸೇರಿಕೊಂಡು ಪ್ರಮಾಣ ಸೂಚಿಸುವ ನಾಮಗಳಿವೆ.

ಚಿಕ್ಕ ಶೆಲ್ಲಿಕೇರಿ	(ಬಾಗ)	ಕಿರಸೂರ	(ಬಾಗ)	ಹೆಬ್ಬಾಳ	(ಮುಧೋ)
ಹಿರೇಶೆಲ್ಲಿಕೇರಿ	(ಬಾಗ)	ಮಹಾಕೂಟ	(ಬಾದಾ)	ಕಿಸೋರಿ	(ಮುಧೋ)
ಚಿಟಕಿನಕೊಪ್ಪ	(ಬಾಗ)	ಹೆಗ್ಗೂರ	(ಬೀಳ)	ಹೇರೂರ	(ಹುನ)
ಚಿಕ್ಕನಸಬಿ	(ಬಾದಾ)	ಚಿಕ್ಕೂರ	(ಮುಧೋ)		

ದೇಹದ ಅಂಗವಾಚಕ ಸ್ಥಳನಾಮಗಳು

ದೇಹದ ಅಂಗಾಂಗಳನ್ನು ಸೂಚಿಸುವ ಗ್ರಾಮ ನಾಮಗಳು ಬಾಗಲಕೋಟ ಜಿಲ್ಲೆಯಲ್ಲಿ ಕೆಲವೊಂದು ಇವೆ.

ಅಂಡಮುರನಾಳ	(ಬಾಗ)
ಮುಷ್ಟಿಗೇರಿ	(ಬಾದಾ)
ಮುಂಡಗನೂರು	(ಬೀಳ)

೩. ನಿರ್ವಸತಿವಾಚಕ ಸ್ಥಳನಾಮಗಳು

ಗ್ರಾಮನಾಮಗಳಲ್ಲಿ ಕೆಲವು ಮೂಲ ನಾಮಗಳಿದ್ದರೆ (ಶಬ್ದ) ಬಹಳಷ್ಟು ಹೆಸರುಗಳು ಸಾಧಿತ ನಾಮಗಳಿರುತ್ತವೆ. ಈ ಸಾಧಿತಗಳಲ್ಲಿ ಕೆಲವು ತದ್ಧಿತಗಳಿದ್ದರೆ ಕೆಲವು ಸಮಾಸನಾಮಗಳಿರುತ್ತವೆ. ಈ ತದ್ಧಿತ, ಸಮಾಸನಾಮಗಳಲ್ಲಿ ಉತ್ತರ ಪದದಲ್ಲಿ ಬರುವ ಪ್ರತ್ಯಯ ಇಲ್ಲವೆ ಪದ ಇವುಗಳನ್ನು ಅನುಲಕ್ಷಿಸಿ ಕೆಲವು ಗುಂಪುಗಳನ್ನು ಮಾಡಬಹುದು(ಮೂಲನಾಮಗಳನ್ನು, ತದ್ಧಿತನಾಮಗಳನ್ನು, ಸಮಾಸನಾಮಗಳನ್ನು ಭಾಷಿಕ ವಿವೇಚನೆಯೆಂಬ ನಾಲ್ಕನೆಯ ಅಧ್ಯಾಯದಲ್ಲಿ ಕೊಡಲಾಗಿದೆ).

ಕಲ್ಲು, ಗುಡ್ಡ, ಏರಿ, ಮುಂತಾದವುಗಳು ಜನರು ಇರುವುದನ್ನು ತಿಳಿಸುವುದಿಲ್ಲ. ಆದರೂ ಇವು ಉತ್ತರ ಪದದಲ್ಲಿ ಬಂದು ಸ್ಥಳನಾಮಗಳಾಗುತ್ತವೆ. ಇಂತಹ ಸ್ಥಳನಾಮಗಳಿಗೆ ನಿರ್ವಸತಿವಾಚಕ ಸ್ಥಳನಾಮಗಳು ಎನ್ನುತ್ತಾರೆ.

'ಈಶ್ವರ' ಎಂಬ ಶಬ್ದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಈಶ್ವರ' ಇದು ದೇವರನ್ನು ಅದರಲ್ಲಿಯೂ ಪುರುಷದೇವತೆಯ ಶೈವಧರ್ಮವನ್ನು ಸೂಚಿಸುವುದಾಗಿದೆ. ದೇವರು ಪ್ರತಿಷ್ಠಾಪಿಸಲ್ಪಟ್ಟು ಅದೇ ಗ್ರಾಮದ (ಪ್ರಮುಖ) ದೇವತೆಯಾಗಿ ಅದರ ಹೆಸರಿಂದ ಗ್ರಾಮನಾಮವನ್ನು ಕರೆಯಲಾಗಿದೆ.

ಢವಳೇಶ್ವರ	(ಬೀಳ)	ನಂದಿಕೇಶ್ವರ	(ಬಾದಾ)
ಢವಳೇಶ್ವರ	(ಮುಧೋ)	ಲವಳೇಶ್ವರ	(ಬಾಗ)

ಏರಿ(ದಿನ್ನಿ) ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಏರಿ(ದಿನ್ನಿ) ಈ ಎರಡು ಶಬ್ದಗಳು ಒಂದೇ ಅರ್ಥ ಕೊಡುತ್ತವೆ. ದಿನ್ನೆಯ ಮೇಲೆ ಊರುಗಳು ನಿರ್ಮಾಣವಾದರೆ ಅವುಗಳಿಗೆ ಈ ಶಬ್ದಗಳನ್ನು ಹಚ್ಚುತ್ತಾರೆ. 'ಏರಿ' ಎನ್ನುವದಕ್ಕೆ ಕೆರೆಯ ಒಡ್ಡು ಎಂಬರ್ಥವೂ ಇದೆ.

ಏರಿ; ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಮಣ್ಣೇರಿ	(ಬಾದಾ)	ಬಂಕನೇರಿ	(ಬಾದಾ)
ಹನಮನೇರಿ	(ಬಾದಾ)		

'ದಿನ್ನಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಆನದಿನ್ನಿ	(ಬಾಗ)	ಬಾದರದಿನ್ನಿ	(ಬೀಲ)	ಜಾಕಮಲದಿನ್ನಿ	(ಹುಣ)
ಬನ್ನಿದಿನ್ನಿ	(ಬಾಗ)	ಮುತ್ತಲದಿನ್ನಿ	(ಬೀಳ)	ಜಂಬಲದಿನ್ನಿ	(ಹುನ)
ಬೋಡನಾಯಕದಿನ್ನಿ	(ಬಾಗ)	ಬೊಮ್ಮನದಿನ್ನಿ	(ಮುಧೋ)	ಬಿಸಲದಿನ್ನಿ	(ಹುನ)
ಗರಡದಿನ್ನಿ	(ಬಾಗ)	ಕಮಲದಿನ್ನಿ	(ಹುನ)	ಬೇಕಮಲದಿನ್ನಿ	(ಹುನ)
ಗುಡದಿನ್ನಿ	(ಬಾಗ)	ಚೌಕಮಲದಿನ್ನಿ	(ಹುನ)	ವರಗೋಡದಿನ್ನಿ	(ಹುನ)
ಗೋವಿನದಿನ್ನಿ	(ಬಾಗ)	ಚಿಂತಕಮಲದಿನ್ನಿ	(ಹುನ)	ವಳಕಲದಿನ್ನಿ	(ಹುನ)

'ಕಟ್ಟೆ/ಕಟ್ಟಿ; ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಕಟ್ಟೆ>ಕಟ್ಟಿ

ಹಿಂದಿನ ಕಾಲದಲ್ಲಿ ಜನರು ಅಲ್ಲಲ್ಲಿ ಗುಂಪಾಗಿ ಇರುತ್ತಿದ್ದರು. ಅವರು ತಮ್ಮ ತಮ್ಮಲ್ಲಿಯ ನ್ಯಾಯಗಳನ್ನು ತಮ್ಮ-ತಮ್ಮಲ್ಲಿಯೆ ನಿಭಾಯಿಸಿಕೊಳ್ಳುತ್ತಿದ್ದರು. ಅದಕ್ಕಾಗಿ ಹಿರಿಯರಾದವರು ಒಂದು

ಕಟ್ಟೆಯ ಮೇಲೆ ಕೂಡುತ್ತಿದ್ದರು. ಅವು ಚಾವಡಿಯಂತೆ ಕೆಲಸಮಾಡುತ್ತಿದ್ದವು. ಯಾವ ಕಟ್ಟೆಯ ಗಿಡದ ಕೆಳಗೆ ಇರುತ್ತಿದ್ದಿತೊ, ಯಾರಿಂದ-ಯಾವುದರಿಂದ ಪ್ರಸಿದ್ಧವಾಗಿರುತ್ತಿದ್ದಿತೋ ಅದಕ್ಕೆ ಆ ಹೆಸರಿನಿಂದ ಕರೆಯಲಾಗುತ್ತಿತ್ತು. ಕ್ರಮೇಣ ಜನರು ಅಲ್ಲಿಯೆ ಸ್ಥಾಯಿಯಾದುದರಿಂದ ಅವೇ ಊರುಗಳಾದವು. ಆ ಹೆಸರಿನಿಂದಲೆ ಕರೆಸಿಕೊಂಡವು. ಇಂತಹ ಅನೇಕ ಊರುಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ. ಇಲ್ಲಿ ಕ>ಗ ಆಗುತ್ತದೆ.

ಬೆನಕಟ್ಟಿ	(ಬಾಗ)	ಚಿಂಚಲಕಟ್ಟಿ	(ಬಾದಾ)	ಹುಣಸಿಕಟ್ಟಿ	(ಜಮ)
ಬನ್ನಿಕಟ್ಟಿ	(ಬಾಗ)	ಜಮ್ಮನಕಟ್ಟಿ	(ಬಾದಾ)	ಅರಳಿಕಟ್ಟಿ	(ಮುಧೋ)
ಹೊನ್ನಕಟ್ಟಿ	(ಬಾಗ)	ತಪ್ಪಸಕಟ್ಟಿ	(ಬಾದಾ)	ಜಾಲಿಕಟ್ಟಿ	(ಮುಧೋ)
ಆಲದಕಟ್ಟಿ	(ಬಾದಾ)	ಪಾದನಕಟ್ಟಿ	(ಬಾದಾ)	ಅನಪಕಟ್ಟಿ	(ಹುನ)
ಚಿಮ್ಮನಕಟ್ಟಿ	(ಬಾದಾ)	ಕೈನಕಟ್ಟಿ	(ಬಾದಾ)	ಬಸರಿಕಟ್ಟಿ	(ಹುನ)
ಮತ್ತಿಕಟ್ಟಿ	(ಬಾದಾ)				

ಕಲಿ>ಗಲಿ ಶಬ್ದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಕಲಿ' ಎಂದರೆ 'ಶೂರ' ಎಂದರ್ಥ. ಆಯಾ ವಿಷಯಗಳಲ್ಲಿ 'ಕಲಿ'ಗಳಾದವರ ಹೆಸರಿನಲ್ಲಿ ಆ ಊರುಗಳು ಕರೆಯಲ್ಪಡುತ್ತವೆ.

ಕೊಡಗಲಿ	(ಹುನ)	ಬೆಳಗಲಿ	(ಮಧೋ)	ಹಲಗಲಿ	(ಮಧೋ)
ಗಲಗಲಿ	(ಬೀಳ)	ಹಡಗಲಿ	(ಹುನ)		

'ಕಲ್ಲು/ಗಲ್ಲು; ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಕಲ್ಲು/ಗಲ್ಲು' ಇವುಗಳಿಂದ ಕೊನೆಗೊಳ್ಳುವ ಅನೇಕ ಊರುಗಳಿವೆ. ಶಿಲಾಯುಗವನ್ನು ನೆನಪಿಸಿಕೊಳ್ಳುವುದಾದರೆ ಮೊದಲು ಮಾನವ ಗುಹೆಗಳಲ್ಲಿ, ಬಂಡೆಗಳ ಸಂದುಗಳಲ್ಲಿ ವಾಸಿಸುತ್ತಿದ್ದ ಬಂಡೆಗಲ್ಲುಗಳಿರುವಲ್ಲಿ ಆಶ್ರಯಪಡೆದು ನೆಲೆ ನಿಂತ ಸ್ಥಳಗಳು 'ಕಲ್ಲು/ಗಲ್ಲು' ಎಂಬುದನ್ನು ಕೊನೆಗೆ

ಹೊಂದಿವೆ. ಪೂರ್ವಪದವು ಕಲ್ಲಿನ ಸ್ವರೂಪ ತಿಳಿಸುವುದು. ಕಲ್ಲು-ಗಲ್ಲು ಇದು ಗದಬಾದೇಶಸಂಧಿ ನಿಯಮಕ್ಕನುಸರಿಸಿ ಆಗುತ್ತದೆ.

'ಕಲ್ಲು' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಕೋಟಿಕಲ್ಲು	(ಬಾದಾ)	ಹೆರಕಲ್ಲು	(ಬೀಳ)
ಪಟ್ಟದಕಲ್ಲು	(ಬಾದಾ)	ಸುರಳಿಕಲ್ಲು	(ಹುನ)
ಕೊಂತಿಕಲ್ಲು	(ಬೀಳಗಿ)	ಇಲಕಲ್ಲು	(ಹುನ)

'ಗಲ್ಲು' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಹಂಟರಗಲ್ಲು	(ಬಾಗ)	ಕೆಂಗಲ್ಲು	(ಹುನ)
ಆಡಗಲ್ಲು	(ಬಾದಾ)	ಕಜಗಲ್ಲು	(ಹುನ)
ಕಂದಗಲ್ಲು	(ಬೀಳಗಿ)	ಬೆಳಗಲ್ಲು	(ಹುನ)
ವರ್ಚಗಲ್ಲು	(ಮುಧೋ)		

'ಕಿಂಡಿ/ಖಂಡಿ/ಗಂಡಿ; ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಇವು ಇಕ್ಕಟ್ಟಾದ ಪ್ರದೇಶ, ಕೊಳ್ಳದ ಪ್ರದೇಶವೆಂಬ ಅರ್ಥ ಸೂಚಿಸುವುವು. ಇಂತಹ ಕೊಳ್ಳಗಳಲ್ಲಿ ಗಿಡಗಂಟೆ ಪೊದೆಗಳು ಬೆಳೆದಿರುತ್ತವೆ. ಇಂತಹ ಪ್ರದೇಶದ ಸನಿಹದಲ್ಲಿ ಜನವಸತಿ ಇದ್ದಾಗ ಆ ಸ್ಥಳಕ್ಕೆ 'ಕಿಂಡಿ/ಖಂಡಿ/ಗಂಡಿ' ಎಂಬ ಉತ್ತರ ಪದದಿಂದ ಕರೆಯುವರು.

ಕಿಂಡಿ

ಬೆಳ್ಳಿಕಿಂಡಿ (ಬಾದಾ)

ಖಂಡಿ

ಮುಚಖಂಡಿ	(ಬಾಗ)	ಮದರಖಂಡಿ	(ಜಮ)
ಜಮಖಂಡಿ	(ಜಮ)	ಚಿಂಚಖಂಡಿ	(ಮುಧೊ)

ಗಂಡಿ

ಬಾಡಗಂಡಿ	(ಬೀಳ)	ಹನಗಂಡಿ	(ಜಮ)

"ಕುಂಟೆ/ಕುಂಟಿ" ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಇಲ್ಲಿ ಎ>ಇ ಕಾರವಾಗಿದೆ.

'ಕುಂಟೆ/ಕುಂಟಿ' ಇವು ಜಲವಾಚಿ ಪದವಾಗಿದ್ದು ನೀರನ್ನು ಹೊಂದಿರುವ ಪ್ರದೇಶದಲ್ಲಿ ಜನವಸತಿ ಇದ್ದಾಗ ಕುಂಟೆ/ಕುಂಟಿ ಉತ್ತರ ಪದ ಬಳಸಿ ಸ್ಥಳವನ್ನು ಕರೆಯುವರು.

ಕುಂಟೆ

ಹುನಕುಂಟೆ (ಹುನ)

ಕುಂಟಿ

ಜಡ್ರಾಮಕುಂಟಿ (ಬಾಗ)

'ಗುಂದ/ಕುಂದಿ/ಗುಂದಿ/ಗೊಂದಿ; ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಗುಂದಾದಿ ಗಳ ಅರ್ಥ ಬೆಟ್ಟ-ಗುಡ್ಡ ಎಂದಾಗುವುದು. ಬೆಟ್ಟದ ಸುತ್ತಮುತ್ತ ಜನರುವಾಸಿಸಲು ಪ್ರಾರಂಭಿಸಿದರು ಹಾಗಾಗಿ ಅಲ್ಲಿ ನೆಲೆನಿಂತ ಸ್ಥಳದ ಕೊನೆಯಲ್ಲಿ 'ಗುಂದ/ಕುಂದಿ/ಗುಂದಿ/ಗೊಂದಿ' ಇರುವುದನ್ನು ಕಾಣುತ್ತೇವೆ.

ಗುಂದ

ನೀಲಗುಂದ (ಬಾದಾ) ಹುನಗುಂದ (ಹುನ)ಕುಂದಿ

ಬಲಕುಂದಿ (ಹುನ)

ಗುಂದಿ

ನಕ್ಕರಗುಂದಿ (ಬಾಗ) ಲಾಯದಗುಂದಿ (ಬಾದಾ)

ಸಾಲಗುಂದಿ (ಬಾಗ) ನಿಂಬಲಗುಂದಿ (ಹುನ)

ಗೊಂದಿ

ಸಂಗೊಂದಿ (ಬಾಗ)

"ಕೆರೆ" ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಕೆರೆ

ದೇಸಾಯಿಕೆರೆ (ಜಮ)

ಯರನಕೆರೆ (ಹುನ)

ಕೆರಿ

ಕೆರೆಗಳಿದ್ದಂತಹ ಊರುಗಳು ಕೆರೆ? ಕೆರಿ ಈ ಶಬ್ದವನ್ನು ಉತ್ತರ ಪದವಾಗಿ ಪಡೆಯುತ್ತವೆ. ರೂಢಿಯಲ್ಲಿ ಕೆರಿ:ಕೇರಿ ಎಂಬಂತೆ ಎರಡು ರೀತಿಯಿಂದಲೂ ಉಚ್ಚರಿಸುವದುಂಟು.

ನೀರಲಕೆರಿ	(ಬಾಗ)	ಸೂಳಿಕೆರಿ	(ಬಾದಾ)	ಯರನಕೆರಿ	(ಹುನ)
ಕಲಬಂದಕೆರಿ	(ಬಾದಾ)	ಹುಲ್ಲಿಕೆರಿ	(ಬಾದಾ)	ಮಣ್ಣಿಕೆರಿ	(ಬೀಳ)
ಕುಟಕನಕೆರಿ	(ಬಾದಾ)	ಅರಕೆರಿ	(ಬೀಳ)		

"ಕೋಡ/ಖೋಡ/ಗೋಡ/ಗೋಡಿ/ಗಟ್ಟಿ" ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳ ನಾಮಗಳು

'ಕೋಡ/ಖೋಡ/ಗೋಡ/ಗೋಡಿ' ಎಂದರೆ ಹೊಳೆಯ ಒತ್ತು, ಗುಡ್ಡಗಳ ಇಕ್ಕಟ್ಟಾದ ಸಂದಿ ಎಂಬ ಅರ್ಥವಿರುವುದು. ಬೇಟೆಯಾಡುವ ಜನರು ಹಾಗೂ ಇತರರು ಪ್ರಾಣಿಗಳಿಂದ ರಕ್ಷಣೆ ಪಡೆಯಲು ಇಂಥ ಸ್ಥಳದಲ್ಲಿ ಆಶ್ರಯ ಪಡೆಯುತ್ತಿರಬೇಕು. ಅಂತಹ ಸ್ಥಳಗಳಲ್ಲಿ ನಿರ್ಮಾಣಗೊಂಡ ಊರುಗಳು ತಮ್ಮ ಹಿಂದೆ ಅಲ್ಲಿಯ ಪರಿಸರದ ಹೆಸರನ್ನು ಹಚ್ಚಿಕೊಂಡು ಒಂದರಿಂದೊಂದು ಬಿನ್ನವಾಗಿ ಹೆಸರು ಪಡೆದುಕೊಂಡು ಊರುಗಳಾಗಿರಬೇಕು.

ಕೋಡ

ಹವಳಕೋಡ (ಬಾದಾ) ಟಕ್ಕೋಡ (ಜಮ)

ಖೋಡ

ಮುಗಳಖೋಡ (ಮುಧೋ)

ಗೋಡ

ಕುರಗೋಡ (ಜಮ)

ಗೋಡಿ

ಒಂಟಿಗೋಡಿ (ಮುಧೊ)

ಗಟ್ಟಿ

ಉದಗಟ್ಟಿ (ಬಾಗ) ಯರಗಟ್ಟಿ (ಜಮ)

'ಕಣಿ/ಗಣಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಕಣಿ/ಗಣಿ' ಕಲ್ಲನ್ನು ಭೂಮಿಯಿಂದ ಅಗೆದು ಬೇರ್ಪಡಿಸಿದಾಗ ಉಂಟಾದ ದೊಡ್ಡ ಕಂದಕಗಳಿಗೆ ಕಣಿ/ಗಣಿ ಎನ್ನುವರು.

ಗಣಿ

ಬಂಡಿಗಣಿ (ಜಮ) ಗಣಿ (ಜಮ)

'ಗಿರಿ/ಗುಡ್ಡ; ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಗಿರಿ/ಗುಡ್ಡ; ಎತ್ತರವಾದ ಪ್ರದೇಶ ಸುತ್ತಲೂ ಪೊದೆಗಳಂಥ ಸಸ್ಯಗಳನ್ನು ಹೊಂದಿರುವುದು. ಹೆಚ್ಚಾಗಿ ಕುರಿ-ದನಗಳನ್ನು ಮೇಯಿಸಲು ಯೋಗ್ಯ ಸ್ಥಳವೆಂದು ಹೇಳಬಹುದು. ಇಂಥ ಪ್ರದೇಶದಲ್ಲಿರುವ ಜನವಸತಿಯನ್ನು ಗಿರಿ, ಗುಡ್ಡದಿಂದ ಕರೆಯುವರು.

ಗಿರಿ

ಅನಂತಗಿರಿ (ಬಾದಾ)

ಗುಡ್ಡ

ಕರಡಿಗುಡ್ಡ (ಬಾದಾ) ಬಾಚನಗುಡ್ಡ (ಬಾದಾ) ಕಳ್ಳಿಗುಡ್ಡ (ಹುನ)

ಮಂಗಳಗುಡ್ಡ (ಬಾದಾ) ಮುಚ್ಚಳಗುಡ್ಡ (ಬಾದಾ) ಮೇಟಗುಡ್ಡ (ಮುಧೋ)

ಚೊಳಚಗುಡ್ಡ (ಬಾದಾ) ಗುಳೇದಗುಡ್ಡ (ಬಾದಾ)

'ಗುಂಡಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಗುಂಡಿ' ಲೋಹ ತೆಗೆಯಲು, ಕಲ್ಲುತೆಗೆಯಲು ಭೂಮಿಯನ್ನು ಅಗೆದಾಗ ಉಂಟಾಗುವ ತಗ್ಗಿಗೆ ಗುಂಡಿ ಎನ್ನುವರು. ಇಂಥ ಗುಂಡಿ ನಿರ್ಮಾಣಕ್ಕೆ ಕಾರಣವಾದ ಜನ ಪಕ್ಕದಲ್ಲೇ ನೆಲೆಸಿರಲು ಸಾಧ್ಯವಿದೆ. ಅಂಥ ನೆಲೆಯನ್ನು ಗುಂಡಿ ಎಂಬ ಉತ್ತರ ಪದದಿಂದ ಕರೆಯುವರು.

ಗುಂಡಿ

ಚಿಕ್ಕಾಲಗುಂಡಿ (ಬೀಳ) ಆಲಗುಂಡಿ (ಬೀಳ)

ಚಿನಗುಂಡಿ (ಜಮ)

'ಗುತ್ತಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಗುತ್ತಿ' ಎಂಬುದು ಗುಂಪಿ, ಕುಟ್ಟರಿ ಎಂಬರ್ಥ ಹೊಂದಿದೆ. ಪ್ರಾಣಿ, ಮಾನವ ಗುಂಪು ಗುಂಪಾಗಿ ವಾಸಿಸುವದನ್ನು ಸೂಚಿಸುವುದು. ಪೊದೆಗಳು, ಕಂಟಿಗಳು ಗುಂಪಾಗಿ ಬೆಳೆದಿರುವವು. ಇಂಥ ಪ್ರದೇಶದಲ್ಲಿರುವ ಜನವಸತಿಗೆ ಗುತ್ತಿ ಎಂದು ಸೇರಿಸಿ ಕರೆಯುವರು.

ಗುತ್ತಿ

ಯಳ್ಳಿಗುತ್ತಿ (ಬಾಗ) ಸಿಂಗನಗುತ್ತಿ (ಹುನ)

'ದೋಣಿ/ಡೋಣಿ; ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ದೋಣಿ, ಡೋಣಿ ಒಂದು ಸಣ್ಣ ಪ್ರವಾಹ. ಇದು ಹಳ್ಳದಕ್ಕಿಂತ ದೊಡ್ಡದಾಗಿದ್ದು, ಹೊಳೆಗಿಂತ ಸಣ್ಣದಾಗಿರುತ್ತದೆ. ಇದರ ದಂಡೆಯಲ್ಲಿ ಗ್ರಾಮಗಳು ನಿರ್ಮಾಣವಾಗಿರುತ್ತವೆ.

ದೋಣಿ

ಬೆನಕನದೋಣಿ (ಹುನ)

ಡೋಣಿ

ಖಜ್ಜಿಡೋಣಿ (ಬಾಗ)

'ಬಾವಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಬಾವಿ' ಇದು ಜಲಮೂಲವಾದದ್ದು. ಜಲಮೂಲವಿಲ್ಲದಿದ್ದಾಗ ಮಾನವ ನೀರಿಗಾಗಿ ಬಾವಿ ನಿರ್ಮಾಣದಲ್ಲಿ ತೊಡಗುವನು. ಬಾವಿ ತೋಡಿ ವಸತಿ ಹೊಂದಿದ ಸ್ಥಳಕ್ಕೆ ಬಾವಿ ಉತ್ತರ ಪದವಾಗುವದು.

ಬಾವಿ

ಗೋಲಬಾವಿ (ಜಮ) ಸೂಳಿಬಾವಿ (ಹುನ)

ಮದಬಾವಿ (ಮುಧೋ) ಕೆಸರಬಾವಿ (ಹುನ)

'ಮರಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಮರಿ

ಗುಗ್ಗಲಮರಿ (ಹುನ) ತುರಮರಿ (ಹುನ)

'ವಾರಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಓರೆ>ವಾರಿ = ಇಳುಕಲು, ಅಲ್ಲಿಯ ಭೂಸ್ವರೂಪದ ಜೊತೆಗೆ ವಾರಿ ಸೇರಿಸಿ ಕರೆಯುವರು.

ವಾರಿ

ಇಂಜನವಾರಿ (ಬಾದಾ) ಬೆನಕನವಾರಿ (ಹುನ)

'ಸಾಗರ/ಹೊಳೆ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಸಾಗರ/ಹೊಳೆ' ಇವು ಜಲಮೂಲಗಳಾಗಿವೆ. ನದಿ, ಹೊಳೆ, ಸಾಗರ ಜಲಮೂಲವಿದ್ದಲ್ಲಿ ಮಾನವ ವಸತಿ ಹೊಂದುತ್ತಾನೆ, ಜೊತೆಗೆ ಪ್ರಾಣಿ–ಪಕ್ಷಿಗಳೂ ಆಶ್ರಯ ಪಡೆಯುತ್ತವೆ. ಹಾಗಾಗಿ 'ಸಾಗರ/ಹೊಳೆ; ಎಂಬ ಉತ್ತರ ಪದ ಬರುವ ಸ್ಥಳಗ್ರಾಮನಾಮಗಳಾಗಿವೆ.

ಸಾಗರ

ತಿಮ್ಮಸಾಗರ (ಬಾದಾ) ಹನಮಸಾಗರ (ಬಾದಾ) ಗಿರಿಸಾಗರ (ಬೀಳ)

ಹೊಳೆ

ನವಿಲುಹೊಳೆ (ಬಾದಾ) ಐಹೊಳೆ (ಹುನ)

೪. ವಸತಿವಾಚಕ ಸ್ಥಳನಾಮಗಳು

ಊರು, ಕೇರಿ, ಗ್ರಾಮ ಮುಂತಾದವುಗಳು ಜನವಸತಿಯನ್ನು ಸೂಚಿಸುತ್ತವೆ. ಆದ್ದರಿಂದ ಇವು ಉತ್ತರಪದವಾಗಿ ಬರುವ ಸ್ಥಳನಾಮಗಳಿಗೆ ವಸತಿವಾಚಕ ಸ್ಥಳನಾಮಗಳು ಎನ್ನುತ್ತಾರೆ.

'ಊರು' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಊರು, ಎಂಬ ಪದದ ಅರ್ಥ ಇರುವಿಕೆ, ವಾಸಸ್ಥಳ, ನೆಲಸುವಿಕೆ, ಎಂದಾಗುವುದು. ತಳ ಊರಿದ್ದು 'ಊರು'

ಹೊದ್ಲೂರು	(ಬಾಗ)	ಮನಗೂರು	(ಬೀಳ)	ಮುದನೂರು	(ಮುಧೊ)
ಕಿಸನೂರ	(ಬಾಗ)	ಹೆಗ್ಗೂರು	(ಬೀಳ)	ಕಣಬೂರು	(ಮುಧೊ)
ಕೆಸರನೂರು	(ಬಾಗ)	ಮುಂಡಗನೂರು	(ಬೀಳ)	ಕಟಗೂರು	(ಹುನ)
ನಾಯನೂರು	(ಬಾಗ)	ಕೋಲೂರು	(ಬೀಳ)	ಗಂಗೂರು	(ಹುನ)
ಬೆಣ್ಣೂರು	(ಬಾಗ)	ಬಳ್ಳೂರು	(ಬೀಳ)	ನೂಗೂರು	(ಹುನ)
ಶಿರೂರು	(ಬಾಗ)	ಆಲಗೂರು	(ಜಮ)	ಗುಡೂರು	(ಹುನ)\
ಬೇವೂರು	(ಬಾಗ)	ನಾಗನೂರು	(ಜಮ)	ಕೊಣ್ಣೂರು	(ಹುನ)
ಹೊಸೂರು	(ಬಾಗ)	ಮೈಗೂರು	(ಜಮ)	ಕೌಜಗನೂರು	(ಹುನ)
ಹಳ್ಳೂರು	(ಬಾಗ)	ಮುತ್ತೂರು	(ಜಮ)	ಗಟ್ಟಿಗನೂರು	(ಹುನ)
ಕೆಂದೂರು	(ಬಾದಾ)	ಕುಂಚನೂರು	(ಜಮ)	ಧನ್ನೂರು	(ಹುನ)
ಕಾಕನೂರು	(ಬಾದಾ)	ಮರನೂರು	(ಜಮ)	ನಿಡಸನೂರು	(ಹುನ)
ಜಕನೂರು	(ಬಾದಾ)	ಲಿಂಗನೂರು	(ಜಮ)	ನಂದನೂರು	(ಹುನ)
ನರೇನೂರು	(ಬಾದಾ)	ಹುನ್ನೂರು	(ಜಮ)	ಹೂವನೂರು	(ಹುನ)
ನಾಗನೂರು	(ಬಾದಾ)	ಚಿಕ್ಕೂರು	(ಮುಧೊ)	ಡಮ್ಮೂರು	(ಹುನ)
ಬೀರನೂರು	(ಬಾದಾ)	ಮಂಟೂರು	(ಮುಧೊ)	ಹೆರೂರು	(ಹುನ)
ಹಾಗನೂರು	(ಬಾದಾ)	ಉತ್ತೂರು	(ಮುಧೊ)	ಕೆಲೂರು	(ಹುನ)
ಕೆರೂರು	(ಬಾದಾ)	ಜುನ್ನೂರು	(ಮುಧೊ)	ಕಿರಸೂರು	(ಹುನ)

ಧಾಣಕ ಶಿರೂರು	(ಬಾದಾ)	ಬದನೂರು	(ಮುಧೊ)	ಮುಳ್ಳೂರು	(ಹುನ)
ಆಲೂರು	(ಬಾದಾ)	ಬಂಟನೂರು	(ಮುಧೊ)		

'ಕೇರಿ>ಗೇರಿ; 'ಕ>ಗ' ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಕೇರಿ/ಗೇರಿ: ಎರಡು ಪದಗಳು ಒಂದೇ ಅರ್ಥವನ್ನು ಹೊಂದಿವೆ ಓಣಿ, ಊರನ್ನು ಕೇರಿ ಎಂದು ಕರೆಯುವ ವಾಡಿಕೆ ಇದೆ.

ಕೇರಿ

ಗದ್ದನಕೇರಿ	(ಬಾಗ)	ಸೀಗಿಕೇರಿ	(ಬಾಗ)
ಶೆಲ್ಲಿಕೇರಿ	(ಬಾಗ)	ತಳ್ಳಿಕೇರಿ	(ಹುನ)
ಸೀಮಿಕೇರಿ	(ಬಾಗ)		

ಗೇರಿ

'ಕ'ಕಾರಕ್ಕೆ 'ಗ' ಕಾರವಾಗಿ ಕೇರಿ>ಗೇರಿ

ಕಟಗೇರಿ	(ಬಾದಾ)	ಯಂಡಿಗೇರಿ	(ಬಾದಾ)	ಮೆಳ್ಳಿಗೇರಿ	(ಮುಧೋ)
ಕಬ್ಬಲಗೇರಿ	(ಬಾದಾ)	ಹಳಗೇರಿ	(ಬಾದಾ)	ಕನಸಗೇರಿ	(ಮುಧೊ)
ಕುಳಗೇರಿ	(ಬಾದಾ)	ಹಾಲಗೇರಿ	(ಬಾದಾ)	ವಡಗೇರಿ	(ಹುನ)
ಜಲಗೇರಿ	(ಬಾದಾ)	ಹುಲಸಗೇರಿ	(ಬಾದಾ)	ಮರಟಗೇರಿ	(ಹುನ)
ಮಮ್ಮಟಗೇರಿ	(ಬಾದಾ)	ಮ್ಯಾಗೇರಿ	(ಬಾಗ)	ಓತಗೇರಿ	(ಹುನ)
ಮುಷ್ಠಿಗೇರಿ	(ಬಾದಾ)	ತುಳಸಿಗೇರಿ	(ಬಾಗ)	ಕ್ಯಾದಿಗೇರಿ	(ಹುನ)
ಮುತ್ತಲಗೇರಿ	(ಬಾದಾ)				

'ಗುಪ್ಪಿ/ಕೊಪ್ಪ/ಗೊಪ್ಪ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಗುಪ್ಪಿ/ಕೊಪ್ಪ/ಗೊಪ್ಪ' ಇವುಗಳ ಅರ್ಥ ಸಣ್ಣಗುಂಪು ಅಥವಾ ಸಮೂಹವನ್ನು ಸೂಚಿಸುವುದು. ಇವೆ ಮುಂದೆ ಊರುಗಳು ಎಂದಾಗಿರುವುದನ್ನು ಗಮನಿಸಬಹುದು.

ಗುಪ್ಪಿ

ಶಿರಗುಪ್ಪಿ (ಬಾಗ) ಶಿರಗುಪ್ಪಿ (ಜಮ)

ಕೊಪ್ಪ

ಕಳಸಕೊಪ್ಪ	(ಬಾಗ)	ಅಗಸರಕೊಪ್ಪ	(ಬಾದಾ)	ಬೆಳವಲಕೊಪ್ಪ	(ಬಾದಾ)
ಗೋವಿನಕೊಪ್ಪ	(ಬಾಗ)	ಕರ್ಲಕೊಪ್ಪ	(ಬಾದಾ)	ಮುಮ್ಮರಡಿಕೊಪ್ಪ	(ಬಾದಾ)
ಚಿಟಕಿನಕೊಪ್ಪ	(ಬಾಗ)	ಕಾಡರಕೊಪ್ಪ	(ಬಾದಾ)	ಚಿನವಾಲಕೊಪ್ಪ	(ಬೀಳ)
ಮುದುವಿನಕೊಪ್ಪ	(ಬಾಗ)	ಕೊಂಕಣಕೊಪ್ಪ	(ಬಾದಾ)	ಜಂಜರಕೊಪ್ಪ	(ಮುಧೊ)
ಸೋಮನಕೊಪ್ಪ	(ಬಾಗ)	ಗುಬ್ಬೇರಕೊಪ್ಪ	(ಬಾದಾ)	ಅಂಬಲಿಕೊಪ್ಪ	(ಹುನ)
ಗೋವನಕೊಪ್ಪ	(ಬಾದಾ)	ಬಿಸನಾಳಕೊಪ್ಪ	(ಹುನ)		

ಗೊಪ್ಪ

ಯರಗೊಪ್ಪ (ಬಾದಾ)

ಕೆಸರಗೊಪ್ಪ (ಮುಧೋ)

'ಕೋಟೆ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಊರ ರಕ್ಷಣೆಗಾಗಿ ಸುತ್ತಲು ಕಟ್ಟಿದ ಗೋಡೆಗೆ ಕೋಟೆ ಎನ್ನುತ್ತಾರೆ. ಇಂತಹ ಕೋಟೆ ಎಂಬುದು ಉತ್ತರ ಪದವುಳ್ಳ ಊರುಗಳು.

ಕೋಟೆ

ಬಾಗಲಕೋಟೆ (ಬಾಗ) ಹೊಸಕೋಟೆ (ಮುಧೋ) ಚಿತ್ರಬಾನಕೋಟೆ (ಮುಧೋ)

ಗಡ

'ಗಡ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು. 'ಗಡ' ಎಂದರೆ ಕೋಟೆ.

ಬೂದನಗಡ (ಬಾದಾ) ಭೀಮನಗಡ (ಹುನ) ಅಮೀನಗಡ (ಹುನ)

'ಗಾವ/ಗಾವಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಗಾವ/ಗಾವಿ' ಇದು ಜನರು ವಾಸಿಸಲು ಇರುವ ಸ್ಥಳವನ್ನು ಸೂಚಿಸುವುದು. ಇಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಿರುತ್ತದೆ. ಗ್ರಾಮ ಈ ಶಬ್ದದಿಂದ ಗಾವ, ಗಾವಿ, ಶಬ್ದಗಳು ನಿಷ್ಪನ್ನವಾಗಿವೆ.

ಗಾವ

ಗಿರಗಾವ (ಬೀಳ) ನಂದಗಾವ (ಮುಧೋ)

ಸೋರಗಾವ (ಮುಧೋ)

ಗಾವಿ

ಮಳಗಾವಿ (ಹುನ)

'ಯವಲ' ಅನುನಾಸಿಕಮುಂ ನಿರನುನಾಸಿಕಮುಂ ಅಪ್ಪುವು' ಈ ನಿಯಮಕ್ಕನುಸರಿಸಿ ಇಲ್ಲಿ 'ವ' ಕಾರವು ಅನುನಾಸಿಕ, ನಿರನುನಾಸಿಕ ಎರಡು ರೀತಿಯಿಂದಲೂ ಉಚ್ಚಾರವಾಗುವದುಂಟು.

'ದಾಳ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ದಾಳ

ಕಮದಾಳ	(ಬೀಳ)	ಜಗದಾಳ	(ಜಮ)	ಹಗೆದಾಳ	(ಹುನ)
ತೇರದಾಳ	(ಜಮ)	ಗದ್ಯಾಳ	(ಜಮ)	ಗಾನದಾಳ	(ಹುನ)

ಇಲ್ಲಿಯೂ 'ಹಾಳ' ಇದ್ದು 'ಹ'ಕಾರ ಲೋಪವಾಗಿದೆ.

'ನಾಳ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ನಾಳ

ಇಲ್ಲಿ ಉತ್ತರ ಪದದಲ್ಲಿ 'ಹಾಳ' ಇದ್ದು 'ಹ' ಲೋಪವಾಗುತ್ತದೆ.

ಡೊಮನಾಳ	(ಬಾಗ)	ಸನಾಳ	(ಬೀಳ)	ಗೋನಾಳ	(ಹುನ)
ದೇವನಾಳ	(ಬಾಗ)	ಚೆನ್ನಾಳ	(ಮುಧೋ)	ಯರನಾಯಕನಾಳ	(ಹುನ)
ಮುರನಾಳ	(ಬಾಗ)	ಪಾಪದನಾಳ	(ಹುನ)	ಒಡೆಯರಗೋನಾಳ	(ಹುನ)
ಸಿದ್ನಾಳ	(ಬಾಗ)	ಬಸವನಾಳ	(ಹುನ)	ಹನಮನಾಳ	(ಹುನ)
ಸಮಿನಾಳ	(ಬಾದಾ)	ಬೇವಿನಾಳ	(ಹುನ)	ಗೊರಜನಾಳ	(ಹುನ)
ಹಂಚಿನಾಳ	(ಬೀಳ)	ಉಪನಾಳ	(ಹುನ)	ಹುಲಗಿನಾಳ	(ಹುನ)
ಬಿಸನಾಳ	(ಬೀಳ)	ಚಿಕ್ಕನಾಳ	(ಹುನ)		

'ಪಟ್ಟಿ/ಹಟ್ಟಿ/ಮೆಟ್ಟಿ/ವಟ್ಟಿ/ಮಟ್ಟಿ; ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಪಟ್ಟಿ/ಹಟ್ಟಿ/ಮೆಟ್ಟಿ/ವಟ್ಟಿ. 'ಹಟ್ಟಿ' ಎಂದರೆ ದನಗಳನ್ನು ಕಟ್ಟುವ ಸ್ಥಳ ಕೊಟ್ಟಿಗೆ. 'ಪ'ಕಾರ 'ಹ' ಕಾರವಾಗಿದೆ. ಮಾನವ ತನ್ನ ಜೊತೆ ಪ್ರಾಣಿಗಳನ್ನು ಸಾಕುತ್ತಿದ್ದ. ಅವುಗಳನ್ನು ಒಂದೆಡೆ ಕೂಡಿಹಾಕುವ ಸ್ಥಳಕ್ಕೆ ಹಟ್ಟಿ ಎಂದು ಕರೆಯುತ್ತಿದ್ದ.

ಪಟ್ಟಿ

ಕಡಪಟ್ಟಿ (ಬಾಗ)

ಹಟ್ಟಿ

ತುಗಲಟ್ಟಿ	(ಬಾಗ)	ಯಲ್ಲಟ್ಟಿ	(ಜಮ)	ಸಂಗಾನಟ್ಟಿ	(ಮುಧೋ)
ಯತ್ನಟ್ಟಿ	(ಬೀಳ)	ಸಸಾಲಟ್ಟಿ	(ಜಮ)	ದಾದನಟ್ಟಿ	(ಮುಧೋ)
ಬನಹಟ್ಟಿ	(ಜಮ)	ದಾಸರಟ್ಟಿ	(ಜಮ)	ಲಕ್ಷಾನಟ್ಟಿ	(ಮುಧೋ)

ಇಲ್ಲಿ ಉತ್ತರಪದ ಹಟ್ಟಿಯಾಗಿದ್ದು ಹಕಾರ ಲೋಪವಾಗಿದೆ.

ಮೆಟ್ಟಿ

ಎಮ್ಮೆಟ್ಟಿ (ಹುನ)

ಮಟ್ಟಿ – ಎಂದರೆ ಮಣ್ಣಿನ ದಿನ್ನಿ

ಮಟ್ಟಿ

ಕಡ್ಲಿಮಟ್ಟಿ	(ಬಾಗ)	ಸೀಪರಮಟ್ಟಿ	(ಬಾದಾ)	ತೋಳಮಟ್ಟಿ	(ಬೀಳ)
ಮೂರಮಟ್ಟಿ	(ಬಾಗ)	ಕೆರಕಲಮಟ್ಟಿ	(ಬಾದಾ)	ವಜ್ರಮಟ್ಟಿ	(ಮುಧೋ)
ಬೇವಿನಮಟ್ಟಿ	(ಬಾಗ)	ಜಾನಮಟ್ಟಿ	(ಬೀಳ)	ಮದನಮಟ್ಟಿ	(ಜಮ)
ಭೈರಮಟ್ಟಿ	(ಬಾಗ)	ತುಂಬರಮಟ್ಟಿ	(ಬೀಳ)		

ವಟ್ಟಿ

ಒಡವಟ್ಟಿ (ಬಾದಾ)

ಪಳ್ಳಿ>ವಳ್ಳಿ>ಒಳ್ಳಿಯಾಗಿರಬಹುದಾದ ಸ್ಥಳನಾಮಗಳು

ಮುಗಳೊಳ್ಳಿ	(ಬಾಗ)	ಹುಲ್ಲೊಳ್ಳಿ	(ಹುನ)
ಕನ್ನೊಳ್ಳಿ	(ಜಮ)	ಕಲ್ಲೊಳ್ಳಿ	(ಜಮ)
ಕುಲ್ಲೊಳ್ಳಿ	(ಜಮ)		

'ಹಳ್ಳಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಪಳ್ಳಿ/ಹಳ್ಳಿ' ಇವು ಪಳ್ಳ>ಹಳ್ಳ>ಹಳ್ಳಿ ಆಗಿರಲು ಸಾಧ್ಯವಿದೆ. ಹಳ್ಳ ಎಂದರೆ ಸಣ್ಣ ಪ್ರವಾಹ ಎಂದು ಅರ್ಥ. ನೀರಿನ ಆಶ್ರಯದಲ್ಲಿ ಬೆಳೆದ ಸಣ್ಣ ಜನಸಂಖ್ಯೆ ಹೊಂದಿದ ಸ್ಥಳ–ಹಳ್ಳಿ.

ಹಳ್ಳಿ

ಮನಹಳ್ಳಿ	(ಬಾಗ)	ಕಟಕಿನಹಳ್ಳಿ	(ಬಾದಾ)	ಹೂವಿನಹಳ್ಳಿ	(ಹುನ)
ಯಡಹಳ್ಳಿ	(ಬಾಗ)	ಕುಲಹಳ್ಳಿ	(ಜಮ)	ಹೊನ್ನರಹಳ್ಳಿ	(ಹುನ)
ಹೊನರಳ್ಳಿ	(ಬಾಗ)	ಕೊಟ್ಟನಳ್ಳಿ	(ಬಾದಾ)	ಹೆಬ್ಬಳ್ಳಿ	(ಬಾದಾ)

ಇಲ್ಲಿ ಹಳ್ಳಿಯಲ್ಲಿಯ 'ಹ' ಲೋಪವಾಗಿದೆ.

'ಹಾಳ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಹಾಳ' ಎಂಬುದು 'ಪಾಳ್' ಎಂಬುದರಿಂದ ಬಂದಿದೆ. ಪಾಳ್>ಹಾಳ್>ಹಾಳು ಇದು ಬಂಜರು ಭೂಮಿಯನ್ನು ಒಣಭೂಮಿ ಪ್ರದೇಶವನ್ನು, ಸಾಗುವಳಿ ಇಲ್ಲದ ಪ್ರದೇಶವನ್ನು ಸೂಚಿಸುವುದು. ವ್ಯಕ್ತಿ ಇಲ್ಲವೆ ಇಂಥಲ್ಲಿ ಇರುವ ಊರುಗಳು ಕೊನೆಯಲ್ಲಿ 'ಹಾಳ' ಬರುವದು.

'ಹಾಳ'

ತೆಳಗಿನಹಾಳ	(ಬಾಗ)	ಹೊನ್ನಿಹಾಳ	(ಬೀಳ)	ಅಡಿಹಾಳ	(ಹುನ)
ಜಾಲಿಹಾಳ	(ಬಾದಾ)	ರೋಣಿಹಾಳ	(ಬೀಳ)	ಗಂಜಿಹಾಳ	(ಹುನ)
ಗಂಗನಬೂದಿಹಾಳ	(ಬಾದಾ)	ಗೋಡಿಹಾಳ	(ಬೀಳ)	ಕೋಡಿಹಾಳ	(ಹುನ)
ಬೂದಿಹಾಳ	(ಬಾದಾ)	ಮನ್ಮಥನಹಾಳ	(ಹುನ)	ಚಟ್ನಿಹಾಳ	(ಹುನ)
ನೀರಬೂದಿಹಾಳ	(ಬಾದಾ)	ಮಲ್ಲಿಗೆಹಾಳ	(ಹುನ)	ಕಂಬಳಿಹಾಳ	(ಹುನ)

'ಪುರ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ಪುರ; ಎಂದರೆ ಪಟ್ಟಣ.

ಪುರ

ಕದಾಮಪುರ	(ಬಾಗ)	ನಾಗಣಾಪುರ	(ಮುಧೋ)	ಸೋಮಲಾಪುರ	(ಹುನ)
ದೇವಲಾಪುರ	(ಬಾಗ)	ಮೇದಿನಾಪುರ	(ಹುನ)	ಇಸ್ಲಾಂಪುರ	(ಹುನ)

ಕಾಟಾಮುರ	(ಬಾಗ)	ಹರಿಣಾಪೂರ	(ಹುನ)	ಹೇಮಲಾಪುರ	(ಹುನ)
ಅಂತಾಪುರ	(ಮುಧೋ)	ಚಾಮಲಾಪುರ	(ಹುನ)		

'ಪೂರ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು. 'ಪೂರ' ಎಂಬುದು ವ್ಯಕ್ತಿವಾಚಕ.

'ಪೂರ'

ತಿಮ್ಮಾಪೂರ	(ಬಾಗ)	ಕಲ್ಲಾಪೂರ	(ಬಾದಾ)	ಸುಂಕಾಪೂರ	(ಹುನ)
ದೇವಲಾಪೂರ	(ಬಾಗ)	ಮಲ್ಲಾಪೂರ	(ಬಾದಾ)	ಚೀಲಾಪೂರ	(ಹುನ
ಸಂಗಾಪೂರ	(ಬಾಗ)	ಮಾರಾಪೂರ	(ಮುಧೋ)	ಪೋಚಾಪೂರ	(ಹುನ)
ಹನಮಾಪೂರ	(ಬಾಗ)	ಮಾಲಾಪೂರ	(ಮುಧೋ)	ಸೋಮಲಾಪೂರ	(ಹುನ)
ಕಂದಪೂರ	(ಬಾಗ)	ಸೈದಾಪೂರ	(ಮುಧೋ)	ಸಂಕ್ಲಾಪೂರ	(ಹುನ)
ಚೌಡಾಪೂರ	(ಬಾಗ)	ಲಿಂಗಾಪೂರ	(ಮುಧೋ)	ಹರಿಣಾಪೂರ	(ಹುನ)
ಖಾನಾಪೂರ	(ಬಾದಾ)	ಮಹಾಲಿಂಗಪೂರ	(ಮುಧೋ)	ಕೃಷ್ಣಾಪೂರ	(ಹುನ)
ನರಸಾಪೂರ	(ಬಾದಾ)	ಮುದ್ದಾಪೂರ	(ಮುಧೋ)	ಚನ್ನಾಪೂರ	(ಹುನ)
ರಾಘಾಪೂರ	(ಬಾದಾ)	ಲೋಕಾಪೂರ	(ಮುಧೋ)	ಆದಾಪೂರ	(ಹುನ)
ಲಖಮಾಪೂರ	(ಬಾದಾ)	ರಾಂಪೂರ	(ಜಮ)	ಮಾದಾಪೂರ	(ಹುನ)
ಲಿಂಗಾಪೂರ	(ಬಾದಾ)	ಸಿದ್ದಾಪೂರ	(ಜಮ)	ವೀರಾಪೂರ	(ಹುನ)

'ಬಾಡ/ವಾಡಿ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಬಾಡ=ಹಳ್ಳಿ, ಬಾಡ-ವಾಡ-ವಾಡಿ

ವಾಡ

ಜಂಗವಾಡ (ಬಾದಾ) ತಳಕವಾಡ (ಬಾದಾ) ಜನವಾಡ (ಜಮ)

ಟಕ್ಕವಾಡ>ಟಕ್ಕೋಡ (ಜಮ)

ವಾಡಿ

ಅನಗವಾಡಿ (ಬೀಳ) ಕಂಕಣವಾಡಿ (ಜಮ) ಸಮೀರವಾಡಿ (ಮುಧೋ)

'ಬಾಳ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

ಪಾಳ ಅಂದರೆ ಊರು. ಗದಬಾದೇಶ ಸಂಧಿ ನಿಯಮಕ್ಕನುಸರಿಸಿ 'ಬಾಳ' ಎಂದಾಗಿದೆ.

ಬಾಳ

ಗುಳಬಾಳ (ಬಾಗ) ದಾಸಬಾಳ (ಹುನ)

ಆಲಬಾಳ (ಜಮ) ಗೋರಬಾಳ (ಹುನ)

'ವಾಟ' ಎಂಬ ಉತ್ತರ ಪದದಿಂದ ಕೊನೆಗೊಳ್ಳುವ ಸ್ಥಳನಾಮಗಳು

'ವಾಟ' ಇದು ಉದ್ಯಾನ, ತೋಟಗಳನ್ನು ಸೂಚಿಸುವದು.

ವಾಟ

ಉಗಲವಾಟ (ಬಾದಾ)

ಈ ವರೆಗಿನ ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳ ವಿವಿಧ ರೀತಿಯ ವರ್ಗೀಕರಣದಿಂದ ಹಲವಾರು ರೀತಿಯಲ್ಲಿ ಪ್ರಯೋಜನಗಳು ಕಂಡುಬರುತ್ತವೆ.

೧. ಬಾಗಲಕೋಟೆ ಜಿಲ್ಲೆಯಲ್ಲಿ ಸಂಸ್ಕೃತಿಯು ಹಂತ-ಹಂತವಾಗಿ ಬೆಳೆಯುತ್ತ ಬಂದಿರುವುದು ತಿಳಿಯುತ್ತದೆ.

೨. ನೈಸರ್ಗಿಕ, ಸಾಂಸ್ಕೃತಿಕ, ನಿರ್ವಸತಿವಾಚಕ, ವಸತಿವಾಚಕಗಳೆಂದು ಭಿನ್ನ-ಭಿನ್ನ ಮಾಡಿ ಗುರುತಿಸಿರುವುದರಿಂದ ಅವುಗಳನ್ನು ವಿಂಗಡಿಸಿ ಅರ್ಥೈಸಲು ಸುಲಭವಾಗುತ್ತದೆ.

೩. ವ್ಯಾಕರಣಾತ್ಮಕವಾಗಿ ವಿವೇಚಿಸಲು ಅನುಕೂಲವಾಗುತ್ತದೆ.

೪. ಸಂಕೀರ್ಣವಾಗಿ ಇರುವ ಸ್ಥಳನಾಮಗಳನ್ನು ಅವುಗಳದೇ ಆದ ರೀತಿಯಲ್ಲಿ ಅರ್ಥಮಾಡಲು ಸಾಧ್ಯವಾಗುತ್ತದೆ.

ಅಡಿಟಿಪ್ಪಣಿಗಳು

೧. ಬೆಳವಲದ ಬೆಡಗು: (ಲೇ) ಸಿದ್ದರಾಜ ಪೂಜಾರಿ, ಜಯವಂತ ಕಾಡದೇವರ, ಪು. ೭

೨. ವಿಜಾಪೂರ ಜಿಲ್ಲೆ ಭಾರತ ಗ್ಯಾಸೆಟೀಯರ್ ಕರ್ನಾಟಕ ರಾಜ್ಯ: (ಮು.ಸಂ.), ಡಾ. ಆರ್. ಮುನಿಸ್ವಾಮಿ, ಪು. ೪೮

೩. 'ಬಸವಸಿರಿ' ಸ್ಮರಣ ಸಂಚಿಕೆ: ೨೦೦೮, (ಗೌ.ಸಂ.) ಪ್ರಕಾಶ, ಈ. ತಪಶೆಟ್ಟಿ, ಪು. ೭೧

೪. ಕ.ವಿ.ವಿ.ಶಾ.ಸಂ. ೯ : (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೫೪

೫. ಬಾದಾಮಿ ಸಾಂಸ್ಕೃತಿಕ ಅಧ್ಯಯನ: ಡಾ. ಶೀಲಾಕಾಂತ ಪತ್ತಾರ, ಪು. ೧೫೪

೬. ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ: (ಲೇ) ಫಾಲಾಕ್ಷ, ಪು. ೨೮೩

೭. ಮಹಾಮಾರ್ಗ: (ಸಂ) ಸದಾನಂದ ಕನವಳ್ಳಿ ಮತ್ತು ವೀರಣ್ಣ ರಾಜೂರ, ಪು. ೧೫೯-೧೬೦

೮. ನಾಮ ವಿಜ್ಞಾನ: ಎಂ.ಎಂ.ಕಲಬುರ್ಗಿ ಪು. ೬೦-೬೧

೯. ಸಂಸ್ಕೃತ ಕನ್ನಡ ನಿಘಂಟು: ಜಿ.ಎನ್.ಚಕ್ರವರ್ತಿ, ಪು. ೬೪೮

೧೦. ನಾಮ ವಿಜ್ಞಾನ: ಎಂ.ಎಂ.ಕಲಬುರ್ಗಿ ಪು. ೮೪

ಅಧ್ಯಾಯ ೪

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳ ಭಾಷಿಕ ವಿವೇಚನೆ

ಅ. ಮೂಲ ಶಬ್ದಗಳು

ಆ. ತದ್ಧಿತಾಂತಗಳು

ಇ. ಸಾಮಾಸಿಕಗಳು

ಅಧ್ಯಾಯ ೪

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳ ಭಾಷಿಕ ವಿವೇಚನೆ

ಪ್ರತಿ ಭಾಷೆಗೂ ಒಂದು ನಿಯತಿಯಿದೆ. ಅದನ್ನು ಮೀರಿದರೆ ಆ ಭಾಷೆ ತನ್ನ ಸ್ವರೂಪವನ್ನು, ಸತ್ವವನ್ನು ಕಳೆದುಕೊಳ್ಳುತ್ತದೆ. ಇಂತಹ ನಿಯತಿಯನ್ನು ಹೇಳುವ ಶಾಸ್ತ್ರವೇ ವ್ಯಾಕರಣ. ಈ ವ್ಯಾಕರಣದಿಂದ ಇಷ್ಟಸಿದ್ಧಿ ಪ್ರಾಪ್ತವಾಗುತ್ತದೆ. ಅದನ್ನೇ ಕೇಶಿರಾಜನು

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ
ಲೋಕಂ ತತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ ॥೧೦॥

ಹೀಗೆ ಹೇಳಿದ್ದಾನೆ. ಅಂದರೆ ಇಷ್ಟಾರ್ಥಸಿದ್ಧಿಯಾಗಬೇಕಾದರೆ ಪದಸಿದ್ಧಿ ಬೇಕೆಂದಾಯಿತು. ನಾವಿಲ್ಲಿ ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡಬೇಕಾದುದರಿಂದ ಅವುಗಳ ಇಂಗಿತಾರ್ಥವನ್ನು ಅರಿಯಬೇಕಾದುದು ಅತ್ಯಾವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ಶಬ್ದಸಿಧ್ಯರ್ಥವಾಗಿರುವ ವ್ಯಾಕರಣಾಂಶಗಳನ್ನು ವಿವೇಚಿಸೋಣ.

ಪ್ರತಿಯೊಂದು ಭಾಷೆಯೂ ಉಗಮಸ್ಥಾನದಲ್ಲಿ ಸಣ್ಣದಾಗಿಯೆ ಇರುತ್ತದೆ. ಇಲ್ಲಿ ಅಂದಂದಿನ ಜೀವನಾವಶ್ಯಕತೆಗನುಗುಣವಾಗಿ ಅದು ತನ್ನ ಶಬ್ದಗಳನ್ನು ಸೃಷ್ಟಿಸಿಕೊಳ್ಳುತ್ತ ಹೋಗುತ್ತದೆ. ಹೀಗೆ ಸೃಷ್ಟಿಸಿಕೊಂಡ ಶಬ್ದಗಳು ಪ್ರತಿ ಭಾಷೆಯಲ್ಲಿಯೂ ಇರುತ್ತವೆ. ಅವು ಆ ಭಾಷೆಯ ಜಾಯಮಾನಕ್ಕನುಗುಣವಾಗಿಯೇ ಇರುತ್ತವೆ. ಇವಕ್ಕೆ ಆ ಭಾಷೆಯ ಮೂಲ ಶಬ್ದಗಳೆನ್ನುತ್ತಾರೆ. ಈ ಶಬ್ದಗಳಿಂದ ಸಾಮಾನ್ಯವಾಗಿ ವ್ಯವಹಾರ ನಡೆಯುತ್ತದೆ.

ಇದು ಒಂದು ಹಂತಕ್ಕೆ ಮುಟ್ಟಿದಾಗ ಮೂಲ ಶಬ್ದಗಳ ಜೊತೆಗೆ ಕೆಲವು ಶಬ್ದಗಳನ್ನು ನಿಷ್ಪನ್ನ ಮಾಡಿಕೊಳ್ಳತೊಡಗುತ್ತಾನೆ ಮನುಷ್ಯ. ಇಂತಹ ಶಬ್ದಗಳಿಗೆ ಕೃದಂತಗಳು, ತದ್ಧಿತಾಂತಗಳು ಮತ್ತು ಸಮಾಸಗಳೆಂದು ಕರೆಯಲಾಗುತ್ತದೆ.

ಗ್ರಾಮ ನಾಮಗಳು ಆಯಾ ಪ್ರದೇಶವನ್ನು, ಆಯಾ ಭಾಷೆಯನ್ನು ಅವಲಂಬಿಸಿಯೆ ಇರುತ್ತವೆ. ಆದ್ದರಿಂದ ಇವುಗಳಲ್ಲಿಯೂ ಕೆಲವು ಗ್ರಾಮನಾಮಗಳು ಮೂಲರೂಪದಲ್ಲಿಯೆ ಇದ್ದರೆ, ಇನ್ನು ಕೆಲವು ನಿಷ್ಪನ್ನಶಬ್ದಗಳಾಗಿರುತ್ತವೆ. ಹಾಗೆಯೆ ದೇಶ್ಯಶಬ್ದಗಳ ಜೊತೆಗೆ ಅನ್ಯದೇಶ್ಯ ಶಬ್ದಗಳೂ ಸೇರ್ಪಡೆಯಾಗಿರುತ್ತವೆ.

ಸಾಮಾನ್ಯವಾಗಿ ಗ್ರಾಮನಾಮಗಳಲ್ಲಿ ನಿಷ್ಪನ್ನ ಶಬ್ದಗಳೇ ಹೆಚ್ಚು. ಅವುಗಳಲ್ಲಿಯೂ ಸಮಸ್ತಪದಗಳು ಗಣನೀಯ ಪ್ರಮಾಣದಲ್ಲಿದ್ದರೆ ತದ್ಧಿತಾಂತಗಳು, ಮೂಲಶಬ್ದಗಳು ಅವುಗಳನ್ನು ಹಿಂಬಾಲಿಸುತ್ತವೆ. ಆದರೆ ಕೃದಂತ ಶಬ್ದಗಳು ಸಿಗುವುದು ತೀರ ವಿರಳ.

ಅ. ಮೂಲ ಶಬ್ದಗಳು

ಕೆಲವು ಶಬ್ದಗಳೆ ಸ್ಥಳನಾಮಗಳಾಗುತ್ತವೆ.

೧. ದೇವತಾವಾಚಕಗಳು

ಅಮರಾವತಿ (ಹುನ), ಬಾದಾಮಿ (ಬಾದಾ), ಕಿತ್ತಡಿ>ಕಿತ್ತಲಿ (ಬಾದಾ) ಭಗವತಿ (ಬಾಗ), ಸಂಗಮ (ಹುನ)

೨. ಸಸ್ಯವಾಚಕಗಳು

ತುಂಬಿ (ಹುನ) ನಾಗಸಂಪಿಗೆ (ಬಾಗ) ಲವಳಸರ (ಹುನ), ಹುಣಸಿ (ಸಬ್ಬಲ) (ಬಾದಾ), ಹುಲಗಿ (ಹುಲಗಿಲ್)(ಹುನ)

೩. ಪ್ರಾಣಿವಾಚಕಗಳು

ಕರಡಿ (ಹುನ)

೪. ವಸ್ತುವಾಚಕಗಳು

ಕಡಿವಾಳ (ಹುನ), ಕಳಸ (ಬಾದಾ), ಮಂಕಣಿ (ಬಾಗ) ಸೊನ್ನ (ಬೀಳ), ಸುನಗ (ಬೀಳ)

೫. ವಸತಿವಾಚಕಗಳು

ಕೊಪ್ಪ ಎಸ್.ಕೆ. (ಬೀಳ), ಕೊಪ್ಪ ಎಸ್.ಎಂ. (ಹುನ) ಕೊಪ್ಪ ಎಸ್.ಆರ್. (ಬೀಳ) ಖ್ಯಾಡ (ಬಾದಾ) ಖೇಟ>ಖೇಡ>ಖ್ಯಾಡ

೬ ಸಂಕೀರ್ಣ

ಗೋಠೆ (ಜಮ) ಗೋಷ್ಠಿ>ಗೊಟ್ಟಿ>ಗೊಟ್ಟೆ>ಗೋಟೆ

ನಸಬಿ (ಹಿರೇ) (ಬಾದಾ)

ಬುದ್ನಿ (ಜಮ) ರೂಗಿ (ಮುಧೋ)

ಬುದ್ನಿ ಪಿ.ಎಂ. (ಮುಧೋ)

ಬುದ್ನಿ ಕೆ.ಡಿ. (ಮುಧೋ)

ಬುದ್ನಿ ಪಿ.ಡಿ. (ಮುಧೋ)

ಬುದ್ನಿ ಬಿ.ಕೆ. (ಮುಧೋ)

ಆ. ತದ್ಧಿತಾಂತಗಳು

ನಿಷ್ಪನ್ನ ಶಬ್ದಗಳಲ್ಲಿ ತದ್ಧಿತ ವಿಧಾನವೂ ಒಂದು. ಈ ವಿಧಾನದಲ್ಲಿ ಒಂದು ನಾಮದಿಂದ ಇನ್ನೊಂದು ನಾಮವು ನಿರ್ಮಾಣವಾಗುತ್ತದೆ. ಇದಕ್ಕೆ ತದ್ಧಿತನಾಮವೆನ್ನುತ್ತಾನೆ. ಈ ಇನ್ನೊಂದು ನಾಮವನ್ನು ನಿರ್ಮಾಣ ಮಾಡುವಾಗ ಮೂಲನಾಮಕ್ಕೆ ಕೆಲವು ಪ್ರತ್ಯಯಗಳನ್ನು ಹಚ್ಚಲಾಗುತ್ತದೆ.

ಗ್ರಾಮಗಳಲ್ಲಿಯೂ ತದ್ಧಿತನಾಮಗಳು ಕಂಡುಬರುತ್ತವೆ. ಬಾಗಲಕೋಟೆ ಜಿಲ್ಲೆಯು ಇದಕ್ಕೆ ಹೊರತಾಗಿಲ್ಲ. ಇಲ್ಲಿಯೂ ತದ್ಧಿತನಾಮಗಳು ಇರುವ ಗ್ರಾಮಗಳು ದೊರೆಯುತ್ತವೆ.

೧. ಕಿ – ಒಂದು ಪದಾರ್ಥವು (ವನಸ್ಪತಿ) ಇಲ್ಲಿ ಬೆಳೆಯುವುದು ಎಂಬ ಅರ್ಥದಲ್ಲಿ 'ಕಿ' ಪ್ರತ್ಯಯ ಬರುತ್ತದೆ.

ಕಾತರ+ಕಿ = ಕಾತರಕಿ (ಬಾದಾ) ಒಂದು ಬಗೆಯ ಮುಳ್ಳಿನ ಕಂಟಿ.

ಕಾತರ+ಕಿ = ಕಾತರಕಿ (ಬೀಳ)

ಚಿಕ್ಕಲ+ಕಿ = ಚಿಕ್ಕಲಕಿ (ಜಮ) ಒಂದು ಬಗೆಯ ಹುಲ್ಲು.

ಟಕ್ಕಳ+ಕಿ = ಟಕ್ಕಳಕಿ (ಜಮ)

ಟಕ್ಕಳ+ಕಿ = ಟಕ್ಕಳಕಿ (ಬೀಳ)

ಹಲ+ಕಿ = ಹಲಕಿ (ಮುಧೋ)

೨. ಇಗೆ – ಇದು ಉಳ್ಳುದು ಎಂಬರ್ಥದಲ್ಲಿ 'ಇಗೆ' ಪ್ರತ್ಯಯ ಬರುತ್ತದೆ. ಈ 'ಇಗೆ' ಯು 'ಅಗಿ' ಆಗುತ್ತದೆ. ಇಲ್ಲಿ ಪೂರ್ವಪದಾಂತ್ಯ ಸ್ವರಲೋಪವಾಗುತ್ತದೆ.

i. ಮೂಲ ಶಬ್ದಗಳಿಗೆ

ಅಂಕಲ+ಇಗೆ = ಅಂಕಲಿಗೆ>ಅಂಕಲಗಿ (ಬಾಗ)

ಇಂಗಳ+ಇಗೆ = ಇಂಗಳಿಗೆ>ಇಂಗಳಗಿ (ಬಾಗ)

ಇಂಗಳ+ಇಗೆ = ಇಂಗಳಿಗೆ>ಇಂಗಳಗಿ (ಹುನ)

ಇಂಗಳ+ಇಗೆ = ಇಂಗಳಿಗೆ>ಇಂಗಳಗಿ (ಮುಧೋ)

ಇದ್ದಿಲು+ಇಗೆ = ಇದ್ದಿಲಿಗೆ>ಇದ್ದಲಿಗೆ

ಇದ್ದಲಗಿ (ಹುನ) ಇಲ್ಲಿ ಇದ್ದಲು>ಇದ್ದಲ ಎಂದಾಗಿದೆ

ಕಲಾದ+ಇಗೆ = ಕಲಾದಿಗೆ>ಕಲಾದಗಿ(ಬಾಗ)

ಕವಟ+ಇಗೆ = ಕವಟಿಗೆ>ಕವಟಗಿ (ಜಮ)

ಕುಂದರು+ಇಗೆ = ಕುಂದರಿಗೆ>ಕುಂದರಗಿ (ಬೀಳ) 'ಕುಂದರು' ಎಂಬ ಜನಾಂಗವಿರುವ ನಾಡಿನ ಮುಖ್ಯ ಗ್ರಾಮ.

ಕಮತ+ಇಗೆ = ಕಮತಿಗೆ>ಕಮತಗಿ (ಹುನ)

ಚಿತ್ತರು+ಇಗೆ = ಚಿತ್ತರಿಗೆ>ಚಿತ್ತರಗಿ (ಹುನ) 'ಚಿತ್ತರು' ಎಂಬ ಜನಾಂಗವಿರುವ ಗ್ರಾಮ

ಚಿಮ್ಮಲ+ಇಗೆ = ಚಿಮ್ಮಲಿಗೆ>ಚಿಮ್ಮಲಗಿ (ಬಾದಾ)

ಜಂಬು+ಇಗೆ = ಜಂಬಿಗೆ>ಜಂಬಗಿ (ಜಮ) ಚಿಕ್ಕ

ಜಂಬು+ಇಗೆ = ಜಂಬಿಗೆ>ಜಂಬಗಿ (ಜಮ) ಹಿರೇ

ಜಂಬು+ಇಗೆ = ಜಂಬಿಗೆ>ಜಂಬಗಿ (ಮುಧೋ) ಕಸಬಾ

ಜಂಬು+ಇಗೆ = ಜಂಬಿಗೆ>ಜಂಬಗಿ (ಮುಧೋ) ಗುಳಗಾಲ

ಜಂಬು+ಇಗೆ = ಜಂಬಿಗೆ>ಜಂಬಗಿ (ಮುಧೋ) ಕೆ.ಡಿ.

ಜಂಬಿಗೆಗಳು ಅನೇಕವಿದ್ದುದರಿಂದ ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸುವ ಸಲುವಾಗಿ ಹಿಂದೆ ಚಿಕ್ಕ, ಹಿರೇ, ಕಸಬಾ, ಗುಳಗಾಲ ಎಂಬಂತಹ ವಿಶೇಷಣಗಳನ್ನು ಬಳಸಲಾಗಿದೆ. ಜನರೂ ಹೀಗೆಯೇ ಕರೆಯುತ್ತಾರೆ.

ತುರುಡು+ಇಗೆ = ತುರುಡಿಗೆ>ತುರುಡಗಿ (ಹುನ)

ನಾವಲ+ಇಗೆ = ನಾವಲಿಗೆ>ನಾವಲಗಿ (ಜಮ)

ನೀರಲ+ಇಗೆ = ನೀರಲಿಗೆ>ನೀರಲಗಿ (ಬಾದಾ)

ನೆಲವು+ಇಗೆ = ನೆಲವಿಗೆ>ನೆಲವಗಿ (ಬಾದಾ)

ಪಡಸಲ+ಇಗೆ = ಪಡಸಲಗೆ>ಪಡಸಲಗಿ (ಜಮ) ಚಿಕ್ಕ

ಪಡಸಲ+ಇಗೆ = ಪಡಸಲಗೆ>ಪಡಸಲಗಿ (ಜಮ) ಹಿರೇ

ಪಡಸಲಗಿಗಳು ಎರಡು ಇದ್ದು ಒಂದನ್ನು ಚಿಕ್ಕ ಪಡಸಲಗಿ ಎಂದೂ ಇನ್ನೊಂದನ್ನು ಹಿರೇಪಡಸಲಗಿ ಎಂದೂ ಕರೆಯಲಾಗುತ್ತದೆ. 'ಪಡಸಲ್' ಎಂದರೆ 'ನಾವೆ' ನಿಲ್ಲುವ ಸ್ಥಳ.

ಬರ+ಇಗೆ = ಬರಿಗೆ>ಬರಗಿ (ಮುಧೋ)

ಬಾಡ+ಇಗೆ = ಬಾಡಿಗೆ>ಬಾಡಗಿ (ಬೀಳ) (ಬೂದ್ಯಾಳ)

ಅಥಣಿ ತಾಲೂಕಿನಲ್ಲಿಯೂ ಒಂದು ಬಾಡಿಗೆ ಇದ್ದು ಅದನ್ನು ಅದರ ಪಕ್ಕದ ಊರಾದ ಅರಟಾಳದಿಂದ–ಅರಬಾಳ ಬಾಡಿಗೆಯೆಂದೂ ಬೀಳಗಿ ತಾಲೂಕಿನಲ್ಲಿರುವ ಇದನ್ನು ಇದರ ಪಕ್ಕದ ಊರಾದ ಬೂದ್ಯಾಳದಿಂದ ಬೂದ್ಯಾಳದ ಬಾಡಿಗೆಯೆಂದೂ ಕರೆಯಲಾಗುತ್ತದೆ.

ಬೀಳ+ಇಗೆ = ಬೀಳಿಗೆ>ಬೀಳಗಿ (ಬೀಳ)

ಬೆಳ್ಳಲು+ಇಗೆ = ಬೆಳ್ಳಲಿಗೆ>ಬೆಳ್ಳಿಗೆ (ಜಮ)

ಬೆಳ್ಳಲ್+ಇಗೆ = ಬೆಳ್ಳಲಿಗೆ>ಬೆಳ್ಳಿಗೆ (ಜಮ) ಕಾಯಿ

ಬೆಳ್ಳಲಿಗೆ>ಕಾಜಿ ಬೆಳ್ಳಿಗೆ

ಕಲ್ಲ ಬೆಳ್ಳಲಿಗೆ>ಕಲಬೆಳ್ಳಿಗೆ

ಶಾಸನದಲ್ಲಿ ಕಾಯಿಬೆಳ್ಳಲಿಗೆ ಎಂದಿದೆ.

ಬೆಳ್ಳಿಗೆ ಎನ್ನುವ ಎರಡು ಊರುಗಳಿದ್ದು ಒಂದನ್ನು ಕಲ್ಲ>ಕಲಬೆಳ್ಳಿಗೆ ಎಂದೂ ಇನ್ನೊಂದನ್ನು ಕಾಜೀಬೆಳ್ಳಿಗಿ ಎಂದೂ ಕರೆಯುತ್ತಾರೆ. ಇಲ್ಲಿ ಇಗೆ>ಇಗಿ ಎಂದಾಗಿದೆ.

ಇತ್ತೀಚೆಗೆ ಬೀಳಗಿಯ ಪ್ರಭಾವದಿಂದ ಕಲಬೀಳಗಿ, ಕಾಜಿಬೀಳಗಿ ಎಂದು ಅನುಕರಿಸಲಾಗುತ್ತಿದೆ. ಇದರಿಂದ ಕಾಲಾಂತರದಲ್ಲಿ ಇವುಗಳ ನಿಷ್ಪತ್ತಿಯೇ ತಿಳಿಯದಂತಾಗುತ್ತದೆ. ಶಾಸನದಲ್ಲಿ ಕಾಯಿ ಬೆಳ್ಳಲಿಗೆ ಎಂದಿದ್ದು 'ಕಾಜಿಬೆಳ್ಳಿಗೆ' ಎಂದು ಹೇಗಾಯಿತೋ ತಿಳಿಯುವದಿಲ್ಲ.

ರಂಜಣಿ+ಇಗೆ = ರಂಜಣಿಗೆ>ರಂಜಣಗಿ (ಮುಧೋ)

ರಂಜನ = ನೀಲಿಗಿಡ, ನೀರು ತುಂಬಲು ಮಣ್ಣಿನಿಂದ ದೊಡ್ಡದೊಂದು ಪಾತ್ರೆಯನ್ನು ಮಾಡುತ್ತಿದ್ದು ಅದಕ್ಕೂ 'ರಂಜಣಿಗೆ' ಎಂದೇ ಹೆಸರು. ಹಿಂದಿನ ಕಾಲದಲ್ಲಿ ಇವೆರಡಕ್ಕೂ ಏನಾದರೂ ಸಂಬಂಧ ಇದ್ದರೂ ಇರಬಹುದು.

ರಕ್ಕಸ+ಇಗೆ = ರಕ್ಕಸಿಗೆ>ರಕ್ಕಸಗಿ (ಹುನ)

ಮಹಿಷ ಊರು, ವಾತಾಪಿ ಊರು ಇರುವಂತೆ ರಕ್ಕಸರು ಇದ್ದ ಊರು ಇದಾಗಿರಬಹುದು.

ಸಾವಳ+ಇಗೆ = ಸಾವಳಿಗೆ>ಸಾವಳಗಿ (ಜಮ)

ಸಿಂದಿ+ಇಗೆ = ಸಿಂದಿಗೆ>ಸಿಂದಗಿ (ಬಾಗ)

ಹಂಗರು+ಇಗೆ = ಹಂಗರಿಗೆ>ಹಂಗರಗಿ (ಬಾದಾ) 'ಹಂಗರು' ಎಂಬ ಜನಾಂಗವಿರುವ ಊರು.

ಹಿಪ್ಪರು+ಇಗೆ = ಹಿಪ್ಪರಿಗೆ>ಹಿಪ್ಪರಗಿ (ಜಮ) 'ಹಿಪ್ಪರು' ಎಂಬ ಜನಾಂಗವಿರುವ ಊರು.

ಹಂಗರು, ಹಾವರು, ಹಿಪ್ಪರು ಎನ್ನುವ ಈ ಯಾವ ಜನಾಂಗವೂ ಆಯಾ ಊರುಗಳಲ್ಲಿದ್ದುದು ಇಂದು ಕಂಡುಬರುವುದಿಲ್ಲ.

ii. ಸಮಾಸದ ಮುಂದೆ

ಮುಮ್ಮಣ್ಣು+ಇಗೆ = ಮುಮ್ಮಣಿಗೆ>ಮುಮ್ಮಣಗಿ (ಬಾಗ)

ಮೂರು ಮಣ್ಣು–ಮುಮ್ಮಣ್ಣು = ಇದು ದ್ವಿಗು ಸಮಾಸ

ಈ ಸಮಸ್ತ ಪದಕ್ಕೆ ಮುಂದೆ 'ಇಗೆ' ತದ್ಧಿತ ಪ್ರತ್ಯಯ ಹತ್ತಿದೆ.

iii. ವಾಡದ ಮುಂದೆ

'ಇಗೆ' ಎಂಬ ಈ ತದ್ಧಿತ ಪ್ರತ್ಯಯವು ಬಾಡ>ವಾಡ = ಗ್ರಾಮ ಎಂಬ ಅರ್ಥವಿರುವ ತತ್ಪುರುಷ ಸಮಾಸದ ಮುಂದೆಯೂ ಬರುತ್ತದೆ.

ಅಮರರ+ವಾಡ+ಇಗೆ = ಅಮರವಾಡಿಗೆ>ಅಮರವಾಡಗಿ (ಹುನ)

ಅಮರರು–ದೇವತೆಗಳು ಇರುವ ಊರು

ಖೈರರ+ವಾಡ+ಇಗೆ = ಖೈರವಾಡಿಗೆ>ಖೈರವಾಡಗಿ (ಹುನ)

ಚಿತ್ತರ+ವಾಡ+ಇಗೆ = ಚಿತ್ತವಾಡಿಗೆ>ಚಿತ್ತವಾಡಗಿ (ಹುನ)

ನಂದರ+ವಾಡ+ಇಗೆ = ನಂದವಾಡಿಗೆ>ನಂದವಾಡಗಿ (ಹುನ)

ಬಾದರ+ವಾಡ+ಇಗೆ = ಬಾದವಾಡಿಗೆ>ಬಾದವಾಡಗಿ (ಹುನ) ಚಿಕ್ಕ

ಬಾದರ+ವಾಡ+ಇಗೆ = ಬಾದವಾಡಿಗೆ>ಬಾದವಾಡಗಿ (ಹುನ) ಹಿರೇ

ಬಾದವಾಡಿಗೆ ಎನ್ನುವವು ಎರಡು ಇರುವದರಿಂದ ಒಂದನ್ನು ಚಿಕ್ಕಬಾದವಾಡಿಗೆ ಎಂದೂ ಇನ್ನೊಂದನ್ನು ಹಿರೇಬಾದವಾಡಗಿ ಎಂದೂ ಕರೆಯುತ್ತಾರೆ.

ಬಿಂಜನ+ವಾಡ+ಇಗೆ = ಬಿಂಜವಾಡಿಗೆ>ಬಿಂಜವಾಡಗಿ (ಹುನ)

ರಾಮನ+ವಾಡ+ಇಗೆ = ರಾಮವಾಡಿಗೆ>ರಾಮವಾಡಗಿ (ಹುನ)

ಹೇಮನ+ವಾಡ+ಇಗೆ = ಹೇಮವಾಡಿಗೆ>ಹೇಮವಾಡಗಿ (ಹುನ)

ಇಲ್ಲಿ ಬರುವ ಈ ೯ ಊರುಗಳು ಹುನಗುಂದ ತಾಲೂಕು ಒಂದರಲ್ಲಿಯೇ ಇರುವದು ಒಂದು ವಿಶೇಷ.

೩. ಇ ಪ್ರತ್ಯಯ

ಇ –ಒಂದು ವಸ್ತುವು (ವಿಷಯ) ಇದೆ ಎಂಬರ್ಥದಲ್ಲಿ 'ಇ' ಬರುತ್ತದೆ. ಆಗ ಹಿಂದಿನ ಸ್ವರವು ಲೋಪವಾಗುತ್ತದೆ.

ಕಿಶೋರ = ಕಿಸೋರ+ಇ = ಕಿಸೋರಿ (ಮುಧೋ)

ಕುಳಲ್+ಇ = ಕುಳಲಿ (ಮುಧೋ)

ಕೊರೆತ+ಇ = ಕೊರತಿ>ಕೊರ್ತಿ (ಬೀಳ)

ಛಬ್ಬ+ಇ = ಛಬ್ಬಿ (ಬಾಗ)

ತೆಗ್ಗು+ಇ = ತೆಗ್ಗಿ (ಬೀಳ)

ಪರ್ವತ+ಇ = ಪರ್ವತಿ (ಬಾದಾ)

ಬಿದಿರು+ಇ = ಬಿದಿರಿ>ಬಿದರಿ (ಜಮ)

ಬಿದಿರು+ಇ = ಬಿದಿರಿ>ಬಿದರಿ (ಮುಧೋ)

ಮಳಲು+ಇ = ಮಳಲಿ (ಮುಧೋ)

ಮಾಗ+ಇ = ಮಾಗಿ (ಹುನ)

ಮುರುಡ+ಇ = ಮುರುಡಿ (ಬಾದಾ)

ಮುರುಡ+ಇ = ಮುರುಡಿ (ಹುನ)

ರೊಳ್ಳ+ಇ = ರೊಳ್ಳಿ (ಬೀಳ)

ಇ. ಸಾಮಾಸಿಕಗಳು

ನಿಷ್ಪನ್ನ ಶಬ್ದಗಳಲ್ಲಿ ಸಮಾಸ ವಿಧಾನವು ಬಹುಮುಖ್ಯವಾದುದು. ಇದು ಆ ಭಾಷೆಯ ಶಬ್ದ ಸಂಪತ್ತಿಯನ್ನು ಹೆಚ್ಚಿಸುವಲ್ಲಿ ಕಾರಣೀಭೂತವಾಗುತ್ತದೆ. ಮತ್ತು ಆ ಭಾಷೆಯ ಸೌಂದರ್ಯವನ್ನು ವರ್ಧಿಸಿ ಅದಕ್ಕೆ ಒಂದು ರೀತಿಯ ಬಿಗುವನ್ನು ತಂದುಕೊಡುತ್ತದೆ.

ಅಲ್ಲದೆ 'ಅರ್ಥವತ್ ಸಮಾಸಃ' ಸಮಾಸವು ಅರ್ಥವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಸ್ಥಳನಾಮಗಳ ಅರ್ಥವನ್ನು ಗುರುತಿಸಿ, ವಿವರಿಸುವದರಿಂದ ಅವುಗಳ ಸ್ಫುಟವಾದ ಅರ್ಥ ದೊರೆಯುತ್ತದೆ. ಆದ್ದರಿಂದ ಬಾಗಲಕೋಟೆ ಜಿಲ್ಲೆಯಲ್ಲಿ ದೊರೆಯುವ ಸ್ಥಳನಾಮಗಳಲ್ಲಿ ಕಂಡುಬರುವ ಸಾಮಾಸಿಕ ಶಬ್ದಗಳನ್ನು ಇಲ್ಲಿ ವಿವರಿಸಲಾಗುತ್ತದೆ.

"ಎರಡು ಇಲ್ಲವೆ ಹಲವು ನಾಮಪದಗಳು– ಕೆಲವೊಮ್ಮೆ ಕ್ರಿಯಾಪದಗಳು– ಅನ್ಯೋನ್ಯವಾಗಿ ಕೂಡಿಕೊಂಡು ಅರ್ಥವೀಯುವ ಬೇರೊಂದು ಪದವಾಗುವದಕ್ಕೆ ಸಮಾಸವೆನ್ನುವರು. ಈ ವಿಧಿಗನುಸರಿಸಿ ಇದರಲ್ಲಿ ಎರಡು ಪ್ರಕಾರಗಳು– ೧. ಲುಕ್ ಸಮಾಸ ೨. ಅಲುಕ್ ಸಮಾಸ."[೧]

೧. ಲುಕ್ ಸಮಾಸ

ಸಮಾಸ ಕಾರ್ಯ ನಡೆಯುವಾಗ ಮಧ್ಯದಲ್ಲಿರುವ ವಿಭಕ್ತಿಗಳು ಲೋಪವಾಗುವ ವಿಧಾನಕ್ಕೆ ಲುಕ್ ಸಮಾಸ ಎನ್ನುವರು. ಇದರಲ್ಲಿ ಪೂರ್ವೋತ್ತರ ಪದಗಳ ಪ್ರಾಮುಖ್ಯತೆಯ ಮೇಲಿಂದ

೧. ಉತ್ತರ ಪದಾರ್ಥ ಪ್ರಧಾನ: i. ತತ್ಪುರುಷ ii. ಕರ್ಮಧಾರಯ iii. ದ್ವಿಗು iv. ಕ್ರಿಯಾ ಮತ್ತು v. ಗಮಕ ಎಂದು

೨. ಪೂರ್ವ ಪದಾರ್ಥ ಪ್ರಧಾನ: vi. ಅಂಶಿ

೩. ಉಭಯ ಪದಾರ್ಥ ಪ್ರಧಾನ: vii. ದ್ವಂದ್ವ

೪. ಅನ್ಯ ಪದಾರ್ಥ ಪ್ರಧಾನ: viii. ಬಹುವ್ರೀಹಿ ಎಂದು ಎಂಟು ಪ್ರಕಾರಗಳಿರುತ್ತವೆ.

ಬಾಗಲಕೋಟೆ ಜಿಲ್ಲೆಯ ಎಲ್ಲ ಗ್ರಾಮಗಳನ್ನು ಕೂಲಂಕುಷವಾಗಿ ಅವಲೋಕಿಸಿದರೆ ಮೇಲೆ ವಿವರಿಸಿದ ಕ್ರಿಯಾ ಸಮಾಸ ಮತ್ತು ಗಮಕ ಸಮಾಸಗಳನ್ನು ಬಿಟ್ಟು ಉಳಿದ ಸಮಾಸಗಳು ಗ್ರಾಮನಾಮಗಳಲ್ಲಿ ಕಂಡುಬರುತ್ತವೆ. ಅವುಗಳನ್ನು ಒಂದೊಂದಾಗಿ ಇಲ್ಲಿ ಅವಲೋಕಿಸೋಣ.

A. ತತ್ಪುರುಷ ಸಮಾಸ

ಸಮಾಸದಲ್ಲಿ ಉತ್ತರಪದದ ಅರ್ಥವು ಪ್ರಧಾನವಾಗಿದ್ದು, ಪೂರ್ವಪದವು ತೃತೀಯವಾಗಿ ವಿಭಕ್ತಿಗಳಿಂದ ಕೂಡಿ ಆಗುವ ಸಮಾಸವು ತತ್ಪುರುಷ. ಇಂತಹ ಸಾಮಾಸಿಕ ಹೆಸರುಗಳು (ಶಬ್ದಗಳು) ಬಾಗಲಕೋಟೆ ಜಿಲ್ಲೆಯ ಅನೇಕ ಗ್ರಾಮಗಳಿಗೆ ಇದ್ದುದು ಕಂಡುಬರುತ್ತದೆ.

ಅ. ಉತ್ತರಪದ ಊರು

a. ಪೂರ್ವಪದಾಂತ್ಯ 'ಅಪ್ಪ' ಇದ್ದಾಗ

ಗಂಡಸರ ಹೆಸರುಗಳ ಮುಂದೆ ಅಪ್ಪ, ಅಣ್ಣ, ಅಯ್ಯ ಇವೇ ಮೊದಲಾದ ಸಂಬಂಧವಾಚಕ ಶಬ್ದಗಳನ್ನು ಹಚ್ಚುವ ರೂಢಿ ಉತ್ತರ ಕರ್ನಾಟಕದಲ್ಲಿದೆ. ಬಾಗಲಕೋಟೆ ಜಿಲ್ಲೆ ಇದಕ್ಕೆ ಹೊರತಾಗಿಲ್ಲ. ಉದಾ: ಬಸಪ್ಪ, ಬಸಣ್ಣ, ಬಸಯ್ಯ ವ್ಯಕ್ತಿಗಳು ಪ್ರಸಿದ್ಧರಾಗಿದ್ದಾಗ ಅಂಥವರ ಹೆಸರನ್ನು ಆಯಾ ಊರುಗಳಿಗೆ ಇಡುವುದುಂಟು.

ಹೀಗೆ ವ್ಯಕ್ತಿಗಳ ಹೆಸರನ್ನಿಡುವಾಗ ಅಂಕಿತನಾಮಗಳ ಮುಂದೆ ಊರು ಎಂಬ ಶಬ್ದವನ್ನಿರಿಸಿ ಸಮಾಸ ಮಾಡಲಾಗುತ್ತದೆ. ಹೀಗೆ ಸಮಾಸವಾಗುವಲ್ಲಿ ಮುಖ್ಯವಾಗಿ ನಾಲ್ಕು ಪ್ರಕ್ರಿಯೆಗಳು ನಡೆಯುತ್ತವೆ.

೧. ಪೂರ್ವಪದದ ಉಪಾಂತ್ಯ ಹ್ರಸ್ವಸ್ವರವು ದೀರ್ಘವಾಗುತ್ತದೆ.

೨. ಅಪ್ಪ ಇದು ಅಪ ಎಂದಾಗುತ್ತದೆ.

೩. ವಿಗ್ರಹ ವಾಕ್ಯದಲ್ಲಿಯ ವಿಭಕ್ತಿ ಲೋಪವಾಗುತ್ತದೆ.

೪. ಪೂರ್ವಪದದ ಅಪ್ಪದಲ್ಲಿಯ ಅಂತ್ಯ ಸ್ವರ ಅ ಲೋಪವಾಗುತ್ತದೆ.ಉದಾ: ಅಂತಪ್ಪನ ಊರು–ಅಂತಪ್ಪೂರು–ಅಂತಾಪೂರು (ಮುಧೋ)

ಆದಪ್ಪನ ಊರು–ಆದಪ್ಪೂರು–ಆದಾಪೂರು (ಹುನ)

ಆದಾಪೂರಗಳು ಎರಡು ಇರುವದರಿಂದ ದೊಡ್ಡದಿರುವುದಕ್ಕೆ ಹಿರೇ ಆದಾಪೂರವೆಂದೂ ಸಣ್ಣದಿರುವದಕ್ಕೆ ಚಿಕ್ಕ ಆದಾಪೂರವೆಂದೂ ಕರೆಯುತ್ತಾರೆ.

ಕಲ್ಲಪ್ಪನ ಊರು–ಕಲ್ಲಪ್ಪೂರು–ಕಲ್ಲಾಪೂರು (ಬಾದಾ) –ಕಲ್ಲಾಪೂರ (ಕಡಿವಾಳ) (ಹುನ)

ಕಲ್ಲಾಪೂರಗಳು ಎರಡಿರುವದರಿಂದ ಹುನಗುಂದ ತಾಲೂಕಿನ ಕಲ್ಲಾಪೂರಕ್ಕೆ ಕಡಿವಾಳ ಕಲ್ಲಾಪೂರವೆಂದು ಹೆಸರಿಸಿದ್ದಾರೆ.

ಕಾಟಪ್ಪನ ಊರು–ಕಾಟಪ್ಪೂರು–ಕಾಟಾಪೂರು (ಬಾದಾ)

ಕೃಷ್ಣಪ್ಪನ ಊರು–ಕೃಷ್ಣಪ್ಪೂರು–ಕೃಷ್ಣಾಪೂರು (ಹುನ)

ಖಾನಪ್ಪನ ಊರು–ಖಾನಪ್ಪೂರು–ಖಾನಾಪೂರು (ಬಾದಾ)

ಖಾನಾಪೂರಗಳು ಎರಡು ಇರುವುದರಿಂದ ಒಂದನ್ನು ಎಸ್.ಬಿ. ಎಂದೂ ಇನ್ನೊಂದನ್ನು ಎಸ್.ಕೆ. ಎಂದೂ ಗುರುತಿಸುತ್ತಾರೆ.

ಚೌಡಪ್ಪನ ಊರು–ಚೌಡಪ್ಪೂರು–ಚೌಡಾಪೂರು (ಬಾಗ) –ಚೌಡಾಪೂರ (ಬೀಳ) –ಚೌಡಾಪೂರ (ಮುಧೋ)

ಹೀಗೆ ಬಾಗಲಕೋಟೆ, ಬೀಳಗಿ ಮತ್ತು ಮುಧೋಳ ಈ ಮೂರೂ ತಾಲೂಕುಗಳಲ್ಲಿದ್ದರೂ ಇವುಗಳನ್ನು ಪ್ರತ್ಯೇಕಿಸಿ ಕರೆಯಲು ಚಿಹ್ನೆಗಳಿಲ್ಲ. ತಾಲೂಕಗಳಿಂದಲೆ ಇವನ್ನು ಗುರುತಿಸಬಹುದು.

ಚನ್ನಪ್ಪನ ಊರು–ಚನ್ನಪ್ಪೂರು–ಚನ್ನಾಪೂರು (ಹುನ)

ಚನ್ನಾಪೂರುಗಳು ಎರಡು ಇರುವುದರಿಂದ ಒಂದು ಎಸ್.ಬಿ.ಚನ್ನಾಪೂರ, ಇನ್ನೊಂದು ಎಸ್.ಕೆ. ಚನ್ನಾಪೂರ.

ತಿಮ್ಮಪ್ಪನ ಊರು–ತಿಮ್ಮಪ್ಪೂರು–ತಿಮ್ಮಾಪೂರು

ಈ ಹೆಸರಿನ ಊರುಗಳು ಬಾಗಲಕೋಟೆ, ಬಾದಾಮಿ, ಮುಧೋಳ ಮತ್ತು ಹುನಗುಂದ ಈ ನಾಲ್ಕು ತಾಲೂಕುಗಳಲ್ಲಿಯೂ ಇವೆ. ಬಾದಾಮಿ ತಾಲೂಕಿನ ತಿಮ್ಮಾಪೂರಕ್ಕೆ ರಡ್ಡೇರ ತಿಮ್ಮಾಪೂರ ಎನ್ನುತ್ತಾರೆ.

ನರಸಪ್ಪನ ಊರು–ನರಸಪ್ಪೂರು–ನರಸಾಪೂರು (ಬಾದಾ)

ನಿಂಗಪ್ಪನ ಊರು–ನಿಂಗಪ್ಪೂರು–ನಿಂಗಾಪೂರು (ಮುಧೋ)

ಪೋಚಪ್ಪನ ಊರು–ಪೋಚಪ್ಪೂರು–ಪೋಚಾಪೂರು (ಹುನ)

ಮಲ್ಲಪ್ಪನ ಊರು–ಮಲ್ಲಪ್ಪೂರು–ಮಲ್ಲಾಪೂರು (ಮುಧೋ)

ಈ ಹೆಸರಿನ ಊರುಗಳು ಬಾಗಲಕೋಟೆ, ಬಾದಾಮಿ ಮತ್ತು ಮುಧೋಳ ತಾಲೂಕುಗಳಲ್ಲಿರುತ್ತವೆ. ಮುಧೋಳ ತಾಲೂಕ ಒಂದರಲ್ಲಿಯೇ ಎರಡಿರುವುದರಿಂದ ಒಂದಕ್ಕೆ ಪಿ.ಜಿ. ಎಂದೂ ಇನ್ನೊಂದಕ್ಕೆ

ಪಿ.ಎಲ್. ಎಂದೂ ಕರೆಯುತ್ತಾರೆ. ಬಾದಾಮಿಯಲ್ಲಿರುವ ಮಲ್ಲಾಪೂರವು ಗುಡ್ಡದಲ್ಲಿರುವುದರಿಂದ ಅದನ್ನು ಗುಡ್ಡದ ಮಲ್ಲಾಪೂರ ಎಂದು ಕರೆಯುತ್ತಾರೆ.

ಮಹಾಲಿಂಗಪ್ಪನ ಊರು–ಮಹಾಲಿಂಗಪೂರ (ಮುಧೋ)

ಇಲ್ಲಿ ಮಹಾಲಿಂಗಪೂರ ಎಂದು ಆಗಿದೆ. ಉಪಾಂತ್ಯ 'ಗ'ಕಾರವು 'ಗಾ'ಕಾರವಾಗುವದಿಲ್ಲ.

ಮಾದಪ್ಪನ ಊರು–ಮಾದಪ್ಪೂರು–ಮಾದಾಪೂರ (ಹುನ)

ಮಾರಪ್ಪನ ಊರು–ಮಾರಪ್ಪೂರು–ಮಾರಾಪೂರು (ಬಾಗ) –ಮಾರಾಪೂರ (ಮುಧೋ)

ಮಾಲ(ಳ)ಪ್ಪನ ಊರು–ಮಾಲ(ಳ)ಪ್ಪೂರು–ಮಾಲಾ(ಳಾ)ಪೂರು (ಮುಧೋ)

ಮುದ್ದಪ್ಪನ ಊರು–ಮುದ್ದಪ್ಪೂರು–ಮುದ್ದಾಪೂರು (ಮುಧೋ)

ರಾಘಪ್ಪನ ಊರು–ರಾಘಪ್ಪೂರು–ರಾಘಾಪೂರು (ಬಾದಾ)

ಲಕಮಪ್ಪನ ಊರು–ಲಕಮಪ್ಪೂರು–ಲಕಮಾಪೂರ (ಬಾಗ)

ಲಕಮಪ್ಪನ ಊರು–ಲಕಮಪ್ಪೂರು–ಲಕಮಾಪೂರ (ಬಾದಾ)

ಲಿಂಗಪ್ಪನ ಊರು–ಲಿಂಗಪ್ಪೂರು–ಲಿಂಗಾಪೂರು (ಬಾದಾ)

ಈ ತಾಲೂಕಿನಲ್ಲಿ ಎಸ್.ಆರ್. ಮತ್ತು ಎಸ್.ಕೆ. ಎಂದು ಎರಡು ಲಿಂಗಾಪೂರಗಳಿರುತ್ತವೆ.

ಲೋಕಪ್ಪನ ಊರು–ಲೋಕಪ್ಪೂರು–ಲೋಕಾಪೂರ (ಮುಧೋ)

ವೀರಪ್ಪನ ಊರು–ವೀರಪ್ಪೂರು–ವೀರಾಪೂರ (ಹುನ)

ವೀರಪ್ಪನ ಊರು–ವೀರಪ್ಪೂರು–ವೀರಾಪೂರ (ಬಾಗ)

ಸಂಗಪ್ಪನ ಊರು–ಸಂಗಪ್ಪೂರು–ಸಂಗಾಪೂರ (ಬಾಗ)

ಸಿದ್ದಪ್ಪನ ಊರು–ಸಿದ್ಧಪ್ಪೂರು–ಸಿದ್ಧಾಪೂರ (ಬೀಳ)

ಸಿದ್ದಪ್ಪನ ಊರು–ಸಿದ್ಧಪ್ಪೂರು–ಸಿದ್ಧಾಪೂರ (ಜಮ)

ಸೈದಪ್ಪನ ಊರು–ಸೈದಪ್ಪೂರು–ಸೈದಾಪೂರ (ಮುಧೋ)

ಹಣಮಪ್ಪನ ಊರು–ಹಣಮಪ್ಪೂರು–ಹಣಮಾಪೂರ (ಬಾಗ)

ಹಾನಪ್ಪನ ಊರು–ಹಾನಪ್ಪೂರು–ಹಾನಾಪೂರ (ಬಾದಾ)

ಪೂರ್ವಪದ ಅಂತ್ಯ

'ಅಪ್ಪ' ಇಲ್ಲದಲ್ಲಿಯೂ 'ಊರು' ಸೇರಿ ಗ್ರಾಮಗಳಾಗಿರುತ್ತವೆ.

ಆಗ ೧. ವಿಗ್ರಹ ವಾಕ್ಯದಲ್ಲಿಯ ವಿಭಕ್ತಿ ಲೋಪ ೨. ಪೂರ್ವಪದದ ಅಂತ್ಯ ಸ್ವರಲೋಪ.

i. **ಅಂಕಿತ ನಾಮಗಳಿಗೆ**

ಉದಾ: ಗಂಗನ ಊರು–ಗಂಗೂರು (ಹುನ)

ಕಿಸನನ ಊರು–ಕಿಸನೂರು (ಬಾಗ)

ii. **ಪ್ರಕೃತಿವಾಚಕಗಳಿಗೆ**

ಉದಾ: ಆಲದ ಊರು–ಆಲೂರು (ಬಾಗ) –ಆಲೂರು (ಬಾದಾ) ಎಸ್.ಪಿ. –ಆಲೂರು (ಬಾದಾ) ಎಸ್.ಕೆ.

ಕಣಬೆಯ ಊರ–ಕಣಬೂರು (ಮುಧೋ)

ಗುಡ್ಡದ ಊರು–ಗುಡೂರು (ಹುನ) ಎಸ್.ಬಿ. –ಗುಡೂರು (ಹುನ) ಎಸ್.ಸಿ.

ಜೊನ್ನದ ಊರು–ಜೊನ್ನೂರು–ಜುನ್ನೂರು (ಮುಧೋ)

ಬೇಲದ ಊರು–ಬೇಲೂರು (ಬಾಗ)

ಬೇವಿನ ಊರು–ಬೇವೂರು (ಬಾಗ)

ಮುಳ್ಳಿನ ಊರು–ಮುಳ್ಳೂರು (ಹುನ)

ಶಿರಿಯ ಊರು–ಶಿರೂರು (ಬಾಗ) –ಶಿರೂರು (ಬಾದಾ)

ಹಳ್ಳದ ಊರು–ಹಳ್ಳೂರು (ಬಾಗ)

ಹೂವಿನ ಊರು–ಹೂನೂರು–ಹುನ್ನೂರ (ಜಮ)

ಹೊದ್ಲದ ಊರು–ಹೊದ್ಲೂರು (ಬಾಗ) (ಗಿಡಗಂಟಿ)

ಈ ಹೆಸರಿನ ಎರಡು ಊರುಗಳಿರುವುದರಿಂದ ಒಂದನ್ನು ಹಿರೇಹೊದ್ಲೂರ ಎಂದೂ ಇನ್ನೊಂದನ್ನು ಚಿಕ್ಕಹೊದ್ಲೂರು ಎಂದೂ ಕರೆಯುತ್ತಾರೆ.

iii. **ಪದಾರ್ಥವಾಚಕಗಳಿಗೆ**

ಉದಾ: ಕಡಗದ ಊರು–ಕಡಗೂರು (ಹುನ)

ಕಿರಸೆಯ ಊರು–ಕಿರಸೂರು (ಹುನ) (ಖಡ್ಗ) –ಕಿರಸೂರು (ಬಾಗ)

ಬೆಣ್ಣೆಯ ಊರು–ಬೆಣ್ಣೂರು (ಬಾಗ)

iv. **ದಿಗ್ವಾಚಕಗಳಿಗೆ**

ಉದಾ: ಉತ್ತಣ ಊರು–ಉತ್ತೂರು (ಮುಧೋ)

ಕೆಲದ ಊರು–ಕೆಲೂರು (ಹುನ)

v. **ನಿರ್ಮಾಣವಾಚಕಗಳಿಗೆ**

ಉದಾ: ಕೆರೆಯ ಊರು–ಕೆರೂರು (ಬಾಗ) –ಬಿಲ್‌ಕೆರೂರು

ಕೆರೆಯ ಊರು–ಕೆರೂರು (ಬಾದಾ)

vi. **ಜನಾಂಗವಾಚಕದ ಮುಂದೆಯೂ ಊರು ಬರುವದು.**

ಉದಾ: ಕೋಲರ ಊರು–ಕೋಲೂರು (ಬೀಳ)

ಆ. ಉತ್ತರಪದ–ಪುರ

i. ಷಷ್ಠಿತತ್ಪುರುಷದಲ್ಲಿ ನಾಮಗಳ ಮುಂದೆ 'ಪುರ' ಎಂಬ ಗ್ರಾಮವಾಚಕ ಶಬ್ದ ಬಂದು ಗ್ರಾಮ ನಾಮಗಳಾಗುತ್ತವೆ. ಇಲ್ಲಿ ವಿಕಲ್ಪವಾಗಿ ಪೂರ್ವಪದದ ಉಪಾಂತ್ಯ ಹ್ರಸ್ವಸ್ವರವು ದೀರ್ಘಸ್ವರವಾಗುತ್ತದೆ.

ಉದಾ: ಪುಲ್ಲಿಂಗ: ಚೀಲಾಳನಪುರ–ಚೀಲಾಪುರ (ಹುನ) ಇಲ್ಲಿ ಪೂರ್ವಪದದಲ್ಲಿಯ ಅಂತ್ಯ 'ಳ' ಕಾರ ಲೋಪವಾಗಿದೆ.

ದೇವಲನ ಪುರ–ದೇವಲಾಪುರ (ಬಾಗ) (ಶಿಲ್ಪಿ, ವಿಗ್ರಹ)

ರಾಮನ ಪುರ–ರಾಮಪುರ (ಬಾಗ) –ರಾಮಪುರ (ಜಮ)

ಇಲ್ಲಿ ಪೂರ್ವಪದದ ಉಪಾಂತ್ಯ ದೀರ್ಘವಾಗಿಲ್ಲ (ಮ ಕಾರ ಮಾ ಕಾರವಾಗಿಲ್ಲ)

ಸ್ತ್ರೀಲಿಂಗ: ಚಾಮಲೆಯ ಪುರ–ಚಾಮಲಾಪುರ (ಹುನ)

ದಾಮಲೆಯ ಪುರ–ದಾಮಲಾಪುರ (ಹುನ)

ಸೋಮಲೆಯ ಪುರ–ಸೋಮಲಾಪುರ (ಹುನ)

ನ.ಲಿಂಗ: ಸುಂಕದ ಪುರ–ಸುಂಕಾಪೂರ (ಹುನ)

ಈ ಊರು ಗಡಿಭಾಗದಲ್ಲಿದ್ದು ಇಲ್ಲಿ ಸುಂಕದ ಕಟ್ಟೆ ಇದ್ದುದರಿಂದ ಇದಕ್ಕೆ ಗಡಿ ಸುಂಕಾಪುರ ಎನ್ನುತ್ತಾರೆ.

ಸಂಕಲದ ಪುರ–ಸಂಕಲಾಪುರ (ಹುನ) ಸಂಕ್ಲಾಪೂರ (ಸೇತುವೆ)

ಹರಿಣನ ಪುರ–ಹರಿಣಾಪುರ (ಹುನ)

ii. ಷಷ್ಠಿ ತತ್ಪುರುಷದಲ್ಲಿ ಧರ್ಮ, ವಂಶ ಈ ಹೆಸರುಗಳ ಮುಂದೆಯೂ ಪುರ ಎಂಬ ಗ್ರಾಮವಾಚಕ ಶಬ್ದ ಬಂದು ಗ್ರಾಮನಾಮಗಳಾಗುತ್ತವೆ.

ಉದಾ: ಇಸ್ಲಾಂರ ಪುರ–ಇಸ್ಲಾಂಪುರ (ಹುನ)

ಕದಂಬರ ಪುರ–ಕದಂಪುರ–ಕದಾಂಪುರ (ಬಾಗ) ಇಲ್ಲಿ ಪೂರ್ವಪದದಲ್ಲಿಯ ಬ ಕಾರ ಲೋಪವಾಗಿದೆ.

ಇ. ಉತ್ತರಪದ ಪಳ್ಳಿ>ಹಳ್ಳಿ

ಪಳ್ಳಿ>ಹಳ್ಳಿ ಎಂಬುದು ಉತ್ತರಪದವಾಗಿ ಇರುವ ಗ್ರಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿ ಕಂಡುಬರುತ್ತವೆ. ಇವು ತತ್ಪುರುಷ ಸಮಾಸಗಳಾಗಿರುತ್ತವೆ.

ಉದಾ: ಕೋಡಿಯ ಪಳ್ಳಿ–ಕೋಡಿವಳ್ಳಿ–ಕೋವಳ್ಳಿ (ಬೀಳ)

ಇಲ್ಲಿ ಕೋಡಿಯಲ್ಲಿಯ ಡಿ ಲೋಪವಾಗಿದೆ. ಪಳ್ಳಿಯ ಪಕಾರಕ್ಕೆ ವ ಕಾರಾದೇಶವಾಗಿದೆ.

ಮುಗುಳ ಹಳ್ಳಿ–ಮುಗುಳಳ್ಳಿ–ಮುಗಳೊಳ್ಳಿ (ಬಾಗ)

ಮಣ್ಣಿನ ಹಳ್ಳಿ–ಮಣ್ಣಿನ ಹಳ್ಳಿ–ಮಣಹಳ್ಳಿ–ಮನಹಳ್ಳಿ (ಬಾಗ)

ಯಡದಹಳ್ಳಿ–ಯಡಹಳ್ಳಿ (ಬಾಗ)

ಯಡಹಳ್ಳಿ (ಬೀಳ)

ಯಡಹಳ್ಳಿ (ಮುಧೋ)

ಯಡಹಳ್ಳಿ (ಹುನ)

ಅಕ್ಕಪಕ್ಕದಲ್ಲಿರುವ ಎರಡು ಹಳ್ಳಿಗಳಲ್ಲಿಯ ಎಡಕಿರುವ ಹಳ್ಳಿಗೆ 'ಯಡಹಳ್ಳಿ' ಎಂದು ಕರೆಯುತ್ತಾರೆ. ಸ್ವರ 'ಎ'ಕಾರಕ್ಕೆ ರೂಢಿಯಲ್ಲಿ 'ಯ'ಕಾರ ಬಂದಿದೆ.

ಈ. ಉತ್ತರಪದ– ಪಟ್ಟಿ, ಹಟ್ಟಿ

ಪಟ್ಟಿ, ಹಟ್ಟಿ ಎಂಬುವು ಉತ್ತರ ಪದವಾಗಿ ಇರುವ ಗ್ರಾಮ ನಾಮಗಳು–ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ.

ಉದಾ: ಕಡೆಯ ಪಟ್ಟಿ–ಕಡಪಟ್ಟಿ (ಜಮ)

ಕಡಪಟ್ಟಿ (ಹುನ)

ಜಮಖಂಡಿ ಮತ್ತು ಹುನಗುಂದ ತಾಲೂಕುಗಳಲ್ಲಿ ಒಂದೊಂದು ಕಡಪಟ್ಟಿಗಳಿರುವುದರಿಂದ ಹುನಗುಂದ ತಾಲೂಕಿನ ಕಡಪಟ್ಟಿಗೆ ಕೆಂಗಲ್ ಕಡಪಟ್ಟಿ ಎಂದು ಕರೆಯಲಾಗುತ್ತದೆ.

ವಡ್ಡರ ಪಟ್ಟಿ–ವಡ್ಡವಟ್ಟಿ–ವಡವಟ್ಟಿ (ಬಾದಾ)

ತುಗಲದ ಹಟ್ಟಿ–ತುಗಲ ಹಟ್ಟಿ–ತುಗಲಟ್ಟಿ (ಬಾಗ)

ಇಲ್ಲಿ ಹಟ್ಟಿಯಲ್ಲಿಯ 'ಹ' ಲೋಪವಾಗಿದೆ.

ಬಣ್ಣದ ಹಟ್ಟಿ–ಬಣ್ಣಹಟ್ಟಿ–ಬಣಹಟ್ಟಿ–ಬನಹಟ್ಟಿ (ಜಮ)

ಬನ್ನಿಯ ಹಟ್ಟಿ–ಬನ್ನಿಹಟ್ಟಿ (ಹುನ)

ಯರಗನ ಹಟ್ಟಿ–ಹರಗಟ್ಟಿ (ಜಮ)

ಯಲ್ಲನ ಹಟ್ಟಿ–ಯಲ್ಲಟ್ಟಿ (ಜಮ)

ಸಸಾಲನ ಹಟ್ಟಿ–ಸಸಾಲಟ್ಟಿ (ಜಮ)

ಈ ಮೂರರ ಹಟ್ಟಿಯಲ್ಲಿಯ 'ಹ' ಲೋಪವಾಗಿದೆ

ಉ. ಉತ್ತರಪದ–ಪಾಳ>ಹಾಳ

ಪುಲ್ಲಿಂಗ: ವಂಚಗನ ಹಾಳ–ವಂಚಗನಾಳ–ವಂಚಗಾಳ (ಮುಧೋ)

ಚನ್ನನ ಹಾಳ–ಚನ್ನಾಳ–ಚನಾಳ (ಮುಧೋ) ಇಲ್ಲಿ ಹಟ್ಟಿಯಲ್ಲಿಯ 'ಹ' ಲೋಪವಾಗಿದೆ.

ಸ್ತ್ರೀಲಿಂಗ: ಮಾಸ್ತಿಯ ಹಾಳ–ಮಾಸ್ತಿಹಾಳ (ಬಾಗ)

ರೋಹಿಣಿಯ ಹಾಳ–ರೋಣಿಹಾಳ –(ಬೀಳ) ಇಲ್ಲಿ ರೋಹಿಣಿಯಲ್ಲಿ 'ಹಿ' ಲೋಪವಾಗಿದೆ.

ನ.ಲಿಂಗ

i. **ಪ್ರಾಣಿವಾಚಕ**

ಇಲಿಯ ಹಾಳ–ಇಲಿಹಾಳ–ಇಲಾಳ (ಹುನ) ಇಲ್ಲಿ 'ಹ' ಲೋಪವಾಗಿದೆ.

ii. **ವಸ್ತುವಾಚಕ**

ಕಂಬಳಿಯ ಹಾಳ–ಕಂಬಳಿಹಾಳ (ಹುನ)

ಗೋಡೆಯ ಹಾಳ–ಗೋಡೆಹಾಳ–ಗೋಡಿಹಾಳ (ಬೀಳ)

ಇಲ್ಲಿ ಗೋಡೆ–ಗೋಡಿ ಆಗಿದೆ.

ಬೂದಿಯ ಹಾಳ–ಬೂದಿಹಾಳ (ಬಾದಾ)

ಬೂದಿಯ ಹಾಳ–ಬೂದಿಹಾಳ (ಬಾದಾ) ಖಾಜಿ

ಬೂದಿಯ ಹಾಳ–ಬೂದಿಹಾಳ (ಬಾದಾ) ಗಂಗನ

ಬೂದಿಯ ಹಾಳ–ಬೂದಿಹಾಳ (ಬಾದಾ) ನೀರ

ಬೂದಿಯ ಹಾಳ–ಬೂದಿಹಾಳ (ಬಾದಾ) ಫಕೀರ

ಬೂದಿಯ ಹಾಳ–ಬೂದಿಹಾಳ (ಬಾದಾ) ಬೇಡರ

ಬೂದಿಯ ಹಾಳ–ಬೂದಿಹಾಳ (ಬಾದಾ) ಹಿರೇ

ಬೂದಿಯ ಹಾಳ–ಬೂದಿಹಾಳ (ಬೀಳ) ಎಸ್.ಜಿ.

ಬೂದಿಯ ಹಾಳ–ಬೂದಿಹಾಳ (ಬೀಳ) ಎಸ್.ಎಚ್.

ಬೂದಿಯ ಹಾಳ–ಬೂದಿಹಾಳ (ಹುನ) ಎಸ್.ಕೆ.

ಬೂದಿಯ ಹಾಳ–ಬೂದಿಹಾಳ (ಹುನ) ಇನಾಂ

ಹೀಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿ ಏಳು. ಬೀಳಗಿ ತಾಲೂಕಿನಲ್ಲಿ ಎರಡು ಮತ್ತು ಹುನಗುಂದ ತಾಲೂಕಿನಲ್ಲಿ ಎರಡು ಈ ರೀತಿ ಒಟ್ಟು ಹನ್ನೊಂದು ಬೂದಿಹಾಳ ಗಳಿರುತ್ತವೆ. ಇದೊಂದು ಈ ಜಿಲ್ಲೆಯ ವಿಶೇಷ. ಇವನ್ನು ಪೂರ್ವಪದದ ಉಪನಾಮಗಳಿಂದ ಗುರುತಿಸಲಾಗುತ್ತದೆ.

ರೇವಡಿಯ ಹಾಳ–ರೇವಡಿಹಾಳ (ಹುನ)

ಹದರಿಯ ಹಾಳ-ಹದರಿಹಾಳ (ಬೀಳ)

ಹೊನ್ನಿನ ಹಾಳ-ಹೊನ್ನಿಹಾಳ-ಹೊನ್ನ್ಯಾಳ (ಬೀಳ)

iii. **ಸ್ಥಾನವಾಚಕ**

ಅಡಿಯಲ್ಲಿಯ ಹಾಳ-ಅಡಿಹಾಳ (ಹುನ)

ಕೋಡಿಯಲ್ಲಿಯ ಹಾಳ-ಕೋಡಿಹಾಳ (ಹುನ)

iv. **ಸಸ್ಯವಾಚಕ**

ಜಾಲಿಯ ಹಾಳ-ಜಾಲಿಹಾಳ (ಬಾದಾ) -ಜಾಲ್ಯಾಳ

ಜಾಲಿಯ ಹಾಳ-ಜಾಲಿಹಾಳ (ಬಾದಾ) (ಭದ್ರನಾಯಕನ)

ಬಾದಾಮಿ ತಾಲೂಕಿನಲ್ಲಿ ಎರಡು ಜಾಲಿಹಾಳಗಳಿರುವದರಿಂದ ಒಂದನ್ನು ಭದ್ರನಾಯಕನ ಜಾಲಿಹಾಳವೆಂದು ಇನ್ನೊಂದರಿಂದ ಪ್ರತ್ಯೇಕಿಸಲಾಗಿದೆ.

ತೊಂಡಿಯ ಹಾಳ-ತೊಂಡಿಹಾಳ (ಹುನ)

ಮಲ್ಲಿಗೆಯ ಹಾಳ-ಮಲ್ಲಿಗೆ ಹಾಳ-ಮಲ್ಲಗಿಹಾಳ (ಹುನ) ಇಲ್ಲಿ ಎ-ಇ ಆಗಿದೆ.

v. **ಆಹಾರ ಪದಾರ್ಥವಾಚಕ**

ಗಂಜಿಯ ಹಾಳ-ಗಂಜಿಹಾಳ (ಹುನ)

ಚಟ್ನಿಯ ಹಾಳ-ಚಟ್ನಿಹಾಳ (ಹುನ)

ಊ. ಉತ್ತರಪದ-ಪಾಳ>ಬಾಳ

ತತ್ಪುರುಷ ಸಮಾಸದ ಉತ್ತರ ಪದದಲ್ಲಿ 'ಪಾಳ' ಎಂಬುದು 'ಬಾಳ' ಎಂದಾಗುತ್ತದೆ.

ಉದಾ: ಆಲದ ಪಾಳ್ - ಆಳಬಾಳ (ಜಮ) ಇಲ್ಲಿ ಆಲ-ಆಳ ಎಂದಾಗಿದೆ.

ಗುಳ್ಳದ ಪಾಳ್-ಗುಳಬಾಳ (ಬಾಗ) -ಹಿರೇ

ಗುಳ್ಳದ ಪಾಳ್-ಗುಳಬಾಳ (ಬಾಗ) -ಚಿಕ್ಕ

ಗುಳ್ಳದ ಪಾಳ್-ಗುಳಬಾಳ (ಬೀಳ) ಇಲ್ಲಿ ಳ್ಳ ದ್ವಿತ್ವವನ್ನು ಕಳೆದುಕೊಂಡಿದೆ.

ಗೊರವನ ಪಾಳ್-ಗೊರಬಾಳ (ಹುನ) ಇಲ್ಲಿ ವಕಾರ ಲೋಪವಾಗಿದೆ.

ದಾಸರ ಪಾಳ್-ದಾಸಬಾಳ (ಹುನ)

ಎ. ಉತ್ತರಪದ–ಕೊಪ್ಪ

'ಕೊಪ್ಪ' ಎಂದರೆ ಊರು ಎಂದರ್ಥ. ಇದು ಉತ್ತರಪದವಾಗಿರುವ ಅನೇಕ ಗ್ರಾಮ ನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿ ಇರುತ್ತವೆ.

ಉದಾ: ಅಂಬಲಿಯ ಕೊಪ್ಪ–ಅಂಬಲಿ ಕೊಪ್ಪ (ಹುನ)

ಕರಲಿನ ಕೊಪ್ಪ–ಕರಲಕೊಪ್ಪ–ಕರ್ಲಕೊಪ್ಪ (ಬಾದಾ)

ಕಳಸದ ಕೊಪ್ಪ–ಕಳಸಕೊಪ್ಪ (ಬಾಗ)

ಕೆಸರಿನ ಕೊಪ್ಪ–ಕೆಸರಕೊಪ್ಪ–ಕೆಸರಗೊಪ್ಪ (ಮುಧೋ)

ಕೊಂಕಣದ ಕೊಪ್ಪ–ಕೊಂಕಣಕೊಪ್ಪ (ಬಾದಾ)

ಚೀರಲಿನ ಕೊಪ್ಪ–ಚೀರಲಕೊಪ್ಪ–ಚಿರ್ಲಕೊಪ್ಪ (ಬಾದಾ) ಚೀರಲ ಅಂದರೆ ತಗ್ಗು ದಿನ್ನೆ.

ಬಿಸನಾಳದ ಕೊಪ್ಪ–ಬಿಸನಾಳಕೊಪ್ಪ (ಹುನ)

ಬೆಳವಲದ ಕೊಪ್ಪ–ಬೆಳವಲಕೊಪ್ಪ (ಬಾದಾ)

ಮರಡಿಯ ಕೊಪ್ಪ–ಮರಡಿಕೊಪ್ಪ (ಬಾದಾ)

ಯರೆಯ ಕೊಪ್ಪ–ಯರಗೊಪ್ಪ (ಬಾದಾ) ಎಸ್.ಬಿ.

ಯರೆಯ ಕೊಪ್ಪ–ಯರಗೊಪ್ಪ (ಬಾದಾ) ಇನಾಂ

ಲಕ್ಕಸದ ಕೊಪ್ಪ–ಲಕ್ಕಸಕೊಪ್ಪ (ಬಾದಾ)

ಜನಾಂಗವಾಚಕ

ಚಿನಿವಾಲರ ಕೊಪ್ಪ–ಚಿನಿವಾಲ ಕೊಪ್ಪ (ಬೀಳ)

ಏ. ಉತ್ತರಪದ –ಕೇರಿ

ಕೇರಿ ಎಂಬುದು ಗ್ರಾಮ ವಾಚಕ ಶಬ್ದ. ಇದು ಉತ್ತರ ಪದವಾಗಿ ಇರುವ ಅನೇಕ ಗ್ರಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ.

ಉದಾ: ಅರದ ಕೇರಿ–ಅರಕೇರಿ (ಬೀಳ) ಅರ ಎಂದರೆ ಧರ್ಮ

ಕಲಬಂದದ ಕೇರಿ–ಕಲಬಂದ ಕೇರಿ (ಬಾದಾ)

ಬಂದದ ಕೇರಿ–ಬಂದಕೇರಿ (ಬಾದಾ)

ನೀರಲದ ಕೇರಿ–ನೀರಲಕೇರಿ (ಬಾಗ) –ನೀರಲಕೇರಿ (ಬಾದಾ)

ಮಣ್ಣಿನ ಕೇರಿ–ಮಣ್ಣಿಕೇರಿ (ಬಾದಾ) –ಮಣ್ಣಿಕೇರಿ–ಮನ್ನಿಕೇರಿ (ಬೀಳ)

ಶೆಲ್ಲಿಯ ಕೇರಿ–ಶೆಲ್ಲಿಕೇರಿ (ಬಾಗ) –ಹಿರೇ

ಶೆಲ್ಲಿಯ ಕೇರಿ–ಶೆಲ್ಲಿಕೇರಿ (ಬಾಗ) –ಚಿಕ್ಕ

ಸೀಗಿಯ ಕೇರಿ–ಸೀಗಿಕೇರಿ (ಬಾಗ)

ಸೀಮಿಯ ಕೇರಿ–ಸೀಮಿಕೇರಿ (ಬಾಗ)

ಸೂಳಿಯ ಕೇರಿ–ಸೂಳಿಕೇರಿ (ಬಾದಾ)

ಹುಲ್ಲೆಯ ಕೇರಿ–ಹುಲ್ಲಿಕೇರಿ (ಬಾದಾ) ಇನಾಂ

ಹುಲ್ಲೆಯ ಕೇರಿ–ಹುಲ್ಲಿಕೇರಿ (ಬಾದಾ) ಎಸ್.ಪಿ.

ಇಲ್ಲಿ ಹುಲ್ಲೆ –ಹುಲ್ಲಿ ಎಂದಾಗಿದೆ.

ಐ. ಉತ್ತರಪದ –ಕೇರಿ>ಗೇರಿ

ಉತ್ತರ ಪದದಲ್ಲಿರುವ ಕೇರಿಯು ಗದಬಾದೇಶ ಸಂಧಿಯ ನಿಯಮಕ್ಕನುಸರಿಸಿ 'ಗೇರಿ ಎಂದಾಗುತ್ತದೆ.

ಉದಾ: ಓತದ ಕೇರಿ–ಓತಗೇರಿ (ಹುನ) –ಹಿರೇ –ಓತಗೇರಿ (ಹುನ) –ಚಿಕ್ಕ. ಓತ ಎಂದರೆ ಮಗ್ಗದ ಹಾಸು

ಕಟಕದ ಕೇರಿ–ಕಟಗೇರಿ (ಬಾದಾ) ಕಟಕ ಎಂದರೆ ತಪ್ಪಲು ಪ್ರದೇಶ.

ಇಲ್ಲಿ ಕಟಕದಲ್ಲಿ 'ಕ' ಲೋಪವಾಗಿದೆ.

ಕನಸಿನ ಕೇರಿ–ಕನಸಗೇರಿ (ಮುಧೋ)

ಕಬ್ಬಲಿಗರ ಕೇರಿ–ಕಬ್ಬಲಗೇರಿ (ಬಾದಾ) ಇಲ್ಲಿ ಕಬ್ಬಲಿಗದಲ್ಲಿಯ 'ಗ' ಲೋಪವಾಗಿದೆ

ಕೇದಗೆಯ ಕೇರಿ–ಕೇದಗ್ಗೇರಿ–ಕ್ಯಾದಗ್ಗೇರಿ (ಹುನ)

ಕುಳದ ಕೇರಿ–ಕುಳಗೇರಿ (ಬಾದಾ)

ಜಲದ ಕೇರಿ–ಜಲಗೇರಿ (ಬಾದಾ) –ಜಲಗೇರಿ ತಾಂಡಾ (ಬಾದಾ)

ತಳ್ಳಿಯ ಕೇರಿ–ತಳ್ಳಿಗೇರಿ (ಹುನ)

ತುಳಸಿಯ ಕೇರಿ–ತುಳಸಿಗೇರಿ (ಬಾಗ)

ಮಮ್ಮಟನ ಕೇರಿ–ಮಮ್ಮಟಗೇರಿ (ಬಾದಾ)

ಮರಟದ ಕೇರಿ–ಮರಟಗೇರಿ (ಹುನ)

ಮೇಗಿನ ಕೇರಿ–ಮೇಗೇರಿ–ಮ್ಯಾಗೇರಿ (ಬಾಗ) ಹಿರೇ

ಮೇಗಿನ ಕೇರಿ–ಮೇಗೇರಿ–ಮ್ಯಾಗೇರಿ (ಬಾಗ) ಚಿಕ್ಕ

ಮುತ್ತಲದ ಕೇರಿ–ಮುತ್ತಲಗೇರಿ (ಬಾದಾ)

ಮುಷ್ಟಿಯ ಕೇರಿ–ಮುಷ್ಟಿಗೇರಿ (ಬಾದಾ)

ಮೆಳ್ಳಿಯ ಕೇರಿ–ಮೆಳ್ಳಿಗೇರಿ (ಮುಧೋ)

ವಡ್ಡರ ಕೇರಿ–ವಡಗೇರಿ (ಹುನ)

ಯಂಡಿಯ ಕೇರಿ–ಯಂಡಿಗೇರಿ (ಬಾದಾ)

ಹಳ್ಳದ ಕೇರಿ–ಹಳ್ಳಗೇರಿ–ಹಳಗೇರಿ (ಬಾದಾ)

ಹಾಲಿನ ಕೇರಿ–ಹಾಲಿಗೇರಿ (ಬಾದಾ)

ಹುಲಸಿನ ಕೇರಿ–ಹುಲಸಗೇರಿ (ಬಾದಾ)

ಹೂಲಿಯ ಕೇರಿ–ಹೂಲಿಗೇರಿ (ಹೂಲಗೇರಿ) (ಬಾದಾ)

ಒ. ಉತ್ತರಪದ ವಾಡ–ವಾಡಿ

ಬಾಡ–ವಾಡ–ವಾಡಿ ಅಂದರೆ ಹಳ್ಳಿ. ಇದು ಉತ್ತರಪದವಾಗಿರುವ ಗ್ರಾಮನಾಮಗಳು.

ಬಾಡ–ವಾಡ

ಉದಾ: ಟಕ್ಕರಬಾಡ–ಟಕ್ಕವಾಡ–ಟಕ್ಕೋಡ (ಜಮ) 'ಟಕ್ಕರು' ಒಂದು ಜನಾಂಗ –ಜಂಗನಬಾಡ–ಜಂಗವಾಡ (ಬಾದಾ) ಜನ್ನದಬಾಡ–ಜನವಾಡ (ಜಮ) 'ಜನ್ನ' ಅಂದರೆ ಯಜ್ಞ

ತಳಕಿನಬಾಡ–ತಳಕವಾಡ (ಬಾದಾ)

ವಾಡಿ: ಸಮೀರನ ವಾಡಿ–ಸಮೀರವಾಡಿ (ಮುಧೋ)

ಓ. ಉತ್ತರಪದ ಕೋಟೆ : ಗಡ

ಕೋಟೆ ಮತ್ತು ಗಡ (ಸಣ್ಣ ಕೋಟೆ) ಇವು ಗ್ರಾಮ ರಕ್ಷಣೆಗಾಗಿ ಗ್ರಾಮದ ಸುತ್ತಲು ಕಟ್ಟಿದ ಗೋಡೆಗಳು. ಇವು ಗ್ರಾಮ ಎಂಬ ಅರ್ಥವನ್ನೇ ಕೊಡುತ್ತವೆ. ಇವು ಉತ್ತರ ಪದವಾಗಿ ಉಳ್ಳ ಕೆಲವು ಗ್ರಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ.

ಉದಾ: ಕೋಟೆ–ಚಿತ್ರಭಾನುವಿನ ಕೋಟೆ–ಚಿತ್ರಭಾನಕೋಟೆ (ಮುಧೋ) –ಬಾಂಗಡದ ಕೋಟೆ–ಬಾಂಗಡಕೋಟೆ–ಬಾಗಲಕೋಟೆ (ಬಾಗ)

ಗಡ: ಅಮೀನನ ಗಡ–ಅಮೀನಗಡ (ಹುನ)

೩. ಉತ್ತರಪದ ವಾಟ

ವಾಟ = ಊರು

ಉದಾ: ಉಗಲದ ವಾಟ –ಉಗಲವಾಟ (ಬಾದಾ)

೫೦. ಉತ್ತರಪದ ಗಾಂವ–ಗಾಂವಿ

ಗಾಂವ, ಗಾಂವಿ ಅಂದರೆ ಊರು. ಇವು ಉತ್ತರ ಪದವಾಗಿರುವ ಗ್ರಾಮನಾಮಗಳು.

ಉದಾ: ಗಾಂವ–ಗಿರಿಯಲ್ಲಿಯ ಗಾಂವ–ಗಿರಿಗಾಂವ–ಗಿರಗಾಂವ (ಬೀಳ)

ನಂದನ ಗಾಂವ–ನಂದಗಾಂವ (ಮುಧೋ)

ಸುರರ ಗಾಂವ–ಸುರಗಾಂವ (ಮುಧೋ)

ಸೋರೆಯ ಗಾಂವ–ಸೋರೆಗಾಂವ–ಸೋರಗಾಂವ (ಮುಧೋ)

ಗಾಂವಿ–ಮಡದ ಗಾಂವಿ–ಮಡಗಾಂವಿ–ಮಳಗಾಂವಿ (ಹುನ) ಹಿರೇ –ಮಡಗಾಂವಿ–ಮಳಗಾಂವಿ (ಹುನ) ಚಿಕ್ಕ

B. ಕರ್ಮಧಾರಯ ಸಮಾಸ

ಸಮಾಸದಲ್ಲಿ ಪೂರ್ವೋತ್ತರ ಪದಗಳೆರಡೂ ಪ್ರಥಮಾಂತವಾಗಿದ್ದು ಉತ್ತರಪದವು ಪ್ರಧಾನವಾಗಿರುವ ಸಮಾಸವು ಕರ್ಮಧಾರಯ. ಈ ಎರಡು ಪದಗಳಲ್ಲಿಯ ಉತ್ತರ ಪದವು ನಾಮಪದವಾಗಿದ್ದು ಪೂರ್ವಪದವು ವಿಶೇಷಣವಾಗಿರುತ್ತದೆ. ಇಂತಹ ಅನೇಕ ಹೆಸರುಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ.

ಪ್ರಮಾಣ– ಚಿಕ್ಕದಾದ+ಊರು = ಚಿಕ್ಕೂರು (ಮುಧೋ)

ಹಿರಿದಾದ+ಊರು = ಹೆರೂರು (ಹುನ)

ಹಿರಿದಾದ+ಪಳ್ಳಿ = ಹೆಬ್ಬಳ್ಳಿ (ಬಾದಾ)

ಹಿರಿದಾದ+ಪಾಳ = ಹೆಬ್ಬಾಳ (ಮುಧೋ)

ಹಿರಿದಾದ+ಕುಜುವ = ಹೆಗ್ಗುಜುವ (ಬೀಳ)

ದಿಕ್ಕು- ತೆಗ್ಗಿನಲ್ಲಿರುವ ಊರ-ತೆಗ್ಗು+ಇ = ತೆಗ್ಗಿ (ಬೀಳ)

ಕಡೆಯದಾದ+ಪಟ್ಟಿ = ಕಡಪಟ್ಟಿ (ಜಮ)

ಉತ್ತಣ+ಊರು = ಉತ್ತೂರು (ಮುಧೋ)

ಮ್ಯಾಗಿನ+ಕೇರಿ = ಮ್ಯಾಗೇರಿ (ಬಾಗ)

ಯಡಕಿನ+ಹಳ್ಳಿ = ಯಡಹಳ್ಳಿ (ಬೀಳ, ಮುಧೋ)

ಬಣ್ಣ - ಕೆಂದಾದ+ಊರ = ಕೆಂದೂರು (ಬಾದಾ)

ಕಾಲ - ಮುದಿ+ಊರು = ಮುತ್ತೂರು (ಜಮ)

ಹೊಸದು+ಊರು = ಹೊಸೂರು (ಜಮ, ಬಾಗ)

ಹೊಸದು+ಕೋಟೆ = ಹೊಸಕೋಟೆ (ಮುಧೋ)

C. ಮಧ್ಯಮ ಪದಲೋಪಿ ಸಮಾಸ

ವಿಗ್ರಹ ವಾಕ್ಯದಲ್ಲಿ ಪೂರ್ವೋತ್ತರ ಪದಗಳ ಮಧ್ಯದಲ್ಲಿ ಒಂದು ಪದ ಬಂದು ಅರ್ಥಪೂರ್ಣವಾಗುತ್ತದೆ. ಮತ್ತು ಸಮಾಸವಾದೊಡನೆ ಆ ಪದವು ಲೋಪವಾಗುತ್ತದೆ. ಇಂತಹ ಸಮಾಸಕ್ಕೆ ಮಧ್ಯಮ ಪದಲೋಪಿ ಸಮಾಸವೆನ್ನುತ್ತಾರೆ. ಇದು ಕರ್ಮಧಾರೆಯದಲ್ಲಿ ಬರುತ್ತದೆ.

ಕೆಲವು ಗ್ರಾಮಗಳಿಗೆ ಇಂತಹ ಹೆಸರುಗಳಿರುತ್ತವೆ.

ಉದಾ: ಕುಳಕ್ಕಾಗಿ ಬಿಟ್ಟ ಹಳ್ಳಿ-ಕುಳಹಳ್ಳಿ-ಕುಲಹಳ್ಳಿ (ಜಮ) ಕುಳ ಅಂದರೆ ತೆರಿಗೆ.

ಮಂಟು ಬಿಟ್ಟ ಊರು-ಮಂಟೂರು (ಮುಧೋ)

ಬಳ್ಳದಂತಹ ಊರು-ಬಳ್ಳೂರು (ಬೀಳ)

D. ದ್ವಿಗು ಸಮಾಸ

ಸಂಖ್ಯಾಪೂರ್ವಪದ ಕರ್ಮದಾರಯವನ್ನೇ ದ್ವಿಗುಸಮಾಸವೆಂದು ಕರೆಯುತ್ತಾರೆ. ಇಂತಹ ಸಮಾಸವಿರುವ ಹೆಸರಿನ ಊರುಗಳು ಬಾಗಲಕೋಟೆ ಜಿಲ್ಲೆಯಲ್ಲಿ ಇರುತ್ತವೆ.

ಉದಾ: ಒಂಟಿಯಾದ ಕೋಡಿ-ಒಂಟಿಗೋಡಿ-ಒಂಟಗೋಡಿ (ಮುಧೋ)

ಹಲವು ಕುರ್ಕಿ-ಹಲಕುರ್ಕಿ (ಬಾದಾ)

ಹಲವು ಕಲಿ-ಹಲಗಲಿ (ಮುಧೋ)

ಮೂರು ಮಣ್ಣ–ಮುಮ್ಮಣ್ಣ+ಇಗೆ = ಮುಮ್ಮಣ್ಣಿಗೆ–ಮುಮ್ಮಣಗಿ (ಬಾಗ)

ಮೂರು ಮರಡಿ–ಮುಮ್ಮರಡಿ–ಇದರ ಕೊಪ್ಪ–ಮುಮ್ಮರಡಿಕೊಪ್ಪ (ಬಾದಾ)

E. **ಬಹುವ್ರೀಹಿ ಸಮಾಸ**

ಎರಡು ಪದಗಳು ಸೇರಿ ಸಮಾಸವಾದಾಗ ಬೇರೊಂದು ಅರ್ಥವು ಪ್ರಧಾನವಾಗಿದ್ದರೆ ಆ ಸಮಾಸಕ್ಕೆ ಬಹುವ್ರೀಹಿ ಸಮಾಸವೆನ್ನುತ್ತಾರೆ. ಉದಾ: ಕರಡಿಗುಡ್ಡ, ಇದು ಒಂದು ಊರಿನ ಹೆಸರು. ಕರಡಿ ಎಂದರೂ ಊರಲ್ಲ. ಗುಡ್ಡ ಎಂದರೂ ಊರಲ್ಲ. ಆದರೆ, ಕರಡಿಗಳು ಇರುವ ಗುಡ್ಡದ ಊರು ಯಾವದೋ ಅದು– 'ಕರಡಿ ಗುಡ್ಡ' ಎಂದಾಗ ಮಾತ್ರ ಅದು ಊರಾಗುತ್ತದೆ.

ಗುಡ್ಡ, ದಿನ್ನಿ, ಮಟ್ಟಿ, ಕಟ್ಟಿ, ಕಲಿ, ಬಾವಿ ಇವೇ ಮುಂತಾದವು ಉತ್ತರಪದವಾಗಿ ಬರುವ ಗ್ರಾಮನಾಮಗಳು ಹಲವು. ಇವು ಸ್ವತಃ ಗ್ರಾಮ ಎಂದು ಅರ್ಥ ಕೊಡುವದಿಲ್ಲ. ಆದರೆ ಇವು ಇರುವ ಊರು ಎಂದು ಬಹುವ್ರೀಹಿ ಸಮಾಸವನ್ನು ಮಾಡಿದರೆ ಆ ಊರು ಅನ್ವರ್ಥಕನಾಮವಾಗಿ ಸಮರ್ಥನೆ ಪಡೆಯುತ್ತದೆ. ಇಂತಹ ಹಲವು ಗ್ರಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿ ಇರುತ್ತವೆ.

ಅ. ಉತ್ತರಪದ ಗುಡ್ಡ

ಗುಡ್ಡ ಉತ್ತರಪದವಾಗಿರುವ ಬಹುವ್ರೀಹಿ ಸಮಾಸದ ಗ್ರಾಮಗಳು.

ಉದಾ: ಕರಡಿ ಗುಡ್ಡ–ಕರಡಿಗಳು ಇರುವ ಗುಡ್ಡದ ಊರು ಯಾವದೋ ಅದು (ಬಾದಾ)

ಕಳ್ಳಿ ಗುಡ್ಡ–ಕಳ್ಳಿಯಿಂದ ಕೂಡಿದ ಗುಡ್ಡದ ಊರು (ಹುನ)

ಗುಳೇದ ಗುಡ್ಡ–ಗುಳೇ ಕಟ್ಟಿಕೊಂಡು ಬಂದ ಗುಡ್ಡದ ಊರು (ಬಾದಾ)

ಚೊಳಚ ಗುಡ್ಡ–ಚೊಳಚಿಯು ಇರುವ ಗುಡ್ಡದ ಊರು (ಬಾದಾ)

ಬಾಚಿನ ಗುಡ್ಡ–ಬಾಚಲು ಬರುವ ಗುಡ್ಡದ ಊರು (ಬಾದಾ)

ಮಂಗಳ ಗುಡ್ಡ–ಮಂಗಳಕರವಾದ ಗುಡ್ಡದ ಊರು (ಬಾದಾ)

ಮೆಟಗುಡ್ಡ–ಮೆಟ್ಟಲು ಬರುವ ಗುಡ್ಡದ ಊರು (ಮುಧೋ)

ಮುಚ್ಚಳ ಗುಡ್ಡ–ಮುಚ್ಚಳದಂತಹ ಗುಡ್ಡದ ಊರು (ಬಾದಾ)

ಇದು ಚಿಕ್ಕದಾಗಿರುವುದರಿಂದ ಚಿಕ್ಕಮುಚ್ಚಳಗುಡ್ಡ ಎಂದು ಕರೆಯುತ್ತಾರೆ. ಇನ್ನೊಂದು ಹಿರೇಮುಚ್ಚಳ ಗುಡ್ಡವೆಂದಿದೆ.

ಆ. ಉತ್ತರಪದ ದಿನ್ನಿ

ದಿನ್ನಿ ಇದು ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಗ್ರಾಮಗಳು.

ಉದಾ: ಆನದಿನ್ನಿ–ಆನೆಯಂತಿರುವ ದಿನ್ನಿಯ ಊರು (ಬಾಗ) ಇಲ್ಲಿ ಆನೆ – ಆನ ಆಗಿದೆ

ಕಮಲದಿನ್ನಿ–ಕಮಲದಂತಿರುವ ದಿನ್ನಿಯ ಊರು (ಹುನ)

ಚಿಂತಕಮಲದಿನ್ನಿ (ಹುನ) –ಚೌಕಮಲದಿನ್ನಿ (ಹುನ) –ಜಾಕಮಲದಿನ್ನಿ (ಹುನ)

–ಬೇಕಮಲದಿನ್ನಿ (ಹುನ)

ಇಂತಹ ಕಮಲಾಕಾರದ ದಿನ್ನಿಯನ್ನೊಳಗೊಂಡ ಊರುಗಳು ಪಕ್ಕ–ಪಕ್ಕದಲ್ಲಿಯೆ ಹಲವು ಇರುವದರಿಂದ ಅವನ್ನು ವಿಶೇಷಣಗಳಿಂದ ಬೇರ್ಪಡಿಸಲಾಗಿದೆ.

ಈ ಎಲ್ಲ ಕಮಲದಿನ್ನಿಗಳಿರುವದು ಹುನಗುಂದ ತಾಲೂಕಿನಲ್ಲಿಯೆ ಎಂಬುದು ಒಂದು ವಿಶೇಷ.

ಗರಡದಿನ್ನಿ–ಗರಡವು ಇರುವ ದಿನ್ನಿಯ ಊರು (ಬೀಳ)

ಗೋವಿನದಿನ್ನಿ–ಗೋವುಗಳು ಇರುವ ದಿನ್ನಿಯ ಊರು (ಬೀಳ)

ಜಂಬಲದಿನ್ನಿ–ಜಂಬಲಾಗಿರುವ ದಿನ್ನಿಯ ಊರು (ಹುನ)

ಬನ್ನಿದಿನ್ನಿ–ಬನ್ನಿಗಿಡದ ದಿನ್ನಿಯ ಊರು (ಬಾಗ)

ಬಾದರದಿನ್ನಿ–ಬಾದರು ವಾಸಿಸುವ ದಿನ್ನಿಯ ಊರು (ಬೀಳ)

ಬಿಸಲದಿನ್ನಿ–ಬಿಸಲದೇವನ ದಿನ್ನಿಯ ಊರು (ಹುನ)

ಬೊಮ್ಮನದಿನ್ನಿ–ಬೊಮ್ಮದೇವನ ದಿನ್ನಿಯ ಊರು (ಮುಧೋ) (ಬಾದಾ)

ಬೋಡನಾಯಕದಿನ್ನಿ–ಬೋಡನಾಯಕನ ದಿನ್ನಿಯ ಊರು (ಬಾಗ)

ಮುತ್ತಲದಿನ್ನಿ–ಮುತ್ತಲಗಿಡದ ದಿನ್ನಿಯ ಊರು (ಬೀಳ)

ವರಗೋಡದಿನ್ನಿ–ವರಗೋಡನ ದಿನ್ನಿಯ ಊರು (ಹುನ)

ಇ. ಉತ್ತರಪದ ಮಟ್ಟಿ

ಮಟ್ಟಿ ಉತ್ತರಪದವಾಗಿರುವ ಬಹುವ್ರೀಹಿ ಸಮಾಸದ ಗ್ರಾಮನಾಮಗಳು. 'ಮಟ್ಟಿ' ಅಂದರೆ ಮಣ್ಣು.

ಉದಾ: ಕಡ್ಲಿಮಟ್ಟಿ–ಕಡ್ಲಿ ಬೆಳೆಯುವ ಮಟ್ಟಿಯ ಊರು (ಬಾಗ)

ಕೆರಕಲಮಟ್ಟಿ–ಕೆರಕಲಾಗಿರುವ ಮಟ್ಟಿಯ ಊರು (ಬಾದಾ)

ಜಾನಮಟ್ಟಿ–ಜಾಣರು ಇರುವ ಮಟ್ಟಿಯ ಊರು (ಬಾಗ)

ತುಂಬರಮಟ್ಟಿ–ತುಂಬರ ಜನಾಂಗವಿರುವ ಮಟ್ಟಿಯ ಊರು (ಬೀಳ)

ತೋಳಮಟ್ಟಿ–ತೋಳಗಳಿರುವ ಮಟ್ಟಿಯ ಊರು (ಬೀಳ)

ಬೇವಿನಮಟ್ಟಿ–ಬೇವಿನ ಗಿಡಗಳಿರುವ ಮಟ್ಟಿಯ ಊರು (ಬಾಗ)

ಬೇವಿನಮಟ್ಟಿ–ಬೇವಿನ ಗಿಡಗಳಿರುವ ಮಟ್ಟಿಯ ಊರು (ಹುನ)

ಭೈರಮಟ್ಟಿ–ಭೈರದೇವರ ಮಟ್ಟಿಯ ಊರು (ಜಮ)

ಮದನಮಟ್ಟಿ–ಮದನನ ಮಟ್ಟಿಯ ಊರು (ಜಮ)

ವಜ್ಜರ ಮಟ್ಟಿ–ವಜ್ಜರದಂತಹ ಮಟ್ಟಿಯ ಊರು (ಮುಧೋ)

ಸೀಪರಮಟ್ಟಿ–ಸೀಪರಾಗಿರುವ ಮಟ್ಟಿಯ ಊರು (ಬಾದಾ)

ಈ. ಉತ್ತರಪದ ಕಟ್ಟೆ

ಕಟ್ಟೆ>ಕಟ್ಟಿ ಉತ್ತರಪದವಾಗಿರುವ ಬಹುವ್ರೀಹಿ ಸಮಾಸದ ಗ್ರಾಮ ನಾಮಗಳು.

ಹಿಂದಿನ ಕಾಲದಲ್ಲಿ ಜನರು ಅಲ್ಲಲ್ಲಿ ಗುಂಪಾಗಿ ಇರುತ್ತಿದ್ದರು. ಅವರು ತಮ್ಮ ತಮ್ಮಲ್ಲಿಯ ನ್ಯಾಯಗಳನ್ನು ತಮ್ಮಲ್ಲಿಯೇ ನಿಭಾಯಿಸಿಕೊಳ್ಳುತ್ತಿದ್ದರು. ಅದಕ್ಕಾಗಿ ಹಿರಿಯರಾದವರು ಒಂದು ಕಟ್ಟೆಯ ಮೇಲೆ ಕೂಡುತ್ತಿದ್ದರು. ಅವು ಇಂದಿನ ಚಾವಡಿಯಂತೆ ಇರುತ್ತಿದ್ದವು. ಆ ಕಟ್ಟೆ ಯಾವ ಗಿಡದ ಕೆಳಗೆ ಇರುತ್ತಿದ್ದಿತೊ ಅದಕ್ಕೆ ಆ ಗಿಡದ ಕಟ್ಟೆ ಎಂದು ಕರೆಯಲಾಗುತ್ತಿತ್ತು. ಕ್ರಮೇಣ ಜನರು ಅಲ್ಲಿಯೆ ಸ್ಥಾಯಿಯಾದುದರಿಂದ ಅವೇ ಊರುಗಳಾದವು. ಆ ಹೆಸರಿನಿಂದಲೇ ಕರೆಸಿಕೊಂಡವು. ಇಂತಹ ಅನೇಕ ಊರುಗಳು ಬಾಗಲಕೋಟೆ ಜಿಲ್ಲೆಯಲ್ಲಿ ಇರುತ್ತವೆ.

ಉದಾ: ಅರಳಿಕಟ್ಟೆ–ಅರಳಿಮರದ ಕಟ್ಟೆಯ ಊರು (ಮುಧೋ) ಅರಳಿ ಕಟ್ಟೆಗಳು ಎರಡು ಇದ್ದು ಒಂದಕ್ಕೆ ಜಾಡರ ಅರಳಿಕಟ್ಟೆಯೆಂದೂ ಇನ್ನೊಂದಕ್ಕೆ ಬೇಡರ ಅರಳಿಕಟ್ಟೆಯೆಂದೂ ಕರೆಯಲಾಗುತ್ತದೆ.

ಆಲದ ಕಟ್ಟೆ–ಆಲದ ಮರದ ಕಟ್ಟೆಯ ಊರು (ಬಾದಾ)

ಕೈನಕಟ್ಟೆ–ಬೇವು ಎಂಬ ಅರ್ಥವಿರಬೇಕು (ಬಾದಾ)

ಚಿಂಚಲ ಕಟ್ಟಿ–ಚಿಂಚಲ ಗಿಡದ ಕಟ್ಟೆಯ ಊರು (ಬಾದಾ)

ಜಾಲಿಕಟ್ಟಿ–ಜಾಲಿಗಿಡದ ಕಟ್ಟೆಯ ಊರು (ಮುಧೋ)

ಬನ್ನಿಕಟ್ಟಿ–ಬನ್ನಿಗಿಡದ ಕಟ್ಟೆಯ ಊರು (ಬಾಗ)

ಬಸರಿಕಟ್ಟಿ–ಬಸರಿಗಿಡದ ಕಟ್ಟೆಯ ಊರು (ಬಾದಾ)

ಮತ್ತಿಕಟ್ಟಿ–ಮತ್ತಿಗಿಡದ ಕಟ್ಟೆಯ ಊರು (ಬಾದಾ)

ಹುಣಸಿಕಟ್ಟಿ–ಹುಣಸಿಗಿಡದ ಕಟ್ಟೆಯ ಊರು (ಬಾದಾ)

ಹೊನ್ನಿಕಟ್ಟಿ–ಹೊನ್ನಾಕಟ್ಟಿ–ಹೊನ್ನಿಗಿಡದ ಕಟ್ಟೆಯ ಊರು (ಬಾಗ)

ಇಂತಹ ಕಟ್ಟೆಗಳು ವ್ಯಕ್ತಿಗಳ ಹೆಸರಿನಿಂದ, ಹಿರಿಯರ, ದೇವತೆಗಳ ಹೆಸರಿನಿಂದಲೂ ಇರುವುದುಂಟು.

ಉದಾ: ಅನಪಕಟ್ಟಿ (ಹುನ) ಅಣ್ಣಪ್ಪನ ಕಟ್ಟೆಯ ಊರು (ಹುನ) ಇಲ್ಲಿ ಅಣ್ಣಪ್ಪ –ಅನಪ ಎಂದಾಗಿದೆ.

ಚಿಮ್ಮನ ಕಟ್ಟಿ–ಚಿಮ್ಮನ ಕಟ್ಟೆಯ ಊರು (ಬಾದಾ)

ಜಮ್ಮದ ಕಟ್ಟಿ–ಜಮ್ಮದ ಕಟ್ಟೆಯ ಊರು (ಬಾದಾ) ಜಮ್ಮ ಎಂದರೆ ಉಂಬಳಿ

ಪಾದನ ಕಟ್ಟಿ–ಪಾದನ ಕಟ್ಟೆಯ ಊರು (ಬಾದಾ) ಪಾದ ಅಂದರೆ ಹಿರಿಯ

ಬೆನಕಟ್ಟಿ–ಬೆನಕನ ಕಟ್ಟೆಯ ಊರು (ಬಾಗ) ಇಲ್ಲಿ ಬೆನಕ ಬೆನ ಆಗಿದೆ

ಕೆಲವೊಮ್ಮೆ ಗದಬಾದೇಶ ಸಂಧಿ ನಿಯಮಕ್ಕನುಸರಿಸಿ ಕಟ್ಟಿ–ಗಟ್ಟಿ ಎಂದಾಗುತ್ತದೆ.

ಉದಾ: ಉದಗಟ್ಟಿ–ಊದು ಹಾಕುವ ಕಟ್ಟೆಯ ಊರು (ಬಾಗ)

ತಪಸಗಟ್ಟಿ –ತಪಸ್ಸು ಮಾಡುವ ಕಟ್ಟೆಯ ಊರು (ಬಾದಾ)

ಉ. ಉತ್ತರಪದ ಕಲಿ

'ಕಲಿ' ಉತ್ತರ ಪದದಲ್ಲಿರುವ ಬಹುವ್ರೀಹಿ ಸಮಾಸದ ಗ್ರಾಮನಾಮಗಳು.

ಉದಾ: ಕೊಡಗಲಿ (ಚಿಕ್ಕ) –ಕೊಡುವಲ್ಲಿ ಕಲಿಯಾದವರ ಊರು (ಹುನ)

–ಕೊಡಗಲಿ (ಹಿರೇ)

ಗಲಗಲಿ–ಗಲದಲ್ಲಿ ಕಲಿಯಾದವರ ಊರು (ಬೀಳ)

ಹಡಗಲಿ–ಹಡಗು ನಡೆಸುವಲ್ಲಿ ಕಲಿಯಾದವರ ಊರು (ಹುನ)

ಬೆಳಗಲಿ–ಬಿಳಿದು ಕಲಿಗಳುಳ್ಳಂತಹ ಊರು (ಮುಧೋ)

ಹಲಗಲಿ–ಹಲವು ಕಲಿಗಳುಳ್ಳಂತಹ ಊರು (ಮುಧೋ)

ಊ. ಉತ್ತರಪದ ಬಾವಿ

'ಬಾವಿ' ಉತ್ತರ ಪದದಲ್ಲಿರುವ ಬಹುವ್ರೀಹಿ ಸಮಾಸದ ಕೆಲವು ಗ್ರಾಮನಾಮಗಳು.

ಉದಾ: ಗೋಲಬಾವಿ–ಗೋಲಾದ ಬಾವಿಯ ಊರು (ಜಮ) ಈಗ ಅಂತಹ ಯಾವ ಬಾವಿಯೂ ಆ ಊರಲ್ಲಿಲ್ಲ.

ಮದಬಾವಿ–ಮದ್ದಿನ (ಔಷಧ) ಬಾವಿಯ ಊರು (ಮುಧೋ)

ಸೂಳಿಬಾವಿ–ಸೂಳಿಯು ಕಟ್ಟಿಸಿದ ಬಾವಿಯ ಊರು (ಹುನ)

ಕೆಸರಬಾವಿ–ಕೆಸರಿನಿಂದ ಕೂಡಿದ ಬಾವಿಯ ಊರು (ಹುನ)

ಎ. ಉತ್ತರಪದ ಮರಡಿ

'ಮರಡಿ' ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಊರು.

ಉದಾ: ಅಕ್ಕಿಮರಡಿ–ಅಕ್ಕಿ ಬೆಳೆಯುವ ಮರಡಿಯ ಊರು (ಮುಧೋ)

ಏ. ಉತ್ತರಪದ ಡೋಣಿ

'ಡೋಣಿ' ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಊರು.

ಉದಾ: ಖಜ್ಜಿಡೋಣಿ–ಖಜ್ಜಿಯಾಗುವ ಡೋಣಿಯ ಊರು (ಬಾಗ)

ಐ. ಉತ್ತರಪದ ಕೆರೆ

'ಕೆರೆ' ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಊರು:

ಉದಾ: ಹಿರೇಯರನ ಕೆರೆ–ಹಿರೇಯರನು ಕಟ್ಟಿಸಿದ ಕೆರೆಯ ಊರು (ಹುನ)

ದೇಸಾಯಿ ಕೆರೆ–ದೇಸಾಯಿಯು ಕಟ್ಟಿಸಿದ ಕೆರೆಯ ಊರು (ಜಮ)

ಒ. ಉತ್ತರಪದ ಸಾಗರ

'ಸಾಗರ' ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಊರು.

ಉದಾ: ಹನುಮಸಾಗರ–ಹನುಮನ ಹೆಸರಿನ ಸಾಗರದ ಊರು (ಬಾದಾ)

ಓ. ಉತ್ತರಪದ ಗಿರಿ

'ಗಿರಿ' ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಊರು.

ಉದಾ: ಅನಂತಗಿರಿ–ಅನಂತನು ವಾಸವಾಗಿರುವ ಗಿರಿಯ ಊರು (ಬಾದಾ)

ಔ. ಉತ್ತರಪದ ಕುಪ್ಪಿ

'ಕುಪ್ಪಿ' ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಊರು.

ಉದಾ: ಶಿರಗುಪ್ಪಿ–ಸಿರಿಯಿರುವ ಕುಪ್ಪಿಯ ಊರು (ಬಾಗ)

ಶಿರಗುಪ್ಪಿ–ಸಿರಿಯಿರುವ ಕುಪ್ಪಿಯ ಊರು (ಬೀಳ)

ಶಿರಗುಪ್ಪಿ–ಸಿರಿಯಿರುವ ಕುಪ್ಪಿಯ ಊರು (ಜಮ)

ಇಲ್ಲಿ ಗದಬಾದೇಶ ಸಂಧಿಯ ನಿಯಮಕ್ಕನುಸರಿಸಿ ಕುಪ್ಪಿ–ಗುಪ್ಪಿ ಎಂದಾಗಿದೆ.

ಅಂ. ಉತ್ತರಪದ ಗುತ್ತಿ

'ಗುತ್ತಿ' ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಊರು.

ಉದಾ: ಯಳ್ಳಿಗುತ್ತಿ–ಯರಳೆ ಇರುವ ಗುತ್ತಿಯ ಊರು (ಬಾಗ)

ಯಳ್ಳಿಗುತ್ತಿ–ಯರಳೆ ಇರುವ ಗುತ್ತಿಯ ಊರು (ಬೀಳ)

ಯರಳೆ–ಯಳ್ಳೆ–ಯಳ್ಳಿ ಎಂದಾಗಿದೆ. ಎರಳೆ–ಚಿಗರಿ

ಸಿಂಗನಗುತಿ–ಸಿಂಹ = ಸಿಂಗವು ಇರುವ ಗುತ್ತಿಯ ಊರು (ಹುನ)

ಅಃ. ಉತ್ತರಪದ ಗುಂಡಿ

'ಗುಂಡಿ' ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಊರುಗಳು.

ಉದಾ: ಆಳಗುಂಡಿ–ಆಳವಾದ (ಗಟ್ಟಿಯಾದ) ಗುಂಡಿ ಇರುವ ಊರು (ಬೀಳ)

ಆಲಗುಂಡಿ–ಆಳವಾದ ಗುಂಡಿ ಇರುವ ಊರು (ಮುಧೋ)

ಆಲಗುಂಡಿ–ಆಳವಾದ ಗುಂಡಿ ಇರುವ ಊರು (ಬೀಳ) ಚಿಕ್ಕ

ಚಿನಗುಂಡಿ–ಚಿನ್ನ ದೊರೆಯುವ ಗುಂಡಿಯ ಊರು (ಜಮ)

ಕ. ಉತ್ತರಪದ ಕಂಡಿ–ಗಂಡಿ, ಖಂಡಿ; ಕಿಂಡಿ

'ಕಂಡಿ' ಉತ್ತರ ಪದವಾಗಿರುವ ಬಹುವ್ರೀಹಿ ಸಮಾಸದ ಊರುಗಳು.

ಉದಾ: ಚಿಂಚಕಂಡಿ–ಚಿಂಚಗಿಡದ ಕಂಡಿಯ ಊರು (ಮುಧೋ) ಬಿ.ಕೆ.

ಚಿಂಚಕಂಡಿ–ಚಿಂಚಗಿಡದ ಕಂಡಿಯ ಊರು (ಮುಧೋ) ಕೆ.ಡಿ.

ಜಂಬುಖಂಡಿ–ಜಮಖಂಡಿ–ಜಂಬು ಗಿಡವಿರುವ ಖಂಡಿಯ ಊರು (ಜಮ)

ಬಾಡಗಂಡಿ–ಬಾಡವು ಬೆಳೆಯುವ ಕಂಡಿಯ ಊರು (ಬೀಳ)

ಮುಚಖಂಡಿ–ಮುಚ್ಚದಂತ ಖಂಡಿಯ ಊರು (ಬಾಗ)

ಹಣಗಂಡಿ–ಹನಗಂಡಿ–ಹಣ ತಯಾರಿಸುವ ಕಂಡಿಯ ಊರು (ಜಮ)

ಇಲ್ಲಿ ಗದಬಾದೇಶ ಸಂಧಿಯ ನಿಯಮಕ್ಕನುಸರಿಸಿ, ಬಾಡಗಂಡಿ, ಹನಗಂಡಿಗಳಲ್ಲಿ ಕ–ಗ ಆಗಿದೆ.

ಕಿಂಡಿ: ಬೆಳ್ಳಿಕಿಂಡಿ–ಬೆಳ್ಳಿ ದೊರೆಯುವ ಕಿಂಡಿಯ ಊರು (ಬಾದಾ)

ಖ. ಉತ್ತರಪದ ಈಶ್ವರ

ಈಶ್ವರ ಉತ್ತರಪದವಾಗಿರುವ ಬಹುವ್ರೀಹಿ ಸಮಾಸದ ಊರುಗಳು.

ಉದಾ: ಢವಳೇಶ್ವರ–ಧವಲ ಈಶ್ವರನಿರುವ ಊರು (ಬೀಳ)

ಢವಳೇಶ್ವರ–ಧವಲ ಈಶ್ವರನಿರುವ ಊರು (ಮುಧೋ) ಇಲ್ಲಿ ಧ–ಢ ಎಂದಾಗಿದೆ.

ನಂದಿಕೇಶ್ವರ–ನಂದಿಕಾ ಈಶ್ವರನಿರುವ ಊರು (ಬಾದಾ)

ಲವಳೇಶ್ವರ–ಲವಲ ಈಶ್ವರನಿರುವ ಊರು (ಬಾಗ) ಇಲ್ಲಿ ಲ ಕಾರ ಳ ಕಾರವಾಗಿದೆ.

ಗ. ಉತ್ತರಪದ ತೀರ್ಥ

ತೀರ್ಥ ಉತ್ತರಪದವಾಗಿರುವ ಬಹುವ್ರೀಹಿ ಸಮಾಸದ ಊರುಗಳು.

ಉದಾ: ರಾಮತೀರ್ಥ–ರಾಮನ ತೀರ್ಥವಿರುವ ಊರು (ಜಮ)

ಘ. ಉತ್ತರಪದ ಮನಿ

ಮನಿ ಉತ್ತರಪದವಾಗಿರುವ ಬಹುವ್ರೀಹಿ ಸಮಾಸದ ಊರುಗಳು.

ಉದಾ: ಸೀತಿಮನಿ–ಸೀತಿಯ ಮನಿ ಇರುವ ಊರು (ಬಾಗ)

F. **ದ್ವಿಸಮಾಸ**

ಒಂದೊಂದು ಗ್ರಾಮನಾಮದಲ್ಲಿ ಎರಡೆರಡು ಸಮಾಸಗಳಾಗುತ್ತವೆ. ಇಂತಹ ಗ್ರಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ.

ಉದಾ: ಒಳಕಲ್ಲುದಿನ್ನಿ (ಹುನ)

ಒರಳು ಮತ್ತು ಕಲ್ಲು–ಒಳಕಲ್ಲು. ಇದು ದ್ವಂದ್ವಸಮಾಸ. ಒಳಕಲ್ಲು ಇರುವಂತಹ ದಿನ್ನಿಯ ಊರು ಒಳಕಲ್ಲದಿನ್ನಿ, ಇದು ಬಹುವ್ರೀಹಿ.

ಗುಡದಿನ್ನಿ–ಗುಡ್ಡ ಮತ್ತು ದಿನ್ನಿ–ಗುಡದಿನ್ನಿ (ಬಾಗ) ಇದು ದ್ವಂದ್ವಸಮಾಸ, ಗುಡ್ಡವೆಂದರೂ ಊರಲ್ಲ, ದಿನ್ನಿ ಎಂದರೂ ಊರಲ್ಲ. ಇವೆರಡರ ಸಮಾಹಾರವೇ ಗುಡದಿನ್ನಿ ಎಂಬ ಊರು. ಇದು ಬಹುವ್ರೀಹಿ.

ಗಿರಿಸಾಗರ–ಗಿರಿ ಮತ್ತು ಸಾಗರ–ಗಿರಿಸಾಗರ (ಬೀಳ) ಇದು ದ್ವಂದ್ವಸಮಾಸ, ಇವುಗಳ ಸಮಾಹಾರವೇ 'ಗಿರಿಸಾಗರ' ಎಂಬ ಊರು. ಇದು ಬಹುವ್ರೀಹಿ ಸಮಾಸ.

ಸುತಗುಂಡಾರ–ಸುತ್ತಲೂ ಇರುವ ಗುಂಡಾರ (ಬಾಗ)

ಸುತಗುಂಡಾರ–ಸುತಗುಂಡಾರ ಇದು ಮಧ್ಯಮಪದಲೋಪಿ ಸಮಾಸ. ಸುತಗುಂಡಾರದ ಊರು ಸುತಗುಂಡಾರ ಇದು ಬಹುವ್ರೀಹಿ ಸಮಾಸ.

ಮೂರುಮಟ್ಟಿ–ಮೂರು ಮಟ್ಟಿ –ಇದು ಗಮಕ ಸಮಾಸ

ಮೂರು ಮಟ್ಟಿಯ ಊರು. ಇದು ಬಹುವ್ರೀಹಿ ಸಮಾಸ (ಬಾಗ)

ಇವುಗಳಲ್ಲಿ ಸಣ್ಣ–ದೊಡ್ಡವಿದ್ದುದರಿಂದ ಹಿರೇಮೂರಮಟ್ಟಿ, ಚಿಕ್ಕಮೂರಮಟ್ಟಿ ಎಂದು ಕರೆಯಲಾಗುತ್ತದೆ.

೨. ಅಲುಕ್ ಸಮಾಸ

ಅಲುಕ್ ಸಮಾಸವೆನ್ನುವದು, ಸಮಾಸಗಳಲ್ಲಿಯ ಒಂದು ಪ್ರಭೇದವಲ್ಲ. ತತ್ಪುರುಷ ಸಮಾಸದಲ್ಲಿ ಸಮಾಸ ಕಾರ್ಯ ನಡೆಯುವಾಗ ಒಮ್ಮೊಮ್ಮೆ ಮಧ್ಯದಲ್ಲಿರುವ ವಿಭಕ್ತಿಗಳು ಲೋಪವಾಗದೆ ಹಾಗೆಯೆ ಉಳಿಯುತ್ತವೆ. ಆದರೂ ಸಮಾಸವಾಗುತ್ತದೆ. ಇದೇ 'ಅಲುಕ್ ಸಮಾಸ' ಇಂತಹ ಅಲುಕ್ ಸಮಾಸಗಳು ಬಾಗಲಕೋಟೆ ಜಿಲ್ಲೆಯ ಗ್ರಾಮನಾಮಗಳಲ್ಲಿ ಕಂಡುಬರುತ್ತವೆ.

ಅ. ಉತ್ತರಪದ ಊರು

ಊರು ಉತ್ತರಪದವಾಗಿರುವ ಗ್ರಾಮನಾಮಗಳು ಹೆಚ್ಚಾಗಿ ದೊರೆಯುತ್ತವೆ.

ಇಲ್ಲಿ ಪೂರ್ವಪದದ ವಿಭಕ್ತಿಯಲ್ಲಿಯ ಅಕಾರ ಲೋಪವಾಗುತ್ತದೆ.

ಉದಾ:ಆಚನ ಊರು–ಅಚನೂರ (ಬಾಗ)

ಕಾಕನ ಊರು–ಕಾಕನೂರು (ಬಾಗ)

ಕುಂಚನ ಊರು–ಕುಂಚನೂರ (ಜಮ)

ಕೋಣೆಗನ ಊರು–ಕೋಣೆಗನೂರ–ಕೊಣ್ಣೂರ (ಜಮ)

ಗಟ್ಟಿಗನ ಊರು–ಗಟ್ಟಿಗನೂರ (ಹುನ)

ಜಕ್ಕನ ಊರು–ಜಕ್ಕನೂರು–ಜಕನೂರ (ಬಾದಾ)

ಜಕ್ಕನ ಊರು–ಜಕ್ಕನೂರು–ಜಕನೂರ (ಜಮ) ಇಲ್ಲಿ 'ಕ್ಕ' ದ್ವಿತ್ವವು 'ಕ' ಏಕಾಕ್ಷರವಾಗಿದೆ.

ನಂದನ ಊರು–ನಂದನೂರ (ಹುನ)

ನರೇನ ಊರು–ನರೇನೂರ (ಬಾದಾ)

ನಾಗನ ಊರು–ನಾಗನೂರ (ಬಾದಾ)

ನಾಗನ ಊರು–ನಾಗನೂರ (ಜಮ)

ನಾಯಕನ ಊರು–ನಾಯನೂರ (ಬಾಗ) ಇಲ್ಲ 'ಕ' ಲೋಪವಾಗಿದೆ.

ನಿಡಸನ ಊರು–ನಿಡಸನೂರ (ಹುನ)

ಬಂಟನ ಊರು–ಬಂಟನೂರ (ಮುಧೋ)

ಬದ್ದನ ಊರು–ಬದ್ದನೂರ–ಬದ್ನೂರ (ಮುಧೋ)

ಬೀರನ ಊರು–ಬೀರನೂರ (ಬಾದಾ)

ಮರನ ಊರು–ಮರನೂರ (ಜಮ)

ಮಾಚಕನ ಊರು–ಮಾಚಕನೂರ (ಮುಧೋ)

ಮುಂಡಗನ ಊರು–ಮುಂಡಗನೂರ (ಜಮ)

ಮುದ್ದನ ಊರು–ಮುದ್ದನೂರ (ಮುಧೋ)

ಮೂಗನ ಊರು–ಮೂಗನೂರ (ಹುನ)

ಹಾಗನ ಊರು–ಹಾಗನೂರ (ಬಾದಾ)

ಹೂವನ ಊರು–ಹೂವನೂರ (ಹುನ)

ನ.ಲಿಂಗ

ಕೆಸರಿನ ಊರು–ಕೆಸರಿನೂರ (ಬಾಗ)

ಕೌಜಗನ ಊರು–ಕೌಜಗನೂರ (ಹುನ)

ಹಂಸನ ಊರು–ಹಂಸನೂರ (ಬಾದಾ)

ಹಳ್ಳದ ಊರು–ಹಳ್ಳದೂರ–ಹಳದೂರ (ಬಾದಾ)

ಹಳದೂರ –ಇಲ್ಲಿ 'ಳ' ದ್ವಿತ್ವ ಕಳೆದುಕೊಂಡಿದೆ.

'ಊರು' ಸೇರಿ ಸಮಾಸವಾಗುವ ಪ್ರಸಂಗದಲ್ಲಿ 'ಸ್ವರಲೋಪ' ಸಂಧಿಯಾಗುತ್ತದೆ.

ಆ. ಉತ್ತರಪದ ಹಳ್ಳಿ

'ಹಳ್ಳಿ' ಎಂಬುದು ಉತ್ತರಪದವಾಗಿರುವ ಗ್ರಾಮನಾಮಗಳಲ್ಲಿ ಅಲುಕ್ ಸಮಾಸದ ಕೆಲವು ಊರುಗಳು ಇರುತ್ತವೆ.

ಉದಾ: ಪುಲ್ಲಿಂಗ: ಕೊಟ್ಟನಹಳ್ಳಿ–ಕೊಟ್ನಳ್ಳಿ (ಬಾದಾ) ಇಲ್ಲಿ 'ಹ' ಲೋಪವಾಗಿದೆ.

ನ.ಲಿಂಗ: ಕಟಕಿನ ಹಳ್ಳಿ –ಕಟಗಿನ ಹಳ್ಳಿ (ಬಾದಾ) ಇಲ್ಲಿ ಕಿ–ಗಿ ಆಗಿದೆ.

ಜನಾಂಗ ವಾಚಕದಲ್ಲಿಯೂ ಈ ಸಮಾಸವಾಗುವದುಂಟು.

ಉದಾ: ಹೊನ್ನರಹಳ್ಳಿ–ಹೊನ್ನರಳ್ಳಿ–ಹೊನರಳ್ಳಿ (ಬಾಗ)

ಹೊನರಳ್ಳಿ (ಬೀಳ)

ಹೊನರಳ್ಳಿ (ಹುನ)

'ನ್ನ' ದ್ವಿತ್ವ ಕಳೆದುಕೊಳ್ಳುವದರ ಜೊತೆಗೆ 'ಹ' ಲೋಪವಾಗಿದೆ. ಹೊನ್ನರು ಎನ್ನುವದು ಒಂದು ಜನಾಂಗ.

ಇ. ಉತ್ತರಪದ ಹಟ್ಟಿ

'ಹಟ್ಟಿ' ಎಂಬುದು ಉತ್ತರಪದವಾಗಿರುವ ಅಲುಕ್ ಸಮಾಸದ ಊರುಗಳು ದೊರೆಯುತ್ತವೆ. ಇಲ್ಲಿ ಹಟ್ಟಿಯಲ್ಲಿಯ 'ಹ' ಲೋಪವಾಗುತ್ತದೆ.

ಉದಾ: ದಾದಾನ ಹಟ್ಟಿ–ದಾದನಟ್ಟಿ (ಮುಧೋ) ದಾದಾ–ದಾದ ಎಂದಾಗಿದೆ.

ದಾಸರ ಹಟ್ಟಿ–ದಾಸರಟ್ಟಿ (ಜಮ)

ಯತ್ತಿನ ಹಟ್ಟಿ–ಯತ್ನಟ್ಟಿ (ಬೀಳ) ಇಲ್ಲಿ 'ತ್ತಿನ' ಎಂಬುದು 'ತ್ನ' ಎಂದಾಗಿದೆ.

ಲಕ್ಷನ ಹಟ್ಟಿ–ಲಕ್ಷಾನಟ್ಟಿ (ಮುಧೋ)

ಸಂಗನ ಹಟ್ಟಿ–ಸಂಗಾನಟ್ಟಿ (ಮುಧೋ)

ಲಕ್ಷನ, ಸಂಗನ ಎಂಬ ಪೂರ್ವಪದದ ಉಪಾಂತ್ಯ ಹ್ರಸ್ವಸ್ವರ ದೀರ್ಘಸ್ವರವಾಗಿದೆ.

ಈ. ಉತ್ತರಪದ ಹಾಳ

ಹಾಳ ಎಂಬುದು ಉತ್ತರಪದವಾಗಿರುವ ಅಲುಕ್ ಸಮಾಸಗಳು.

ಹಾಳ ಎಂಬ ಉತ್ತರ ಪದದಲ್ಲಿಯ 'ಹ' ಕಾರ ಲೋಪವಾಗುವದು.

ಉದಾ: ಪುಲ್ಲಿಂಗ: ಗಿಡ್ಡನಾಯಕನ ಹಾಳ–ಗಿಡ್ಡನಾಯಕನಾಳ (ಬಾದಾ)

ಗೊರಜನ ಹಾಳ–ಗೊರಜನಾಳ (ಹುನ)

ಚಿಕ್ಕನ ಹಾಳ–ಚಿಕ್ಕನಾಳ (ಹುನ)

ಡೊಮ್ಮನ ಹಾಳ–ಡೊಮ್ಮನಾಳ (ಬಾಗ)

ದೇವನ ಹಾಳ–ದೇವನಾಳ (ಬಾಗ)

ಬಸವನ ಹಾಳ–ಬಸವನಾಳ (ಹುನ)

ಬಿಸನ ಹಾಳ–ಬಿಸನಾಳ (ಬೀಳ) –ಬಿಸನಾಳ (ಮುಧೋ)

ಮನ್ಮಥನ ಹಾಳ–ಮನ್ಮಥನಾಳ (ಹುನ)

ಮುರನ ಹಾಳ–ಮುರನಾಳ (ಬಾಗ) –ಮುರನಾಳ (ಬಾಗ) ಅಂಡ

ಯರನಾಯಕನ ಹಾಳ–ಯರನಾಯನಾಳ (ಹುನ)

ಸಣ್ಣನ ಹಾಳ–ಸನ್ನಾಳ–ಸನಾಳ (ಜಮ) ಇಲ್ಲಿ ಣ–ನ ಆಗಿದೆ.

ಸಿದ್ದನ ಹಾಳ–ಸಿದ್ದನಾಳ–ಸಿದ್ನಾಳ (ಬಾಗ)

ಹನುಮನ ಹಾಳ–ಹನುಮನಾಳ (ಹುನ)

ನ.ಲಿಂಗ: ಉಪ್ಪಿನ ಹಾಳ–ಉಪ್ಪನಾಳ–ಉಪನಾಳ (ಹುನ) –ಉಪನಾಳ (ಹುನ) ಹಿರೇ ಒಂದೇ ತಾಲೂಕಿನಲ್ಲಿ ಎರಡು ಉಪನಾಳಗಳಿರುವುದರಿಂದ ಒಂದನ್ನು ಕೇವಲ ಉಪನಾಳ ಎಂದೂ ಇನ್ನೊಂದನ್ನು ಹಿರೇಉಪನಾಳ ಎಂದು ಕರೆಯುತ್ತಾರೆ.

ಗದ್ದೆಯ ಹಾಳ–ಗದ್ದೆಯಾಳ–ಗದ್ಯಾಳ (ಜಮ)

ಗೋವಿನ ಹಾಳ–ಗೋನಾಳ (ಬಾದಾ) ಗೋನಾಳ (ಹುನ) ಎಸ್.ಕೆ. –ಗೋನಾಳ (ಹುನ) ಎಸ್.ಬಿ. –ಗೋನಾಳ (ಹುನ) ಒಡೆಯರ–ಗೋನಾಳ (ಹುನ) ಕಲ್ಲ

'ಗೋವಿನ' ಎನ್ನುವಲ್ಲಿಯ 'ವಿ' ಲೋಪವಾಗಿದೆ. ಹುನಗುಂದ ಒಂದೇ ತಾಲೂಕಿನಲ್ಲಿಯೆ ನಾಲ್ಕು ಗೋನಾಳಗಳಿದ್ದು ಅವನ್ನು ಉಪನಾಮಗಳಿಂದ ನಿರ್ದೇಶಿಸಲಾಗುತ್ತದೆ.

ತೆಳಗಿನ ಹಾಳ–ತೆಳಗಿನಾಳ (ಬಾಗ)

ಪಾಪದನಹಾಳ–ಪಾಪದನಾಳ (ಹುನ)

ಬೇವಿನ ಹಾಳ–ಬೇವಿನಾಳ (ಹುನ)

ಸಮೀನ ಹಾಳ–ಸಮೀನಾಳ (ಬಾದಾ)

ಸಮೀನ ಅಂದರೆ ವರ್ಷಕ್ಕೊಂದು ಈಯುವ ಹಸು.

ಹಂಚಿನ ಹಾಳ–ಹಂಚಿನಾಳ (ಬೀಳ) ಇನಾಂ –ಹಂಚಿನಾಳ (ಬೀಳ) ಚಿಕ್ಕ–ಹಂಚಿನಾಳ (ಜಮ) ಕಡಪಟ್ಟಿ –ಹಂಚಿನಾಳ (ಹುನ) ಬೇಚಿರಾಕ್

ಹಂಚಿನಾಳಗಳು ನಾಲ್ಕು ಇದ್ದು ಅವುಗಳನ್ನು ಇನಾಂ, ಚಿಕ್ಕ, ಕಡಪಟ್ಟಿ, ಬೇಚಿರಾಕ್ ಎಂಬ ಪೂರ್ವ ಶಬ್ದಗಳಿಂದ ಸೂಚಿಸಲಾಗುತ್ತದೆ.

ಹಗೆದ ಹಾಳ–ಹಗೆದಾಳ (ಹುನ)

ಹುಲಗಿನ ಹಾಳ–ಹುಲಗಿನಾಳ (ಹುನ)

ಹುಲಿಯಹಾಳ–ಹುಲಿಯಾಳ–ಹುಲ್ಯಾಳ (ಜಮ)

ಜನಾಂಗ ವಾಚಕದಲ್ಲಿಯೂ 'ಹಾಳ' ಬರುತ್ತದೆ.

ಉದಾ: ನಾಗರ ಹಾಳ–ನಾಗರಾಳ (ಬಾಗ) –ನಾಗರಾಳ (ಬಾದಾ) ಎಸ್.ಪಿ. –ನಾಗರಾಳ (ಬಾದಾ) ಎಸ್.ಬಿ. –ನಾಗರಾಳ (ಬೀಳ)

'ನಾಗರು' ಎಂಬುದು ಒಂದು ಜನಾಂಗ.

ಉ. ಉತ್ತರಪದ ಕೊಪ್ಪ

'ಕೊಪ್ಪ' ಎಂಬುದು ಉತ್ತರಪದವಾಗಿರುವ ಅಲುಕ್ ಸಮಾಸದ ಗ್ರಾಮನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ. ಇಲ್ಲಿ ಯಾವ ಬದಲಾವಣೆಯೂ ಇಲ್ಲ.

ಉದಾ: ಪುಲ್ಲಿಂಗ: ಸೋಮನ ಕೊಪ್ಪ–ಸೋಮನಕೊಪ್ಪ (ಬಾಗ)

ಸೋಮನ ಕೊಪ್ಪ–ಸೋಮನಕೊಪ್ಪ (ಬಾದಾ)

ನ.ಲಿಂಗ: ಗೋವನ ಕೊಪ್ಪ–ಗೋವನಕೊಪ್ಪ (ಬಾದಾ)

ಗೋವಿನ ಕೊಪ್ಪ–ಗೋವಿನಕೊಪ್ಪ (ಬಾಗ)

ಚಿಟಕಿನ ಕೊಪ್ಪ–ಚಿಟಕಿನಕೊಪ್ಪ (ಬಾಗ)

ಮುದವಿನ ಕೊಪ್ಪ–ಮುದವಿನಕೊಪ್ಪ (ಬಾಗ)

ಜನಾಂಗ ವಾಚಕದಲ್ಲಿಯೂ ಕೊಪ್ಪ ಬರುವದುಂಟು.

ಉದಾ: ಅಗಸರ ಕೊಪ್ಪ–ಅಗಸರಕೊಪ್ಪ (ಬಾದಾ)

ಕಾಡರ ಕೊಪ್ಪ–ಕಾಡರಕೊಪ್ಪ (ಬಾದಾ)

ಗುಬ್ಬೇರ ಕೊಪ್ಪ–ಗುಬ್ಬೇರಕೊಪ್ಪ (ಬಾದಾ)

ಜಂಜರ ಕೊಪ್ಪ–ಜಂಜರಕೊಪ್ಪ (ಮುಧೋ)

ಊ. ಉತ್ತರಪದ ಕೇರಿ

'ಕೇರಿ' ಎಂಬುದು ಉತ್ತರಪದವಾಗಿರುವ ಅಲುಕ್ ಸಮಾಸದ ಗ್ರಾಮನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ. ಇಲ್ಲಿ ಯಾವ ಬದಲಾವಣೆಯೂ ಇಲ್ಲ.

ಉದಾ: ಕುಟಕನ ಕೇರಿ–ಕುಟಕನಕೇರಿ (ಬಾದಾ)

ಗದ್ದನ ಕೇರಿ–ಗದ್ದನಕೇರಿ (ಬಾಗ)

ಯರನ ಕೇರಿ–ಯರನಕೇರಿ (ಹುನ)

ಎ. ಉತ್ತರಪದ ವಾಡಿ

'ವಾಡಿ' ಎಂಬುದು ಉತ್ತರಪದವಾಗಿರುವ ಅಲುಕ್ ಸಮಾಸದ ಗ್ರಾಮನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ.

ಉದಾ: ಕಂಕನ ವಾಡಿ–ಕಂಕನವಾಡಿ–ಕಂಕಣವಾಡಿ (ಜಮ) ಇಲ್ಲಿ ನ–ಣ ಆಗಿದೆ.

ಏ. ಉತ್ತರಪದ ಗಡ

'ಗಡ' ಎಂಬುದು ಉತ್ತರಪದವಾಗಿರುವ ಅಲುಕ್ ಸಮಾಸದ ಗ್ರಾಮನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ. ಇಲ್ಲಿ ಯಾವ ಬದಲಾವಣೆಯೂ ಇಲ್ಲ.

ಉದಾ: ಭೀಮನಗಡ–ಭೀಮನಗಡ (ಹುನ)

ಐ. ಉತ್ತರಪದ ಏರಿ

'ಏರಿ' ಎಂಬುದು ಉತ್ತರಪದವಾಗಿರುವ ಅಲುಕ್ ಸಮಾಸದ ಗ್ರಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ. ಇಲ್ಲಿ ಯಾವ ಬದಲಾವಣೆಯೂ ಇಲ್ಲ.

ಉದಾ: ಬಂಕನ ಏರಿ–ಬಂಕನೇರಿ (ಬಾದಾ)

ಹನುಮನ ಏರಿ–ಹನುಮನೇರಿ (ಬಾದಾ)

ಇಲ್ಲಿ 'ಏರಿ' ಎಂಬುದು ತಗಲುವಾಗ ಸ್ವರಲೋಪಸಂಧಿಯಾಗುತ್ತದೆ.

ಒ. ಉತ್ತರಪದ ಕೊಳ್ಳ

'ಕೊಳ್ಳ' ಎಂಬುದು ಉತ್ತರಪದವಾಗಿರುವ ಅಲುಕ್ ಸಮಾಸದ ಗ್ರಾಮನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ. ಇಲ್ಲಿ ಯಾವ ಬದಲಾವಣೆಯೂ ಇಲ್ಲ.

ಉದಾ: ಸಿದ್ಧನ ಕೊಳ್ಳ–ಸಿದ್ಧನಕೊಳ್ಳ (ಹುನ)

ಓ. ಉತ್ತರಪದ ಡೋಣಿ

'ಡೋಣಿ' ಎಂಬುದು ಉತ್ತರಪದವಾಗಿರುವ ಅಲುಕ್ ಸಮಾಸದ ಗ್ರಾಮನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿರುತ್ತವೆ. ಇಲ್ಲಿ ಯಾವ ಬದಲಾವಣೆಯೂ ಇಲ್ಲ.

ಉದಾ: ಬೆನಕನಡೋಣಿ–ಬೆನಕನಡೋಣಿ (ಹುನ)

ಇಲ್ಲಿಯವರೆಗೆ ಸಾದ್ಯಂತವಾಗಿ ಸ್ಥಳನಾಮಗಳನ್ನು, ಮೂಲ ಶಬ್ದಗಳನ್ನು, ತದ್ಧಿತಗಳನ್ನು ಮತ್ತು ಸಮಾಸಗಳನ್ನು ಆಧರಿಸಿ ವಿವರಿಸಲಾಯಿತು.

೩. ಸಂಧಿಕಾರ್ಯಗಳು

ಸಾಮಾಸಿಕ ಸ್ಥಳನಾಮಗಳಲ್ಲಿ ಸಂಧಿ ಕಾರ್ಯಗಳಾದ ಅ. ಲೋಪ, ಆ. ಆಗಮ ಮತ್ತು ಇ. ಆದೇಶಗಳು ನಡೆಯುತ್ತವೆ.

ಅ. ಲೋಪ

A. 'ಅ'ಕಾರ ಲೋಪ

"ತತ್ಪುರುಷ ಸಮಾಸದ ಉತ್ತರಪದದಲ್ಲಿ 'ಊರು' ಬಂದಾಗ ಕೆಲವೊಮ್ಮೆ i. ಮಧ್ಯದ ವಿಭಕ್ತಿ ಹಾಗೆಯೇ ಉಳಿಯುತ್ತದೆ ii. ಪೂರ್ವ ಪದಾಂತ್ಯದ ಸ್ವರ ಲೋಪವಾಗುತ್ತದೆ."[೨]

ಉದಾ:

ಪು.ಲಿಂ: ಆಚನ+ಊರು = ಆಚನೂರ (ಬಾಗ)

ಕಾಕನ+ಊರು = ಕಾಕನೂರು (ಬಾಗ)

ಕುಂಚನ+ಊರು = ಕುಂಚನೂರು (ಜಮ)

ಕೋಣಿಗನ+ಊರು = ಕೋಣಿಗನೂರು–ಕೊಣ್ಣೂರ (ಜಮ)

ಗಟ್ಟಿಗನ+ಊರು = ಗಟ್ಟಿಗನೂರ (ಹುನ)

ಜಕ್ಕನ+ಊರು = ಜಕ್ಕನೂರು–ಜಕನೂರ (ಜಮ)

ನಂದನ+ಊರು = ನಂದನೂರ (ಹುನ)

ನರೇನ+ಊರು = ನರೇನೂರು (ಬಾದಾ)

ನಾಗನ+ಊರು = ನಾಗನೂರ (ಜಮ)

ನಾಯಕನ+ಊರು = ನಾಯನೂರ (ಬಾಗ) ಇಲ್ಲಿ 'ಕ' ಲೋಪವಾಗಿದೆ.

ನಿಡಸನ+ಊರು = ನಿಡಸನೂರ (ಹುನ)

ಬಂಟನ+ಊರು = ಬಂಟನೂರು (ಮುಧೋ)

ಬದ್ದನ+ಊರು = ಬದ್ದನೂರ–ಬದ್ನೂರ (ಮುಧೋ)

ಬೀರನ+ಊರ = ಬೀರನೂರ (ಬಾದಾ)

ಮರನ+ಊರು = ಮರನೂರ (ಜಮ)

ಮಾಚಕನ+ಊರು = ಮಾಚಕನೂರ (ಮುಧೋ)

ಮುಂಡಗನ+ಊರು = ಮುಂಡಗನೂರ (ಜಮ)

ಮುದ್ದನ+ಊರು = ಮುದ್ದನೂರು>ಮುದ್ನೂರ (ಮುಧೋ)

ಮೂಗನ+ಊರು = ಮೂಗನೂರ (ಹುನ)

ಹಾಗನ+ಊರು = ಹಾಗನೂರು (ಬಾದಾ)

ಹೂವನ+ಊರು = ಹೂವನೂರ (ಹುನ)

ನ.ಲಿಂ.

ಕೆಸರಿನ+ಊರು = ಕೆಸರಿನೂರ (ಬಾಗ)

ಕೌಜಗನ+ಊರು = ಕೌಜಗನೂರ (ಹುನ)

ಹಂಸನ+ಊರು = ಹಂಸನೂರ (ಬಾದಾ)

ಹಳ್ಳದ ಊರು = ಹಳ್ಳದೂರ>ಹಳದೂರ (ಬಾದಾ) ಇಲ್ಲಿ 'ಳ್' ದ್ವಿತ್ವಕಳೆದುಕೊಂಡಿದೆ.

B. 'ಹ'ಕಾರ ಲೋಪ

ಸ್ಥಳನಾಮಗಳಲ್ಲಿ 'ಹ' ಕಾರಾದಿ ಶಬ್ದಗಳು ಉತ್ತರಪದದಲ್ಲಿ ಬಂದಾಗ ಅಲ್ಲಿರುವ 'ಹ'ಕಾರವು ಕೆಲವೊಮ್ಮೆ ಲೋಪವಾಗುತ್ತದೆ.

i. ಉತ್ತರಪದದಲ್ಲಿ 'ಹಟ್ಟಿ' ಬಂದಾಗ

ಉದಾ: ತುಗಲದ+ಹಟ್ಟಿ = ತುಗಲಟ್ಟಿ (ಬಾಗ)

ಯರಗನ+ಹಟ್ಟಿ = ಯರಗಟ್ಟಿ (ಜಮ)

ಯಲ್ಲನ+ಹಟ್ಟಿ = ಯಲ್ಲಟ್ಟಿ (ಜಮ)

ಸಸಾಲನ+ಹಟ್ಟಿ = ಸಸಾಲಟ್ಟಿ (ಜಮ)

ದಾದಾನ+ಹಟ್ಟಿ = ದಾದನಟ್ಟಿ (ಮುಧೋ) –ಇಲ್ಲಿ 'ದಾದಾ' – 'ದಾದ' ಎಂದಾಗಿದೆ.

ದಾಸರ+ಹಟ್ಟಿ = ದಾಸರಟ್ಟಿ (ಜಮ)

ಯತ್ತಿನ+ಹಟ್ಟಿ = ಯತ್ನಟ್ಟಿ (ಬೀಳ)

ಲಕ್ಷನ+ಹಟ್ಟಿ = ಲಕ್ಷಾನಟ್ಟಿ (ಮುಧೋ) ಪೂರ್ವ ಪದದ ಉಪಾಂತ್ಯ ದೀರ್ಘವಾಗಿದೆ.

ಸಂಗನ+ಹಟ್ಟಿ = ಸಂಗಾನಟ್ಟಿ (ಮುಧೋ) ಪೂರ್ವ ಪದದ ಉಪಾಂತ್ಯ ದೀರ್ಘವಾಗಿದೆ.

ಭೈರನ+ಹಟ್ಟಿ = ಭೈರನಟ್ಟಿ (ಬಾಗ)

ಎಮ್ಮೆಯ+ಹಟ್ಟಿ = ಎಮ್ಮೆಟ್ಟಿ (ಹುನ)

ii. **ಉತ್ತರ ಪದದಲ್ಲಿ 'ಹಾಳ' ಬಂದಾಗ**

ಉದಾ:

ವಂಚಗನ+ಹಾಳ = ವಂಚಗನಾಳ>ವಂಚಗಾಳ (ಮುಧೋ)

ರೋಹಿಣಿಯ+ಹಾಳ = ರೋಣಿಹಾಳ>ರೋಣ್ಯಾಳ (ಬೀಳ)

ಇಲಿಯ+ಹಾಳ = ಇಲಿಹಾಳ>ಇಲಾಳ (ಹುನ)

ಹೊನ್ನಿನ+ಹಾಳ = ಹೊನ್ನಿಹಾಳ>ಹೊನ್ನ್ಯಾಳ (ಬೀಳ)

ಹೊನ್ನೆಯ+ಹಾಳ = ಹೊನ್ಯಾಳ (ಬೀಳ)

ಗಿಡ್ಡನಾಯಕನ+ಹಾಳ = ಗಿಡ್ಡನಾಯಕನಾಳ (ಬಾದಾ)

ಗೊರಜನ+ಹಾಳ = ಗೊರಜನಾಳ (ಹುನ)

ಚೆನ್ನನ+ಹಾಳ = ಚೆನ್ನಾಳ>ಚನ್ನಾಳ (ಮುಧೋ)

ಚಿಕ್ಕನ+ಹಾಳ = ಚಿಕ್ಕನಾಳ (ಹುನ)

ಡೊಮ್ಮನ+ಹಾಳ = ಡೊಮ್ಮನಾಳ (ಬಾಗ)

ದೇವನ+ಹಾಳ = ದೇವನಾಳ (ಬಾಗ)

ಬಸವನ+ಹಾಳ = ಬಸವನಾಳ (ಹುನ)

ಬಿಸನ+ಹಾಳ = ಬಿಸನಾಳ (ಬೀಳ)

ಬಿಸನ+ಹಾಳ = ಬಿಸನಾಳ (ಮುಧೋ)

ಮನ್ಮಥನ+ಹಾಳ = ಮನ್ಮಥನಾಳ (ಹುನ)

ಮುರನ+ಹಾಳ = ಮುರನಾಳ (ಬಾಗ)

ಮುರನ+ಹಾಳ = ಮುರನಾಳ (ಬಾಗ) (ಅಂಡ)

ಯರನಾಯಕನ+ಹಾಳ = ಯರನಾಯಕನಾಳ (ಹುನ)

ಸಣ್ಣನ+ಹಾಳ = ಸಣ್ಣಾಳ>ಸನಾಳ (ಜಮ)

ಸಿದ್ಧನ+ಹಾಳ = ಸಿದ್ದನಾಳ>ಸಿದ್ನಾಳ (ಬಾಗ)

ಹನುಮನ+ಹಾಳ = ಹನುಮನಾಳ (ಹುನ)

ಉಪ್ಪಿನ+ಹಾಳ = ಉಪ್ಪಿನಾಳ>ಉಪನಾಳ (ಹುನ) ಹಿರೇ

ಉಪ್ಪಿನ+ಹಾಳ = ಉಪ್ಪಿನಾಳ>ಉಪನಾಳ (ಹುನ) ಚಿಕ್ಕ

ಗದ್ದೆಯ+ಹಾಳ = ಗದ್ದೆಯಾಳ>ಗದ್ಯಾಳ (ಜಮ)

ಗೋವಿನ+ಹಾಳ = ಗೋನಾಳ (ಬಾದಾ, ಹುನ)

ತೆಳಗಿನ+ಹಾಳ = ತೆಳಗಿನಾಳ (ಬಾಗ)

ಪಾಪದನ+ಹಾಳ = ಪಾಪದನಾಳ (ಹುನ)

ಬೇವಿನ+ಹಾಳ = ಬೇವಿನಾಳ (ಹುನ)

ಸಮೀನ+ಹಾಳ = ಸಮೀನಾಳ (ಬಾದಾ)

ಹಂಚಿನ+ಹಾಳ = ಹಂಚಿನಾಳ (ಬೀಳ,ಜಮ,ಹುನ)

ಹಗೆದ+ಹಾಳ = ಹಗೆದಾಳ (ಹುನ)

ಹುಲಗಿನ+ಹಾಳ = ಹುಲಗಿನಾಳ (ಹುನ)

ಹುಲಿಯ+ಹಾಳ = ಹುಲಿಯಾಳ>ಹುಲ್ಯಾಳ (ಜಮ)

ನಾಗರ+ಹಾಳ = ನಾಗರಾಳ (ಬಾಗ, ಬೀಳ, ಬಾದಾ)

iii. **ಉತ್ತರ ಪದದಲ್ಲಿ 'ಹಳ್ಳಿ' ಬಂದಾಗ**

ಉದಾ: ಮುಗುಳ+ಹಳ್ಳಿ = ಮುಗುಳಳ್ಳಿ>ಮುಗಳೊಳ್ಳಿ (ಬಾಗ)

ಯಡದ+ಹಳ್ಳಿ = ಯಡಹಳ್ಳಿ>ಯಡಳ್ಳಿ (ಬಾಗ, ಬೀಳ, ಮುಧೋ, ಹುನ)

ಕೊಟ್ಟನ+ಹಳ್ಳಿ = ಕೊಟ್ನಳ್ಳಿ (ಬಾದಾ)

ಹೊನ್ನರ+ಹಳ್ಳಿ = ಹೊನ್ನರಳ್ಳಿ>ಹೊನರಳ್ಳಿ (ಬಾಗ,ಬೀಳ,ಹುನ)

ಕುಲ+ಹಳ್ಳಿ = ಕುಲ್ಲಳ್ಳಿ>ಕುಲ್ಲೊಳ್ಳಿ (ಜಮ)

ಆ. ಆಗಮ

i. 'ನ' ಕಾರಾಗಮ

ಅಕಾರಾಂತ ಶಬ್ದಗಳಿಗೆ ಷಷ್ಠಿ ವಿಭಕ್ತಿಯ 'ಅ'ಪ್ರತ್ಯಯ ಸೇರುವಾಗ ನಡುವೆ 'ನ' ಕಾರಾಗಮ ವಾಗುತ್ತದೆ.

ಉದಾ:

ಆಚ+ಅ = ಆಚನ ಊರು = ಆಚನೂರು (ಬಾಗ)

ಕಾಕ+ಅ = ಕಾಕನ ಊರು = ಕಾಕನೂರು (ಬಾಗ)

ಕುಂಚ+ಅ = ಕುಂಚನ+ಊರು = ಕುಂಚನೂರು (ಜಮ)

ಕೋಣೆಗ+ಅ = ಕೋಣೆಗನ ಊರು = ಕೋಣೆಗನೂರು (ಜಮ)

ಗಟ್ಟಿಗ+ಅ = ಗಟ್ಟಿಗನ ಊರು = ಗಟ್ಟಿಗನೂರು (ಹುನ)

ಜಕ್ಕ+ಅ = ಜಕ್ಕನ ಊರು = ಜಕ್ಕನೂರು>ಜಕನೂರು (ಜಮ, ಬಾದಾ)

ನಂದ+ಅ = ನಂದನ ಊರು>ನಂದನೂರು (ಹುನ)

ನರೆ+ಅ = ನರೇನ ಊರು = ನರೇನೂರು (ಬಾದಾ)

ನಾಗ+ಅ = ನಾಗನ ಊರು = ನಾಗನೂರು (ಜಮ, ಬಾದಾ)

ನಾಯಕ+ಅ = ನಾಯಕನ ಊರು = ನಾಯನೂರು (ಬಾಗ)

ನಿಡಸ+ಅ = ನಿಡಸನ ಊರು>ನಿಡಸನೂರು (ಹುನ)

ಬಂಟ+ಅ = ಬಂಟನ ಊರು>ಬಂಟನೂರು (ಮುಧೋ)

ಬದ್ದ+ಅ = ಬದ್ದನ ಊರು = ಬದ್ದನೂರು (ಮುಧೋ)

ಬೀರ+ಅ = ಬೀರನ ಊರು = ಬೀರನೂರು (ಮುಧೋ)

ಮರ+ಅ = ಮರನ ಊರು = ಮರನೂರು (ಜಮ)

ಮಾಚಕ+ಅ = ಮಾಚಕನ ಊರು = ಮಾಚಕನೂರು (ಮುಧೋ)

ಮುಂಡಗ+ಅ = ಮುಂಡಗನ ಊರು = ಮುಂಡಗನೂರು (ಜಮ)

ಮುದ್ದ+ಅ = ಮುದ್ದನ ಊರು = ಮುದ್ದನೂರ>ಮುದನೂರು (ಮುಧೋ)

ಮೂಗ+ಅ = ಮೂಗನ ಊರು = ಮೂಗನೂರು (ಹುನ)

ಹಾಗ+ಅ = ಹಾಗನ ಊರು = ಹಾಗನೂರು (ಬಾದಾ)

ಹೂವ+ಅ = ಹೂವನ ಊರು = ಹೂವನೂರು (ಹುನ)

ಕೊಟ್ಟ+ಅ = ಕೊಟ್ಟನ ಹಳ್ಳಿ = ಕೊಟ್ನಳ್ಳಿ (ಬಾದಾ)

ಕೌಜಗ+ಅ+ಕೌಜಗನ ಊರು = ಕೌಜಗನೂರು (ಹುನ)

ಹಂಸ+ಅ = ಹಂಸನ ಊರು = ಹಂಸನೂರು (ಬಾದಾ)

ದಾದಾ+ಅ = ದಾದಾನ ಹಟ್ಟಿ = ದಾದನಟ್ಟಿ (ಮುಧೋ)

ಲಕ್ಷ+ಅ = ಲಕ್ಷನಹಟ್ಟಿ = ಲಕ್ಷಾನಟ್ಟಿ (ಮುಧೋ)

ಸಂಗ+ಅ = ಸಂಗನಹಟ್ಟಿ = ಸಂಗಾನಟ್ಟಿ (ಮುಧೋ)

ಗಿಡ್ಡನಾಯಕ+ಅ = ಗಿಡ್ಡನಾಯಕನಹಾಳ = ಗಿಡ್ಡನಾಯಕನಾಳ (ಬಾದಾ)

ಗೊರಜ+ಅ = ಗೊರಜನಹಾಳ = ಗೊರಜನಾಳ (ಹುನ)

ಚಿಕ್ಕ+ಅ = ಚಿಕ್ಕನಹಾಳ = ಚಿಕನಾಳ (ಹುನ)

ಡೊಮ್ಮ+ಅ = ಡೊಮ್ಮನಹಾಳ = ಡೊಮ್ಮನಾಳ (ಬಾಗ)

ದೇವ+ಅ = ದೇವನಹಾಳ = ದೇವನಾಳ (ಬಾಗ)

ಬಸವ+ಅ = ಬಸವನಹಾಳ = ಬಸವನಾಳ (ಹುನ)

ಬಿಸ+ಅ= ಬಿಸನಹಾಳ = ಬಿಸನಾಳ (ಬೀಳ, ಮುಧೋ)

ಮನ್ಮಥ+ಅ = ಮನ್ಮಥನಹಾಳ = ಮನ್ಮಥನಾಳ (ಹುನ)

ಮುರ+ಅ = ಮುರನಹಾಳ (ಬಾಗ)

ಯರನಾಯಕ+ಅ = ಯರನಾಯಕನಹಾಳ = ಯರನಾಯಕನಾಳ (ಹುನ)

ಸಣ್ಣ+ಅ = ಸಣ್ಣನಹಾಳ = ಸನ್ನಾಳ>ಸನಾಳ (ಜಮ)

ಸಿದ್ಧ+ಅ = ಸಿದ್ಧನಹಾಳ = ಸಿದ್ನಾಳ (ಬಾಗ)

ಹನುಮ+ಅ = ಹನುಮನಹಾಳ>ಹನುಮನಾಳ (ಹುನ)

ಸೋಮ+ಅ = ಸೋಮನ ಕೊಪ್ಪ (ಬಾಗ)

ಕುಟುಕ+ಅ = ಕುಟುಕನ ಕೇರಿ (ಬಾದಾ)

ಗದ್ದ+ಅ = ಗದ್ದನಕೇರಿ (ಬಾಗ)

ಯರ+ಅ = ಯರನಕೇರಿ (ಹುನ)

ಭೀಮ+ಅ = ಭೀಮನಗಡ (ಹುನ)

ಬಂಕ+ಅ = ಬಂಕನ ಏರಿ = ಬಂಕನೇರಿ (ಬಾದಾ)

ಹನುಮ+ಅ = ಹನುಮನ ಏರಿ = ಹನುಮನೇರಿ (ಬಾದಾ)

ಸಿದ್ದ+ಅ = ಸಿದ್ದನಕೊಳ್ಳ (ಹುನ)

ಬೆನಕ+ಅ = ಬೆನಕನ ಡೋಣಿ (ಹುನ)

ಕೊಟ್ಟ+ಅ = ಕೊಟ್ಟನ ಹಳ್ಳಿ = ಕೊಟ್ಟನಹಳ್ಳಿ>ಕೊಟ್ನಳ್ಳಿ (ಬಾದಾ)

ಕೌಜಗ+ಅ = ಕೌಜಗನ ಊರು = ಕೌಜಗನೂರ (ಹುನ)

ii. **'ದ' ಕಾರಾಗಮ**

ಕೆಲವೊಮ್ಮೆ 'ಅ' ಕಾರಾಂತ 'ಎ' ಕಾರಾಂತ ಶಬ್ದಗಳಿಗೆ ಷಷ್ಠಿ ವಿಭಕ್ತಿಯ 'ಅ' ಪ್ರತ್ಯಯ ಸೇರುವಾಗ ನಡುವೆ 'ದ' ಆಗಮವಾಗುತ್ತದೆ.

ಉದಾ:

ಹಳ್ಳ+ಅ = ಹಳ್ಳದ ಊರು = ಹಳ್ಳದೂರು (ಬಾದಾ)

ಹಗೆ+ಅ = ಹಗೆದಹಾಳ = ಹಗೆದಾಳ (ಹು)

ಜನ್ನ+ಅ = ಜನ್ನದಬಾಡ = ಜನ್ನವಾಡ > ಜನವಾಡ (ಜಮ)

iii. **'ಇನ್' ಆಗಮ**

ಉಕಾರ, ಎಕಾರಾಂತ ಶಬ್ದಗಳಿಗೆ ಷಷ್ಠಿಯ 'ಅ' ಪ್ರತ್ಯಯ ಸೇರುವಾಗ ನಡುವೆ 'ಇನ್' ಆಗಮವಾಗುತ್ತದೆ.

ಉದಾ:

ಉಪ್ಪು+ಇನ್+ಅ = ಉಪ್ಪಿನ ಹಾಳ = ಉಪನಾಳ (ಹುನ)

ಕೆಸರು+ಇನ್+ಅ = ಕೆಸರಿನ ಊರು>ಕೆಸರಿನೂರು (ಬಾಗ)

ಕಟಕು+ಇನ್+ಅ = ಕಟಕಿನಹಳ್ಳಿ = ಕಟಗಿನಹಳ್ಳಿ (ಬಾದಾ)

ಚಿಟಕು+ಇನ್+ಅ = ಚಿಟಕಿನಕೊಪ್ಪ (ಬಾಗ)

ತೆಳಗೆ+ಇನ್+ಅ+ತೆಳಗಿನಹಾಳ = ತೆಳಗಿನಾಳ (ಬಾಗ)

ಬೇವು+ಇನ್+ಅ = ಬೇವಿನಹಾಳ = ಬೇವಿನಾಳ (ಹುನ)

ಹಂಚು+ಇನ್+ಅ = ಹಂಚಿನಹಾಳ = ಹಂಚಿನಾಳ (ಜಮ, ಬೀಳ, ಹುನ)

ಹುಲಗು+ಇನ್+ಅ = ಹುಲಗಿನಹಾಳ = ಹುಲಗಿನಾಳ (ಹುನ)

ಯತ್ತು+ಇನ್+ಅ = ಯತ್ತಿನಹಟ್ಟಿ = ಯತ್ನಟ್ಟಿ (ಬೀಳ)

iv. 'ಯ' ಕಾರಾಗಮ

'ಇ'ಕಾರ 'ಎ'ಕಾರಾಂತ ಶಬ್ದಗಳಿಗೆ ಷಷ್ಠಿಯ 'ಅ'ಪ್ರತ್ಯಯ ಸೇರುವಾಗ ನಡುವೆ 'ಯ'ಆಗಮವಾಗುತ್ತದೆ.

ಉದಾ:

'ಇ'ಕಾರಕ್ಕೆ-

ಹುಲಿ+ಯ್+ಅ = ಹುಲಿಯ ಹಾಳ = ಹುಲಿಯಾಳ = ಹುಲ್ಯಾಳ (ಜಮ)

ಎ ಕಾರಕ್ಕೆ-

ಗದ್ದೆ+ಯ್+ಅ = ಗದ್ದೆಯಹಾಳ = ಗದ್ಯಾಳ (ಜಮ)

v. 'ವ' ಕಾರಾಗಮ

ಉಕಾರಾಂತ ಶಬ್ದಗಳಿಗೆ ತದ್ಧಿತ ಪ್ರತ್ಯಯ 'ಇಗ' ಸೇರಿದಾಗ ನಡುವೆ 'ವ' ಆಗಮವಾಗುತ್ತದೆ.

ಉದಾ: ನೆಲ್ಲು+ಇಗೆ = ನೆಲ್ಲುವಿಗೆ>ನೆಲುವಿಗೆ (ಬಾದಾ)

ಇ. ಆದೇಶ

ಕನ್ನಡ ಸ್ವರಸಂಧಿಗಳಲ್ಲಿ ಲೋಪ–ಆಗಮಗಳು ಆಗುತ್ತಿದ್ದರೆ, ಸಂಸ್ಕೃತ ಸ್ವರಸಂಧಿಗಳಲ್ಲಿ ಆದೇಶವೂ ಸಂಭವಿಸುತ್ತದೆ.

a. ಸಂಸ್ಕೃತದಲ್ಲಿ

ಗುಣಸಂಧಿ

ಅ, ಆ ಕಾರಗಳ ಮುಂದೆ ಇ ಈ ಕಾರಗಳು ಬಂದರೆ, ಅವೆರಡಕ್ಕೂ ಕೂಡಿ ಏಕಾರವೂ ಉಊಕಾರಗಳು ಬಂದರೆ ಓ ಕಾರವೂ, ಋ ಕಾರವು ಬಂದರೆ ಅರ್ ಎಂಬುದೂ ಆದೇಶವಾಗಿ ಬರುವ ಸಂಧಿಗೆ ಗುಣಸಂಧಿ ಎನ್ನುತ್ತಾರೆ. ಇಂತಹ ಸಂಧಿಕಾರ್ಯವು ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳಲ್ಲಿ ಕಂಡುಬರುತ್ತದೆ.

ಉದಾ:

ಧವಲ>ಢವಳ+ಈಶ್ವರ = ಢವಳೇಶ್ವರ (ಮುಧೋ, ಬೀಳ)

ನಂದಿಕಾ+ಈಶ್ವರ = ನಂದಿಕೇಶ್ವರ (ಬಾದಾ)

ಲವಲ>ಲವಳ+ಈಶ್ವರ = ಲವಳೇಶ್ವರ (ಬಾಗ)

b. ಕನ್ನಡದಲ್ಲಿ

i. 'ವ' ಕಾರಾದೇಶ

ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಪಬಮ ಕಾರಗಳಿಗೆ ವಕಾರಾದೇಶವಾಗುತ್ತದೆ.

ಉದಾ: ಪ>ವ

ಕೋಡಿಯ+ಪಳ್ಳಿ = ಕೋಡಿವಳ್ಳಿ>ಕೋವಳ್ಳಿ (ಬೀಳ)

ಕನ್ನರ+ಪಳ್ಳಿ = ಕನ್ನವಳ್ಳಿ>ಕನ್ನೊಳ್ಳಿ (ಜಮ)

ವಡ್ಡರ+ಪಟ್ಟಿ = ವಡ್ಡವಟ್ಟಿ>ವಡವಟ್ಟಿ (ಬಾದಾ)

ತಾರಿಯ+ಪಾಳ = ತಾರಿವಾಳ (ಹುನ)

ಬ>ವ

ಕಡ್ಲೆಯ+ಬಾಡ = ಕಡ್ಲೆವಾಡ (ಹುನ)

ಟಕ್ಕರ+ಬಾಡ = ಟಕ್ಕವಾಡ>ಟಕ್ಕೋಡ (ಜಮ)

ಜಂಗನ+ಬಾಡ = ಜಂಗವಾಡ (ಬಾದಾ)

ಜನ್ನದ+ಬಾಡ = ಜನ್ನವಾಡ>ಜನವಾಡ (ಜಮ)

ತಳಕನ+ಬಾಡ = ತಳಕವಾಡ (ಬಾದಾ)

ಅಮರರ+ಬಾಡ+ಇಗೆ = ಅಮರವಾಡಿಗೆ>ಅಮರವಾಡಗಿ (ಹುನ)

ಖೈರರ+ಬಾಡ+ಇಗೆ = ಖೈರವಾಡಿಗೆ>ಖೈರವಾಡಗಿ (ಹುನ)

ಚಿತ್ತರ+ಬಾಡ+ಇಗೆ = ಚಿತ್ತವಾಡಿಗೆ>ಚಿತ್ತವಾಡಗಿ (ಹುನ)

ನಂದರ+ಬಾಡ+ಇಗೆ = ನಂದವಾಡಿಗೆ>ನಂದವಾಡಗಿ (ಹುನ)

ಬಾದರ+ಬಾಡ+ಇಗೆ = ಬಾದವಾಡಿಗೆ>ಬಾದವಾಡಗಿ (ಹುನ)

ಬಿಂಜನ+ಬಾಡ+ಇಗೆ = ಬಿಂಜವಾಡಿಗೆ>ಬಿಂಜವಾಡಗಿ (ಹುನ)

ರಾಮನ+ಬಾಡ+ಇಗೆ = ರಾಮವಾಡಿಗೆ>ರಾಮವಾಡಗಿ (ಹುನ)

ಹೇಮನ+ಬಾಡ+ಇಗೆ = ಹೇಮವಾಡಿಗೆ>ಹೇಮವಾಡಗಿ (ಹುನ)

ಮ>ವ ಆದ ಉದಾಹರಣೆಗಳು ದೊರೆತಿಲ್ಲ.

ii. **ಗದಬಾದೇಶಸಂಧಿ**

ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಕತಪ ಕಾರಗಳಿಗೆ ಕ್ರಮದಿಂದ ಗದಬಗಳು ಆದೇಶವಾಗುವ ಸಂಧಿಗೆ ಗದಬಾದೇಶಸಂಧಿ ಎನ್ನುವರು.

ಉದಾ: ಕ>ಗ

ಯರೆಯ+ಕೊಪ್ಪ = ಯರಗೊಪ್ಪ (ಬಾದಾ)

ಕೆಸರಿನ+ಕೊಪ್ಪ = ಕೆಸರಗೊಪ್ಪ (ಮುಧೋ)

ತಳ್ಳಿಯ+ಕೇರಿ = ತಳ್ಳಿಗೇರಿ (ಹುನ)

ಓತದ+ಕೇರಿ = ಓತಗೇರಿ (ಹುನ) ಚಿಕ್ಕ, ಹಿರೇ

ಕಟಕದ+ಕೇರಿ = ಕಟಗೇರಿ (ಬಾದಾ)

ಕನಸಿನ+ಕೇರಿ = ಕನಸಗೇರಿ (ಮುಧೋ)

ಕಬ್ಬಲಿಗರ+ಕೇರಿ = ಕಬ್ಬಲಗೇರಿ (ಬಾದಾ)

ಕೇದಗೆಯ+ಕೇರಿ = ಕೇದಗ್ಗೇರಿ>ಕ್ಯಾದಗ್ಗೇರಿ (ಹುನ)

ಜಲದ+ಕೇರಿ = ಜಲಗೇರಿ (ಬಾದಾ)

ತುಳಸಿಯ+ಕೇರಿ = ತುಳಸಿಗೇರಿ (ಬಾಗ)

ಮಮ್ಮಟನ+ಕೇರಿ = ಮಮ್ಮಟಗೇರಿ (ಬಾದಾ)

ಮರಟದ+ಕೇರಿ = ಮರಟಗೇರಿ (ಹುನ)

ಮೇಗಿನ+ಕೇರಿ = ಮೇಗೇರಿ>ಮ್ಯಾಗೇರಿ (ಬಾಗ)

ಮುತ್ತಲದ+ಕೇರಿ = ಮುತ್ತಲಗೇರಿ (ಬಾದಾ)

ಮುಷ್ಟಿಯ+ಕೇರಿ = ಮುಷ್ಟಿಗೇರಿ (ಬಾದಾ)

ಮೆಳ್ಳಿಯ+ಕೇರಿ = ಮೆಳ್ಳಿಗೇರಿ (ಮುಧೋ)

ವಡ್ಡರ+ಕೇರಿ = ವಡಗೇರಿ (ಹುನ)

ಯಂಡಿಯ+ಕೇರಿ = ಯಂಡಿಗೇರಿ (ಬಾದಾ)

ಹಳ್ಳದ+ಕೇರಿ = ಹಳ್ಳಗೇರಿ>ಹಳಗೇರಿ (ಬಾದಾ)

ಹಾಲಿನ+ಕೇರಿ = ಹಾಲಿಗೇರಿ (ಬಾದಾ)

ಹುಲಸಿನ+ಕೇರಿ = ಹುಲಸಗೇರಿ (ಬಾದಾ)

ಹೂಲಿಯ+ಕೇರಿ = ಹೂಲಿಗೇರಿ>ಹೂಲಗೇರಿ(ಬಾದಾ)

ಊದಿನ+ಕಟ್ಟಿ = ಊದಗಟ್ಟಿ>ಉದಗಟ್ಟಿ (ಬಾಗ)

ತಪಸಿನ+ಕಟ್ಟಿ = ತಪಸಗಟ್ಟಿ (ಬಾದಾ)

ಕೊಡುವಲ್ಲಿ+ಕಲಿ = ಕೊಡಗಲಿ (ಹುನ)

ಗಲದಲ್ಲಿ+ಕಲಿ = ಗಲಗಲಿ (ಬೀಳ)

ಹಡಗಿನಲ್ಲಿ+ಕಲಿ = ಹಡಗಲಿ (ಬೀಳ)

ಬಿಳಿದು+ಕಲಿ = ಬೆಳಗಲಿ (ಮುಧೋ)

ಹಲವು+ಕಲಿ = ಹಲಗಲಿ (ಮುಧೋ)

ಹಂಟರ+ಕಲ್ಲು = ಹಂಟರಗಲ್ಲು (ಬಾಗ)

ಆಡ+ಕಲ್ಲು = ಆಡಗಲ್ಲು (ಬಾದಾ)

ಕಂದು+ಕಲ್ಲು = ಕಂದಗಲ್ಲು (ಬೀಳ)

ವರ್ಚ+ಕಲ್ಲು = ವರ್ಚಗಲ್ಲು (ಮುಧೋ)

ಕೆಂಪು+ಕಲ್ಲು = ಕೆಂಗಲ್ಲು (ಹುನ

ಕಜ+ಕಲ್ಲು = ಕಜಗಲ್ಲು (ಹುನ)

ಬಿಳಿದು+ಕಲ್ಲು = ಬೆಳಗಲ್ಲು (ಹುನ)

ಬಾಡ+ಕಂಡಿ = ಬಾಡಗಂಡಿ (ಬೀಳ)

ಹೊನ್ನ+ಕಂಡಿ = ಹೊನಗಂಡಿ>ಹನಗಂಡಿ (ಜಮ)

ಕುರು+ಕೋಡ = ಕುರಗೋಡ (ಜಮ)

ಒಂಟಿ+ಕೋಡಿ = ಒಂಟಿಗೋಡಿ (ಮುಧೋ)

ಆಲ+ಕುರುವ = ಆಲಗುರುವ>ಆಲಗೂರ (ಜಮ)

ಹಿರಿದು+ಕುರುವ = ಹೆಗ್ಗುರುವ>ಹೆಗ್ಗೂರ (ಬೀಳ)

ಮೈ+ಕುರುವ = ಮೈಗುರುವ>ಮೈಗೂರ (ಜಮ)

ಪ>ಬ

ಗೊರವನ+ಪಾಳ = ಗೊರಬಾಳ (ಹುನ)

ದಾಸರ+ಪಾಳ = ದಾಸಬಾಳ (ಹುನ)

(ತ>ದ ಆದ ಉದಾಹರಣೆಗಳು ದೊರೆತಿಲ್ಲ)

ಈ. ದ್ವಿತ್ವ

ಆದಿಯಲ್ಲಿ ಒಂದೇ ಹ್ರಸ್ವಸ್ವರವಿದ್ದು ಮುಂದೆ ಸ್ವರ ಬಂದಾಗ, ಪೂರ್ವಪದಾಂತ್ಯದ ತ, ಳಗಳು ದ್ವಿತ್ವವಾಗುತ್ತವೆ.

ಉದಾ: 'ತ' ದ್ವಿತ್ವ:

ಮುದಿ>ಮುತ್+ಊರು = ಮುತ್ತೂರ (ಜಮ)

ಕಿರಿದು>ಕಿತ್+ಅಡಿ = ಕಿತ್ತಡಿ>ಕಿತ್ತಲಿ (ಬಾದಾ)

'ಳ' ದ್ವಿತ್ವ

ಮುಳ್+ಊರು = ಮುಳ್ಳೂರ (ಹುನ)

ಬಳ್+ಊರು = ಬಳ್ಳೂರ (ಬೀಳ)

೪. ಸ್ಥಳನಾಮಗಳಲ್ಲಿ ಕೆಲಪರಿವರ್ತನೆಗಳು

ಅ. ಉತ್ತರ ಪದದಲ್ಲಿ

೧. ಕುಱುವ>ಊರು

ಸ್ಥಳನಾಮಗಳ ಉತ್ತರಪದದಲ್ಲಿರುವ ಕುಱುವ ಇದು ಊರು ಎಂದಾಗುವುದು.

ಉದಾ: ಆಲ+ಕುಱುವ = ಆಲಗುರುವ>ಆಲಗೂರು (ಜಮ)

ಮೈ+ಕುಱುವ = ಮೈಗುರುವ>ಮೈಗೂರು (ಜಮ)

ಹಿರಿದು+ಕುಱುವ = ಹೆಗ್ಗುರುವ>ಹೆಗ್ಗೂರು (ಬೀಳ)

೨. ಪೊೞಲ್>ಓಳ

ಸ್ಥಳನಾಮಗಳ ಉತ್ತರಪದದಲ್ಲಿರುವ 'ಪೊೞಲ್' ಎಂಬುದು 'ಓಳ' ಎಂದಾಗುವುದು.

ಉದಾ: ಮುದ್ದು+ಪೊೞಲ್>ಮುದುವೊಳಲ್>ಮುಧೋಳ (ಮುಧೋ)

ಸಿರಿ+ಪೊೞಲ್ = ಸಿರಿವೊೞಲ್>ಶಿರೋಳ (ಮುಧೋ)

ಮರ+ಪೊೞಲ್ = ಮರವೊೞಲ್>ಮರೋಳ (ಹುನ)

೩. ಸ್ಥಾನ>ತಾಳ

ಸ್ಥಳನಾಮಗಳ ಉತ್ತರಪದದಲ್ಲಿರುವ 'ಸ್ಥಾನ' ಎಂಬುದು 'ತಾಳ' ಎಂದಾಗುವುದು.

ಉದಾ: ರಾಮ+ಸ್ಥಾನ>ರಾಮತಾಣ>ರಾಮತಾಳ (ಹುನ)

ಇಲ್ಲಿ ಮೂರು ಬದಲಾವಣೆಗಳಾಗಿವೆ.

i. ಸ್ಥಾನ ಇದರ ತದ್ಭವ ತಾಣ ಎಂದಾಗಿದೆ.

ii. ನ>ಣ ಆಗಿದೆ. ಕೊನೆಗೆ ಣ ಳ ಯೋರಭೇದ: ಈ ನಿಯಮಕ್ಕನುಸರಿಸಿ,

iii. ಣ>ಳ ಆಗಿದೆ.

೪. ಣ>ಳ

ಣ, ಳ ಯೋರಭೇದ: ಈ ನಿಯಮಕ್ಕನುಸರಿಸಿ, ಸ್ಥಳನಾಮಗಳ ಕೊನೆಯಲ್ಲಿರುವ 'ಣ' ಕಾರವು 'ಳ' ಕಾರವಾಗುತ್ತದೆ.

ಉದಾ: ಕಡಿವಾಣ>ಕಡಿವಾಳ (ಹುನ)

ಆ. ಪೂರ್ವಪದದಲ್ಲಿ

೧. ಒ>ಉ

ಸ್ಥಳನಾಮಗಳ ಪೂರ್ವಪದದ ಆದಿಯ 'ಒ' ಕಾರವು 'ಉ' ಕಾರವಾಗುತ್ತದೆ.

ಉದಾ:

ಪೊನ್ನ>ಹೊನ್ನ+ಊರು = ಹೊನ್ನೂರು>ಹುನ್ನೂರು (ಜಮ)

ಪೊನ್ನಕುಂಟೆ>ಹೊನ್ನಕುಂಟೆ>ಹುನಕುಂಟೆ (ಹುನ)

ಪೊನ್ನ>ಹೊನ್ನ+ಕುಂದ>ಹುನಗುಂದ (ಹುನ)

೨. ಪ>ವ

ಸ್ಥಳನಾಮಗಳ ಆದಿಯಲ್ಲಿರುವ 'ಪ' ಕಾರವು 'ವ' ಕಾರವಾಗುತ್ತದೆ.

ಉದಾ: ಪರ್ಚಗಲ್ಲ>ವರ್ಚಗಲ್ಲ (ಮುಧೋ)

೩. ಅಬ್ಬೆ>ಬೇ

ಸ್ಥಳನಾಮದಲ್ಲಿ ಆದಿಯ 'ಅಬ್ಬೆ'ಯು 'ಬೇ'ಎಂದಾಗುತ್ತದೆ.

ಉದಾ: ಅಬ್ಬೆಯ+ಕಮಲದಿನ್ನಿ = ಬೇಕಮಲದಿನ್ನಿ (ಹುನ)

೪. ಕೇ>ಕ್ಯಾ

ಸ್ಥಳನಾಮದಲ್ಲಿ ಆದಿಯ 'ಕೆ' ಕಾರವು 'ಕ್ಯಾ' ಕಾರವಾಗುತ್ತದೆ.

ಉದಾ: ಕೇದಗೆಯ+ಕೇರಿ = ಕೇದಗ್ಗೇರಿ>ಕ್ಯಾದಗ್ಗೇರಿ (ಹುನ)

೫. ಬಿಳಿದು>ಬೆಳ

ಸ್ಥಳನಾಮಗಳ ಪೂರ್ವದಲ್ಲಿರುವ 'ಬಿಳಿದು'ಎಂಬುದು ಮುಂದೆ ವ್ಯಂಜನ ಬಂದು ಸಮಾಸವಾಗುವಾಗ 'ಬೆಳ್'ಎಂದಾಗುವುದು.

ಉದಾ: ಬಿಳಿದು+ಕಲ್ಲು = ಬೆಳಗಲ್ಲು (ಹುನ)

ಬಿಳಿದು+ಕಲಿ = ಬೆಳಗಲಿ (ಮುಧೋ)

೬. ಕೆಚ್ಚನೆ>ಕೆಂ

ಸ್ಥಳನಾಮಗಳ ಪೂರ್ವದಲ್ಲಿರುವ 'ಕೆಚ್ಚನೆ' ಎಂಬುದು ಮುಂದೆ ವ್ಯಂಜನ ಬಂದು ಸಮಾಸವಾಗುವಾಗ 'ಕೆಂ'ಎಂದಾಗುವುದು.

ಉದಾ: ಕೆಚ್ಚನೆಕಲ್ಲು = ಕೆಂಗಲ್ಲು (ಹುನ)

೭. ಅ>ಒ, ಓ

ಸ್ಥಳನಾಮಗಳ ಪೂರ್ವಪದದ ಅಂತ್ಯದಲ್ಲಿರುವ 'ಅ'ಕಾರವು ಉತ್ತರಪದದ ಹ, ವ ದೊಡನೆ ಸೇರಿ ಒ, ಓ ಕಾರವಾಗಿ ಪರಿಣಮಿಸುತ್ತದೆ.

ಉದಾ: 'ಒ'ಕಾರಕ್ಕೆ

ಮುಗುಳ+ಪಳ್ಳಿ = ಮುಗುಳವಳ್ಳಿ>ಮುಗಳೊಳ್ಳಿ (ಬಾಗ)

ಕಲ್ಲ+ಪಳ್ಳಿ = ಕಲ್ಲಹಳ್ಳಿ>ಕಲ್ಲೊಳ್ಳಿ (ಜಮ)

ಕುಲ+ಪಳ್ಳಿ = ಕುಲಹಳ್ಳಿ>ಕುಲ್ಲೊಳ್ಳಿ (ಜಮ)

ಕನ್ನ+ಪಳ್ಳಿ = ಕನ್ನವಳ್ಳಿ>ಕನ್ನೋಳ್ಳಿ (ಜಮ)

'ಓ' ಕಾರಕ್ಕೆ

ಟಕ್ಕ+ಬಾಡ = ಟಕ್ಕವಾಡ>ಟಕ್ಕೋಡ (ಜಮ)

೮. ಪ>ಹ

ಸಾಮಾನ್ಯವಾಗಿ ಕನ್ನಡದಲ್ಲಿ 'ಪ'ಕಾರವು'ಹ'ಕಾರವಾಗುತ್ತದೆ. ಈ ವಿಧಾನವು ಸ್ಥಳನಾಮಗಳಿಗೂ ಅನ್ವಯಿಸುತ್ತದೆ. ಸ್ಥಳನಾಮಗಳ ಆದಿ ಮಧ್ಯಗಳಲ್ಲಿ ಈ ಪರಿವರ್ತನೆ ಸಂಭವಿಸುತ್ತದೆ.

ಉದಾ: i. ಆದಿಯಲ್ಲಿ

ಪಡಗಲಿ>ಹಡಗಲಿ (ಹುನ)

ಪಲಗಲಿ>ಹಲಗಲಿ (ಮುಧೋ)

ಪಳ್ಳದೂರು>ಹಳ್ಳದೂರ>ಹಳದೂರ (ಬಾದಾ)

ಪಟಗೇರಿ>ಹಳಗೇರಿ (ಬಾದಾ)

ಪುಲಿಗಿಲ್>ಹುಲಗಲಿ (ಹುನ)

ಪೂವನೂರ>ಹೂವನೂರ (ಹುನ)

ಪೂವಿನಹಳ್ಳಿ>ಹೂವಿನಹಳ್ಳಿ (ಹುನ)

ಪೆರ್ಬಳ್ಳಿ>ಹೆಬ್ಬಳ್ಳಿ (ಬಾದಾ)

ಪೆರಕಲ್>ಹೆರಕಲ್ಲ (ಬೀಳ)

ಪೊನ್ನಕುಂಟೆ>ಹೊನ್ನಕುಂಟೆ>ಹುನಕುಂಟೆ (ಹುನ)

ಪೊನ್ನಗುಂದ>ಹೊನ್ನಗುಂದ>ಹುನಗುಂದ (ಹುನ)

ಪೊನ್ನರ>ಹಳ್ಳಿ>ಹೊನ್ನರಹಳ್ಳಿ>ಹೊನರಳ್ಳಿ (ಹುನ)

ಪೊಸ+ಕೋಟೆ>ಹೊಸಕೋಟೆ (ಮುಧೋ)

ii. ಮಧ್ಯದಲ್ಲಿ

ಸಮಸ್ತ ಪದದಲ್ಲಿ ಉತ್ತರ ಪದವು ಪೊಳೆ, ಪಟ್ಟಿ, ಪಳ್ಳಿ, ಪಾಳ್, ಮುಂತಾದವುಗಳಿದ್ದಾಗ ಅಲ್ಲಿರುವ 'ಪ' ಕಾರವು 'ಹ' ಕಾರವಾಗುದು.

ಉದಾ: ಪೊಳೆ>ಹೊಳೆ

ನವಿಲು ಪೊಳೆ>ನವಿಲುಹೊಳೆ (ಬಾದಾ)

ಅಯ್ಯಾಪೊಳೆ>ಐಹೊಳೆ (ಹುನ)

ಪಟ್ಟಿ>ಹಟ್ಟಿ

ಬನಪಟ್ಟಿ>ಬನಹಟ್ಟಿ (ಜಮ)

ಬನ್ನಿಪಟ್ಟಿ>ಬನ್ನಿಹಟ್ಟಿ (ಹುನ)

ಪಳ್ಳಿ>ಹಳ್ಳಿ

ಯಡಪಳ್ಳಿ>ಯಡಹಳ್ಳಿ (ಮುಧೋ, ಬೀಳ, ಬಾಗ)

ಕುಲಪಳ್ಳಿ>ಕುಲಹಳ್ಳಿ (ಜಮ)

ಪೂವಿನಪಳ್ಳಿ>ಹೂವಿನಹಳ್ಳಿ (ಹುನ)

ಪೊನ್ನರಪಳ್ಳಿ>ಹೊನರಳ್ಳಿ (ಹುನ)

ಪಾಳ್>ಹಾಳ

ಅಡಿಪಾಳ್>ಅಡಿಹಾಳ (ಹುನ)

ಕೋಡಿಪಾಳ್>ಕೋಡಿಹಾಳ (ಹುನ)

ಕಂಬಳಿಪಾಳ್>ಕಂಬಳಿಹಾಳ (ಹುನ)

ಗಂಜಿಪಾಳ್>ಗಂಜಿಹಾಳ (ಹುನ)

ಚಟ್ನಿಪಾಳ್>ಚಟ್ನಿಹಾಳ (ಹುನ)

ಮನ್ಮಥನಪಾಳ್>ಮನ್ಮಥನಹಾಳ (ಹುನ)

ಮಲ್ಲಿಗೆಪಾಳ್>ಮಲ್ಲಿಗೆಹಾಳ (ಹುನ)

ಹೊನ್ನಿಪಾಳ>ಹೊನ್ನಿಹಾಳ (ಬೀಳ)

ಇ. ಸಾಪೇಕ್ಷ

"ಒಂದೇ ಹೆಸರಿನ ಊರು ಎರಡು ಇದ್ದಾಗ ಅವುಗಳನ್ನು ಪ್ರತ್ಯೇಕಿಸುವ ಸಲುವಾಗಿ ಹಿಂದೆ ಅಥವಾ ಮುಂದೆ ಕೆಲವು ಸಾಪೇಕ್ಷ ಶಬ್ದಗಳನ್ನು ಸೇರಿಸಬೇಕಾಗುತ್ತದೆ."[೩]

೧. ಹಿರೇ–ಚಿಕ್ಕ

ಉದಾ: ಹಿರೇಜಂಬಗಿ–ಚಿಕ್ಕಜಂಬಗಿ (ಜಮ)

ಹಿರೇಪಡಸಲಗಿ–ಚಿಕ್ಕಪಡಸಲಗಿ (ಜಮ)

ಹಿರೇಗುಳಬಾಳ–ಚಿಕ್ಕಗುಳಬಾಳ (ಬಾಗ)

ಹಿರೇಶೆಲ್ಲಿಕೇರಿ–ಚಿಕ್ಕಶೆಲ್ಲಿಕೇರಿ (ಬಾಗ)

ಹಿರೇಮ್ಯಾಗೇರಿ–ಚಿಕ್ಕಮ್ಯಾಗೇರಿ (ಬಾಗ)

ಹಿರೇಓತಗೇರಿ–ಚಿಕ್ಕಓತಗೇರಿ (ಹುನ)

ಹಿರೇಮಳಗಾವಿ–ಚಿಕ್ಕಮಳಗಾವಿ (ಹುನ)

ಹಿರೇಆಲಗುಂಡಿ–ಚಿಕ್ಕಆಲಗುಂಡಿ (ಬೀಳ)

ಹಿರೇಉಪನಾಳ–ಚಿಕ್ಕಉಪನಾಳ (ಹುನ)

ಹಿರೇಸಂಸಿ–ಚಿಕ್ಕಸಂಸಿ (ಬಾಗ)

ಹಿರೇಬಾದವಾಡಗಿ–ಚಿಕ್ಕಬಾದವಾಡಗಿ (ಹುನ)

೨. ಬುದ್ರುಕ (ಹಿರೇ) –ಖುರ್ದ (ಚಿಕ್ಕ)

ಚಿಂಚಕಂಡಿಬುದ್ರುಕ–ಚಿಂಚಕಂಡಿ ಖುರ್ದ

ಈ. ಸ್ಥಳನಾಮಗಳ ಸಂಕ್ಷೇಪೀಕರಣ

ಸೌಲಭ್ಯಾಕಾಂಕ್ಷೆಯಿಂದ ಜನರು ಸ್ಥಳನಾಮಗಳನ್ನು ಸಂಕ್ಷೇಪಗೊಳಿಸುತ್ತಾರೆ. ಹಿಂದೆಯೂ ಈ ವಿಧಾನವಿದ್ದಿತಾದರೂ ಎರಡರಲ್ಲಿಯೂ ಸ್ವಲ್ಪ ಮಟ್ಟಿಗಿನ ವ್ಯತ್ಯಾಸವಿದ್ದುದು ಕಂಡುಬರುತ್ತದೆ. 'ಬಾಗಲಕೋಟೆಗೆ ಹೋಗುತ್ತೇನೆ' ಎಂಬುದನ್ನು 'ಕ್ವಾಟಿ'ಗೆ ಹೋಗುತ್ತೇನೆಂದೂ. 'ಗುಳೇದಗುಡ್ಡದ ಖಣ ಪ್ರಸಿದ್ಧ ಎನ್ನುವದನ್ನು 'ಗುಡ್ಡ'ದ ಖಣ ಪ್ರಸಿದ್ಧವೆಂದೂ ಹಿಂದೆ ಹೇಳುತ್ತಿದ್ದರು. ಇಲ್ಲಿರುವ ಪೂರ್ವೋತ್ತರ ಪದಗಳಲ್ಲಿಯ ಉತ್ತರಪದವನ್ನು ಇಟ್ಟುಕೊಂಡು ಪೂರ್ವಪದವನ್ನು ಅಧ್ಯಾಹಾರ ಮಾಡುತ್ತಿದ್ದರು. ಈಗ ಇಂಗ್ಲೀಷಿನ ಪ್ರಭಾವದಿಂದಾಗಿ–

ಕೊಪ್ಪ ಎಸ್.ಕೆ. (ಬೀಳ)

ಕೊಪ್ಪ ಎಸ್.ಆರ್. (ಬೀಳ)

ಬೂದಿಹಾಳ ಎಸ್.ಜಿ. (ಬೀಳ)

ಬೂದಿಹಾಳ ಎಸ್.ಎಚ್. (ಬೀಳ)

ಹುಲ್ಲಿಕೇರಿ ಎಸ್.ಪಿ. (ಬಾದಾ)

ಹುಲ್ಲಿಕೇರಿ ಇನಾಂ (ಬಾದಾ)

ಜಾಲಿಕಟ್ಟಿ ಬಿ.ಕೆ. (ಮುಧೋ)

ಜಾಲಿಕಟ್ಟಿ ಕೆ.ಡಿ. (ಮುಧೋ)

ಬುದ್ನಿ ಬಿ.ಕೆ. (ಮುಧೋ)

ಬುದ್ನಿ ಕೆ.ಡಿ. (ಮುಧೋ)

ಬುದ್ನಿ ಪಿ.ಡಿ. (ಮುಧೋ)

ಬುದ್ನಿ ಪಿ.ಎ. (ಮುಧೋ)

ಗುಡೂರ ಎಸ್.ಬಿ. (ಹುನ)

ಗುಡೂರ ಎಸ್.ಸಿ. (ಹುನ)

ಆಲೂರ ಎಸ್.ಪಿ. (ಬಾದಾ)

ಆಲೂರ ಎಸ್.ಕೆ. (ಬಾದಾ) ಎಂಬಂತೆ ಸಂಕ್ಷೇಪಗೊಂಡಿವೆ.

"ಈ ಸ್ಥಳನಾಮಗಳ 'ಸಂಕ್ಷೇಪೀಕರಣ'ವನ್ನು ಕೆಲವರು 'ಹ್ರಸ್ವೀಕರಣ'ವೆಂದಿದ್ದಾರೆ""

ಉ. ಸ್ಥಳನಾಮಗಳಲ್ಲಿ ಮಹಾಪ್ರಾಣಗಳು

ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳಿಲ್ಲ. ಸಂಸ್ಕೃತದಿಂದ ಬಂದ ಶಬ್ದಗಳಲ್ಲಿ ಇವುಗಳನ್ನು ಕಾಣುತ್ತೇವೆ. ಬಾಗಲಕೋಟೆ ಜಿಲ್ಲೆಯಲ್ಲಿ ಸಂಸ್ಕೃತ ಸ್ಥಳನಾಮಗಳಿರುವುದು ತೀರಾಕಡಿಮೆ. ಅವುಗಳಲ್ಲಿ ಮಹಾಪ್ರಾಣಾಕ್ಷರ ಗಳಿಂದ ಕೂಡಿದ ಊರಿನ ಹೆಸರುಗಳು ತಿರ ಕಡಿಮೆ. ಆದರೂ ಇನ್ನೂ ಅಂತಹ ಮಹಾಪ್ರಾಣಾಕ್ಷರ ಯುಕ್ತ ಕೆಲವು ಗ್ರಾಮನಾಮಗಳು ಈ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಉದಾ: ಮುಗಳಖೋಡ(ಮುಧೋ), ಚಿಂಚಖಂಡಿ(ಮುಧೋ), ಜಮಖಂಡಿ(ಜಮ), ಮದರಖಂಡಿ (ಜಮ), ಮುಚಖಂಡಿ(ಬಾಗ), ಅಮಲಝುರಿ(ಬೀಳ), ಢವಳೇಶ್ವರ(ಬೀಳ, ಮುಧೋ), ಖಜಗಲ್ಲ(ಹುನ).

ಊ. ಎಕಾರಾಂತಗಳು ಇಕಾರಾಂತ

ಸಾಮಾನ್ಯವಾಗಿ ಉತ್ತರ ಕರ್ನಾಟಕದಲ್ಲಿ ಎಕಾರಾಂತ ಶಬ್ದಗಳು ಇಕಾರಾಂತಗಳಾಗುತ್ತವೆ. ಈ ನಿಯಮಕ್ಕೆ ಬಾಗಲಕೋಟೆ ಜಿಲ್ಲೆಯು ಅಪವಾದವಾಗಿಲ್ಲ. ಇಲ್ಲಿಯೂ ಇಂತಹ ಪ್ರಕ್ರಿಯೆ ನಡೆಯುತ್ತದೆ. ಈ ಪ್ರಸಂಗದಲ್ಲಿ ಕೆಲವು ಬದಲಾವಣೆಗಳಾಗುತ್ತವೆ.

i. ಉಪಾಂತ್ಯವು ಅಕಾರಯುಕ್ತ ಗುರುವಾಗಿದ್ದರೆ, ಆ ಅಕಾರವು ಹ್ರಸ್ವ ಆಕಾರವಾಗುವದು. ಮತ್ತು ಅಂತ್ಯ ಎ>ಇ ಆಗುವುದು.

ಉದಾ: ಹುಣಸಿಕಟ್ಟೆ (ಜಮ)>ಹುಣಸಿಕಾಟ್ಟಿ

ಜಾಲಿಕಟ್ಟೆ (ಮುಧೋ)>ಜಾಲಿಕಾಟ್ಟಿ

ಅನಪಕಟ್ಟೆ (ಹುನ)>ಅನಪಕಾಟ್ಟಿ

ಬೆನಕಟ್ಟೆ (ಬಾಗ)>ಬೆನಕಾಟ್ಟಿ

ಆಲದಕಟ್ಟೆ (ಬಾದಾ)>ಆಲದಕಾಟ್ಟಿ

ii. ಉಪಾಂತ್ಯವು ಓಕಾರವಾಗಿದ್ದರೆ, ಅದು ದೀರ್ಘವಾದ ಓ್ವ ಕಾರವಾಗಿ, ಅಂತ್ಯ ಎ>ಇ ಆಗುವುದು.

ಉದಾ: ಬಾಗಲಕೋಟೆ (ಬಾಗ)>ಬಾಗಲಕ್ವಾಟಿ

ಹೊಸಕೋಟೆ (ಮುಧೋ)>ಹೊಸಕ್ವಾಟಿ

iii. ಉಪಾಂತ್ಯವು ಒಕಾರವಾಗಿದ್ದರೆ, ಅದು ಹ್ರಸ್ವವಾದ ಒ್ವ ಕಾರವಾಗಿ, ಅಂತ್ಯ ಎ>ಇ ಆಗುವುದು.

ಉದಾ: ನವಿಲುಹೊಳೆ (ಬಾದಾ)>ನವಿಲಹ್ವಾಳಿ

iv. ಉಪಾಂತ್ಯವು ಎಕಾರವಾಗಿದ್ದರೆ, ಅದು ಹ್ರಸ್ವವಾದ ಆ್ಯ ಕಾರವಾಗುವದು ಮತ್ತು ಅಂತ್ಯ ಎ>ಇ ಆಗುವುದು.

ಉದಾ: ಯರನಕೆರೆ (ಹುನ)>ಯರನಕ್ಯಾರಿ

ಕೆಸರಪೆಂಟೆ (ಹುನ)>ಕೆಸರಪ್ಯಾಂಟಿ

v. ಉಪಾಂತ್ಯದಲ್ಲಿ ಅಕಾರ ಇಕಾರವಿದ್ದರೆ, ಅದು ಯಾವುದೇ ರೀತಿಯ ಬದಲಾವಣೆಯಾಗದೆ ಅಂತ್ಯ ಎ>ಇ ಆಗುವದು.

ಉದಾ: ಕಮಲದಿನ್ನೆ (ಹುನ)>ಕಮಲದಿನ್ನಿ

ಬನ್ನಿದಿನ್ನೆ (ಬಾಗ)>ಬನ್ನಿದಿನ್ನಿ

ಸೀತಿಮನೆ (ಬಾಗ)>ಸೀತಿಮನಿ

vi. ಆದಿಯ ಒಕಾರವು 'ಒ್ವ' ಕಾರವಾಗುವುದು.

ಉದಾ: ಕೊಟ್ನಳ್ಳಿ (ಬಾದಾ)>ಕ್ವಾಟ್ನಳ್ಳಿ

ಎ. ಸ್ಥಳನಾಮಗಳ ಬರಹ, ಬಳಕೆ

ಕೆಲವು ಸ್ಥಳನಾಮಗಳ ಬರಹಕ್ಕೂ, ಬಳಕೆಗೂ ವ್ಯತ್ಯಾಸವಿರುವದನ್ನು ಕಾಣುತ್ತೇವೆ. ಬಹುತರವಾಗಿ ಇದಕ್ಕೂ ಸೌಲಭ್ಯಾಕಾಂಕ್ಷೆಯೇ ಕಾರಣವಾಗಿರುತ್ತದೆ.

ಉದಾ: ಅಮಲಝುರಿ (ಬೀಳ)>ಅಂಬಳಜೇರಿ

ಕಂಕಣವಾಡಿ (ಜಮ)>ಕಂಕನೋಡಿ

ತೇರದಾಳ (ಜಮ)>ತೇರಾಳ

ಬನಹಟ್ಟಿ (ಜಮ)>ಬನ್ನಟ್ಟಿ

ಇಲಕಲ್ಲ (ಹುನ)>ಇರಕಲ್ಲ, ಇಳಕಲ್ಲ

ಕೆರೂರ (ಬಾದಾ)>ಕೆರ್‍ರ

ಯಡಹಳ್ಳಿ (ಮುಧೋ, ಬಾಗ)>ಯಡಳ್ಳಿ

ಯಂಕಂಚಿ (ಬಾಗ)>ಯಂಕಚ್ಚಿ

ಶಿರಗುಪ್ಪಿ (ಜಮ, ಬಾಗ)>ಶಿರಗುಂಪಿ

ಗುಬ್ಬೇರಕೊಪ್ಪ (ಬಾದಾ)>ಗುಬ್ಯಾರಕೊಪ್ಪ

ಬೂದಿಹಾಳ (ಬೀಳ, ಬಾದಾ, ಹುನ)>ಬೂದ್ಯಾಳ

ರೇವಡಿಹಾಳ (ಹುನ)>ರೇವಡ್ಯಾಳ

ಹದರಿಹಾಳ (ಬೀಳ)>ಹದರ್‍ಯಾಳ

ಹೊನ್ನಿಹಾಳ (ಬೀಳ)>ಹೊನ್ಯಾಳ

ಕೋಡಿಹಾಳ (ಹುನ)>ಕೋಡ್ಯಾಳ

ಅಡಿಟಿಪ್ಪಣಿಗಳು

೧. ಸುಬೋಧ ಸಂಸ್ಕೃತ ವ್ಯಾಕರಣ: ಡಾ. ಡಿ.ಎಸ್.ಶಾನಭಾಗ, ಪು. ೧೦೬, ೧೯೮೯, ಚತುರ್ಥ ಮುದ್ರಣ

೨. ವ್ಯಾಕರಣದಲ್ಲಿ ಈ ವಿಧಾನಕ್ಕೆ 'ಅಲುಕ್' ಸಮಾಸವೆನ್ನುತ್ತಾರೆ. ಸುಬೋಧ ಸಂಸ್ಕೃತ ವ್ಯಾಕರಣ : ಡಾ. ಡಿ.ಎಸ್.ಶಾನಭಾಗ, ಪು. ೧೦೬, ೧೯೮೯, ಚತುರ್ಥ ಮುದ್ರಣ, ಸಂಸ್ಕೃತ ವ್ಯಾಕರಣ ಪೀಠಿಕಾ: ಗುರುಪಾದ ಕೆ. ಹೆಗಡೆ, ಪು. ೬೪೬, ೧೯೭೬, ಪ್ರಥಮ ಮುದ್ರಣ.

೩. "೧. ಹಿರಿ: ಹಿರಿಮಂದೆ, ಹೇರೂರು

೨. ಕಿರಿ: ಕಿತ್ತಗಳಲೆ, ಕಿತ್ತಗೇರಿ, ಚಿಕ್ಕಸತ್ತಿಗಾಲ"

ಈ ಉದಾಹರಣೆಗಳು ಸಾಪೇಕ್ಷವಾಗಲಾರವು. ಸಕಲೇಶಪುರ ಪರಿಸರ ಸ್ಥಳನಾಮಗಳು: ಡಾ. ವಿಶ್ವನಾಥ, ಪು. ೯೨

೪. ಆಂದ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಡಾ. ಜಾಜಿ ದೇವೇಂದ್ರಪ್ಪ, ಪು. ೧೧೬

ಅಧ್ಯಾಯ ೫

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳ ನಿಷ್ಪತ್ತಿ ನಿರೂಪಣೆ


ಬಾಗಲಕೋಟೆ
ಜಿಲ್ಲೆ
ಸ್ಕೇಲ್ 1: 750,000 (1 ಸೆಂ. ಮೀ = 7.5 ಕಿ.ಮೀ)
ಬೆಳಗಾವಿ
ಬಿಜಾಪುರ
ಬೆಳಗಾವಿ
ಗದಗ
ಗದಗ
ಕೊಪ್ಪಳ
ರಾಯಚೂರು
ಅಥಣಿ
ನಂದಗಾಂವ
ಕಾಜಿಬೀಳಗಿ
ಗಲಗಲಿ
ಜಮಖಂಡಿ
ಮುಧೋಳ
ಬೀಳಗಿ
ಬಾಗಲಕೋಟೆ
ಬಾದಾಮಿ
ಹುನಗುಂದ
ಇಳಕಲ್
ಕೂಡಲಸಂಗಮ
ಐಹೊಳೆ
ಪಟ್ಟದಕಲ್ಲು
ಗುಳೇದಗುಡ್ಡ
ರಬಕವಿ
ಬನಹಟ್ಟಿ
ತೇರದಾಳ
ಮಹಾಲಿಂಗಪುರ
ಲೋಕಾಪುರ
ಕಲಾದಗಿ
ಕೆರೂರು
ಅಮೀನಗಡ
ಆಲಮಟ್ಟಿ
ಬಸವನಬಾಗೇವಾಡಿ
ಮುದ್ದೇಬಿಹಾಳ
ತಾಳಿಕೋಟೆ
ರಾಮದುರ್ಗ
ಯರಗಟ್ಟಿ
ಸವದತ್ತಿ
ಮಲಪ್ರಭ
ಮನೋಳಿ
ಜಾಲಿಕಟ್ಟಿ
ಸತ್ತಿಗೇರಿ
ಕಟ್ಕೋಳ
ಕುಲಗೋಡು
ಯಾದವಾಡ
ಸಾಲಹಳ್ಳಿ
ದಾದಾಪಟ್ಟಿ
ಬೊಮ್ಮನಬುದ್ನಿ
ಯಂಡಿಗೇರಿ
ಅನವಾಲ
ಜಂಗವಾಡ
ಹಾವರಗೋಡ
ಉಗಳವಾಟ
ಕಬ್ಬಲಗೇರಿ
ಮುತ್ತಲಗೇರಿ
ಗೋವನಕೊಪ್ಪ
ಕಟ್ಟಲಿ
ಬೇಲೂರು
ಗುಡಾಡು
ಮುರಡಿ
ಹೇಮುಮಸಾಗರ
ದೋತಿಹಾಳ
ಮುದನೂರು
ಬಲಕುಂದಿ
ಕಂದಗಲ್
ಗೋನಾಳ
ಹೇರೂರು
ನಂದವಾಡಗಿ
ಬೆನಕನದೋಣಿ
ಕೇಸರಭಾವಿ
ಕರಡಿ
ಮನ್ನಥಸಾಳ
ಅಮರಾವತಿ
ಧನ್ನೂರು
ಬೆಳಗಲ್
ಗಂಜಿಹಾಳ
ಚಿತ್ತರಗಿ
ಕಮತಗಿ
ಸಿರೂರು
ನೀರಲಕೆರೆ
ಸಿಗಿಕೇರಿ
ಬೆಣಕಟ್ಟಿ
ನಾಯನೇಗಲಿ
ಸುತಗುಂಡಾರ
ತುರಡಗಿ
ದೇವಲಾಪುರ
ನಾಲತವಾಡ
ನಿಡಗುಂದಿ
ಉಕ್ಕಲಿ
ಜುಮನಾಳ
ಮನಗೋಳಿ
ಇಂಗಳೇಶ್ವರ
ಸಾಲವಡಗಿ
ತುರುಬಗಿ
ಹೂವಿನ ಹಿಪ್ಪರಗಿ
ಬಸವನ ಬಾಗೇವಾಡಿ ರೋಡ
ಕೊಲ್ಹಾರ
ಮತ್ತಿಹಾಳ
ಬಬಲೇಶ್ವರ
ನಿಡೋಣಿ
ಯಕ್ಕುಂಡಿ
ತಡಲಾಗಿ
ಚಿಕ್ಕಲಗಿ
ತಂಬಾಗಿ
ಬಿದರಿ
ಕಡಗಿ
ನಾಗನೂರು
ಅದಿಹುಡಿಪಟ್ಟಿ
ಸಾವಳಗಿ
ತುಂಗಳ
ಅಲಗೂರು
ಕುಂಬಾರಹಾಳ
ಹುನ್ನೂರು
ಕಲ್ಲಳ್ಳಿ
ಹಿಪ್ಪರಗಿ
ತಮದಡ್ಡಿ
ಸಮೀರವಾಡಿ
ಕುಲಾಲಿ
ಶಿರೋಳ
ಮಂಟೂರು
ಮೆಟಗುಡ್ಡ
ಹಳ್ಳಿ
ಇಂಗಳಗಿ
ಉತ್ತೂರು
ವಂಟಿಗೋಡ
ಮಲಾಲಿ
ಮಳಲಿ
ಹೆಬ್ಬಾಳ
ಲಿಂಗನೂರು
ಶಿರಬೂರು
ಯಡಹಳ್ಳಿ
ಅಮಲಿಹಾನ
ಹಲಗಲಿ
ಜಾನಮಟ್ಟಿ
ಬಾವಲತ್ತಿ
ಅನಗವಾಡಿ
ಕಾತರಕಿ
ಗದ್ದನಕೇರಿ
ಮುಗಲಳ್ಳಿ
ಬೀಳೂರು
ಪಳ್ಳೂರು
ಕಾಗಲಗೊರಬ
ಕಟಗೇರಿ
ಕಲಾದಗಿ
ಹಂಸನೂರು
ಹುಲ್ಲಿಕೇರಿ
ಕೆಂದೂರು
ಚಿಲ್ಲಾಪುರ
ಕಿಲೂರು
ಕೂಡೂರು
ವಡಗೇರಿ
ಸೂಳಿಭಾವಿ
ಗೋವನಾಳ
ನಾಗೂರು
ಯದರಗೊಪ್ಪ
ಹೊಸೂರು
ಬೂದಿಹಾಳ
ಹಲಕುರ್ಕಿ
ತಪ್ಪಸಕಟ್ಟಿ
13
10
16
17
19
20
23
24
26
27
28
31
32
46

ಅಧ್ಯಾಯ ೫

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳ ನಿಷ್ಪತ್ತಿ ನಿರೂಪಣೆ

'ನಾಮ' ಎನ್ನುವದು ಬಹುವಿಸ್ತಾರವಾದ ಅವಕಾಶವನ್ನು, ಪರಿಧಿಯನ್ನು ಹೊಂದಿದೆ. ಇದರ ಪರಿಧಿಯಲ್ಲಿ ಬರದಿರುವುದು ಯಾವುದೂ ಇಲ್ಲವೆಂದೇ ಹೇಳಬೇಕು. ಕ್ರಿಯೆಯನ್ನುಳಿದ ಎಲ್ಲ ಶಬ್ದಗಳು ನಾಮಗಳೆ. ಇಷ್ಟೇ ಏಕೆ, ಕ್ರಿಯೆಗಳಿಗೂ ಒಂದೊಂದು ಹೆಸರು ಇದ್ದೇ ಇರುತ್ತದೆ.

ಈ 'ನಾಮ' ಎನ್ನುವುದು ೧. ವ್ಯಾಕರಣ ೨. ಕೋಶ ಮತ್ತು ೩. ನಿರುಕ್ತಿ ಎಂಬಂತೆ ಮೂರು ಸ್ತರಗಳಲ್ಲಿ ವ್ಯವಹರಿಸುತ್ತದೆ. ಈ ಮೂರೂ ಸ್ತರಗಳಲ್ಲಿಯೂ ರೂಪ ಮತ್ತು ಅರ್ಥಗಳು ಇರುವದುಂಟು. ರೂಪದಲ್ಲಿ ವ್ಯತ್ಯಾಸವಾದರೆ ಸ್ವಾಭಾವಿಕವಾಗಿ ಅರ್ಥದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಒಂದು ವೇಳೆ ನಾಮದ ರೂಪದಲ್ಲಿ ವ್ಯತ್ಯಾಸವಾಗುತ್ತ ಹೋದರೆ ಅರ್ಥಮಾಡಿಕೊಳ್ಳುವದೇ ಕಠಿಣವಾಗುತ್ತದೆ. ಇದಕ್ಕೆ ಒಂದು ರೀತಿಯ ನಿಯಂತ್ರಣ ಬೇಕೆನ್ನುವ ದೃಷ್ಟಿಯಿಂದಲೆ ವ್ಯಾಕರಣ, ಕೋಶ ಮತ್ತು ನಿರುಕ್ತಿಗಳೆಂಬ ಕಟ್ಟು ಪಾಡುಗಳು ನಿರ್ಮಾಣಗೊಂಡವು. ರೂಪನ್ನು ವ್ಯಾಕರಣ ನಿಯಂತ್ರಿಸಿದರೆ, ಅರ್ಥವನ್ನು ಕೋಶ ನಿಯಂತ್ರಿಸುತ್ತದೆ. ಇವುಗಳ ನಿಷ್ಪತ್ತಿಯಲ್ಲಿ ಏರು-ಪೇರಾಗದಂತೆ ನಿರುಕ್ತಿಯು ಹದ್ದು ಬಸ್ತಿನಲ್ಲಿಡುತ್ತದೆ.

ಈ ಅಧ್ಯಾಯದಲ್ಲಿ ಹಿಂದಿನ ಅಧ್ಯಾಯಗಳ ಪೂರ್ಣಪ್ರಯೋಜನ ಮಾಡಿಕೊಳ್ಳಲಾಗಿದೆ. ಸ್ಥಳನಾಮಗಳಿಗೆ ಹಿನ್ನೆಲೆಯಾಗಿರುವ ಪ್ರಾಕೃತಿಕ ಸ್ವರೂಪ, ಪ್ರಾಗೈತಿಹಾಸಿಕ, ಐತಿಹಾಸಿಕ ವಿಷಯಗಳು, ಸ್ಥಳನಾಮಗಳ ವರ್ಗೀಕರಣದಲ್ಲಿರುವ ನೈಸರ್ಗಿಕ, ಸಾಂಸ್ಕೃತಿಕ, ನಿರ್ವಸತಿವಾಚಕ ಮತ್ತು ವಸತಿವಾಚಕಗಳು ಇಲ್ಲಿ ಕೈಗೂಡಿಸುತ್ತವೆ. ಒಂದು ಸ್ಥಳನಾಮ ನಮ್ಮ ಮುಂದೆ ಬಂದಾಗ ಈ ಎಲ್ಲವನ್ನು ಪರಿಶೀಲಿಸಬೇಕಾಗುವದು. ಒಂದು ಸ್ಥಳನಾಮ ಒಂದನ್ನೇ ಅವಲಂಬಿಸದೆ ಹಲವನ್ನು ಅವಲಂಬಿಸುತ್ತದೆ. ಹೀಗಾಗಿ ಅದನ್ನು ಎಲ್ಲದರೊಂದಿಗೂ ಸಂಪರ್ಕಿಸಿ, ಯಾವುದಕ್ಕೆ ಹೊಂದುತ್ತದೆ ಎನ್ನುವದನ್ನು ಕಂಡುಕೊಂಡು ಅದರ ನಿಷ್ಪತ್ತಿಯನ್ನು ಹುಡುಕಲು ಪ್ರಯತ್ನಿಸಬೇಕಾಗುವುದು.

ಕಾಲಾಂತರದಲ್ಲಿ ಸ್ಥಳನಾಮಗಳು ಜನರ ಬಾಯಲ್ಲಿ ಸಿಲುಕಿ ಎಷ್ಟೋ ಪರಿವರ್ತನೆಗೊಂಡಿರುತ್ತವೆ. ಸೌಲಭ್ಯಾಕಾಂಕ್ಷೆಯಿಂದ ಕೆಲವು ಸಂಕುಚಿತಗೊಂಡಿರುತ್ತವೆ. ಉದಾ: ಬಾಗಲಕೋಟೆ–ಕೋಟೆ ಮತ್ತೆ ಕೆಲವು ಸುತ್ತಲಿನ ಹೆಸರಿನ ಪ್ರಭಾವಕ್ಕೆ ಒಳಗಾಗಿ ತಾವು ಆ ರೂಪ ತಾಳಿರುತ್ತವೆ. ಉದಾ: ಕಾಯಿ ಬೆಳ್ಳಲಿಗೆ>ಕಾಜಿ ಬೆಳ್ಳಿಗೆ (ಜಮ) ಇದು ದೊಡ್ಡ ಊರಾದ ಬೀಳಗಿಯ ಅನುಕರಣೆಯಿಂದ ಕಾಜಿ ಬೀಳಗಿ ಎಂದು ಜನರ ಬಾಯಲ್ಲಿ ಸಿಲುಕಿ ತದ್ವತ್ ಬರಹದಲ್ಲಿಯೂ ಬಂದಿದೆ. ಇದರ ವಿರುದ್ಧ ದಿಸೆಯಿಂದಲೂ ಅಂದರೆ ಮೊದಲು ಬರಹರೂಪದಲ್ಲಿ ಬಂದು, ನಂತರ ಜನರ ಬಾಯಲ್ಲಿ ಹೋಗಿರಬೇಕು. ಇವುಗಳಲ್ಲಿ ಎರಡನೆಯದರ ಸಾಧ್ಯತೆಯೆ ಹೆಚ್ಚು. ಏಕೆಂದರೆ, ಈಗ ಬರಹದಲ್ಲಿದ್ದಂತೆ ಹೆಚ್ಚಾಗಿ ಅಪರಿಚಿತರು, ಹೊರಗಿನವರು ಕಾಜಿ ಬೀಳಗಿಯೆಂದು ಕರೆಯುತ್ತಿದ್ದರೆ, ಗೊತ್ತಿದ್ದವರು ಒಳಗಿನವರು ಕಾಜಿಬೆಳ್ಳಿಗೆ ಎಂದೇ ಈಗಲೂ ಕರೆಯುವದುಂಟು. ಇನ್ನು ಕೆಲವು ಶಬ್ದಗಳು ಸಂಸ್ಕೃತೀ ಕರಣಗೊಂಡು ಬೇರೆ ರೂಪನ್ನು ತಳೆಯುತ್ತವೆ. ಉದಾ: ಮರನೂರು ಸಂಸ್ಕೃತೀಕರಣಗೊಂಡು 'ಶೂರ್ಪಾಲಿ'ಯಾಗಿದೆ(ಜಮ). ಕವಟಗೆಯು (ಜಮ) 'ಕಪಿತ್ಥಗಾ' ಎಂದಾಗಿದೆ. ಹಾಗೆಯೇ, ಬಾದಾಮಿ >ವಾತಾಪಿ, ಇಲೆಹಾಳ>ಇಲಾಳ (ಬಾಗ) ಇದು ಇಲ್ವಲವಾಗಿದೆ.

ಸ್ಥಳನಾಮಗಳ ಖಚಿತತೆಯನ್ನು ಕಂಡುಕೊಳ್ಳುವಲ್ಲಿ ಸಾಕಷ್ಟು ಪ್ರಯಾಸ ಪಡಬೇಕಾಗುತ್ತದೆ. ಕ್ಷೇತ್ರಕಾರ್ಯಕ್ಕೆ ಹೋದಾಗ ಹಲವರನ್ನು ಸಂದರ್ಶಿಸಿದಾಗ ಕೆಲವರು ತಮಗೇನೂ ಗೊತ್ತಿಲ್ಲವೆಂದು ಹೇಳಿ, ಕೈಜಾಡಿಸಿಕೊಳ್ಳುತ್ತಾರೆ. ಒಂದು ದೃಷ್ಟಿಯಿಂದ ಇವರು ಒಳ್ಳೆಯವರು. ತಮ್ಮ ಅವಜ್ಞತೆಯನ್ನು ಇವರು ಒಪ್ಪಿಕೊಂಡು ಪ್ರಾಮಾಣಿಕವಾಗಿ ಗೊತ್ತಿಲ್ಲವೆಂದು ಹೇಳುತ್ತಾರೆ. ಆದರೆ ಮತ್ತೆ ಕೆಲವರು ತಾವು ಬಲ್ಲವರು ಎಂಬುದನ್ನು ತೋರಿಸಿಕೊಳ್ಳುವ ಸಲುವಾಗಿ, ಯಾವ ಯಾವದೋ ಕಲ್ಪಿತ ಕಥೆಗಳನ್ನು ಕಟ್ಟಿ, ಅಗಾಧವಾಗಿ ನಿರೂಪಿಸುತ್ತಾರೆ. ಮೇಲ್ವರ್ಗದ ಜನ ತಮ್ಮ ಊರು ಪ್ರಾಚೀನವಾದುದು, ಪವಿತ್ರವಾದುದು ಎಂಬುದನ್ನು ತೋರಿಸಿಕೊಡುವ ಸಲುವಾಗಿ ಪೌರಾಣಿಕ ವ್ಯಕ್ತಿಗಳ ಜೊತೆಗೆ ತಮ್ಮ ಊರಿನ ಚರಿತ್ರೆಯನ್ನು ಗಂಟುಹಾಕುತ್ತಾರೆ. ಇವುಗಳಲ್ಲಿ ಕೆಲವು ಮಾತ್ರ ಸತ್ಯಾಂಶಗಳಿಂದ ಕೂಡಿದವುಗಳಾಗಿದ್ದರೆ, ಬಹಳಷ್ಟು ಸಂಗತಿಗಳು ಅತಿರಂಜಿತವಾಗಿಯೇ ಇರುತ್ತವೆ. ಇಂತಹ ಪ್ರಸಂಗದಲ್ಲಿ ಬಹುಜಾಣಾಕ್ಷತನದಿಂದ ವ್ಯವಹರಿಸಬೇಕಾಗುತ್ತದೆ.

ಈ ವೇಳೆಯಲ್ಲಿ ನಮಗೆ ಕೈಯಾಸರೆಯಾಗಿ ಬರುವಂಥವುಗಳು ಶಾಸನಗಳು. ಎಲ್ಲ ಊರುಗಳಲ್ಲಿ ಶಾಸನಗಳಿರುವದಿಲ್ಲ; ಇದ್ದ ಶಾಸನಗಳಲ್ಲಿ ಸ್ಥಳನಾಮಗಳು ಒಮ್ಮೊಮ್ಮೆ ಬರದಿರುವ ಸಾಧ್ಯತೆಯೂ ಇರುತ್ತದೆ. ದೊರೆತ ಸ್ಥಳನಾಮಗಳನ್ನು ಹಿಡಿದುಕೊಂಡು ಹೊರಟು ಗಂತವ್ಯಸ್ಥಾನವನ್ನು ಮುಟ್ಟ ಬೇಕಾಗುತ್ತದೆ. ಕಾಲಾಂತರದಲ್ಲಿ ಹೆಸರುಗಳು ಸಾಕಷ್ಟು ಪರಿವರ್ತನೆಗೊಂಡಿರುತ್ತವೆ. ಅವನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ, ಅದು ಸಾಗಿಬಂದ ದಾರಿಯ ಗುರುತುಗಳನ್ನು ಪತ್ತೆ ಹಚ್ಚಿ ಮೂಲರೂಪ ವನ್ನು ತಿಳಿದುಕೊಳ್ಳಬೇಕಾಗುತ್ತದೆ.

ಇವೆಲ್ಲವುಗಳಿಗಿಂತ ಮಹತ್ವಪೂರ್ಣವಾದುದು ಭಾಷಿಕ ವಿವೇಚನೆ. ಇದು ಹಿಂದಿನ ಪ್ರಾಕೃತಿಕಾದಿ ಎಲ್ಲ ಪರಿಕರಗಳನ್ನು ಮುಂದಿರಿಸಿಕೊಂಡು ಸ್ಥಳನಾಮಗಳ ಮೂಲವನ್ನು ಹುಡುಕಲು ಸಹಾಯ ಮಾಡುತ್ತದೆ. ನಿಷ್ಪತ್ತಿಶಾಸ್ತ್ರವು ಈ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತದೆ. ಸಂದೇಹಕ್ಕೆ ಆಸ್ಪದವಿಲ್ಲದಂತೆ, ಶಬ್ದವನ್ನು ಪ್ರಥಃಕರಿಸಿ, ಖಚಿತತೆಯನ್ನು ತಂದುಕೊಡುತ್ತದೆ. ಆ ಖಚಿತತೆಯಿಂದ ಆ ಊರಿನ ಆಗು-ಹೋಗುಗಳನ್ನು ಸರಿಯಾಗಿ ಅರಿತುಕೊಳ್ಳಲು ಸಾಧ್ಯವಾಗುತ್ತದೆ.

ಹೀಗೆ ಹಿಂದಿನ ಅಧ್ಯಾಯಗಳ ಸಹಾಯದಿಂದ ಪ್ರತಿ ಶಬ್ದದ ಮೂಲವನ್ನು ತಿಳಿದುಕೊಳ್ಳಲು ಸಾಧ್ಯವಾದ ರೀತಿಯಿಂದ ಪ್ರಯತ್ನಿಸಿದರೂ ತೀರ ವಿರೂಪಗೊಂಡಿರುವ ಕೆಲವು ಸ್ಥಳನಾಮಗಳು ಒನಕೆಯ ಮಿಂಡಗಳಾಗಿ ಉಳಿಯುವದೂ ಉಂಟು. 'ಕಾಲೋಹ್ಯಯಂ ನಿರವಧಿರ್ವಿಪುಲಾಚ ಪೃಥ್ವಿ, ಉತ್ಪತ್ಸ್ಯತೇಸ್ತಿಮಮ ಕೋಪಿ ಸಮಾನ ಧರ್ಮಾಃ' ಎನ್ನುವಂತೆ ಅನಂತವಾದ ಕಾಲದಲ್ಲಿ, ವಿಶಾಲವಾದ ಜಗತ್ತಿನಲ್ಲಿ, ನನ್ನ ಸಮಾನನಾದಂತಹ ವ್ಯಕ್ತಿಯು ಇರಬಹುದು, ಇಲ್ಲವೆ ಹುಟ್ಟಬಹುದು. ಅವನಿಂದಲಾದರೂ ಮುಂದಿನ ಕಾರ್ಯ ಪೂರ್ಣಗೊಳ್ಳಬಹುದು. ಇದು ನನ್ನ ಆಶಾಭಾವನೆ. ಸತ್ಯಕ್ಕೆ ಸಮೀಪವಾದ ನಿರ್ಣಯಕೊಡಲು ಪ್ರಯತ್ನಿಸಿದ್ದೇನೆ.

ಬಾಗಲಕೋಟೆ ಜಿಲ್ಲೆಯಲ್ಲಿ ೬ ತಾಲೂಕುಗಳು, ೧೨ ಪಟ್ಟಣಗಳು, ೬೪೦ ಹಳ್ಳಿಗಳು, ಇದ್ದು ಇವುಗಳ ನಿಷ್ಪತ್ತಿ ನಿರೂಪಿಸಲಾಗಿದೆ. ಇಲ್ಲಿ ಒಟ್ಟು ೬೪೨ ಸಣ್ಣ-ದೊಡ್ಡ ಶಾಸನಗಳಿರುತ್ತವೆ. ಇವುಗಳ ಉಪಯೋಗ ಪಡೆಯಲಾಗಿದೆ ಹಾಗೂ ಗ್ರಾಮಗಳನ್ನು ತಾಲೂಕುವಾರು ಅಕಾರಾದಿಯಾಗಿ ಹೊಂದಿಸಿ ವಿವರಿಸಲಾಗಿದೆ.

ಜಮಖಂಡಿ ತಾಲೂಕ



೧. ಜಮಖಂಡಿ ತಾಲೂಕು

ಅಡಿಹುಡಿ : ಅಡಿ = ಪಾದ

ಹುಡಿ = ಧೂಳು

ಅಡಿ+ಹುಡಿ = ಅಡಿಹುಡಿ, ಪಾದಧೂಳು, ಪವಿತ್ರಧೂಳಿ,

ಅಡಿಹುಡಿ = ಪಾದಧೂಳಿ

ಇಲ್ಲಿ ಒಬ್ಬ ಮಹಾತ್ಮನ ಪಾದಧೂಳಿ ಬಿದ್ದುದರಿಂದ ಅಥವಾ ಮಹಾತ್ಮ ವಾಸವಾಗಿದ್ದುದರಿಂದ ಈ ಪ್ರದೇಶಕ್ಕೆ 'ಅಡಿಹುಡಿ' ಎಂದು ಹೆಸರು ಬಂದಿರಬೇಕು. ಸಂಸ್ಕೃತಿವಾಚಕ

ಆಲಗೂರ : ಕುಱುವ ಎಂದರೆ ನಡುಗಡ್ಡೆ

ಆಲಕುಱುವ ಅಂದರೆ ಆಲದ ಗಿಡಗಳಿಂದ ಕೂಡಿದ ನಡುಗಡ್ಡೆ.

ಆಲ+ಕುಱುವ = ಆಲಗುರುವ,

ಆಲಗುರ>ಆಲಗೂರ ಆಗಿದೆ. ಸಸ್ಯ, ಪ್ರಕೃತಿವಾಚಕ

ಆಲ್ಗೂರು ಕಲಮೇಶ್ವರ ದೇವಾಲಯದ ಗೋಡೆಗೆ ಸೇರಿಸಿ ಕಟ್ಟಿರುವ(B.K.No. 47 of 1938–39; SII.XX. 204) ಕ್ರಿ.ಶ.೧೨೪೫ರ ಈ ಶಾಸನದಲ್ಲಿ "ಸಿಂಹಣದೇವನ ಆಳ್ವಿಕೆಯಲ್ಲಿ (ಆಲ) ಗುರವದ, ಮಹಾಜನರು, ಸಮಸ್ತ ಪ್ರಜೆಗಳು, ಮೂಲಿಗರು, ಒಕ್ಕಲು ಎಲ್ಲಾ ಸೇರಿ ಮಲ್ಲಿಕಾರ್ಜುನ ದೇವರಿಗೆ ಕೆಲವು ಆದಾಯಗಳನ್ನು ಬಿಟ್ಟಿದ್ದನ್ನು ತಿಳಿಸುತ್ತದೆ."[೧] ಇದರಲ್ಲಿ '(ಆಲ) ಗುಱರವ' ಎಂದು ಹೆಸರು ಬಂದಿದೆ.

ಅದೇ ಗ್ರಾಮದ ಕಲಮೇಶ್ವರ ದೇವಾಲಯದಲ್ಲಿ ಬಿದ್ದಿರುವ (B.K.No.49 of 1938-39; SII.XX.283) ಕ್ರಿ.ಶ. ೧೦೧೭–೧೮ರ ಈ ಶಾಸನದಲ್ಲಿ "ಕಡಿತವೆರ್ಗ್ಗಡೆ ಪೊಳಲಮಯ್ಯನ ಆಣತಿಯಂತೆ ವೈಜಪಯ್ಯ ಮುಚ್ಚಿಮಯ್ಯ, ಸೆಟ್ಟಿಮಾಚಯ್ಯ ಮತ್ತು ಕಲಿಯಮಯ್ಯ ಇವರು ನಾಲ್ವರು ಸೇರಿ ಶಿಲಾಸ್ತಂಭವನ್ನು ಮಾಡಿಸಿದಂತೆಯೂ ಇದಕ್ಕಾಗಿ ತೆರಿಗೆಯನ್ನು ಬಿಟ್ಟಿದ್ದ ವಿಷಯ ತಿಳಿಯುತ್ತದೆ."[೨] ಇದರಲ್ಲಿ (ಅ) ಲ್ಗುಱುವ; ಎಂದು ಹೆಸರು ಬಂದಿದೆ.

ಅದೇ ಗ್ರಾಮದ ಆದಿನಾಥ ತೀರ್ಥಂಕರ ವಿಗ್ರಹದ ಪೀಠದ ಮೇಲಿರುವ (B.K.No.48 of 1938–39; SII.XX. 382) ೧೪೪೫ರ ಶಾಸನದಲ್ಲಿ "ಆಲಗುರ ಆದಿನಾಥನ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿದ ಉಲ್ಲೇಖವಿದೆ."[೩] ಇದರಲ್ಲಿ ಸಹ 'ಅಲಗುರ', ಎಂದು ಹೆಸರು ಬಂದಿದೆ. ಒಟ್ಟು ಈ ಮೂರು ಶಾಸನಗಳಲ್ಲಿ ಆಲಗುರ ಎಂದಾಗಿದೆ. ಈಗ ಆಲಗೂರ ಎಂದಿದೆ.

ಆಲಬಾಳ : ಆಲದಪಾಳ–ಆಲಬಾಳ>ಆಲಬಾಳ,

ಪಾಳ = ಊರು

'ಆಳಬಾಳ' ಎಂದೂ ಕರೆಯುತ್ತಾರೆ. ಆಲದ ಗಿಡದಿಂದ ಕೂಡಿದ ಊರು. ಈಗ ಯಾವ ಆಲದ ಗಿಡವೂ ಅಲ್ಲಿಲ್ಲ. ಸಸ್ಯವಾಚಕ

ಅಸ್ಕಿ : ಅಸಗ+ಇ = ಅಸಗಿ, ಇ–ಉಳ್ಳ ಎಂಬ ಅರ್ಥದ ತದ್ಧಿತ ಪ್ರತ್ಯಯ ಸೇರಿದೆ.

"ಅಸಗ = ಒಂದು ಶಕುನದ ಹಕ್ಕಿ. ಉದಾ: ಪೆಣ್ಣಾಗೆಬೆಣ್ಣೆಗರಗಂ ಮುಂಗುರಿನವಲಸಗವಕ್ಕಿಯರಗಿಳಿ ಕಾರೇಡಂಗಿಡುಗಂ... ತಾಂ ಪುಗೆಶುಭದಂ."[೪]

ಈ ಹಕ್ಕಿಗಳು ವಾಸವಾಗಿರುವ ಪ್ರದೇಶದಲ್ಲಿರುವ ಊರು. ಅಸಗಿಯು ನದಿಯ 'ಒತ್ತು' ಇರುವಲ್ಲಿ ಇರುವುದರಿಂದ ಈ ಹಕ್ಕಿಗಳು ಇರುವ ಸಾಧ್ಯತೆ ಹೆಚ್ಚು. ಅಸಗಿ>ಅಸ್ಕಿ ಆಗಿದೆ. ಪಕ್ಷಿವಾಚಕ

ಆಸಂಗಿ : ಆಸಂಗಿ = ಅಕ್ಕಸಾಲಿಗರು, ಒಡವೆ, ವಸ್ತುಗಳ ತಗ್ಗನ್ನು ಎತ್ತುವುದಕ್ಕಾಗಿ ಬಳಸುವ ಸಾಧನ (ಸಂಸ್ಕೃತದಲ್ಲಿ ಆಸಂಗಿನ್ ಎಂದಿದೆ). ವಸ್ತುವಾಚಕ

ಕಂಕಣವಾಡಿ : ೧. ಕಂಕ = ಒಬ್ಬ ವ್ಯಕ್ತಿ.

ಕಂಕನ+ವಾಡಿ = ಕಂಕನವಾಡಿ>ಕಂಕಣವಾಡಿ. ಪ್ರಕೃತಿ, ವ್ಯಕ್ತಿವಾಚಕ.

೨. ಕಂಕಣ = ಬಳೆ

ಕೃಷ್ಣಾ ನದಿಯು ಎರಡು ಸೀಳಾಗಿ ಮರನೂರಿನ ಹತ್ತಿರ ಬಂದು ಕೂಡುತ್ತದೆ. ಕಂಕಣಾಕೃತಿಯಾದ ಈ ನಡುಗಡ್ಡೆಯಲ್ಲಿಯೇ ಈ ಊರು ಇದ್ದುದರಿಂದ ಇದಕ್ಕೆ 'ಕಂಕಣವಾಡಿ' ಎನ್ನುತ್ತಾರೆ. ಕಾಲಾಂತರ ದಲ್ಲಿ ಈ ಊರು ಅಲ್ಲಿಂದ ಸ್ಥಳಾಂತರಗೊಂಡು ಕೃಷ್ಣೆಯ ಬಲದಂಡೆಗೆ ಬಂದಿದೆ.

ಕಡಕೋಳ : ಕಡ = ಮಡಿ(ಚೌಕು), ಕೋಳ್ = ಕಂಗೊಳಿಸು

ಕಡ+ಕೋಳ್ = ಕಡಕೋಳ

ಭೂ–ಪ್ರಕೃತಿವಾಚಕ.

ಜಮಖಂಡಿ ತಾಲೂಕಿನ ಹಿರೇಹೊಳಿ ದಂಡೆಯ ಮೇಲಿರುವ ಊರು. ಇಲ್ಲಿ ಭೂಮಿ ಸಮತಟ್ಟಾಗಿದ್ದು ಮಡಿ ಮಡಿಯಾಗಿರುತ್ತದೆ. ಮಡಿಗಳಲ್ಲಿ ಬೆಳೆದ ಬೆಳೆಗಳಿಂದ ಕಂಗೊಳಿಸುವ ಊರು. ಇಲ್ಲಿಯ ಪ್ರಕೃತಿಯು ಹಾಗೆ ಸುಂದರವಾಗಿಯೇ ಇದೆ.

ಕಡಪಟ್ಟಿ : ಕಡೆಯ+ಪಟ್ಟಿ = ಕಡೆಯಪಟ್ಟಿ>ಕಡಪಟ್ಟಿ

ಕಡೆ = ದಂಡೆ. ಪಟ್ಟಿ = ಹಟ್ಟಿ, ಊರು. ದಿಗ್ವಾಚಕ.

ಕನ್ನೊಳ್ಳಿ : ಕನ್ನರು = ಒಂದು ಜನಾಂಗ

ಕನ್ನರ+ಪಳ್ಳಿ = ಕನ್ನವಳ್ಳಿ>ಕನ್ನೊಳ್ಳಿ

ಜಮಖಂಡಿ. ಡಬ್ಲ್ಯೂ.ಟಿ.ಆಪ್ಟೆಯವರ ಮನೆಯಲ್ಲಿರುವ (B.K.No. 52 of 1938–39; SII. XX. 226) ಕ್ರಿ.ಶ. ೧೩೦೬ರ ಈ ಶಾಸನ "ಮಲ್ಲಿಕಾರ್ಜುನ ದೇವರಿಗೆ ಭೂದಾನವಲ್ಲದೆ ಎರಡು ಮನೆ. ಒಂದು ನಿವೇಶನವನ್ನೂ, ಕನ್ನವಳ್ಳಿ, ಕುರುಗೋಳಿ, ಸಾವಳಿಗೆ, ಟಕ್ಕಳಿಗೆ ಗ್ರಾಮದಲ್ಲಿ ಭೂಮಿ ಮತ್ತು ಮನೆಯ ನಿವೇಶನಗಳನ್ನು ದಾನ ನೀಡಿದಂತೆ ಉಲ್ಲೇಖವಿದೆ."[೫] ಇದರಲ್ಲಿ 'ಕಂನವಳ್ಳಿ' ಎಂದು ಹೆಸರು ಬಂದಿದೆ. ಕಂನವಳ್ಳಿ>ಕನ್ನೊಳ್ಳಿ ಎಂದಾಗಿದೆ.

ಕಲಬೆಳ್ಳಿಗೆ : ಕಲ್ಲು+ಬೆಳ್ಳಿಲಿಗೆ = ಕಲ್ಲಬೆಳ್ಳಲಿಗೆ>ಕಲಬೆಳ್ಳಿಗೆ

ಕಲಬೆಳ್ಳಿಗೆ, ಕಾಜಿಬೆಳ್ಳಿಗೆಗಳು ಅಕ್ಕಪಕ್ಕದಲ್ಲಿವೆ. ಇತ್ತೀಚೆಗೆ ಈ ಎರಡು ಊರುಗಳನ್ನು ಬೀಳಿಗೆ ಎಂದು ಕರೆಯಲಾಗುತ್ತಿದೆ. ಶಿಲಾವಾಚಕ

ಕಲಬೀಳಗಿ ಹನುಮಂತ ದೇವಾಲಯದ ಗೋಡೆಗೆ ಸೇರಿಸಿಕಟ್ಟಿರುವ (B.K.No. 58 of 1938–39; SII. XX.123)

ಕ್ರಿ.ಶ. ೧೧೫೪ರ ಈ ಶಾಸನದಲ್ಲಿ "ಅಗ್ರಹಾರ ಗೊಟ್ಟೆಯ ಅಶೇಷ ಮಹಾಜನರು ಕಲ್ಲಬೀ(ಳಗಿ)ಯಲ್ಲಿ ದಾನ ಕೊಟ್ಟಂತೆ ತಿಳಿಯುತ್ತದೆ."[೬] ಇದರಲ್ಲಿ ಕಲ್ಲ(ಬಿ) ಎಂದು ಹೆಸರು ಉಲ್ಲೇಖಿಸಿದೆ. ಕಲ್ಲಬೀಳಗಿ> ಕಲಬೀಳಗಿ ಎಂದಾಗಿದೆ.

ಕಲ್ಲಹಟ್ಟಿ : ಕಲ್ಲು+ಹಟ್ಟಿ = ಕಲ್ಲಹಟ್ಟಿ

ಕಲ್ಲುಗಳಿಂದ ಕೂಡಿದ ಊರು.

ಹಟ್ಟಿ ವಾಸಸ್ಥಳ, ಊರು. ಶಿಲಾ ಮತ್ತು ವಸತಿವಾಚಕ.

ಕಲ್ಲಹಳ್ಳಿ : ಕಲ್ಲು+ಹಳ್ಳಿ = ಕಲ್ಲುಹಳ್ಳಿ>ಕಲ್ಲಹಳ್ಳಿ>ಕಲ್ಲಳ್ಳಿ. ಶಿಲಾವಾಚಕ.

ಕಲ್ಲಹಳ್ಳಿ ವೆಂಕಟೇಶ್ವರ ದೇವಾಲಯದ ವರಾಹಮೂರ್ತಿಯ ಗುಡಿಯ ಬಲಗಡೆ ಗೋಡೆಯಲ್ಲಿನ (B.K.No. 60 of 1938–39; SII. XX. 419) ಕ್ರಿ.ಶ. ೧೮೯ರ ಈ ಶಾಸನದಲ್ಲಿ "ಶೇಷ ಎಂಬುವನು ಕಲ್ಲಳ್ಳಿಯ ಬೆಟ್ಟದ ಮೇಲೆ ವರಾಹಮೂರ್ತಿಯನ್ನು ಸ್ಥಾಪಿಸಿದ ಉಲ್ಲೇಖವಿದೆ."[೭] ಇದರಲ್ಲಿ ಕಲ್ಲಳ್ಳಿ ಎಂದು ಹೆಸರು ಬಂದಿದೆ.

ಕವಟಗಿ : ಕವಟೆ+ಇಗೆ = ಕವಟಿಗೆ>ಕವಟಗಿ.

ಕವಟೆ, ಕವಡೆ, ಕಾವಾಡೆ, ಕೌಟೆ, ಕೌಡೆ– ಒಂದು ಬಳ್ಳಿ ಮತ್ತು ಅದರ ಕಾಯಿ. ಇದು ಔಷಧಿಯ ಸಸ್ಯ. ಇದು ಬೆಳೆಯುವ ಪ್ರದೇಶದಲ್ಲಿರುವ ಊರು. ಸಸ್ಯವಾಚಕ.

ಕಾಜಿಬೆಳ್ಳಿಗೆ : ಜಮಖಂಡಿ. ಡಬ್ಲ್ಯೂ.ಟಿ.ಆಪ್ಟೆಯವರ ಮನೆಯಲ್ಲಿರುವ (B.K.No. 52 of 1938–39; SII.XX. 226) ಕ್ರಿ.ಶ. ೧೩೦೬ರ ಈ ಶಾಸನದಲ್ಲಿ "ಬೆಳ್ಳಲಿಗೆಪುರ ಎಂದಿರುವು ದರಿಂದ"[೮] ಇದು ದೊಡ್ಡ ಊರಾಗಿರಬೇಕು. ಇಲ್ಲಿಯ ಕಲ್ಲಿನಾಥ ದೇವರಿಗೆ ಪಕ್ಕದ ಊರುಗಳಾದ ಕನ್ನವಳ್ಳಿ(ಕನ್ನೊಳ್ಳಿ), ಕುಱುಗೋಳಿ(ಕುರುಗೋಡ), ಸಾವಳಿಗೆ, ಟಕ್ಕಳಿಕೆ ಇವುಗಳಲ್ಲಿ ಭೂಮಿಯನ್ನು ದತ್ತಿಯಾಗಿಕೊಟ್ಟಿರುವುದರಿಂದ ಇದು ಪ್ರಸಿದ್ಧವಾಗಿದ್ದಿತೆಂದು ತಿಳಿಯುತ್ತದೆ.

ಕಾಲತಿಪ್ಪಿ : ಕಲ್ಲು+ತಿಪ್ಪಿ = ಕಲ್ಲುತಿಪ್ಪಿ>ಕಲ್ಲ್‌ತಿಪ್ಪಿ>ಕಾಲತಿಪ್ಪಿ

ತಿಪ್ಪಿ= ತ್ಯಾಜ್ಯ ವಸ್ತು ಹಾಕುವ ಸ್ಥಳ.

ತಿಪ್ಪಿ= ತೊಪ್ಪಲಿನ ಇಳಿಜಾರು ಪ್ರದೇಶ.

ಕಲ್ಲುಗಳಿಂದ, ತೊಪ್ಪಲುಗಳಿಂದ ಕೂಡಿದ ಇಳಿಜಾರು ಪ್ರದೇಶ.

ಕಾಲತಿಪ್ಪಿ, ಶಿಲಾ ಹಗೂ ಪ್ರಕೃತಿವಾಚಕ.

ಕುಂಚನೂರು : ಕುಂಚನ+ಊರು = ಕುಂಚನೂರು.

ಕುಂಚ ಎನ್ನುವವ ಒಬ್ಬ ವ್ಯಕ್ತಿ.

ಕುಂಚನೂರು ಮಲ್ಲಿಕಾರ್ಜುನ ದೇವಾಲಯದಲ್ಲಿರುವ ತುಂಡಾಗಿರುವ (B.K.No. 62 of 1938–39; SII. XX. 168) ಕ್ರಿ.ಶ. ೧೧೭೫–೧೧೮೦ರ ಈ ಶಾಸನದಲ್ಲಿ "ಕಳಚುರ್ಯ ಚಕ್ರವರ್ತಿ ಭುವನೈಕಮಲ್ಲ ಸಂಕಮನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಂತೆ ಕುಂಜನೂರು ಮಾಹಾಜನರ ವರ್ಣನೆಯ ಉಲ್ಲೇಖವಿದೆ."[೯]

ಕುಂಬಾರಹಳ್ಳ : ಕುಂಬಾರರ+ಹಳ್ಳ = ಕುಂಬಾರಹಳ್ಳ>ಕುಂಬಾರಳ್ಳ

ಕುಂಬಾರರು ಹೆಚ್ಚಾಗಿರುವ ಊರು. ವೃತ್ತಿವಾಚಕ.

ಕುರಗೋಡ : ಕುಱುಗೋಳಿ>ಕುರುಗೋಡಿ>ಕುರುಗೋಡ

ಕುರು = ಸಣ್ಣದಾದ

ಕೋಡ = ಕೊಂಕು, ವಕ್ರ

ಕುರು+ಕೋಡ = ಕುರುಕೋಡ>ಕುರುಗೋಡ. ಭೂಸ್ವರೂಪವಾಚಕ.

ಇಲ್ಲಿ ಒಂದು ಹಳ್ಳವಿದ್ದು, ಅದು ಸಣ್ಣದಾಗಿ ವಕ್ರವಾಗಿದೆ. ಇಲ್ಲಿಯೇ ಇನ್ನೊಂದು ಹಳ್ಳ ಬಂದು ಸೇರಿ ಒಂದು ಸಂಗಮವಾಗಿದ್ದು ಇದೊಂದು ಪವಿತ್ರ ಸ್ಥಾನವೆನಿಸಿದೆ. ಇದೊಂದು ಚಿಕ್ಕ ಗ್ರಾಮವಾಗಿದ್ದು ಇದನ್ನು ಸಂಕೇಶ್ವರದ ಸ್ವಾಮಿಗಳಿಗೆ ಉಂಬಳಿಯಾಗಿ ಕೊಟ್ಟಿದ್ದರು.

ಜಮಖಂಡಿ. ಡಬ್ಲ್ಯೂ.ಟಿ.ಆಪ್ಟೆಯವರ ಮನೆಯಲ್ಲಿರುವ (B.K.No. 52 of 1938–39; SII. XX. 226) ಕ್ರಿ.ಶ. ೧೩೦೬ರ ಈ ಶಾಸನದಲ್ಲಿ "ಮಲ್ಲಿಕಾರ್ಜುನ ದೇವರಿಗೆ ಭೂದಾನವಲ್ಲದೆ ಎರಡು ಮನೆ, ಒಂದು ನಿವೇಶನವನ್ನೂ, ಕನ್ನವಳ್ಳಿ, ಕುರುಗೋಳಿ, ಸಾವಳಿಗೆ, ಟಕ್ಕಳಿಗೆ ಗ್ರಾಮಗಳಲ್ಲಿ ಭೂಮಿ ಮತ್ತು ಮನೆಯ. ನಿವೇಶನಗಳನ್ನು ನೀಡಿದ ಉಲ್ಲೇಖವಿದೆ."[೧೦] ಇದರಲ್ಲಿ 'ಕುರುಗೋಳಿ'ಎಂದು ಹೆಸರು ಬಂದಿದೆ. ಕುರುಗೋಳಿ>ಕುರುಗೋಡಿ>ಕುರುಗೋಡ ಎಂದು ಪರಿವರ್ತನೆಯಾಗಿದೆ.

ಕುಲಹಳ್ಳಿ : ಕುಲ+ಹಳ್ಳಿ = ಕುಲಹಳ್ಳಿ

ಕುಳ = ತೆರಿಗೆ

ತೆರಿಗೆಗಾಗಿ ಬಿಟ್ಟಹಳ್ಳಿ

ಕುಳಹಳ್ಳಿ>ಕುಲಹಳ್ಳಿ

ಕೊಣ್ಣೂರು : ಕೊಣೆಗನ+ಊರು = ಕೊಣೆಗನೂರು>ಕೊಣೆಗನೂರು>ಕೊಣ್ಣೂರು. ಪ್ರಾಣಿವಾಚಕ.

ಕೊಣ್ಣೂರಿನ ಚಾವಡಿಯ ಹತ್ತಿರ ಬಿದ್ದಿರುವ (B.K.No. 82 of 1928–29; SII. XV. 65) ಕ್ರಿ.ಶ. ೧೧೮೫ರ ಈ ಶಾಸನದಲ್ಲಿ "ಕೊಣೆಗನೂರಿನ ದೇವಾಲಯದ ಪೂಜೆ ಪನಸ್ಕಾರಗಳಿಗಾಗಿ ಅಯ್ಯಾವೊಳೆ ೫೦೦ರ ಸಂಘದವರು ದಾನ ಮಾಡಿದುದನು ಉಲ್ಲೇಖಿಸಿದೆ."[೧೧] ಇದರಲ್ಲಿ 'ಕೊಣೆಗನೂರು' ಎಂದು ಹೆಸರು ಬಂದಿದೆ.

ಅದೇ ಗ್ರಾಮದ ಹನುಮಂತದೇವರ ಗುಡಿಯಲ್ಲಿ ಬಿದ್ದಿರುವ (B.K.No. 82 of 1928–29; SII. XV. 577) ಕ್ರಿ.ಶ. ೧೨ನೆಯ ಶತಮಾನದ ಈ ಶಾಸನದಲ್ಲಿ "[ಕೊ]ಣಗನೂರು" ೧೨ ಎಂದು ಕರೆದಿದೆ. ಬೀರದೇವರ ಗುಡಿಯ ಗೋಡೆಗೆ ಸೇರಿಸಿ ಕಟ್ಟಿರುವ (B.K.No. 88 of 1928–29; SII. XV. 714) ಕ್ರಿ.ಶ.೧೬೨೫–೨೬ರ ಈ ಶಾಸನದಲ್ಲಿ "ಕೊಣಗನೂರಿನ ಭೂಸಣ್ಣ ಗೌಡನ

ಮಗ ನಾಗಣ್ಣಗೌಡನು ಬೀರದೇವರ ದೇವಾಲಯದ ಚಂದ್ರಶಾಲೆಯನ್ನು ಕಟ್ಟಿಸಿದ ಉಲ್ಲೇಖವಿದೆ"[೧೩] ಇದರಲ್ಲಿ ಕೋಣಗನೂರು' ಎಂದು ಹೆಸರು ಬಂದಿದೆ.

ಗಣಿ : ಖಣಿ>ಗಣಿ

ಇದು ಭೂಸ್ವರೂಪವಾಚಕ.

"ಇಲ್ಲಿ ಮೊದಲು ಹೇರಳವಾಗಿ ಕಲ್ಲಿನ ಕಣಿವೆಗಳು ಇದ್ದವು. ಅದರಿಂದಾಗಿ ಈ ಊರಿಗೆ ಗಣಿ ಎಂಬ ಹೆಸರು ಬಂದಿದೆ. ಇಲ್ಲಿ ಗಣಿಗಳಲ್ಲಿ ಕೆಲಸಮಾಡುವ ವಡ್ಡರ ಜನಾಂಗವು ವಿಶೇಷವಾಗಿದೆ."[೧೪]

ಗದ್ಯಾಳ : ಗದ್ದೆಯ+ಹಾಳ = ಗದ್ದೆಹಾಳ>ಗದ್ಯಾಳ

ಗಟ್ದಿ>ಗರ್ದೆ>ಗಳ್ದೆ>ಗದ್ದೆ = ಭತ್ತ, ಕಬ್ಬು

ಮೊದಲಾದ ನೀರಾವರಿ ಪೈರುಗಳನ್ನು ಬೆಳೆಯುವ ಭೂಮಿ. ಇಂತಹ ಪ್ರದೇಶದಲ್ಲಿರುವ ಹಾಳ–ಗದ್ದೆಯ+ಹಾಳ ಗದ್ದೆಹಾಳ>ಗದ್ಯಾಳ ಎಂದಾಗಿದೆ.

ಗೋಠೆ : ಗೋಷ್ಠಿ = ಸಭೆ, ನಿರ್ದಿಷ್ಟ ಉದ್ದೇಶವಿಟ್ಟುಕೊಂಡು ಚರ್ಚೆ ನಡೆಸುವ ಸ್ಥಳ.

ಗೋಷ್ಠಿ>ಗೊಟ್ಟಿ>ಗೋಠೆ

ತೆಲಸಂಗದ ಒಂದು ಶಾಸನದಲ್ಲಿ 'ಗೊಟ್ಟೆಯ ದಾರಿಯೊಳು' ಎಂದಿದೆ. ಇದು ೧೦ನೆಯ ಶತಮಾನದ ಶಾಸನವಾದ್ದರಿಂದ ಈ ಊರು ಅದಕ್ಕಿಂತ ಪೂರ್ವದ್ದೆಂದು ಹೇಳಬಹುದು. ಇಲ್ಲಿ ಬ್ರಾಹ್ಮಣರ ಸಂಖ್ಯೆ (ಲಿಂಗೀ ಬ್ರಾಹ್ಮಣರು ಇದ್ದಾರೆ) ಹೆಚ್ಚಾಗಿದ್ದುದರಿಂದ ಇಲ್ಲಿ ವಿದ್ವತ್ ಗೋಷ್ಠಿಗಳು ನಡೆಯುತ್ತಿರಬಹುದು. ಗೋಷ್ಠಿ ನಡೆಯುವ ಊರು 'ಗೋಠೆ' ಆಗಿರಲು ಸಾಧ್ಯವಿದೆ. ಇಲ್ಲಿಯ ಮಣ್ಣಿನ ಗೊಂಬೆಗಳು ಪ್ರಸಿದ್ಧವಾಗಿವೆ. ಈ ಊರಿನಲ್ಲಿ ಗೊಟಕವ್ವ, ಎಂಬ ಗ್ರಾಮ ದೇವತೆ ಇದೆ. ದೇವತೆ ಹೆಸರಿನಿಂದ ಈ ಊರಿಗೆ 'ಗೋಠೆ', ಎಂದು ಕರೆದಿರಬಹುದು. ಕಲಬೀಳಗಿ ಹನುಮಂತ ದೇವಾಲಯದ ಗೋಡೆಗೆ ಸೇರಿಸಿ ಕಟ್ಟಿರುವ (B.K.No. 58 of 1928–29; SII. XV.123) ಕ್ರಿ.ಶ. ೧೧೫೪ರ ಈ ಶಾಸನದಲ್ಲಿ "ಅಗ್ರಹಾರ ಗೊಟ್ಟೆಯ ಅಶೇಷ ಮಹಾಜನರು ಕಲಬೆಳ್ಗಿಯಲ್ಲಿ ದಾನ ಕೊಟ್ಟವಿವರಣೆ ಇದೆ."[೧೫] ಇದರಲ್ಲಿ [ಗೊ]ಟ್ಟೆಯ' ಎಂದು ಹೆಸರು ಬಂದಿದೆ. ಗೊಟ್ಟೆ>ಗೋಠೆ ಎಂದಾಗಿರಬೇಕು.

ಗೋಲಬಾವಿ : ಗೋಲ+ಬಾವಿ = ಗೋಲಬಾವಿ ಗೋಲ = ವೃತ್ತಾಕಾರ, ದುಂಡಗೆ

ವೃತ್ತಾಕಾರದ ಭಾವಿ ಇರುವ ಊರು ಗೋಲಬಾವಿ.

ಈಗ ಆ ಬಾವಿ ಇಲ್ಲ. ಜಲ, ನಿರ್ಮಾಣವಾಚಕ.

ಚಿಕ್ಕಜಂಬಗಿ : ಜಂಬು = ನೇರಳೆಮರ

ನೇರಳೆ ಗಿಡಗಳು ಬೆಳೆಯುವ ಪ್ರದೇಶ.

ಜಂಬು+ಗಿ = ಜಂಬುಗಿ>ಜಂಬಗಿ

ಗಿ –ಇದು ಇರುವ, ಅಥವಾ ಬೆಳೆಯುವ ಎಂಬರ್ಥದಲ್ಲಿ 'ಗಿ' ತದ್ದಿತ ಪ್ರತ್ಯಯ ಹತ್ತಿದೆ. ಪ್ರಮಾಣ, ಸಸ್ಯವಾಚಕ.

ಚಿಕ್ಕಜಂಬಗಿ ಕಲ್ಮೇಶ್ವರ ದೇವಾಲಯದ ಮುಂದೆ ನಿಂತಿರುವ ಕ್ರಿ.ಶ. ೧೨೯ ಈ ಶಾಸನದಲ್ಲಿ "ಸಹದೇವನು ಕನೋಬಡೆ (ಕಣಂಬಡೆ?) ೩೦೦ರಲ್ಲಿದ್ದ ತುಂಗಳ ೧೨ರ ಕೃಷ್ಣಾವೇಣ್ಣಾನದಿಯ ಉತ್ತರ ದಡದಲ್ಲಿದ್ದ ಬೋಳಜಂಬಗಿ ಎಂಬ ಹೆಸರಿನ ಗ್ರಾಮವನ್ನು ದಾನ ನೀಡಿದಂತೆ ಶಾಸನ ಉಲ್ಲೇಖಿಸಿದೆ."[೧೬]

ಈ ಶಾಸನ ಈಗ ಬಾಗಲಕೋಟೆ ನವನಗರದಲ್ಲಿರುವ ಜಾನಪದ ವಸ್ತು ಸಂಗ್ರಹಾಲಯದಲ್ಲಿದೆ. ಇದರಲ್ಲಿ ಬೋಳಜಂಬಗಿ ಎಂದು ಹೆಸರಿಸಿದೆ. ಇದರ ಪಕ್ಕದಲ್ಲಿ ಇನ್ನೊಂದು ಜಂಬಿಗೆ ಇದ್ದು ಅದು ದೊಡ್ಡದಾಗಿರುವುದರಿಂದ ಅದನ್ನು ಹಿರೇ ಜಂಬಗಿ ಎಂದು ಕರೆಯುತ್ತಾರೆ. ಈಗ ಇದನ್ನು ಚಿಕ್ಕಜಂಬಗಿ ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದು, ನಾಕೂರಿನಲ್ಲಿ ಕೂಡಿಹೋಗಿದೆ.

ಚಿಕ್ಕಪಡಸಲಗಿ : ಚಿಕ್ಕ = ಸಣ್ಣ

ಪಡಸಲ್–ಡೋಣಿ, ನಾವೆಗಳು ನಿಲ್ಲುವ ಸ್ಥಳ

ಇಗೆ = ತದ್ಧಿತ ಪ್ರತ್ಯಯ

ಚಿಕ್ಕ+ಪಡಸಲ+ಇಗೆ = ಚಿಕ್ಕಪಡಸಲಗೆ>ಚಿಕ್ಕಪಡಸಲಗಿ ಅಂದರೆ ನಾವೆಗಳು ಪ್ರವೇಶಿಸಲು, ನಿಲ್ಲಲು ಸುರಕ್ಷಿತವಾಗಿರುವ ಸ್ಥಳವೆ (ಬಂದರು) ಪಡಸಲಿಗೆ. ನಿಸರ್ಗ, ವಾಣಿಜ್ಯ, ಮತ್ತು ಪ್ರಮಾಣ ವಾಚಕ.

ಜಮಖಂಡಿ ತಾಲೂಕಿನಲ್ಲಿ ಎರಡು ಪಡಸಲಿಗೆಗಳಿವೆ. ಒಂದು ದೊಡ್ಡದು, ಇನ್ನೊಂದು ಸಣ್ಣದು. ಅಂತೆಯೇ ಇವುಗಳನ್ನು ಹಿರೇಪಡಸಲಗಿ, ಚಿಕ್ಕಪಡಸಲಗಿ ಎಂದು ಕರೆಯುತ್ತಾರೆ. ಈ ಎರಡೂ ಹಳ್ಳಿಗಳು ಹೊಳೆಯ ಒಂದೇ ಕಡೆಗಿದ್ದು ಅಕ್ಕಪಕ್ಕದಲ್ಲಿವೆ. ಹೊಳೆಯ ದಂಡೆಯಲ್ಲಿರುವುದರಿಂದ ನಾವಾಡಲು ಒಂದು ಕಾಲದಲ್ಲಿ ಇದು ಸುಯೋಗ್ಯವಾದ ಸ್ಥಳವಾಗಿರಬೇಕು. ಆದ್ದರಿಂದಲೇ ಇದಕ್ಕೆ ಈ ಹೆಸರು ಬಂದಿರುವುದರಲ್ಲಿ ಔಚಿತ್ಯವಿದೆ. ಹಿರೇಪಡಸಲಗಿಯಲ್ಲಿ ನಾವೆ ನಿಲ್ಲುವ ಸ್ಥಳಕ್ಕೆ ಈಗಲೂ 'ಹರಗೋಲ ಪಡಿ' ಎಂದು ಕರೆಯುವರು.

ಚಿಕ್ಕಲಕಿ : ಚಿಕ್ಕಲ = ಒಂದು ಬಗೆಯ ಔಷಧೀಯ ಹುಲ್ಲು

ಚಿಕ್ಕಲ+ಕಿ = ಚಿಕ್ಕಲಕಿ

ಕಿ = ತದ್ಧಿತ ಪ್ರತ್ಯಯ ಇದು ಉಳ್ಳದು, ಬೆಳೆಯುವುದು ಎಂಬರ್ಥ.

ಚಿಕ್ಕಲಕಿ ಸಿದ್ಧೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ (B.K.No. 52 of 1928–29; SII. XV. 135) ಕ್ರಿ.ಶ. ೧೧೫೭ರ ಈ ಶಾಸನದಲ್ಲಿ "ಚೆಲ್ವತಾಣೆಯ ಕರ್ಬ್ಬಡಿ" ಬೀಡಿನಲ್ಲಿದ್ದಾಗ ಕಿರಿಯ ಚಿಕ್ಕಲಿಗೆಯ ಮಾದಿರಾಜಯ್ಯ ಮತ್ತು ರಾಜಮತಿಯವ್ವೆ, ಗೌಂಡರು, ಮಹಾಪೃಥ್ವಿಸೆಟ್ಟಿ, ಚಟ್ಟರಸ ಮತ್ತು ಎಂಟುಹಿಟ್ಟುಗಳು ಒಂದಾಗಿ ಮೂಲಸ್ಥಾನದ ಕಲಿದೇವಸ್ವಾಮಿಗೆ ೨೪ ಮತ್ತರು ಭೂ ದಾನವನ್ನು, ಒಂದು ನಿವೇಶನ, ಒಂದು ಮತ್ತರು ತೋಟವನ್ನು ಒಂದು ಗಾಣವನ್ನು ನೀಡಿದಂತೆ ತಿಳಿಸುತ್ತದೆ."[೧೭] ಇದರಲ್ಲಿ 'ಕಿಱಿಯ ಚಿಕಲಿಗೆ' ಎಂದು ಕರೆಯಲಾಗಿದೆ. ರೂಢಿಯಲ್ಲಿ 'ಬೋಳಚಿಕ್ಕಲಕಿ' ಬೋಳ = ಚಿಕ್ಕ ಎನ್ನುತ್ತಾರೆ. ಸಸ್ಯವಾಚಕ.

ಚಿನಗುಂಡಿ : ಚಿನ್ನದ+ಗುಂಡಿ = ಚಿನ್ನದಗುಂಡಿ>ಚಿನಗುಂಡಿ

ಚಿನ್ನದೊರೆಯುವ ತಗ್ಗು ಇಲ್ಲವೆ ಗುಂಡಿ

ಲೋಹ ಹಾಗೂ ಭೂಸ್ವರೂಪವಾಚಕ.

ಚಿಮ್ಮಡ : ಇಲ್ಲಿ 'ಚಿಮ್ಮು' ಮತ್ತು 'ಮಡ' ಎಂಬ ಎರಡು ಶಬ್ದಗಳಿವೆ.

ಚಿಮ್ಮು = ನೀರು ಬುಗ್ಗೆಯಾಗಿ, ಊಟೆಯಾಗಿ ಹರಿಯುವುದು.

ಮಡ = ಹೊಂಡವಾಗಿ ನಿಲ್ಲುವುದು.

ಈ ಊರು ಹಳ್ಳದ ದಂಡೆಯಲ್ಲಿದ್ದು ಒಂದು ತೀರ್ಥ ಹೊಂಡದ ಪಕ್ಕದಲ್ಲಿರುವದರಿಂದ ಈ ಹೆಸರು ಸಾರ್ಥಕವಾಗಿದೆ.

ಜಕನೂರು : ಜಕ್ಕನ+ಊರು = ಜಕ್ಕನೂರು>ಜಕನೂರು. ಇದು ವ್ಯಕ್ತಿವಾಚಕ.

"ಜಕ್ಕಪ್ಪನೆಂಬ ಕುರಿಗಾರನು ಕುರಿಗಳನ್ನು ಮೇಯಿಸಲು ಬಂದಾಗ ಈ ಬೆಟ್ಟದ ಹಸಿರು ಹುಲ್ಲನ್ನು ನೋಡಿ ಬೆರಗಾಗಿ ಇಲ್ಲಿ ಕುರಿಹಟ್ಟಿ ಹಾಕಿ ವಾಸಿಸಲು ಯೋಗ್ಯವಾದ ಸ್ಥಳವೆಂದು ತೀರ್ಮಾನಿಸಿದನು. ನಂತರ ತನ್ನ ಬಂಧು ಬಳಗವನ್ನು ಕರೆದುಕೊಂಡು ಬಂದು ನೆಲೆಸಿದನು."[೧೮]

ಜಗದಾಳ : ೧. ಜಗದ+ಹಾಳ = ಜಗದಾಳ. 'ಹ' ಲೋಪವಾಗಿದೆ.

೨. ಜಗದ+ಹಳ್ಳ = ಜಗದಹಳ್ಳ>ಜಗದಾಳ

ಜಗದಹಳ್ಳ = ದೊಡ್ಡಹಳ್ಳ

ಜನವಾಡ : ಜನ್ನ+ಬಾಡ = ಜನ್ನಬಾಡ>ಜನವಾಡ

ಜನ್ನ>ಯಜ್ಞ

ಯಜ್ಞ ಮಾಡುವ ಊರು. ಇದು ನದಿಯ ದಂಡೆಯ ಮೇಲಿದ್ದು ಹಿಂದೆ ಇಲ್ಲಿ ಯಜ್ಞ ಮಾಡುತ್ತಿರಬೇಕು.

ಜಮಖಂಡಿ : ಜಂಬುಕ+ಖಂಡಿ = ಜಂಬುಕಖಂಡಿ>ಜಂಬುಖಂಡಿ>ಜಮಖಂಡಿ.

ಜಮಖಂಡಿ ಓಲೆಪ್ಪನ ಮಠದಲ್ಲಿದ್ದ ಕಲ್ಲುತುಂಡಿನ (B.K.No. 56 of 1928–29; SII. XV. 287) ಕ್ರಿ.ಶ. ೧೦೮೨ರ ಈ ಶಾಸನದಲ್ಲಿ "ಜಂಬುಖಂಡಿಯ ಉತ್ತರೇಶ್ವರ ದೇವರಿಗೆ ಪೊರವೆಟ್ಟದಲ್ಲಿ ೫೦೦ ಮತ್ತರು ಭೂಮಿದಾನ ಬಿಟ್ಟಂತೆ ಹೇಳಿದೆ."[೧೯]

ಇದರಲ್ಲಿ 'ಜಂಬುಖಂಡಿ' ಎಂದು ಹೆಸರು ಬಂದಿದೆ.

ಇದೇ ಊರಿನ ಕಡಕೋಳದ ಮಾಧವನ ಹೊಲದಲ್ಲಿದ್ದ ಕಲ್ಲಿನ ತುಂಡಿನ (B.K.No.55 of 1928–29; SII. XV. 95) ಕ್ರಿ.ಶ. ೧೨ನೆಯ ಶತಮಾನದ ಈ ಶಾಸನದಲ್ಲಿ "ತ್ರಿಭುವನಮಲ್ಲ, ಪಿರಿಯಗ್ರಹಾರಂ ಜಂಬುಖಂಡಿ ಎಂದು ಉಲ್ಲೇಖವಾಗಿದೆ."[೨೦] ಇದರಲ್ಲಿ 'ಜಂಬುಖಂಡಿ' ಎಂದು ಕರೆದಿದೆ.

ಜಮಖಂಡಿ ಇದು ಪ್ರಾಚೀನವಾದ ನಗರ. ರನ್ನನು 'ಜಂಬುಖಂಡಿ' ಎಂದು ಇದನ್ನು ಕರೆದಿದ್ದಾನೆ. ಈ ಎರಡು ಶಾಸನಗಳಲ್ಲಿಯೂ ಜಂಬುಖಂಡಿ ಎಂದೇ ಇದೆ. ಹೀಗೆ ೧೦ನೆಯ ಶತಮಾನದದಿಂದ ೧೨ನೆಯ ಶತಮಾನದವರೆಗೆ ಜಂಬುಖಂಡಿಯೆಂದಿದೆ. ಕಾಲಾಂತರದಲ್ಲಿ ಜಮಖಂಡಿಯಾಗಿದೆ. ಜಂಬುಕನೆಂಬ ಋಷಿಯಿಂದ ಜಂಬುಕೇಶ್ವರ. ಇವನು ಇಲ್ಲಿಯ ಗ್ರಾಮದೇವತೆ. ಇದು ಇರುವುದು ಒಂದು ಖಂಡಿಯಲ್ಲಿ. ಜಂಬುಕ+ಈಶ್ವರ = ಜಂಬುಕೇಶ್ವರನಾದಂತೆ ಜಂಬುಕ+ಖಂಡಿ= ಜಂಬುಖಂಡಿ, ಮುಂದೆ ಜಮಖಂಡಿಯಾಯಿತು.

ಟಕ್ಕಳಿಕೆ : ಟಕ್ಕರು = ಒಂದು ಜನಾಂಗ

ಇಕೆ = ಜಾತಿ, ಕಸಬು, ಗುಣ ತಿಳಿಸುವ ಪ್ರತ್ಯಯವಾಗಿದೆ.

ಟಕ್ಕರು+ಇಕೆ = ಟಕ್ಕರಿಕೆ>ಟಕ್ಕಳಿಕೆ. ಜನಾಂಗವಾಚಕ.

ಜಮಖಂಡಿಯ ಡಬ್ಲ್ಯೂ.ಟಿ.ಆಪ್ಟೆಯವರ ಮನೆಯಲ್ಲಿರುವ (B.K.No. 52 of 1928–29; SII. XV.226) ಕ್ರಿ.ಶ.೧೩೦೬ರ ಈ ಶಾಸನದಲ್ಲಿ "ಮಲ್ಲಿಕಾರ್ಜುನ ದೇವರಿಗೆ ಭೂದಾನವಲ್ಲದೆ

ಎರಡು ಮನೆ, ಒಂದು ನಿವೇಶನವನ್ನೂ, ಕನ್ನವಳ್ಳಿ, ಕುರುಗೋಳಿ, ಸಾವಳಿಗೆ, ಟಕ್ಕಳಿಗೆ ಗ್ರಾಮಗಳಲ್ಲಿ ಭೂಮಿ ಮತ್ತು ಮನೆಯ ನಿವೇಶನಗಳನ್ನೂ ನೀಡಿದ ಉಲ್ಲೇಖವಿದೆ."[೨೧]

ಟಕ್ಕೋಡ : ಟಕ್ಕರು= ಒಂದು ಜನಾಂಗ

ಟಕ್ಕರ+ಬಾಡ = ಟಕ್ಕರವಾಡ>ಟಕ್ಕವಾಡ>ಟಕ್ಕೋಡ. ಜನಾಂಗವಾಚಕ.

ಚಿಕ್ಕಜಂಬಗಿ ಕಲ್ಲೇಶ್ವರ ದೇವಾಲಯದ ಮುಂದೆ ನಿಂತಿರುವ ಕ್ರಿ.ಶ. ೧೨೯೯ರ ಈ ಶಾಸನದಲ್ಲಿ "ತುಂಗಳ ೧೨ರಲ್ಲಿರುವ ಟಕ್ಕೋಡಗೆ ಎಂದು ಉಲ್ಲೇಖವಾಗಿದೆ."[೨೨]

ಟಕ್ಕವಾಡ+ಇಗೆ = ಟಕ್ಕವಾಡಿಗೆ>ಟಕ್ಕೋಡ ಎಂದಾಗಿರಬೇಕು.

ತಮದಡ್ಡಿ : ತಮ್ಮನದಡ್ಡಿ = ತಮ್ಮನದಡ್ಡಿ>ತಮ್ಮದಡ್ಡಿ>ತಮದಡ್ಡಿ. ವಸತಿವಾಚಕ.

"ಇಬ್ಬರು ಅಣ್ಣ ತಮ್ಮಂದಿರು ಈ ಪ್ರದೇಶಕ್ಕೆ ಬಂದು ನೆಲೆಸಿದರು. ತಮ್ಮನ ದನ, ಕುರಿಗಳನ್ನು ಒಂದೆಡೆ ಕಟ್ಟಲು ದಡ್ಡಿ ಹಾಕಿದನು. ಅಂದಿನಿಂದ ಈ ಪ್ರದೇಶವನ್ನು ತಮ್ಮನದಡ್ಡಿ>ತಮದಡ್ಡಿ ಎಂದು ಕರೆದರು."[೨೩]

ತುಂಗಳ : ೧. ತುಂಬಿದ+ಕೊಳ = ತುಂಗೊಳ>ತುಂಗುಳ>ತುಂಗಳ

ಈ ಊರಿನ ಶಾಸನದಲ್ಲಿ (B.K.No.69 of 1938–39; SII.XX.377) 'ತುಂಗುಳ'[೨೪] ಎಂದಿದೆ.

ಪರಮಾನಂದನ ಗುಡಿಯ ಹತ್ತಿರ ಒಂದು ಕೆರೆಯಿದೆ. ಸುಮಾರು ಎಂಟು ನೂರು ವರ್ಷಗಳ ಹಿಂದೆ ಆಕೆರೆ ನೀರಿನಿಂದ ತುಂಬಿ ಸಮೃದ್ಧವಾಗಿ ಸುಂದರವಾಗಿರಬೇಕು. ಅಂತೆಯೇ ಇದನ್ನು 'ತುಂಬಿದಕೊಳ' ಎಂದು ಕರೆದಿರಬೇಕು. ತುಂಬಿದಕೊಳ>ತುಂಗೊಳ>ತುಂಗುಳ>ತುಂಗಳ ಆಗಿರಬೇಕು.

"೧೨ ಹಳ್ಳಿಗಳಿಗೆ ಅಧಿಷ್ಠಾನವಾಗಿದ್ದು ಇಲ್ಲೊಂದು ಅಗ್ರಹಾರವಿದ್ದಿತು."[೨೫] ಚಿಕ್ಕಜಂಬಗಿ (ಬೋಳ) ಶಾಸನವು ಇದನ್ನು ತಿಳಿಸುತ್ತದೆ.

೨. "ಈ ಊರು ಕುಂತಲದೇಶದಲ್ಲಿ ಬರುತ್ತದೆ. ಇಲ್ಲಿ ಕುಂತಲದೇವಿಯ ದೇವಸ್ಥಾನವಿದ್ದ ಬಗ್ಗೆ ಗ್ರಾಮಸ್ಥರು ಸ್ಥಳವನ್ನು ತೋರಿಸುತ್ತಾರೆ. 'ಕುಂತಳ'ವು ವರ್ಣಪಲ್ಲಟವಾಗಿ ಕುಂತಳ>ತುಂಗಳವಾಗಿದೆ. ಆದಿಯಲ್ಲಿಯ 'ಕ'ಕಾರ ಮಧ್ಯಕ್ಕೆ ಬಂದಾಗ 'ಗ' ಕಾರವಾಗುತ್ತದೆ."[೨೬]

ತುಬಚಿ : ತೂಂಬು+ಉರ್ಚು = ತೂಂಬುರ್ಚು>ತುಂಬರ್ಚು>ತುಂಬರ್ಚು>ತುಬಚಿ

ತೂಂಬು ಎಂದರೆ ನೀರು ಹರಿಯಲು ಇರುವ ಮಾರ್ಗ. ಉರ್ಚು = ಹೊರಚಿಮ್ಮು. ಇಲ್ಲಿ ಕೃಷ್ಣಾನದಿಯು ಮುಖ್ಯ ಪ್ರವಾಹದಿಂದ ಮಗ್ಗುಲಿಗೆ ಹೊರಚಿಮ್ಮಿ ಹರಿದಿದೆ. ಇದರ ದಡದಲ್ಲಿರುವ ಊರು ತುಬಚಿ.

ತೇರದಾಳ : ತೇರ್ = ಬಲವಾಗು, ಅಭಿವೃದ್ಧಿಹೊಂದು, ಅಧಿಕವಾಗು.

ತೇರಿದ = ಬಲವಾದ, ಅಭಿವೃದ್ಧಿ ಹೊಂದಿದ, ಅಧಿಕವಾದ.

ಇಂತಹ ಒಂದು ಪಟ್ಟಣ. ತೇರಿದ+ಹಾಳ್ = ತೇರಿದಾಳ>ತೇರದಾಳ.

ತೇರದಾಳ ನೇಮಿನಾಥ ಬಸದಿಯಲ್ಲಿಯ (IA.XIV.P. 14–26; K.R.I.No. 23 of 1944–45; K.R.I.No. 24 of 1944–45; K.I.V. 98; K.I.V. 99) ಒಂದು ಶಾಸನದಲ್ಲಿ ಮೂರು ಶಾಸನಗಳಿವೆ. ೧ನೆಯದು ಕ್ರಿ.ಶ. ೧೧೨೩ ೨ನೆಯದು ಕ್ರಿ.ಶ. ೧೧೮೧ ಮತ್ತು ೩ನೆಯದು ಕ್ರಿ.ಶ. ೧೧೮೭ರಲ್ಲಿ ಬರೆದವುಗಳಾಗಿವೆ. ೧ನೆಯ ಶಾಸನದಲ್ಲಿ ತೇರಿದಾಳ ಪನ್ನೆರಡು, ತೇರಿದಾಳಾಭಿಧಾನಪುರಂ ಎಂದಿರುವದರಿಂದ ಇದು ಹನ್ನೆರಡು ಗ್ರಾಮಗಳಿಗೆ ಅಧಿಷ್ಠಾನವಾಗಿದ್ದು ಪುರವೆನ್ನವದರಿಂದ ದೊಡ್ಡದಾಗಿತ್ತು ಹಾಗೂ ವ್ಯಾಪಾರದ ಪಡುಮೂಲೆಯಾಗಿತ್ತು.

೨ನೆಯ ಶಾಸನದಲ್ಲಿ ಬಣಂಜುವಟ್ಟಣಂ ನಡವೆಯ ಮನೆ ತೇರಿದಾಳ ಎಂದಿರುವುದರಿಂದ ಇದೊಂದು ಐಶ್ವರ್ಯ ಸಂಪನ್ನವಾಗಿದ್ದಿತು. ೩ನೆಯ ಶಾಸನದಲ್ಲಿ ಶ್ರೀಮತ್ ತೇರಿದಾಳ ಎಂದಿದೆ. ಈ ಮೂರರಲ್ಲಿಯೂ 'ತೇರಿದಾಳ' ಎಂದೇ ಕರೆಯಲಾಗಿದೆ. ಹಾಗೆಯೇ ನೇಮಿನಾಥ ಪ್ರತಿಮೆಯ ಪೀಠದ ಮೇಲೆ ಬರೆದಿರುವಲ್ಲಿಯೂ (ಕ್ರಿ.ಶ. ೧೨೪೮) ಶ್ರೀಮತ್ ತೇರಿದಾಳ ಎಂದೇ ಬರೆಯಲಾಗಿದೆ. ಇದರಿಂದ ತೇರಿದ+ಹಾಳ್ = ತೇರಿದಾಳ>ತೇರದಾಳ ಎಂದಂತಾಯಿತು.

ತೊದಲಬಾಗಿ : ಬಾಗ, ಬಾಗೆ = ತೋಟ, ಉದ್ಯಾನ

ತದ್ದಲಿನ ಬಾಗೆ = ತದ್ದಲಬಾಗೆ>ತದಲಬಾಗೆ>ತೊದಲಬಾಗಿ ಮುಳ್ಳಿನ ಬೇಲಿಯುಳ್ಳ ತೋಟದ ಊರು.

ತೊದಲಬಾಗಿ ಈಶ್ವರ ದೇವಾಲಯದ ಹಾಸುಕಲ್ಲಿನ (B.K.No. 65 of 1938–39; SII. XX. 219) ಕ್ರಿ.ಶ. ೧೨೬೯ರ ಶಾಸನದಲ್ಲಿ "ಸೋಮನಾಥದೇವರ ಇಟ್ಟಗೆಯ ಕೆಲಸಕ್ಕಾಗಿ, ಭೂಮಿ ಹಾಗೂ ಒಂದು ಮನೆಯನ್ನು ದಾನ ಮಾಡಿದ ಉಲ್ಲೇಖವಿದೆ."[೨೭] ಇದರಲ್ಲಿ 'ತದಲಬಾಗೆ' ಎಂದಿದೆ.

ಇದೇ ಗ್ರಾಮದ ಅದೇ ಸ್ಥಳದಲ್ಲಿರುವ ಮತ್ತೊಂದು (B.K.No. 66 of 1938–39; SII. XX. 134) ಕ್ರಿ.ಶ. ೧೧೨೯ ಶಾಸನದಲ್ಲಿ "ಕೃಷ್ಣಾವೇಣ್ಣಾತೀರದ ತದ್ದಲಬಾಗೆಯಲ್ಲಿ ಚಕ್ರವರ್ತಿಗೆ ಆರಾಧ್ಯನಾದ ಚಂಗದೇವ ಭಟ್ಟೋಪಾಧ್ಯಾಯನ ಮಗ ಶಂಕರ ಭಟ್ಟೋಪಾಧ್ಯಾಯನು ಭೂಮಿಯನ್ನು ಪುನರ್ಧಾರೆಯಾಗಿ ಪಡೆದು, ಮಾಣಿಕೇಶ್ವರ ೬ ಮತ್ತರು ಭೂಮಿ ನೀಡಿದ ವಿವರಣೆವಿದೆ."[೨೮] ಇದರಲ್ಲಿ 'ತದ್ದಲಬಾಗೆ' ಎಂದು ಕರೆದಿದೆ. 'ಮೊದಲನೆಯ ಶಾಸನದಲ್ಲಿ 'ತದಲಬಾಗೆ', ಎಂದಿದ್ದರೆ

ಎರಡನೆಯ ಶಾಸನದಲ್ಲಿ ತದ್ದಲಬಾಗೆ ಎಂದಿದೆ. ತದಲ=ಮುಳ್ಳಿನ ಸೋಗೆಯ ಬಾಗಿಲು(ತೋಟಕ್ಕೆ, ದಡ್ಡಿಗೆ), ಮುಳ್ಳಿನ ಬೇಲಿಯುಳ್ಳ ತೋಟದ ಊರು.

ದಾಸರಟ್ಟಿ : ದಾಸರು = ಒಂದು ಜನಾಂಗ

ದಾಸರ+ಹಟ್ಟಿ = ದಾಸರಹಟ್ಟಿ = ದಾಸರಟ್ಟಿ ಇಲ್ಲಿ 'ಹ' ಲೋಪವಾಗಿದೆ.

ಜನಾಂಗ, ವಸತಿವಾಚಕ.

ಈ ಊರಲ್ಲಿ ಚೆನ್ನದಾಸರು ಎಂಬ ಜನಾಂಗದವರು ಹೆಚ್ಚು ಇರುವರು. ಇವರು ಸಂಚಾರಿ ಜನಾಂಗದವರು. ಸುಗ್ಗಿಯ ಸಲುವಾಗಿ ಮಹಾರಾಷ್ಟ್ರ ರಾಜ್ಯಕ್ಕೆ ಹೋಗಿ ಸುಗ್ಗಿ ಮುಗಿಸಿಕೊಂಡು ಮರಳಿ ಈ ಹಟ್ಟಿಗೆ ಬರುತ್ತಾರೆ. ಆದ್ದರಿಂದ ದಾಸರು ಇರುವ ಹಟ್ಟಿ, ದಾಸರಟ್ಟಿ ಎನ್ನುವರು.

ದೇಸಾಯಿಕೆರೆ : ದೇಸಾಯಿಯ+ಕೆರೆ = ದೇಸಾಯಿಕೆರೆ.

ವ್ಯಕ್ತಿ, ಜಲ, ನಿರ್ಮಾಣವಾಚಕ.

"ಈ ಪ್ರದೇಶದಲ್ಲಿ ಹನಗಂಡಿ ದೇಸಾಯಿಯವರ ಜಮೀನು ಇತ್ತು. ಅದರಲ್ಲಿ ಕೆರೆಯನ್ನು ಕಟ್ಟಿಸಿದ್ದರು. ಜಮೀನನ್ನು ಇವರ ರೈತರು ಸಾಗುವಳಿ ಮಾಡುತ್ತಿದ್ದರು. ಮುಂದೆ 'ಊಳುವವನೇ ಭೂ ಒಡೆಯ' ಎಂಬ ಕಾನೂನಿನನ್ವಯ ದೇಸಾಯಿಯವರ ಜಮೀನು ರೈತರ ಹೆಸರಾಯಿತು. ದೇಸಾಯಿಯವರ ಹಕ್ಕು ಕಡಿಮೆಯಾಗಿ ರೈತರು ತಾವು ಊಳುವ ಜಮೀನಿಗೆ ಸಮೀಪದಲ್ಲಿ ವಾಸ ಮಾಡಲು ಪ್ರಾರಂಭಿಸಿದರು. ಇಸರಿಂದ 'ದೇಸಾಯಿ ಕೆರೆ ಜಮೀನು' ಎಂದು ಕರೆಯಲ್ಪಟ್ಟು, ಕ್ರಮೇಣ 'ದೇಸಾಯಿಕೆರೆ', ಮಾತ್ರ ಇಂದು ಹೇಳಲ್ಪಡುತ್ತಿದೆ."[೨೯]

ನಾಕೂರು : ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಕೆಲವು ಊರುಗಳು ಮುಳುಗಡೆಯಾಗಿ ಸ್ಥಳಾಂತರಗೊಂಡಿವೆ. ಅಂಥವುಗಳಲ್ಲಿ ಟಕ್ಕಳಕಿ, ಟಕ್ಕೋಡ, ಹಿರೇಜಂಬಗಿ ಮತ್ತು ಚಿಕ್ಕಜಂಬಗಿ ಇವೂ ಬರುತ್ತವೆ. ಪುನರ್ವಸತಿಗಾಗಿ ಈ ನಾಲ್ಕು ಊರುಗಳಿಗೆ ಒಂದೇ ಕಡೆಗೆ ಸ್ಥಾನಕೊಡಲಾಗಿದೆ. ನಾಲ್ಕು ಊರುಗಳು ಒಟ್ಟಿಗೆ ಇರುವದರಿಂದ 'ನಾಕೂರು' ಎಂಬ ಒಂದೇ ಹೆಸರಿನಿಂದ ಅವನ್ನು ಕರೆಯಲಾಗುತ್ತದೆ. ಊರುಗಳಿಗೆ ಹೆಸರು ಬರುವ ಕಾರಣಗಳಲ್ಲಿ ಇದೂ ಒಂದು ಆಗಿದೆ.

ನಾಗನೂರು : ನಾಗನ+ಊರು = ನಾಗನೂರು

ನಾಗ–ನಾಗಪ್ಪ = ವ್ಯಕ್ತಿವಾಚಕ

ಈ ಹೆಸರಿನಿಂದ ನಾಗನೂರು ಬಂದಿರಲು ಸಾಧ್ಯವಿದೆ. 'ನಾಗನೂರು' ಎಂಬ ಹೆಸರಿನ ಊರುಗಳು ಬಹಳಷ್ಟು ಇವೆ. ನಾಗದೇವತೆಯನ್ನು ಆರಾಧಿಸುವವರ ಉರು. ವಿಶೇಷ ಪ್ರಸಂಗದಲ್ಲಿ ಒಂದು

ಘಟನೆ ನಡೆದುದರಿಂದ ಈ ಹೆಸರು ಬಂದಿರಬಹುದು. ಇಲ್ಲವೆ ನಾಗಪ್ಪ ಎಂಬ ಹೆಸರಿನವನು ಇಲ್ಲಿ ಪ್ರಸಿದ್ಧನಾಗಿದ್ದು. ಅವನ ಹೆಸರು ಈ ಊರಿಗೆ ಬಂದಿರಬಹುದು.

ನಾವಲಗಿ : ನಾವಲ = ಒಂದು ಬಗೆಯ ಔಷಧೀಯ ಗಡ್ಡೆ.

ಇಗೆ = ಅಗಿ = ಉಳ್ಳುದು, ಒಂದು ತದ್ಧಿತ ಪ್ರತ್ಯಯ

ನಾವಲ+ಅಗಿ = ನಾವಲಗಿ, ಸಸ್ಯವಾಚಕ.

"ನಾವಲಗಡ್ಡೆ"[೩೦] ಯನ್ನು ತುಳಸಿಯೊಂದಿಗೆ ಸೇರಿಸಿ ಕಷಾಯ ಮಾಡುತ್ತಾರೆ. 'ನಾವಲ ಉಳ್ಳುದು' ಅಥವಾ ನಾವಲಗಡ್ಡೆ ಇರುವ ಪ್ರದೇಶದಲ್ಲಿರುವ ಊರು 'ನಾವಲಗಿ' ಎಂದಾಗಿದೆ.

ಬಂಡಿಗಣಿ : ಬಂಡೆಯ+ಖಣಿ = ಬಂಡೆಯಕಣಿ>ಬಂಡೆಗಣಿ>ಬಂಡಿಗಣಿ

ಬಂಡೆ = ದೊಡ್ಡ ಕಲ್ಲು, ಇಂತಹ ದೊಡ್ಡ ಕಲ್ಲುಗಳನ್ನು ತೆಗೆಯುವ ಖಣಿಗಳು ಇಲ್ಲಿರುವುದರಿಂದ ಬಂಡೆಖಣಿ>ಬಂಡೆಗಣಿ>ಬಂಡಿಗಣಿ ಎಂದಾಗಿದೆ.

ಬನಹಟ್ಟೆ : ಬನ = ಗಿಡಗಳಿಂದ ಕೂಡಿದ್ದು.

ಹಟ್ಟಿ = ವಾಸಸ್ಥಳ, ಊರು

ಬನದ+ಹಟ್ಟಿ = ಬನಹಟ್ಟಿ = ಬನ್ನಟ್ಟಿ, ನಿಸರ್ಗ, ವಸತಿವಾಚಕ.

ಇಲ್ಲಿ ದೇವರ ದಾಸಿಮಯ್ಯನವರ ಉದ್ಯೋಗ, ನೇಕಾರಿಕೆಯೇ ಮೂಲ ಉದ್ಯೋಗವಾದ್ದರಿಂದ ಪ್ರತಿಯೊಂದು ಮನೆಯಲ್ಲಿ ಬೇಡಿಕೆಗೆ ಅವಶ್ಯವೆನಿಸಿದ 'ಉಂಕಿ ಸಂದರಕಿ', ಮುಂತಾದವುಗಳನ್ನು ಮಾಡಲು ನೆರಳಿನ ಆಶ್ರಯವು ಬೇಕಾದ್ದರಿಂದ ಗಿಡಗಳಿಂದ ಕೂಡಿದ 'ಬನದಲ್ಲಿ' ಆಶ್ರಯ ಪಡೆದುದರಿಂದ ಇಲ್ಲಿ ಒಂದು ಹಟ್ಟಿ ನಿರ್ಮಾಣವಾಯಿತು. ಅದು ಬನದಲ್ಲಿ ಇದ್ದುದರಿಂದ 'ಬನಹಟ್ಟಿ' ಎಂದು ಜನ ಕರೆದಿರಬೇಕು. ಸುತ್ತಲೂ ನಾಲ್ಕು ಗುಡ್ಡಗಳು ಭದ್ರಕೋಟೆಯಂತಿದ್ದು, ಬನಹಟ್ಟಿಯ ಸೌಂದರ್ಯವನ್ನು ಹೆಚ್ಚಿಸಿವೆ. ಗಿಡಗಳು ಹೆಚ್ಚು ಇದ್ದುದರಿಂದ ಅದು ವನದಂತೆ ಕಂಗೊಳಿಸುವುದು. ಅದಕ್ಕಾಗಿಯೇ ಬನಹಟ್ಟಿ ಎಂದು ಬಂದಿರಬಹುದು, ಬನ್ನಟ್ಟಿ ಎಂತಲೂ ರೂಢಿಯಲ್ಲಿದೆ.

ಬಣ್ಣಗಾರರ+ಹಟ್ಟಿ = ಬಣ್ಣಹಟ್ಟೆ–ಬನಹಟ್ಟಿ–ಬನ್ನಟ್ಟಿ ಎಂದೂ ಕೆಲವರು ಹೇಳುವುದುಂಟು.

ಬಿದರಿ : ಬಿದಿರ್–ಹುಲ್ಲಿನ ಜಾತಿಯ ಸಸ್ಯ, ವಂಶವೃಕ್ಷ.

ಇ=ತದ್ಧಿತ ಪ್ರತ್ಯಯ–ಉಳ್ಳುದು ಎಂದರ್ಥ.

ಬಿದಿರ್+ಇ=ಬಿದಿರಿ>ಬಿದರಿ. ಸಸ್ಯವಾಚಕ.

ಕೋಲೂರು, ಕೋಮಾರೇಶ್ವರ ದೇವಾಲಯದ ಕಂಬದ (B.K.No. 81 of 1928–29; SII. XV.203) ಕ್ರಿ.ಶ. ೧೩೦೭ರ ಈ "ಶಾಸನದಲ್ಲಿ ಬಿದುರೆಯಲ್ಲಿದ್ದ ಗುಂಡನಾಥದೇವರಿಗೆ ಹಾಲು ಮಂಡಗೆಗಾಗಿ ೧೨ ಮತ್ತರನ್ನು ದಾನ ಬಿಟ್ಟ ವಿವರಣೆಯಿದೆ. ಇದರಲ್ಲಿ 'ಬಿದುರೆ', ಎಂದಿದೆ."[೩೧] ಬಿದುರೆ>ಬಿದರಿ ಎಂದಾಗಿದೆ.

ಬದ್ನಿ : ಬುಧ್ನ = ಮರದಬೇರು, ಗಿಡದ ಬುಡ, ಬೊಡ್ಡೆ. ಶಿವ.

ಬುಧ್ನ+ಇ = ಬುಧ್ನಿ. ಗಿಡದ ಬುಡದಲ್ಲಿ ಶಿವನನ್ನು ಸ್ಥಾಪಿಸಿ ಹೀಗೆ ಕರೆದಿರಬೇಕು.

ಮದನಮಟ್ಟಿ :ಮದನನ+ಮಟ್ಟಿ = ಮದನಮಟ್ಟಿ

ಮದನ ಎಂಬ ವ್ಯಕ್ತಿ ಇಲ್ಲಿ ಆಗಿ ಹೋಗಿರಬಹುದು. ಅವನಿಂದ ಈ ಊರು ಸೃಷ್ಟಿಯಾಗಿರಬಹುದು. ವ್ಯಕ್ತಿವಾಚಕ.

ಮದರಖಂಡಿ : ಮಧುರ = ಸವಿ, ಸುವಾಸನೆಯುಳ್ಳ

ಖಂಡಿ = ಆವೃತವಾದದ್ದು, ಕಂದರ

ಮಧುರ+ಖಂಡಿ = ಮಧುರಖಂಡಿ>ಮದರಖಂಡಿ

"ಇಲ್ಲಿಯ ರಾಮೇಶ್ವರ ದೇವಾಲಯದಲ್ಲಿ ೧೨-೧೩ನೆಯ ಶತಮಾನಕ್ಕೆ ಸೇರಿದ ಒಂದು ವೀರಗಲ್ಲು ಇದೆ."[೩೨] ಇದರಲ್ಲಿ ಮಾಚಯ್ಯ, ಬೊಪ್ಪಯ್ಯ,ಹಿಪ್ಪರಗೆ ಎಂಬ ಹೆಸರುಗಳು ಮಾತ್ರ ಇವೆ. ಊರ ಹೆಸರು ಇಲ್ಲ.

ಇದೇ ಊರಿನ ಈಶ್ವರ ದೇವಾಲಯದಲ್ಲಿದ್ದ (B.K.No. 53 of 1938–39; SII. XX. 211) ಕ್ರಿ.ಶ.ಸು. ೧೨೧೦ರ ಈ ಶಾಸನದಲ್ಲಿ 'ಮದುರಖಂಡಿ'[೩೩] ಎಂದಿದೆ.

ಮರನೂರು : ಮರನ+ಊರು = ಮರನೂರು

ಮರದಪ್ಪ ಎಂದರೆ ನರಸಿಂಹದೇವರೆಂದು ಅಲ್ಲಿ ಕರೆಯುತ್ತಾರೆ. ಅವನ ಊರು, ಮರನ ಊರು ಎಂದು. ತುಂಗಳ ಪರಮಾನಂದ ದೇವಾಲಯದ (B.K.No. 70 of 1938–39; SII. XX. 162) ಕ್ರಿ.ಶ. ೧೧೭೨ರ ಈ ಶಾಸನದಲ್ಲಿ "ಚನ್ನಕೇಶವ ದೇವರಿಗೆ ದತ್ತಿಕೊಟ್ಟ ವಿಷಯ ಇದೆ."[೩೪] ಇದರಲ್ಲಿ 'ಮೊಱಿಗನೂರು' ಎಂದಿದೆ. ಇದೆ ಮುಂದೆ ಮರನೂರು ಆಗಿದೆ.

ಮರೆಗುದ್ದಿ : ಮರೆಗುದ್ದಿ = ಮರೆಯಲ್ಲಿ ಇರುವಂಥದ್ದು.

ಗುಡ್ಡ ಹಳ್ಳಗಳ ಮರೆಯಲ್ಲಿ ಇರುವ ಊರು.

ಮುತ್ತೂರು : ಮುದಿ = ಹಳೆಯ, ಪ್ರಾಚೀನ

ಮುದಿ>ಮುತ್

ಮುದಿ+ಊರು = ಮುತ್+ಊರು>ಮುತ್ತೂರು ಅಂದರೆ ಅತ್ಯಂತ ಹಳೆಯ ಊರು ಎಂಬ ಅರ್ಥ ನೀಡುವುದು.

ಮೈಗೂರ : ಮೈ = ಕಪ್ಪು, ಕರಿದು

ಕುಱುವ = ನಡುಗಡ್ಡೆ

ಮೈ+ಕುಱುವ = ಮೈಗುಱುವ>ಮೈಗೂರ

ಕಪ್ಪು ಮಣ್ಣಿನಿಂದ ಕೂಡಿದ ನಡುಗಡ್ಡೆ.

ಯರಗಟ್ಟಿ : ಎರೆಯಪ್ಪ = ಕ್ಷುದ್ರದೇವತೆ, ಒಬ್ಬ ವ್ಯಕ್ತಿ.

ಎರೆಯಪ್ಪನ+ಕಟ್ಟೆ = ಎರೆಯನಕಟ್ಟೆ>ಎರೆಯಗಟ್ಟೆ>ಯರಗಟ್ಟೆ, ಈ ಸ್ಥಳದಲ್ಲಿ ಕಟ್ಟೆಯ ಮೇಲೆ ಈ ಕ್ಷುದ್ರದೇವತೆ (ಗುಂಡುಕಲ್ಲು)ಯನ್ನು ಪ್ರತಿಷ್ಠಾಪಿಸಿರಬೇಕು. ದೈವವಾಚಕ.

ಯಲ್ಲಟ್ಟಿ : ಯಲ್ಲನ+ಹಟ್ಟಿ = ಯಲ್ಲನಟ್ಟಿ>ಯಲ್ಲಟ್ಟಿ

ಯಲ್ಲ = ವ್ಯಕ್ತಿನಾಮ

ಯಲ್ಲನೆಂಬ ವ್ಯಕ್ತಿ ವಾಸಿಸಿದ, ಅವನಿಂದ ಪ್ರಸಿದ್ಧಿ ಪಡೆದ ಊರು. ವ್ಯಕ್ತಿವಾಚಕ.

ರಬಕವಿ : ರೆಬ್ಬಲವ್ವೆ>ರೆಬ್ಬಕವ್ವೆ>ರೆಬಕವ್ವೆ>ರಬಕವಿ. ವ್ಯಕ್ತಿವಾಚಕ.

"ಇಲ್ಲಿ 'ರೆಬ್ಬವೆ' ಅಥವಾ 'ರೆಬ್ಬಲವ್ವೆ' ಎಂಬ ಹೆಸರಿನ ಸ್ತ್ರೀ ಇದ್ದಳು. ಇವಳು ಧರ್ಮಪರಾಯಣಳು ಆಗಿದ್ದಳು. ಇಂದಿಗೂ ರೆಬ್ಬಕವ್ವೆಯ ಸಮಾಧಿಯನ್ನು ರಬಕವಿಯಲ್ಲಿ ಕಾಣುತ್ತೇವೆ. ಸಮಾಧಿಗೆ ಪೂಜೆಯನ್ನು ಇಂದಿಗೂ ಸಲ್ಲಿಸುತ್ತಾರೆ. ಇಲ್ಲಿ ನಾಲ್ಕು ದಿಕ್ಕಿಗೂ ನಾಲ್ಕು ಅಗಸಿ ಬಾಗಿಲುಗಳು ಹಾಗೂ ಸುತ್ತಲೂ ಎತ್ತರವಾದ ಕೋಟೆಗೋಡೆ ಇತ್ತೆಂದು ಅವಶೇಷಗಳಿಂದ ತಿಳಿದುಬರುತ್ತದೆ. ಇಲ್ಲಿ ಆಗ ಸುಮಾರು ೧೧ಕ್ಕೂ ಹೆಚ್ಚು ಮಠಗಳಿದ್ದುವೆಂದು ಹೇಳಲಾಗುತ್ತದೆ. ಈಗ ಒಂದರೆಡನ್ನು ಮಾತ್ರ ಕಾಣುತ್ತೇವೆ. ಸಾಂಗಲಿ ಸಂಸ್ಥಾನದ ಮರಾಠಿ ಅರಸರ ಆಡಳಿತಕ್ಕೆ ಒಳಪಟ್ಟ ರಬಕವಿ ನಗರದ ಸುತ್ತ ಗುಡ್ಡಗಳ ಸಾಲಿನಲ್ಲಿ ಪ್ರಾಗೈತಿಹಾಸಿಕ ಕಾಲದ (ಕ್ರಿ.ಪೂ. ೧೫೦೦-೬೦೦) ಹಾಳು ಮಣ್ಣಿನ ಜನವಸತಿಯ ಅವಶೇಷಗಳು ಸಹಸ್ರಾರು, ಬೃಹತ್ ಗೋರಿಗಳು ಮಣ್ಣಿನ ಪಾತ್ರೆಗಳು ಇಂದಿಗೂ ಕಂಡುಬರುತ್ತವೆ."[೫೫] ಪ್ರಭಾವಿ ರೆಬ್ಬಲವ್ವೆಯ ಹೆಸರಿನಿಂದ ಈ ಊರನ್ನು ಕರೆದರು ಎಂಬುವುದು ತಿಳಿಯುತ್ತದೆ.

ರಾಮತೀರ್ಥ : ರಾಮ = ವ್ಯಕ್ತಿ ಹೆಸರು

ತೀರ್ಥ = ನೀರು, ಸರೋವರ, ನದಿ ಇತ್ಯಾದಿ

ರಾಮನ+ತೀರ್ಥ = ರಾಮತೀರ್ಥ

ವ್ಯಕ್ತಿ, ದೈವವಾಚಕ.

ಇಲ್ಲಿ ರಾಮೇಶ್ವರನ ದೇವಸ್ಥಾನವಿದ್ದು ಮುಂದೆ 'ತೀರ್ಥ'ವಿದೆ.

ರಾಮಪೂರ : ರಾಮಪ್ಪನ+ಊರು = ರಾಮಪ್ಪನೂರು>ರಾಮಪ್ಪೂರು>ರಾಮಪೂರ. ವ್ಯಕ್ತಿವಾಚಕ

ಇದು ಜಮಖಂಡಿ ಸಂಸ್ಥಾನಿಕನು ರಬಕವಿಯಿಂದ ಹೊರಬಂದ ಕೆಲವು ಕುಟುಂಬಗಳಿಗೆ ಆಶ್ರಯವಾಗಿ ಒಂದು ಊರನ್ನು ಕಟ್ಟಿಸಿದನು. ಅದಕ್ಕೆ ತಾನೇ 'ರಾಮಪುರ' ಎಂದು ಹೆಸರಿಸಿದನು. ಇದು ಒಂದು ವಿಶೇಷ.

ಲಿಂಗನೂರು : ಲಿಂಗನ+ಊರು (ಲಿಂಗವಿರುವ ಊರು) = ಲಿಂಗನೂರು. ದೈವವಾಚಕ

ಇದು ಮೊದಲು ಬೇರೆ ಸ್ಥಳದಲ್ಲಿತ್ತು. ಈಗಿರುವ ಸ್ಥಳಕ್ಕೆ ಸ್ಥಳಾಂತರಗೊಂಡಿದೆ. ಕಾರಣ ಮೊದಲಿನ ಸ್ಥಳದಲ್ಲಿ ಪ್ಲೇಗರೋಗ ಬಂದಿತ್ತು ಜತೆಗೆ ನೀರಿನ ಅಭಾವವಿತ್ತು. ಈಗಿರುವ ಸ್ಥಳದ ಸುತ್ತಮುತ್ತ ಫಲವತ್ತಾದ ಭೂಮಿ ಹಾಗೂ ಹಳ್ಳದ ನೀರಿನ ಸವಲತ್ತು ಇದೆ. ಇಲ್ಲಿಯೇ ಜನಬಂದು ವಾಸಿಸಲು ಪ್ರಾರಂಭಿಸಿದರು. ಇಲ್ಲಿ ಲಿಂಗ ದೇವಸ್ಥಾನವಿದ್ದಿತು ಅದನ್ನೇ ಆರಾಧಿಸತೊಡಗಿದರು ಹಾಗಾಗಿ ಲಿಂಗನ ಊರು ಲಿಂಗನೂರು ಎಂದು ಆಯಿತು.

ಶಿರಗುಪ್ಪಿ : ಶಿರಿ>ಸಿರಿ, ಸಿರಿ = ಸಂಪತ್ತು

ಕುಪ್ಪಿ>ಗುಪ್ಪಿ = ಜನ ವಾಸಸ್ಥಳ

ಶಿರಿಯ+ಕುಪ್ಪಿ = ಶಿರ+ಗುಪ್ಪಿ = ಶಿರಗುಪ್ಪಿ. ಸಂಪತ್ತು, ವಸತಿವಾಚಕ.

ಶೂರ್ಪಾಲಿ : ತುಂಗಳ ಗ್ರಾಮದಲ್ಲಿ ದೊರೆಯುವ ೧೨ನೆಯ ಶತಮಾನದ ಶಾಸನದಲ್ಲಿ 'ಮರನಊರು' ಎಂದಿದೆ. ಇಲ್ಲಿರುವ ನರಸಿಂಹದೇವರಿಗೆ ಮರದಪ್ಪ ಎಂದು ಕರೆಯಲಾಗುತ್ತದೆ.

ಮರದಪ್ಪನ ಊರು>ಮರನಊರು>ಮರನೂರು.

"ಈಗಲೂ ಸುತ್ತಲಿನ ಗ್ರಾಮದ ಜನ, ಶೂರ್ಪಾಲಿಗೆ ಮರನೂರು ಎಂದೇ ಕರೆಯುತ್ತಾರೆ. ಆದರೆ ಇತ್ತೀಚೆಗೆ ಮಾತ್ರ ಮರನೂರಿಗೆ ಶಾರ್ಪಾಲಿ ಎನ್ನಲಾಗುತ್ತಿದೆ. 'ಶೂರ್ಪ' ಸಂಸ್ಕೃತ ಶಬ್ದ.

ಕನ್ನದಲ್ಲಿ 'ಮೊರ' ಎಂದು ಅರ್ಥವಿದೆ ಗಂಗಾ ಭಾಗೀರತಿದೇವಿಯು ಕರ್ಮಿಷ್ಠ ಬ್ರಾಹ್ಮಣನಿಗೆ ಮೊರದ ತುಂಬಾ ಮುತ್ತು, ರತ್ನ ಬಾಗೀನ ಕೊಟ್ಟಂದಿನಿಂದ 'ಮೊರನೂರು' ಬದಲಾಗಿ ಸುಶಿಕ್ಷಿತ ಸುಸಂಸ್ಕೃತ ಪಂಡಿತ ಆಚಾರ್ಯರು ಶೂರ್ಪಾಲಿ ಎಂದು ಕರೆಯುತ್ತಿದ್ದಾರೆ."[೩೬]

ಸನಾಳ : ಸಣ್ಣ+ಹಾಳ = ಸಣ್ಣಹಾಳ>ಸಣ್ಣಾಳ>ಸಣಾಳ>ಸನಾಳ. ಪ್ರಮಾಣವಾಚಕ.

ಸಸಾಲಟ್ಟಿ : ಸಾಹಸ>ಸಾಸ. ಸಾಸಲನ+ಹಟ್ಟಿ = ಸಾಸಲಟ್ಟಿ.

ಇಲ್ಲಿ 'ಹ' ಲೋಪವಾಗಿದೆ. ಇದನ್ನು ಈಗ ಸಸಾಲಟ್ಟಿ ಎಂದು ಕರೆಯುತ್ತಾರೆ.

ಸಾವಳಗಿ : ಸಾವಳ+ಗಿ = ಸಾವಳಗಿ

"ಸಾವಳದೇವಿ ಕಲಚುರಿ ಜೋಗಮನ ಮಗಳು. ೬ನೇ ವಿಕ್ರಮಾದಿತ್ಯನಿಗೆ ಕೊಡಲಾಗಿತ್ತು."[೩೭] ಇವಳ ಹೆಸರಿನಿಂದ ಈ ಊರನ್ನು ಕರೆದಿರಬಹುದು. ವ್ಯಕ್ತಿವಾಚಕ

ಜಮಖಂಡಿ ಡಬ್ಲ್ಯೂ.ಟಿ.ಆಪ್ಟೆಯವರ ಮನೆಯಲ್ಲಿರುವ (B.K.No. 52 of 1938–39; SII. XX.226) ಕ್ರಿ.ಶ. ೧೩೦೬ರ ಈ ಶಾಸನದಲ್ಲಿ "ಮಲ್ಲಿಕಾರ್ಜುನ ದೇವರಿಗೆ ಭೂದಾನವಲ್ಲದೆ ಎರಡು ಮನೆ, ಒಂದು ನಿವೇಶನವನ್ನೂ, ಕನ್ನವಳ್ಳಿ, ಕುರುಗೋಳಿ, ಸಾವಳಿಗೆ, ಟಕ್ಕಳಿಗೆ ಗ್ರಾಮಗಳಲ್ಲಿ ಭೂಮಿ ಮತ್ತು ಮನೆಯ ನಿವೇಶನಗಳನ್ನು ನೀಡಿದ ಉಲ್ಲೇಖವಿದೆ."[೩೮] ಇದರಲ್ಲಿ 'ಸಾವಳಿಗೆ' ಎಂದಿದೆ.

ತದಲಬಾಗಿ ಊರ ಹೊರಗಿರುವ ಈಶ್ವರ ದೇವಾಲಯದ ಹಾಸುಕಲ್ಲಿನ (B.K.No. 65 of 1938–39; SII. XX. 219) ಕ್ರಿ.ಶ. ೧೨೬೯ರ ಶಾಸನದಲ್ಲಿ "ಸೋಮನಾಥದೇವರ ಇಟ್ಟಿಗೆಯ ಕೆಲಸಕ್ಕಾಗಿ, ಭೂಮಿ ಹಾಗೂ ಒಂದು ಮನೆಯನ್ನು ದಾನ ಮಾಡಿದ ವಿವರಣೆ ಇದೆ."[೩೯] ಇದರಲ್ಲಿ 'ಸಾವಳಿಗೆ,' ಎಂದಿದೆ.

ಈ ಎರಡೂ ಶಾಸನದಲ್ಲಿ 'ಸಾವಳಿಗೆ', ಎಂದಿದೆ. ಸಾವಳಿಗೆ>ಸಾವಳಗಿ ಎಂದಾಗಿದೆ.

ಸಿದ್ಧಾಪೂರ : ಸಿದ್ದಪ್ಪನು ವಾಸಿಸಿದ ಊರು

ಸಿದ್ದಪ್ಪನ ಊರು>ಸಿದ್ದಾಪೂರು. ವ್ಯಕ್ತಿವಾಚಕ.

"ಇಲ್ಲಿ ಗವಿಸಿದ್ದೇಶ್ವರ ಎಂಬ ಮಾಹಾಯೋಗಿ ತಪಗೈದದ್ದರಿಂದ ಇದಕ್ಕೆ ಸಿದ್ಧಾಪೂರ ಎಂಬ ಹೆಸರು ಬಂದಿದೆ."[೪೦] ಈಗಲೂ ಗವಿಸಿದ್ದೇಶ್ವರ ಜೀವಂತ ಸಮಾಧಿಯ ಗವಿ ಹಾಗೂ ಈಗ ತಾನೇ ಜೀರ್ಣೋದ್ಧಾರವಾದ ಗುಡಿ ಊರ ಮಧ್ಯದಲ್ಲಿ ಶೋಭಿಸುವುದು. ಪ್ರತಿವರ್ಷ ಗವಿಸಿದ್ದೇಶ್ವರ ಉತ್ಸವ ಸಾಂಪ್ರದಾಯಿಕವಾಗಿ ಶ್ರಾವಣ ಮಾಸದಲ್ಲಿ ನಡೆಯುವುದು.

ಹಂಚಿನಾಳ : ಹಂಚಿನ+ನಾಳ = ಹಂಚಿನಾಳ

ಹಂಚಿ = ಒಂದು ಸಸ್ಯದ ಹೆಸರು. ಹಂಚಿ ಸಸ್ಯ ಹೆಚ್ಚು ಬೆಳೆಯುವ ಪ್ರದೇಶ. ಸಸ್ಯವಾಚಕ.

ಹನಗಂಡಿ : ಹೊನ್ನು+ಕಂಡಿ>ಹೊನಕಂಡಿ>ಹನಗಂಡಿ

ಇದರ ಸಂಸ್ಕೃತಿಕರಣರೂಪ ಸುವರ್ಣಖಂಡಿ ಎಂದು ಇದೆ.

ಹೊನ್ನು=ಬಂಗಾರ, ಧಾತು ವಿಶೇಷ.

ಖಂಡಿ = ಆವೃತ ಪ್ರದೇಶ, ಕಂದರ, ಎರಡು ಗುಡ್ಡಗಳ ನಡುವಿನ ಕಿರಿಯಗಲಾದ ಪ್ರದೇಶ. ಈಗಲೂ ಇಲ್ಲಿ ತಾಮ್ರ, ಹಿತ್ತಾಳೆ, ಬೆಳ್ಳಿಯಿಂದ ವಿವಿಧ ಸಾಮಾನುಗಳನ್ನು ಮಾಡುತ್ತಾರೆ ಮೂರ್ತಿ, ಗಂಟೆಗಳಿಗೆ ಪ್ರಸಿದ್ಧವಿದೆ. ಭೂ, ಲೋಹವಾಚಕ.

ಹಳಿಂಗಳಿ : ಇಂಗಳ = ಬೆಂಕಿ, ಇಂಗಳಿ–ಬೆಂಕಿಯಿಂದ ಕೂಡಿದ್ದು ಅಂದರೆ ಯಜ್ಞವನ್ನು ಮಾಡಿದ್ದು. ಈ ಪ್ರದೇಶ ಪ್ರಾಚೀನವೆಂಬುದನ್ನು ತೋರಿಸುತ್ತದೆ. ಹಳೆ+ಇಂಗಳಿ –ಇದು ಇನ್ನೂ ಅದರ ಹಳಮೆಯನ್ನು ಹೆಚ್ಚಿಸುತ್ತದೆ.

ಇದು ಕೃಷ್ಣಾ ನದಿಯ ದಕ್ಷಿಣ ಬದಿಯಲ್ಲಿದ್ದರೆ. ಉತ್ತರ ಬದಿಯಲ್ಲಿ ಅಥಣಿ ತಾಲೂಕಿನಲ್ಲಿ ಒಂದು 'ಜನವಾಡ'ವಿದೆ. ಇದೂ ಕೂಡ ಜನ್ನ+ವಾಡ = ಯಜ್ಞದ ಊರು, ಇವು ಈ ಪ್ರದೇಶದ ಪ್ರಾಚೀನತೆಯನ್ನು ಪಾವಿತ್ರ್ಯವನ್ನು ಎತ್ತಿ ತೋರಿಸುತ್ತವೆ.

ಹಿಪ್ಪರಗಿ : ಹಿಪ್ಪರು = ಒಂದು ಜನಾಂಗ

ಇಗೆ –ಸಂಬಂಧಿಸಿದ, ಹಿಪ್ಪರು ಎಂಬ ಜನಾಂಗಕ್ಕೆ ಸಂಬಂಧಿಸಿದ ಊರು ಹಿಪ್ಪರಿಗೆ.

ಜನಾಂಗವಾಚಕ.

"ಮದರಖಂಡಿ ರಾಮೇಶ್ವರ ದೇವಾಲಯದಲ್ಲಿ ನಿಲ್ಲಿಸಿರುವ ಕ್ರಿ.ಶ. ೧೨–೧೩ನೆಯ ಶತಮಾನಕ್ಕೆ ಸೇರುವ ಈ ವೀರಗಲ್ಲಿನಲ್ಲಿ (B.K.No. 63 of 1938–39; SII. XX. 323) ಮಾಚಯ್ಯ, ಬೊಪ್ಪ, ಎಂಬ ವ್ಯಕ್ತಿನಾಮಗಳು 'ಹಿಪ್ಪರಿಗೆ' ಎಂಬ ಸ್ಥಳದ ಹೆಸರೂ ಉಲ್ಲೇಖವಾಗಿವೆ."[೪೧] 'ಹಿಪ್ಪರಿಗೆ>ಹಿಪ್ಪರಗಿ ಎಂದಾಗಿದೆ.

ಹಿರೇಜಂಬಗಿ : ಜಂಬು = ನೇರಿಲ

ಜಂಬು+ಗಿ = ಜಂಬುಗಿ>ಜಂಬಗಿ

ಸಸ್ಯವಾಚಕ.

ಬದಿಯಲ್ಲಿ ಇನ್ನೊಂದು ಜಂಬಿಗೆ ಇದ್ದು ಅದು ಚಿಕ್ಕದಾಗಿರುವುದರಿಂದ ಇದನ್ನು ಹಿರೇಜಂಬಗೆ ಎಂದು ಕರೆಯಲಾಗಿದೆ.

ಹಿರೇಪಡಸಲಗಿ : ಹಿರೇ = ದೊಡ್ಡ. ಪಡಸಲ್–ಡೋಣಿ, ನಾವೆಗಳು ನಿಲ್ಲುವ ಸ್ಥಳ.

ಇಗೆ = ತಧ್ಧಿತ ಪ್ರತ್ಯಯ.

ಹಿರೇ+ಪಡಸಲ+ಇಗೆ = ಹಿರೇಪಡಸಲಗೆ>ಹಿರೇಪಡಸಲಗಿ

ಈ ಊರು ಹೊಳೆಯ ದಂಡೆಯ ಮೇಲಿದೆ. ನಾವೆಗಳು ಪ್ರವೇಶಿಸಲು, ನಿಲ್ಲಲು ಸುರಕ್ಷಿತವಾಗಿರುವ ಸ್ಥಳವೇ ಪಡಸಲಿಗೆ. ಈಗಲೂ ನಾವೆ ನಿಲ್ಲುವ ಸ್ಥಳಕ್ಕೆ 'ಹರಗೋಲ ಪಡಿ' ಎಂದು ಕರೆಯುವರು.

ನಿಸರ್ಗ, ವಾಣಿಜ್ಯ ಮತ್ತು ಪ್ರಮಾಣವಾಚಕ.

ಹುಣಸಿಕಟ್ಟೆ: ಹುಣಸಿಗಿಡದ ಅಡಿಗೆ ಕಟ್ಟೆ ಕಟ್ಟಿರುವ ಊರು

ಹುಣಸಿಯ ಕಟ್ಟೆ–ಹುಣಸಿಕಟ್ಟೆ, ಸಸ್ಯ ಹಾಗೂ ನಿರ್ಮಾಣವಾಚಕ.

ಹುನ್ನೂರು : ಹೂವಿನ+ಊರು = ಹೂವಿನೂರು>ಹುನ್ನೂರು

ಹೂವುಗಳು ಹೆಚ್ಚು ಬೆಳೆಯುವ ಊರು. ಸಸ್ಯ(ಪುಷ್ಪ)ವಾಚಕ

ಹುಲ್ಯಾಳ : ಹುಲಿಯ+ಹಾಳ = ಹುಲಿಯಾಳ>ಹುಲ್ಯಾಳ

ಹುಲಿಗಳು ವಾಸಿಸಿದ್ದ ಊರು. ಪ್ರಾಣಿವಾಚಕ.

ಹೊಸೂರು : ಹೊಸ+ಊರು=ಹೊಸೂರು

ಹೊಸದಾಗಿ ನಿರ್ಮಿಸಿದ ಊರು, ಹೊಸೂರು. ಕಾಲವಾಚಕ.

ಬಾಗಲಕೋಟೆ ತಾಲೂಕ



೨. ಬಾಗಲಕೋಟೆ ತಾಲೂಕು

ಅಂಕಲಗಿ : ಅಂಕೋಲೆ = ಒಂದು ಸಸ್ಯದ ಹೆಸರು.

ಗಿ= ತದ್ಧಿತ ಪ್ರತ್ಯಯ. ಅಸ್ತಿತ್ವ ಸೂಚಿಸುವುದು. ಅಂಕೋಲೆ ಗಿಡಗಳು ಬೆಳೆಯುವ ಪ್ರದೇಶ. ಸಸ್ಯವಾಚಕ.

ಅಂಡಮುರನಾಳ : ಅಂಡ = ವಾಂಡ, ರಿಪಿಗೇಡಿ, ಮುರ = ರಾಕ್ಷಸ

ಅಂಡ+ಮುರನ+ಹಾಳ = ಅಂಡಮುರನಾಳ 'ಹ' ಲೋಪವಾಗಿದೆ. ಇಲ್ಲಿ ಎರಡು ಪ್ರಕೃತಿಗಳಿವೆ. ಅಂಡ ಮತ್ತು ಮುರ. ರಾಕ್ಷಸನ ಊರು. ಅಂಡ ಇದು ಮುರನಾಳಕ್ಕೆ ವಿಶೇಷಣವಾಗಿದೆ. ವ್ಯಕ್ತಿವಾಚಕ.

ಆಚನೂರು: ಆಚನ+ಊರು=ಆಚನೂರು.

ಆಚಿದೇವ ಪಟ್ಟದಕಲ್ಲನ್ನು ಆಳುತ್ತಿದ್ದ ವ್ಯಕ್ತಿ.”[೪೨] ವ್ಯಕ್ತಿವಾಚಕ.

ಆನದಿನ್ನಿ : ಆನೆಯ ಗಾತ್ರದ ದಿನ್ನೆಗಳಿರುವ ಊರು.

ಆನೆಯದಿನ್ನಿ>ಆನೆದಿನ್ನಿ>ಆನದಿನ್ನಿ. ಭೂ ಸ್ವರೂಪವಾಚಕ.

ಆಲೂರು : ಆಲದ+ಊರು = ಆಲೂರು

ಆಲದ ಗಿಡಗಳಿರುವ ಊರು ಆಲೂರು. ಸಸ್ಯವಾಚಕ.

ಇಂಗಳಗಿ : ೧. ಇಂಗುಣಿ = ನೀರು ಇಂಗುವ ಕುಣಿ, ತಗ್ಗು ಪ್ರದೇಶ

ಇಂಗುಣಿ+ಗೆ = ಇಂಗುಣಿಗೆ, ಗೆ –ತದ್ಧಿತ ಪ್ರತ್ಯಯ

ಇಂಗುವ ಕುಣಿ ಉಳ್ಳ ಊರು

ಇಂಗುಣಿಗೆ>ಇಂಗುಳಿಗೆ>ಇಂಗಳಗಿ. ಭೂವಾಚಕ.

“ಇಂಗಳಗೀ ಶಾಸನದಲ್ಲಿ (೧೦೯೪) ‘ಇಂಗುಣಿಗೆ’, ಎಂದು ಉಲ್ಲೇಖವಿದೆ. ಇದನ್ನು ೬ನೆಯ ವಿಕ್ರಮನ ರಾಣಿ ಜಾಕಲದೇವಿ ಆಳುತ್ತಿದ್ದಳು.”[೪೩]

೨. ಇಂಗಳ = ಒಂದು ಸಸ್ಯ, ಅಗ್ನಿಕುಂಡ

ಇಂಗಾಲ = ಇದ್ದಿಲು

ಇಂಗಳ+ಗಿ = ಇಂಗಳಗಿ

ಇಂಗಳಗಿ = ಇಂಗಳ ಗಿಡಗಳು ಹೆಚ್ಚು ಇರುವ ಪ್ರದೇಶ. ಇಲ್ಲವೆ ಪ್ರಾಚೀನ ಕಾಲದಲ್ಲಿ ಆಯುಧಗಳನ್ನು ತಯಾರಿಸಲು ಅಗ್ನಿಕುಂಡಗಳನ್ನು ನಿರ್ಮಿಸಿರುವ ಸ್ಥಳ ಇಲ್ಲವೆ, ಯಜ್ಞಕ್ಕಾಗಿ ಅಗ್ನಿಯನ್ನು ತಯಾರಿಸುತ್ತಿರುವ ಸ್ಥಳ.

ಸಸ್ಯ, ಭೂಸ್ವರೂಪವಾಚಕ.

ಇಲಾಳ : ೧. ಇಲಿ+ಹಾಳ>ಇಲಾಳ

ಗ್ರಾಮೀಣ ಜನರ ಬಾಯಿಯಲ್ಲಿ ಇಲ್ಯಾಳ ಆಗಿದೆ. ಪ್ರಾಣಿವಾಚಕ.

೨. “ಇಲ್ವಲ = ರಕ್ಕಸನ ಹೆಸರು. ಇವನಿಂದ ಇಲ್ವಲ>ಇಲಾಲ>ಇಲಾಳ ಎಂದಾಗಿದೆ.”[೪೪]

ಇದು ಸಂಸ್ಕೃತೀಕರಣಗೊಂಡ ರೂಪು. ವ್ಯಕ್ತಿವಾಚಕ.

ಉದಗಟ್ಟೆ : ಊದಿನ+ಕಟ್ಟೆ = ಊದುಗಟ್ಟೆ>ಉದಗಟ್ಟೆ

ಇಲ್ಲಿ ‘ಊ’ ಹ್ರಸ್ವವಾಗಿದೆ. ಕ>ಗ ಆಗಿದೆ.

ಊದು– ಸುಗಂಧದ್ರವ್ಯ, ಪದಾರ್ಥ, ನಿರ್ಮಾಣವಾಚಕ.

ಕಡ್ಲಿಮಟ್ಟಿ : ಕಡ್ಲಿ = ಒಂದು ದ್ವಿದಳ ಧಾನ್ಯ

ಕಡ್ಲಿಯ+ಮಟ್ಟಿ = ಕಡ್ಲಿಮಟ್ಟಿ

ಕಡ್ಲಿ ಬೆಳೆಯುವ ಊರು. ಸಸ್ಯವಾಚಕ.

ಕದಂಪುರ : ಕದಂ = ಸತ್ವಶಾಲಿಯಾದ, ಚುರುಕಾದ, ವೇಗವಾಗಿ ಬೆಳೆಯುವ

ಕದಂ+ಪುರ =ವೇಗವಾಗಿ ಬೆಳೆಯುವ ಊರು.

ಕದುಪು, ಕದುಂಪು = ಸಮುದಾಯ, ಹಿಂಡು

ಕದುಪು+ಪುರ = ಕದುಪುರ>ಕದಂಪುರ

ಗುಂಪಾಗಿ ಇರುವ ಊರು. ಜನಾಂಗವಾಚಕ.

ಕಲಾದಗಿ : ಕಳಾದ, ಕಲಾದ = ಅಕ್ಕಸಾಲಿಗ

ಕಲಾದ+ಅಗಿ = ಕಲಾದಗಿ

ಅಕ್ಕಸಾಲಿಗರ ಊರು. ವೃತ್ತಿವಾಚಕ.

ಕಳಸಕೊಪ್ಪ : ಕಳಸ = ಎತ್ತರವಾದ, ಶಿಖರ

ಕಳಸು>ಕಳಸದಲ್ಲಿರುವ+ಕೊಪ್ಪ>ಕಳಸಕೊಪ್ಪ

ಎತ್ತರದ ಮೇಲಿರುವ ಊರು. ಭೂವಾಚಕ

ಕಿರಸೂರು : ಕಿಱುದು = ಚಿಕ್ಕದಾದ, ಸಣ್ಣ, ಸೂರು = ಮೇಲ್ಬಾವಣಿ.

ಕಿಱುದಾದ+ಸೂರ್ = ಕಿಱುಸೂರು = ಕಿರಿಸೂರ್ = ಕಿರಸೂರ. ಸಣ್ಣ–ಸಣ್ಣ ಮನೆಗಳಿಂದ ಕೂಡಿದ ಊರು. ಪ್ರಮಾಣವಾಚಕ.

ಕೆಸರನೂರು : ಕೆಸರು = ಹಸಿಮಣ್ಣು

ಕೆಸರು+ಊರು = ಕೆಸರೂರು>ಕೆಸರನೂರು. ಭೂವಾಚಕ.

ಖಜ್ಜಿದೋಣಿ : ಖಜ್ಜನ = ಉಪ್ಪಿನಭೂಮಿ

ಖಜ್ಜನ+ಡೋಣಿ = ಕಜ್ಜನದೋಣಿ>ಖಜ್ಜಿದೋಣಿ

"ಖಜ್ಜನ ಎಂದರೆ ಉಪ್ಪು."[೪೫] ಪದಾರ್ಥವಾಚಕ.

ಗದ್ದನಕೇರಿ : ಗದ್ದ = ಒಬ್ಬ ವ್ಯಕ್ತಿ

ಗದ್ದನ+ಕೇರಿ = ಗದ್ದನಕೇರಿ. ವ್ಯಕ್ತಿವಾಚಕ.

ಗುಳಬಾಳ : ಗುಳ್ಳ –ಬದನೆಜಾತಿಯ ಒಂದು ಬಳ್ಳಿ, ಅದರ ಕಾಯಿ. ಗುಳ್ಳ+ಪಾಳ = ಗುಳಬಾಳ, ಪ>ಬ ಆಗಿದೆ. ಗುಲಬಾಳಗಳು ಎರಡು ಇದ್ದು, ಒಂದು ಚಿಕ್ಕಗುಳಬಾಳ ಇನ್ನೊಂದು ಹಿರೇಗುಳಬಾಳ

ಗೋವನಕೊಪ್ಪ : ಗೋವಿನ+ಕೊಪ್ಪ = ಗೋವಿನಕೊಪ್ಪ>ಗೋವನಕೊಪ್ಪ. ಗೋವುಗಳು ಹೆಚ್ಚಾಗಿರುವ ಕೊಪ್ಪ (ಊರು) ಪ್ರಾಣಿವಾಚಕ.

ಚಿಟಕಿನಕೊಪ್ಪ : ಚಿಟಕು = ಸಣ್ಣ

ಚಿಟಕಿನ+ಕೊಪ್ಪ = ಚಿಟಕಿನಕೊಪ್ಪ

ಸಣ್ಣಕೊಪ್ಪ, ಸಣ್ಣ ಊರು. ಪ್ರಮಾಣವಾಚಕ.

ಚೌಡಾಪೂರ : ಚೌಡಪ್ಪನ+ಊರು = ಚೌಡಾಪೂರ

ಚೌಡಪ್ಪ = ಒಬ್ಬ ವ್ಯಕ್ತಿ, ಒಂದು ಗ್ರಾಮದೇವತೆ. ವ್ಯಕ್ತಿ ಹಾಗೂ ದೈವವಾಚಕ.

ಛಬ್ಬಿ : ಶರ್ವ = ಶಿವ, ವಿಷ್ಣು.

ಶರಭ = ವೀರಭದ್ರ, ಒಂದು ಕಾಲ್ಪನಿಕ ಮೃಗ.

ಶರ್ವ>ಶರ್ಬ>ಶರಭ.

ಶಿವನನ್ನು, ವೀರಭದ್ರನನ್ನು ಪ್ರತಿಷ್ಠಾಪಿಸಿ ಆರಾಧಿಸುವ ನೆಲೆ. ಶೈವವಾಚಕ.

ಜಡ್ರಾಮಕುಂಟಿ : ಜಟಾಯುರಾಮ = ಜಡ್ರಾಮ

ಜಟಾಯು = ಪಕ್ಷಿ (ಗರುಡ)

ರಾಮ = ರಾಮಾಯಣ ಕಥೆಯಲ್ಲಿ ಬರುವ ಪ್ರಮುಖ ವ್ಯಕ್ತಿ

ಕುಂಟೆ = ಸ್ಥಳ, ವಸತಿವಾಚಕ

ಜಟಾಯ+ರಾಮನ+ಕುಂಟಿ = ಜಟ್ರಾಮನಕುಂಟಿ>ಜಡ್ರಾಮನಕುಂಟಿ>
ಜಡ್ರಾಮಕುಂಟಿ

ಈ ಜಡ್ರಾಮಕುಂಟಿಯ ಸಮೀಪ ಒಂದು ಬಂಡೆಗಲ್ಲಿದೆ. ಅದಕ್ಕೆ 'ಜೊಂಡ್ಗಲ್ಲು' ಎಂದು ಜನರು ಕರೆಯುವರು "ಈ ಕಲ್ಲಿಗೆ ಒಂದು ದಂತಕತೆ ಪ್ರಚಲಿತವಿದೆ, ಸೀತೆಯನ್ನು ರಾವಣ ಕದ್ದೊಯ್ಯುತ್ತಿದ್ದಾಗ ಸೀತೆಯ ರಕ್ಷಣೆಗೆ ರಾವಣನ ಜೊತೆ ಗುದ್ದಾಡಿದಾಗ ಜಟಾಯು ಪಕ್ಷಿಯ ರೆಕ್ಕೆಯನ್ನು ರಾವಣ ಕಡಿಯುತ್ತಾನೆ. ಆ ರೆಕ್ಕೆ ಬಿದ್ದು ಕಲಿಯುಗದಲ್ಲಿ ಕಲ್ಲಾಗಿ ನಿಂತಿದೆ ಎನ್ನುವರು. ಜೊತೆಗೆ ಈ ಕಾರಣಕ್ಕಾಗಿ ಇಂದಿನ ಜಡ್ರಾಮಕುಂಟಿ (ಜಟಾಯುರಾಮ) ಎನ್ನುವ ಊರು ಪ್ರಸಿದ್ಧಿ ಪಡೆಯಿತು ಎನ್ನುವುದು ಪ್ರತೀತಿ."[೪೬]

"ಪಟ್ಟದಕಲ್ಲಿನ ಪಾಪನಾಥ ದೇವಾಲಯದ ದಕ್ಷಿಣಗೋಡೆ ಮೇಲೆ ವಾಲಿ, ಜಟಾಯು ಮತ್ತು ರಾವಣನ ಹೆಸರನ್ನು ಕೆತ್ತಲಾಗಿದೆ."[೪೭] ನಾಗಚಂದ್ರನು ತನ್ನ ಪಂಪರಾಮಾಯಣದಲ್ಲಿ ರಾವಣ ಕಡಿದ ಜಟಾಯುವಿನ ರೆಕ್ಕೆ ಪರ್ವತದ ಹಾಗೆ ನೆಲಕ್ಕೆ ಬಿತ್ತು ಎಂದಿದ್ದಾನೆ. ಪಕ್ಷಿ, ವ್ಯಕ್ತಿವಾಚಕ.

ಡೊಮನಾಳ : ದೊಮ್ಮಲು = ಎದೆಗಾರಿಕೆ, ಧೈರ್ಯ

    ಡೊಮ್ಮ = ವ್ಯಕ್ತಿ

    ಡೊಮ್ಮನ+ಹಾಳ = ದೊಮ್ಮನಾಳ = ಡೊಮ್ಮನಾಳ>ಡೊಮನಾಳ

    'ಹ' ಲೋಪವಾಗಿದೆ. ಧೈರ್ಯವಂತನ ಊರು.

    ಜನಾಂಗ, ಸ್ವಭಾವವಾಚಕ.

ತಿಮ್ಮಾಪೂರ : ತಿಮ್ಮಪ್ಪನ+ಊರು = ತಿಮ್ಮಾಪೂರ. ವ್ಯಕ್ತಿವಾಚಕ.

ತುಗಲಟ್ಟಿ : ತುಗಲ+ಹಟ್ಟಿ

    ತುಗಲಿ = ಒಂದು ಜಾತಿಯ ಕಂಟಿ

    ಹಟ್ಟಿ = ಊರು

    ತುಗಲಿಯ ಹಟ್ಟಿ>ತುಗಲಟ್ಟಿ 'ಹ' ಲೋಪವಾಗಿದೆ. ಸಸ್ಯವಾಚಕ.

ತುಳಸಿಗೇರಿ : ತುಳಸಿ = ಒಂದು ಔಷಧೀಯ ಪವಿತ್ರ ಸಸ್ಯ

    ತುಳಸಿಯ+ಕೇರಿ = ತುಳಸಿಗೇರಿ

    ತುಳಸಿ ಸಸ್ಯ ಹೆಚ್ಚು ಬೆಳೆಯುವ ಪ್ರದೇಶ. ಸಸ್ಯವಾಚಕ

ತೆಳಗಿನಹಾಳ : ತೆಳಗಿನ = ಕೆಳಗಿನ, ತಗ್ಗಾದ ಪ್ರದೇಶದ

    ತೆಳಗಿನ+ಹಾಳ = ತೆಳಗಿನಹಾಳ

    ತಗ್ಗಾದ, ಕೆಳಗಿನಪ್ರದೇಶದಲ್ಲಿರುವ ಊರು. ಭೂಸ್ವರೂಪ, ದಿಗ್ವಾಚಕ

ದೇವಲಾಪುರ : ದೇಮಲೆ(ಲಾ)>ದೇವಲಾಪುರ. ಸ್ತ್ರೀ ನಾಮ.

ದೇಮಲೆಯ+ಪುರ = ದೇಮಲಾಪುರ>ದೇವಲಾಪುರ "ಪಟ್ಟದಕಲ್ಲಿನ ಕ್ರಿ.ಶ. ೧೧೬೩ರ ಶಾಸನದಲ್ಲಿ ಈ ಸಿಂಧರ ವಂಶಾವಳಿಯನ್ನು ಹೇಳಿ ಚಾವುಂಡನ ಪತ್ನಿ ದೇಮಲೆಯನ್ನು ವರ್ಣಿಸಲಾಗಿದೆ. ದೇಮಲದೇವಿ ಮತ್ತು ಆಚಿದೇವ ಪಟ್ಟದಕಲ್ಲನ್ನು ಆಳುತ್ತಿದ್ದರು."[೪೮] ವ್ಯಕ್ತಿವಾಚಕ.

ದೇವಲಾಪುರ ಎಸ್.ಎಮ್. ಹಾಗೂ ದೇವಲಾಪುರ ಎಸ್.ಬಿ. ಎಂದು ಎರಡು ಊರುಗಳಿವೆ.

ದೇವನಾಳ : ದೇವನ+ಹಾಳ = ದೇವನಾಳ, ದೇವರ ಊರು. 'ಹ'ಲೋಪವಾಗಿದೆ. ದೈವವಾಚಕ.

ನಕ್ಕರಗುಂದಿ : ನಕ್ಕರು –ಒಂದು ಜನಾಂಗ.

ಗುಂದಿ = ಗುಡ್ಡ

'ನಕ್ಕರು' ಜನಾಂಗದವರು ವಾಸಿಸುವ ಒಂದು ಗುಂದಿ, ನಕ್ಕರಗುಂದಿ. ಜನಾಂಗವಾಚಕ.

ನಾಗಸಂಪಿಗೆ : ನಾಗ+ಸಂಪಿಗೆ = ನಾಗಸಂಪಿಗೆ

ಹಳದಿಬಣ್ಣದ ಸಂಪಿಗೆ, ಸಂಪಿಗೆಯಲ್ಲಿಯ ಒಂದು ಪ್ರಭೇದ.

ಇಂಥ ಸಂಪಿಗೆ ಗಿಡ ಹೆಚ್ಚಾಗಿ ಬೆಳೆಯುವ ಊರು. ಸಸ್ಯವಾಚಕ.

ನಾಗರಾಳ : ನಾಗರು = ಒಂದು ಜನಾಂಗ.

ನಾಗರ+ಹಾಳ = ನಾಗರಾಳ>ನಾಗರಾಳ, 'ಹ' ಲೋಪವಾಗಿದೆ.

'ನಾಗ' ಎಂಬ ಜನರು ವಾಸಿಸುವ ಹಾಳ>ನಾಗರಾಳ>ನಾಗರಾಳ. ಜನಾಂಗವಾಚಕ.

ನಾಯನೂರು : ನಾಯನ+ಊರು = ನಾಯನೂರು

ಶಿಲಾಹಾರದ ದೊರೆ ನಾಯಿಮರಸ, ಅವನಿಂದ ಇದು ಸ್ಥಾಪನೆಗೊಂಡಿರಬಹುದು.

"ನಾಯಿಗನಚಕ್ರ, ಪರಚಕ್ರ, ನಾಮಾರಿ"[೪೯] ಎಂದು ಉಲ್ಲೇಖಿಸಿದ ಶಾಸನ ದೊರೆತಿದೆ. ವ್ಯಕ್ತಿವಾಚಕ.

ನೀರಲಕೇರಿ : ನೀರಲ = ಒಂದು ಗಿಡ

ನೀರಲದ+ಕೇರಿ = ನೀರಲಕೇರಿ

ನೀರಲಗಿಡಗಳು ಹೆಚ್ಚಾಗಿರುವ ಊರು. ಸಸ್ಯವಾಚಕ.

ಬನ್ನಿಕಟ್ಟೆ : ಬನ್ನಿ = ಒಂದು ಗಿಡ

ಬನ್ನಿಯ+ಕಟ್ಟೆ = ಬನ್ನಿಕಟ್ಟೆ

ಬನ್ನಿಯ ಗಿಡದ ಕೆಳಗೆ ಕಟ್ಟಿದ ಕಟ್ಟೆಯ ಊರು. ಇಂದಿಗೂ ಬನ್ನಿಗಿಡವನ್ನು ಪೂಜಿಸುವುದುಂಟು. ಈ ಊರನ್ನು ಬನ್ನಿಗಿಡದ ಹೆಸರಿನಿಂದ ಕರದಿದ್ದಾರೆ. ಸಸ್ಯವಾಚಕ, ನಿರ್ಮಾಣವಾಚಕ.

ಬನ್ನಿದಿನ್ನೆ : ಬನ್ನಿ = ಒಂದು ಮರದ ಹೆಸರು.

ದಿನ್ನೆ = ಎತ್ತರದ ಪ್ರದೇಶ

ಬನ್ನಿಯ+ದಿನ್ನೆ=ಬನ್ನಿದಿನ್ನೆ

ಬನ್ನಿಮರಗಳು ಬೆಳೆದಿರುವ ಎತ್ತರದ ಪ್ರದೇಶ. ಭೂಸ್ವರೂಪ, ಸಸ್ಯವಾಚಕ.

ಬಾಗಲಕೋಟೆ : ಬಾಗಿಲು–ದ್ವಾರ

ಕೋಟೆ–ಕಿಲ್ಲೆ, ಕೋಟೆಯ ಗೋಡೆ

ಬಾಗಿಲು+ಕೋಟೆ =ಬಾಗಿಲಕೋಟೆ>ಬಾಗಲಕೋಟೆ

ಊರ ರಕ್ಷಣೆಗಾಗಿ ಸುತ್ತಲೂ ನಿರ್ಮಿಸಿರುವ ಗೋಡೆ. ನಿರ್ಮಾಣವಾಚಕ.

" 'ಬಾಯಿ', 'ಬಾಗಿಲು'ಗಳೆಂಬ ಊರುಗಳು ಒಂದು ಕಾಲದ ರಾಜಕೀಯ ಅಥವಾ ವ್ಯಾಪಾರೋದ್ಯೋಗದ ಮುಖಗಳಾಗಿರಬೇಕು. ಅವುಗಳ ಮುಖಾಂತರವಾಗಿ ವ್ಯವಹಾರಗಳು ಮುಂದುವರೆಯುತ್ತಿರಬೇಕು."[೫೦]

ಬಾಗಡಿಗೆ>ಬಾಂಗಡಿ+ಕೋಟೆ = ಬಾಂಗಡಿಕೋಟೆ>ಬಾಗಲಕೋಟೆ

"ಕಲ್ಯಾಣಿ ಚಾಲುಕ್ಯರ ಆಳ್ವಿಕೆಯಲ್ಲಿ ಈ ಊರಿಗೆ 'ಬಾಂಗಡಿಗೆ' ಎಂಬ ಹೆಸರಿತ್ತು. ೧೬ನೆಯ ಶತಮಾನದಲ್ಲಿ ಇದು ವಿಜಾಪುರ ಆದಿಲ್‌ಶಾಹಿ ಆಳ್ವಿಕೆಗೆ ಒಳಪಟ್ಟಾಗ ಇದಕ್ಕೆ 'ಬಾಗನೂರ' ಅಥವಾ 'ಬಾಂಗಡಿಕೋಟಾ' ಎನ್ನುತ್ತಿದ್ದರು. ನಂತರ ಬಾಗಲಕೋಟೆ ಎಂದು ಕರೆಯಲಾಯಿತು. ವಿಜಾಪುರ ಸುಲ್ತಾನನು ತನ್ನ ಮಗಳ ಬಳೆಯ ವೆಚ್ಚಕ್ಕಾಗಿ ಈ ಊರನ್ನು ಕೊಟ್ಟ ಕಾರಣಕ್ಕಾಗಿ 'ಬಾಂಗಡಿಕೋಟಾ' ಎಂದು ಕರೆದರು"[೫೧]

ಹೊನ್ನಕಟ್ಟೆ ಶಾಸನದಲ್ಲಿ (ಕ್ರಿ.ಶ. ೧೬ನೆಯ ಶತಮಾನ) ಮಾರುತಿ ದೇವಾಲಯದ ತುಂಡುಶಾಸನದಲ್ಲಿ "ವಾಗಡಿಕೋಟೆ"[೫೨] ಎಂದು ಉಲ್ಲೇಖಿಸಿದೆ.

ಲಂಕೆಯ ದೊರೆ ರಾವಣನ ಆಸ್ಥಾನ ಸಂಗೀತಗಾರನೊಬ್ಬನಿಗೆ ಬಾಗಲಕೋಟೆಯನ್ನು ದತ್ತಿಯಾಗಿ ನೀಡಲಾಗಿತ್ತಂತೆ.

"ಬಾಗಡಿಗಳು–ಇವರು ಕೊಲ್ಲಾಪುರದ ಸೀಮೆಯಿಂದ ಬೆಳಗಾವಿಗೆ ಬರುತ್ತಾರೆ; ಜನ್ಮಭಾಷೆ ಮರಾಠಿ, ತೋರಿಕೆಯಲ್ಲಿ ಕೋಳೀ(ಕಬ್ಬಲಗೇರ) ಜಾತಿಯವರ ಹಾಗೆ ಕಾಣುತ್ತಾರೆ. ಇವರ ಕುಲದೇವತೆ ಮ್ಹಸೋಬಾ, ಬ್ರಾಹ್ಮಣರನ್ನು ಇವರು ತಮ್ಮ ಕಾರ್ಯಗಳಿಗೆ ಕರೆಯುವರು. ವಿಧವೆಯರ ಲಗ್ನ ಮಾಡುವರು. ಮದ್ಯ–ಮಾಂಸ ಸೇವಿಸುವರು. ಹೆಣಗಳನ್ನು ಹುಗಿಯುವರು. ಗಂಡಸರ ಉಡಿಗೆ ಲಂಗೋಟಿ, ಹೆಂಗಸರು ಕುಬ್ಬಸ ಹಾಕುವುದಿಲ್ಲ. ಕುಂಕುಮ ಹಚ್ಚುವರು. ಭಿಕ್ಷೆಯೇ ಇವರ ಜೀವನವು."[೫೩] ಬಾಗಲಕೋಟೆ ಎಂಬುದು ಬಾಗಡಿಗೆ ಎಂಬುದರಿಂದ ಬಂದಿದೆ, ಬಾಗಡಿಗೆ ಎಂಬುದು ಬಾಗಡಿ ಜನಾಂಗದಿಂದ ಬಂದಿರಬೇಕು.

ಬಿಲ್ಲಕೆರೂರು : 'ಬಿಲ್ಲ' ಇದು ಕೆರೂರಿಗೆ ವಿಶೇಷಣ.

ಕೆರೆಯ+ಊರು = ಕೆರೆಯೂರು>ಕೆರೂರು

ಬಿಲ್+ಕೆರೂರು = ಬಿಲ್ಲಕೆರೂರು

ಬಿಲ್ಲಿನ ಆಕಾರದಲ್ಲಿರುವ ಕೆರೂರು. ನಿಸರ್ಗವಾಚಕ.

ಬೆಣ್ಣೂರು : ಬೆಣ್ಣೆಯ+ಊರು>ಬೆಣ್ಣೂರು

ಬೆಣ್ಣೆಯು ಸಮೃದ್ಧವಾಗಿರುವ ಹೈನುಗಾರಿಕೆಯ ಊರು. ಪದಾರ್ಥವಾಚಕ.

ಬೆನಕಟ್ಟೆ : ಬೆನಕನ+ಕಟ್ಟೆ = ಬೆನಕಟ್ಟೆ

ಬೆನಕ = ಸಾಪಾದ ದುಂಡನೆಯ ಕಲ್ಲು. ಇದನ್ನು ಗಣಪತಿ ಎಂದು ಪೂಜಿಸುತ್ತಾರೆ. ಶಿಲಾವಾಚಕ.

ಬೇವಿನಮಟ್ಟೆ : ಬೇವು = ಕಹಿಯುಳ್ಳ ಒಂದು ಮರದ ಜಾತಿ

ಬೇವಿನ+ಮಟ್ಟೆ = ಬೇವಿನಮಟ್ಟೆ

ಬೇವು ಹೆಚ್ಚಾಗಿ ಬೆಳೆಯುವ ಪ್ರದೇಶದಲ್ಲಿರುವ ಊರು. ಸಸ್ಯವಾಚಕ.

ಬೇವೂರು : ಬೇವು = ಕಹಿಯುಳ್ಳ ಒಂದು ಮರದ ಜಾತಿ

ಬೇವಿನ+ಊರು = ಬೇವಿನೂರು>ಬೇವೂರು

ಬೇವಿನ ಮರಗಳುಹೆಚ್ಚಾಗಿ ಬೆಳೆದಿರುವ ಪ್ರದೇಶದಲ್ಲಿರುವ ಊರು. ಸಸ್ಯವಾಚಕ.

ಕ್ರಿ.ಶ. ೧೧ನೆಯ ಶತಮಾನದ ಬೇವೂರಿನ ಸೋಮೇಶ್ವರ ದೇವಾಲಯ ಎದುರಿಗೆ ಇರುವ (B.K.No. 265 of 1927–28; SII. XI.I. 105) ಈ ಶಾಸನದಲ್ಲಿ 'ಬೇಹೂರ' ಎಂದು ಬಂದಿದೆ. "ಸುಕರಾಜನೆಂಬ ಬ್ರಾಹ್ಮಣನ ಉಲ್ಲೇಖವಿದ್ದು ಕೆರೆಯ ಬೇಹೂರಿನಲ್ಲಿ ದೇವಾಲಯ ರಚಿಸಿದನೆಂಬ ವಿವರಣೆ ಇದೆ."[೫೪]

ಬೊಮ್ಮಣಗಿ : ಬ್ರಮ್ಮ>ಬೊಮ್ಮ. ಇದು ಬ್ರಹ್ಮ ಪದದ ತದ್ಭವರೂಪ.

ಬೊಮ್ಮವ+ಅಗಿ = ಬೊಮ್ಮಣಗಿ

ಬೊಮ್ಮನು ವಾಸವಾಗಿರುವ ಊರು. ವ್ಯಕ್ತಿ ಹಾಗೂ ದೈವವಾಚಕ.

ಬೋಡನಾಯಕನದಿನ್ನಿ : ಬುಳ್ಳೆನಾಯಕನದಿನ್ನಿ>ಬೋಡನಾಯಕನ+ದಿನ್ನಿ = ಬೋಡ ನಾಯಕನದಿನ್ನಿ. ವ್ಯಕ್ತಿ, ಪ್ರಕೃತಿವಾಚಕ.

"ವಿಜಯನಗರದ ದೇವರಾಯನ ಕಾಲದ ಮಲ್ಲಪ್ಪನಗುಡಿಯ ಶಾಸನದಲ್ಲಿ ಬುಳ್ಳೆನಾಯಕನಮಗ ಹೆಗ್ಗಡೆ ಸೋಮಣ್ಣನು ಅರವಟಿಗೆ ಕಟ್ಟಿಸಿದುವನ್ನೂ ಮತ್ತು ಅದಕ್ಕಾಗಿ ಬಿಟ್ಟ ದಾನದ ವಿವರಗಳನ್ನು ಇದು ಹೇಳುತ್ತದೆ."[೫೫] ಬೋಡನಾಯಕ ಇಲ್ಲವೆ ಬುಳ್ಳೆನಾಯಕನೆಂಬ ವ್ಯಕ್ತಿ ಈ ಪ್ರದೇಶದಲ್ಲಿ ಆಗಿ ಹೋಗಿದ್ದು ಮತ್ತು ಈ ಪ್ರದೇಶದಲ್ಲಿ ಜನವಸತಿ ಸ್ಥಳ ಎತ್ತರದ ದಿನ್ನೆಮೇಲೆ ಇರುವುದು.

ಭಗವತಿ : ಭಗವತಿ = ದೇವತೆ

ದೇವತೆಯ ಹೆಸರಿನ ಊರು. ದೇವತಾವಾಚಕ.

ಭೈರನಟ್ಟಿ : ಭೈರನ+ಹಟ್ಟಿ = ಭೈರನಟ್ಟಿ 'ಹ' ಲೋಪವಾಗಿದೆ.

ಭೈರನೆಂಬ ವ್ಯಕ್ತಿ ಇಲ್ಲಿ ಪ್ರಸಿದ್ಧನಾಗಿದ್ದ. ವ್ಯಕ್ತಿವಾಚಕ.

ಮಂಕಣಿ : ಮಂಕಣಿ–ಬಿದಿರು, ಈಚಲು ಕಡ್ಡಿಗಳಿಂದ ಹೆಣೆದು ಮಾಡಿದ ಬುಟ್ಟಿ. ಈ ಕಸಬುದಾರರಿರುವ ಊರು–ಮಂಕಣಿ, ವಸ್ತುವಾಚಕ.

"ಕ್ರಿ.ಶ. ೧೨೦೬ ವರ್ಷದ ಮಂಕಣಿಯ ಶಿವದೇವಾಲಯದಲ್ಲಿರುವ ಕಲ್ಲಿನ ಮೇಲಿರುವ (B.K.No. 264 of 1927–28; SII.XV. 155) ಈ ಶಾಸನದಲ್ಲಿ 'ಮಂಕಣಿ' ಎಂದು ಉಲ್ಲೇಖ. ಆರಂಭಲ್ಲಿಯೇ ಸಾದೇವನು ಮಂಕಣಿಯಲ್ಲಿ ಭಾಸ್ಕರದೇವ ತ್ರಿಕೂಟವನ್ನು ಮಾಡಿಸಿದಂತೆ ತಿಳಿಸುತ್ತದೆ."[೫೬]

ಮನಹಳ್ಳಿ : ಮನ್ನಣೆಯ+ಹಳ್ಳಿ = ಮನ್ನಣೆಹಳ್ಳಿ ಮನ್ನಹಳಿ>ಮನಹಳ್ಳಿ.

ಭೂಸ್ವರೂಪವಾಚಕ.

ಮಣ್ಣ+ಹಳ್ಳಿ = ಮಣಹಳ್ಳಿ = ಮನಹಳ್ಳಿ,

ಒಂದು ವಿಶಿಷ್ಟ ಪ್ರಕಾರದ ಮಣ್ಣು ಇರುವ ಊರು.

ಮನ್ನಿಕಟ್ಟೆ : ಮನ್ನಿ+ಕಟೆ = ಮನ್ನಿಕಟ್ಟೆ

ಮನ್ನೆಯ = ಮಾನ್ಯ, ಮರ್ಯಾದೆ, ಮುಖ್ಯಸ್ಥ, ಹೆಗ್ಗಡೆ, ನಾಯಕ, ಪಾಳೆಯಗಾರ.

ಊರಿನ ಮುಖ್ಯಸ್ಥರು ನ್ಯಾಯ ತೀರ್ಮಾನಿಸಲು, ಮುಖ್ಯ ನಿರ್ಣಯ ಕೈಗೊಳ್ಳಲು ಊರಿನಮುಖ್ಯ ಭಾಗದಲ್ಲಿ ಕಟ್ಟೆಯನ್ನು ಕಟ್ಟಿಸಿ ಈ ಸ್ಥಳಕ್ಕೆ ಮನ್ನೆಯಕಟ್ಟೆ>ಮನ್ನಿಕಟ್ಟೆ ಎಂದು ಕರೆದಿದ್ದಾರೆ.

ಮಲ್ಲಾಪುರ : ಮಲ್ಲಪ್ಪನ+ಊರು = ಮಲ್ಲಪ್ಪೂರು>ಮಲ್ಲಾಪೂರು. ವ್ಯಕ್ತಿವಾಚಕ.

ಮಾರಾಪೂರ : ಮಾರಪ್ಪನ+ಊರು = ಮಾರಾಪೂರ. ವ್ಯಕ್ತಿವಾಚಕ.

ಮಾಸ್ತಿಹಾಳ : ಮಹಾಸತಿ>ಮಾಸ್ತಿ+ಹಾಳ = ಮಹಾಸತಿಹಾಳ>ಮಾಸತಿಹಾಳ>ಮಾಸ್ತಿಹಾಳ ಮಹಾಸತಿಯಾದಂಥವಳ ಹಾಳ. ಸ್ತ್ರೀವಾಚಕ.

ಮಾಗಿ : ಮಾಗು+ಇ = ಮಾಗಿ, ಮಾಗು = ಪಕ್ವವಾಗು. ಹಳೆಯದು ಎಂದರ್ಥ. ಕಾಲವಾಚಕ.

ಮ್ಯಾಗೇರಿ : ಮೇಲಿನ+ಕೇರಿ = ಮೇಲಿನಕೇರಿ>ಮೇಲ್‌ಗೇರಿ>ಮ್ಯಾಗೇರಿ. ಎತ್ತರ ಪ್ರದೇಶದಲ್ಲಿ ಜನರು ವಾಸಿಸುತ್ತಿದ್ದು. ಕೆಳಗಿನ ಪ್ರದೇಶದ ಜನ ಆ ಊರನ್ನು ಮ್ಯಾಗೇರಿ ಎಂದು ಕರೆದಿದ್ದಾರೆ. ದಿಗ್ವಾಚಕ.

ಮ್ಯಾಗೇರಿಗಳು ಎರಡು ಇದ್ದು, ಒಂದು ಚಿಕ್ಕ ಮ್ಯಾಗೇರಿ ಇನ್ನೊಂದು ಹಿರೇಮ್ಯಾಗೇರಿ.

ಮುಗಳೊಳ್ಳಿ : ಮುಗಳು = ಮೊಗ್ಗು, ಮುಚ್ಚು, ಮುದುಡು.

ಮುಗುಳಿನ+ಹಳ್ಳಿ = ಮುಗುಳೊಳ್ಳಿ>ಮುಗಳೊಳ್ಳಿ

ಮುಗುಳಂತಿರುವ ಹಳ್ಳಿ, ಸಣ್ಣಹಳ್ಳಿ, ಹೂಗಳು ಹೆಚ್ಚು ಬೆಳೆಯುವ ಊರು. 'ಹ' ಲೋಪವಾಗಿದೆ. ಸಸ್ಯವಾಚಕ.

ಮುಚಖಂಡಿ : ಮುಚ್ಚಿದ ಎಂದರೆ ಗಿಡಗಂಟಿಗಳಿಂದ ತುಂಬಿದ ಎಂದು ಅರ್ಥ.

ಖಂಡಿ– ಇಕ್ಕಟ್ಟಾದ ಸ್ಥಳ.

ಮುಚ್ಚಿದ+ಖಂಡಿ = ಮುಚಖಂಡಿ>ಮುಚಖಂಡಿ. ಗಿಡಗಂಟಿಗಳಿಂದ ಆವೃತವಾದ ಇಕ್ಕಾಟ್ಟಾದ ಸ್ಥಳ. ಪ್ರಕೃತಿವಾಚಕ.

ಮುತ್ತತ್ತಿ : ಮುದಿ = ಹಳೆಯ

ಅತ್ತಿ = ಒಂದು ಹಣ್ಣಿನಗಿಡ

ಮುದಿ>ಮುತ್+ಅತ್ತಿ = ಮುತ್ತತ್ತಿ

ಹಳೆಯ ಅತ್ತಿಯ ಗಿಡದಿಂದ ಪ್ರಸಿದ್ಧವಾದ ಊರು, ಕಾಲ, ವನಸ್ಪತಿವಾಚಕ.

ಮುದುವಿನಕೊಪ್ಪ : ಮುದು+ಇನ್+ಅ = ಮುದುವಿನ+ಕೊಪ್ಪ = ಮುದುವಿನಕೊಪ್ಪ

ಮುದು = ಹಳೆಯ, ಪ್ರಾಚೀನ ಊರು, ಹಳೆಯ ಊರು. ಕಾಲವಾಚಕ.

ಮುಮ್ಮಣಿಗೆ : ಮೂರು+ಮಣ್ಣು= ಮುಮ್ಮಣ್ಣು+ಇಗೆ>ಮುಮ್ಮಣ್ಣಿಗೆ>ಮುಮ್ಮಣಿಗೆ ಮೂರು ರೀತಿಯ ಮಣ್ಣು ಇರುವ ಊರು. ಭೂಸ್ವರೂಪವಾಚಕ.

ಮುಡಪಲಜೀವಿ : ಮುಡಪು = ಮೀಸಲು

ತನ್ನ ಜೀವವನ್ನೇ ಆಊರಿಗಾಗಿ ಮುಡುಪು ಇಟ್ಟ ವ್ಯಕ್ತಿಯಿಂದ ಬಂದ ಹೆಸರು. ಆದರ್ಶವಾಚಕ

ಮುರನಾಳ : ಮುರನ+ಹಾಳ>ಮುರನಹಾಳ>ಮುರನಾಳ. 'ಹ' ಲೋಪವಾಗಿದೆ.

ಮುರ ಎಂಬ ವ್ಯಕ್ತಿ ಯ ಹೆಸರಿನಿಂದಿರುವ ಹಾಳ. ವ್ಯಕ್ತಿವಾಚಕ.

ಮೂರಮಟ್ಟಿ : ಮಟ್ಟಿ–ಮಣ್ಣು

ಮೂರು ತರಹದ ಮಟ್ಟಿ ಇರುವ ಊರು–ಮೂರಮಟ್ಟಿ, ಭೂಸ್ವರೂಪವಾಚಕವಾಗಿದೆ.

ಯಡಳ್ಳಿ : ಎಡ = ಎಡಭಾಗ

ಎಡಭಾಗದಲ್ಲಿರುವ ಹಳ್ಳಿ>ಎಡಹಳ್ಳಿ>ಯಡಳ್ಳಿ. ದಿಗ್ವಾಚಕ.

ರಾಂಪೂರ : ರಾಮಪ್ಪನ+ಊರು>ರಮಪೂರ>ರಾಂಪೂರ

ರಾಮಪ್ಪ ಎಂಬ ವ್ಯಕ್ತಿ ಪ್ರಸಿದ್ಧವಾದ ಊರು. ವ್ಯಕ್ತಿವಾಚಕ.

ಲವಳೇಶ್ವರ : ಲವಲ = ಸುಂದರ

ಈಶ್ವರ = ಶಿವ, ದೇವರು, ಒಡೆಯ

ಲವಲ+ಈಶ್ವರ = ಲವಲೇಶ್ವರ>ಲವಳೇಶ್ವರ. ದೇವವಾಚಕ.

ವೀರಾಪೂರ : ವೀರಪ್ಪನ+ಊರು = ವೀರಪ್ಪೂರು>ವೀರಾಪೂರ. ವ್ಯಕ್ತಿವಾಚಕ.

ಶಾರದಾಳ : ಶಾರದಾ–ಸರಸ್ವತಿ

ಶಾರದೆಯ+ಹಾಳ = ಶಾರದಾಳ

ಇದು ಮೊದಲು ವಿದ್ಯಾಕೇಂದ್ರವಾಗಿರಬಹುದು.

ಪಂಡಿತರಿಂದ ಕೂಡಿದ ಊರಾಗಿರಬಹುದು.

ಶಿರಗುಪ್ಪಿ : ಸಿರಿಯ+ಕುಪ್ಪೆ = ಸಿರಿಕುಪ್ಪೆ>ಸಿರಿಗುಪ್ಪೆ>ಶಿರಗುಪ್ಪಿ

ಸಿರಿ ಸಂಪತ್ತಿನಿಂದ ಕೂಡಿದ ಶ್ರೀಮಂತ ಊರು. ಸಂಪತ್ತುವಾಚಕ.

ಶಿರೂರ : ಸಿರಿಯ+ಊರು = ಸಿರಿಯೂರು>ಶಿರೂರು

ಸಂಪತ್ತಿನಿಂದ ಕೂಡಿದ ಊರು. ಸಿರಿ>ಶಿರಿ ಆಗಿರುವುದು ವಿಶೇಷ. ಸಂಪತ್ತುವಾಚಕ.

"ಈ ಊರು ಒಳ್ಳೆಯ ಫಲವತ್ತಾದುದು ಬೆಟ್ಟದ ಸಾಲುಗಳು ಎರಡು ಕೆರೆ ಹಾಗೂ ನೀರಾವರಿಯನ್ನು ಹೊಂದಿದೆ. ಇಲ್ಲಿಯ ಪರಿಶ್ರಮಿ ರೈತರು ಒಳ್ಳೆಯ ಫಸಲನ್ನು ಬೆಳೆಯುವರು. ಇದರಿಂದ ಈ ಊರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶ್ರೀಮಂತರಿದ್ದಾರೆ. ಹಾಗಾಗಿ ಅಕ್ಕ-ಪಕ್ಕದ ಹಳ್ಳಿಯವರು ಈ ಊರಿನ ಸಿರಿವಂತಿಕೆಯನ್ನು ಕಂಡು ಸಿರಿಸಂಪತ್ತಿನ ಊರು ಸಿರಿಯೂರು>ಶಿರೂರು ಎಂದು ಕರೆದಿದ್ದಾರೆ."[೫೭] ಇದು ಅನ್ವರ್ಥದಿಂದ ಬಂದ ಪದವಾಗಿದೆ. ಐಹೊಳೆ ಕೊಂತಿಗುಡಿಯಲ್ಲಿ ನಿಲ್ಲಿಸಿರುವ (ಐ.ಕ.ಸಂ.ಪು. ೧೫೯-೬೦) ೩೩ನೆಯ ಶಾಸನದಲ್ಲಿ ಚಾಲುಕ್ಯ ದೊರೆ ಚಾಮುಂಡ ಭೂಪನ ಹೆಂಡತಿ ಸಿರಿಯಾದೇವಿ ಎಂದಿದೆ. ಈಕೆಯ ಹೆಸರಿನ ಊರು ಇದಾಗಿರಬಹುದೆಂದೂ ತರ್ಕಿಸಲವಕಾಶವಿದೆ. ಈ ಶಾಸನದ ಕಾಲ ಕ್ರಿ.ಶ. ೧೧೬೯-೭೦.

ಭೈರನಮಟ್ಟಿ ಮಾರುತಿ ದೇವಾಲಯದ (B.K.No. 261 of 1927-28; EI.III.P. ೨೩೦: SII.XI.170, XV. 3) ಈ ಶಾಸನದಲ್ಲಿ 'ಸಿರಿಊರ' ಎಂದಿದೆ. ಇದರ ಕಾಲ ಕ್ರಿ.ಶ. ೧೦೩೩. ಇದರಲ್ಲಿ "ನಾಗಾದಿತ್ಯನು ಸಿಂಹರಾಸಿಭಟ್ಟಾರ ಎಂಬುವವನ ಕಾಲ ತೊಳೆದು ಶಿರೂರ ಸಿದ್ಧೇಶ್ವರ ದೇವರಿಗೆ ಸಾವಿರ ಮತ್ತರು ಹೊಲವನ್ನು ನೀಡಿದ ವಿವರಣೆ ಇದೆ."[೫೮]

ಕ್ರಿ.ಶ. ೧೦೬೮-೬೯ ಕಾಲದ ಶಿರೂರು ಸಿದ್ಧೇಶ್ವರ ದೇವಾಲಯದ (B.K.No. 242 of 1927-28; SII.XV. 531) ಈ ಶಾಸನದಲ್ಲಿ ,'ಸಿರಿವುರ' ಎಂದು ಉಲ್ಲೇಖವಿದೆ. ಇದರಲ್ಲಿ "ದೇವರಾಯನಾಯಕನು ಸಿರಿವುರದಲ್ಲಿದ್ದ ಸಿದ್ದದೇವರಿಗೆ ತೆರಿಗೆರಹಿತವಾದ ಭೂಮಿಯನ್ನು ಬಿಟ್ಟ ವಿವರಣೆ ಇದೆ. ದೇವರಾಯನಾಯಕನನ್ನು ಕೊಲ್ಲಾಪುರದ ಪ್ರಭು ಎಂದು ಕರೆಯಲಾಗಿದೆ."[೫೯]

ಕ್ರಿ.ಶ. ೧೦೪೯ ಕಾಲದ ಶಿರೂರು ಸಿದ್ದೇಶ್ವರ ದೇವಾಲಯ ದಕ್ಷಿಣ ಗೋಡೆಯ (B.K.No. 244 of 1927-28; SII.XI.I. 85) ಈ ಶಾಸನದಲ್ಲಿ 'ಶ್ರೀಪುರ' ಎಂದು ಉಲ್ಲೇಖಿಸಿದೆ. ಇದರಲ್ಲಿ "ಮಾರಸಿಂಘ ಇವನು ಪೊನುಗುಂದ ೩೦ರ ಮಧ್ಯದ ಶ್ರೀಪುರ ಎಂಬ ಹೆಸರಿನ ಗ್ರಾಮದಲ್ಲಿ ೩೦೦ ನಿವರ್ತನ ಭೂಮಿಯನ್ನು ಸಿದ್ಧೇಶ್ವರ ದೇವರ ಧೂಪ, ದೀಪ, ಗಂಧ ಯತಿಗಳಿಗೆ, ವಿದ್ಯಾರ್ಥಿಗಳ ಸತ್ರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ದಾನ ನೀಡಿದ... ಕೆರೆ ಕಟ್ಟಿಸಿದ್ದು ಸಿದ್ದೇಶ್ವರ ದೇವರಿಗೆ ಆಭರಣಗಳನ್ನು ಮಾಡಿಸಿದ ಉಲ್ಲೇಖವಿದೆ."[೬೦]

ಶೆಲ್ಲಿಕೇರಿ : ೧. ಶಲ್ಯ>ಶಲ್ಲಿ = ಈಟಿ, ಬರ್ಚಿ, ಬರ್ಜಿ, ಚೂಪಾದ ಮೊನೆಯುಳ್ಳ ವಸ್ತು.

ಶಲ್ಲಿಯ+ಕೇರಿ = ಶಲ್ಲಿಕೇರಿ. ಚೂಪಾದ ಆಯುಧಗಳನ್ನು ತಯಾರಿಸಲು ಯೋಗ್ಯವಾದ ಕಲ್ಲುಗಳುಳ್ಳ ಕೇರಿ-ಶಲ್ಲಿಕೇರಿ>ಶೆಲ್ಲಿಕೇರಿ

೨. ಶಲ್ಯನ+ಕೇರಿ = ಶೆಲ್ಲಿಕೇರಿ

ಶೆಲ್ಲಿಕೇರಿ ಎರಡು ೧. ಹಿರೇಶೆಲ್ಲಿಕೇರಿ ೨. ಚಿಕ್ಕಶೆಲ್ಲಿಕೇರಿ.

ಸಂಗಾಪೂರ : ಸಂಗಪ್ಪನ+ಊರು>ಸಂಗಾಪೂರ. ವ್ಯಕ್ತಿವಾಚಕ.

ಸಂಗೊಂದಿ : ಸಂಗನ+ಗೊಂದಿ=ಸಂಗೊಂದಿ

ಸಂಗ–ಒಬ್ಬ ವ್ಯಕ್ತಿ ಅವನ ಹೆಸರಿನ ಗೊಂದಿ

ಗುಂದಿ>ಗೊಂದಿ, ಅಂದರೆ ಗುಡ್ಡ. ವ್ಯಕ್ತಿ ಮತ್ತು ಪ್ರಕೃತಿವಾಚಕ.

ಸಂಶಿ : ಸಂಸ್ಥೆ = ಸಂಘ, ಮಂಡಲ, ಸಮೂಹ ಸಂಸ್ಥೆ>ಸಂತೆ>ಸಂಶೆ>ಸಂಶಿ

ಉದ್ದೇಶಿತ ಕಾರ್ಯಗಳಿಗಾಗಿ ಸಂಘ ಸ್ಥಾಪಿತ ಊರು. ಸಂಸ್ಕೃತಿವಾಚಕ.

ಸಂಶಿಗಳು ಎರಡು. ೧. ಹಿರೇಸಂಶಿ ೨. ಚಿಕ್ಕಸಂಶಿ.

ಸಾಲಗುಂದಿ : ಸಾಲ್ = ಪಂಕ್ತಿ, ಒಂದು ಜಾತಿಯ ಮರ, ಪ್ರಕಾರ, ಕೋಟೆ

ಗುಂದಿ = ಬೆಟ್ಟ

ಸಾಲ್+ಗುಂದಿ = ಸಾಲಗುಂದಿ

ಸುತ್ತಲೂ ಬೆಟ್ಟ, ಮರಗಳು ಕೋಟೆ ತರಹ ಆವರಿಸಿರುವ ಪ್ರದೇಶ. ಭೂಸ್ವರೂಪ, ಪ್ರಕೃತಿವಾಚಕ.

ಸಿಂದಗಿ : ಸಿಂದರು = ಒಂದು ಜನಾಂಗ.

ಸಿಂದರು+ಇಗೆ>ಸಿಂದಿಗೆ>ಸಿಂದಗಿ. ಜನಾಂಗವಾಚಕ.

ಸಿದ್ನಾಳ : ಸಿದ್ದನ+ಹಾಳ = ಸಿದ್ನಾಳ. 'ಹ'ಲೋಪವಾಗಿದೆ. ವ್ಯಕ್ತಿವಾಚಕ.

ಸೀಗಿಕೇರಿ : ಸೀಗಿಯ+ಕೇರಿ = ಸೀಗಿಕೇರಿ

ಸೀಗಿ = ಜಿಡ್ಡು ತೆಗೆಯಲು ಬಳಸುವ ಒಂದು ಕಾಯಿ. ಸೀಗೆ ಸಸ್ಯ ಹೆಚ್ಚು ಬೆಳೆಯುವ ಪ್ರದೇಶ ದಲ್ಲಿರುವ ಊರು. ಸಸ್ಯವಾಚಕ.

ಸೀತಿಮನಿ : ಸೀತೆ– ಜನಕನ ಮಗಳು, ರಾಮನ ಹೆಂಡತಿ.

ಸೀತೆಯ ಮನೆ ಇರುವ ನೆಲೆಗೆ 'ಸೀತಿಮನಿ' ಎಂದು ಕರೆದಿರಬೇಕು. ಸೀತೆ ಎಂಬ ಇನ್ನಾವುದೋ ಪ್ರಸಿದ್ಧ ಸ್ತ್ರೀ ಇರುವ ಊರು ಆಗಿರಲೂಬಹುದು. ವ್ಯಕ್ತಿವಾಚಕ.

ಸೀಮಿಕೇರಿ : ಸೀಮೆಯಲ್ಲಿರುವ+ಕೇರಿ = ಸೀಮೆಕೇರಿ>ಸೀಮಿಕೇರಿ

ಸೀಮೆ = ಗಡಿ, ಪ್ರದೇಶದ ಹದ್ದು, ತಟ, ಬೇಲಿ. ಇದು ಹಿಂದಿನ ಕಾಲದಲ್ಲಿ ಯಾವುದೋ ಒಂದು ಪ್ರದೇಶದ ಗಡಿ ಊರಾಗಿರಬೇಕು. ಪ್ರದೇಶವಾಚಕ.

ಸುಕನಾದಗಿ : ಶುಕ = ಗಿಳಿ. ಶುಖ>ಸುಕ

ನಾದಗಿ = ಗಿಳಿಗಳ ಇಂಚರ

ಸುಕ+ನಾದ+ಗಿ = ಸುಕನಾದಗಿ

ಗಿಳಿಗಳ ನಾದದಿಂದ ಕೂಡಿದ ಊರು. ಅಂದರೆ ಗಿಳಿಗಳು ಹೆಚ್ಚಾಗಿ ವಾಸಿಸುವ ಊರು.

ಸುತಗುಂಡಾರ : ಸುತ್ತ = ನಾಲ್ಕು ಕಡೆಗೆ. ಗುಂಡಾರ = ಗುಡ್ಡವಿರುವ.

ಸುತ್ತ+ಗುಂಡಾರ>ಸುತಗುಂಡಾರ. ನಾಲ್ಕು ಕಡೆಗೆ ಗುಡ್ಡವಿದ್ದು ಮಧ್ಯದಲ್ಲಿರುವ ಊರು.

ಸೋಮನಕೊಪ್ಪ: ಸೋಮನ+ಕೊಪ್ಪ = ಸೋಮನಕೊಪ್ಪ

ಸೋಮನೆಂಬ ವ್ಯಕ್ತಿಯ ಊರು. ವ್ಯಕ್ತಿವಾಚಕ.

ಸೋರಕೊಪ್ಪ : ಶೂರ>ಸೋರ, ಧೀರ.

ಶೂರ+ಕೊಪ್ಪ = ಶೂರಕೊಪ್ಪ = ಶೂರಕೊಪ್ಪ>ಸೋರಕೊಪ್ಪ

ಶೂರರು ಹೆಚ್ಚಾಗಿ ವಾಸಿಸುವ ಊರು.

ಹಂಟರಗಲ್ಲು : ಪಂಟರು = ಒಂದು ಜನಾಂಗ.

ಪಂಟರ+ಕಲ್ಲು = ಪಂಟರಗಲ್ಲು>ಹಂಟರಗಲ್ಲು

ಪಂಟರು ಆಶ್ರಯಿಸಿದ ಕಲ್ಲಿನ ಊರು. ಜನಾಂಗ, ಶಿಲಾವಾಚಕ.

ಹಣಮಾಪೂರ : ಹಣಮಪ್ಪನ+ಊರು = ಹಣಮಪ್ಪೂರು>ಹಣಮಾಪುರ. ವ್ಯಕ್ತಿವಾಚಕ

ಹವೇಲಿ : ಹವೇಲಿ = ಮಹಡಿಯ ಮನೆ. ಬೃಹತ್‌ಕಟ್ಟಡ. ನಿರ್ಮಾಣವಾಚಕ.

"ಹಿಂದೆ ಗೋಪಾಳಪುರವೆಂದು ಕರೆಯಲ್ಪಡುತಿತ್ತು. ಬ್ರಿಟಿಷರ ಕಾಲದಲ್ಲಿ ಅಧಿಕಾರಿಗಳಿಗೆ ತಂಗಲು ಬಂಗಲೆಗಳನ್ನು ಇಲ್ಲಿ ಕಟ್ಟಲಾಗಿದ್ದುದರಿಂದ ಈ ಸ್ಥಳಕ್ಕೆ ಹವೇಲಿ ಎಂದರೆ 'ಬೃಹತ್ ಕಟ್ಟಡ', ಅಥವಾ 'ಮಹಡಿಮನೆ' ಎಂದು ಕರೆಯಲಾಯಿತು"[೬೧]

ಕ್ರಿ.ಶ. ೧೮೨೨ರ ಹವೇಲಿಯ ಮಾರೂತಿ ದೇವಾಲಯದ ಎದುರಿಗೆ ನಿಲ್ಲಿಸಿರುವ (B.K.No. 239 of 1927–28; SII.XV. 272) ಈ ಶಾಸನದಲ್ಲಿ 'ಹವೇಲಿ', ಎಂದಿದೆ. ಇದರಲ್ಲಿ "ಕುಂಪಣಿ ಸರ್ಕಾರದಲ್ಲಿ ಬಾಗಡಿಕೋಟೆಯ ಸುಬೇದಾರನಾಗಿದ್ದ, ಅಪ್ಪೂರಾಯನು ಬಹಳ ವರ್ಷಗಳಿಂದ ಪಾಳು ಬಿದ್ದಿದ್ದ ಹವೇಲಿ ಎಂಬ ಗ್ರಾಮವನ್ನು ಜೀರ್ಣೋದ್ಧಾರ ಮಾಡಿ ಆ ಗ್ರಾಮಕ್ಕೆ ಗೋಪಾಲ ಪುರವೆಂದು ಹೆಸರು ನೀಡಿದ."[೬೨] ಎಂದು ಉಲ್ಲೇಖಿಸಿದೆ.

ಹಳ್ಳೂರು : ಹಳ್ಳದ+ಊರು = ಹಳ್ಳದೂರು = ಹಳ್ಳೂರ

ಈ ಊರು ಹಳ್ಳದ ದಂಡೆ ಮೇಲೆ ಇರುವುದರಿಂದ ಈ ಹೆಸರು ಬಂದಿದೆ.

೧. "ಹಳ್ಳೂರು ಮೇಲ್ಗುಡಿ ದೇವಾಲಯ ಮುಂದೆ ಬಿದ್ದಿರುವ ಕಲ್ಲಿನ ಮೇಲೆ ಇರುವ (B.K.No. 257 of 1927–28; SII.XV. 19) ಈ ಶಾಸನದಲ್ಲಿ 'ಹಳ್ಳ ಹುರ' ಎಂದಿದೆ. ಇದರಲ್ಲಿ" 'ಹಳ್ಳಹುರವು' ಬೆಳ್ವಲ ನಾಡಿನ ಗ್ರಾಮವಾಗಿತ್ತೆಂದು ಶಾಸನ ತಿಳಿಸುತ್ತದೆ."[೬೩]

ಹಳ್ಳಹುರ : ಪಳ್ಳ>ಹಳ್ಳ, ಹುರ>ಪುರ

ಹಳ್ಳದ+ಪುರ = ಹಳ್ಳಪುರ = ಹಳ್ಳಹುರ

ಹಳ್ಳದ + ಊರು = ಹಳ್ಳದೂರು = ಹಳ್ಳೂರು. ಜಲವಾಚಕ.

೨. ಶಿರೂರ ಸಿದ್ಧೇಶ್ವರ ದೇವಾಲಯದ ದಕ್ಷಿಣ ಗೋಡೆಯಲ್ಲಿಯ (B.K.No. 244 of 1927–28; SII. XI.I. 85) ಈ ಶಾಸನದಲ್ಲಿ 'ಪಳ್ಳಪುರ'ಎಂದಿದೆ. ಇದರಲ್ಲಿ "ಮಾರಸಿಂಘ ಶಿರೂರು ಸಿದ್ಧೇಶ್ವರದೇವರಿಗೆ ಬಾಗಡಗೆ ೭೦ರಲ್ಲಿದ್ದ ಮೂಲವಳ್ಳಿ ಗ್ರಾಮದ ಪೂರ್ವಕ್ಕಿರುವ ಪಳ್ಳಪುರ ಸಮೀಪದಲ್ಲಿ ೫೦ ನಿವರ್ತನ ಭೂಮಿಯನ್ನು ದಾನ ಮಾಡಿದ ವಿವರಣೆ ಇದೆ."[೬೪]

ಇನ್ನೊಂದು ಅಭಿಪ್ರಾಯದ ಪ್ರಕಾರ:

ಪರಲ್ = ಹರಳು

ಪರಲ್+ಊರು = ಪರಲೂರು. ಅಂದರೆ ಹರಳುಗಳಿಂದ ಕೂಡಿದ ಊರು.

ಪರಲೂರು>ಹರಳೂರು>ಹಳ್ಳೂರು

"ಮಂಗಲೇಶನ ಹೂಲಿ ತಾಮ್ರ ಶಾಸನದಲ್ಲಿ... ಜೈನಮುನಿಗಳ ಹೆಸರಿದ್ದು, ಅವರು ಪರಲೂರ (ಹಳ್ಳೂರ) ಸಂಘದವರಾಗಿದ್ದರೆಂದು ತಿಳಿದು ಬರುತ್ತದೆ."[೬೫]

ಹೊದ್ಲೂರು : ಹೊದಲು–ಗಿಡಗಳಿಂದ ಕೂಡಿದ್ದು.

ಹೊದ್ಲೂರು ಎರಡು. ೧. ಹಿರೇಹೊದ್ಲೂರು ೨. ಚಿಕ್ಕಹೊದ್ಲೂರು.

ಹೊದಲು+ಊರು = ಹೊದಲೂರು>ಹೊದ್ಲೂರು. ಸಸ್ಯವಾಚಕ.

ಹೊನ್ನಾಕಟ್ಟೆ : ಹೊನ್ನಾಯಕನ+ಕಟ್ಟೆ = ಹೊನ್ನಾಯಕನ ಕಟ್ಟೆ>ಹೊನ್ನಾಕಟ್ಟೆ. ಹೊನ್ನಾಕಟ್ಟೆ ಮಾರುತಿ ದೇವಾಲಯದ ಎದುರಿಗಿರುವ ದೊಡ್ಡ ಬಂಡೆಯ ಬಳಿಯಿರುವ ಕಲ್ಲಿನ (B.K.No. 241 of 1927–28; SII.XV. 652) ಈ ಶಾಸನದಲ್ಲಿ 'ಹೊನ್ನಾಯಕನಕಟ್ಟೆ' ಎಂದಿದೆ. ಈ ಶಾಸನವು ೧೬ನೆಯ ಶತಮಾನದ್ದು. ಇದರಲ್ಲಿ "ಹೊನ್ನಾಯಕನಕಟ್ಟೆ ಸಂಗಣಗೌಡನು ಹಣ ಮತ್ತು ಎಣ್ಣೆಯನ್ನು ದಾನ ಮಾಡಿದ್ದನ್ನು ಉಲ್ಲೇಖಿಸಿದೆ."[೬೬] ಹೊನ್ನಾಕಟ್ಟೆ ಮಾರುತಿ ದೇವಾಲಯದ ಎದುರಿಗೆ ನಿಲ್ಲಿಸಿರುವ ಮೂರು ತುಂಡು ಶಾಸನ (B.K.No. 240 of 1927–28; SII.XV. 275) ಈ ಶಾಸನದಲ್ಲಿ " 'ಹೊನ್ನಾಯಕನಕಟ್ಟೆ' ಎಂದಿದೆ ಇದರಲ್ಲಿ 'ಗೋಪಾಲಪ್ಪನು ಹೊನ್ನಾಯಕನ ಕಟ್ಟೆಯೆಂಬ ಗ್ರಾಮವನ್ನು ಜೀರ್ಣೋದ್ಧಾರ ಮಾಡಿದ ಉಲ್ಲೇಖವಿದೆ."[೬೭]

ಹೊನ್ನರಳ್ಳಿ : ೧. ಪೊಣರು>ಹೊನರು = ಹೋರಾಟ, ಹೋರಾಡು.

ಹೊನರು+ಹಳ್ಳಿ = ಹೊನರುಹಳ್ಳಿ>ಹೊನರಳ್ಳಿ

ಹೋರಾಟಗಾರರ, ಸಾಹಸಿಗರ ಹಳ್ಳಿ ಎಂದು ಕರೆದಿರಲು ಸಾಧ್ಯವಿದೆ.

೨. ಹೊನ್ನೆ = ಒಂದು ರೀತಿಯ ಸಸ್ಯ

ಹೊನೆ+ಹಳ್ಳಿ = ಹೊನ್ನಹಳ್ಳಿ. 'ಹ' ಲೋಪವಾಗಿದೆ.

ಹೊನ್ನಹಳ್ಳಿ>ಹೊನ್ನರಳ್ಳಿ>ಹೊನರಳ್ಳಿ

ಕೆಂಪು ಮಸಾರಿ ಭೂಮಿಯಲ್ಲಿ 'ಹೊನ್ನೆ' ಹೆಚ್ಚು ಬೆಳೆಯುವುದರಿಂದ 'ಹೊನರಳ್ಳಿ' ಎಂದು ಕರೆದರು. ಸಸ್ಯವಾಚಕ.

ಹೊಸೂರು : ಹೊಸ+ಊರು = ಹೊಸೂರು

ಹೊಸದಾಗಿ ನಿರ್ಮಿಸಿದ ಊರು, ಹೊಸೂರು. ಕಾಲವಾಚಕ.

ಬಾದಾಮಿ ತಾಲೂಕ



೩. ಬಾದಾಮಿ ತಾಲೂಕು

ಅಗಸನಕೊಪ್ಪ : ಅಗಸ = ಮಡಿವಳ ವೃತ್ತಿಯನ್ನು ಮಾಡುವ ಜನ, ಮಡಿವಳ, ಬಟ್ಟೆ ತೊಳೆಯುವವ.

ಕೊಪ್ಪ = ಊರು.

ಅಗಸನ+ಕೊಪ್ಪ = ಅಗಸನಕೊಪ್ಪ

ಅಗಸರು, ಮಡಿವಾಳರು ಹೆಚ್ಚಾಗಿರುವ ಊರು, ಇವರಲ್ಲಿ ಒಬ್ಬ ವ್ಯಕ್ತಿ ಪ್ರಸಿದ್ಧನಾದುದರಿಂದ 'ಅಗಸನಕೊಪ್ಪ' ಎಂದು ಹೆಸರು ಏಕವಚನವಾಗಿ ಬಂದಿದೆ. ವ್ಯಕ್ತಿ, ವೃತ್ತಿವಾಚಕ.

ಅನಂತಗಿರಿ : ಅನಂತ = ಕೊನೆಯಿಲ್ಲದ, ದೊಡ್ಡ, ವಿಷ್ಣು ಗಿರಿ = ಬೆಟ್ಟ, ಪರ್ವತ.

ಅನಂತನ+ಗಿರಿ = ಅನಂತಗಿರಿ

ಅನಂತ = ವಿಷ್ಣು, ವಿಷ್ಣುವಿರುವ ಗಿರಿ, ಅನಂತಗಿರಿ

ಭೂಸ್ವರೂಪ, ದೈವವಾಚಕ.

ಅನವಾಲ : ಅಣುವ = ಹನುಮಂತ

ಅಣುವ+ವಾಲ = ಅಣವಾಲ, ವಾಲ>ಬಾಲ = ಅನವಾಲ

ಮಂಗಗಳು ಹೆಚ್ಚಾಗಿರುವ ಊರು, ಇಲ್ಲವೆ ಹನುಮಂತನಿಂದ ಪ್ರಸಿದ್ಧವಾದ ಊರು. ದೈವ, ಪ್ರಾಣಿವಾಚಕ.

ಪಟ್ಟದಕಲ್ಲಿನ ಪಾಪನಾಥ ಗುಡಿಯ ದ್ವಾರಪಾಲಕ ಮೂರ್ತಿಯ ಮೇಲೆ "ರಾಮ ಮತ್ತು ಅಣುಮನ್"(ಹನುಮಂತ)ನನ್ನು ಹೆಸರಿಸಿದೆ."[೬೮] ಅನವಾಲ ಹನಮಂತದೇವರ ಗುಡಿಯ ಆವರಣದ ಜಲಸಂಗ್ರಹಾಗಾರಕ್ಕೆ ಸೇರಿಸಿ ಕಟ್ಟಿರುವ ಕಲ್ಲಿನ ಮೇಲೆ ಇರುವ (B.K. No.99 of 1928–29; SII.XV. 255) ಶಾಸನದಲ್ಲಿ '(ಅ)ನವಾಲಿ' ಎಂದಿದೆ. ಇದರಲ್ಲಿ "ವಿಜಯನಗರದ ಅರಸ ಅಚ್ಯುತ

ದೇವರಾಯನ ಅವಧಿಯಲ್ಲಿ ಹನುಮನಾಯಕ ಎಂಬುವವನು ಯಾರಿಗೋ ಪುಣ್ಯವಾಗಬೇಕೆಂದು ಗ್ರಾಮವೊಂದನ್ನು ದಾನ ಬಿಟ್ಟಂತೆ ತಿಳಿದುಬರುತ್ತದೆ".[೧೯] ಈ ಶಾಸನದ ಕಾಲ ಕ್ರಿ.ಶ. ೧೫೩೦.

ಆಡಗಲ್ಲು : ಅಡ್ಡ = ಅಡ್ಡಲಾಗಿರುವುದು. ಅಡೆತಡೆ ಮಾಡುವುದು. ಅಡ್ಡಾದಿಡ್ಡಿ.

ಅಡ್ಡ+ಕಲ್ಲು = ಅಡ್ಡಗಲ್ಲು>ಅಡಗಲ್ಲು.

ಊರಿನಲ್ಲಿ ಅಡ್ಡವಾಗಿ ಬಿದ್ದಿರುವ ದೊಡ್ಡ ಬಂಡೆಕಲ್ಲು ಇದೆ. ಶಿಲಾವಾಚಕ.

ಆಲದಕಟ್ಟೆ : ಆಲ = ಒಂದು ಸಸ್ಯ ಜಾತಿ, ಆಲದ ಮರ

ಆಲದ+ಕಟ್ಟೆ = ಆಲದಕಟ್ಟೆ

ಆಲದ ಗಿಡದ ಕೆಳಗೆ ಕಟ್ಟಿದ ಕಟ್ಟೆಯ ಊರು. ಈ ಊರನ್ನು ಅಲದಮರ ಹೆಸರಿನಿಂದ ಕರೆದಿದ್ದಾರೆ. ಸಸ್ಯ, ನಿರ್ಮಾಣವಾಚಕ.

"ಮುತ್ತಲಗೇರಿಯಿಂದ ನೀಲಗುಂದ ಕಾಲು ದಾರಿಯಿಂದ ಹೋಗುವ ಮಧ್ಯದಲ್ಲಿ ಆಲದ ಮರಗಳು ದಟ್ಟವಾಗಿ ಬೆಳೆದಿದ್ದವು. ಮುತ್ತಲಗೇರಿ ಜನರು ನೀಲಗುಂದಕ್ಕೆ ಸಂತೆ ಮಾಡಲು ಹೋಗುತ್ತಿದ್ದರು. ಹಾಗೆಯೇ ನೀಲಗುಂದ ಜನರು ಮುತ್ತಲಗೇರಿ ಮಾರ್ಗವಾಗಿ ಬಾದಾಮಿಗೆ ಹೋಗುವ ಸಮಯದಲ್ಲಿ ಜನರು ವಿಶ್ರಾಂತಿ ಪಡೆಯುತ್ತಿದ್ದರು. ಹೀಗೆಯೇ ಕೆಲ ಜನರು ಅಲ್ಲಿಯೇ ವಾಸ್ತವ್ಯ ಮಾಡಿದರು. ಹೀಗಾಗಿ ಅಲ್ಲಿ ಒಂದು ಊರು ನಿರ್ಮಾಣವಾಯಿತು. ಅದು ಆಲದಕಟ್ಟೆ ಯನ್ನಾಶ್ರಯಸಿದ್ದುದರಿಂಧ ಅದಕ್ಕೆ ಆಲದಕಟ್ಟೆ ಎಂಬ ಹೆಸರು ಬಂದಿತು"[೨೦]

ಆಲೂರು : ಆಲ = ಒಂದು ಮರ

ಆಲದ+ಊರು = ಆಲೂರು

ಆಲದ ಗಿಡಗಳಿರುವ ಊರು- ಆಲೂರು.

ಇದು ಮಲಪ್ರಭಾ ನದಿಯ ದಂಡೆ ಮೇಲೆ ಇದೆ. ಸಸ್ಯವಾಚಕ.

"ಸೈನಿಕರು, ನಿಲ್ಲುತ್ತಿದ್ದ ಊರು ಆಲೂರು ಎಂದಾಗಿರಬಹುದು"[೨೧]

ಯಾವ ಕುರುಹುಗಳೂ ಇಲ್ಲ. ಆ ಊರಿನ ಸರ್ವೆ ನಂ. ೯೧ರಲ್ಲಿ ಬಿದ್ದಿರುವ (B.K. No. 96 of 1928–29; SII. XV. 267) ಶಾಸನದಲ್ಲಿ 'ಆಲೂರ; ಎಂದಿದೆ. ಇದರಲ್ಲಿ "ಸಲಭತ್ ಖಾನ್ ಸಾಹೇಬನು ಆ ಊರಿನ ಖಾನ್. ಆ ಊರಿನ ದೇವಣಗೌಡನಿಗೆ ಕುದುರೆ ಸತ್ತಿಗೆ ಮರ್ಯಾದೆಯಾಗಿ ತೋಟದ ತೆರಿಗೆಯನ್ನು ವಿನಾಯತಿ ನೀಡಿದ ಉಲ್ಲೇಖವಿದೆ"[೨೨]

ಆಲೂರು ಎರಡು ಇವೆ. ಆಲೂರು ಎಸ್.ಪಿ. ಮತ್ತು ಆಲೂರು ಎಸ್.ಕೆ.

ಆಸಂಗಿ : ಆಸಂಗಿ = ಅಕ್ಕಸಾಲಿಗರು ಒಡವೆ ಅಥವಾ ವಸ್ತುಗಳು ನೆಗ್ಗಿದ್ದನ್ನು ತಿದ್ದಲು (ಸರಿ ಪಡಿಸಲು) ಬಳಸುವ ಸಾಧನ. ಜಮಖಂಡಿ ತಾಲೂಕಿನಲ್ಲಿಯೂ ಒಂದು ಆಸಂಗಿ ಇದೆ. ವಸ್ತುವಾಚಕ.

ಇಂಜಿನವಾರಿ : ಇಜ : ತೊಂದರೆ ಕೊಡುವವ.

ವಾರಿ = ಗುಡ್ಡ ಇಳಿಜಾರು ಪ್ರದೇಶ

ಇಜನ+ವಾರಿ = ಇಂಜನವಾರಿ>ಇಂಜಿನವಾರಿ

ದುಷ್ಟನೊಬ್ಬನು ಗಡ್ಡದವಾರಿಯಲ್ಲಿ ವಾಸಿಸುತ್ತಿರಬೇಕು.

ಉಗಲವಾಟ : ಉಗಲ+ವಾಟ = ಉಗಲವಾಟ

ಉಗಲ=ಚಿಮ್ಮುವ, ನೀರಿನ ಬುಗ್ಗೆ, ಕಾರಂಜಿ.

ವಾಟ= ಗ್ರಾಮ. ಜಲವಾಚಕ.

ಕಗಲಗೊಂಬ : ಕಗ್ಗ+ಕಲ್ಲು = ಕಗ್ಗಲ್ಲು, ಕಗ್ಗಲ್ಲು = ಕಾಡುಗಲ್ಲು

ಕಗ್ಗಲ್ಲ+ಕೊಂಬು = ಕಗಲಗೊಂಬ. ಶಿಲಾವಾಚಕ.

ಕಟಗಿನಹಳ್ಳಿ : ಕಟಕ+ಇನ್+ಅ = ಕಟಕಿನ

ಕಟಕಿನ+ಹಳ್ಳಿ = ಕಟಕಿನಹಳ್ಳಿ

ಕಟಕು = ಬಿಳಿಮಣ್ಣು, ಬಳಪದ ತರಹದ ಮಣ್ಣು. ಭೂಗುಣವಾಚಕ.

ಕಟಗೇರಿ : ಕಟುಕ = ಹಿಂಸೆಕೊಡುವವ, ಕ್ರೂರಿ, ಕೇರಿ>ಗೇರಿ, ಓಣಿ, ಬೀದಿ.

ಕಟುಕರ+ಕೇರಿ = ಕಟುಕರ ಕೇರಿ>ಕಟಗೇರಿ. ವೃತ್ತಿ, ವಾಸ್ತವ್ಯವಾಚಕ.

ಕಟಕು = ಒಂದು ಬಗೆಯ ಬಿಳಿ ಅಥವಾ ಕೆಂಪು ಮೂಡಿಯ ಮಣ್ಣು

ಕಟಕಿನಿಂದ ಕೂಡಿದ ಕೆರೆ.

ಕಟಕು+ಕೆರೆ = ಕಟುಕು ಕೆರೆ>ಕಟಗೆರೆ>ಕಟಗೇರಿ. ಭೂ, ನಿರ್ಮಾಣವಾಚಕ.

ಕಟಗೇರಿ ನಾರಾಯಣದೇವರ ದೇವಾಲಯದ ಮುಂಭಾಗದ ಗೋಡೆಗೆ ಸೇರಿಸಿರುವ (B.K. No, 151 of 1928–29, SII XV. 134) ಶಾಸನಲ್ಲಿ 'ಕಡಕೆಱೆ' ಎಂದಿದೆ. ಇದರಲ್ಲಿ "ಬಾಗಡೆಗೆ ನಾಡಿನ ಅಧಿಕಾರಿಯಾಗಿದ್ದ ಲೆಕ್ಕರಸ ಇವನ ಕೈಕೆಳಗಿನ ಅಧಿಕಾರಿ ಮಹಾದೇವ ದಂಡನಾಯಕನು

ಮಹಾಗ್ರಹಾರವಾದ ಕಡಕೆರೆಯ ಐನೂರ್ವರು ಮಹಾಜನರಿಗೆ ಹಂಗರಗೆ ಹನ್ನೆರಡು ನಾಡಿನಲ್ಲಿದ್ದ ನುಗ್ಗಿವಾಡ ಎಂಬ ಗ್ರಾಮವನ್ನು ಪಾರಮೇಶ್ವರ ದತ್ತಿಯಾಗಿ ಬಿಟ್ಟ ವಿಷಯ ಶಾಸನದಲ್ಲಿದೆ. ಮಹಾಗ್ರಹಾರವಾದ ಕಡಕೆರೆಯಲ್ಲಿ. ವಾರಿಚಾಸುರನು ಪ್ರತಿಷ್ಠೆ ಮಾಡಿದ ತ್ರೈಪುರುಷ ದೇವಾಲಯವಿತ್ತೆಂದು ಶಾಸನದಲ್ಲಿ ಹೇಳಿದೆ."[೭೩] ಇದರ ಕಾಲ ಕ್ರಿ.ಶ. ೧೧೭೮.

ಕಟಗೇರಿ ನಾರಾಯಣದೇವರ ದೇವಾಲಯದ ಮುಂಭಾಗದ ಗೋಡೆಗೆ ಸೇರಿಸಿರುವ (B.K.No. 149 of 1928–29 SII XV. 142) ಶಾಸನದಲ್ಲಿ 'ಕಡಕೆಱೆ', ಎಂದಿದೆ ಇದರಲ್ಲಿ "ವಿಕ್ಕಯ್ಯ (ವೀರ ವಿಕ್ರಮಾದಿತ್ಯದೇವ) ಇವನ ಮಹಾಪ್ರಧಾನ ಮಹಾದೇವ ದಂಡನಾಯಕ ಇವನು ಮಹಾಗ್ರಹಾರ ಹಾಗೂ ಬಣಂಜದಾದಿ ಪಟ್ಟಣವೆನಿಸಿದ್ದ ಕಡಕೆಱೆಗೆ ಬಂದಂತೆ ಶಾಸನ ತಿಳಿಸಿದೆ."[೭೪] ಇದರ ಕಾಲ ೧೧೭೬. ಕಟಗೇರಿ ಕೆ.ವಿ.ವಿ.ಎಸ್. ಹೈಸ್ಕೂಲ್ ಮುಂದೆ ನಿಲ್ಲಿಸಿರುವ ಇದು ಕ್ರಿಶ ೧೨ನೆಯ ಶತಮಾನದ ವೀರಗಲ್ಲು ಶಾಸನ 'ಕಡಕೆಱೆ' ಎಂದಿದೆ. ಇದರಲ್ಲಿ "ತಳಾರ ಸಂಕಯ್ಯೆಖ್ಯರು ಬಾದಾಮಿ ದಾರಿಯಲ್ಲಿ 'ಕಡಕೆರೆಯ' ಮಹಾಜನರ (ಕೋರಿಕೆಯಂತೆ) ಕಳ್ಳರೊಡನೆ ಕಾದಿ ಸತ್ತಾಗ ಅವರ ಧೈರ್ಯವನ್ನು ಮೆಚ್ಚಿದ ಮಹಾಜನರು ಭೂದಾನ ನೀಡಿದಂತೆ ಉಲ್ಲೇಖವಿದೆ,"[೭೫] ಶಾಸನಗಳಲ್ಲಿ 'ಕಡಕೆಱೆ' ಎಂದಿದ್ದರೂ ರೂಢಿಯಲ್ಲಿ 'ಕಟಗೇರಿ' ಎಂದು ಕರೆಯಲಾಗುತ್ತದೆ.

ಕಡಪಟ್ಟಿ : ಕಡೆಯ+ಪಟ್ಟಿ = ಕಡೆಯಪಟ್ಟಿ>ಕಡಪಟ್ಟಿ

ಜಮಖಂಡಿ ತಾಲೂಕಿನಲ್ಲಿ ಒಂದು ಕಡಪಟ್ಟಿ ಇದೆ. ದಿಗ್ವಾಚಕ.

ಕಬ್ಬಲಗೇರಿ : ಕಬ್ಬಲರ+ಕೇರಿ = ಕಬ್ಬಲಗೇರಿ

ಕಬ್ಬಲ = ಬೇಡ, ಬೆಸ್ತ, ಬೋಯಿ. ಬೇಟೆಗಾರರ ಊರು, ಬೇಡ ಜನಾಂಗ ಇಲ್ಲಿ ಹೆಚ್ಚಾಗಿರುವದು. ವೃತ್ತಿವಾಚಕ

ಕರಡಿಗುಡ್ಡ : ಕರಡಿಯ+ಗುಡ್ಡ = ಕರಡಿಗುಡ್ಡ

ಕಲಬಂದಕೇರಿ : ಕಲಬಂದ = ಕಲ್ಲಿನಿಂದ ಬಂದುಮಾಡಿದ, ಕಲ್ಲಿನಿಂದ ಕಟ್ಟಿದ.

ಕಲಬಂದದ+ಕೆರೆ = ಕಲಬಂದಕೆರೆ = ಕಲಬಂದಕೇರಿ

ರೂಢಿಯಲ್ಲಿ ಕಲಬಂದಕೇರಿ ಎಂದಾಗಿದೆ. ನಿರ್ಮಾಣವಾಚಕ.

ಕಲ್ಲಾಪೂರ : ಕಲ್ಲಪ್ಪನ = ಊರು = ಕಲ್ಲಾಪೂರ. ವ್ಯಕ್ತಿವಾಚಕ.

ಕರ್ಲಕೊಪ್ಪ : ಕರಲು = ಬಿರುಸಾದ ಎರೆಯ ಭೂಮಿ.

ಕರಲಿನ+ಕೊಪ್ಪ = ಕರಲಕೊಪ್ಪ>ಕರ್ಲಕೊಪ್ಪ. ಭೂಗುಣವಾಚಕ.

ಕಳಸ : ಕಳಸ = ಗುಡಿಗೋಪುರಗಳ ಮೇಲಿರುವ ಮಂಗಳಕರ ವಸ್ತು, ಕುಂಭಕ್ಕೂ 'ಕಳಸ' ಎನ್ನುವರು. ತೇರಿನ ಮೇಲ್ಭಾಗದ ತುದಿಯಲ್ಲಿಯೂ ಇದು ಇರುವುದು. ಶ್ರೇಷ್ಠತೆಯ ಸಂಕೇತ. ಇದು ಇದ್ದಂತಹ ಊರು. ಸಂಸ್ಕೃತಿ, ವಸ್ತುವಾಚಕ.

ದೊಡ್ಡ ಬಂಡೆಗಲ್ಲಿನಿಂದ ಕೂಡಿದ ಈ ಗುಡ್ಡದಲ್ಲಿ ಕರಡಿಗಳು ವಾಸವಾಗಿದ್ದು. ಅಲ್ಲಿ ಜನರೂ ವಾಸಮಾಡಿದ್ದರು. ಪರಿಣಾಮವಾಗಿ ಆ ಸ್ಥಳಕ್ಕೆ 'ಕರಡಿಗುಡ್ಡ' ಎಂದು ಕರೆದರು. ಪ್ರಾಣಿ, ಪ್ರಕೃತಿವಾಚಕ.

ಕಾಕನೂರು : ಕಾಕ = ಕಾಗೆ, ಕಾಕನ+ಊರು = ಕಾಕನೂರು.

ಕಾಗೆಗಳು ಹೆಚ್ಚಾಗಿರುವ ಊರು. ಪಕ್ಷಿ ವಾಚಕ.

ಕಾಟಾಪುರ : ಕಾಟಾ = ತಕ್ಕಡಿ

ಕಾಟಾದ+ಪುರ = ಕಾಟಾಪುರ

ತಕ್ಕಡಿಗಳನ್ನು ತಯಾರಿಸುವ ಊರು. ಕಾಟಪ್ಪನ ಊರು = ಕಾಟಾಪೂರ ಎಂದೂ ಆಗಬಹುದು. ವಸ್ತುವಾಚಕ.

ಕಾಡರಕೊಪ್ಪ : ಕಾಡರು = ಒಂದು ಜನಾಂಗ.

ಕಾಡರ+ಕೊಪ್ಪ= ಕಾಡರಕೊಪ್ಪ

ಕಾಡು ಜನಾಂಗ ಹೆಚ್ಚಾಗಿರುವ ಊರು. ಜನಾಂಗವಾಚಕ.

ಕಾತರಕಿ : ಕಾತರ = ಮುಳ್ಳು ಕಂಟಿ

ಇಕೆ>ಅಕೆ= ತದ್ಧಿತ ಪ್ರತ್ಯಯ

ಕಾತರ+ಇಕೆ = ಕಾತರಿಕೆ>ಕಾತರಕಿ

ಮುಳ್ಳು ಕಂಟಿಯಿಂದ ಕೂಡಿರುವ ಊರೇ ಕಾತರಕಿ. ಸಸ್ಯವಾಚಕ.

"ಕಾತರು ಎಂಬುದೊಂದು ಜನಾಂಗ? ಇಲ್ಲಿ ಕಾತರ+ಕೆಯ್ ಎಂಬ ರೂಪ 'ಕಾತರಕಿ' ಎಂದು ಸವಳಿಯಾಗಿರಬಹುದು. 'ಕೆಯ್' ಎಂಬುದು ಮಣ್ಣು, ನೆಲ, ಭೂಮಿಯನ್ನು ಸೂಚಿಸುತ್ತದೆ"[೨೬]

ಕಿತ್ತಲಿ : ಕಿತ್ತಡಿ = ಶಿವ. ಇದೇ ಕಿತ್ತಲಿ ಎಂದಾಗಿರಬೇಕು.

ಕುಟಕನಕೇರಿ : ಕುಟಿಕನ+ಕೇರಿ = ಕುಟಕನಕೇರಿ

ಕುಟಿಕ = ಕಲ್ಲು ಒಡೆಯುವವ (ಶಿಲ್ಪಿ)

ಇವನಿರುವ (ಶಿಲ್ಪಿ) ಊರು. ವೃತ್ತಿವಾಚಕ.

ಬನಶಂಕರಿ ದೇವಾಲಯದ ಕೇದಾರೇಶ್ವರ ಗುಡಿಯ ಪ್ರಾಕಾರದಲ್ಲಿರುವ (SII.XI-I. No. 60; ಬಾ ಸಾಂ ಅ 37) ಶಾಸನದಲ್ಲಿ 'ಕು[ಟು]ಗೆರಿ; ಎಂದಿದೆ. ಇದರಲ್ಲಿ "ಜಗದೇಕಮಲ್ಲನ ಸಾಮಂತ ದಾಸರಸನ ಮಾಂಡಳೀಕನಾದ ಪೆರ್ಗ್ಗಡೆ ಕೇತಿಮಯ್ಯ ಎಂಬುವವನು ಶಿಲಾಸ್ತಂಭವನ್ನು ಬನದ ದೇವಿಯ ಮುಂದೆ ನಿಲ್ಲಿಸಿದಂತೆ ಹೇಳಿದೆ."[೭೭] ಕ್ರಿ.ಶ. ೧೦೨೪.

ಕುಳಗೇರಿ : ಕುಳಿ = ತಗ್ಗು

ಕುಳಿಯಲ್ಲಿರುವ ಕೇರಿ= ಕುಳಿಗೇರಿ>ಕುಳಗೇರಿ. ಪ್ರದೇಶವಾಚಕ.

ಕೆಂದೂರು : ಕೆಚ್ಚನೆ+ಊರು = ಕೆಂದೂರು

ಕಂದುಬಣ್ಣದ ಊರು. ವರ್ಣವಾಚಕ.

ಕ್ರಿ.ಶ. ೫೯೫ ರ ಕಾಲದ ಮಹಾಕೂಟ ಸ್ತಂಭಶಾಸನ (I.A XIX.PP.16-18; ಬಾ ಸಾಂ ಅ. 4) ಶಾಸನದಲ್ಲಿ 'ಕೆನ್ದೂರ', ಎಂದಿದೆ. ಇದರಲ್ಲಿ "ಮಂಗಳೇಶನು ಮಕುಟೇಶ್ವರನಾಥನಿಗೆ ಕಿಸುವೊಳಲು ನಾಡಿನ ಕೆಂದೂರು ಮಾನ್ಯದ ನಂದಿಗ್ರಾಮವನ್ನು ದಾನ ನೀಡಿದಂತೆ ತಿಳಿಸುತ್ತದೆ."[೭೮]

ಕೆರಕಲಮಟ್ಟಿ : ಕೆರಕು+ಕಲ್ಲು = ಕೆರಕಲ್ಲು = ಹುರುಬುರುಕು ಕಲ್ಲು

ಕೆರಕಲ್ಲು+ಮಟ್ಟಿ = ಕೆರಕಲಮಟ್ಟಿ

ಕೆರಕು ಕಲ್ಲುಗಳು ಹೆಚ್ಚಾಗಿ ದೊರೆಯುವ ಊರು. ಶಿಲಾವಾಚಕ.

ಕೆರೂರು : ಕೆರೆಯ+ಊರು = ಕೆರೆಯೂರು>ಕೆರೂರು. ಜಲವಾಚಕ.

ಕೆಲವಡಿ : ೧. ಕೆಲ = ಪಕ್ಕ

ಕೆಲ+ವಾಡಿ = ಕೆಲವಾಡಿ>ಕೆಲವಡಿ. ಪಕ್ಕದ ಊರು. ದಿಗ್ವಾಚಕ.

ಕ್ರಿ.ಶ. ೧೦೫೩ರ ಗ್ರಾಮದ ದೇವಾಲಯದಲ್ಲಿ ಮುಂದಿನ ಕಾಂಪೌಂಡಿಗೆ ಸೇರಿಸಿರುವ (E.I.IV.p. 259) ಶಾಸನದಲ್ಲಿ 'ಕೆಳವಾಡಿ' ಎಂದಿದೆ. ಇದರಲ್ಲಿ "ಭೋಗದೇವರಸನು ಪಂಗರಗಿ ಹನ್ನೆರಡನ್ನು ಆಳುತ್ತಿರುತ್ತಾನೆ. ಇವನ ಮೈದುನ ಸುಪ್ಪರಸನು ಕೆಳವಾಡಿಯ ಕೆರೆಗೆ ೨೦ ಮತ್ತರು ಭೂಮಿಯನ್ನು ಮತ್ತು ಒಂದು ಮನೆಯ ನಿವೇಶನವನ್ನು ದಾನ ನೀಡಿದ ವಿಷಯ ಈ ಶಾಸನದಲ್ಲಿದೆ"[೭೯]

೨. ಕೆಳಗಿನವಾಡಿ = 'ಕೆಳವಾಡಿ' ಎನ್ನುವುದೇ ಸೂಕ್ತ.

ಕೈನಕಟ್ಟೆ : ಕೈನ-ಸೂಳೆ, ದಾಸಿ, ಪರಿಚಾರಿಕೆ.

ಕೈನ+ಕಟ್ಟೆ = ಕೈನಕಟ್ಟೆ.

ದಾಸಿ ಕುಳಿತುಕೊಳ್ಳುವ ಕಟ್ಟೆಯ ಊರು. ವ್ಯಕ್ತಿ. ನಿರ್ಮಾಣವಾಚಕ.

ಕೊಂಕಣಕೊಪ್ಪ : ಕೊಂಕಣದ+ಕೊಪ್ಪ= ಕೊಂಕಣಕೊಪ್ಪ

ಕೊಂಕಣ = ಪಶ್ಚಿಮದ ಭಾಗ. ಪಶ್ಚಿಮದಿಕ್ಕಿನ ಊರು. ದಿಗ್ವಾಚಕ ಸ್ವರೂಪವಾಚಕ.

ಕೊಟ್ನಳ್ಳಿ : ಕೊಟ್ಟನ+ಹಳ್ಳಿ = ಕೊಟ್ಟನಹಳ್ಳಿ>ಕೊಟ್ನಹಳ್ಳಿ>ಕೊಟ್ನಳ್ಳಿ. 'ಹ' ಲೋಪವಾಗಿದೆ.

ಕೊಟ್ಟ = ವ್ಯಕ್ತಿಯ ಅಂಕಿತನಾಮ. ವ್ಯಕ್ತಿವಾಚಕ.

ಕೋಟೆಕಲ್ಲು : ಕೋಟೆಯ+ಕಲ್ಲು = ಕೋಟೆಕಲ್ಲು. ನಿರ್ಮಾಣ, ನಿಸರ್ಗವಾಚಕ

"ಈ ಊರಿನಲ್ಲಿ ಬೆಟ್ಟಗಳು ಊರ ಸುತ್ತಮುತ್ತಲು ಇವೆ. ಅವುಗಳಲ್ಲಿ ಕಲ್ಲುಗಳು ಕೋಟೆಯಂತೆ ಊರನ್ನು ಸುತ್ತುವರೆದಿವೆ. ಆದ್ದರಿಂದ ಈ ಊರಿಗೆ ಕೋಟೆಕಲ್ಲು ಎಂದು ಕರೆಯುವರು"[೮೦]

ಖಾಜಿಬೂದಿಹಾಳ : ಖಾಜಿ–ಮುಸ್ಲಿಂರ ಗುರು. ಇವನು ಇರುವ ಬೂದಿಹಾಳವೇ ಖಾಜಿ ಬೂದಿಹಾಳ. ವ್ಯಕ್ತಿವಾಚಕ.

ಖಾನಾಪೂರ : ಖಾನಪ್ಪನ+ಊರು= ಖಾನಪ್ಪೂರ>ಖಾನಾಪೂರ. ವ್ಯಕ್ತಿವಾಚಕ.

ಖಾನಾಪೂರ ಎರಡು ಇವೆ. ಖಾನಾಪೂರ ಎಸ್.ಪಿ. ಮತ್ತು ಖಾನಾಪೂರ ಎಸ್.ಕೆ.

ಖ್ಯಾಡ : ಖೇಟ>ಖೇಡ = ಗ್ರಾಮ

ಖೇಡ>ಖ್ಯಾಡ. ವಸತಿವಾಚಕ.

ಶಾಸನಗಳಲ್ಲಿ 'ಖ್ಯಾಡ' ಎಂದೇ ಇದೆ ಉದಾ: 'ಬಾದಾಮಿ ದೇಶೀ ಖ್ಯಾಡಾಭಿದಂ ಪರ"[೮೧] ಎಂದಿದೆ.

ಗಂಗನ ಬೂದಿಹಾಳ : ಗಂಗನ+ಬೂದಿಹಾಳ = ಗಂಗನಬೂದಿಹಾಳ

ಗಂಗವ್ವನ+ಬೂದಿಹಾಳ>ಗಂಗನಬೂದಿಹಾಳ. ವ್ಯಕ್ತಿವಾಚಕ.

"ಈ ಊರಿನಲ್ಲಿ ಬಹಳ ವರ್ಷಗಳ ಹಿಂದೆ ಗಂಗಮ್ಮ ಎಂಬ ಸ್ತ್ರೀ ಇದ್ದಳು. ಈಕೆ ಊರಿಗೆ ಬಂದ ಜಂಗಮರನ್ನು, ಯೋಗಿಗಳನ್ನು, ಆಶ್ರಯ ಬೇಡಿ ಬಂದವರನ್ನು ಆದರದಿಂದ ಸತ್ಕರಿಸುತ್ತಿದ್ದಳು. ಅತಿಥಿಯಂತೆ ಕಾಣುತ್ತಿದ್ದಳು. ಕ್ರಮೇಣ ಅವಳ ಮನೆಯ ಸುತ್ತಲೂ ಮನೆಗಳು ಉಂಟಾದವು ಜನಸಂಖ್ಯೆ ಹೆಚ್ಚಾಯ್ತು ಆನಂತರ ಆಕೆ ತೀರಿದ ನಂತರವು ಅವಳ ಹೆಸರನ್ನು ಸೇರಿಸಿ ಬೂದಿಹಾಳವೆಂದು ಕರೆದರು"[೮೨] ಸ್ತ್ರೀ ಅಂಕಿತನಾಮ ಹೊಂದಿದೆ, ಇಲ್ಲಿ ಗಂಗವ್ವನ ಬೂದಿಹಾಳವೆಂಬುದು ಗಂಗನ ಬೂದಿಹಾಳವಾಗಿದೆ. ಗಂಗನ ಎಂಬುದು ಪುಲ್ಲಿಂಗವಾಚಕವಾಗಿದೆ.

ಗಿಡ್ಡನಾಯಕನಹಾಳ : ಗಿಡ್ಡ+ನಾಯಕ+ಹಾಳ = ಗಿಡ್ಡನಾಯಕನಹಾಳ

ಗಿಡ್ಡ = ಎತ್ತರದಲ್ಲಿ ಕುಳ್ಳನಾದ ವ್ಯಕ್ತಿ. ಗಿಡ್ಡನಾದ ವ್ಯಕ್ತಿಯು ಒಮ್ಮೆ ನಾಯಕನಾಗಿದ್ದ, ಅವನು 'ಗಿಡ್ಡ' ನಾಗಿದ್ದುದರಿಂದ ಈ ಹಳ್ಳಿಗೆ ಗಿಡ್ಡನಾಯಕನಹಳ್ಳಿ ಎಂದು ಕರೆಯಲಾಯಿತು.

ಗುಡ್ಡದ ಮಲ್ಲಾಪೂರ : ಮಲ್ಲಪ್ಪನ+ಊರು= ಮಲ್ಲಪ್ಪೂರ>ಮಲ್ಲಾಪೂರ

ಇದು ಗುಡ್ಡದ ವಾರಿಯಲ್ಲಿದೆ. ಇಲ್ಲಿ ಮಲ್ಲಪ್ಪನೆಂಬುವವ ಪ್ರಸಿದ್ಧನಾಗಿ ಹೋದವನು. ಆದ್ದರಿಂದ ಗುಡ್ಡದ ಮಲ್ಲಾಪೂರ ಎನ್ನುವರು. ಭೂಸ್ವರೂಪ ಹಾಗೂ ವ್ಯಕ್ತಿವಾಚಕ.

ಗುಬ್ಬೇರಕೊಪ್ಪ : ಗುಬ್ಬೇರರು= ಒಂದು ಜನಾಂಗ

ಗುಬ್ಬೇರರ+ಕೊಪ್ಪ= ಗುಬ್ಬೇರಕೊಪ್ಪ

ಈ ಜನಾಂಗವಿರುವ ಊರು. ಜನಾಂಗವಾಚಕ.

ಗುಳೇದಗುಡ್ಡ : ಗುಳೆ = ಸ್ಥಳಾಂತರ, ವಲಸೆ ಬರುವುದು.

ಗುಳೇಬಂದ+ಗುಡ್ಡ= ಗುಳೇದಗುಡ್ಡ. ಸಂಕೀರ್ಣ ಹಾಗೂ ಭೂಸ್ವರೂವಾಚಕ.

ಗೋನಾಳ : ಗೋವಿನ+ಹಾಳ = ಗೋವಿನಾಳ>ಗೋನಾಳ

ಗೋಸಂಸ್ಕೃತಿಯ ಊರು, ಪಶುಪಾಲನಾ ಊರು. ಪ್ರಾಣಿವಾಚಕ.

ಗೋವಣಕಿ : ಗೋವಿ = ಗೊಲ್ಲತಿ, ಗೋಪಿ.

ಯಾಣ = ಯಾನ = ಸಂಚಾರ

ಅಕ = ಪ್ರತ್ಯಯ

"ಇಮ್ಮಡಿ ಪೊಲೆಕೇಶಿಯು........ ದಾಮ ದೀಕ್ಷಿತನೆಂಬ ಬ್ರಾಹ್ಮಣನಿಗೆ 'ಗೋವಿಯಾಣಕ', ಎಂಬ ಗ್ರಾಮವನ್ನು ದಾನ ಮಾಡಿದನು"[೮೩] "ಗೋವಣರಸ = ಶಿಲಾಹಾರ ದೊರೆಗಳ ಹೆಸರು. ಈ ಶಿಲಾಹಾರ ರಾಜಮನೆತನದಲ್ಲಿ ಆಗಿಹೋದ ವ್ಯಕ್ತಿಗಳಲ್ಲಿ ಮೂರು ಜನ ವಂಶಾವಳಿಯಲ್ಲಿ – ಗೋವಣರಸರಿದ್ದಾರೆ"[೮೪] ಗೋವಣ+ಅಕೆ = ಗೋವಣಿಕೆ. ಗೋವಣನು ಎಂಬ ವ್ಯಕ್ತಿ ನೆಲೆಸಿರುವ ಸ್ಥಳವೇ ಗೋವಣಕಿ.

ಗೋವನಕೊಪ್ಪ : ಗೋವುಗಳು ಹೆಚ್ಚಾಗಿರುವ ಕೊಪ್ಪ. ಗೋವಿನ+ಕೊಪ್ಪ = ಗೋವಿನಕೊಪ್ಪ> ಗೋವನಕೊಪ್ಪ. ಗೋಪಿಯರು, ಗೊಲ್ಲತಿಯರು ಸಂಚರಿಸುವ ಸ್ಥಾನ, ಗೋವಿಯಾಣಕ. ವ್ಯಕ್ತಿವಾಚಕ.

ಚಿಂಚಲಕಟ್ಟೆ : ಚಿಂಚ = ಹುಣಸೆಗಿಡ

ಹುಣಸೆಗಿಡಕ್ಕೆ ಕಟ್ಟೆಯ ಊರು, ಚಿಂಚಲಕಟ್ಟೆ, ಸಸ್ಯ, ನಿರ್ಮಾಣವಾಚಕ.

ಚಿಮ್ಮನಕಟ್ಟೆ : ಚಿಮ್ಮ = ಒಬ್ಬ ವ್ಯಕ್ತಿ

ಚಿಮ್ಮನ+ಕಟ್ಟೆ= ಚಿಮ್ಮನಕಟ್ಟೆ>ಚಿಮ್ಮನಕಟ್ಟೆ. ವ್ಯಕ್ತಿವಾಚಕ

ಚಿಮ್ಮಲಗಿ : ಚಿಮ್ಮು= ನೀರಿನ ಬುಗ್ಗೆ, ಸೆಲೆ, ಚಿಲುಮೆ

ಇಗೆ>ಅಗಿ= ಉಳ್ಳುದು

ನೀರಿನ ಸೆಲೆ(ಬುಗ್ಗೆ) ಇರುವಂತಹ ಊರು. ನಿಸರ್ಗವಾಚಕ.

ಚಿರ್ಲಕೊಪ್ಪ : ಚೀರಲಿನ+ಕೊಪ್ಪ = ಚೀರಲಕೊಪ್ಪ>ಚಿರ್ಲಕೊಪ್ಪ

ಚೀರಲ = ತಗ್ಗುದಿನ್ನೆ

ತಗ್ಗುದಿನ್ನೆಗಳಿಂದ ಕೂಡಿದ ಊರು. ಭೂಸ್ವರೂಪವಾಚಕ.

ಚೊಳಚಗುಡ್ಡ : ಚೊಳಚಿ>ತುಳಸಿ

ತುಳಸಿ = ಇದು ಒಂದು ಬಗೆಯ ಸಸ್ಯ

ತೊಳಚಿಯಗುಡ್ಡ>ಚೊಳಚಗುಡ್ಡ. ಸಸ್ಯ, ಭೂಸ್ವರೂಪವಾಚಕ.

ಈ ಊರಿನ ಸುತ್ತ ಮುತ್ತ ಗುಡ್ಡ ಇದೆ. ಈ ಗುಡ್ಡದಲ್ಲಿ ಸಾಕಷ್ಟು ಚೊಳಚಿ ಗಿಡ ಬೆಳೆದಿರುವದರಿಂದ ಚೊಳಚಗುಡ್ಡ ಎಂದು ಕರೆದಿದ್ದಾರೆ.

ಜಂಗವಾಡ : ಜಂಗು = ಜಂಗಮರು ಕಣಕಾಲಲ್ಲಿ ಕಟ್ಟಿಕೊಳ್ಳುವ, ಎತ್ತು ಮುಂತಾದವುಗಳ ಕೊರಳಲ್ಲಿ ಕಟ್ಟುವ ಹಿತ್ತಾಳೆಯ ಗೆಜ್ಜೆ, ಯುದ್ಧ, ಸೈನ್ಯ.

೧. ಜಂಗಮರ+ಬಾಡ = ಜಂಗಮವಾಡ>ಜಂಗವಾಡ

೨. ಜಂಗಿನ+ಬಾಡ = ಜಂಗಬಾಡ>ಜಂಗವಾಡ. ಲೋಹವಾಚಕ.

ಜಕನೂರು : ಜಕ್ಕ = ಒಬ್ಬ ವ್ಯಕ್ತಿ

ಜಕ್ಕನ+ಊರು = ಜಕ್ಕನೂರು>ಜಕನೂರು. ವ್ಯಕ್ತಿವಾಚಕ.

ಜಮ್ಮನಕಟ್ಟೆ : ಜಮ್ಮ = ಒಬ್ಬ ವ್ಯಕ್ತಿ

ಜಮ್ಮನ+ಕಟ್ಟೆ = ಜಮ್ಮನಕಟ್ಟೆ

ಜಮ್ಮನು ಕಟ್ಟಿಸಿದ ಕಟ್ಟೆಯ ಊರು. ವ್ಯಕ್ತಿವಾಚಕ.

ಜಲಗೇರಿ : ಜಲ = ನೀರು

ಕೇರಿ = ಊರು

ಜಲ+ಕೇರಿ>ಜಲಗೇರಿ. ಜಲವಾಚಕ.

"ಬಹು ಹಿಂದಿನ ಕಾಲದಲ್ಲಿ ಮಳೆಯಪ್ಪ ಎಂಬ ದೇವಮಾನವ ಈ ಪ್ರದೇಶಕ್ಕೆ ಬಂದಿದ್ದ. ಇಲ್ಲಿಯ ಜನ ಅವನನ್ನು ಭಕ್ತಿ ಭಾವದಿಂದ ಕಂಡು ಗೌರವಿಸಿದರು. ಇದರಿಂದ ಸಂಪ್ರೀತಗೊಂಡ ಮಳೆಯಪ್ಪ ಊರನ್ನು ಕುರಿತು ಈ ಪ್ರದೇಶವು ಬರದಿಂದ ಎಂದೂ ಬಳಲದಿರಲಿ, ಸದಾ ಮಳೆ ಸುರಿಯುತ್ತಾ 'ಜಂಬಲ ನೀರಿನ ಗಡ್ಡೆಯಾಗಿ ಮಾರ್ಪಡಲಿ' ಎಂದು ವರವನ್ನಿತ್ತು ಆಶೀರ್ವದಿಸಿದನು. ಅಂದಿನಿಂದ ಜಲ ಮತ್ತು ವನ್ಯ ಸಂಪತ್ತು ಸಮೃದ್ಧಿ ಹೊಂದಿ ಇಂದಿನವರೆಗೂ ನೀರಿಗಾಗಿ ಬವಣೆಪಟ್ಟ ಉದಾಹರಣೆಗಳಿಲ್ಲ, ಮಳೆಯಪ್ಪನ ಆಶೀರ್ವಾದವಾದಾಗಿನಿಂದ ಜಲಸಂಗ್ರಹವಾದ ಪ್ರದೇಶಕ್ಕೆ 'ಜಲಕೇರಿ', ಎಂಬ ಹೆಸರು."[೮೫] ಜಲಕೇರಿ>ಜಲಗೇರಿ ಮಳಿಯಪ್ಪನಕ್ಕಿಂತಲೂ ಹಿಂದೆ ಈ ಊರು ಇದ್ದಿತು.

ಜಾಲಿಹಾಳ : ಜಾಲಿ–ಮುಳ್ಳುಗಳುಳ್ಳ ಸಸ್ಯ,

ಜಾಲಿಯ+ಹಾಳ = ಜಾಲಿಹಾಳ, ಈ ಸಸ್ಯ ಹೆಚ್ಚು ಬೆಳೆಯುವ ಹಳ್ಳಿ. ಸಸ್ಯವಾಚಕ.

ಇನ್ನೊಂದು ಬಿ.ಎನ್.ಜಾಲಿಹಾಳವಿದೆ.

ಡಾಣಕಶಿರೂರು : ದಾನಕೊಟ್ಟ ಸಿರಿಯೂರು, ದಾನಕಸಿರಿಯೂರು.

ಸಿರಿವೂರು = ಸಿರಿ, ಸಂಪತ್ತಿನಿಂದ, ಸಮೃದ್ಧಿಯಿಂದ ಕೂಡಿದ ಊರು, ದಾನಕ+ಸಿರಿವೂರು = ದಾಣಕಸಿರಿವೂರು>ಡಾಣಕಶಿರೂರು, ಧಾನ್ಯಗಳನ್ನು ಹೆಚ್ಚುಬೆಳೆಯುವ, ಸಮೃದ್ಧನಾಡು, "ದಾಣಕ ಸಿರಿವೂರನ್ನು ಬನದೇವಿಗೆ ದಾನವಾಗಿ ನೀಡಿದ್ದನ್ನು ಬನಶಂಕರಿ ದೇವಾಲಯದ ಪ್ರಾಕಾರದ ಕಂಬದ ಮೇಲಿರುವ ಶಾಸನ ತಿಳಿಸುವುದು"[೮೬] ಇದರ ಕಾಲ ಕ್ರಿ.ಶ. ೧೫೪೪. ಸಾಂಸ್ಕೃತಿಕ ವಾಚಕ

ಕ್ರಿ.ಶ. ೧೬ನೆಯ ಶತಮಾನದ ಡಾಣಕ ಶಿರೂರು ಊರಿಗೆ ಒಂದು ಫರ್ಲಾಂಗು ದೂರದಲ್ಲಿ ಮಣ್ಣೇರಿಗೆ ಹೋಗುವ ದಾರಿಯಲ್ಲಿ ಬಿದ್ದಿರುವ (B.K. NO. 144 Of 1928–29; SII. XV. 709) ಶಾಸನದಲ್ಲಿ 'ಡಾಣಕ ಸಿರುಉರ; ಎಂದಿದೆ. ಇದರಲ್ಲಿ "ಡಾಣಕ ಸಿರುಉರದ ನಾಡಗೌಡನಾದ ತಿಂಮರಸನು ತರವಾರಪೆಟ..... ಎಂಬುವನಿಗೆ ಹೊಲವನ್ನು ದಾನ ನೀಡಿದ ಉಲ್ಲೇಖವಿದೆ"[೮೭]

ತಪ್ಪಸಕಟ್ಟೆ : ತಪಸಿನ+ಕಟ್ಟೆ = ತಪಸ್ಸಕಟ್ಟೆ>ತಪ್ಪಸಗಟ್ಟೆ

ಈ ಊರಿನ ಪಕ್ಕದಲ್ಲಿ ಗುಡ್ಡವಿದೆ. ಅಲ್ಲಿ ಋಷಿ ಮುನಿಗಳು ತಪಸ್ಸಿನಲ್ಲಿ ನಿರತರಾಗುತ್ತಿದ್ದರು ಹಾಗಾಗಿ ತಪ್ಪಸಕಟ್ಟೆ ಎಂದು ಕರೆಯುವರು.

ತಮಿನಾಳ : ತಮ್ಮನ+ಹಾಳ = ತಮ್ಮನಹಾಳ>ತಮ್ಮನಾಳ>ತಮಿನಾಳ. ಸಂಬಂಧವಾಚಕ.

ತಳಕವಾಡ : ತಳುಕು, ತಳಕು = ಒಂದಕ್ಕೊಂದು ಹೊಂದಿಕೊಂಡಿರುವುದು.

ಹೆಣೆದುಕೊಂಡಿರುವದು, ಪರಸ್ಪರ ಸಂಬಂಧ. ತಳಕಿನ+ಬಾಡ = ತಳಕವಾಡ.

ಕೆಲವು ಹಳ್ಳಿಗಳು ಕೂಡಿ ಆದ ಊರು.

ತಿಮ್ಮಸಾಗರ : ತಿಮ್ಮನ+ಸಾಗರ = ತಿಮ್ಮಸಾಗರ. ವ್ಯಕ್ತಿ ಹಾಗೂ ಜಲವಾಚಕ.

ತಿಮ್ಮಾಪೂರು : ತಿಮ್ಮಪ್ಪನ+ಊರು = ತಿಮ್ಮಪ್ಪೂರು>ತಿಮ್ಮಾಪೂರು.

ತಿಮ್ಮಪ್ಪನೆಂಬ ವ್ಯಕ್ತಿಯಿಂದ ಪ್ರಸಿದ್ಧವಾದ ಊರು. ವ್ಯಕ್ತಿವಾಚಕ.

ತೊಗುಣಸಿ : ತೊಕ್ಕು = ಹುಣಸಿಕಾಯಿಯ ಚಟ್ನಿ.

ಹುಣಸೆ = ಒಂದು ಬಗೆಯ ಹುಳಿ ಹಣ್ಣು.

ತೊಕ್ಕು+ಹುಣಸಿ = ತೊಕ್ಕುಣಸಿ>ತೊಗುಣಸಿ>ತೂಗುಣಸಿ

ಪದಾರ್ಥ ಹಾಗೂ ಸಸ್ಯವಾಚಕ.

ತೆಗ್ಗಿ : ತೆಗ್ಗು = ತಗ್ಗು, ಕುಣಿ, ಗುಂಡಿ.

ತಮತಟ್ಟೆಗಿಂತ ಕೆಳಗಿರುವುದು.

ಇ = ಇರುವ ಎಂಬ ಅರ್ಥಕೊಡುವ ತದ್ಧಿತ ಪ್ರತ್ಯಯ.

ತಗ್ಗಾದ ಪ್ರದೇಶದಲ್ಲಿ ಈ ಊರು ಇರುವುದರಿಂದ ಇದಕ್ಕೆ ತೆಗ್ಗಿ ಎನ್ನುವರು.

ಭೂಸ್ವರೂಪವಾಚಕ.

ನಂದಿಕೇಶ್ವರ : ನಂದಿಕಾ+ಈಶ್ವರ = ನಂದಿಕೇಶ್ವರ.

ಪ್ರಾಣಿ, ದೈವವಾಚಕ.

"ಕ್ರಿ.ಶ. ೭ನೆಯ ಶತಮಾನದ ನಂದಿ ವಿಗ್ರಹ ಇದೆ. ನಂದಿ (ಬಸವ) ಕಲ್ಲಿನ ಮೂರ್ತಿ. ಆ ನಂದಿ ಇದ್ದುದರಿಂದ ಆ ಸ್ಥಳಕ್ಕೆ ನಂದಿಕೇಶ್ವರ ಎಂದು ಕರೆಯುವರು"[೮೮] ಕ್ರಿ.ಶ. ೫೯೫ರ ಮಹಾಕೂಟ

ಸ್ತಂಭಶಾಸನ (I.A.XIX.pp.16 18; ಬಾ.ಸಾಂ.ಅ.೪) ಈ ಶಾಸನದಲ್ಲಿ 'ನನ್ದಿಗ್ರಾಮ', ಎಂದಿದೆ. ಇದರಲ್ಲಿ "ಮಂಗಳೇಶನನ್ನು ಹೊಗಳಿದೆ. ಮಂಗಳೇಶ ಮಕುಟೇಶ್ವರ ನಾಥನಿಗೆ ಕಿಸುವೊಳಲು ನಾಡಿನ, ಕೆಂದೂರು ಮಾನ್ಯದ ನಂದಿಗ್ರಾಮವನ್ನು (ಈಗಿನ ನಂದಿಕೇಶ್ವರ) ದಾನ ನೀಡಿದಂತೆ ತಿಳಿಸುತ್ತದೆ."[೮೯] ಕ್ರಿ.ಶ. ೬೩೩ರ ಮಹಾಕೂಟ ದೇವಾಲಯದ ಆವರಣದಲ್ಲಿರುವ ಸಂಗಮೇಶ್ವರ ದೇವಾಲಯದ ಎಡಭಾಗದ ಕಂಬದ ಮೇಲೆ (I.A.X, 104; B.K No 36 of 1938–39; SII XX. 280; ಬಾ.ಸಾಂ.ಅ. ೩೧) ನನ್ದಿಕೇಸರ ಎಂದಿದೆ. ಇದರಲ್ಲಿ "ಬಪ್ಪವರಸನೆಂಬುವವನು ಮಂಗುಡಕ್ಕೆ (ಮಹಾಕೂಟ) ಬಂದಾಗ ನಂದಿಕೇಶ್ವರ ಮತ್ತು ನೆಲ್ಲುಗೆ ಎಂಬ ಎರಡು ಗ್ರಾಮಗಳನ್ನು ದಾನ ಬಿಟ್ಟಂತೆ ಹೇಳಿದೆ."[೯೦]

ಕ್ರಿ.ಶ.ಸು. ೫೭೮ರ ಬಾದಾಮಿಯ ಮೂರನೆಯ (ವೈಷ್ಣವ) ಗುಹಾಲಯದ ಪಶ್ಚಿಮದಿಕ್ಕಿನ ಹೊರಗೋಡೆಯ (I A X 82. P. 59–60; ಬಾ.ಸಾಂ.ಅ. 2) ಶಾಸನದಲ್ಲಿ "ಲಂಜಿಗೇಸರ; ಎಂಬ ಗ್ರಾಮವನ್ನು ಮಂಗಲೇಶನು ಗವಿದೇವಾಲಯಕ್ಕೆ (ಕಲ್ಮನೆ) ದಾನ ನೀಡಿದ ವಿವರಣೆವಿದೆ."[೯೧]

ನರಸಾಪೂರು : ನರಸಪ್ಪನ+ಊರು = ನರಸಾಪೂರು. ವ್ಯಕ್ತಿವಾಚಕ

ನರೇನೂರು : ನರಿಗಳು ಹೆಚ್ಚಾಗಿ ವಾಸವಾಗಿರುವ ಊರು. ಪ್ರಾಣಿವಾಚಕ.

ನರಿಯ = ಒಬ್ಬ ವ್ಯಕ್ತಿ.

ನರಿಯನ+ಊರು = ನರಿಯನೂರ>ನರೇನೂರ.

ನವಿಲುಹೊಳೆ : ನವಿಲಿನ+ಹೊಳೆ = ನವಿಲುಹೊಳೆ

ಈ ಪ್ರದೇಶದಲ್ಲಿ ಮಲಪ್ರಭಾ ಹೊಳೆ (ನದಿ) ಹರಿದಿದೆ. ಸುಂದರವಾದ ಸಮೃದ್ದವಾದ ಹಾಗೂ ಗುಡ್ಡ ಗಿಡಗಳಿಂದ ಕೂಡಿದ ಪ್ರದೇಶವಿದೆ. ಈ ಪ್ರದೇಶದಲ್ಲಿ ನವಿಲುಗಳು ವಾಸವಾಗಿವೆ. ಹಾಗಾಗಿ ನವಿಲುಹೊಳೆ ಎನ್ನುವರು. ಜಲ, ಪಕ್ಷಿವಾಚಕ.

ನಸಗುನ್ನಿ : ನಸಗುನ್ನಿ = ಇದೊಂದು ಸಸ್ಯ

ಈ ಸಸ್ಯ ಹೆಚ್ಚಾಗಿ ಬೆಳೆಯುವ ಊರು. ಸಸ್ಯವಾಚಕ.

ನಾಗನೂರ : ನಾಗನ+ಊರು = ನಾಗನೂರು. ವ್ಯಕ್ತಿವಾಚಕ.

ನಾಗರಾಳ : ನಾಗರು = ಒಂದು ಜನಾಂಗ

ನಾಗರ+ಹಾಳ = ನಾಗರಹಾಳ>ನಾಗರಾಳ

ಈ ಜನಾಂಗ ಹೆಚ್ಚಾಗಿರುವ ಹಳ್ಳಿ ನಾಗರಾಳ. ಜನಾಗವಾಚಕ.

ನಾಗರಾಳ ಎರಡು ಇವೆ. ನಾಗರಾಳ ಎಸ್.ಪಿ. ಮತ್ತು ನಾಗರಾಳ ಎಸ್.ಬಿ.

ನೀರಲಕೇರಿ : ನೀರಲ+ಕೇರಿ = ನೀರಲಕೇರಿ

ನೀರಲು = ಹಣ್ಣು ಕೊಡುವ ಗಿಡ.

ನೀರಲು ಗಿಡಗಳು ಹೆಚ್ಚು ಬೆಳೆಯುವ ಊರು. ಸಸ್ಯವಾಚಕ.

ನೀರಲಗಿ : ನೀರಲ = ಒಂದು ಸಸ್ಯಜಾತಿ.

ನೀರಲ+ಗಿ = ನೀರಲಗಿ

ನೀರಲ ಗಿಡಗಳು ಹೆಚ್ಚು ಬೆಳೆಯುವ ಊರು. ಸಸ್ಯವಾಚಕ.

ನೀರಬೂದಿಹಾಳ: ನೀರ+ಬೂದಿ+ಹಾಳ = ನೀರಬೂದಿಹಾಳ. ಜಲವಾಚಕ.

"ತಗ್ಗು ಪ್ರದೇಶ ಇರುವದರಿಂದ ಮಳೆಯ ನೀರು ಸಾಕಷ್ಟು ಹರಿದು ಬಂದು ಸಂಗ್ರಹವಾಗಿತ್ತದೆ. ನಿಂತ ನೀರು ಬೂದಿ ರೂಪದಲ್ಲಿ ಕಾಣುತ್ತಿದ್ದರಿಂದ ನೀರಬೂದಿಹಾಳವಾಗಿದೆ."[೬೨]

ನೀಲಗುಂದ : ೧. ನೀಲ = ನೀಲಿ ಬಣ್ಣ

ಕುಂದ>ಗುಂದ – ಗುಡ್ಡ

ನೀಲಿ (ಕಪ್ಪು) ಬಣ್ಣದ ಭುಮಿಯ ಗುಡ್ಡಗಳ ಪಕ್ಕದಲ್ಲಿರುವ ಊರು = ನೀಲಗುಂದ

೨. ನೀಲ = ಹೆಸರು

ಕುಂದ = ಗುಡ್ಡ

ನೀಲ+ಕುಂದ = ನೀಲಗುಂದ. ಪ್ರಕೃತಿ, ವ್ಯಕ್ತಿವಾಚಕ.

"ಈ ಪ್ರದೇಶದಲ್ಲಿ ಗುಡ್ಡವಿದೆ. ಈ ಗುಡ್ಡದ ಕಲ್ಪಡಿಯಲ್ಲಿ ನೀಲ ಎನ್ನವ ರಾಕ್ಷಸ ವಾಸವಾಗಿದ್ದ. ಈತ ಜನರಿಗೆ ಉಪಟಳ ನೀಡುತ್ತಿದ್ದ. ಇವನಿಂದ ಈ ಊರಿಗೆ ಹೆಸರು ಬಂದಿದೆ."[೬೩]

ನೆಲುವಿಗೆ : ನೆಲ್ಲು = ಬತ್ತ

ನೆಲ್ಲು+ಇಗೆ = ನೆಲ್ಲುವಿಗೆ>ನೆಲುವಿಗೆ

ನೆಲುವಿಗೆ = ಭತ್ತಬೆಳೆಯುವ ಪ್ರದೇಶ. ಈಗಲೂ ಬತ್ತವನ್ನು ಬೆಳೆಯುವರು. ಸಸ್ಯವಾಚಕ.

ಕ್ರಿ.ಶ. ೯೩೩ರ ಶಾಸನ. ಮಹಾಕೂಟದ ಸಂಗಮೇಶ್ವರ ದೇವಾಲಯದ ಎಡಭಾಗದ ಕಂಬದ ಮೇಲೆ ಇರುವ ಶಾಸನದಲ್ಲಿ 'ನೆಲ್ಲುಗೆ' ಎಂದು ಉಲ್ಲೇಖವಿದೆ. ಇದರಲ್ಲಿ "ಬಪ್ಪುವರಸನೆಂಬುವವನು ಮಂಗುಡಕ್ಕೆ ಬಂದಾಗ ನಂದಿಕೇಶ್ವರ ಮತ್ತು ನೆಲ್ಲುಗೆ ಎಂಬ ಎರಡು ಗ್ರಾಮಗಳನ್ನು ದಾನ ಬಿಟ್ಟ ವಿವರಣೆ ಇದೆ."[೯೪]

ನೆಲ+ಆಗಿ = ನೆಲವಗಿ>ನೆಲವಿಗಿ.

ಈ ಪ್ರದೇಶದ ಜನರು ದೇವಾಲಯದ ಹಾಗೂ ಇತರ ಕಟ್ಟಡಗಳಿಗೆ ತಳಪಾಯ ಹಾಕುವಲ್ಲಿ ನಿಪುಣರಾಗಿದ್ದರು. ಬಾದಾಮಿಯ ಚಾಲುಕ್ಯ ಅರಸನಾದ ಮಂಗಲೇಶನು ಮಹಾಕೂಟದಲ್ಲಿ ದೇವಾಲಯಗಳನ್ನು ನಿರ್ಮಿಸುವಲ್ಲಿ ನೆಲ ಅಗಿಯಲು, ತಳಪಾಯ ಹಾಕಲು ಈ ಪ್ರದೇಶದ ಜನರನ್ನು ನೇಮಿಸಿದ್ದನು. ಆದ್ದರಿಂದ ಈ ಜನತೆ ಇರುವ ಗ್ರಾಮಕ್ಕೆ ನೆಲ ಅಗಿಯುವವರ ಗ್ರಾಮವೆನ್ನುತ್ತಿದ್ದರು. ಇದೊಂದು ಕಟ್ಟು ಕಥೆ.

ಪಟ್ಟದಕಲ್ಲು : ಪಟ್ಟದ+ಕಲ್ಲು = ಪಟ್ಟದಕಲ್ಲು. ಶಿಲಾ, ಸಂಸ್ಕೃತಿವಾಚಕ.

"ಪಟ್ಟದಕಲ್ಲು ಪಾಪನಾಥ ದೇವಾಲಯದ ಸಮೀಪದ ಹೊಲದಲ್ಲಿ ನೆಟ್ಟಿರುವ (B.K. NO. 173 of 1928–29; SII.XI.I. 110; ಫ.ಗು. 30) ಶಾಸನದಲ್ಲಿ 'ಕಿಸುವೊಳಲ್' ಎಂದಿದೆ. ಇದರಲ್ಲಿ ಸಿಂಗಣದೇವನು ಮಹಾ ವೀರಸಿಂಹಾಸನವಾದ, ಚಾಲುಕ್ಯ ಪಟ್ಟಬಂಧೋತ್ಸವ ನಡೆಯುವ ಸಕಳ ಪಟ್ಟಣಗಳ ಅಧಿಪತಿಯಂತಿದ್ದ ಕಿಸುವೊಳಲ ಮೂಲಸ್ಥಾನದ ಮಹಾದೇವರ ಸೇವೆಗಾಗಿ ಸರ್ವಬಾಧಾಪರಿಹಾರವಾಗಿ ೧೨ ಮತ್ತರ ಭೂಮಿಯನ್ನು ದಾನವಾಗಿ ಬಿಡುವ ವಿವರಣೆವಿದೆ"[೯೫] ಇದರ ಕಾಲ ೧೦೭೦. ಕ್ರಿ.ಶ. ೧೧೬೩ರ ಸಂಗಮೇಶ್ವರ ದೇವಾಲಯದ ಮಂಟಪದ ಗೋಡೆಗೆ ಒರಗಿಸಿರುವ ಶಿಲಾಸಾಸನ (J.B.B.R.A. S.XI. P. 359; A.B.A.P. 136; ಫ.ಗು 22) ಶಾಸನದಲ್ಲಿ 'ಪಟ್ಟದಕಿಸುವೊಳಲ್' ಎಂದಿದೆ. ಇದರಲ್ಲಿ 'ಪಟ್ಟದಕಲ್ಲಿಗೆ' ಕಿಸುವೊಳಲ್ಲ ಎಂಬ ಹೆಸರಿದ್ದು........ ನೃಗ, ನಹುಶ, ನಳ, ಪುರೂರವರಾದಿಯಾಗಿ ರಾಜರು ಇಲ್ಲಿ ಪಟ್ಟಬಂಧವನ್ನು ತಳೆದಿದ್ದಾರೆ ಎಂದು ಉಲ್ಲೇಖವಿದೆ."[೯೬] ಇದು ಅತಿರಂಜಿತ.

"ಪ್ರಸಿದ್ಧ ರಾಜಮನೆತನಗಳಾದ ಮೌರ್ಯ, ಚಾಲುಕ್ಯ, ಕದಂಬ ರಾಜರುಗಳನ್ನು ಪಟ್ಟಾಭಿಷೇಕ ಮಾಡಿದ್ದರಿಂದ, ಪಟ್ಟಗಟ್ಟುವ ಕಲ್ಲು ಎಂಬುದು ಪಟ್ಟದಕಲ್ ಎಂದಾಗಿದೆ"[೯೭] ಕ್ರಿ.ಶ. ೧೦೭೦ರಲ್ಲಿ ಕಿಸುವೊಳಲ್ ಹಾಗೂ ಕ್ರಿ.ಶ. ೧೧೬೩ರಲ್ಲಿ ಪಟ್ಟದಕಿಸುವೊಳಲ್, ಪಟ್ಟಶಿಲಾಪುರ, ರಕ್ತಪುರವೆಂದು ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಪಟ್ಟದಕಲ್ಲನ್ನು ಕರೆಯಲಾಗಿದೆ.

[illegible]

ಕವಿರಾಜ ಮಾರ್ಗದ ಕಾಲದಲ್ಲಿ ಇದು ಕಿಸುವೊಳಲ್ ಆಗಿತ್ತು. ತಿರುಳ್ಗನ್ನಡ ನಾಡನ್ನು ಕಿಸುವೊಳಲ್, ಕೊಪಣ, ಪುಲಿಗೆರೆ ಮತ್ತು ಒಕ್ಕುಂದ ಈ ಊರುಗಳಿಂದಲೇ ಗುರುತಿಸಲಾಗಿದೆ. ಚಾಲುಕ್ಯ ಅರಸರು ಅಲ್ಲಿ ಪಟ್ಟಗಟ್ಟಿಸಿಕೊಂಡಿದ್ದರಿಂದ ಪಟ್ಟದ ಕಿಸುವೊಳಲಾಯಿತು. ಕೇಶಿರಾಜನು ಹೇಳಿರುವ ಸಮಸಂಸ್ಕೃತ ಶಬ್ದಗಳಲ್ಲಿ 'ಪಟ್ಟ'ವೂ ಒಂದು. ಅಂತೆಯೆ, ಪಟ್ಟದ ಕಿಸುವೊಳಲ್ ಇದನ್ನು ಪಟ್ಟಶಿಲಾಪುರವೆಂದು, ಕಿಸುವೊಳಲ್ ಇದನ್ನು ರಕ್ತಪುರವೆಂದು ಸಂಸ್ಕೃತೀಕರಣಗೊಳಿಸಲಾಗಿದೆ.

ಕೆಚ್ಚನೆ>ಕಿಸು–ಕೆಂಪು, ರಕ್ತವರ್ಣ.

ಪರ್ವತಿ : ಪರ್ವತ>ಪರ್ವತಿ. ನಿಸರ್ಗವಾಚಕ

"ಐಹೊಳೆಯ ಹನುಮಂತ ದೇವರನ್ನು ಐಹೊಳೆ ಜನರು ಮಲಾಪಹಾರಿ ನದಿಯಲ್ಲಿ ಬಿಸಾಕಿದರು. ಕಾರಣ ಅಂದು ಪರಕೀಯರು ದೇವಸ್ಥಾನಗಳನ್ನು ಧ್ವಂಸ ಮಾಡುವುದು ಸಾಮಾನ್ಯವಾಗಿತ್ತು. ನೀರಿನ ಸೆಳೆತದಿಂದ ಮೂರ್ತಿ ಲಾಯದಗುಂದಿ ಹತ್ತಿರ ಹೊಳೆದಡಕ್ಕೆ ಬಂದಿತ್ತು. ಜನರು ಅದನ್ನು ಲಾಯದಗುಂದಿಗೆ ಸಾಗಿಸುವಾಗ ಮಧ್ಯದಲ್ಲಿ ಪರ್ವತ ಹತ್ತಿತು. ಪರ್ವತದ ಬಳಿ ಬರುವಾಗ ಮತ್ತೆ ಪರಕೀಯರು ಬರುವ ಸುದ್ದಿ ತಿಳಿದು ಹನುಮಂತನ ಮೂರ್ತಿಯನ್ನು ಅಲ್ಲೇ ಬೋರಲು ಹಾಕಿ ಹೋದರು. ಸ್ವಲ್ಪ ದಿನಗಳ ನಂತರ ಪೇಶ್ವೆಯ ಸೈನ್ಯ ಈ ಮೂರ್ತಿ ಇರುವ ಮಾರ್ಗದ ಮೂಲಕ ಶಿಮೊಗ್ಗದ ಕಡೆಗೆ ಹೊರಟಿತ್ತು. ಆಗ ಮೂರ್ತಿ ಇರುವಲ್ಲಿ ಒಂದು ಕುದುರೆ, ಒಮ್ಮೆಲೆ ಕುಸಿದು ಬಿದ್ದಿತು. ಗಾಬರಿಯಾದ ಸವಾರ ಕೆಳಗಿಳಿದು. ಕುದುರೆ ಎಬ್ಬಿಸಲು ಪ್ರಯತ್ನಿಸಿ ಅತ್ತಿತ್ತ ನೋಡಲಾಗಿ 'ಅಲ್ಲೇನು ನೋಡುವಿ ನನ್ನನ್ನು ಎತ್ತು' ಎಂಬ ಆಕಾಶವಾಣಿಯಾಯಿತು. ಆಗ ಕುದುರೆ ಸವಾರ ಗ್ರಾಮದ ಜನರನ್ನು ಕರೆದು ಅವರ ಸಹಾಯದಿಂದ ವಿಗ್ರಹವನ್ನು ಎತ್ತಿ ಅಲ್ಲೇ ಇರುವ ಪರ್ವತದ ಕೆಳಗೆ ನಿಲ್ಲಿಸಿದರು. ಮತ್ತು ಆ ಹನುಮಂತ ದೇವರಿಗೆ ಪರುತೆಪ್ಪ ಎಂದುಕರೆಯ ಹತ್ತಿದರು. ಇದರಿಂದ ಹಳ್ಳಿಗೆ ಪರ್ವತಿ ಎಂದು ಹೆಸರುಬಂದಿತು."[೮] ಇದೊಂದು ದಂತಕಥೆ. ಇದಕ್ಕೆ ಆಧಾರಗಳಿಲ್ಲ.

ಪಾದನಕಟ್ಟೆ : ಪಾದನ+ಕಟ್ಟೆ = ಪಾದನಕಟ್ಟೆ

ಪಾದ = ಹಿರಿಯ, ಯಜಮಾನ. ಊರಲ್ಲಿ ಹಿರಿಯ ವ್ಯಕ್ತಿಯನ್ನು ಪ್ರತಿನಿಧಿಸಿ ನೆಲೆಯನ್ನು ಕರೆದಿದ್ದಾರೆ.

ಫಕೀರ ಬೂದಿಹಾಳ : ಫಕೀರರ+ಬೂದಿ+ಹಾಳ = ಫಕೀರಬೂದಿಹಾಳ

ಬೂದಿ = ಭಸ್ಮ–ವಿಭೂತಿ–ಬೂದಿ ಬಣ್ಣ

ಹಾಳ = ನಿರ್ಜನ ಪ್ರದೇಶ, ಪಾಳುಭೂಮಿ.

ಬೂದಿಯಿಂದ ತುಂಬಿರುವ ಪಾಳು ಭೂಮಿಗೆ, ಬೂದಿಹಾಳ ಎನ್ನಲಾಗುವದು. ಫಕೀರರು = ಮುಸ್ಲಿಂ ಧರ್ಮದ ಅನುಯಾಯಿಗಳು, ಇವರು ಈ ಪ್ರದೇಶಕ್ಕೆ ಹೆಚ್ಚಾಗಿ ಬರುವರು. ಆದ್ದರಿಂದ ಫಕೀರರ ಬೂದಿಹಾಳವಾಗಿದೆ. ಜನಾಂಗವಾಚಕ

ಈ ಹಳ್ಳಿಯಲ್ಲಿ ಫಕೀರರು ಹೆಚ್ಚಾಗಿ ವಾಸಮಾಡುತ್ತಿರುವುದರಿಂದ ಫಕೀರ ಬೂದಿಹಾಳವೆಂದು ಹೆಸರು ಬಂದಿದೆ. ಮುಸ್ಲಿಂ ಧರ್ಮದ ಅನುಯಾಯಿಗಳಾದ ಫಕೀರರು ಇಲ್ಲಿ ಹೆಚ್ಚಾಗಿರುವ ಒಂದು ಮುಖ್ಯವಾದ ಕಾರಣವಿದೆ. ಈ ಊರಿನಲ್ಲಿ ಒಂದು ಪ್ರಾಚೀನ ಗುಹಾಲಯವಿದೆ, ಅಲ್ಲಿ ಯಮನೂರ ದೇವರ ಜಾಗೃತ ಗದ್ದುಗೆ ಇದೆ. ಈ ಗದ್ದುಗೆಯ ದರ್ಶನಕ್ಕಾಗಿ ಫಕೀರರು ನಿರಂತರವಾಗಿ ಬರುತ್ತಾರೆ, ಹಾಗಾಗಿ 'ಫಕೀರರ ಬೂದಿಹಾಳ'ವೆಂದು ಹೆಸರು ಬಂದಿದೆ."[೯೯]

ಬಂಕನೇರಿ : ಬಂಕೇಯ ವ್ಯಕ್ತಿನಾಮ

ಬಂಕಯ್ಯನ+ಏರಿ = ಬಂಕನೇರಿ> ಬಂಕನೇರಿ.

"ಬಂಕೇಯನೆಂಬುವ ಒಬ್ಬ ದಂಡನಾಯಕನಾಗಿದ್ದ."[೯೯ಅ]

ಬಂದಕೇರಿ : ಬನದ+ಕೇರಿ = ಬನದಕೇರಿ>ಬಂದಕೇರಿ. ವನಸ್ಪತಿ

ಬನಶಂಕರಿ : ವನ>ಬನ+ಶಂಕರಿ>ಬನಶಂಕರಿ

ಬನ ಇದು ನಿಸರ್ಗವಾಚಕ ರೂಪವಾಗಿದೆ. ಶಂಕರಿಯನ್ನು ಬನದಲ್ಲಿ ಪ್ರತಿಷ್ಠಾಪಿಸಿದ್ದಕ್ಕಾಗಿ ಬನಶಂಕರಿಯಾಗಿದೆ. "ಪಾರ್ವತಿ, ದುರ್ಗೆಯ ಅವತಾರವಾದ ಬನಶಂಕರಿ ಮಾತೆಯ ಗುಡಿ ಇರುವ ಸ್ಥಳ ಬನಶಂಕರಿಯಾಗಿದೆ. ಈ ದೇವತೆಯು ಬಾದಾಮಿ ಚಾಲುಕ್ಯರ ಅಧಿದೇವತೆ."[೧೦೦]

ಕ್ರಿ.ಶ. ೧೫೩೨ರ ಬನಶಂಕರಿಯಲ್ಲಿದ್ದ (ಜಯಕರ್ನಾಟಕ ೧-೨, ೧೯೨೩; ಬಾ.ಸಾಂ.ಅ. ೪೮) ಶಾಸನದಲ್ಲಿ ಬಾದಾಮಿಯ ಶ್ರೀಬನದ ಮಹಾಂಮಾಯಿ. ಶ್ರೀಬನಪುರವತೆ; ಎಂದಿದೆ. ಇದರಲ್ಲಿ "ಚಿಕ್ಕಚಿನ್ನಪ್ಪನಾಯಕನು ಬಾದಾಮಿಯ ಕೋಟೆಯನ್ನು ಸರಿಪಡಿಸಿ ಬನದ ದೇವಿಯ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದಂತೆ ತಿಳಿಸುತ್ತದೆ"[೧೦೧]

ಬಾಚನಗುಡ್ಡ : ಬಾಚನ+ಗುಡ್ಡ = ಬಾಚನಗುಡ್ಡ

'ಬಾಚ' ಎಂಬ ವ್ಯಕ್ತಿಯ ಹೆಸರಿನಿಂದ 'ಬಾಚನಗುಡ್ಡ' ಎಂದಾಗಿದೆ. ವ್ಯಕ್ತಿವಾಚಕ.

ಕ್ರಿ.ಶ. ೧೧೯೯ರ ಬನಶಂಕರಿ ದೇವಾಲಯದ ಎಡಬದಿಗೆ ಇರುವ ಕೇದಾರೇಶ್ವರ ಗುಡಿಯ ಗೋಡೆಗೆ ಸೇರಿಸಿರುವ ಕಂಬದ (B.K No 140 Of 1928–29; SII.XI-I NO. 57; ಬಾ.ಸಾಂ.ಅ. ೩೬) ಶಾಸನದಲ್ಲಿ 'ಬನದ ದೇವಿ; ಎಂದಿದೆ. "ಇದರಲ್ಲಿ ಅಯ್ಯಾವೊಳೆ ಗೇತೋಜ, ಬನದ ದೇವಿಯ ದಾಸಿ ದುವ್ವೋಜನ ಉಲ್ಲೇಖಿಸುತ್ತದೆ."[೧೦೨]

ಬಾದಾಮಿ : ವಾತಾಪಿ>ಬಾದಾವಿ>ಬಾದಾಮಿ ಎಂದಾಗಿದೆ. ವಾ>ಬಾ, ತಾ>ದಾ, ವಾತಾಪಿ (ತತ್ಸಮ), ಬಾದಾಮಿ (ತದ್ಭವ).

ಬಾದಾಮಿ ಪುರಾತತ್ವ ವಸ್ತುಸಂಗ್ರಹಾಲಯದ ಹಿಂಬದಿಯ ಕೋಟೆಯಲ್ಲಿ ಸುಮಾರು ೩೦ ಮೀಟರ್ ಎತ್ತರದ ಬಂಡೆಯ (K.I.I No. 2 A.R. Kan RE 1940–41; ಬಾ.ಸಾಂ.ಅ. 329) ಶಾಸನದಲ್ಲಿ 'ವಾತಾಪಿ', ಎಂದಿದೆ ಇದರ ಕಾಲ ಕ್ರಿ.ಶ. ೫೪೩. ಇದರಲ್ಲಿ "ಧರಾಧರೇಂದ್ರನಾದ ಚಾಲುಕ್ಯವಲ್ಲಭೇಶ್ವರನು ವಾತಾಪಿದುರ್ಗವನ್ನು ಅಜೇಯವಾಗಿ ನಿರ್ಮಿಸಿದ ಉಲ್ಲೇಖವಿದೆ."[೧೦೩]

ಬತೇರಪ್ಪ ದೇವಾಲಯದ ಸಮೀಪದಲ್ಲಿ ಬಿದ್ದಿದ್ದ ಕಲ್ಲುತುಂಡಿನ (KI.I. NO.1 Of 1939–40; ಬಾ.ಸಾಂ.ಅ.೫) ಕ್ರಿ ಶ ೫೫೦ ಕಾಲದ ಈ ಶಾಸನ "ಒಂದನೆಯ ಪುಲಿಕೇಶಿಯೆಂದು ಗುರುತಿಸುವ ಉಲ್ಲೇಖವಿದೆ."[೧೦೪] ಇದರಲ್ಲಿ ವಾತಾ(ಪ್ಯ) ಎಂದಿದೆ. ಕ್ರಿ.ಶ. ೯೯೯ರ ಜಂಬುಲಿಂಗ ದೇವಾಲಯದ ಕಂಬದ ಮೇಲೆ ಇರುವ (I.A.X.p. 60; K.I.I No. 2) ಈ ಶಾಸನದಲ್ಲಿ 'ವಾತಾಪಿ' ಎಂದಿದೆ. ಇದರಲ್ಲಿ "ವಿಜಯಾದಿತ್ಯ ಸತ್ಯಾಶ್ರಯನು ವಾತಾಪಿಯಲ್ಲಿದ್ದಾಗ ಅವನ ಆಳ್ವಿಕೆಯ ಮೂರನೆಯ ವರ್ಷದಲ್ಲಿ ರಾಜನ ತಾಯಿಯಾದ ವಿನಯವತಿಯು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರನ್ನು ಸ್ಥಾಪಿಸಿದುದನ್ನು ತಿಳಿಸುತ್ತದೆ."[೧೦೫]

ಕ್ರಿ.ಶ. ೧೧೩೯ರ ಬಾದಾಮಿಯ ಎಲ್ಲಮ್ಮ ಗುಡಿಯ ಮುಂದಿದ್ದ ಕಲ್ಲಿನ (I.A.VI. 33; ಬಾ. ಸಾಂ.ಅ. ೪೦) ಈ ಶಾಸನದಲ್ಲಿ 'ಬಾದಾವಿ; ಎಂದು ಉಲ್ಲೇಖಿಸಿದೆ. ಇದರಲ್ಲಿ "ರಾಮದೇವರಸನ ಬಿನ್ನಪದಂತೆ ಪರಮಾನಂದದೇವ ಎಂಬುವವನು ಮಾಡಿಸಿದ ಯೋಗೇಶ್ವರ ದೇವರಿಗೆ ಬಾದಾಮಿಯ ಸಿದ್ಧಾಯದಲ್ಲಿ ಒಂದು ವರುಷಕ್ಕೆ ೧೦ ಗದ್ಯಾಣವನ್ನು ದಾನಬಿಟ್ಟ ವಿವರಣೆವಿದೆ."[೧೦೬]

"ವಿಂಧ್ಯ ಪರ್ವತದಿಂದ ದಕ್ಷಿಣಕ್ಕಿರುವ ಪ್ರದೇಶವೆ 'ವಾತಾಪಿ'. ಇಲ್ಲಿ ಇಲ್ವಲ ಮತ್ತು ವಾತಾಪಿ ಎಂಬ ರಾಕ್ಷಸರು ವಾಸವಾಗಿದ್ದರು. ವಾತಾಪಿ ಅಣ್ಣ, ಇಲ್ವಲ ತಮ್ಮ. ವಾತಾಪಿ ದೇವಲೋಕದ ಇಂದ್ರ ಸಮಾನ ಪುತ್ರನನ್ನು ಪಡೆಯಬೇಕೆಂದು ತಪಸ್ಸು ಮಾಡುತ್ತಿದ್ದನು. ಅದಕ್ಕೆ ಬ್ರಾಹ್ಮಣರು ಅಡ್ಡಿಯಾಗಿದ್ದರು. ಇದರಿಂದ ಈ ಸಹೋದರರು ಬ್ರಾಹ್ಮಣ ದ್ವೇಷಿಯಾಗಿದ್ದರು. ಇವರು ಬ್ರಾಹ್ಮಣರನ್ನು ಅತಿಥ್ಯಕ್ಕಾಗಿ ಆಹ್ವಾನಿಸಿ ಕೊಲ್ಲುತ್ತಿದ್ದರು. ಹೀಗೆ ಒಮ್ಮೆ ಅಗಸ್ತ್ಯ ಮುನಿಯನ್ನು ಆಹ್ವಾನಿಸಿದರು. ವಾತಾಪಿ ಆಡಿನ ಮರಿಯಾದನು. ಅವನನ್ನು ಇಲ್ವಲ ಕೊಂದು, ಮಾಂಸದೂಟ ಮಾಡಿಸಿ ಅಗಸ್ತ್ಯನಿಗೆ ತಿನ್ನಿಸಿದನು. ಋಷಿ ಅಗಸ್ತ್ಯರು ಈ ವಿಷಯ ತಿಳಿದು 'ವಾತಾಪಿ ಜೀರ್ಣೋಭವ' ಎಂದರು. ಆಡಿನ ಮಾಂಸವಾಗಿ ಹೊಟ್ಟೆ ಸೇರಿದ್ದ ವಾತಾಪಿ ಜೀರ್ಣನಾದನು. ಇಲ್ಲದಿದ್ದರೆ ಅವನು ಅಗಸ್ತ್ಯನ ಹೊಟ್ಟೆ ಸೀಳಿ ಆಡಾಗಿ ಹೊರಗೆ ಬರುತ್ತಿದ್ದನು."[೧೦೭]

ಶಾಸನಗಳಲ್ಲಿ ಬಾದಾಮಿ, ಬಾದಾವಿ ಮತ್ತು ವಾತಾಪಿ ಎಂಬಂತೆ ಮೂರು ರೀತಿಯಿಂದಲೂ ಹೆಸರಿಸಲಾಗಿದೆ. ಹೆಚ್ಚಾಗಿ ಸಂಸ್ಕೃತ ಶಾಸನಗಳಲ್ಲಿ 'ವಾತಾಪಿ' ಎಂದೂ ಕನ್ನಡ ಶಾಸನಗಳಲ್ಲಿ ಬಾದಾವಿ, ಬಾದಾಮಿ ಎಂದೂ ಕರೆದಿರುವದು ಕಂಡುಬರುತ್ತದೆ.

ಕ್ರಿ.ಶ. ೨ನೆಯ ಶತಮಾನದ ಗ್ರೀಕ್‌ದೇಶದ ಭೂಗೋಲಕಾರ ಟಾಲೆಮಿಯು ಬಾದಾಮಿಯನ್ನು 'ಬದಿಯಮೈಐ' (Badiamaioi) ಎಂಬ ಹೆಸರಿನಿಂದ ಸೂಚಿಸಿರುವದರಿಂದ ೬ನೆಯ ಶತಮಾನದ ಜಯಸಿಂಹನಿಗಿಂತ ಹಿಂದೆಯೇ ಇದು ಪ್ರಮುಖ ಸ್ಥಳವಾಗಿತ್ತೆಂದು ಎ.ಇ. XXVII. ೨ನೆಯ ಶಾಸನದ ವಿವರಣೆಯಿಂದ ತಿಳಿದು ಬರುತ್ತದೆ"[೧೦೮]

ಟಾಲೇಮಿಯ ಹೇಳಿಕೆಯಿಂದ ಬಾದಾಮಿಯೇ ಮೂಲವಾಗಿದ್ದು. ಸಂಸ್ಕೃತೀಕರಣಗೊಂಡು 'ವಾತಾಪಿ' ಯಾಗಿದೆಯೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ 'ವಾತಾಪಿ' ಎಂಬ ರಾಕ್ಷಸನಿಂದ ಈ ಹೆಸರು ಬಂದಿತೆಂದು ಹೇಳುವುದು ಕೇವಲ ಪೌರಾಣಿಕ ಕಥೆಯಾಗುತ್ತದೆ.

"ವಾತಾಪಿ'ಯು ಏಕಪದವಾಗಿರದೆ ಒಂದು ಸಮಸ್ತಪದವಾಗಿದ್ದು, ಇದರ ಉತ್ತರ ಪದವು 'ವಾಪಿ'ಯೆಂದೂ ಪೂರ್ವಪದವು 'ವಾತ' ವೆಂದೂ ಇದ್ದು 'ವಾತಾಪಿ'ಯಾಗಿರಬೇಕೆಂದು ಕೆಲವರ ತರ್ಕ"[೧೦೯] ಆದರೆ ಇವೆರಡೂ ಸಂಸ್ಕೃತ ಶಬ್ದಗಳು ವಾತ+ವಾಪಿ = ವಾತಾಪಿ ಆಗದು. ಜನಪದರು ಹೀಗೆ ಬಳಸಿರಬೇಕೆಂದೂ ಹೇಳಲಾಗದು. ಏಕೆಂದರೆ 'ವಾತಾಪಿ ಎಂಬ ಶಬ್ದ ಸಂಸ್ಕೃತ ಬಲ್ಲವರಿಂದಲೇ ಬಳಕೆಯಾಗಿದೆ.

ಬೀರನೂರ : ಬೀರ = ಶೂರ, ವೀರ, ವೀರ>ಬೀರ

ಬೀರನ+ಊರು = ಬೀರನೂರು. ವ್ಯಕ್ತಿವಾಚಕ, ಗುಣವಾಚಕ.

ಬೂದಿನಗಡ: ಬೂದು–ಒಂದು ಬಣ್ಣ, ಗಡ–ಕೋಟೆ

ಬೂದಿನ+ಗಡ = ಬೂದಿನಗಡ

ಬೂದು ಬಣ್ಣದ ಗಡ. ವರ್ಣ, ನಿರ್ಮಾಣವಾಚಕ.

ಬೂದಿಹಾಳ: ಬೂದಿ = ಬೂದಿಗುಡ್ಡೆಗಳಿರುವ ಊರು.

ಹಿಂದೆ ಕೈಗಾರಿಕಾ ಇರಬಹುದು. ಇಲ್ಲವೆ ಯಜ್ಞಯಾಗಾದಿ ಮಾಡಿರಬೇಕು.

ಬೂದಿ+ಹಾಳ = ಬೂದಿಹಾಳ. ಕಾಲವಾಚಕ.

ಇನ್ನೊಂದು ಹಿರೇಬೂದಿಹಾಳ ಎಂದಿದೆ.

ಬೆಳವಲಕೊಪ್ಪ: ೧. ಬೆಳ್ವೊಲ = ಬೆಳೆಗಳು ಹೆಚ್ಚಾಗಿ ಬೆಳೆಯುವ ಬಯಲು ಪ್ರದೇಶ. ಸಮತಟ್ಟಾದ ಭೂಮಿಯಿರುವ ಪ್ರದೇಶ. ಬೆಳ್ವೊಲ = ಬೆಳವಲ

ಬೆಳ್ವೊಲ+ಕೊಪ್ಪ = ಬೆಳ್ವೊಲಕೊಪ್ಪ>ಬೆಳವಲಕೊಪ್ಪ. ಪ್ರಕೃತಿವಾಚಕ.

೨. ಬೆಳವಲ–ಒಂದು ಗಿಡ ಮತ್ತು ಅದರ ಹಣ್ಣು. ಈ ಬೆಳವಲಗಿಡಗಳಲ್ಲಿರುವ ಕೊಪ್ಪ–ಬೆಳವಲಕೊಪ್ಪ.

ಬೆಳ್ಳಿಕಿಂಡಿ : ಬೆಳ್ಳಿಯ+ಕಿಂಡಿ = ಬೆಳ್ಳಿಕಿಂಡಿ

ಬೆಳ್ಳಿ = ಧಾತು ವಿಶೇಷ. ವಸ್ತುವಾಚಕ.

ಬೇಡರಬೂದಿಹಾಳ : ಬೇಡರು = ಬೇಟೆ ಆಡುವ ಜನಾಂಗ

ಈ ಬೇಡರು ಇರುವ>ಬೂದಿಹಾಳ, ಬೇಡರಬೂದಿಹಾಳ. ವೃತ್ತಿ, ಜನಾಂಗವಾಚಕ.

ಬೇಲೂರ : ಬೇಲದ+ಊರು = ಬೇಲೂರು

ಬೇಲ>ಬ್ಯಾಲ = ಒಂದು ಜಾತಿಯ ಮರ. ಸಸ್ಯವಾಚಕ.

ಬೇಲದ ತೊಗಟೆಯನ್ನು ದೇಶಿ ಸೆರೆ ತಯಾರಿಸುವಲ್ಲಿ ಉಪಯೋಗಿಸುತ್ತಾರೆ ಮತ್ತು ಗಚ್ಚನ್ನು ತಯಾರಿಸುವಲ್ಲಿ ಬಳಸುತ್ತಾರೆ. ಇಂಥ ಬೇಲದ ಗಿಡಗಳುಳ್ಳ ಪ್ರದೇಶದಲ್ಲಿರುವ ಊರು ಬೇಲೂರು. ಸುತ್ತಲೂ ಗುಡ್ಡವಿರುವುದರಿಂದ ಇಲ್ಲಿ ಈ ಗಿಡಗಳು ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತವೆ.

ಭದ್ರನಾಯಕನ ಜಾಲಿಹಾಳ: ಭದ್ರನಾಯಕ = ಒಬ್ಬ ವ್ಯಕ್ತಿ, ನಾಯಕ.

ಜಾಲಿ = ಮುಳ್ಳಿನ ಗಿಡ

ಹಾಳ = ಊರು

ಭದ್ರನಾಯಕನ+ಜಾಲಿಯ+ಹಾಳ = ಭದ್ರನಾಯಕನ ಜಾಲಿಹಾಳ. ವ್ಯಕ್ತಿ, ಸಸ್ಯವಾಚಕ.

ಜಾಲಿಯ ಮರಗಳು ಬೆಳೆದ ಈ ಪ್ರದೇಶವು ಭದ್ರನಾಯಕ ಎಂಬ ವ್ಯಕ್ತಿಯ ಆಳ್ವಿಕೆಗೆ ಒಳಪಟ್ಟಿತ್ತು. ಭದ್ರನಾಯಕ ಈ ಜಾಲಿಯ ಮರಗಳನ್ನು ಕಡಿದು ಉಳುಮೆ ಪ್ರದೇಶವನ್ನಾಗಿ ಮಾಡಿಸಿದನು. ಅಂದಿನಿಂದ ಭದ್ರನಾಯಕನ ಜಾಲಿಹಾಳವೆಂದು ಕರೆದರು. ಇಂದು ಸಂಕ್ಷಿಪ್ತಗೊಂಡು ಬಿ.ಎನ್. ಜಾಲಿಹಾಳವಾಗಿದೆ.

ಮಂಗಳಗುಡ್ಡ : ಮಂಗಳ+ಗುಡ್ಡ = ಮಂಗಳಗುಡ್ಡ

ಗುಡ್ಡದಲ್ಲಿ ಮಂಗಳಾದೇವಿ ನೆಲೆಸಿರುವುದರಿಂದ ಹಾಗೂ ಗುಡ್ಡದ ಪಕ್ಕದಲ್ಲಿ ಜನವಸತಿ ಇರುವುದರಿಂದ ಮಂಗಳಗುಡ್ಡ ಎಂದು ಕರೆಯುವರು. ದೈವ, ಪ್ರಕೃತಿವಾಚಕ.

ಮಂಗಲ ಅಂದರೆ ಸಂಸ್ಕೃತ ಶಬ್ದವಾಗಿರದೆ "ಬೀಜ ಬಿತ್ತಲು ಹಸನಾದ ನೀರು ಅಧಿಕವಾಗುಳ್ಳ ಸ್ಥಳ ಎಂಬರ್ಥದ ಪ್ರಾಕೃತದ 'ಮಂಗಲ, ಮಂಗಲ'ದಿಂದ ಸಿದ್ಧಿಸಿರುವ ಸಾಧ್ಯತೆ ಅಧಿಕ."[೧೧೦]

ಮಂಗಳೂರು : ಮಂಗಲ+ಊರು = ಮಂಗಲೂರು>ಮಂಗಳೂರು. ಮಂಗಳಾದೇವಿ ನೆಲೆಸಿರುವ ಊರು.

"ಮಂಗಲ = ಬ್ರಾಹ್ಮಣರಿಗೆ ದಾನವಾಗಿ ನೀಡಿದ ಊರುಗಳು. ಎನ್ನುತ್ತಾರೆ."[೧೧೧]

ಮಣಿನಾಗರ : ಮಣಿ+ನಾಗರ = ಮಣಿನಾಗರ

ಮಣಿ = ಒಬ್ಬ ವ್ಯಕ್ತಿ. ವ್ಯಕ್ತಿ ವಾಚಕ

'ಮಣಿನಾಗಕಂಬ' ಎಂಬ ವೀರನ ಹೆಸರು ೬ನೇ ಶತಮಾನದ ಶಾಸನದಲ್ಲಿ ಬಂದಿದೆ. "೧೦೪ನೆಯ ಶಾಸನ ಪಟ್ಟದಕಲ್ಲಿನ ಮ್ಯೂಸಿಯಂನಲ್ಲಿರುವ ಕಲ್ಲಿನ ಈ ಶಾಸನದಲ್ಲಿ "ಜಗತುಂಗನ ಆಳ್ವಿಕೆಯಲ್ಲಿ ಮಣಿನಾಗಕಂಬ ಎಂಬುವವನು ಹುಟ್ಟಿ ಉತ್ತಮಗಳ್ಳ ಎಂಬ ವಿಶೇಷಣವನ್ನು ಪಡೆದು ಕಾಳೆಗವೊಂದರಲ್ಲಿ ಕಡಿತಲೆ ಹಿಡಿದು ಹೋರಾಡಿ ೧೯೫೬ ಜನರನ್ನು ಕೊಂದಂತೆ ಹೇಳಿದೆ."[೧೧೨]

ಮಣ್ಣೇರಿ : ಮಣ್ಣು+ಏರಿ = ಮಣ್ಣೇರಿ

ಮಣ್ಣಿನ ಏರಿ (ದಿಬ್ಬ) ಯಿಂದ ಕೂಡಿದ ಊರು. ಭೂಸ್ವರೂಪವಾಚಕ.

ಮತ್ತಿಕಟ್ಟೆ : ಮತ್ತಿಯ+ಕಟ್ಟೆ = ಮತ್ತಿಕಟ್ಟೆ

ಮತ್ತಿಗಿಡದ ಕಟ್ಟೆಯ ಊರಿಗೆ ಮತ್ತಿಕಟ್ಟೆ ಎಂದು ಕರೆದಿರಬೇಕು. ಸಸ್ಯವಾಚಕ.

ಮಮ್ಮಟಗೇರಿ: ಮಮ್ಮಟನ+ಕೇರಿ = ಮಮ್ಮಟನಕೇರಿ>ಮಮ್ಮಟಗೇರಿ. ವ್ಯಕ್ತಿವಾಚಕ.

ಸಂಸ್ಕೃತದಲ್ಲಿ 'ಕಾವ್ಯ ಪ್ರಕಾಶ' ವೆಂಬ ಅಲಂಕಾರ ಗ್ರಂಥವನ್ನು ಬರೆದವನು ಒಬ್ಬ ಮಮ್ಮಟ. ಆದರೆ ಅವನು ಇವನಾಗಿರಲಾರ.

ಮಲ್ಲಾಪೂರ: ಮಲ್ಲಪ್ಪನ+ಊರು = ಮಲ್ಲಪ್ಪನೂರು>ಮಲ್ಲಾಪೂರು

ಮಲ್ಲಪ್ಪನಿಂದ ಪ್ರಸಿದ್ಧವಾದ ಊರು. ವ್ಯಕ್ತಿವಾಚಕ.

ಮಹಾಕೂಟ: ಮಹಾ = ದೊಡ್ಡ, ಪ್ರಧಾನ

ಕೂಟ = ಸೇರು, ಕೂಡು

ಮಹಾ+ಕೂಟ = ಮಹಾಕೂಟ. ಪ್ರಮಾಣವಾಚಕ.

"ಚಾಲುಕ್ಯರ ಅರಸರಲ್ಲಿ ಮೊದಲಿಗನಾದ ಜಯಸಿಂಹನ ಮಗ ರಣರಾಗ ಕಿ.ಶ. ೫೫೦ರಲ್ಲಿ ಮಹಾಕೂಟೇಶ್ವರ ದೇವಾಲಯವನ್ನು ನಿರ್ಮಿಸಿದ ಎನ್ನುತ್ತಿದೆ ಇತಿಹಾಸ. 'ಮಹಾಕೂಟ' ಪದದ ಅರ್ಥ ತಾತ್ವಿಕ ತಳಹದಿಯ ಮೇಲೆ ಆಧ್ಯಾತ್ಮ ಸೌಧ ನಿರ್ಮಾಣಗೊಂಡಿದ್ದಾಗಿದೆ. ಜೀವ ಮತ್ತು ಶಿವ ಇವರುಗಳ ಕೂಡುವಿಕೆಯೇ 'ಮಹಾಕೂಟ' ಎಂದು ಹೇಳಲಾಗುತ್ತದೆ"[೧೧೩]

ಕ್ರಿ.ಶ. ೯೩೩ರ ಮಹಾಕೂಟ ಸಂಗಮೇಶ್ವರ ದೇವಾಲಯದ ಎಡಭಾಗದ ಕಂಬದ ಮೇಲೆ ಇರುವ (I.A.X. 104; B.K NO. 36 of 1938–39; SII XX. 280; ಬಾ.ಸಾಂ.ಅ. ೩೧) ಈ ಶಾಸನದಲ್ಲಿ "ಬಪ್ಪುವರಸನೆಂಬುವವನು ಮಂಗುಡಕ್ಕೆ ಬಂದಾಗ ನಂದಿಕೇಶ್ವರ ಮತ್ತು ನೆಲ್ಲುಗೆ ಎಂಬ ಎರಡು ಗ್ರಾಮಗಳನ್ನು ದಾನ ಬಿಟ್ಟಂತೆ ಹೇಳಿದೆ. ಇದರಲ್ಲಿ 'ಮಗುಂಡಕೆ' ಎಂದು ಉಲ್ಲೇಖಿಸಿದೆ."[೧೧೪]

"ಮಹಾಕೂಟದಲ್ಲಿ ಲಿಂಗಗಳಿವೆ, ಹತ್ತು ದೇವಾಲಯಗಳಿವೆ, ದೇವರು ಒಲಿದರೆ ವರ, ಮುನಿದರೆ ಶಾಪ"ವೆಂಬ ನಂಬಿಕೆಯೇ ದೈವ ಪ್ರಾಬಲ್ಯಕ್ಕೆ ಅವಕಾಶವಾಗಿದೆ. ಚಾಲುಕ್ಯ ಅರಸರು ಸಾಮಂತರು ಮತ್ತು ಇನ್ನಿತರರು ಕಾಲ ಕಾಲಕ್ಕೆ ಹರಕೆ ಹೊತ್ತು ಮಾಡಿಸಿದ ಗುಡಿ ಗುಂಡಾರಗಳ ಕೂಟವೇ ಮಹಾಕೂಟವಾಗಿದೆ. ಕೂಡಿಕೆಗೆ ಕೂಟ ಅಥವಾ ಸಂಗಮ ಎಂಬುದು ಉಪಯೋಗಿಸುವ ಹೆಸರು. ಮಲಾಪಹಾರಿಣಿ ನದಿ ತೀರದ ಪರ್ಣಕುಟೀರಗಳಲ್ಲಿ ವಾಸಿಸಿ ಸಿದ್ಧಿ ಪಡೆದ ಪುರುಷರ ಕ್ಷೇತ್ರವೆನಿಸಿದ್ದು ಮಹಾಕೂಟ ಅದರ ಎದುರಿಗೆ ಬಲಶಾಲಿ ಚಕ್ರವರ್ತಿಗಳೂ ತಲೆಬಾಗಿ ನಿಂತ ಪ್ರೇರಣೆ ಪಡೆದು ಪ್ರಜಾ ಪಾಲನೆಯನ್ನು ಸರಿಯಾಗಿ ಮಾಡಲು ಸಾಮರ್ಥ್ಯ ಪಡೆಯುತ್ತಿದ್ದರು. ಅರಮನೆ ದೇವರಮನೆಗಳ ಸುಮಧುರ ಕೂಡಿಕೆಯ ಪ್ರತೀಕ ಮಹಾಕೂಟವೆನಿಸಿದೆ. ಮಕುಟ, ರಾಜರ ಕಿರೀಟಕ್ಕೆ ಇಟ್ಟ ಹೆಸರು. ಈ ರಾಜಾಧಿರಾಜರಿಗೆ ಒಡೆಯನೆಂಬುದು ಸಾರುವದಕ್ಕೆ ಮುಕುಟೇಶ್ವರನೆಂದು"[೧೧೫] ಮುಕುಟವೇ ಈ ಸ್ಥಳನಾಮ ಮಹಾಕೂಟವಾಗಿರಬೇಕು ಇದೊಂದು ದಂತಕಥೆ.

ಮಾಳಗಿ : ಮಾಳ = ತೋಟ, ಮಾಲೆ.

ಮಾಳ+ಅಗೆ = ಮಾಳಗೆ>ಮಾಳಗಿ

ತೋಟ ಇರುವ ಊರು, ಇಲ್ಲವೆ ಮಾಲೆ ಮಾರುವ ಊರು, ತೋಟವುಳ್ಳ ಊರು.

ಮುತ್ತಲಗೇರಿ: ಮುತ್ತಲ + ಕೇರಿ = ಮುತ್ತಲಕೇರಿ>ಮುತ್ತಲಗೇರಿ

– ಮುತ್ತಲ = ಮುತ್ತಲ ಎಲೆಯ ಗಿಡ, ಪಲಾಶವೃಕ್ಷ.

ಸಸ್ಯವಾಚಕ. ಮುತ್ತಲ ಗಿಡಗಳಿಂದ ಕೂಡಿದ ಕೆರೆ.

ಮುತ್ತಲಗೆರೆ>ಮುತ್ತಲಗೆರಿ>ಮುತ್ತಲಗೇರಿ.

ಇಲ್ಲಿ ಮೂರು ದೊಡ್ಡ ಕೆರೆಗಳಿವೆ.

"ಈ ಊರಿಗೆ ಪಾಂಡವರು ವನವಾಸಕ್ಕೆ ಬಂದು ತಂಗಿದ್ದರು. ಸ್ನಾನ ಮಾಡಲು ಬಚ್ಚಲು, ಅಡಿಗೆ ಒಲೆ, ಕುದುರೆ ಹೆಜ್ಜೆ ಗುರುತು ಇವೆಲ್ಲವುಗಳು ಮಾಸದೆ ಉಳಿದುಕೊಂಡಿದ್ದವು. ಕಾಲಾನಂತರ ಊರಿನ ಪ್ರತಿಷ್ಠಿತ ವ್ಯಕ್ತಿ ಮುತ್ತಪ್ಪಯ್ಯನವರು ಪಾಂಡವರು ತಂಗಿದ್ದ ಸ್ಥಳವು ಅಪವಿತ್ರವಾಗಬಾರದೆಂದು ಸುಮಾರು ಹದಿನೈದು ಎಕರೆ ಜಾಗವುಳ್ಳ ಮೂರು ಆಳೆತ್ತರದ ಉತ್ತಮವಾದಂಥ ಕೆರೆಯನ್ನು ಕಟ್ಟಿಸಿದ್ದರ ಪರಿಣಾಮವಾಗಿ ಈ ಗ್ರಾಮಕ್ಕೆ ಮುತ್ತಯ್ಯನ ಕೆರೆ ಮುತ್ತಲಗೇರಿ ಎಂದಾಗಿದೆ"[೧೧೬]

ಇನ್ನೊಬ್ಬರ ಅಭಿಪ್ರಾಯ ಹೀಗಿದೆ: "ಬಾದಾಮಿ ಚಾಲುಕ್ಯರ ಕಾಲದಲ್ಲಿ ಮುತ್ತು, ರತ್ನ ಮಾರುವ ವ್ಯಾಪಾರಿಗಳು ಈ ಗ್ರಾಮದಲ್ಲಿ ವಾಸವಾಗಿದ್ದರಿಂದ ಮುತ್ತುಗಾರರ+ಕೇರಿ = ಮುತ್ತುಗಾರರಕೇರಿ >ಮುತ್ತು ಗಾರಗೇರಿ>ಮುತ್ತಲಗೇರಿ ಎಂದಾಗಿದೆ"[೧೧೭]

ಇವೆರಡು ದಂತಕಥೆಗಳು.

ಮುಚ್ಚಳಗುಡ್ಡ : ಮುಚ್ಚಳ = ಹೊದಿಕೆ

ಮುಚ್ಚುಳ+ಗುಡ್ಡ = ಮುಚ್ಚುಳಗುಡ್ಡ>ಮುಚ್ಚಳಗುಡ್ಡ.

ಮುಚ್ಚಳಗುಡ್ಡ ಎರಡು ಇವೆ. ಚಿಕ್ಕಮುಚ್ಚಳಗುಡ್ಡ ಮತ್ತು ಹರೇಮುಚ್ಚಳಗುಡ್ಡ.

ನೋಡಲು ಮಣ್ಣಿನ ಮುಚ್ಚುಳದಂತೆ ಕಾಣುವ ಗುಡ್ಡ ವಸ್ತು. ಭೂಸ್ವರೂಪವಾಚಕ.

ಮುಮ್ಮರಡಿಕೊಪ್ಪ: ಮರಡಿ = ಗರಸಿನ ನೆಲ

ಮೂರು+ಮರಡಿ = ಮುಮ್ಮರಡಿ

ಮುಮ್ಮರಡಿಯ+ಕೊಪ್ಪ = ಮುಮ್ಮರಡಿಕೊಪ್ಪ

ಮೂರು ಕಡೆಗೆ ಮರಡಿ ಇದ್ದು ಒಂದು ಕಡೆಗೆ ಫಲವತ್ತಾದ ಭೂಮಿಯಿರುವ ಪ್ರದೇಶ. ಅಲ್ಲಿರುವ ಕೊಪ್ಪ, ಊರು>ಮುಮ್ಮರಡಿಕೊಪ್ಪ. ಭೂಸ್ವರೂಪವಾಚಕ.

ಮುರುಡಿ = ಪೊದರು, ಸಣ್ಣ ಸಣ್ಣ ಕಂಡಿಗಳು ಬೆಳೆದಿರುವ ಪೊದೆಗಳು. ಆ ಪೊದೆಗಳು ಇರುವ ಊರು ಮುರುಡಿ, ಸಸ್ಯವಾಚಕ.

ಮುಷ್ಟಿಗೇರಿ : ಮುಷ್ಟಿ = ಹಿಡಿ, ಒಂದು ಬಗೆಯ ಮರ

ಮುಷ್ಟಿಯ+ಕೇರಿ = ಮುಷ್ಟಿಗೇರಿ. ಸಸ್ಯವಾಚಕ.

ಈ ಊರು ಗುಡ್ಡಗಳ ಮಧ್ಯದಲ್ಲಿದೆ. "ಇಲ್ಲಿ ಅನೇಕ ತರಹದ ಗಿಡಮೂಲಿಕೆಗಳು ದೊರೆಯುತ್ತವೆ. ಮುಷ್ಟಿ ಗಿಡದ ಎಲೆಯು ಔಷಧವಾಗಿ ಬಳಕೆಯಾಗುತ್ತದೆ. ಉದಾ: ಬಹುಮೂತ್ರ ತೊಂದರೆ ಇರುವಂಥವರಿಗೆ ಕೊಡುವ ಪಥ್ಯಗಳ ಕ್ರಮವು. ಮುಷ್ಟಿಯ ಸೊಪ್ಪು, ಮಜ್ಜಿಗೆ ೧ ಹೊನೆಗೊನ್ನೆ"[೧೧೭] ಇಂಥ ಗಿಡಗಳಿಂದ ಕೂಡಿದ ಕೇರಿ ಮುಷ್ಟಿಗೇರಿ.

ಮುಷ್ಟರು = ಒಂದು ಜನಾಂಗ

ಮುಷ್ಟರ+ಕೇರಿ = ಮುಷ್ಟರಗೇರಿ>ಮುಷ್ಟಿಗೇರಿ. ಜನಾಂಗವಾಚಕ.

"ಮುಷ್ಟಿಗೇರು– ಇವರು ವಿಜಾಪೂರ ಜಿಲ್ಲೆಯಲ್ಲಿ ಇರುತ್ತಾರೆ. ತಮ್ಮ ಹೆಸರಿನ ಮುಂದೆ ಮುಷ್ಟಿಗೇರ ಇಲ್ಲವೆ ಛತ್ರಿಯೆಂಬ ಉಪಪದವನ್ನು ಹಚ್ಚುವರು. ಭೀಮಪ್ಪಾ ಮುಷ್ಟಿಗೇರ, ಹಣಮಪ್ಪಾ ಛತ್ರಿ, ಇತ್ಯಾದಿ, ಮುಷ್ಟಿಗೇರು ಕಾಳಮ್ಮ, ಯಲ್ಲಮ್ಮ, ಹನಮಂತ, ವೆಂಕಟರಮಣ, ದೇವತೆಗಳಿಗೆ ನಡೆಕೊಳ್ಳುವರು, ಇವರು ಗುರು ಒಪ್ಪಮ ಜಾತಿಯವನಿರುತ್ತಾನೆ."[೧೧೮]

ಯಂಡಿಗೇರಿ : ಯಂಡೆ–ಯಂಡಿ = ಹೆಂಡೆ, ಸಗಣಿ, ಮಣ್ಣಿನ ಹೆಂಟೆ

ಯಂಡೆ+ಕೇರಿ = ಯಂಡಿಕೇರಿ>ಯಂಡಿಗೇರಿ. ಸಗಣಿಯ ಗುಡ್ಡೆಯನ್ನು ಹಾಕಿದ ಊರು.

ದನಗಾಹಿಗಳು ಹೀಗೆ ಸಗಣಿ ಗುಂಪೆ ಹಾಕಿರುವ ಸಾಧ್ಯತೆ ಇದೆ. ಅಲ್ಲವೆ ಮಣ್ಣಿನ ಹೆಂಟೆಗಳಿಂದಲೂ ಕೂಡಿರುವ ಊರಾಗಿರಬಹುದು. ನಿಸರ್ಗವಾಚಕ ಯಂಡಿಗೇರಿ ಊರಿನ ಪಶ್ಚಿಮಕ್ಕೆ ಸುಮಾರು ಒಂದು ಮೈಲಿ ದೂರದ ಹೊಲದಲ್ಲಿರುವ ಬಸವಣ್ಣ ಗುಡಿಯಲ್ಲಿ ನಿಲ್ಲಿಸಿರುವ ಕಲ್ಲಿನ (B.K. No. 183 of 1928–29; SII XV. 728) ಶಾಸನದಲ್ಲಿ "ಯಂಡಿಗೇರಿ"ಯ ಪೋತರ ಯೀರಂಣ ದೇವರಿಗೆ ಬಿಟ್ಟ ಗೂಳಿ ಬಸವನ ಗದ್ದುಗೆಯ ಮಹಿಮೆಯನ್ನು ಹೇಳುತ್ತದೆ."[೧೧೯] ಕ್ರಿ.ಶ. ೧೭–೧೮ನೆಯ ಶತಮಾನದಲ್ಲಿ ಯಂಡಿಗೇರಿ ಎಂದು ಕರೆಯುತ್ತಿದ್ದರು.

ಯರಗೊಪ್ಪ : "ಎರೆಯಪ್ಪ = ಒಂದು ಕ್ಷುದ್ರದೇವತೆ"[೧೨೦] ಅಥವಾ ಒಬ್ಬ ವ್ಯಕ್ತಿ.

ಎರೆಯಪ್ಪನ+ಕೊಪ್ಪ = ಎರೆಯಕೊಪ್ಪ>ಯರಗೊಪ್ಪ. ವ್ಯಕ್ತಿ, ದೈವವಾಚಕ.

ಯರಗೊಪ್ಪ ಎರಡು ಇವೆ. ಯರಗೊಪ್ಪ ಇನಾಂ ಮತ್ತು ಯರಗೊಪ್ಪ ಎಸ್.ಬಿ.

ರಡ್ಡೇರ ತಿಮ್ಮಾಪೂರ: ರಡ್ಡೇರ = ಜನಾಂಗ

ತಿಮ್ಮಪ್ಪನ+ಊರು= ತಿಮ್ಮಾಪೂರ

ರಡ್ಡೇರ+ತಿಮ್ಮಪ್ಪನ+ಊರು = ರಡ್ಡೇರತಿಮ್ಮಾಪೂರ

ಇಲ್ಲಿ ರಡ್ಡೇರ ಜನರು ಹೆಚ್ಚು ಇರುವುದರಿಂದ ರಡ್ಡೇರ ತಿಮ್ಮಾಪೂರವೆನಿಸಿದೆ. ವ್ಯಕ್ತಿ ಹಾಗೂ ಜನಾಂಗವಾಚಕ.

ರಾಘಾಪೂರ : ರಾಘಪ್ಪನ+ಊರು ರಾಘಪ್ಪೂರ>ರಾಘಾಪೂರ. ವ್ಯಕ್ತಿವಾಚಕ .

ರಾಮತೀರ್ಥ : ರಾಮನ+ತೀರ್ಥ = ರಾಮನತೀರ್ಥ>ರಾಮತೀರ್ಥ. ವ್ಯಕ್ತಿ ಹಾಗೂ ಜಲವಾಚಕ.

ಲಕ್ಕಸಕೊಪ್ಪ : ಲಕ್ಕಸನ+ಕೊಪ್ಪ = ಲಕ್ಕಸಕೊಪ್ಪ, ಲಕ್ಷ್ಮಣ>ಲಕ್ಷಣ>ಲಕ್ಕಸ

ಕಲ್ಯಾಣ ಚಾಲುಕ್ಯರ ಮಹಾಮಂಡಲೇಶ್ವರ 'ಲಕ್ಷ್ಮರಸ'ನೇ ಈ 'ಲಕ್ಕಸ' ನಾಗಿರಬೇಕೆಂದು ಊಹಿಸಬಹುದಾಗಿದೆ.

ಲಕ್ಕಸನೆಂಬ ವ್ಯಕ್ತಿಯಿಂದ ಪ್ರಸಿದ್ಧವಾದ ಕೊಪ್ಪ (ಊರು). ವ್ಯಕ್ತಿವಾಚಕ.

ಲಖಮಾಪೂರ : ಲಕ್ಕಮ್ಮನ+ಪುರ = ಲಕ್ಕಮ್ಮನಪುರ>ಲಖಮಾಪುರ. ಸ್ತ್ರೀವಾಚಕ.

"ಗುಡ್ಡದ ದಾರಿಯಲ್ಲಿ ಕಲ್ಲು ಎಬ್ಬುವಾಗ ಆ ಕಲ್ಲಿನ ಬುಡದಲ್ಲಿ ಲಕ್ಷ್ಮೀದೇವಿಯ ವಿಗ್ರಹ ದೊರಕಿದ್ದರಿಂದ ಆ ಸ್ಥಳವು ಲಕ್ಷ್ಮೀಪುರ>ಲಖಮಾಪೂರ ಆಗಿದೆ."[೧೨೧]

ಲಾಯದಗುಂದಿ: ಲಾಯ = ಕುದುರೆ ಕಟ್ಟುವ ಸ್ಥಳ

ಕುಂದಿ>ಗುಂದಿ = ಬೆಟ್ಟ

ಲಾಯದ+ಕುಂದಿ = ಲಾಯದಗುಂದಿ

ಕುದುರೆಗಳನ್ನು ಎತ್ತರದ ಪ್ರದೇಶದಲ್ಲಿ ಕಟ್ಟುತ್ತಿರುವದರಿಂದ ಲಾಯದಗುಂದಿ ಎಂಬ ಹೆಸರು ಬಂದಿದೆ. ಸ್ಥಾನ ಹಾಗೂ ಭೂಸ್ವರೂಪವಾಚಕ.

ಲಿಂಗಾಪೂರ : ಲಿಂಗಪ್ಪನ+ಊರು = ಲಿಂಗಾಪೂರ

ಲಿಂಗಗಳ+ಪುರ>ಲಿಂಗಾಪುರ. ವ್ಯಕ್ತಿ, ವಸ್ತುವಾಚಕ.

ಈ ಊರಿನಲ್ಲಿ ಶಿವಲಿಂಗ ದೇವಸ್ಥಾನವಿದೆ. ಇದು ಶೈವ ಧರ್ಮದ ಉಚ್ಛ್ರಾಯ ಕಾಲದಲ್ಲಿ ಸ್ಥಾಪಿತವಾಗಿರಬೇಕು. ಈ ಧರ್ಮದ ಜನ ಲಿಂಗ ಪೂಜಿಸಲು ದಿನವೂ ದೇವಸ್ಥಾನಕ್ಕೆ ಹೋಗುತ್ತಾರೆ.

ವಡವಟ್ಟಿ : ವೃದ್ಧ>ವಡ್ಡ>ಬಡ್ಡ

ವಡ್ಡ+ಪಟ್ಟಿ = ವಡ್ಡವಟ್ಟಿ>ಬಡ್ಡಬಟ್ಟಿ>ವಡವಟ್ಟಿ. ಕಾಲವಾಚಕ.

ವಡವಟ್ಟಿ ಗ್ರಾಮದ ಚಾವಡಿಯಲ್ಲಿ ಇರುವ (B.K.NO. 180 of 1928–29; SII.XV –582) ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿ ಬಡ್ಡವಟ್ಟಿಯೆಂಬ ಗ್ರಾಮವನ್ನು "ಬಂಕಜಿನಾಲಯಕ್ಕೆ ಸರ್ವನಮಸ್ಯವಾಗಿ ದಾನ ನೀಡಿದ ಉಲ್ಲೇಖವಿದೆ. ಗ್ರಾಮದ ಅಗ್ನೇಯದ ಗುಡ್ಡೆಯನ್ನು ದಾನ ಬಿಟ್ಟಂತೆ ತಿಳಿದುಬರುತ್ತದೆ"[೧೨೨] ವಡವಟ್ಟಿಯ ಪ್ರಾಚೀನ ಹೆಸರು ಬಡ್ಡವಟ್ಟಿಯೆಂದು ಈ ಶಾಸನದಿಂದ ತಿಳಿದುಬರುತ್ತದೆ.

ಶಿರಿಬಡಗಿ : ಶ್ರೀ>ಸಿರಿ, ಸಂಪತ್ತು, ಸಮೃದ್ಧಿಯ ತೋಟಗಳಿರುವ ಊರು.

ವಾಟ = ಉದ್ಯಾನ, ತೋಟ

ಸಿರಿಬಾಡಗಿ>ಸಿರಿಯಬಾಡಕ>ಶ್ರೀಯಂಬಾಟಕ. ಸಂಪತ್ತುವಾಚಕ.

"ಸಿರಬಡಗಿಗೆ ಮೊದಲು 'ಶ್ರೀಯಂಬಾಟಕ' ಎನ್ನುತ್ತಿದ್ದರು."[೧೨೩]

ಶಿವಯೋಗಮಂದಿರ : ಶಿವ+ಯೋಗ+ಮಂದಿರ = ಶಿವಯೋಗಮಂದಿರ ಶಿವನ ಆರಾಧನೆ ಮಾಡುವ ಯೋಗಿಗಳ ಮಂದಿರವೆ ಶಿವಯೋಗ ಮಂದಿರ ಎಂದು ಕರೆಯುವರು.

"ವಿಜಯಮಹಾಂತ ಸ್ವಾಮಿಗಳು ಬಿಟ್ಟಿದ್ದ 'ಮಹಾಂತಮ್ಮ' ಹೆಸರಿನ ಹಸುವೊಂದು ಹುನಗುಂದ ಮಾರ್ಗವಾಗಿ ಐಹೊಳೆ, ಪಟ್ಟದಕಲ್ಲು, ಮೂಲಕ ಸಂಚರಿಸಿ ಮಲಪ್ರಭಾ ನದಿ ದಡದಲ್ಲಿರುವ ಕೊಟ್ಟೂರು ಬಸವೇಶ್ವರ ದೇವಸ್ಥಾನದ ಸಮೀಪ ಬಂದು ನಿಂತಿತು. ಹಸು ನಿಂತ ಸ್ಥಳದಲ್ಲಿಯೇ ಲಿಂಗ ಮುದ್ರೆ ಸ್ಥಾಪಿಸಿ ೧೯೦೯ ಫೆಬ್ರುವರಿ ೭ರಂದು ಶಿವಯೋಗ ಮಂದಿರ ನಿರ್ಮಿಸಲಾಯಿತು."[೧೨೪]

ಇದೊಂದು ಹೇಳಿಕೆ.

ಸಬ್ಬಲಹುಣಸಿ: ಸಬ್ಬಲ = ಸಬಲ,

ಹುಣಸೆ = ಹುಣಸೆಗಿಡ, ಬೆಳೆಯುವ ಪ್ರದೇಶ, ದೊಡ್ಡದಾದ ಹುಣಸೆಗಿಡಗಳಿರುವ ಪ್ರದೇಶದಲ್ಲಿರುವ ಊರು. ಸಸ್ಯವಾಚಕ

ಸೀಪರಮಟ್ಟಿ : ಸೀಪರು = ಸಪ್ಪಗಿನ, ಸತ್ವರಹಿತ

ಸೀಪರಿನ+ಮಟ್ಟಿ = ಸೀಪರಮಟ್ಟಿ>ಸೀಪರಮಟ್ಟಿ

ಸುಳ್ಳ : ಸುಳ = ಸುಳಿ, ಸೂಲ, ನಿಮ್ನ ಭೂವಾಚಕಗಳು. ತಗ್ಗಾದ ಪ್ರದೇಶ ಇದಾಗಿದೆ, ಹಾಗಾಗಿ ಸುಳ್ಳ ಎಂದು ಕರೆದಿರಬೇಕು.

ಸೂಳಿಕೇರಿ : ಸೂಳಿಯ+ಕೇರಿ = ಸೂಳಿಯಕೇರಿ>ಸೂಳಿಕೇರಿ

ಸೂಳಿ = (ವೃತ್ತಿ) ವೇಶ್ಯೆ

ಕೇರಿ = ಬೀದಿ, ಓಣಿ. ಸೂಳಿ ವಾಸಿಸುವ ಕೇರಿ. ವೃತ್ತಿವಾಚಕ.

"ಸೂಳಿಯರು ಇರುವ ಕೇರಿಯೇ ಸೂಳಿಕೇರಿ ಆಗಿದೆ."[೧೨೫]

"ಈ ಊರಿನ ವೇಶ್ಯೆಯೊಬ್ಬಳು ಇಲ್ಲಿ ಮಾರುತಿ ದೇವಸ್ಥಾನದ ಆವರಣದಲ್ಲಿ ಯಾವದೋ ಒಂದು ಸಂದರ್ಭದಲ್ಲಿ ಒಂದು ಹುಣಸೆ ಮತ್ತು ಬೇವಿನ ಗಿಡಗಳನ್ನು ನೆಟ್ಟು ಬೆಳೆಸಿದಳು, ಅವು ಕಾಲಕ್ರಮೇಣ ಬೆಳೆದು ನಿಂತವು. ಆ ಗಿಡಗಳೇ ಪ್ರಧಾನವಾಗಿ ಅವುಗಳ ನೆರಳಿಗೆ ವಿಶ್ರಾಂತಿಗಾಗಿ ಬರುವವರ ಸಂಖ್ಯೆ ಹೆಚ್ಚಾದಂತೆ ಅಲ್ಲಿ ಜನರ ಒಡನಾಟ ಹೆಚ್ಚಾಗತೊಡಗಿತು. ಸೂಳಿ ನೆಟ್ಟ ಗಿಡಗಳು ಇರುವ, ಪ್ರದೇಶ ಸೂಳಿಕೇರಿ ಎಂದಾಗಿದೆ"[೧೨೬] ಇದೊಂದು ದಂತಕಥೆ.

"ಸೂಳೆಯು ಕಟ್ಟಿಸಿದ ಕೆರೆ–ಸೂಳೆಯ ಕೆರೆ ಎಂದಾಗಿದೆ."[೧೨೭]

ಈ ಊರಲ್ಲಿ ವಿಶಾಲವಾದ ಕೆರೆ ಇದೆ.

ಸೂಳೆಯ+ಕೆರೆ = ಸೂಳೆಕೆರೆ, ಸೂಳೆಯು ಕಟ್ಟಿಸಿದ ಕೆರೆ = ಸೂಳೆಯ ಕೆರೆ = ಸೂಳೆಕೆರೆ ಆಗಿರಬೇಕು. ಇದೊಂದು ದಂತಕಥೆ.

"ಸೂಳೆಕೆರೆ (ನಾಗಮಂಗಲ ತಾಲೂಕು) ಅಂಕುಶರಾಯ ಕಟ್ಟಿದಕೆರೆ. ಈ ಕೆರೆಯ ನಿರ್ಮಾಣದ ಸಂದರ್ಭದಲ್ಲಿ ಏರಿಯ ಒಂದು ಭಾಗ ನಿಲ್ಲದೆ ಒಡೆದು ಹೋಗುತಿತ್ತು. ಅಂಕುಶರಾಯನ ಹತ್ತಿರದ ಸೂಳೆಯನ್ನು ಬಲಿಕೊಟ್ಟರೆ ಏರಿ ನಿಲ್ಲುತ್ತದೆಂದು ದೊರೆಗೆ ಸ್ವಪ್ನ ಸುಚನೆಯಾಯಿತು. ಆಕೆಯನ್ನು ಕಳೆದುಕೊಳ್ಳಲಿಕ್ಕೆ ಇಷ್ಟವಿಲ್ಲದ ಅಂಕುಶರಾಯ ವಿಷಯ ತಿಳಿಸದೆ ಕೊರಗಿದ. ಇದನ್ನು ತಿಳಿದು ಸೂಳೆ ಒಡೆದು ಹೋಗುತ್ತಿದ್ದ ಎಡೆಯಲ್ಲಿ ಮಲಗಿ ತೂಬ ಕಟ್ಟಿಸಿಕೊಂಡಳು. ಆಕೆಯ ಆತ್ಮಾರ್ಪಣೆಯಿಂದಾಗಿ ಈ ಕೆರೆಗೆ ಸೂಳೆಕೆರೆ ಎಂದಾಯಿತು."[೧೨೮]

ಸೋಮನಕೊಪ್ಪ : ಸೋಮಪ್ಪನ+ಕೊಪ್ಪ = ಸೋಮಪ್ಪನಕೊಪ್ಪ>ಸೋಮನಕೊಪ್ಪ.

ಸೋಮನೆಂಬ ವ್ಯಕ್ತಿಯಿಂಧ ಪ್ರಸಿದ್ಧವಾದ ಊರು. ವ್ಯಕ್ತಿವಾಚಕ.

ಹಂಗರಗಿ : ಹಂಗರ = ಸಂದಿವಾತಕ್ಕೆ ಉಪಯೋಗಿಸುವ ಒಂದು ಗಿಡ, ಹಾಗೂ ಇದು ಹಸಿಯಾಗಿದ್ದರೂ ಸುಡು(ಉರಿವುದು)ವುದು.

ಹಂಗರ+ಇಗೆ = ಹಂಗರಗೆ>ಹಂಗರಗಿ

ಹಂಗರಕೆ = ಒಂದು ಜಾತಿಯ ಸಸ್ಯ.

ಹಂಗರಕೆ>ಹಂಗರಕಿ>ಹಂಗರಗಿ. ಸಸ್ಯವಾಚಕ.

ಹಂಗರು = ಒಂದು ಜನಾಂಗವು ಅಹುದು. ಹಂಗರು ಇರುವ ಊರು.

ಹಂಗರು+ಇಗೆ = ಹಂಗರಿಗೆ>ಹಂಗರಗಿ. ಜನಾಂಗವಾಚಕ.

ಹಂಗರಗಿ ಶಿವಪುತ್ರಿ ಗೋವಿಂದಪ್ಪ ಗಾಣಿಗೇರ ಅವರ ಮನೆಯ ಕಟ್ಟೆಗೆ ಹಾಸಿರುವ ಕಲ್ಲಿನ (B.K.No. 145 of 1928-29; SII XV.522) ಶಾಸನದಲ್ಲಿ "ಮಹಾಸಾಮಂತನಾದ ದಶವರ್ಮನು ಹಂಗರಗೆ ಪನ್ನೆರಡಕ್ಕೆ ಮರ್ಯಾದೆ ಸಹಿತವಾಗಿ ತೆರಿಗೆಗಳನ್ನು ನಿಗಧಿಪಡಿಸಿದ ವಿವರವಿದೆ."[೧೨೯] ಅಲ್ಲದೆ ಇದರಲ್ಲಿ 'ಪೆಂಗರಗೆ; ಎಂದು ಹೆಸರನ್ನು ಉಲ್ಲೇಖಿಸಿದೆ. ಇದರ ಕಾಲ ೧೧ನೆಯ ಶತಕ. ಕೆಲವಡಿ ಗ್ರಾಮದ ದೇವಾಲಯದಲ್ಲಿ ಮುಂದಿನ ಕಾಂಪೌಂಡಿಗೆ ಸೇರಿಸಿರುವ ಕಲ್ಲಿನ ಮೇಲೆ ಇರುವ (E.I.IV P.259) ಕ್ರಿ.ಶ. ೧೦೫೩ರ "ಕಲ್ಯಾಣ ಚಾಲುಕ್ಯ ಅರಸ ತ್ರೈಲೋಕ್ಯಮಲ್ಲ ದೇವನು ಆಳುತ್ತಿರುವಾಗ ಇವನ ಮಹಾಸಾಮಂತಾಧಿಪತಿ ಭೋಗದೇವರಸನು ಪಂಗರಗಿ ಹನ್ನೆರಡನ್ನು ಆಳಿದ ಉಲ್ಲೇಖವಿದೆ."[೧೩೦] ಅದಲ್ಲದೆ ಹಂಗರಗಿಯನ್ನು ಪಂಗರಗಿ ಎಂದು ಕರೆದಿದೆ. ಪಂಗರಗಿ> ಹಂಗರಗಿ ಆಗಿದೆ.

"ಹಂಗರ ಹಳ್ಳಿಯನ್ನು ಹಳೆಶಿಲಾಯುಗದ ಪ್ರದೇಶವೆಂದು ಗುರುತಿಸಿದೆ. ಹಂಗರಕಡ್ಡಿ ಅಧಿಕವಾಗಿ ಬೆಳೆಯುವ ಪ್ರದೇಶವಾದ್ದರಿಂದ ಈ ಹೆಸರು ಬಂದಿದೆ. ಹಸಿ ಮಡಕೆಗಳನ್ನು ಸುಡುವ ಕುಂಬಾರನ ಆವಿಗೆಗೆ ಹಸಿಯ ಹಂಗರ ಕಡ್ಡಿಯನ್ನು ಎಲೆ ಸಹಿತ ಹಾಕಿ ಬೇಯಿಸಿದರೆ ಆ ಹೊಗೆಯಿಂದ ಮಡಕೆಗಳು ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಹಂಗರ ಕಡ್ಡಿಯಿಂದ ಸುಟ್ಟರೆ ಕಾಲಿನ ಐದು ಬೆರಳಿನ ಚರ್ಮದ ಮೇಲಿನ ಗಟ್ಟಿ ಗೆಡ್ಡೆಗಳು ನಾಶವಾಗುತ್ತವೆ."[೧೩೧]

ಹಂಸನೂರು: ಹಂಸ= ನೀರಿನಲ್ಲಿ ವಾಸಿಸುವ ಪಕ್ಷಿ, ಒಬ್ಬ ವ್ಯಕ್ತಿ.

ಹಂಸನ+ಊರು= ಹಂಸನೂರು. ವ್ಯಕ್ತಿ, ಪಕ್ಷಿ, ಜಲವಾಚಕ.

"ಈ ಊರಿಗೆ ಮೂರು ಬದಿಯಲ್ಲಿ ಹಳ್ಳಗಳು ಹರಿಯುತ್ತವೆ. ಒಂದು ಕಡೆಗೆ ಬೆಟ್ಟ ಇದೆ. ಇಲ್ಲಿ ಜನರು ವಾಸವಾಗಿದ್ದರು. ಹಳ್ಳದ ಮಡುವಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹಂಸ ಪಕ್ಷಿಗಳು ಇದ್ದವು. ಹಂಸ ಪಕ್ಷಿಯಿಂದಾಗಿ ಈ ಸ್ಥಳಕ್ಕೆ ಹಂಸನೂರು ಎಂದು ಕರೆದರು."[೧೩೨]

ಹನಮನೇರಿ : ಹನುಮನ+ಏರಿ= ಹನುಮನೇರಿ>ಹನಮನೇರಿ

ಹನುಮಂತನನ್ನು ಎತ್ತರದ ಪ್ರದೇಶದಲ್ಲಿ ಪ್ರತಿಷ್ಠಾಪಿಸಿದ್ದರಿಂದ ಈ ಹೆಸರು ಬಂದಿದೆ. ದೈವ, ಭೂಸ್ವರೂಪವಾಚಕ. ಇನ್ನೊಂದು ಇನಾಂ ಹನುಮನೇರಿ ಇದೆ.

ಹನುಮಸಾಗರ : ಹನುಮನ+ಸಾಗರ = ಹನುಮಸಾಗರ. ಹನುಮ ಎಂಬ ಪ್ರಸಿದ್ಧ ವ್ಯಕ್ತಿಯ ಊರು. ಈ ಊರಲ್ಲಿ ಹನುಮನೆಂಬವನು ಸಾಗರೋಪಾದಿಯಲ್ಲಿರುವ ಕೆರೆಯನ್ನು ಕಟ್ಟಿಸಿದ್ದಾನೆ. ವ್ಯಕ್ತಿ, ಜಲವಾಚಕ.

ಹರಡೊಳ್ಳಿ : ೧. ಹರಿದ+ಹೊಳೆ = ಹರಿದಹೊಳೆ>ಹರಡೊಳ್ಳಿ.

ಇಲ್ಲಿ ಹೊಳೆ ಹರಿದಿದೆ. ಇನ್ನೊಂದು ಅಭಿಪ್ರಾಯ ಹೀಗಿದೆ:

ಪರದ = ವ್ಯಾಪಾರಿ, ವರ್ತಕ.

೨. ಪರದ>ಹರದ, ಪರದನ+ಹಳ್ಳಿ = ಹರದನಹಳ್ಳಿ>ಹರದಳ್ಳಿ>ಹರದೊಳ್ಳಿ>ಹರಡೊಳ್ಳಿ.

ವ್ಯಾಪಾರಿಯ ಊರು, ಬರ್ತಕನ ಊರು. ಬೃತ್ತಿವಾಚಕ.

ಹಲಕುರ್ಕಿ : ೧. ಫಲ>ಪಲ>ಹಲ+ಕುರ್ಕಿ = ಹಲಕುರ್ಕಿ

ಫಲ = ಹಣ್ಣು, ಕುರ್ಕು = ಕುಕ್ಕು

ಹಣ್ಣನ್ನು ಕುಕ್ಕಿ ತಿನ್ನುವಂಥ ಪಕ್ಷಿಗಳುಳ್ಳ ಗ್ರಾಮ.

ಫಲ = ಮಾಂಸ

ಮಾಂಸವನ್ನು ಕುಕ್ಕಿ ತಿನ್ನುವಂಥ ಪಕ್ಷಿಗಳಿದ್ದ ಗ್ರಾಮ. ಆಹಾರ, ಪಕ್ಷಿವಾಚಕ.

೨. ಹಲ = ಸಾಗುವಳಿ

ಕುರ್ಕಿ = ಗುಡ್ಡದ ಮೇಲಿರುವ ಹಳ್ಳಿ. ಗುಡ್ಡದ ಮೇಲಿರುವ ಪ್ರದೇಶದಲ್ಲಿ ಬೇಸಾಯ ಮಾಡಿಕೊಂಡಿರುವ ಊರು.

ಹವಳಕೋಡ: ಹವಳ = ಕಲ್ಲುಮಣಿ

ಕೋಡ = ಶಿಖರ

ಹವಳದ+ಕೋಡ = ಹವಳಕೋಡ

ಹಳಗೇರಿ : ಪೞ = ಪೞದು = ಹಳೆಯ

ಪೞದು+ಕೇರಿ = ಪೞಗೇರಿ>ಪಳಗೇರಿ>ಹಳಗೇರಿ. ಹಳೆಯ ಊರು. ಕಾಲವಾಚಕ.

ಹಳದೂರು : ಹಳ್ಳದ+ಊರು = ಹಳ್ಳದೂರು>ಹಳದೂರು

ನೀರಿನಹಳ್ಳ ಹರಿಯುವ ಊರು. ಜಲವಾಚಕ.

ಹಾಗನೂರು : ಹಾಗನ+ಊರು= ಹಾಗನೂರು. ವ್ಯಕ್ತಿವಾಚಕ.

ಬಾದಾಮಿಯ ಭೂತನಾಥ ದೇವಾಲಯದ ಪಕ್ಕದಲ್ಲಿರುವ ಶಿವದೇವಾಲಯದ ಕಂಬದ ಮೇಲೆ ಇರುವ (B.K.NO. 134 Of 1928-29; SII.XV. 707; ಬಾ.ಸಾಂ.ಅ. ೫೮) ಈ ಶಾಸನದಲ್ಲಿ ಕ್ರಿ.ಶ.ಸು.೧೫ನೆಯ ಶತಮಾನ ತಿರಕಾಬಿ (ತೆರಕಣಾಂಬಿ?) ಹೊಂಗನೂರ ಜನಪ್ಪನ ಮಗ ತಿರುಮಲೆಯ್ಯನ ಧರ್ಮ ಎಂದಿದೆ."[೧೩೩]

ಇದರಲ್ಲಿ 'ಹೊಂಗನೂರ' ಎಂದಿದೆ ಈ ಹೊಂಗನೂರು ಹಾಗನೂರು ಆಗಿರಬೇಕು.

ಹಾನಾಪೂರು: ಹಾನಪ್ಪನ+ಊರು = ಹಾನಪ್ಪನೂರು>ಹಾನಪೂರು

ಹಾನಪ್ಪನಿಂದ ಪ್ರಸಿದ್ಧವಾದ ಊರು. ವ್ಯಕ್ತಿವಾಚಕ.

ಹಾನಪೂರ ಎಂದು ಇವೆ. ಹಾನಪೂರ ಎಸ್.ಕೆ. ಮತ್ತು ಹಾನಪೂರ ಎಸ್.ಪಿ.

ಹಾಲಿಗೇರಿ : ಪಾಲಿ = ಹಾಲಿ = ಸಾಲು, ಸಮೂಹ, ಗುಂಪು, ಪೂರ್ವ ತುದಿ, ಕೊನೆ,

ಹಾಲಿಯ+ಕೇರಿ = ಹಾಲಿಗೇರಿ, ಗುಂಪಾಗಿರುವ ಮನೆಗಳಿಂದ ಕೂಡಿದ ಕೇರಿ.

ಹುಲಸಗೇರಿ: ಹುಲಸು = ಸಮೃದ್ಧಿಯನ್ನು ಸೂಚಿಸುವ ಪದ

ಬೆಳೆಗಳು ಚೆನ್ನಾಗಿ ಬೆಳೆಯುವ ಪ್ರದೇಶ

ಹುಲುಸಾದ+ಕೇರಿ = ಹುಲಸಗೇರಿ>ಹುಲಸಗೇರಿ. ಸಮೃದ್ಧಿಸೂಚಕ.

ಹುಲ್ಲಿಕೇರಿ : ಹುಲ್ಲೆ = ಜಿಂಕೆ

ಹುಲ್ಲೆಯ+ಕೇರಿ = ಹುಲ್ಲಿಕೇರಿ

ಜಿಂಕೆಗಳು ವಾಸಿಸುವ ಊರು. ಪ್ರಾಣಿವಾಚಕ.

ಎರಡು ಹುಲ್ಲಿಕೇರಿ ಇವೆ. ಹುಲ್ಲಿಕೇರಿ ಎಸ್.ಪಿ. ಮತ್ತು ಹುಲ್ಲಿಕೇರಿ ಇನಾಂ.

ಹೂಲಗೇರಿ : ೧. ಹುಲಿ = ಸಣ್ಣ ನೀಲಿ ಹಣ್ಣುಗಳನ್ನು ಬಿಡುವ ಒಂದು ಜಾತಿಯ ಕಂಟಿ

ಹೂಲಿಯ+ಕೇರಿ = ಹೂಲಿಕೇರಿ

ಹೂಲಿಕಂಟಿಗಳು ಬೆಳೆಯುವ ಪ್ರದೇಶದಲ್ಲಿರುವ ಕೇರಿ

ಹೂಲಿಕೇರಿ>ಹೂಲಿಗೇರಿ>ಹೂಲಗೇರಿ. ಸಸ್ಯವಾಚಕ.

೨. ಹೂಲಿ = ಹಾವಳಿ, ಹಾವಳಿಕಾರರ ಕೇರಿ

ಹೂಲಿಯ+ಕೇರಿ = ಹೂಲಿಯಕೇರಿ>ಹೂಲಗೇರಿ

ಹೆಬ್ಬಳ್ಳಿ : ಪಿರಿದು = ದೊಡ್ಡ

ಪಿರಿದು+ಪಳ್ಳಿ = ಪೆರ್ಬ್ಬಳ್ಳಿ>ಹೆಬ್ಬಳಿ. ಪ್ರಮಾಣವಾಚಕ.

ಹೊಸಕೋಟೆ: ಹೊಸ+ಕೋಟೆ =ಹೊಸಕೋಡೆ. ನಿರ್ಮಾಣವಾಚಕ.

ಹೊಸೂರು: ಹೊಸ+ಊರು = ಹೊಸೂರು

ಹೊಸೂರು ಊರಿಗೆ ಸು.೩ ಕಿ.ಮೀ. ದೂರದಸಿದ್ದೇಶ್ವರ ದೇವಾಲಯದಲ್ಲಿನಿಲ್ಲಿಸಿರುವ ಕಲ್ಲಿನ ಮೇಲೆ ಇರುವ (B.K. No. 147 of 1928–29; SII XV. 236) ಕ್ರಿ.ಶ. ೧೧೫೫ರ ಕಾಲದ ಈ ಶಾಸನದಲ್ಲಿ "ಚಾಮುಂಡ ಮಂಡಳೇಶ್ವರನ ಮಹಾದೇವಿ ಲಕ್ಷ್ಮಿಯು ಸೂಂಡಿ ಹೊಸವೂರ ಕಡಕೆರೆ ಮಂಡಲದ ಕೆಲವು ಊರುಗಳನ್ನು ಚಾಮುಂಡನಿಂದ ಪಡೆದು ಆಳುತ್ತಿದ್ದಳು"[೧೩೪] ಎಂದು ಉಲ್ಲೇಖವಿದೆ. ಇದರಲ್ಲಿ 'ಹೊಸವೂರು' ಎಂದು ಹೆಸರು ಬಂದಿದೆ. ಹೊಸವೂರು>ಹೊಸೂರು ಆಗಿದೆ.

ಬೀಳಗಿ ತಾಲೂಕ



೪. ಬೀಳಗಿ ತಾಲೂಕು

ಅನಗವಾಡಿ : ಅನಘ = ಪಾಪರಹಿತ, ದು:ಖವಿಲ್ಲದ, ಕೊರತೆ ರಹಿತ

ಅನಘ+ಪಾಡಿ = ಅನಘವಾಡಿ

ಈ ಪ್ರದೇಶವನ್ನು ಯಾವುದಾದರೂ ಒಬ್ಬ ಒಡೆಯ ಆಳಿರಬಹುದು. ಇಲ್ಲಿ ಹೊಳೆ ಹರಿದಿದ್ದರಿಂದ ಸಮೃದ್ಧಿ ಊರಾಗಿದೆ. ಕೊರತೆಯೆಂಬುದಿಲ್ಲ. ಭೂಸ್ವರೂಪವಾಚಕ.

ಅಮಲಝುರಿ: ಅಮಲ = ಪವಿತ್ರ

ಝುರಿ = ತಿಳಿ ನೀರಿನ ಸಣ್ಣಹಳ್ಳ

ಅಮಲ+ಝುರಿ = ಅಮಲಝುರಿ

ಪವಿತ್ರವಾದ ಝುರಿಯುಳ್ಳ ಊರು.

ಅಮಲಝುರಿ>ಅಂಬಲಝುರಿ>ಅಂಬಳಜೇರಿ. ಜಲ, ನಿಸರ್ಗವಾಚಕ.

ಬೆಟ್ಟದ ತುದಿಯಲ್ಲಿ ಇರುವ ರಂಗನಾಥನ ಕೊಳ್ಳ ಇದೆ. ಈ ಕೊಳ್ಳದಲ್ಲಿ ಅಮಲಝುರಿ ಹುಟ್ಟಿ ಹರಿಯುತ್ತಿದೆ. ಇದು ಸುಸಂಸ್ಕೃತರು ಇರಿಸಿದ ಹೆಸರಾಗಿದೆ.

ಅರಕೇರಿ : ಅರ = ಧರ್ಮ/ಬಂಡೆ

ಕೇರಿ = ಊರು

ಅರದ+ಕೇರಿ = ಅರಕೇರಿ

ಅಂದರೆ ಧರ್ಮವಂತರ ಊರು ಎಂದರ್ಥ.

ಅರಸನ+ಕೆರೆ = ಅರಸನಕೆರೆ>ಅರಕೆರೆ>ಅರಕೇರಿ. ಸಂಸ್ಕೃತಿ, ವ್ಯಕ್ತಿ, ವಸತಿವಾಚಕ.

ಇಲ್ಲಿಯ ಪುರಾತನ ಮಠದ ಸಂಸ್ಥಾಪಕರಾದ ಜೀವನ ಮುಕ್ತಿ ಪಡೆದ ಕೌದೇಶ್ವರ ಸಾನ್ನಿಧ್ಯದಿಂದ ಈ ಊರು ಧರ್ಮವಂತರ ಊರಾಯಿತು. ಇದಲ್ಲದೆ ಇಂದಿನ ಯಾವ ದಾಖಲೆಗಳಲ್ಲೂ ಸಿಗದ

ಎರಡೂ ಗುಡ್ಡಗಳ ಮಧ್ಯದ ಕಂದರವನ್ನು ಕಟ್ಟಿ ಯಾವನೋ ಅರಸನ ಕಾಲಕ್ಕೆ ನಿರ್ಮಿಸಿದ ಬೃಹದಾಕಾರದ ಕೆರೆಯ ದಂಡೆಯ ಮೇಲಿನ ಈ ಹಳ್ಳಿಗೆ ಅರಸನ ಕೆರೆ>ಅರಸಕೆರೆ>ಅರಕೆರೆ>ಅರಕೇರಿ ಎಂದು ಕರೆದಿರಬೇಕು.

೧. "ಅರ+ಕೆರೆ = ಅರಕೆರೆ ಮತ್ತು ಅರ+ಕೆರೆ = ಅರಕೆರೆ ಎಂದು ಎರಡು ರೀತಿಯಲ್ಲಿ ಈ ಶಬ್ದವನ್ನು ಅರ್ಥೈಸಲು ಸಾಧ್ಯವಿದೆ. ಎರಡು ರೀತಿಯಲ್ಲೂ ಜಲವಾಚಕ ಘಟಕ ಮುಖ್ಯವಾಗುತ್ತದೆ.

ಅರೆಯ ಪಕ್ಕದ ಅಥವಾ ಕಲ್ಲುಬಂಡೆಯ ನಡುವಿನ ಕೆರೆಯಿಂದ ಊರಿನ ಹೆಸರಾಗಿರಬಹುದು. ಯಾರೋ ಧರ್ಮಾರ್ಥಕ್ಕೆ ಕಟ್ಟಿಸಿದ ಕೆರೆಯಿಂದಾಗಿ ಊರಿಗೆ ಈ ಹೆಸರು ಬಂದಿರಬಹುದು."[೧೩೫]

೨. ಅಱ, ಅರ–ಬರ,ಕ್ಷಾಮ–ಕೇಱ್, ಕೆರೆ–ತಟಾಕ, ಜಲಾಸಯ

ಅಱ+ಕೆಱ್ = ಅರಕೆರೆ

ಬರಗಾಲದಲ್ಲಿ ಕಟ್ಟಿಸಿದ ಕೆರೆ

ಆ ಅರಕೆರೆಯ ಪಕ್ಕದಲ್ಲಿರುವ ಊರು–ಅರಕೆರೆ>ಅರಕೇರಿ

ಅಳಗುಂಡಿ : ಆಳವಾದ+ಗುಂಡಿ = ಆಳಗುಂಡಿ>ಅಳಗುಂಡಿ

ಆಳವಾದ ಗುಂಡಿ, ತೆಗ್ಗು ಇರುವ ಪ್ರದೇಶ. ಭೂಸ್ವರೂಪವಾಚಕ.

ಇನಾಂ ಹಂಚಿನಾಳ : ಇನಾಂ = ಬಹುಮಾನ

ಹಂಚಿ = ಒಂದು ಬಗೆಯ ಹುಲ್ಲು

ಹಂಚು = ಹಂಚಿಕೆ, ಉಪಾಯ

ಹಾಳ್ = ಊರು

ಹಂಚಿನ+ಹಾಳ = ಹಂಚಿನಹಾಳ>ಹಂಚಿನಾಳ

ಸಸ್ಯ, ಸಂಸ್ಕೃತಿಕವಾಚಕ.

ಹಂಚಿ, ಒಂದು ಬಗೆಯ ಹುಲ್ಲು, ಇದನ್ನು ಪೊರಕೆ ಮಾಡಲು, ಎಲೆ ಹಚ್ಚಲು ಉಪಯೋಗಿಸುವರು. ಇಂಥ ಹಂಚಿ ಬೆಳೆಯುವ ಊರು ಹಂಚಿನಾಳ್>ಹಂಚಿನಾಳ ಆಗಿರಬೇಕು. ಹಂಚು, ಹಂಚಿಕೆದಾರರ ಊರು, ಹಂಚಿನಾಳ ಆಗಿರಲು ಸಾಧ್ಯವಿದೆ. ಈ ಹೆಸರಿನ ಊರುಗಳು ಬಹಳಷ್ಟು ಇರುತ್ತವೆ. ಇದು ಇನಾಂವಾಗಿ ಬಂದುದರಿಂದ ಇನಾಂ ಹಂಚಿನಾಳವಾಯಿತು.

ಕಂದಗಲ್ಲು : ಕಂದು+ಕಲ್ಲು = ಕಂದುಕಲ್ಲು>ಕಂದಗಲ್ಲು.

ಕಂದು ಬಣ್ಣದ ಕಲ್ಲು ಹಾಗೂ ಮಣ್ಣಿನಿಂದ ಕೂಡಿದ ಊರು. ವರ್ಣ, ಶಿಲಾವಾಚಕ.

ಕಡಪಟ್ಟಿ : ಕಡೆಯ+ಪಟ್ಟಿ = ಕಡೆಯಪಟ್ಟಿ>ಕಡಪಟ್ಟಿ

ಇದು ಒಂದು ರಾಜ್ಯದ ಕಡೆಯ ಪಟ್ಟಿಯಾಗಿರಬೇಕು. ದಿಗ್ವಾಚಕ.

ಕಮದಾಳ : ಕಮತದ+ಹಾಳ = ಕಮತದಾಳ>ಕಮತ್ದಾಳ>ಕಮದಾಳ

ಈ ಊರಿನ ಸುತ್ತಮುತ್ತ ನೀರಿನಿಂದ ಕೂಡಿದ ಪ್ರದೇಶವಿದೆ. ಅಲ್ಲದೆ ಇಲ್ಲಿ ಉತ್ತಮ ರೀತಿಯ ಒಕ್ಕಲುತನವಿದೆ.

ಕಮತ = ಒಕ್ಕಲುತನ

ಕಮತದ+ಹಾಳ = ಕಮತದಾಳ>ಕಮದಾಳ ಆಗಿರಬೇಕು.

ಕಾತರಕಿ : ಕಾತರು = ಮುಳ್ಳುಕಂಟಿ

ಇಕೆ>ಅಕೆ = ತದ್ಧಿತ ಪ್ರತ್ಯಯ

ಕಾತರ+ಇಕೆ = ಕಾತರಿಕೆ>ಕಾತರಕಿ

ಮುಳ್ಳು ಕಂಟಿಯಿಂದ ಕೂಡಿರುವ ಊರೇ ಕಾತರಕಿ. ಸಸ್ಯವಾಚಕ.

"ಕಾತರು ಎಂಬುದೊಂದು ಜನಾಂಗ. ಇಲ್ಲಿ ಕಾತರ+ಕೆಯ್ ಎಂಬ ರೂಪ 'ಕಾತರಕಿ' ಎಂದು ಸವಕಳಿ ಆಗಿರಬಹುದು. 'ಕೆಯ್' ಎಂಬುದು ಮಣ್ಣು, ನೆಲ, ಭೂಮಿಯನ್ನು ಸೂಚಿಸುತ್ತದೆ."[೧೩೬] ಇಲ್ಲಿ ಕೆಯ್‌ಕಿಂತ ಇಕೆ>ಅಕಿ ತದ್ಧಿತ ಪ್ರತ್ಯಯವೇ ಹೆಚ್ಚು ಸೂಕ್ತವೆನಿಸುತ್ತದೆ. ಕಾತರು = ಒಂದು ಜನಾಂಗ. ಕಾತರ+ಇಕೆ = ಕಾತರಿಗೆ>ಕಾತರಕಿ

ಕುಂದರಗಿ : ಕುಂದರು = ಒಂದು ಜನಾಂಗ.

ಅಗೆ>ಅಗಿ = ತದ್ಧಿತ ಪ್ರತ್ಯಯ

ಕುಂದರ+ಅಗೆ = ಕುಂದರಗೆ>ಕುಂದರಗಿ

"ಕುನ್ದರಗೆ ಎಟ್ಪತ್ತು-ಮಾಂ ಕುಂದೂರಯ್ನಾಮಿ-ಮಾಂ"[೧೩೭]

"ಕುಂದರಗೆಯ ಜಿನಮಂದಿರಮುಮಂ"[೧೩೮] ಎಂದು ಶಾಸನದಲ್ಲಿದೆ.

ನಂದವಾಡಗಿ ಶಿವಾಲಯದ ಮುಂಭಾಗದಲ್ಲಿರುವ (B.K.No. 171 of 1926–27; SII.XI-1. 103) ಶಾಸನದಲ್ಲಿ "ಭಾವನಗಂಧವಾರಣನು–ಪೊನಗುಂದ ತ್ರಿಭುವನ ತಿಳಕ ಬಸದಿಯನ್ನು,

ಪುಟಿಗೂರ ವೀರಜಿನಾಲಯವನ್ನು ಕುಂದರೆಗೆಯ ಜಿನ ಮಂದಿರವನ್ನು ಜೀರ್ಣೋದ್ಧಾರ ಮಾಡಿಸಿದ ವಿವರಣೆವಿದೆ"[೧೪೯] ಇದರಲ್ಲಿ 'ಕುಂದುರಗೆ' ಎಂದಿದೆ.

ಕೊಂತಿಕಲ್ಲು : ಕೊಂತಿ = ಪಿಶಾಚಿ, ದೆವ್ವ

ಕೊಂತಿ = ಕುಂತಿದೇವಿ

ಕುಂತಿಯ ಹೆಸರಿನ ಕಲ್ಲುಳ್ಳ ಊರು

ಕೊಂತಿಯ+ಕಲ್ಲು = ಕೊಂತಿಕಲ್ಲು

ವ್ಯಕ್ತಿ, ಶಿಲಾವಾಚಕ. ಐಹೊಳೆಯಲ್ಲಿ ಕೊಂತಿಗುಡಿ ಇದೆ.

ಕೊಪ್ಪ : ಕೊಪ್ಪ = ದಿನ್ನೆಯ ಮೇಲಿರುವ ವಸತಿ ಸ್ಥಳ. ಭೂಸ್ವರೂಪವಾಚಕ.

ಸಾಮಾನ್ಯವಾಗಿ ದಿನ್ನೆಯ ಮೇಲೆ ಒಂದು ತುದಿಯಲ್ಲಿರುವ ಹಳ್ಳಿಗೆ 'ಕೊಪ್ಪ' ಎನ್ನುತ್ತಾರೆ. ಈ ಪ್ರದೇಶದಲ್ಲಿಯ ಜನರು ಒಂದೇ ಒಂದು ದೊಡ್ಡ ಕೊಟ್ಟಗೆಯನ್ನು ನಿರ್ಮಿಸಿಕೊಂಡು ಅದರಲ್ಲಿ ತಮ್ಮ ದನಗಳನ್ನು ಸೇರಿಸುತ್ತಿದ್ದರು. ಮುಳ್ಳು ಬೇಲಿಯನ್ನು ಹಾಕುತ್ತಿದ್ದರು. ಕೊಪ್ಪ ಹೆಸರಿನ ಗ್ರಾಮಗಳು ಬೀಳಗಿ ತಾಲೂಕಿನಲ್ಲಿ ಎರಡು ಇವೆ. ಕೊಪ್ಪ ಎಸ್.ಆರ್. ಮತ್ತು ಕೊಪ್ಪ ಎಸ್.ಕೆ.

ಕೊರ್ತಿ : ಕೊಱೆತ>ಕೊರೆತ = ಕೊರೆಯುವಿಕೆ, ಕೊಯ್ಯುವಿಕೆ

ಕೊರತಿ>ಕೊರ್ತಿ = ಕೊರೆತಕ್ಕೆ ಒಳಗಾದುದು

ಹೊಳೆಯ ದಂಡೆಯ ಮೇಲಿದ್ದು, ಇದು ಪ್ರವಾಹದ ಕೊರೆತಕ್ಕೆ ಒಳಗಾಗಿರುವುದರಿಂದ ಈ ಹೆಸರು ಬಂದಿರಬೇಕು. ಪ್ರಕೃತಿವಾಚಕ.

ಕೋಲೂರು: ಕೋಲ = ಒಂದು ಜನಾಂಗ

ಕೋಲರ+ಊರು = ಕೋಲೂರು. ಜನಾಂಗವಾಚಕ.

"ದ್ರಾವಿಡರಿಗಿಂತಲೂ ಮೊದಲು ಭಾರತದಲ್ಲಿ ಕೋಲರು ಮತ್ತು ಮುಂಡರು ಎಂಬ ಜಾನಂಗವಿದ್ದು ಅವರ ಹೆಸರಿನ ಸ್ಥಳನಾಮ ವಿಶೇಷವಾಗಿವೆ."[೧೫೦]

ಕೋವಳ್ಳಿ : ಕೋಡಿ = ಕೆರೆ ಕಟ್ಟೆಗಳಲ್ಲಿ ಹೆಚ್ಚಾದ ನೀರು ಹೊರ ಹರಿದು ಹೋಗಲು ಮಾಡಿರುವ ದಾರಿ.

ಕೋಡಿ+ಪಳ್ಳಿ = ಕೋ+ವಳ್ಳಿ>ಕೋವಳ್ಳಿ. ನಿರ್ಮಾಣ, ಜಲವಾಚಕ.

ಕೋಡಿಯ ಪಕ್ಕದಲ್ಲಿರುವ ಹಳ್ಳಿ, ಹಳ್ಳಕ್ಕೆ ಒಡ್ಡು ಹಾಕಿ, ಕೆರೆ ನಿರ್ಮಿಸಿ ಅದರಿಂದ ಹರಿದು ಬರುವ ಕೋಡಿಯ ಬಳಿಯಲ್ಲಿಯೇ ಈ ಊರು ಇದೆ, ಇಂಥದ್ದೆ ಒಂದು 'ಕೋವಳ್ಳಿ' ಅಥಣಿ ತಾಲೂಕಿನಲ್ಲಿ ಇದೆ.

ಗರಡದಿನ್ನಿ : ಗರುಡ = ಒಂದು ಮಾಂಸಾಹಾರಿ ಪಕ್ಷಿ

ದಿನ್ನಿ = ಭೂ ಸ್ವರೂಪ

ಗರುಡ+ದಿನ್ನಿ = ಗರುಡದಿನ್ನಿ>ಗರಡದಿನ್ನಿ. ಪಕ್ಷಿ, ಭೂಸ್ವರೂಪವಾಚಕ.

ಹದ್ದಿನ ಜಾತಿಗೆ ಸೇರಿದ ಒಂದು ಪಕ್ಷಿ, ಕೆಂಪು ರೆಕ್ಕೆ ಹಾಗೂ ಬಿಳಿಯ ಕೊರಳುಳ್ಳ ಪಕ್ಷಿ, ಈ ಗರುಡ ಪಕ್ಷಿಗಳು ವಾಸವಾಗಿರುವ ದಿನ್ನಿ. ಇಂಥ ಪ್ರದೇಶದಲ್ಲಿ ಜನವಸತಿ ಮಾಡಿರುವುದರಿಂದ ಗರಡದಿನ್ನಿ ಎಂದು ಆ ಸ್ಥಳಕ್ಕೆ ಕರೆದಿರಬೇಕು.

ಗಲಗಲಿ : ಗಲ=ಕುತ್ತಿಗೆ, ಕೊರಳು, ಗೆಳತನ (ಗಲಶ್ಚ-ಕಂಠಶ್ಚ>ಗಳಸ್ಯ ಕಂಠಸ್ಯ)

ಕಲಿ = ಶೂರ, ಬಂಟ

ಗಲ+ಕಲಿ>ಗಲಗಲಿ, ಗೆಳತನದಲ್ಲಿ ಶೂರವಾದ ಪ್ರಸಿದ್ಧವಾದ ಊರು.

" 'ಗಾಲವ' ಋಷಿಯು ಈ ಸ್ಥಳದಲ್ಲಿ ತಪಸ್ಸು ಮಾಡಿದನು ಹಾಗಾಗಿ ಗಲಗಲಿ ಎಂದು ಹೆಸರು ಬಂದಿದೆ"[೧೪೧] ವ್ಯಕ್ತಿವಾಚಕ.

ಗಿರಿಗಾಂವ : ಗಿರಿ+ಗಾಂವ = ಗಿರಿಗಾಂವ

ಗ್ರಾಮ>ಗಾಂವ

ಗಿರಿ = ಬೆಟ್ಟ, ಗುಡ್ಡ

ಗಿರಿ+ಗ್ರಾಮ>ಗಿರಿಗ್ರಾಮ>ಗಿರಿಗಾಂವ

ಗುಡ್ಡದ ಮೇಲಿರುವ ಊರು. ಪ್ರಕೃತಿವಾಚಕ.

ಗಿರಿಸಾಗರ : ಗಿರಿ = ಬೆಟ್ಟ, ಗುಡ್ಡ

ಸಾಗರ = ನೀರು ಇರುವ ಪ್ರದೇಶ.

ಗಿರಿ+ಸಾಗರ = ಗಿರಿಸಾಗರ, ಗಿರಿಯ ಪಕ್ಕದಲ್ಲಿ ಸಾಗರವಿದೆ.

ಗಿರಿ ಮತ್ತು ಸಾಗರ ಎರಡನ್ನು ಒಳಗೊಂಡ ಊರು. ಗಿರಿ ಹಾಗೂ ನೀರು ಎರಡನ್ನೂ ಇದು ಪ್ರತಿನಿಧಿಸುವುದು. ಸುತ್ತಲು ಸಾಗರ-ನೀರು-ಇರುವ ಗಿರಿಯ ಮೇಲಿರುವ ಊರು ಗಿರಿಸಾಗರ. ಭೂಸ್ವರೂಪ ಮತ್ತು ಜಲವಾಚಕ.

ಗುಂಡನಪಲ್ಲಿ : ಗುಂಡನ+ಪಲ್ಲಿ = ಗುಂಡನಪಲ್ಲಿ

ಗುಂಡನು ಕಟ್ಟಿದ ಪಲ್ಲಿ, ಗುಂಡನ ಪಲ್ಲಿ

ಇದು ಬಹುತೇಕ ಪ್ರಾಚಿನ ಶಬ್ದ. ತಮಿಳು ಮತ್ತು ಆಂಧ್ರಪ್ರದೇಶದಲ್ಲಿ ಈಗಲೂ ಪಳ್ಳಿ ಎಂಬ ಶಬ್ದ ಉಳಿದು ಕೊಂಡು ಬಂದಿದೆ. ಆದರೆ ಕರ್ನಾಟಕದಲ್ಲಿ 'ಹಳ್ಳಿ' ಆಗಿಯೇ ಉಳಿದುಕೊಂಡಿವೆ. ಪಲ್ಲಿ>ಹಳ್ಳಿ ಆಗದಿರುವುದು ಇಲ್ಲಿಯ ವಿಶೇಷವಾಗಿದೆ. ವ್ಯಕ್ತಿವಾಚಕ.

ಗುಡದಿನ್ನಿ : ಗುಡ್ಡ+ದಿನ್ನಿ = ಗುಡ್ಡದಿನ್ನಿ>ಗುಡದಿನ್ನಿ

ಗುಡ್ಡದಿನ್ನೆಗಳಿಂದ ಕೂಡಿದ ಪ್ರವೇಶದ ಸ್ಥಳ. ಭೂಸ್ವರೂಪವಾಚಕ.

ಗುಳಬಾಳ : ಗುಳ್ಳ + ಬಾಳ = ಗುಳಬಾಳ

ಗುಳ್ಳ = ಗುಂಡು,ದುಂಡು ಬದನೆ ಜಾತಿಯ ಒಂದು ಕಾಯಿ

ಬಾಳ>ಪಾಳ

ಬದನೆ ಜಾತಿಯ ಕಾಯಿಗಳು, ಗುಳ್ಳ,ಬೆಳೆಯುವ ಹಳ್ಳಿ, ಪಾಳ,

ಗುಳ್ಳ+ಪಾಳ = ಗುಳ್ಳಪಾಳ>ಗುಳಬಾಳ. ಸಸ್ಯವಾಚಕ.

"ದುಂಡನೆಯ ಸಣ್ಣನೆಯ ಕಾಳುಗಳನ್ನು ಅದರಲ್ಲೂ ಮುಂಗಾರಿ ತೊಗರಿ, ಇತ್ಯಾದಿ ಗುಲಗಂಜಿ ಯಂಥ ಕೆಂಪು ಕಾಳುಗಳನ್ನು ಹೆಚ್ಚು ಬೆಳೆಯುವ ಕ್ಷೇತ್ರ ಇದಾಗಿದೆ. ಆದ್ದರಿಂದ ಗುಳಬಾಳ ಎಂದು ಹೆಸರು ಪ್ರಾಪ್ತವಾಗಿದೆ."[೧೪೨]

ಗೋಡಿಹಾಳ : ಕೋಡಿ = ಕೆರೆಗೆ ಜೋಡಣೆಯಾಗುವ ನೀರು ಹೊರಚೆಲ್ಲಲು

ಇರುವ ಮಾರ್ಗ

ಕೋಡಿ>ಗೋಡಿ

ಗೋಡಿ+ಹಾಳ = ಗೋಡಿಹಾಳ. ಇದು ಕೃಷ್ಣಾನದಿಯಿಂದ ಸುತ್ತುವರೆದಿದೆ. ಜಲವಾಚಕ.

ಗೋವಿನದಿನ್ನೆ : ಗೋವು = ಆಕಳು

ದಿನ್ನೆ = ಸ್ವಲ್ಪ ಎತ್ತರದ ಪ್ರದೇಶ

ಗೋವಿನ+ದಿನ್ನೆ = ಗೋವಿನದಿನ್ನೆ

ಗೋವುಗಳು ಮೇಯುವ ದಿನ್ನೆಯ ಪ್ರದೇಶ

ದಿನ್ನೆಯ ಮೇಲಿನ ಊರು. ಪ್ರಾಣಿ, ಭೂಸ್ವರೂಪವಾಚಕ.

ಚಿಕ್ಕ ಹಂಚಿನಾಳ: ಚಿಕ್ಕ = ಸಣ್ಣ

ಹಂಚಿ = ಒಂದು ಬಗೆಯ ಹುಲ್ಲು

ಯರಿ = ಕಪ್ಪು ಭೂಮಿ

ಹಾಳ = ಪ್ರದೇಶ ಊರು

ಚಿಕ್ಕ+ಹಂಚಿಯ+ಹಾಳ = ಚಿಕ್ಕಹಂಚಿಟಿ

ಹಾಳ>ಚಿಕ್ಕಹಂಚಿನಾಳ. ಪ್ರಮಾಣ, ಸಸ್ಯವಾಚಕ.

ಈ ಗ್ರಾಮದ ಸುತ್ತಮುತ್ತ ಯರಿ ಇದೆ. ಹಾಗೂ ಹಂಚಿ ಬೆಳೆಯುವುದು. ಭೂಮಿಯಲ್ಲಿ ಹಂಚಿ ಬೆಳೆಯುವುದಕ್ಕೆ ಯರಿ ಹಂಚಿನಾಳ ಎನ್ನುವರು. ಇದು ಗಾತ್ರದಲ್ಲಿ ಚಿಕ್ಕದಿರುವುದಕ್ಕೆ ಚಿಕ್ಕಹಂಚಿನಾಳ ಎಂತಲೂ ಕರೆಯುವರು. ಚಿಕ್ಕ ಮತ್ತು ಯರಿ ಇವು ಆ ಗ್ರಾಮಕ್ಕಿರುವ ವಿಶೇಷಣಗಳು.

ಚಿಕ್ಕಸಂಗಮ : ಕೃಷ್ಣಾ–ಘಟಪ್ರಭಾ ನದಿಗಳ ಸಂಗಮವಾಗಿರುವ ಊರು

'ಚಿಕ್ಕಸಂಗಮ'

ಚಿಕ್ಕಾಲಗುಂಡಿ: ಚಿಕ್ಕ = ಸಣ್ಣ

ಆಲ್(ಆಳ್) = ಜಲ

ಗುಂಡಿ = ತಗ್ಗು, ನೀರಿನ ತಗ್ಗು.

ಚಿಕ್ಕ+ಆಲ್+ಗುಂಡಿ= ಚಿಕ್ಕಾಲ್‌ಗುಂಡಿ>ಚಿಕ್ಕಾಲಗುಂಡಿ.

ಸಣ್ಣ ನೀರಿನ ತಗ್ಗು, ಇರುವ ಊರು. ಜಲ, ಭೂಸ್ವರೂಪವಾಚಕ.

ಚಿನವಾಲಕೊಪ್ಪ : ಚಿನಿವಾಲರ+ಕೊಪ್ಪ = ಚಿನವಲಕೊಪ್ಪ. ವೃತ್ತಿವಾಚಕ.

ಚೌಡಾಪೂರ : ಚೌಡಪ್ಪನ+ಊರು= ಚೌಡಪ್ಪೂರು>ಚೌಡಾಪೂರು>ಚೌಡಾಪೂರ.

ಚೌಡಪ್ಪ ದೇವತೆ ಅಥವಾ ವ್ಯಕ್ತಿನಾಮ.

ಈ ಹೆಸರಿನ ದೇವತೆ ಹಾಗೂ ವ್ಯಕ್ತಿಯಿಂದ ಪ್ರಸಿದ್ಧವಾದ ಊರು. ದೈವ, ವ್ಯಕ್ತಿವಾಚಕ

ಜಾನಮಟ್ಟಿ : ಜಾನಿ = ಒಂದು ರೀತಿಯ ಹಣ್ಣು ಕೊಡುವ ಕಂಟಿ ಜಾತಿಯ ಸಸ್ಯ

ಮಟ್ಟಿ = ದಿನ್ನೆಯ ಪ್ರದೇಶ

ಜಾನಿ+ಮಟ್ಟಿ = ಜಾನಿಮಟ್ಟಿ>ಜಾನಮಟ್ಟಿ. ಸಸ್ಯವಾಚಕ

"ಈ ಗುಡ್ಡದಲ್ಲಿ ಆಯುರ್ವೇದ ಔಷಧಿಗಾಗಿ ಬಳಸಲಾಗುವ ಜಾನಿ ಹಣ್ಣುಗಳ ಸಸ್ಯವನ್ನೊಳಗೊಂಡ ಪೊದೆ ಸಾಕಷ್ಟು ದೊರೆಯುತ್ತಿದ್ದುದರಿಂದ ಇದಕ್ಕೆ ಜಾನಮಟ್ಟಿ ಎಂದು ಹೆಸರು ಬಂದಿದೆ."[೧೪೩]

ಟಕ್ಕಳಿಕೆ : ಟಕ್ಕರು = ಒಂದು ಜನಾಂಗ

ಇಕೆ = ಜಾತಿ, ಕಸುಬು, ಗುಣತಿಳಿಸುವ ತದ್ಧಿತ ಪ್ರತ್ಯಯವಾಗಿದೆ.

ಟಕ್ಕರು+ಇಕೆ = ಟಕ್ಕರಿಕೆ>ಟಕ್ಕಳಿಕೆ

ಜಮಖಂಡಿ ತಾಲೂಕಿನಲ್ಲಿಯೂ ಒಂದು ಟಕ್ಕಳಿಕೆ ಇದೆ. ಜನಾಂಗವಾಚಕ.

ಧವಳೇಶ್ವರ : ಧವಳ+ಈಶ್ವರ = ಧವಳೇಶ್ವರ>ಧವಳೇಶ್ವರ. ದೈವ, ಸಂಸ್ಕೃತಿವಾಚಕ.

ಆದಿಕಾಲದಿಂದಲೂ ಇಲ್ಲಿಯ ಶ್ರೀ ಮಾರುತಿ ದೇವಾಲಯದಲ್ಲಿ ಒಂದು ಬಿಳಿಯ ಅಖಂಡ ಈಶ್ವರ ಮೂರ್ತಿ ಇರವುದು. ಈ ಮೂರ್ತಿಯ ವರ್ಣ ಸ್ವರೂಪದಿಂದ ಧವಳೇಶ್ವರ ಎಂದಾಗಿದೆ.

ತುಂಬರಮಟ್ಟಿ : ೧. ತುಂಬರು>ತುಮರಿ>ತುಮ್ರ =ಒಂದು ಬಗೆಯ ಗಿಡ.

ಇದು ಅಂಟ್ವುಳ್ಳ ಹಣ್ಣನ್ನು ಕೊಡುತ್ತದೆ.

ಇದರ ಎಲೆಯಿಂದ ಬೀಡಿ ಕಟ್ಟುತ್ತಾರೆ.

ಮಟ್ಟಿ+ಊರು

ತುಂಬರ+ಮಟ್ಟಿ = ತುಂಬರಮಟ್ಟಿ

೨. 'ತುಂಬರು',-ಒಂದು ಜನಾಂಗ

ತುಂಬರು ಇರುವ ಮಟ್ಟಿ-ತುಂಬರಮಟ್ಟಿ>ತುಮ್ಮರಮಟ್ಟಿ

೩. ಇನ್ನೊಂದು ಅಭಿಪ್ರಾಯ "ತುಂಬಯೆಂಬ ರಾಕ್ಷಸಿ ಇಲ್ಲಿ ವಾಸವಾಗಿದ್ದರಿಂದ ಈ ಸ್ಥಳಕ್ಕೆ ತುಂಬರಮಟ್ಟಿ ಎಂದು ಹೆಸರು ಬಂದಿದೆ."[೧೪೪] ಇದು ಕೇವಲ ಪುರಾಣ. ಸಸ್ಯ, ಜನಾಂಗ, ವ್ಯಕ್ತಿವಾಚಕ.

ತೆಗ್ಗಿ : ತೆಗ್ಗು – ತಗ್ಗು, ಕುಣಿ, ಗುಂಡಿ, ಸಮತಟ್ಟೆಗಿಂತ ಕೆಳಗಿರುವುದು.

ಇ = ಇರುವ ಎಂಬ ಅರ್ಥಕೊಡುವ ತದ್ಧಿತ ಪ್ರತ್ಯಯ

ತಗ್ಗಾದ ಪ್ರದೇಶದಲ್ಲಿ ಈ ಊರು ಇರುವುದರಿಂದ ಇದಕ್ಕೆ ತೆಗ್ಗಿ ಎನ್ನುವರು. ಭೂಸ್ವರೂಪವಾಚಕ.

ತೋಳಮಟ್ಟಿ : ತೋಳದ+ಮಟ್ಟಿ = ತೋಳಮಟ್ಟಿ

ಮಟ್ಟಿ = ಪೊದೆ, ಮೆಳೆ, ತೋಳಗಳು ಈ ಪೊದೆಗಳಲ್ಲಿ ಮೇಳೆಗಳಲ್ಲಿ ಹೆಚ್ಚು ವಾಸ ಮಾಡುವವು. ಹಾಗಾಗಿ ತೋಳಮಟ್ಟಿ ಎಂದಾಗಿದೆ.

ಇಲ್ಲಿ ಗುಡ್ಡ ಹತ್ತಿರವೇ ಇರುವುದರಿಂದ ಅಲ್ಲಿ ಪೊದೆಗಳಿರುವುದರಿಂದ ತೋಳಗಳಿಗೆ ವಾಸಿಸಲು ಅನುಕೂಲವು ಆಗಿದೆ. ಹಾಗಾಗಿ ತೋಳ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ತೋಳಮಟ್ಟಿ ಎಂದು ಹೆಸರು ಬಂದಿದೆ. ಪ್ರಾಣಿವಾಚಕ.

ನಾಗರಾಳ: ನಾಗರ+ಹಾಳ = ನಾಗರಹಾಳ>ನಾಗರಾಳ

ನಾಗರು = ಒಂದು ಜನಾಂಗ

ಈ ಜನಾಂಗವಿರುವ ಊರು. ಜನಾಂಗವಾಚಕ.

ಬಳ್ಳೂರು : ಬಳ್ಳ = ಅಳತೆಮಾಪಕ

ಬಳ್ಳ+ಊರು = ಬಳ್ಳೂರು

ಈ ಊರು ನದಿಯ ದಂಡೆಯ ಮೇಲಿದ್ದು, 'ಬಳ್ಳದ' ಆಕಾರದಲ್ಲಿರುವ ಊರು ಬಳ್ಳೂರು ಎಂದಾಯಿತು. ಸ್ವರೂಪವಾಚಕ.

ಇನ್ನೊಂದು ಅಭಿಪ್ರಾಯ ಹೀಗಿದೆ: ದಯಾನಂದರು ಈ ಪ್ರದೇಶದಲ್ಲಿ ಸಂಚಾರ ಕೈಗೊಂಡಿದ್ದರು. ಇವರು ಲಿಂಗ ಪೂಜೆಯಿಲ್ಲದೆ ಪ್ರಸಾದ ಸ್ವೀಕರಿಸುತ್ತಿರಲಿಲ್ಲ. ಬಿಜಾಪುರ ಮುಸ್ಲಿಂ ಆಳ್ವಿಕೆಯ ಪ್ರಭಾವದಿಂದ ಪ್ರತಿಯೊಂದು ಊರಲ್ಲಿ ಲಿಂಗವಿರುವ ಗುಡಿ ಸಿಗುವುದು ಕಷ್ಟವಿತ್ತು. ಅಂಥ ಸಂದರ್ಭದಲ್ಲಿ ದಯಾನಂದರಿಗೆ ಕಣ್ಣು ಬೇನೆಯೂ ಬಂದಿತ್ತು. ಶಿವಲಿಂಗ ಹುಡುಕಿ ಸುಸ್ತಾಗಿದ್ದರು. ಆಗ ಒಬ್ಬ ಶಿಷ್ಯ 'ಬಳ್ಳ'ವನ್ನೇ ಲಿಂಗವೆಂದು ತಂದು ಕೊಟ್ಟ. ದಯಾನಂದರು ಆ ಬಳ್ಳವನ್ನು ಪೂಜಿಸಿ ಪ್ರಸಾದ ಸ್ವೀಕರಿಸಿದರು. ನಂತರ ನಿಜ ಸಂಗತಿಯನ್ನು ಊರಿನ ಜನರು ತಿಳಿಸಲು ದಯಾನಂದರು ಅದನ್ನು ಒಪ್ಪಲಿಲ್ಲ. ಆ ಬಳ್ಳವನ್ನು ಕೀಳಲು ಪ್ರಯತ್ನಿಸಿದರು. ಅದು ಕೀಳಲಿಲ್ಲ. ಬದಲಾಗಿ ಈಶ್ವರ ಲಿಂಗವಾಗಿ ಮಾರ್ಪಟ್ಟಿತು. ಜನ ದಯಾನಂದರಿಗೆ ಶರಣಾಗತರಾದರು. ಹಾಗೂ ಅಂದಿನಿಂದ ಬಳ್ಳವನ್ನು ಬಳ್ಳೇಶ್ವರನೆಂದು ಪೂಜಿಸಲು ಪ್ರಾರಂಭಿಸಿ ಈ ಊರಿಗೆ ಬಳ್ಳೂರು ಎಂದು ಕರೆದರು. ಈಗ ಈ ದೇವಾಲಯ ಮತ್ತು ಊರು ಎರಡು ಆಲಮಟ್ಟಿಯ ಹಿನ್ನೀರಿನಲ್ಲಿ ಮುಳುಗಡೆಯಾಗಿವೆ. ಇದೊಂದು ಸ್ಥಳ ಪುರಾಣ.

ಬಾಡಗಂಡಿ : ಬಾಡ = ಕಾಯಿಪಲ್ಲೆ

ಕಂಡಿ = ಇಕ್ಕಟ್ಟಿನ ಪ್ರದೇಶ

ಬಾಡ+ಕಂಡಿ = ಬಾಡಗಂಡಿ

ಬಾಡಗಂಡಿ ಎಂದರೆ ಕಾಯಿಪಲ್ಲೆ ಬೆಳೆಯುವ ಇಕ್ಕಟ್ಟಾದ ಪ್ರದೇಶ ಎಂದರ್ಥ. ಸಸ್ಯ, ಭೂ ಸ್ವರೂಪವಾಚಕ.

ಬಾಡಗಿ : ೧. ಬಾಡ = ಕಾಯಿಪಲ್ಲೆ

ಅಗೆ = ಇರುವಂತಹ

ಬಾಡ+ಅಗೆ = ಬಾಡಗೆ

ಬಾಡಗೆ>ಬಾಡಗಿ ಎಂದಾಗಿದೆ.

೨. ಬಾಡ = ಕಾಯಿಪಲ್ಲೆ

ಕೆಯ್ = ಗದ್ದೆ, ತೋಟ

ಬಾಡು+ಕಯ್ = ಬಾಡಕೆಯ್>ಬಾಡಗೆಯ್>ಬಾಡಗಿ

ಕಾಯಿಪಲ್ಲೆ ಬೆಳೆಯುವ ಗ್ರಾಮ, ಪ್ರದೇಶ. ಸಸ್ಯವಾಚಕ.

ಬಾಡಗಿಯ ಕೇಶವ ದೇವಾಲಯದ ಭಿತ್ತಿಯಲ್ಲಿರುವ ಶಾಸನ (B.K.No 68 of 1928–29; SII.XV. 177) ಈ ಶಾಸನದಲ್ಲಿ "ಮಲ್ಲರಸನ ಮಗನಾದ ವೀರರಸ ಎಂಬುವವನು ಎಂಟು ಹಿಟ್ಟುಗಳ ಸಮಕ್ಷಮದಲ್ಲಿ ಕಲ್ಲುನೆಟ್ಟು ಶಾಸನವನ್ನು ಬರೆಸಿ ನೀಡಿದನೆಂದು ಇಲ್ಲಿ ಹೇಳಿದೆ. ಶಾಸನವನ್ನು ಬಾಡಗೆಯ ಮಾಹಾಜನರು ಪಡೆಯುತ್ತಾರೆ."[೧೪೫]

ಬಾದರದಿನ್ನಿ : ಬಾದರ = ಬೋರೆಹಣ್ಣು, ಒಂದು ಜನಾಂಗ.

ಬಾದರ+ದಿನ್ನಿ = ಬಾದರದಿನ್ನಿ, ಬೋರೆಹಣ್ಣಿಗೆ ಪ್ರಸಿದ್ಧವಾದ ದಿನ್ನಿ.

೧. ಬೋರೆಹಣ್ಣಿನ ಗಿಡಗಳು ಈ ದಿನ್ನಿಗಳಲ್ಲಿ ಹೆಚ್ಚಾಗಿ ಬೆಳೆಯುವವು. ೨. ಬಾದರ ಜನಾಂಗ ಈ ದಿನ್ನೆಗಳಲ್ಲಿ ನೆಲೆನಿಂತುದಕ್ಕೆ ಬಾದರದಿನ್ನೆ ಎನ್ನಲಾಗಿದೆ. ಸಸ್ಯ ಮತ್ತು ಜನಾಂಗವಾಚಕ.

ಬಾವಲತ್ತಿ : ಬಾವಲಿ = ಹಗಲಿನಲ್ಲಿ ಮರದ ಟೊಂಗಿಗೆ ತಲೆ ಕೆಳಗಾಗಿ ನೇತು ಬಿದ್ದಿದ್ದು, ರಾತ್ರಿಯಲ್ಲಿ ಹಾರಾಡುವ ಅಗಲವಾದ ರೆಕ್ಕೆಗಳುಳ್ಳ ನರಿ ಮುಖದ ಒಂದು ಬಗೆಯ ಪಕ್ಷಿಯ ಪಕ್ಷಿ.

ಅತಿ>ಅತ್ತಿ = 'ಉಳ್ಳ' ಎಂಬ ಅರ್ಥವುಳ್ಳ ತದ್ಧಿತ ಪ್ರತ್ಯಯ.

ಬಾವಲಿ+ಅತ್ತಿ = ಬಾವಲತ್ತಿ

"ಈ ಗ್ರಾಮದಲ್ಲಿ ಬಾವಲಿಗಲು ವಾಸಿಸುತ್ತಿದ್ದುದರಿಂದ ಬಾವಲತ್ತಿ ಎನ್ನುವರು."[೧೪೬]

ಬಿಸನಾಳ : ಬಿಸ = ವಿಷ, ನೀರು, ಕಮಲದ ದಂಟು, "ಮೃಣಾಳ: ಬಿಸಂ–ಈ ೨ ನಾಳಂ"[೧೪೭] ಕಮಲದ ಬಳ್ಳಿ. ಬಿಸನಾಳ– ಕಮಲದ ಬಳ್ಳಿ ಇರುವ ಊರು. ಸಸ್ಯವಾಚಕ.

ಬೀಳಗಿ : "ಬಿಳಲ್>ಬೀಳಲ್+ಕೆಯ್>ಬೀಳಗೆಯ್>ಬೀಳಗಿ

ಬೀಳಲ್ = ಆಲದಮರ. ಇದು ನಿಸರ್ಗವಾಚಿ ರೂಪ. ಈ ಪ್ರದೇಶದಲ್ಲಿ ಆಲದ ಮರಗಳು ಹೆಚ್ಚಾಗಿದ್ದುದರಿಂದಾಗಿ ಬೀಳಗಿಯಾಯಿತು."[೧೪೮]

ಬೀಳಗಿ ಆರೆತ್ತಿನ ಬಾವಿಯ ಕಲ್ಲಿನ ಮೇಲೆ ಇರುವ (B.K.No 73 of 1928–29; SII.XV. 725) ಶಾಸನದಲ್ಲಿ "ಪಾತಾಳಶಾಯಿ ಮಹಾದೇವನ ಮಗ ಬೀಳಗಿಯ ಉತ್ತರ ಭಾಗದಲ್ಲಿ ವಿಶಾಲವಾದ ಬಾವಿಯನ್ನು ಕಟ್ಟಿಸಿದಂತೆಯೂ ಇದಕ್ಕೆ ಅರಮನೆಯವರು ದತ್ತಿಯೊಂದನ್ನು ನೀಡಿದಂತೆ ಉಲ್ಲೇಖವಿದೆ."[೧೪೯] ಇದರಲ್ಲಿ 'ಬಿಳಗಿ' ಎಂದು ಹೆಸರು ಬಂದಿದೆ.

ಬೀರಕಬ್ಬಿ : ಬೀರ>ವೀರ

ಕಪಿ>ಕಬ್ಬಿ, ವೀರ+ಕಪಿ = ವೀರಕಪಿ>ಬೀರಕಬ್ಬಿ. ವ್ಯಕ್ತಿವಾಚಕ.

"ಈ ಗ್ರಾಮದ ಮುಖ್ಯ ದೇವತೆ ಶ್ರೀ ಹನುಮಂತ, ವೀರಕಪಿ, ಈ ಗ್ರಾಮದಲ್ಲಿ ಪ್ರತಿಷ್ಠಾಪನೆಯಾದ ನಂತರ ವೀರಕಪಿ>ಬೀರಕಬ್ಬಿ ಎಂದಾಗಿದೆ"[೧೫೦]

ಬೂದಿಹಾಳ : ಬೂದಿಯಿಂದ ಕೂಡಿದ ಪ್ರದೇಶಕ್ಕೆ ಬೂದಿಹಾಳ ಎನ್ನುವರು.

ಬೂದಿ = ಭಸ್ಮ, ವಿಭೂತಿ, ಒಂದು ವರ್ಣ

ಹಾಳು = ಊರು

ಬೂದಿ+ಹಾಳ = ಬೂದಿಹಾಳ>ಬೂದ್ಯಾಳ. ಭೂಸ್ವರೂಪ, ವಸ್ತುವಾಚಕ.

ಈ ಪ್ರದೇಶದಲ್ಲಿ ಹಿಂದೆ ಫಕೀರೇಶ್ವರ ಎಂಬ ಮಹಾಸ್ವಾಮಿಗಳು ವಾಸವಾಗಿದ್ದರು. ಅವರು ಪವಾಡ ಪುರುಷರಾಗಿದ್ದು,ಜನರ ಕಷ್ಟ ಕಾರ್ಪಣ್ಯ ಜಡ್ಡು ಕಾಯಿಲೆಗಳನ್ನು ಮಂತ್ರಿಸಿದ ಬೂದಿಯಿಂದಲೇ ವಾಸಿಮಾಡುತ್ತಿದ್ದರು. ಇದರಿಂದ ಬೂದಿಹಾಳ ಎಂದಾಗಿರಬಹುದು. ಅಲ್ಲದೇ ಅಖಂಡ ಭಸ್ಮದ ಉದ್ಯೋಗ ಮಾಡುವವರ ಊರು ಬೂದಿಹಾಳ, ಬೂದಿ ವರ್ಣದ ಭೂಮಿ ಹೊಂದಿದ ಪ್ರದೇಶವಾಗಿದ್ದರಿಂದ ಬೂದಿಹಾಳ ಎಂದು ಕರೆದಿರಬಹುದು.

ಇದು ನದಿಯ ದಂಡೆಯ ಮೇಲಿದ್ದುದರಿಂದ ಇಲ್ಲಿ ಯಜ್ಞಯಾಗಗಳನ್ನು ಮಾಡುತ್ತಿದ್ದುದರಿಂದ ಅಗ್ನಿಕುಂಡದಿಂದ ಯಜ್ಞಕುಂಡದಿಂದ ಹೇರಳವಾಗಿ ಬೂದಿ ಇಲ್ಲಿ ಬೀಳುತ್ತಿದ್ದು ಇದರಿಂದ ಇದಕ್ಕೆ 'ಬೂದಿಯಹಾಳ' ಎಂದು ಕರೆಯಲಾಗಿದೆ. ಬೂದಿಹಾಳ ಎರಡು ಇವೆ. ಬೂದಿಹಾಳ ಎಸ್.ಜಿ. ಮತ್ತು ಬೂದಿಹಾಳ ಎಸ್.ಎಚ್.

ಮನ್ನಿಕೇರಿ (ಮಣ್ಣಿಕೇರಿ): ಮಣ್ಣಿನಕೆರೆ = ಮಣ್ಣಿಕೆರೆ>ಮಣ್ಣಿಕೇರಿ

ಮಣ್ಣಿನಿಂದ ಕಟ್ಟಿದ ಕೆರೆ

ಮಾನ್ಯಗೇರಿ>ಮನ್ನಿಕೇರಿ

"ಮಾನ್ಯಗೇರಿಯ ಪೂರ್ವಕ್ಕೆ ದಾವಣಸೆಟ್ಟಿಯರ ಅಂಗಡಿಯಿದ್ದ ಉಲ್ಲೇಖ ಶಾಸನದಲ್ಲಿದೆ"[೧೫೧]

ಮಾನ್ಯ = ಗೌರವಕ್ಕೆ ಕೊಟ್ಟದ್ದು

ಮಾನ್ಯದ+ಕೇರಿ = ಮಾನ್ಯಗೇರಿ>ಮನ್ನಿಕೆರಿ

ಯಾವುದಾದರೂ ವ್ಯಕ್ತಿಗೆ ಮಾನ್ಯಕ್ಕೆ ಕೊಟ್ಟ ಊರಾಗಿರಬೇಕು.

ಮಾನಗೂರು: ಮಾನಕ = ಒಂದು ಬಗೆಯ ಸಸ್ಯ.

'ಮಾನಕ, ಕರೆಮೆಣಸಂಗಿ, ಬಲರಕ್ಕಸಿ, ಬಾಳರಾಕ್ಷ; (ಸಸ್ಯನಿ. ೯)

ಮಾನಕ+ಊರು = ಮಾನಕೂರು>ಮಾನಗೂರು. ಸಸ್ಯವಾಚಕ.

ಮುಂಡಗನೂರು: ಮುಂಡ = ಒಂದು ಜನಾಂಗ

ಮುಂಡಗ = ಮುಂಡಗಜಾತಿಯ ವ್ಯಕ್ತಿ

ಮುಂಡಗನ+ಊರು = ಮುಂಡಗನೂರು. ಜನಾಂಗವಾಚಕ.

ಬಾದಾಮಿಯ ಬತೇರಪ್ಪ ಗುಡಿಯ ಬಲಬದಿಯ ಬಂಡೆಯ ಮೇಲೆ ಇರುವ (I.A.X. 63, ಬಾ.ಸಾಂ.ಅ. ೪೪) ಕ್ರಿ.ಶ. ೧೩೪೦ರ ಶಾಸನದಲ್ಲಿ ಚಾಮೆಯನಾಯಕನು ಬಾದಾಮಿಯ ಎರಡು ಸಾವಿರದವರೆಗೆ (ಮಹಾಜನರಿಗೆ) ಬಾದಾಮಿ ಮತ್ತು ಮುಂಡನೂರನ್ನು ಭೂತನಾಥನ ಸನ್ನಿಧಿಯಲ್ಲಿ ದಾನ ನೀಡಿದ ವಿವರಣೆಯಿದೆ."[೧೫೨] ಇದರಲ್ಲಿ 'ಮುಂಡನೂರನು', ಎಂದು ವ್ಯಕ್ತಿ ಹೆಸರು ಬಂದಿದೆ.

"ಈ ಪ್ರದೇಶದಲ್ಲಿ ದುಷ್ಟ ಶಕ್ತಿ ಸಂಕೇತವಾದ ಮದಿಸಿದ ಕೋಣವೊಂದು ಜನರಿಗೆ ಉಪಟಳ ಕೊಡುತ್ತಿತ್ತು. ಆಗ ದೈವಿ ಶಕ್ತಿಯೊಂದು ತನ್ನ ಶಕ್ತ್ಯಾಯುಧದಿಂದ ಕೋಣವನ್ನು ಬೆನ್ನಟ್ಟಿತು. ಅದರ ಒಂದೊಂದೇ ಅಂಗಗಳನ್ನು ಛೇದಿಸುತ್ತಾ ನಡೆಯಿತು. ಹೀಗೆ ಬೆನ್ನಟ್ಟಿದಾಗ ಕೋಣದ ಮುಂಡ

ಭೇದಗೊಂಡು ಕಳಚಿ ಬಿದ್ದ ಪ್ರದೇಶಕ್ಕೆ 'ಮುಂಡ ಬಿದ್ದ ಊರು', ಮುಂಡಗನೂರಾಗಿದೆ."[೧೫೩] ಇದೊಂದು ದಂತಕಥೆ.

ಮುತ್ತಲದಿನ್ನಿ: ಮುತ್ತಲ = ಕಂಟಿ ಜಾತಿಯ ಒಂದು ಸಸ್ಯ

ಮುತ್ತಲ+ದಿನ್ನಿ = ಮುತ್ತಲದಿನ್ನಿ

ಇದು ಮುತ್ತಿನಂಥ ಕಾಯಿಗಳನ್ನು ಬಿಡುತ್ತದೆ. ಇಂಥ ಸಸ್ಯಗಳ ಪೊದೆ ಇರುವ ದಿನ್ನೆಯೆ ಮುತ್ತಲದಿನ್ನಿ. ಸಸ್ಯ, ಭೂಸ್ವರೂಪವಾಚಕ.

ಯಡಹಳ್ಳಿ : ಎಡ = ಎಡಭಾಗ

ಎಡಭಾಗದಲ್ಲಿರುವ ಹಳ್ಳಿ>ಎಡಹಳ್ಳಿ>ಯಡಳ್ಳಿ. ದಿಗ್ವಾಚಕ.

ಯತ್ನಟ್ಟಿ : ಎತ್ತಿನ+ಹಟ್ಟಿ>ಯತ್ನಟ್ಟಿ

ಉತ್ತಮ ಎತ್ತುಗಳಿರುವ ಹಟ್ಟಿ. ಪ್ರಾಣಿವಾಚಕ.

ಯಳ್ಳಿಗುತ್ತಿ : ಯರಳೆ = ಜಿಂಕೆ, ಚಿಗರಿ

ಗುತ್ತಿ = ಗುಡ್ಡ

ಯರಳೆ>ಯಳ್ಳೆ>ಯಳ್ಳಿ

ಯಳ್ಳಿಯ+ಗುತ್ತಿ = ಯಳ್ಳಿಗುತ್ತಿ

ಚಿಗರೆಗಳಿರುವ, ಯರಳೆಗಳಿರುವ ಗುತ್ತಿ.

ಪ್ರಾಣಿ, ಪ್ರಕೃತಿವಾಚಕ.

"ಯಳ್ಳಿಗುತ್ತಿ ಸುತ್ತ ಮುತ್ತ ಗುಡ್ಡದಿಂದ ಕೂಡಿದೆ.ಆ ಗುಡ್ಡದಿಂದ ಹರಿದುಬಂದ ನೀರಿಗೆ ಪದರಕಲ್ಲು ಮೃದುವಾಗಿ ನಾರಿನ ಹಾಗೆಯೇ ಎಳೆ ಎಳೆಯಾಗಿ ಬಿಚ್ಚಿದ ಕಲ್ಲಿನ ಪದರಿನ ಸ್ಥಳಕ್ಕೆ ಯಳ್ಳಿಗುತ್ತಿ ಯೆಂದು"[೧೫೪] ಕರೆಯುವರು.

ರಬಕವಿ : ರೆಬ್ಬಲವ್ವ>ರೆಬ್ಬಕವ್ವೆ>ರೆಬಕವ್ವೆ>ರಬಕವಿ. ವ್ಯಕ್ತಿವಾಚಕ.

ರೊಳ್ಳಿ : ರೊಳ್ಳಿ = ನೆಪ, ಕಾರಣ, ಸೊಗು

ಈ ಗುಣಗಳ್ಳುಳವರ ಊರು. ಸ್ವಭಾವವಾಚಕ.

ರೋಣಿಹಾಳ: ರೋಹಿಣಿ>ರೋಣಿ

ರೋಣಿ+ಹಾಳ = ರೋಣಿಹಾಳ

ರೋಹಣ = ಏರುವಿಕೆ, ಹತ್ತುವಿಕೆ,ಪರ್ವತಪ್ರದೇಶ.

ಇಳಿಜಾರದ ಪ್ರದೇಶ ಅಂದರೆ ಎತ್ತರದ ಪ್ರದೇಶದಲ್ಲಿಯ ಹಳ್ಳಿ. ಭೂಸ್ವರೂಪವಾಚಕ.

೧. ರೋಹಿಣಿ = ಶ್ರೀಗಂಧ, ಚಂದನ

"ರೋಹಿಣಿ ಮಲಯಜಂ ಚಂದನಂಗಂಥಮೆಂದೆನಿಕ್ಕುಂ"[೧೫೫]

ರೋಹಿಣಿ ಹಾಳ = ರೋಹಿಣಿಹಾಳ>ರೋಣಿಹಾಳ>ರೋಣ್ಯಾಳ.

ಶ್ರೀಗಂಧದ ಗಿಡಗಳು ಬೆಳೆಯುವ ಪ್ರದೇಶದಲ್ಲಿರುವ ಊರು.

ಲಿಂಗಾಪೂರ: ಲಿಂಗಪ್ಪನ+ಊರು = ಲಿಂಗಪ್ಪನೂರು>ಲಿಂಗಾಪೂರು

ಲಿಂಗಪ್ಪನೆಂಬ ವ್ಯಕ್ತಿಯಿಂದ ಪ್ರಸಿದ್ಧವಾದ ಊರು. ವ್ಯಕ್ತಿವಾಚಕ .

ಲಿಂಗಾಪೂರ ಎರಡು ಇವೆ. ಲಿಂಗಾಪೂರ ಎಸ್.ಕೆ. ಮತ್ತು ಲಿಂಗಾಪೂರ

ಶಿರಗುಪ್ಪಿ : ಶಿರಿ>ಸಿರಿ, ಸಿರಿ = ಸಂಪತ್ತು

ಕುಪ್ಪಿ>ಗುಪ್ಪಿ = ಜನ ವಾಸಸ್ಥಳ

ಶಿರಿಯ+ಗುಪ್ಪಿ = ಶಿರಗುಪ್ಪಿ. ಸಂಪತ್ತು, ವಸತಿಸೂಚಕ.

ಸಿದ್ಧಾಪೂರ : ಸಿದ್ಧಪ್ಪನ+ಊರು = ಸಿದ್ಧಪ್ಪನೂರು>ಸಿದ್ಧಪ್ಪೂರು>ಸಿದ್ಧಾಪೂರ

ಇಲ್ಲಿ ಸಿದ್ಧಪ್ಪನೆಂಬ ಪ್ರಭಾವಿ ವ್ಯಕ್ತಿ ಆಗಿ ಹೋಗಿರಬೇಕು. ಆ ವ್ಯಕ್ತಿಯ ಹೆಸರಿನಿಂದ ಈ ಊರನ್ನು ಕರೆದಿರಬಹುದು. ವ್ಯಕ್ತಿವಾಚಕ.

ಸುನಗ : ಸು = ಒಳ್ಳೆಯ, ಶ್ರೇಷ್ಠ

ನಗ = ಸಂಪತ್ತು, ಪರ್ವತ, ಮರ, ಸೂರ್ಯ, ಸರ್ಪ, ಸು+ನಗ = ಸುನಗ

"ಇವುಗಳ ಒಟ್ಟಾರೆ ಸಂಪತ್ತಿನಿಂದ ಕೂಡಿದ ಶ್ರೇಷ್ಠ ನಾಡು ಎಂದರ್ಥ ನೀಡುವುದು."[೧೫೬]

ಸುನಗಿ= ಜಯ ಸೂಚಕ ಪತಾಕೆ

ಹಿಂದೆ ಯಾವಾಗಲೊ ಜಯವನ್ನು ಈ ಸ್ಥಳದಲ್ಲಿ ಪಡೆದು. ಪತಾಕೆಯನ್ನು ಹಾರಿಸಿದ್ದು ಇಲ್ಲಿಯೆ ಜನರು ವಾಸಿಸತೊಡಗಿದ ಮೇಲೆ ಇದನ್ನು 'ಸುನಗ' ಎಂದು ಕರೆದಿರಬಹುದು.

ಸೊನ್ನ : ಸೊನ್ನ = ಬಂಗಾರ, ಬಂಗಾರದಂಥ ಬೆಲೆಯುಳ್ಳ ಊರು.

ಸೊನ್ನ ಫಲವತ್ತಾದ ಭೂಮಿಯಿಂದ ಕೂಡಿದ ಸಮೃದ್ಧವಾದ ಊರು. ಲೋಹ, ಪ್ರಕೃತಿವಾಚಕ.

ಹೆಗ್ಗೂರು: ಕುಜುವ ಎಂದರೆ ನಡುಗಡ್ಡೆ.

ಶಾಸನಗಳಲ್ಲಿ ಪೆರ್ಗ್ಗುಜುವ ಎಂದಿದೆ.

ಪಿರಿದು+ಕುಜುವ = ಪೆರ್ಗ್ಗುಜುವ. ಇದೊಂದು ದೊಡ್ಡ ನಡುಗಡ್ಡೆ.

ಕಾಲಾಂತರದಲ್ಲಿ ಪೆರ್ಗ್ಗುರುವ>ಹೆಗ್ಗುರುವ>ಹೆಗ್ಗುರು>ಹೆಗ್ಗೂರು ಎಂದಾಗಿದೆ.

ಹೆಗ್ಗೂರು ಈಶ್ವರ ದೇವಾಲಯದ ಬಳಿ ಇರುವ ಕಲ್ಲಿನ ಮೇಲೆ ಇರುವ (B.K.No 80 0f 1928–29; SII.XI. 162) ಶಾಸನದಲ್ಲಿ "ಆಯ್ಚುವರ್ಮ್ಮರಸನು ಪೆರ್ಗ್ಗುಜುವ ರೆಬ್ಬಲೇಶ್ವರಕ್ಕೆ ೨೪ ಮತ್ತರು ಭೂಮಿ ಬಿಟ್ಟ ಉಲ್ಲೇಖವಿದೆ"[೧೫೭] ಇದರಲ್ಲಿ 'ಹೆರ್ಗ್ಗಜುವ ಎಂದು ಕರೆದಿದೆ. ಇದರ ಕಾಲ ಕ್ರಿ.ಶ. ೧೦೨೪.

ಈಶ್ವರ ದೇವಾಲಯದ ಬಳಿ ಇರುವ ಇನ್ನೊಂದು ಕಲ್ಲಿನಮೇಲೆ (ಕ.ವಿವಿ.ಶಾ.ಸಂ–೯, ಪು. ೬೭) ಈ ಶಾಸನದಲ್ಲಿ "ಸುಂಬಳೇಶ್ವರ, ಹೊಲೇಶ್ವರ, ಲೋಕೇಶ್ವರ ದೇವರ ಉಲ್ಲೇಖವಿದ್ದು."[೧೫೮] ಇಲ್ಲಿಕೂಡ 'ಹೆರ್ಗ್ಗಜುವ' ಎಂದು ಹೆಸರು ಬಂದಿದೆ.

ಹೆರಕಲ್ಲು: ಪಿರಿದು+ಕಲ್ = ಪೆರಕಲ್ಲು>ಹೆರಕಲ್ಲು

ದೊಡ್ಡಕಲ್ಲುಗಳಿರುವ ಊರು. ಶಿಲಾವಾಚಕ

ಹೊನರಳ್ಳಿ : ಹೊನ್ನರು = ಒಂದು ಜನಾಂಗ

ಹೊನ್ನರ+ಪಳ್ಳಿ = ಹೊನರ ಹಳ್ಳಿ>ಹೊನರಳ್ಳಿ

ಪಣರು>ಹೊನರು = ಹೋರಾಟ ಹೋರಾಡು.

ಹೋರಾಟಗಾರರ ಸಾಹಸಿಗರ ಹಳ್ಳಿ ಎಂದೂ ಕರೆದಿರಲು ಸಾಧ್ಯತೆಯಿದೆ. ಜನಾಂಗವಾಚಕ.

ಹೊನ್ನಾಳ : ೧. ಹೊನ್ನಿನ+ಹಾಳ = ಹೊನ್ನಿನಹಾಳ>ಹೊನ್ನಿಹಾಳ>ಹೊನ್ನಾಳ

ಹಿರಿಯರ ಕಾಲದಿಂದಲೂ ಈ ಊರಿನಲ್ಲಿ ಹೊನ್ನಿನಿಂದ ಅಂದರೆ ಫಲವತ್ತಾದ ಭೂಮಿ ಇದ್ದು, ಸಮೃದ್ಧಿಯಾಗಿ ಬೆಳೆಗಳನ್ನು ಬೆಳೆಯುವರು. ದನ–ಕರುಗಳನ್ನು ಅಷ್ಟೇ ಚೆನ್ನಾಗಿ ನೋಡಿಕೊಳ್ಳುವರು. ಒಟ್ಟಿನಲ್ಲಿ ಶ್ರೀಮಂತರ ಊರಾದ್ದರಿಂದ ಹೊನ್ನುಳ್ಳಹಾಳ>ಹೊನ್ನಿನಹಾಳ>ಹೊನ್ನಿಹಾಳ

>ಹೊನ್ನ್ಯಾಳ ಎಂದಾಗಿದೆ. ಈ ಪ್ರದೇಶ ನದಿ ತೀರದಲ್ಲಿರುವುದರಿಂದ ಬಂಗಾರವನ್ನು ಬಿತ್ತಿ ಬೆಳೆಯುವ ನಾಡಾಗಿದೆ. ಎಂಬ ಭಾವ ಈ ರೂಪದಲ್ಲಿದೆ. ಪ್ರಕೃತಿವಾಚಕ.

೨. ಹೊನ್ನೆ = ಒಂದು ಗಿಡ

ಹೊನ್ನೆಯ+ಹಾಳ = ಹೊನ್ನೆಹಾಳ>ಹೊನ್ನ್ಯಾಳ.

ಹೊನ್ನೆ ಗಿಡಗಳು ಬೆಳೆಯುವ ಪ್ರದೇಶದಲ್ಲಿರುವ ಗ್ರಾಮ.

ಮುಧೋಳ ತಾಲೂಕ



೫. ಮುಧೋಳ ತಾಲೂಕು

ಅಂತಾಪೂರ : ಅಂತಪ್ಪನ+ಊರು = ಅಂತಾಪೂರ. "ಅಂತಾಪೂರ ಪೂರ್ವದಲ್ಲಿ ಅನಂತಪುರ ವಾಗಿರಬಹುದೆಂದು ಊಹಿಸಲಾಗಿದೆ."[೧೫೯]

ಅನಂತನ>ಅಂತಪ್ಪನ+ಊರು = ಅಂತಾಪೂರ. ವ್ಯಕ್ತಿವಾಚಕ.

ಅಕ್ಕಿಮರಡಿ : ಅಕ್ಕಿ = ಧಾನ್ಯ

ಮೊರಡಿ = ಮಸಾರಿಭೂಮಿ

ಅಕ್ಕಿಯ+ಮರಡಿ = ಅಕ್ಕಿಮರಡಿ. ಭತ್ತ ಬೆಳೆಯುವ ಪ್ರದೇಶ. ಸಸ್ಯವಾಚಕ.

ಆಲಗುಂಡಿ : ಆಲದ+ಗುಂಡಿ = ಆಲಗುಂಡಿ

ಆಲ್ = ಆಳ

ಗುಂಡಿ = ನೀರಿನಿಂದ ತುಂಬಿದ

ಆಲ್ಗುಂಡಿ = ನೀರಿನಿಂದ ತುಂಬಿದ ತಗ್ಗಾದ (ಗುಂಡಿ) ಪ್ರದೇಶ. ಭೂಸ್ವರೂಪ ಹಾಗೂ ಜಲವಾಚಕ.

ಇಂಗಳಗಿ : ಇಂಗುಣಿ = ನೀರು ಇಂಗುವ ಕುಣಿ, ತಗ್ಗುಪ್ರದೇಶ.

ಇಂಗುಣಿ+ಗೆ = ಇಂಗುಣಿಗೆ, ಗೆ-ತದ್ಧಿತ ಪ್ರತ್ಯಯ

ಇಂಗುವ ಕುಣಿ ಉಳ್ಳ ಊರು

ಇಂಗುಣಿಗೆ>ಇಂಗುಳಿಗೆ>ಇಂಗಳಗಿ. ಭೂವಾಚಕ.

"ಇಂಗಳಗಿ ಶಾಸನದಲ್ಲಿ (೧೦೯೪) 'ಇಂಗುಣಿಗೆ' ಎಂದು ಉಲ್ಲೇಖವಿದೆ. ಇದನ್ನು ೬ನೆಯ ವಿಕ್ರಮನ ರಾಣಿ ಜಾಕಲದೇವಿ ಆಳುತ್ತಿದ್ದಳು"[೧೬೦]

೧. ಇಂಗಳ = ಒಂದು ಸಸ್ಯ, ಅಗ್ನಿ ಕುಂಡ.

ಇಂಗಾಲ = ಇದ್ದಿಲು

ಇಂಗಳ+ಗಿ = ಇಂಗಳಗಿ

ಇಂಗಳಗಿ = ಇಂಗಲ ಗಿಡಗಳು ಹೆಚ್ಚು ಇರುವ ಪ್ರದೇಶ. ಇಲ್ಲವೆ ಪ್ರಾಚೀನ ಕಾಲದಲ್ಲಿ ಆಯುಧಗಳನ್ನು ತಯಾರಿಸಲು, ಯಜ್ಞ ಮಾಡಲು, ಅಗ್ನಿಕುಂಡಗಳನ್ನು ನಿರ್ಮಿಸುವ ಸ್ಥಳ. ಸಸ್ಯ, ಭೂಸ್ವರೂಪವಾಚಕ.

ಉತ್ತೂರು : ಉತ್ತು+ಊರು = ಉತ್ತೂರು

೧. ಉತ್ತು = ಬಿತ್ತನೆಗೆ ಯೋಗ್ಯ ಮಾಡು. ಬೇಸಾಯವಾಚಕ.

"ಹಿಂದೆ ಈ ಊರಿನಲ್ಲಿ ನಾಗರ ಪಂಚಮಿ ಮಾಡಲು ಒಂದೂ ಹುತ್ತ ಇರಲಿಲ್ಲವಂತೆ ಆಗ ಊರಿನ ಜನ ಊರದೇವತೆ ಲಕ್ಕಮ್ಮನನ್ನು ಕುರಿತು ಹುತ್ತಿಗಾಗಿ ಪ್ರಾಥಿಸಿದರಂತೆ. ಇದರಿಂದ ಸಂಪ್ರೀತಗೊಂಡ ಲಕ್ಕಮ್ಮ ಬನ್ನಿಗಿಡವೊಂದರಲ್ಲಿ ವಾಸವಾಗಿ ಅದರ ಕೆಳಗೆ ಬೃಹತ್ ಹುತ್ತವನ್ನು ಸೃಷ್ಟಿ ಮಾಡಿದಳಂತೆ. ಅನಂತ ಅವಳ ಮೂರ್ತಿಯನ್ನು ಹುತ್ತದ ಪಕ್ಕದಲ್ಲಿ ಪ್ರತಿಷ್ಠಾಪಿಸಿ ಕ್ರಮೇಣ ಊರಿನ ಅನೇಕ ಸ್ಥಳದಲ್ಲಿ ಹುತ್ತುಗಳು ಉದ್ಭವಿಸುತ್ತಾ ನಡೆದವು. ಇದರಿಂದ ಇದರಿಂದ ಜನರು ಹುತ್ತದ ಊರು>ಹುತ್ತೂರು>ಉತ್ತೂರು ಎಂದು ಉಚ್ಚರಿಸತೊಡಗಿದರು"[೧೬೧] ಇದೊಂದು ದಂತಕಥೆ.

ಒಂಟಿಗೋಡಿ : ಒಂಟಿ+ಕೋಡಿ = ಒಂಟಿಗೋಡಿ

ಒಂಟಿ = ಒಂದು

ಕೋಡಿ = ಎರಡು ಗುಡ್ಡಗಳ ನಡುವಿನ ಸಿರುಕಲು, ಒಂದೆ ಕೋಡಿ ಇರುವ ಊರು. ಪ್ರಮಾಣ ಹಾಗೂ ಭೂವಾಚಕ.

೨. ಉತ್ತಣ+ಊರು = ಉತ್ತೂರು. ಮಧ್ಯದಲ್ಲಿರುವ ಊರು. ದಿಗ್ವಾಚಕ

ಒರ್ಚುಗಲ್ಲು : ಬರ್ಚುಗಲ್ಲು = ಒರ್ಚಗಲ್ಲು

೧. ಒರಚು = ವಕ್ರವಾದ

ಒರಚು+ಕಲ್ಲು = ಒರಚುಗಲ್ಲು>ಒರ್ಚುಗಲ್ಲು. ವಕ್ರವಾದ ಕಲ್ಲುಗಳು ಉಳ್ಳ ಊರು.

೨. ಪರಚು – ಕೆರೆ, ಗೀರು.

ಪರಚುವಕಲ್ಲು = ಪರಚುಗಲ್ಲು>ಪರ್ಚುಗಲ್ಲು>ವರ್ಚುಗಲ್>ವರ್ಚಗಲ್

ಪರಚುವಂತಹ ಕಲ್ಲುಗಳುಳ್ಳ ಊರು. ಬಿರುಸಾದ ಬಳೆಚೂರಿನಂತಹ ಕಲ್ಲುಗಳುಳ್ಳ ಊರು. ಶಿಲಾವಾಚಕ.

ಕಣಬೂರು : ಕಣಬೆಯ+ಊರು = ಕಣಬೂರು

ಕಣಬೆ = ಒಂದು ಜಾತಿಯ ಬಳ್ಳಿ "ಕಾದ್ರಿಯನೆ ಕಣಬೆ"[೧೬೨] ಎಂದು ಪ್ರಯೋಗವಾಗಿದೆ. 'ಕಣಬೆ' ಎನ್ನುವ ಬಳ್ಳಿಯು ಬೆಳೆಯುವ ಊರು. ಸಸ್ಯವಾಚಕ.

ಇನ್ನೊಂದು ಅಭಿಪ್ರಾಯ ಹೀಗಿದೆ.

ಕಣ್ವರ+ಊರು = ಕಣ್ವರೂರು>ಕಣ್ಣೂರು>ಕಣಬೂರು. ವ್ಯಕ್ತಿವಾಚಕ.

"ಕಣ್ವ ಮಹರ್ಷಿಗಳು ತಪಸ್ಸು ಮಾಡಿದ ನೆಲೆಯೇ ಕಣ್ವರೂರು>ಕಣಬೂರು ಎಂದಾಗಿದೆ."[೧೬೩] ಇದು ದಂತಕಥೆ.

ಕನಸಗೇರಿ : ಕನಿಯ–ಸ್ = ಚಿಕ್ಕ, ಕೇರಿ>ಗೇರಿ = ಊರು.

ಕನೀಯಸ್+ಕೇರಿ = ಕನೀಸ್‌ಗೇರಿ>ಕನಸಗೇರಿ.

ಚಿಕ್ಕಊರು. ಪ್ರಮಾಣವಾಚಕ.

ಕಿಸೋರಿ : ೧. ಕಿಸುರ್, ಕಿಸುರು–ಕೆಂಪುಬಣ್ಣ, ತಾಮ್ರ

ಇ = ಉಳ್ಳುದು ಎಂಬರ್ಥದ ತದ್ಧಿತ ಪ್ರತ್ಯಯ.

ಕಿಸುರಿ–ಕೆಂಪುಬಣ್ಣದ ಮಣ್ಣಿನಿಂದ ಕೂಡಿದ ಊರು, ತಾಮ್ರ ದೊರೆಯುವ ಸ್ಥಳ.

೨. ಕಿಶೋರ–ಪ್ರಾಣಿ, ಮೃಗಗಳ ಮರಿ

೧೫ ವರ್ಷ ವಯಸ್ಸಿನೊಳಗಿನ ಪ್ರಾಯದ ಹುಡುಗ,

ಕಿಶೋರ>ಕಿಸೋರ

ಇ = ತದ್ಧಿತ ಪ್ರತ್ಯಯ

ಕಿಸೋರ+ಇ = ಕಿಸೋರಿ = ಸಣ್ಣ ಊರು

ಕುಳಲಿ : ಕುಳ–ತೆರಿಗೆ, ಸುಂಕ, ಗೇಣಿದಾರ, ಆಸಾಮಿ

ಕುಳಲ್+ಇ = ಕುಳಲಿ

ಭೂಮಿಯ ತೆರಿಗೆ ವಸೂಲಿ ಮಾಡುವ ಸ್ಥಳ ಇದಾಗಿರಬೇಕು.

ಕೆಸರಕೊಪ್ಪ (ಕೆಸರಗೊಪ್ಪ) : ಕೆಸರಿನ+ಕೊಪ್ಪ = ಕೆಸರಕೊಪ್ಪ

ಕೆಸರು = ರಾಡಿ. ಇಂತಹ ಕೆಸರು ಹೆಚ್ಚಾಗಿರುವ ಊರು. ಭೂಗುಣವಾಚಕ.

ಗುಳಗಾಲ ಜಂಬಗಿ: ಗುಳ – ಕುಡ, ನೇಗಿಲದ ಕಬ್ಬಿಣದ ತುದಿ

ಕುಳ>ಗುಳ ಆಗಿದೆ

ಚಿಂಚಖಂಡಿ : ಚಿಂಚ = ಹುಣಸೆ, ಹುಣಸೆಬೋಟ

ಖಂಡಿ = ಇಕ್ಕಟ್ಟಾದ ಪ್ರದೇಶ.

ಚಿಂಚದ+ಖಂಡಿ = ಚಿಂಚಖಂಡಿ

ಹುಣಸೆಗಿಡಗಳಿಂದ ಕೂಡಿದ (ಬೆಳೆದ) ಇಕ್ಕಟ್ಟಾದ ಪ್ರದೇಶ. ಭೂಸ್ವರೂಪ ಹಾಗೂ ಸಸ್ಯವಾಚಕ.

ಚಿಂಚಖಂಡಿ ಎರಡು ಇವೆ. ಚಿಂಚಖಂಡಿ ಕೆ.ಡಿ. ಮತ್ತು ಚಿಂಚಖಂಡಿ ಬಿ.ಕೆ.

ಚಿಕ್ಕೂರು : ಚಿಕ್ಕ+ಊರು = ಚಿಕ್ಕೂರು

ಸಣ್ಣ ಊರು. ಪ್ರಮಾಣದಲ್ಲಿ ಚಿಕ್ಕದಾದುದರಿಂದ 'ಚಿಕ್ಕೂರು' ಎನ್ನುವರು. ಪ್ರಮಾಣವಾಚಕ.

ಚಿತ್ರಭಾನಕೋಟೆ: ಚಿತ್ರಭಾನುವಿನ+ಕೋಟೆ = ಚಿತ್ರಭಾನುಕೋಟೆ>ಚಿತ್ರಭಾನಕೋಟೆ.

ಚಿತ್ರಭಾನು = ವ್ಯಕ್ತಿಯನಾಮ. ಈತನು ಕೋಟೆ ಕಟ್ಟಿಸಿರಬಹುದು. ವ್ಯಕ್ತಿ ಹಾಗೂ ನಿರ್ಮಾಣ ವಾಚಕ.

ಚೆನ್ನಾಳ : ಚೆನ್ನನ+ಹಾಳ = ಚೆನ್ನಹಾಳ>ಚೆನ್ನಾಳ

ಚೆನ್ನನೆಂಬುವವನು ಪ್ರಸಿದ್ಧನಾಗಿ ಹೋದವನ ಊರು. ವ್ಯಕ್ತಿವಾಚಕ.

ಚೌಡಾಪೂರ : ಚೌಡಪ್ಪನ+ಊರು = ಚೌಡಪ್ಪನೂರು>ಚೌಡಾಪೂರು>ಚೌಡಾಪೂರ.

ಚೌಡಪ್ಪ ದೇವತೆ ಅಥವಾ ವ್ಯಕ್ತಿನಾಮ.

ಈ ಹೆಸರಿನ ದೇವತೆ ಹಾಗೂ ವ್ಯಕ್ತಿಯಿಂದ ಪ್ರಸಿದ್ಧವಾದ ಊರು. ದೈವ, ವ್ಯಕ್ತಿವಾಚಕ.

ಜಂಜರಕೊಪ್ಪ: ಜಂಜರ = ಒಂದು ಜನಾಂಗ.

ಕೊಪ್ಪ = ಊರು

ಜಂಜರ ಜನಾಂಗ ಇರುವ ಕೊಪ್ಪ. ಜನಾಂಗವಾಚಕ.

ಜಂಬಗಿ : ಜಂಬು = ನೇರಳೆಮರ, ನೇರಳೆ ಹಣ್ಣು. ನೇರಳೆ ಗಿಡಗಳು ಬೆಳೆಯುವ ಪ್ರದೇಶ.

ಜಂಬು+ಗಿ = ಜಂಬುಗಿ>ಜಂಬಗಿ

ಗಿ–ಇದು ಇರುವ ಅಥವಾ ಬೆಳೆಯುವ ಎಂಬರ್ಥದಲ್ಲಿ 'ಗಿ' ತದ್ದಿತ ಪ್ರತ್ಯಯ ಹತ್ತಿದೆ ಪ್ರಮಾಣ, ಸಸ್ಯವಾಚಕ.

ಜಂಬಗಿ ಎರಡು ಇವೆ. ಕಮಬಾ ಜಂಬಗಿ ಮತ್ತು ಜಂಬಗಿ ಕೆ.ಡಿ.

ಜಾಡರ ಅರಳಿಕಟ್ಟಿ : ಅರಳಿಗಿಡಕ್ಕೆ ಕಟ್ಟೆ ಕಟ್ಟಿರುವ ಊರು. ಅಲ್ಲಿ ಹೆಚ್ಚಾಗಿ ಜಾಡರು ವಾಸಿಸುವುದರಿಂದ ಜಾಡರ ಅರಳಿಕಟ್ಟೆ ಎಂದಾಗಿದೆ. ವೃತ್ತಿ, ಸಸ್ಯ ಹಾಗೂ ನಿರ್ಮಾಣವಾಚಕ.

ಜಾಲಿಕಟ್ಟೆ : ಜಾಲಿಗಿಡದ+ಕಟ್ಟೆ = ಜಾಲಿ ಕಟ್ಟೆ ಇರುವ ಊರು. ಸಸ್ಯ ಹಾಗೂ ನಿರ್ಮಾಣವಾಚಕ.

ಜಾಲಿಕಟ್ಟೆ ಎರಡು ಇವೆ. ಜಾಲಿಕಟ್ಟೆ ಬಿ.ಕೆ. ಮತ್ತು ಜಾಲಿಕಟ್ಟೆ ಕೆ.ಡಿ.

ಜಾಲಿಬೇರು : ಜಾಲಿಯ+ಬೇರು = ಜಾಲಿಬೇರು.

ಜಾಲಿಬೇರು ಘಟಪ್ರಭಾನದಿಯ ದಂಡೆಯ ಮೇಲಿದ್ದು ಇಲ್ಲಿ ಜಾಲಿಯ ಗಿಡಗಳು ಬೆಳೆಯುತ್ತವೆ. ಈ ಬೇರಿನಿಂದ ಬೇರೆ ಉದ್ಯೋಗಗಳು ನಡೆಯುತ್ತಿರಬೇಕು. ಸಸ್ಯವಾಚಕ.

ಜೀರಗಾಳ : ಜೀರಗೆಯ+ಹಾಳ = ಜೀರಗೆಹಾಳ = ಜೀರಗಾಳ

'ಹ' ಲೋಪವಾಗಿದೆ. ಜೀರಗೆ = ಆಹಾರ ಪದಾರ್ಥ

ಜುನ್ನೂರು : ಜುನ್ನ = ಚತುರ, ಪ್ರವೀಣ,ಕುಶಲ

ಜುನ್ನರ+ಊರು = ಜುನ್ನರೂರು>ಜುನ್ನೂರು

ಕರಕುಶಲ, ಚತುರ, ಪ್ರವೀಣರು, ಇರುವ ಊರು. ಜುನ್ನೂರು. ಜನಾಂಗವಾಚಕ.

ಢವಳೇಶ್ವರ : ಧವಳ = ಬಿಳಿ

ಧವಳ>ಢವಳ, ಢವಳ+ಈಶ್ವರ = ಢವಳೇಶ್ವರ

ಬಿಳಿಯ ವರ್ಣದ ಈಶ್ವರ

ಈ ಈಶ್ವರ ಇರುವ ಊರು. ದೈವವಾಚಕ

ತಿಮ್ಮಾಪೂರ: ತಿಮ್ಮಪ್ಪನ+ಊರು = ತಿಮ್ಮಪ್ಪನೂರು>ತಿಮ್ಮಾಪೂರು

ತಿಮ್ಮಪ್ಪನೆಂಬ ವ್ಯಕ್ತಿಯಿಂದ ಪ್ರಸಿದ್ಧವಾದ ಊರು. ವ್ಯಕ್ತಿವಾಚಕ.

ದಾದನಟ್ಟಿ : ದಾದಾನ+ಹಟ್ಟಿ = ದಾದಾನಹಟ್ಟಿ>ದಾದನಟ್ಟಿ

ದಾದಾ= ಅಣ್ಣ, ಹಿರಿಯ, ಗೌರವಸೂಚಕವಾಗಿ 'ದಾದಾನಹಟ್ಟಿ' ಎಂದು ಕರೆಯಲಾಗಿದ್ದು, ಮುಂದೆ ದಾದನಟ್ಟಿ ಎಂದಾಗಿದೆ. ವ್ಯಕ್ತಿವಾಚಕ.

ನಂದಗಾಂವ: ನಂದನ+ಗ್ರಾಮ = ನಂದನಗ್ರಾಮ>ನಂದನಗಾಂವ>ನಂದಗಾಂವ, ನಂದ = ವ್ಯಕ್ತಿನಾಮ, ವ್ಯಕ್ತಿವಾಚಕ.

ನಾಗಣಾಪುರ: ನಾಗಣ್ಣನ+ಪುರ = ನಾಗಣ್ಣಪುರ>ನಾಗಣಾಪುರ

ನಾಗ ಎಂಬ ವ್ಯಕ್ತಿ ಹೆಸರಿನಿಂದ ಕರೆದ ಊರು 'ಅಣ್ಣ' ಎಂದುದರಿಂದ ಅವನು ಗೌರವಾನ್ವಿತ ನಾಗಿರಬೇಕು. ವ್ಯಕ್ತಿವಾಚಕ.

ನಾಗರಾಳ : ನಾಗರ+ಹಾಳ = ನಾಗರಹಾಳ>ನಾಗರಾಳ

ನಾಗರು = ಒಂದು ಜಂನಾಗ, ಈ ಜನಾಂಗ ಇರುವ ಊರು. ಜನಾಂಗವಾಚಕ.

ನಿಂಗಾಪೂರ : ನಿಂಗಪ್ಪನ+ಊರು = ನಿಂಗಪ್ಪನೂರು>ನಿಂಗಾಪೂರು

ನಿಂಗಪ್ಪನೆಂಬ ಪ್ರಸಿದ್ಧ ವ್ಯಕ್ತಿಯ ಊರು. ವ್ಯಕ್ತಿವಾಚಕ.

ಪಾಲಕಿಮಾನ್ಯ : ಪಾಲಕಿ–ಪಲ್ಲಕ್ಕಿ>ಪಲ್ಯಂಕ = ಪಲ್ಲಂಗ

ಪಾಲಕಿಯ ಮಾನ್ಯತೆ ಪಡೆದ ಊರು. ಸಂಸ್ಕೃತಿವಾಚಕ.

ಪೆಟ್ಲೂರು : ಪೇಠಾ+ಆಲೂರು = ಪೇಠಾಲೂರು>ಪೆಟ್ಲೂರು.

ಪೇಠಾ = ಮರಾಠರ ಕಾಲದಲ್ಲಿ ಈ ಹೆಸರಿನ ಆಡಳಿತದ ವಿಭಾಗವಿದ್ದವು. ಅಂದರೆ ಈಗಿನ 'ಹೋಬಳಿ'ಗಳಿಗೆ ಪೇಠಾಗಳು ಸಮನಾಗಿದ್ದವು.

ಆ ಊರು ಮರಾಠರ ಕಾಲಕ್ಕೆ ಪೇಠಾ ಆಗಿರಬೇಕು. ಸಂಸ್ಕೃತಿವಾಚಕ.

ಬಂಟನೂರು: ಬಂಟ = ಶೂರ, ಆಜ್ಞಾಧಾರಕ.

ಬಂಟನ+ಊರು = ಬಂಟನೂರು

ಶೂರನು ಆಗಿಹೋದ ಊರು, ಶೂರನಿಂದ ಹೆಸರು ವಾಸಿಯಾದ ಊರು. ವ್ಯಕ್ತಿವಾಚಕ.

ಬದ್ನೂರು : ಬದ್ದಿಗ = ಒಬ್ಬ ವ್ಯಕ್ತಿ

ಬದ್ದಿಗನ+ಊರು = ಬದ್ದಿಗನೂರು>ಬದ್ದಿಗ್ನೂರು>ಬದ್ದನೂರು>ಬದ್ನೂರು.

ವ್ಯಕ್ತಿವಾಚಕ.

ಬರಗಿ : ಬರ+ಇಗೆ = ಬರಗೆ>ಬರಗಿ

ಬರ = ಶ್ರೇಷ್ಠ, ವರ, ಕ್ಷಾಮ

ಶ್ರೇಷ್ಠವಾದ ಇಲ್ಲವೆ ಕ್ಷಾಮವಿರುವ ಊರು.

ಸೊರಕೊಪ್ಪ ಊರ ಬಾಗಿಲಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲಿರುವ (B.K.No.256 of 1927–28; SIIxv 681) ಕ್ರಿ.ಶ. ೧೫ನೆಯ ಶತಮಾನದ ಈ ಶಾಸನದಲ್ಲಿ " 'ಬರಿಗೆ' ಮಲ್ಲನಾಯಕ ಮತ್ತು ದೇಸಾಯಿ ಎಂದು ಹೆಸರನ್ನು ಉಲ್ಲೇಖಿಸಿದೆ."[೧೬] ಇದರಲ್ಲಿ 'ಬರಿಗೆ' ಎಂದು ಹೆಸರು ಬಂದಿದೆ. ಬರಿಗೆ>ಬರಗಿ ಎಂದಾಗಿದೆ.

ಬಾದರದಿನ್ನಿ : ಬಾದರು = ಒಂದು ಜನಾಂಗ

ಬಾದರರ+ದಿನ್ನಿ = ಬಾದರದಿನ್ನಿ. ಜನಾಂಗ, ಪ್ರಕೃತಿವಾಚಕ.

ಬಿದರಿ : ಬಿದಿರು ಉಳ್ಳ ಊರು>ಬಿದರಿ

ಈ ಊರಲ್ಲಿ ಬಿದಿರು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿತ್ತು. ಸುತ್ತಲಿನ ಜನ ಕೂಡಾ ಕೊಂಡೊಯ್ಯುತ್ತಿದ್ದರು. ಸಸ್ಯವಾಚಕ.

ಬಿಸನಾಳ : ಬಿಸ = ವಿಷ, ನೀರು, ಕಮಲದ ದಂಟು. ಮೃಣಾಳ.

'ಮೃಣಾಳ : ಬೀಸಂ– ಈ ೨ ನಾಳಂ' (ಹಲಾಯ ೧೦೨–೬೦) ಕಮಲದಬಳ್ಳಿ ಇರುವ ಊರು. ಸಸ್ಯವಾಚಕ.

ಬುದ್ನಿ : ಬುಧ್ನ = ಮರದಬೇರು, ಗಿಡದಬುಡ, ಬೊಡ್ಡೆ, ಶಿವ.

ಬುಧ್ನ+ಇ = ಬುಧ್ನಿ. ಗಿಡದ ಬುಡದಲ್ಲಿ ಶಿವನನ್ನು ಸ್ಥಾಪಿಸಿ ಹೀಗೆ ಕರೆದಿರಬೇಕು. ಬುಧ್ನಿಗಳಲ್ಲಿ ಐದು ಇವೆ. ಅವು–ಬುದ್ನಿ ಬಿ.ಕೆ., ಬುದ್ನಿ ಕೆ.ಡಿ., ಬುದ್ನಿ ಪಿ.ಡಿ, ಬದ್ನಿ ಪಿ.ಎಂ., ಬೊಮ್ಮನದಿನ್ನಿ ಬುದ್ನಿ.

ಬೆಳಗಲಿ : ಬಿಳಿದು>ಬೆಳ್+ಕಲಿ = ಬೆಳ್ಗಲಿ>ಬೆಳುಗಲಿ>ಬೆಳಗಲಿ ಎಂದಾಗಿದೆ.

ಬೆಳುಗಲಿ ಎಂದರೆ ಕೀರ್ತಿವೆತ್ತ ಶೂರ. ಅವನ ಊರು ಇದು. ಕವಿಚಕ್ರವರ್ತಿ ರನ್ನನಿದ್ದ ಪ್ರದೇಶ. “ಜಮಖಂಡಿ ಡಬ್ಲ್ಯೂಟಿ.ಆಪ್ಟೆಯವರ ಮನೆಯಲ್ಲಿರುವ ಕಲ್ಲಿನ ಮೇಲೆ ಇರುವ (B.K.No. 52 of 1938–39; SII xx- 226) ಕ್ರಿ.ಶ. ೧೦೭೬ರ ಈ ಶಾಸನದಲ್ಲಿ ‘ರಾಮಚಂದ್ರದೇವನು ಆಳುತ್ತಿದ್ದಾಗ ಕರಹಡ ೪೦೦೦ದ ಕಣಂಬಡೆಯ ಬಳಿಯ ಗ್ರಾಮ ಬೆಳ್ಳಲಿಗೆಯ ಕಲ್ಲಿನಾಥದೇವರಿಗೆ ಭೂಮಿ ದಾನ ಮಾಡಿದ ವಿವರಣೆ ಇದೆ.”[೧೬೫] ಇದರಲ್ಲಿ ‘ಬೆಳ್ಳಗಲಿ’ ಎಂದು ಹೆಸರು ಬಂದಿದೆ. ಬೆಳ್ಳಗಲಿ>ಬೆಳಗಲಿ ಎಂದಾಗಿದೆ. ಶಾಸನದಲ್ಲಿ ಕಾವ್ಯಗಳಲ್ಲಿ ‘ಬೆಳುಗಲಿ’ ಎಂದಿದೆ.

ಬೇಡರ ಅರಳಿಕಟ್ಟಿ : ಅರಳಿಗಿಡದ+ಕಟ್ಟಿ = ಅರಳಿಕಟ್ಟಿ

ಈ ಊರಲ್ಲಿ ಬೇಡರು ಅತಿ ಹೆಚ್ಚಿನ ಸಂಖ್ಯೆಯಲ್ಲಿರುವದರಿಂದ ಬೇಡರ ಅರಳಿಕಟ್ಟಿ ಎಂದು ಕರೆಯುವರು. ಜನಾಂಗ, ಸಸ್ಯ ಹಾಗೂ ನಿರ್ಮಾಣವಾಚಕ.

ಬೊಮ್ಮನದಿನ್ನಿ : ಬೊಮ್ಮ>ಬ್ರಹ್ಮ

ಬೊಮ್ಮನ+ದಿನ್ನಿ = ಬೊಮ್ಮನದಿನ್ನಿ

ಬ್ರಹ್ಮನು>ಬೊಮ್ಮನು ಇರುವ ದಿನ್ನಿಯ ಊರು>ಬೊಮ್ಮನದಿನ್ನಿ

ಭೂಸ್ವರೂಪ ಹಾಗೂ ದೈವವಾಚಕ.

ಮಂಟೂರು : ಮಂಟು = ಸ್ಥಾಯಿಯಾಗುವುದು, ಬೀಡು ಬಿಡುವುದು, ನೆಲೆಯಾಗಿ ನಿಲ್ಲುವದು.

ಮಂಟು+ಊರು = ಮಂಟೂರು

ಬೇರೆ ಸ್ಥಳದಿಂದ ಬಂದು ಬೀಡುಬಿಟ್ಟ ಊರು, ನೆಲೆನಿಂತ ಊರು.

ಮಂಟೂರು ರಾಮಲಿಂಗ ದೇವಾಲಯದ ಬಳಿ ಇರುವ ಕಲ್ಲಿನ ಮೇಲೆ ಇರುವ (B.K.No. 91 of 1928–29; SII.XI.I.I. 74) ಕ್ರಿ.ಶ. ೧೦೪೧ರ ಈ ಶಾಸನದಲ್ಲಿ “ಎರೆಯನು ದಂಡದಿಂದ ಬಂದ ಆದಾಯವನ್ನು ದೈವದ ಮಂಟೂರಿನ ಮಾಹಾಜನಗಳಿಗೆ ಬಿಟ್ಟ ಉಲ್ಲೇಖವಿದೆ”[೧೬೬] ಇದರಲ್ಲಿ ‘ಮಂಟೂರು’ ಎಂದು ಹೆಸರು ಉಲ್ಲೇಖವಾಗಿದೆ. ಈ ಊರಿನ ಹೆಸರಿನಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಮದನೂರು : ಮದನನ+ಊರು = ಮದನೂರು.

ಮದನ– ಒಬ್ಬ ವ್ಯಕ್ತಿ. ಇವನಿಂದ ನಿರ್ಮಾಣವಾದ ಅವನ ಹೆಸರಿನಿಂದಿರುವ ಊರು. ವ್ಯಕ್ತಿವಾಚಕ.

ಮಧುಬಾವಿ : ಮಧು–ಸಿಹಿ

ಮಧು+ಬಾವಿ = ಮಧುಬಾವಿ>ಮದಬಾವಿ

ಸಿಹಿನೀರುಳ್ಳ ಬಾವಿಯ ಊರು = ಮಧುಬಾವಿ. ನಿರ್ಮಾಣವಾಚಕ.

ಮಲ್ಲಾಪೂರು: ಮಲ್ಲಪ್ಪನ+ಊರು = ಮಲ್ಲಪ್ಪನೂರು>ಮಲ್ಲಾಪೂರು

ಮಲ್ಲಪ್ಪನೆಂಬ ಪ್ರಸಿದ್ಧವಾದ ವ್ಯಕ್ತಿಯ ಊರು. ವ್ಯಕ್ತಿವಾಚಕ.

ಮಲ್ಲಾಪೂರ ಪಿ.ಜಿ, ಮತ್ತು ಮಲ್ಲಾಪೂರ ಪಿ.ಎಲ್. ಎಂದು ಇವೆ.

ಮರಿಕಬ್ಬಿ : ಮರಿ = ಚಿಕ್ಕ, ಸಣ್ಣ.

ಮರಿ+ಕಪಿ = ಮರಿಕಪಿ>ಮರಿಕಬ್ಬಿ>ಪಿ>ಬಿ> ಆಗಿದೆ.

ಬೀಳಗಿ ತಾಲೂಕಿನಲ್ಲಿಯೂ ಒಂದಿದೆ. ಬೀರಕಬ್ಬಿ ಇದೆ. ದೈವವಾಚಕ.

ಕಪಿ = ಹನುಮಮತನನ್ನು ಸೂಚಿಸುವುದು. ಗ್ರಾಮದೇವತೆ ಹನುಮಂತ ಆಗಿದೆ.

ಮಹಾಲಿಂಗಪೂರ: ಮಹಾಲಿಂಗಪ್ಪನ+ಊರು>ಮಹಾಲಿಂಗಪ್ಪೂರು>ಮಹಾಲಿಂಗಪೂರ. ವ್ಯಕ್ತಿವಾಚಕ.

"ಈ ಊರಿಗೆ ಮೊದಲು 'ನರಗಟ್ಟೆ' ಎಂಬ ಹೆಸರಿತ್ತು. ಮಹಾಲಿಂಗಸ್ವಾಮಿ ಹಾಗೂ ಚನ್ನಗಿರಿ ಸ್ವಾಮಿಗಳು ನರಗಟ್ಟೆಗೆ ಆಗಮಿಸುವಾಗ ಅಡ್ಡವಾಗಿ ಕೃಷ್ಣಾನದಿ ಹರಿಯುತ್ತಿತ್ತು. ಇಬ್ಬರೂ ಸ್ವಾಮಿಗಳಿಗೆ ನದಿ ದಾರಿಯನ್ನು ಕೊಟ್ಟಿತು. ಅವರಿಬ್ಬರೂ ನರಗಟ್ಟಿ ಸೇರುತ್ತಿದ್ದಂತೆಯೇ ಮತ್ತೆ ನದಿ ತುಂಬಿ ಹರಿಯುತ್ತಿತ್ತು. ಈ ಪವಾಡವನ್ನು ಕಂಡ ನರಗಟ್ಟಿಯ ಜನರು ಇವರನ್ನು ದೇವಮಾನವರೆಂದು ತಿಳಿದು ಆದರರಿಂದ ಸತ್ಕರಿಸಿದರು ಹಾಗೂ ಆರಾಧಿಸತೊಡಗಿದರು. ಸ್ವಾಮಿಗಳೂ ಕೂಡ ಅಲ್ಲಿಯೇ ನೆಲೆಸಿದರು. ಇದರಿಂದ ನರಗಟ್ಟಿ ಎಂಬುದು 'ಮಹಾಲಿಂಗಪೂರವಾಯಿತು."[೧೬೭]

ಇದರ ಮೊದಲಿನ ಹೆಸರು 'ನರಗಟ್ಟೆ' ಎಂದಿದ್ದು "ಶ್ರೀಮಹಾಲಿಂಗೇಶ್ವರ ಯತಿಗಳ ನೆಲೆಯಾದ ಈ ಪಟ್ಟಣಕ್ಕೆ 'ಮಹಾಲಿಂಗಪೂರ' ಎಂದು ಕರೆದರು. ಇಲ್ಲಿ ಮಹಾಲಿಂಗೇಶ್ವರ ಪೂಜೆ ನಡೆಯುತ್ತದೆ. ಅಲ್ಲದೇ ಇವನ ಜಡೆಯು ಬೆಳೆಯುತ್ತದೆ ಎಂಬ ಪ್ರತೀತಿ ಇದೆ."[೧೬೮]

ಮಳಲಿ : ಮಳಲು = ಮರಳು, ಉಸುಕು

ಮಳಲು+ಇ = ಮಳಲಿ, ಮಳಲು ಉಳ್ಳ ಊರು. ಇದು ನದಿ ದಂಡೆಯ ಮೇಲಿದ್ದು ಮರಳಿನಿಂದ ಕೂಡಿದ ಊರಾಗಿದೆ. ಭೂಸ್ವರೂಪವಾಚಕ.

ಮಾಚಕನೂರು: ಮಾಚಕ = ಒಬ್ಬ ವ್ಯಕ್ತಿ

ಮಾಚಕನ ಊರು = ಮಾಚಕನೂರು

ಮಾಚಕನೂರು ಹೊಳೆ ಬಸವೇಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ "ಮಾಚಕನೂರಿನಲ್ಲಿ ಐದು ಕೊಳಗ ಭೂಮಿಯನ್ನು ದಾನ ನೀಡಿದಂತೆ ತಿಳಿಯುತ್ತದೆ".[೧೯] ಇದರಲ್ಲಿ 'ಮಾಚಿಕನೂರು, ಎಂದು ಹೆಸರು ಇದೆ.

ಮಾರಾಪೂರ: ಮಾರಪ್ಪನ ಊರು = ಮಾರಾಪ್ಪೂರು>ಮಾರಾಪೂರು

ಮಾರಪ್ಪ ವ್ಯಕ್ತಿ ಹೆಸರು. ಮಾರಪ್ಪನೆಂಬ ಪ್ರಸಿದ್ಧ ವ್ಯಕ್ತಿಯ ಊರು. ವ್ಯಕ್ತಿವಾಚಕ

ಮಾಲಾಪೂರ: ಮಾಲಪ್ಪನ+ಊರು = ಮಾಲಪ್ಪೂರು>ಮಾಲಾಪೂರು>ಮಾಲಾಪೂರ.

ಮಾಳಪ್ಪ<ಮಾಲಪ್ಪ ಎಂಬ ವ್ಯಕ್ತಿ ಈ ಊರಲ್ಲಿ ವಿಶೇಷವಾಗಿ ಗುರುತಿಸಿಕೊಂಡಿದ್ದು, ಇವನ ಹೆಸರಿನಿಂದ ಈ ಊರನ್ನು ಕರೆಯಲಾಗಿದೆ. ವ್ಯಕ್ತಿವಾಚಕ.

ಮಿರ್ಜಿ : ಶಾಸನಗಳಲ್ಲಿ ಮಿರಿಂಜೆ ಎಂದಿದೆ.

ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯಲ್ಲಿಯೂ ಒಂದು ಮಿರಜಿ ಇದೆ. ಅದನ್ನು ಈಗ 'ಮಿರಜ' ಎಂದು ಕರೆಯಲಾಗುತ್ತದೆ.

ಮುಗುಳಖೋಡ: ಮುಗುಳು = ಮೊಗ್ಗು

ಮುಗುಳ+ಖೋಡ = ಮುಗುಳಖೋಡ

ಮುಗುಳು – ಮೊಗ್ಗಿನಾಕಾರದಲ್ಲಿರುವ ಖೋಡಿಯುಳ್ಳ ಊರು– ಮುಗುಳಖೋಡ. ಸ್ವರೂಪವಾಚಕ.

ಮುದ್ದಾಪೂರು: ಮುದ್ದಪ್ಪನ+ಊರು = ಮುದ್ದಪ್ಪೂರು = ಮುದ್ದಾಪೂರು. ವ್ಯಕ್ತಿವಾಚಕ.

ಮುಧೋಳ : ಮುದ್ದು+ಪೊಟಿಲ್ = ಮುದ್ದುವೊಳಲ್ = ಮುಧೋಳ, ಸುಂದರನಗರ

ಕ್ರಿ.ಶ. ೯೭೮ರ ಕವಿಚಕ್ರವರ್ತಿ ರನ್ನನ ಅಜಿತನಾಥ ಪುರಾಣದಲ್ಲಿ (೧೨ನೆಯ ಆಶ್ವಾಸ) ಮುದುಪೊಳಲ್ ಎಂದಿದೆ. ಮುಧೋಳ ಗವಿಮಠದ ಆವರಣದಲ್ಲಿನ ಕ್ರಿ.ಶ. ೧೨೩೩ರ ಈ ಶಾಸನದಲ್ಲಿ "ದೇವರಿಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ"[೧೨೦] ಇದರಲ್ಲಿ ಮುದುವೊಳಲ ಎಂದು ಉಲ್ಲೇಖವಿದೆ.

ಇದೇ ಊರಿನ ಕಲ್ಮೇಶ್ವರ ದೇವಾಲಯದ ಪ್ರವೇಶದ್ವಾರದ ಲಲಾಟಬಿಂಬದ ಮೇಲೆ ಇರುವ (B.K. No. 197 of 1953–54) ಕ್ರಿ.ಶ. ೧೬೧೮ರ ಈ ಶಾಸನ "ಮುದವಳನಾಡಿನ ಕಲ್ಮೇಶ್ವರ ದೇವಾಲಯವನ್ನು ದೇಶ ಕುಲಕರಣಿ ನರಸಪ ಕೊಂಡಪನ ಸೋದರನ ಮಗ ಆತ್ರಿಗೋತ್ರದ ಹೊನ್ನಪನು ಜೀರ್ಣೋದ್ಧಾರ ಮಾಡಿದ್ದನ್ನು ಉಲ್ಲೇಖಿಸಿದೆ"[೧೭೧] ಇದರಲ್ಲಿ 'ಮುದವಳ', ಎಂದು ಕರೆದಿದೆ.

ಸಾಹಿತ್ಯಕ, ಕೃತಿಗಳಲ್ಲಿ ಮತ್ತು ಈ ಎರಡು ಶಾಸನಗಳಲ್ಲಿ 'ಮುದುವೊಳಲ್'ಎಂದಿದೆ.

ಮುದುಪೊಳಲ್>ಮುದುವೊಳಲ್>ಮುದವಳ>ಮುಧೋಳ ಎಂದು ಪರಿವರ್ತನೆಗೊಂಡಿದೆ. ಈಗ 'ಮುಧೋಳ' ಆಗಿದೆ.

ಮೆಟ್ಟಗುಡ್ಡ : ಮೆಟ್ಟುವ+ಗುಡ್ಡ = ಮೆಟ್ಟುಗುಡ್ಡ>ಮೆಟ್ಟಗುಡ್ಡ

ಮೆಟ್ಟುವ = ಮೇಲೇರಲು ಬರುವ, ಆರೋಹಣ ಮಾಡಲು ಬರುವ, ಹತ್ತಲು ಅನುಕೂಲವಿರುವ ಗುಡ್ಡ. ಭೂಸ್ವರೂಪವಾಚಕ

ಮೆಳ್ಳಿಗೇರಿ : ಮೆಳ್ಳಿಯ+ಕೇರಿ = ಮೆಳ್ಳಿಗೇರಿ

ಮೆಳ್ಳ = ಓರೆಗಣ್ಣು, ಉರುಳುಗಣ್ಣು

ಮೆಳ್ಳಗಣ್ಣು ಇರುವವಳ ಊರು. ಅನ್ವರ್ಥವಾಚಕ.

ಯಡಹಳ್ಳಿ : ಎಡ = ಎಡಭಾಗ

ಎಡಭಾಗದಲ್ಲಿರುವ ಹಳ್ಳಿ>ಎಡಹಳ್ಳಿ>ಯಡಳ್ಳಿ. ದಿಗ್ವಾಚಕ.

ರಂಜಣಗಿ : ರಂಜಣಿಗೆ>ರಂಜಣಗಿ

ರಂಜಣಿಗೆ, ರಂಜಳಿಗೆ– ಪನ್ನೀರು, ಗ್ರಂಥ ಮುಂತಾದವುಗಳನ್ನು ತುಂಬಿಡುವ ದೊಡ್ಡ ಪಾತ್ರೆ. ಇಂತಹ ಪಾತ್ರೆಗಳನ್ನು ತಯಾರಿಸುವವರ ಊರು ರಂಜಣಿಗೆ. ಈಗಲೂ ಇಲ್ಲಿ ಪ್ರಸಿದ್ಧ ಕುಂಬಾರ ಮನೆತನಗಳಿವೆ. ವಸ್ತುವಾಚಕ.

ರೂಗಿ : ರೂವು+ಇಗೆ = ರೂವಿಗೆ>ರೂಗೆ>ರೂಗಿ

ರೂಹು>ರೂವು = ಸುಂದರ, ರೂಪು

"ರೂವಿಗೆ ಎಂಬುದು ಸೌ.ಇ.ಇ. XX ೬೬ ರೂಗಿ ಎಂದಿದೆ".[೧೭೨] ಈ ಶಾಸನದ ಕಾಲ ಕ್ರಿ.ಶ. ೧೧೭೬. ಸುಂದರ ಪ್ರದೇಶದಲ್ಲಿರುವ ಊರು.

ಲಕ್ಷಾನಟ್ಟಿ : ಲಕ್ಷ್ಮಣನಹಟ್ಟಿ>ಲಕ್ಷಾನಹಟ್ಟಿ>ಲಕ್ಷಾನಟ್ಟಿ

ಲಕ್ಷ್ಮಣನೆಂಬ ವ್ಯಕ್ತಿ ಈ ಊರಿನ ನಿರ್ಮಿತಿಗೆ, ಏಳ್ಗೆಗೆ ಕಾರಣೀಭೂತನಾದನು. ವ್ಯಕ್ತಿವಾಚಕ.

ಲೋಕಾಪೂರ: ಲೋಕಪ್ಪನ+ಊರು = ಲೋಕಪ್ಪನೂರು>ಲೋಕಾಪೂರ.

ಲೋಕೇಶ್ವರನ+ಪುರ = ಲೋಕೇಶ್ವರಪುರ>ಲೋಕಾಪುರ. ವ್ಯಕ್ತಿ, ದೈವವಾಚಕ.

ಲೋಕಾಪುರ ಚಾವಡಿಯ ಆವರಣದಲ್ಲಿರುವ ವಿಗ್ರಹದ ಪೀಠದ ಮೇಲಿರುವ ಶಾಸನದಲ್ಲಿ "ಲೋಕಾಪುರ ಮಹಾಪ್ರಭು ಸುಂಡಿಯ ಗಾವುಂಡ ಮತ್ತು ಅಮ್ಮಗಾವುಂಡಗಳ ನಿಸಿದಿಯಕಲ್ಲು ಎಂದು ಉಲ್ಲೇಖಿಸಿದೆ"[೧೭೩] ಇದರಲ್ಲಿ ಲೋಕಾಪುರ ಎಂದಿದೆ.

ಯಂಡಿಗೇರಿ ನಾಗತಿ ಅವ್ವನ ಬಾವಿಯ ಬಳಿಬಿದ್ದಿರುವ ಕಲ್ಲುತುಂಡಿನ ಮೇಲೆ ಇರುವ (B.K.No. 182. of 1928–29, SII.XV.193) ಕ್ರಿ.ಶ.ಸು. ೧೧೭೦ರ ಈ ಶಾಸನದಲ್ಲಿ "ಕೃಷ್ಣಕಂಧರ ಚಕ್ರವರ್ತಿ ಕಂಧಾರ ಆಳುತ್ತಿದ್ದನೆಂದು ಉಲ್ಲೇಖಿಸಿದೆ. ಈ ಎರಡು ಶಾಸನದಲ್ಲಿ 'ಲೋಕಾಪುರ' ಎಂದು ಹೆಸರಿಸಿದೆ. ಈಗ ಲೋಕಾಪೂರ ಎಂದು ಕರೆಯುವರು. ಮಹಾಮಂಡಳೇಶ್ವರ ನೊಬ್ಬನು ಲೋಕಾಪುರದ ನೆಲೆವೀಡಿನಲ್ಲಿ ಆಳುತ್ತಿದ್ದನು."[೧೭೪]

"ಲೋಕೇಶ್ವರ ದೇವಸ್ಥಾನವು ಈ ಊರಲ್ಲಿ ಪ್ರಾಚೀನ ಕಾಲದಿಂದಿದ್ದು, ಪ್ರಸಿದ್ದವಾಗಿದೆ, ಇದೇ ಹೆಸರಿನಿಂದ ಈ ಊರಿಗೆ ಕರೆಯಲಾಗಿದೆ."[೧೭೫]

ಇನ್ನೊಂದು ಅಭಿಪ್ರಾಯದ ಪ್ರಕಾರ ಲೋಕಪ್ಪನೆಂಬೊಬ್ಬ ಮಹಾತ್ಮನಿರುವ ಊರು, ಲೋಕಾಪೂರ. ಅವನು ಲೋಕೇಶ್ವರ, ಲೋಕನಾಥನಾದ ವಿಷಯ 'ಹಮ್ಮೀರ ಕಾವ್ಯ'ದಲ್ಲಿ ಬರುತ್ತದೆ. ಈತನ ಕಾಲ ಸು. ೧೨ನೆಯ ಶತಮಾನವಾಗಿದೆ. ಲೋಕದಲ್ಲಿ ಲೋಕಾಪುರ ಒಂದೇ ಎಂದು ಜನಜನಿತ ವಾಗಿದೆ.

ವಂಚಗಾಳ : ವಂಚಿ = ಬಿದಿರಿನಿಂದ ರಚಿತವಾದ ಒಂದು ಬಗೆಯ ವಾದ್ಯ, ಕೊಳಲು.

ವಂಚಿಗ = ಕೊಳಲನ್ನು ನುಡಿಸುವವನು, ವೇಣುವಾದಕ.

ವಂಚಿಗನ+ಹಾಳ = ವಂಚಿಗನಹಾಳ>ವಂಚಿಗನಾಳ>ವಂಚಗಾಳ. ವ್ಯಕ್ತಿ, ವೃತ್ತಿವಾಚಕ.

ವಜ್ಜರಮಟ್ಟಿ : ವಜ್ಜರ+ಮಟ್ಟಿ = ವಜ್ಜರಮಟ್ಟಿ

ವಜ್ರ = ವಜ್ಜರ ಇದೊಂದು ಕಠಿಣ ಹಾಗೂ ಬೆಲೆ ಬಾಳುವ ರತ್ನ.ಈ ರತ್ನಗಳು ಭೂಮಿಯ ಒಳಭಾಗದಲ್ಲಿ ದೊರೆಯುವವು.

ಮಟ್ಟಿ = ಮಣ್ಣಿನ ದಿನ್ನೆ, ಅಂದರೆ ವಜ್ಜರವನ್ನು ಹೊಂದಿದ ಮಟ್ಟಿಯ ಪ್ರದೇಶವಾಗಿದೆ. ನಿಸರ್ಗ, ಸಸ್ಯವಾಚಕ.

ಶಿರೋಳ : ಸಿರಿ+ಪೊಳಲು = ಸಿರಿವೊಳಲು>ಸಿರೋಳಲು>ಶಿರೋಳ ಶ್ರೀಮಂತ ಪಟ್ಟಣ, ಊರು. ಸಂಪತ್ತುವಾಚಕ.

ಶಿರೋಳ ಕಾಡಸಿದ್ಧೇಶ್ವರ ದೇವಾಲಯದ ಆವರಣದಲ್ಲಿ ಕಲ್ಲಿನ ಮೇಲೆ ಕ್ರಿ.ಶ.ಸು. ೧೨ನೆಯ ಶತಮಾನದ ಈ ಶಾಸನದಲ್ಲಿ "ಮಾಹಾಜನರು ಸಿರಿವೊಳಲಪುರಕ್ಕಾಗಿ ಕೆಲವು ಸುಂಕಗಳನ್ನು ಬಿಟ್ಟ ವಿವರಣೆಯಿದೆ."[೧೭೬] ಇದರಲ್ಲಿ 'ಸಿರಿವೊಳಲ' ಎಂದು ಹೆಸರು ಉಲ್ಲೇಖಿಸಿದೆ. ಸಿರಿವೊಳಲು> ಸಿರೋಳಲು>ಸಿರೋಳ ಎಂದಾಗಿದೆ.

ಸಂಗಾನಟ್ಟಿ : ಸಂಗನ+ಹಟ್ಟಿ = ಸಂಗನಹಟ್ಟಿ>ಸಂಗಾನಟ್ಟಿ

ಸಂಗ = ವ್ಯಕ್ತಿಯನಾಮ. ವ್ಯಕ್ತಿವಾಚಕ

ಸಮೀರವಾಡಿ : ಸಮೀರ+ವಾಡಿ = ಸಮೀರವಾಡಿ

ಸಮೀರ = ಅಂಕಿತನಾಮ

ವಾಡೆ = ನಿರ್ದಿಷ್ಟ ವ್ಯಕ್ತಿಗೆ ಸಂಭಂದಿಸಿದ ವಸತಿಪ್ರದೇಶ. ವ್ಯಕ್ತಿವಾಚಕ.

ಇದು ಇತ್ತೀಚೆಗೆ ನಿರ್ಮಾಣಗೊಂಡ ಊರು. ಸೈದಾಪೂರ ಬಳಿ 'ಸೋಮಯ್ಯ'ಎಂಬ ಖ್ಯಾತ ಉದ್ಯಮಿ ಸ್ಥಾಪಿಸಿದ ಗೋದಾವರಿ ಸಕ್ಕರೆ ಕಾರ್ಖಾನೆಯ ಪ್ರದೇಶಕ್ಕೆ 'ಸಮೀರವಾಡಿ' ಎಂದು ಕರೆಯುವರು. ದೇಶದ ಬಹುದೊಡ್ಡ ಕಾರ್ಖಾನೆಗಳಲ್ಲಿ ಇದು ಒಂದಾಗಿದೆ, ಸಮೀರ ಎನ್ನುವುದು ಸೋಮಯ್ಯನವರ ಸಂಬಂಧಿಯ ಹೆಸರು.

ಸೈದಾಪೂರ : ಸೈದಪ್ಪನ+ಊರು = ಸೈದಾಪೂರ.

ಹಿಂದೂಗಳೂ ಸೈದಪ್ಪನೆಂದು ಹೆಸರಿಡುವುದು ಈ ಪ್ರದೇಶದಲ್ಲಿ ಕಂಡುಬರುತ್ತದೆ. ವ್ಯಕ್ತಿವಾಚಕ.

ಸೋರಗಾಂವ : ಸೋರೆಯ+ಗಾವ = ಸೋರೆಗಾಂವ>ಸೋರಗಾಂವ.

ಸೋರೆ = ಹಾಲುಗುಂಬಳಕಾಯಿ, ಹಾಲುಗುಂಬಳ ಕಾಯಿ ಹೆಚ್ಚು ಬೆಳೆಯುವ ಊರು. ಸಸ್ಯವಾಚಕ.

ಹಲಕಿ : ಹಲ = ನೇಗಿಲು, ಉಳುಮೆ ಸಾಧನ

ಕಿ = ತದ್ಧಿತ ಪ್ರತ್ಯಯ. ಇದರಿಂದ ಕೆಲಸ ಮಾಡು ಎಂಬರ್ಥ. ಒಕ್ಕಲುತನ ಪ್ರಧಾನ ಪ್ರದೇಶ. ವೃತ್ತಿವಾಚಕ.

ಹಲಗಲಿ : ೧. ಹಲವು+ಕಲಿ = ಹಲವು ಕಲಿ>ಹಲಗಲಿ

ಹಲವು = ಬಹಳ, ಕಲಿ = ಶೂರ, ವೀರ

ಹಲವು ವೀರ, ಕಲಿಗಳಿರುವ ಊರು.

೨. ಹಲ = ನೇಗಿಲು

ಕಲಿ= ನಿಪುಣ, ಹಲದಲ್ಲಿ ನಿಪುಣರಿದ್ದವರ ಊರು– ಹಲಗಲಿ. ಗುಣವಾಚಕ.

ಹೆಬ್ಬಾಳ : ಹಿರಿದು>ಹೆಬ್+ಪಾಳ = ಹೆಬ್ಪಾಳ = ಹೆಬ್ಬಾಳ

ದೊಡ್ಡ ಊರು ಎಂದರ್ಥ. ಪ್ರಮಾಣವಾಚಕ

ಹೊಸಕೋಟೆ: ಹೊಸ+ಕೋಟೆ = ಹೊಸಕೋಟೆ.

ಹೊಸದಾಗಿ ಕೋಟೆ ಕಟ್ಟಿಸಿದ ಊರು. ನಿರ್ಮಾಣ ಮತ್ತು ಸ್ವರೂಪವಾಚಕ.

ಹುನಗುಂದ ತಾಲೂಕ



೬. ಹುನಗುಂದ ತಾಲೂಕು

ಅಂಬಲಿಕೊಪ್ಪ : ಅಂಬಲಿ+ಕೊಪ್ಪ

ಅಂಬಲಿ = ಒಂದು ಬಗೆಯ ತೆಳುವಾದ ಬೇಯಿಸಿದ ಆಹಾರ ಪದಾರ್ಥ, ಗಂಜಿ, ಪೇಯಪದಾರ್ಥ.

ಕೊಪ್ಪ = ಚಿಕ್ಕಹಳ್ಳಿ

ಅಂಬಲಿಗೆ ಪ್ರಸಿದ್ಧವಾದ ಕೊಪ್ಪ

ಅಂಬಲಿ+ಕೊಪ್ಪ = ಅಂಬಲಿಕೊಪ್ಪ. ಆಹಾರವಾಚಕ.

ಅಡಿಹಾಳ : ಅಡಿಯಲ್ಲಿಯ+ಹಾಳ = ಅಡಿಹಾಳ

ಅಡಿ = ಕೆಳಗೆ

ಹಾಳ = ಗ್ರಾಮ

ಅಡಿಹಾಳ = ಕೆಳಗಿನ ಹಾಳ, ಗುಡ್ಡದ ಕೆಳಗಿರುವ ಗ್ರಾಮ. ದಿಗ್ವಾಚಕ.

ಅನಪಕಟ್ಟೆ : ಅಣ್ಣಪ್ಪನ+ಕಟ್ಟೆ = ಅಣ್ಣಪ್ಪಕಟ್ಟೆ>ಅಣಪಕಟ್ಟಿ>ಅನಪಕಟ್ಟಿ

ಅಣ್ಣಪ್ಪನು ಕಟ್ಟಿಸಿದ ಕಟ್ಟೆಯ ಊರು. ವ್ಯಕ್ತಿ, ನಿರ್ಮಾಣವಾಚಕ.

ಅಮರವಾಡಗಿ: ಅಮರರು = ದೇವತೆಗಳು. ಅಮರರ+ವಾಡಗಿ = ಅಮರವಾಡಗಿ.

ಅಮರವಾಡಗಿ = ದೇವತೆಗಳು ನೆಲೆಸಿದ ಊರು. ಧರ್ಮವಾಚಕ.

ಅಮರಾವತಿ: ಅಮರಾವತಿ = ದೇವತೆಗಳ ಊರು.

ಅಮರಾವತಿಯಲ್ಲಿ ದೇವತೆ ಇಂದ್ರನಿರುತ್ತಾನೆ. ಎಂಬ ನಂಬಿಕೆ ಪುರಾಣಗಳಲ್ಲಿ ಬರುವದು. ದೇವತೆಗಳು ಸಾವಿಲ್ಲದ, ಮುಪ್ಪು ಇಲ್ಲದ ಅಮರರು. ಹಾಗಾಗಿ 'ಅಮರಾವತಿ', ಎಂದು ದೇವತೆಗಳಿರುವ ನೆಲೆಯನ್ನು ಕರೆದಿದ್ದಾರೆ. ಅಮರಾವತಿಯಂತೆ ಸುಂದರವಾಗಿರುವ ಗ್ರಾಮ. ಧರ್ಮವಾಚಕ.

ಅಮೀನಗಡ: ಅಮೀನನ+ಗಡ = ಅಮೀನಗಡ

ಅಮೀನ = ಭೂಮಿ ಅಳೆಯುವವ, ನ್ಯಾಯಾಲಯದ ಕೆಲಸ ಮಾಡುವವ.

ಗಡ = ಕೋಟೆ

ಅಮೀನನು ಕಟ್ಟಿಸಿದ 'ಗಡ'–ಅಮೀನಗಡ. ವ್ಯಕ್ತಿ, ವೃತ್ತಿವಾಚಕ.

"ಹಮ್ಮೀರಪುರವೇ ಇಂದಿನ ಅಮೀನಗಡ ಆಗಿರಲುಬಹುದು"[೧೭೭] ಎಂದು ಡಾ. ವಿರೇಶ ಬಡಿಗೇರ ಅವರ ಅಭಿಪ್ರಾಯವಾಗಿದೆ.

ಅರಸಿಬೀದಿ : ಅರಸಿ ಕಟ್ಟಿಸಿದ ಊರಿನ ಬೀದಿ = ಅರಸಿಬೀದಿ. ವ್ಯಕ್ತಿವಾಚಕ.

ಈ ಪಾಳು ಗ್ರಾಮ ಗುಡೂರಿನ ದಕ್ಷಿಣಕ್ಕೆ ೫.ಕಿ.ಮೀ. ದೂರದಲ್ಲಿದೆ. ಬೀಳಗಿ ತಾಲೂಕು. ಎಸ್.ಕೆ.ಕೊಪ್ಪ ದುರ್ಗವ್ವ ದೇವಾಲಯದ ಹಿಂಭಾಗದ ಜಗಲಿಗೆ ಹಾಸಿರುವ ಚಪ್ಪಡಿಯ ಕಲ್ಲಿನ ಮೇಲೆ ಇರುವ (B.K.No. 267 of 1927–28, SII.XI.I., 116) ಕ್ರಿ.ಶ. ೧೦೭೫ ಈ ಶಾಸನದಲ್ಲಿ "ವಿಕ್ರಮಪುರದಲ್ಲಿ ಸಿಂದರಗೇರಿಯ ಕೆಳಗೆ, ಸ್ವಯಂಭು ನಗರೇಶ್ವರ ಕುಲದೇವನಿಗೆ ಒಂದು ಮತ್ತರು. ಹೂವಿನ ತೋಟ ಗದ್ದೆ ದಾನ ನೀಡಿದ ಉಲ್ಲೇಖವಿದೆ."[೧೭೮] ಇದರಲ್ಲಿ 'ವಿಕ್ರಮಪುರ' ಎಂದು ಹೆಸರು ಇದೆ. ಇನ್ನೊಂದು ಶಾಸನ ಇದೇ ಊರಿನ ದುರ್ಗವ್ವ ದೇವಾಲಯದ ಹಿಂದೆ ಬಿದ್ದಿರುವ ಕಲ್ಲಿನ ಮೇಲೆ ಇದೆ. (B.K.No. 268 of 1927–28; SII.XI. ೧೧.೧೮೦) ಕ್ರಿ.ಶ. ೧೦೮೫ರ ಈ ಶಾಸನದಲ್ಲಿ "ಪೆರ್ಗ್ಗಡೆ ಮುದ್ದರಸನನ್ನು ಮಹಾಸಾಮಂತ ನೆಂದು ವರ್ಣಿಸಲಾಗಿದೆ. ಇದು ರಾಜಧಾನಿ ವಿಕ್ರಮಪುರವನ್ನು ಉಲ್ಲೇಖಿಸಿದೆ."[೧೭೯] ಇದರಲ್ಲೂ ಕೂಡ. 'ವಿಕ್ರಮಪುರ' ಎಂದು ಹೆಸರಿಸಿದೆ. ಈ ಎರಡು ಶಾಸನದಲ್ಲಿ ವಿಕ್ರಮಪುರವೆಂದು ಕರೆಯಲಾಗಿದೆ. "ಜಯಸಿಂಹನ ಅಕ್ಕ ಅಕ್ಕಾದೇವಿ ಎಂಬುವವಳು ತನ್ನ ಹಿರಿಯ ಅಣ್ಣ ೫ನೆಯ ವಿಕ್ರಮಾದಿತ್ಯನ ಹೆಸರಿನಲ್ಲಿ ಇಲ್ಲಿ ಊರನ್ನು ಕಟ್ಟಿಸುತ್ತಾಳೆ.

ಅಲ್ಲಿ ಜನವಸತಿ ನಿಲ್ಲಲು ಅನೇಕ ದಾನ ದತ್ತಿಗಳನ್ನು ನೀಡುತ್ತಾಳೆ. ಬಹುಶಃ ಚಾಲುಕ್ಯರ ಕಾಲದಿಂದೀಚೆಗೆ ಈ ಗ್ರಾಮ ಕ್ರಮೇಣ ಅಸ್ತಿತ್ವ ಕಳೆದುಕೊಂಡು ಈಗ ಪಾಳು ಗ್ರಾಮವಾಗಿದೆ. ಚಾಲುಕ್ಯ ರಾಜಕುಮಾರಿ, ಅಕ್ಕಾದೇವಿ ಕಟ್ಟಿಸಿದುದರಿಂದ ಆ ಗ್ರಾಮಕ್ಕೆ 'ಅರಸಿಬೀದಿ' ಎಂಬುದು ಹೆಸರಾಗಿದಿರಬಹುದು. ಊರು ಹಾಳಾದ ಮೇಲೆ ವಿಕ್ರಮಪುರ ಎಂಬುದನ್ನು ಜನ ಮರೆತಿದ್ದಾರೆ."[೧೮೦] ಇದನ್ನು ಅರಸಿ ಅಕ್ಕಾದೇವಿ ನಿರ್ಮಿಸಿದ್ದರಿಂದ ಅನ್ವಯವಾಗಿ 'ಅರಸಿಬೀದಿ' ಎಂದು ಕರೆದಿದ್ದಾರೆ.

ಆದಾಪೂರ : ಆದಪ್ಪನ+ಊರು = ಆದಪ್ಪನೂರು>ಆದಾಪೂರು

ಆದಪ್ಪ = ವ್ಯಕ್ತಿನಾಮ. ವ್ಯಕ್ತಿವಾಚಕ.

ಇಂಗಳಗಿ : ೧. ಇಂಗುಣಿ = ನೀರು ಇಂಗುವ ಕುಣಿ, ತಗ್ಗು ಪ್ರದೇಶ.

ಇಂಗುಣಿ+ಗೆ = ಇಂಗುಣಿಗೆ, ಗೆ –ತದ್ಧಿತ ಪ್ರತ್ಯಯ

ಇಂಗುವ ಕುಣಿ ಉಳ್ಳ ಊರು.

ಇಂಗುಣಿಗೆ>ಇಂಗುಳಿಗೆ>ಇಂಗಳಗಿ. ಭೂವಾಚಕ.

"ಇಂಗಳಗೀ ಶಾಸನದಲ್ಲಿ (೧೧೦೪) 'ಇಂಗುಣಿಗೆ' ಎಂದು ಉಲ್ಲೇಖವಿದೆ.ಇದನ್ನು ೬ನೆಯ ವಿಕ್ರಮನ ರಾಣಿ ಜಾಕಲದೇವಿ ಆಳುತ್ತಿದ್ದಳು"[೧೪೧]

೨. ಇಂಗಳ = ಒಂದು ಸಸ್ಯ.

ಇಂಗಾಲ = ಇದ್ದಿಲು.

ಇಂಗಳ+ಗಿ = ಇಂಗಳಗಿ

ಇಂಗಳಗಿ = ಇಂಗಲ ಗಿಡಗಳು ಹೆಚ್ಚು ಇರುವ ಪ್ರದೇಶ.

ಇಲ್ಲವೆ ಪ್ರಾಚೀನಕಾಲದ ಆಯುಧಗಳನ್ನು ತಯಾರಿಸಲು ಅಗ್ನಿ ಕುಂಡಗಳನ್ನು ನಿರ್ಮಿಸಿರುವ ಸ್ಥಳ. ಸಸ್ಯ, ಭೂಸ್ವರೂಪವಾಚಕ.

ಇದ್ದಲಗಿ : ಇದ್ದಲು+ಗಿ = ಇದ್ದಲಗಿ.

ಇದ್ದಲು ಇರುವ ಊರು. ಪ್ರಾಚೀನ ಕಾಲದಲಿ ಇಲ್ಲಿ ಕಮ್ಮಾರಿಕೆ ಮಾಡಿದ್ದರಿಂದ ಇದ್ದಿಲು ಕುಂಡಗಳಿರಬೇಕು ಇಲ್ಲವೆ ಇಲ್ಲಿ ಯಜ್ಞ ಮಾಡಿರಬೇಕು.

ಇಲಾಳ : "ಇಲ್ವಲ = ರಕ್ಕಸನ ಹೆಸರು.

ಇವನಿಂದ ಇಲ್ವಲ>ಇಲಾಲ>ಇಲಾಳ ಎಂದಾಗಿದೆ.

ಇಲಿ+ಹಾಳ = ಇಲಿಹಾಳ>ಇಲಾಳ"[೧೪೨] ಇದು ಸಂಸ್ಕೃತೀಕರಣಗೊಂಡ ಹೆಸರು.

ಗ್ರಾಮೀಣ ಜನರ ಬಾಯಲ್ಲಿ ಇಲ್ಯಾಳವಾಗಿದೆ. ವ್ಯಕ್ತಿವಾಚಕ

ಇಸ್ಲಾಂಪೂರ : ಇಸ್ಲಾಂ = ಮುಸ್ಲಿಂರಿಗೆ ಇಸ್ಲಾಮರು ಎಂದೂ ಕರೆಯುವರು.

ಇಸ್ಲಾಂರ+ಪುರ = ಇಸ್ಲಾಂಪುರ

ಮುಸ್ಲಿಂರು ಹೆಚ್ಚಾಗಿ ನೆಲೆಸಿರುವ ಊರು. ಧರ್ಮವಾಚಕ.

ಇಳಕಲ್ಲು : ಇಲ್ = ಇರುವಸ್ಥಳ, ವಾಸಸ್ಥಳ, ಮನೆ

ಇಲ್ಲ+ಕಲ್ = ಇಲಕಲ್

ಅಂದರೆ ಮನೆ ಕಟ್ಟಲು ಬೇಕಾಗುವ ಕಲ್ಲುಗಳು ಸಿಗುವ ಸ್ಥಳ. ಶಿಲಾವಾಚಕ.

ಇಳುಕಲು = ಇಳಿಜಾರು

ಇಳುಕಲು>ಇಳಕಲು>ಇಳಕಲ್ಲು

ಇಳುಕಲಿನಲ್ಲಿನ ಜನವಸತಿ ಪ್ರದೇಶ. ಭೂಸ್ವರೂಪವಾಚಕ.

" 'ಇಳಕಲು' ಅಂದರೆ ಇಳಿಜಾರು ಪ್ರದೇಶ, ಈ ಪ್ರಾಕೃತಿಕ ಹಿನ್ನೆಲೆಯ ಪ್ರಕಾರ ಹೆಸರು ಬಂದಿದೆ."[೧೮೩] ಎಂದು ಶ್ರೀ. ಬಿ.ಎಸ್.ದುಂಡರಡ್ಡಿ ಅಭಿಪ್ರಾಯವಾಗಿದೆ. ಇನ್ನೊಂದು ಅಭಿಪ್ರಾಯ: ಬಿ.ಜಿ.ಎಲ್.ಸ್ವಾಮಿಯವರ 'ಹಸುರು ಹೊನ್ನು' ಎಂಬ ಪುಸ್ತಕದಲ್ಲಿ 'ಇಲ್‌ಕಲ್' ಎಂಯ ಒಂದು ಸಸ್ಯದ ಹೆಸರು. ಪು. ೧೦೦ರಲ್ಲಿ ಬರುತ್ತದೆ.

ಉಪನಾಳ: ಉಪ್ಪಿನ+ಹಾಳ = ಉಪ್ಪಿನಾಳ>ಉಪನಾಳ ಇಲ್ಲಿ 'ಹ' ಲೋಪವಾಗಿದೆ.

ಉಪ್ಪಾರರು ಇರುವ ಊರು, ಇಲ್ಲವೆ ಉಪ್ಪಾಗಿರುವ ಭೂಗುಣ ಹೊಂದಿರುವ ಊರು, ಸೌಳುಭೂಮಿ ಹೊಂದಿರುವ ಊರು. ಜನಾಂಗ, ಭೂವಾಚಕ.

ಎಮ್ಮೆಟ್ಟಿ : ಎಮ್ಮೆಯ+ಹಟ್ಟಿ = ಎಮ್ಮೆಹಟ್ಟಿ>ಎಮ್ಮೆಟ್ಟಿ. ಎಮ್ಮೆಗಳನ್ನು ಕಟ್ಟುವ ಕೊಟ್ಟಿಗೆ. ಇಲ್ಲಿ 'ಹ' ಲೋಪವಾಗಿದೆ. ಪ್ರಾಣಿವಾಚಕ.

ಐಹೊಳೆ : ಅಯ್ಯಾ+ಹೊಳೆ>ಅಯ್ಯಾಹೊಳೆ>ಐಹೊಳೆ

ಪ್ರಚಲಿತದಲ್ಲಿರುವ ಕಥೆಯ ಪ್ರಕಾರ ಜಮದಗ್ನಿ ಋಷಿ ಹಾಗೂ ಕಾರ್ತವೀರ್ಯಾರ್ಜುನ ಅರಸನಿಗೆ ಯುದ್ಧ ನಡೆಯಿತು. ಕಾರಣ ಜಮದಗ್ನಿ ಆಶ್ರಮಕ್ಕೆ ಬಂದ ಕಾರ್ತವೀರ್ಯಾರ್ಜುನ ಆತಿಥ್ಯ ಸ್ವೀಕರಿಸಿ ಸುಮ್ಮನೆ ಹಿಂತಿರುಗಲಿಲ್ಲ. ಋಷಿ ಬಳಿ ಇರುವ ಕಾಮಧೇನುವನ್ನು ಬೇಡಿದನು. ಋಷಿ ಕೊಡದೇ ಹೊದಾಗ ಋಷಿಯನ್ನು ಕೊಂದು ಕಾಮಧೇನುವನ್ನು ಅಪಹರಿಸಿದನು ಇದರಿಂದ ಋಷಿ ಪುತ್ರ ಪರುಶುರಾಮನು ಕ್ಷತ್ರಿಯರನ್ನು ಹುಡುಕಿ ತುಂಡರಿಸುತ್ತಾ ನಡೆದನು. ಅಂದರೆ ಪೃಥ್ವಿಯಲ್ಲಿ ತನಗೇ ತಿಳಿಯದಂತೆ ಇಪ್ಪತ್ತೊಂದು ಬಾರಿ ಪ್ರದಕ್ಷಣೆ ಹಾಕಿದ ಹಾಗೆ ಕ್ಷತ್ರಿಯರನ್ನು ಕೊಲ್ಲುತ್ತಾ ಐಹೊಳೆ ಹತ್ತಿರ ಬಂದು ಅಲ್ಲಿಯ ಹೊಳೆಯಲ್ಲಿ ತನ್ನ ಕೊಡಲಿಯನ್ನು ತೊಳೆದನು. ಕೊಡಲಿಗೆ ಮೆತ್ತಿದ ರಕ್ತ ನೀರಿನಲ್ಲಿ ಬೆರೆತು ಇಡಿ ಹೊಳೆಯೇ ಕೆಂಪಾಯಿತು. ಇದನ್ನು ಕಂಡು ಸ್ಥಳೀಯರು ಅಯ್ ಹೊಳೆ! ಎಂದು ಉದ್ಗರಿಸಿದರು. ಅದೆ ಮುಂದೆ ಐಹೊಳೆ ಎಂದಾಗಿದೆ.

ಪಕ್ಕದಲ್ಲಿ ಅಯ್ಯಗಳು (ಉಪಾಧ್ಯಾಯರು) ವಾಸವಾಗಿರುವ ಹೊಳೆ ಅಯ್ಯಾ ಹೊಳೆ ಅಯ್ಯಾ+ ಹೊಳೆ>ಅಯ್ಯಾಹೊಳೆ>ಐಹೊಳೆ ಎಂದಾಗಿದೆ.

ಇನ್ನೊಂದು ಅಭಿಪ್ರಾಯ "ಆರ್ಯಕುಲ ದ್ವೇಷಿಗಳಾಗಿದ್ದ ದೈತ್ಯ ಸಹೋದರರಾದ ವಾತಾಪಿ ಮತ್ತು ಇಲ್ವಲರನ್ನು ಅಗಸ್ತ್ಯ ಮುನಿಗಳು ಸಂಹರಿಸಿದರೆಂಬ ಪ್ರತೀತಿ ಇದೆ. ಆ ರಕ್ಕಸರ ಹೆಸರಿನ ಇಲಾಳ ಹಾಗೂ ವಾತಾಪಿ ಪುರಗಳೇ ಇಂದಿನ ಐಹೊಳೆ ಹಾಗೂ ಬಾದಾಮಿಗಳಾಗಿವೆ."[೧೮೪] ಈ ಹೇಳಿಕೆಯಿಂದ 'ಇಲಾಳ'ವೇ 'ಐಹೊಳೆ' ಎಂಬರ್ಥ ಬರುತ್ತದೆ. ಆದರೆ ಇಲಾಳ ಮತ್ತು ಐಹೊಳೆಗಳು ಎರಡು ಪ್ರತ್ಯೇಕ ಊರುಗಳಿರುವದು ಸುಸ್ಪಷ್ಟವಾಗಿದೆ.

ಆರ್ಯಪುರ (ಶಾ.ಸಂ. ೯, ಪು. ೩೫೧) ಸಂಸ್ಕೃತ ೮ನೆಯ ಶ. ಆರ್ಯಪುರ (ಶಾ.ಸಂ. ೯, ಪು. ೩೫೭) ಕನ್ನಡ ೮ನೆಯ ಶ. ಅಯ್ಯಾವೊಳ(ಬಿ)ಲ(ಶಾ.ಸಂ. ೯, ಪು. ೩೫೭) ಕನ್ನಡ ಕ್ರಿ.ಶ. ೧೦೭೫ ಅಯ್ಯಾವೊಳ (ಶಾ.ಸಂ. ೯, ಪು. ೩೬೭) ಕನ್ನಡ ಕ್ರಿ.ಶ. ೧೧೩೬ ಅಯ್ಯಾವೊಳೆ (ಶಾ.ಸಂ.೯.ಪು. ೩೭೩) ಕನ್ನಡ ಕ್ರಿ.ಶ. ೧೧೧೯ ಅಯ್ಯಾವೊಳೆ (ಶಾ.ಸಂ. ೯. ಪು. ೨೯೯) ಕನ್ನಡ ಕ್ರಿ.ಶ.೧೦೬೨

೮ನೆಯ ಶತಮಾನದ ಶಾಸನಗಳಲ್ಲಿ 'ಆರ್ಯಪುರ' ಎಂದಿದ್ದರೆ (ಕನ್ನಡ–ಸಂಸ್ಕೃತ)ಮುಂದಿನ ಶಾಸನಗಳಲ್ಲಿ 'ಅಯ್ಯಾವೊಳೆ' ಎಂದೇ ಇದೆ. ಆರ್ಯ = ಅಯ್ಯ, ಪುರ = ಪೊಟಿಲ್ ಆದ್ದರಿಂದ ಇದು ಶಬ್ದಶಃ ಭಾಷಾಂತರವಾಗಿದೆ. ಮೂಲದಲ್ಲಿಯ ಹೆಸರು ಕನ್ನಡವಿರಬೇಕೇ ಹೊರತು ಸಂಸ್ಕೃತ ಇರಲಾರದು. ಆದ್ದರಿಂದ ಅಯ್ಯಾಪೊಟಿಲ್ ಇದರ ಅನುವಾದವೇ 'ಆರ್ಯಪುರ' "ಆರ್ಯ+ ಪೊಟಿಲ್>ಅಯ್ಯಾಪೊಟಿಲ್>ಅಯ್ಯಾವೊಳಲ್ ಆಗಿ ಮುಂದೆ ಅಯ್ಯಾ ವೊಳೆಯಾಗಿದೆ."[೧೮೫] ಎಂದಿದೆ. ಸಂಸ್ಕೃತದಿಂದ ಕನ್ನಡಕ್ಕೆ ಬಂದಿರುವ ಸಾಧ್ಯತೆಯನ್ನು ಇಲ್ಲಿ ಹೇಳಲಾಗಿದೆ. ಆದರೆ ಕನ್ನಡದ ನಾಮಗಳು ಸಂಸ್ಕೃತೀಕರಣಗೊಂಡದ್ದಕ್ಕೆ ಉದಾಹರಣೆಗಳಿವೆ ಹೊರತು, ಸಂಸ್ಕೃತದಿಂದ ಕನ್ನಡೀಕರಣಗೊಂಡ ನಾಮಗಳಿಲ್ಲ.

ಒಡೆಯರ ಗೋನಾಳ : ಗೋವಿನ+ಹಾಳ = ಗೋನಾಳ 'ಹ'ಲೋಪವಾಗಿದೆ.

ಈ ಗ್ರಾಮ ಒಡೆಯರ ಭೂಮಿಯಲ್ಲಿದ್ದುದರಿಂದ ಇದನ್ನು 'ಒಡೆಯರ ಗೋನಾಳ' ಎಂದು ಕರೆಯಲಾಗಿದೆ. ಜಾತಿ, ಪ್ರಾಣಿವಾಚಕ.

ಒಳಕಲದಿನ್ನಿ: ಒಳಕಲ್ಲು = ಒಳ್ಳದ ಕಲ್ಲು–ಒರಳಿನ ಕಲ್ಲು

ಒಳಕಲ್ಲ+ದಿನ್ನೆ = ಒಳಕಲದಿನ್ನೆ = ಒಳಕಲದಿನ್ನಿ–ಒರಳಿನ–ಒಳ್ಳದಕಲ್ಲು ದೊರೆಯುವ ದಿನ್ನೆಯ ಗ್ರಾಮ– ಒಳಕಲದಿನ್ನಿ. ನಿರ್ಮಾಣ, ಶಿಲಾವಾಚಕ.

ಓತಗೇರಿ : ಓತದ+ಕೇರಿ = ಓತಗೇರಿ

ಓತ = ಉಡದ ಜಾತಿಯ ಒಂದು ಪ್ರಾಣಿ.

ಈ ಪ್ರಾಣಿಗಳು ಇಲ್ಲಿ ಹೆಚ್ಚು ಕಂಡುಬಂದುದರಿಂದ ಈ ಹೆಸರಿನಿಂದ ಈ ನೆಲೆಯನ್ನು ಗುರುತಿಸಲಾಗಿದೆ. ಪ್ರಾಣಿವಾಚಕ.

ಕಂದಗಲ್ಲ : ಕಂದು+ಕಲ್ಲು = ಕಂದಕಲ್ಲು>ಕಂದಕಲ್ಲು>ಕಂದಗಲ್ಲ. ಶಿಲಾವಾಚಕ

"ಕಂದಗಲ್ಲು ವೀರಭದ್ರ ದೇವಾಯಲದ ಗೋಡೆಗೆ ಒರಗಿಸಿ ಇಟ್ಟಿರುವ ಕಲ್ಲಿನ ಮೇಲೆ (B.K.No.56 of 1928-29; SII.XV.44) 'ಕಂದಗಲೆ;"[೧೮೬] ಎಂದು ಗ್ರಾಮದ ಹೆಸರು ಉಲ್ಲೇಖವಿದೆ. "ಸ್ಕಂದಶಿಲೆ>ಕಂದಗಾಲೆ"[೧೮೭] ಎಂದಾಗಿದೆ ಎಂದು ಪ್ರೊ. ಬಾಪುಗೌಡ ಹಿರೇಗೌಡರ ಅವರು ಅಭಿಪ್ರಾಯಪಟ್ಟಿದ್ದಾರೆ.

ಕಂದಗಲ್ = ಸ್ಕಂದಶಿಲೆ ಎಂದು ಸಂಸ್ಕೃತೀಕರಣಗೊಳಿಸಲಾಗಿದೆ.

ಆದರೆ ಇಲ್ಲಿರುವ ಕಂದು>ಕಂದ ಇದರ ಅರ್ಥ ಮಗುವೆಂದಾಗಿರದೆ 'ಕೆಂಪು ಮಿಶ್ರವಾದ ಕಪ್ಪು' ಎಂದಾಗಿದೆ.

ಕಂಬ್ಳಿಹಾಳ : ಕಂಬಳಿ = ಕುರಿಉಣ್ಣೆಯಿಂದ ತಯಾರಿಸಿದ ಹಾಸಿಗೆ, ಇಲ್ಲವೆ ಹೊದೆಯುವ ವಸ್ತ್ರ.

ಕಂಬಳಿಯ+ಹಾಳ = ಕಂಬಳಿಹಾಳ>ಕಂಬಳಿಹಾಳ. ವಸ್ತುವಾಚಕ.

ಕಟಗೂರು: ೧. ಕಟಕ– ಒಂದು ರೀತಿಯ ಮಣ್ಣು.

ಇದರಿಂದ ಗಣಪತಿ ಮುಂತಾದ ಮೂರ್ತಿಗಳನ್ನು ತಯಾರಿಸುತ್ತಾರೆ.

ಕಟಕಿನ+ಊರು = ಕಟಕೂರು>ಕಟಗೂರು

ಕಟಕು ದೊರೆಯುವ ಊರು. ಪ್ರಕೃತಿವಾಚಕ.

೨. ಕಟುಕರ+ಊರು = ಕಟಕೂರು>ಕಟಗೂರು

ಕಟುಕರ = ದನ, ಕರುಗಳನ್ನು ಕೊಲ್ಲುವ ಜನ.

ಈ ಜನರು ಹೆಚ್ಚು ಇರುವ ಊರು. ವೃತ್ತಿ, ಜನಾಂಗವಾಚಕ.

ಕಡವಾಲ : ಕದಂಬ ವೃಕ್ಷಕ್ಕೆ ಇರುವ ಅನೇಕ ಹೆಸರುಗಳಲ್ಲಿ ಇದು ಒಂದು.

'ಬಿ.ಜಿ.ಎಲ್ ಸ್ವಾಮಿ' ತಮ್ಮ 'ಹಸಿರು ಹೊನ್ನು' ಎಂಬ ಪುಸ್ತಕದಲ್ಲಿ 'ಕಡವಾಲ', 'ನೀರುಕಡವಾಲ' ಇನ್ನೂ ಅನೇಕ ಹೆಸರಿರುವದನ್ನು ಹೇಳಿದ್ದಾರೆ, ಪು. ೪೬. ಸಸ್ಯವಾಚಕ.

ಇನ್ನೊಂದು ಅಭಿಪ್ರಾಯ–

ಕಡಿವಾಣ = ಕುದುರೆಯ ಬಾಯಿಗೆ ಹಾಕುವ ಉಕ್ಕಿನ ತುಂಡು, ಲಗಾಮು.

ಕಡಿವಾಣ>ಕಡಿವಾಳ. ಕಡಿವಾಣಗಳನ್ನು ತಯಾರಿಸುವ ಊರು.

ಕಡ್ಲೇವಾಡ : ಕಡಲೆಯ ಬಾಡ = ಕಡಲೆ ಬೆಳೆಯುವ ಪ್ರದೇಶ. ಸಸ್ಯವಾಚಕ.

ಕಜಗಲ್ : ಕಜ>ಗಜ

ಕಜ+ಕಲ್ = ಕಜಗಲ್ = ಆನೆಗಾತ್ರದ ಕಲ್ಲು

ದೊಡ್ಡ ಬಂಡೆಗಳಿರುವ ಊರು. ಶಿಲಾ, ಪ್ರಮಾಣವಾಚಕ.

ಕಮತಗಿ : ಕಮತ = ಒಕ್ಕಲುತನ, ಇಗೆ = ಉಳ್ಳುದು.

ಕಮತ+ಇಗೆ = ಕಮತಿಗೆ>ಕಮತಗಿ

ಒಕ್ಕಲುತನಕ್ಕೆ ಪ್ರಸಿದ್ಧ ಉಳ್ಳ ಊರು. ವೃತ್ತಿವಾಚಕ.

ಕಮಲದಿನ್ನಿ : ಕಮಲದಂತಿರುವ ದಿನ್ನಿಯ ಊರು. ಭೂಸ್ವರೂಪವಾಚಕ.

ಕರಡಿ : ಕರಡಿ = ಮೈತುಂಬ ಕೂದಲಿರುವ ವನ್ಯ ಪ್ರಾಣಿ.

ಇಲ್ಲಿ ಮೊದಲು ಕರಡಿಗಳು ಹೆಚ್ಚು ವಾಸವಾಗಿರಬಹುದು.

ಕರಡಿ = ಒಂದು ಚರ್ಮವಾದ್ಯ

ಚರ್ಮವಾದ್ಯ ಮಾಡುವವರು ಇಲ್ಲಿ ಹೆಚ್ಚಾಗಿರುವುದರಿಂದ, ಕರಡಿ ವಾದ್ಯ ಬಾರಿಸುವವರು ಹೆಚ್ಚು ಇದ್ದುದರಿಂದ ಈ ಊರಿಗೆ 'ಕರಡಿ' ಎಂದು ಕರೆದಿರಬಹುದು. ಪ್ರಾಣಿ, ಸಂಸ್ಕೃತಿವಾಚಕ.

"ಬಸವೇಶ್ವರ ದೇವಾಲಯವು ಪೌರಾಣಿಕ ಮಹತ್ವವನ್ನು ಪಡೆದಿದೆ. ಈ ದೇವಾಲಯದಲ್ಲಿ 'ಕರಡಿ' ಆಕಾರವನ್ನು ಹೋಲುವ ನಂದಿಯ ಗ್ರಹವಿದೆ. ಇದರಿಂದಾಗಿ ಈ ಗ್ರಾಮಕ್ಕೆ 'ಕರಡಿ', ಎಂದು ಹೆಸರು ಬರಲು ಕಾರಣವಾಗಿದೆ."[೧೮೮] ಎಂದು ಡಾ. ಶಂಭು ಬಳಿಗಾರ ಅಭಿಪ್ರಾಯವಾಗಿದೆ.

ಕಲ್ಲಗೋನಾಳ : ಗೋವಿನ+ಹಾಳ = ಗೋನಾಳ

ಕಲ್ಲಿನಿಂದ ಕೂಡಿದ ಗೋವಿನಹಾಳ. ಆಕಳುಗಳು ಮೇಯಲು ಇರುವಂಥ ಗೋಮಾಳವೇ ಮುಂದೆ ಗೋವಿನಹಾಳವಾಯಿತು. ಶಿಲಾ, ಪ್ರಾಣಿವಾಚಕ.

ಕಳ್ಳಿಗುಡ್ಡ : ಕಳ್ಳಿಯ+ಗುಡ್ಡ = ಕಳ್ಳಿಗುಡ್ಡ

ಕಳ್ಳಿ = ಹಾಲುಸುರಿಯುವ ಒಂದು ಸಸ್ಯಜಾತಿ, ಈ ಸಸ್ಯಗಳು ಗುಡ್ಡದಲ್ಲಿ ಬೆಳದದ್ದರಿಂದ ಕಳ್ಳಿಗುಡ್ಡ ಎಂದು ಕರೆಯಲಾಗಿದೆ. ಕಳ್ಳಿಯಿಂದ ಕೂಡಿದ ಗುಡ್ಡದ ಊರು. ಸಸ್ಯವಾಚಕ.

ಕಿರಸೂರು : ಕಿಱಿದು + ಚಿಕ್ಕದಾದ, ಸಣ್ಣ, ಸೂಱು = ಮೇಲ್ಛಾವಣೆ

ಕಿಱಿದಾದ+ಸೂಱು = ಕಿಱಿಸೂಱಿ = ಕಿರಿಸೂರ್ = ಕಿರಸೂರು.

ಸಣ್ಣ ಸಣ್ಣ ಮನೆಗಳಿಂದ ಕೂಡಿದ ಊರು. ಪ್ರಮಾಣವಾಚಕ.

ಕ್ಯಾದಿಗ್ಗೇರಿ : ಕೇತಕಿ>ಕೇದಗಿ>ಕ್ಯಾದಗಿ = ಒಂದು ಹೂವು. ಕೇದಗಿ ಬೆಳೆಯುವ ಪ್ರದೇಶ.

ಕೇದಗಿಯ+ಕೆರೆ = ಕೇದಗಿಕೆರೆ>ಕ್ಯಾದಗಿಯ ಕೆರೆ>ಕ್ಯಾದಿಗ್ಗೆರೆ>ಕ್ಯಾದಿಗ್ಗೇರಿ, ರೂಢಿಯಲ್ಲಿ ಕ್ಯಾದಿಗ್ಗೇರಿ ಎಂದಾಗಿದೆ. ಸಸ್ಯವಾಚಕ.

ಕುಣಬೆಂಚಿ : ಕಣಮಿಂಚಿ–ಶಿಲ್ಪಿಯ ಹೆಸರು

ಕಣಮಿಂಚಿ>ಕುಣಬೆಂಚಿ

ಕಣಮಿಂಚಿ ವಾಸಿಸುವ ಊರಿಗೆ ಅವನ ಹೆಸರಿನಿಂದ ಕರೆದಿರಬೇಕು. 'ಮಿಂಚಿ'ಎಂಬುದನ್ನು ಹೊಂದಿರುವ ಅನೇಕ ಹೆಸರುಗಳು ಬಾದಾಮಿ ಗುಡ್ಡದ ಮೇಣಬಸದಿಯ ಅಕ್ಕಪಕ್ಕ ಬಂಡೆಗಳ ಮೇಲೆ ಕಾಣಸಿಗುವವು. "ಮಂಚೆ, ಮಂಚಿ–ಇದು ಶಿಲ್ಪ ಅಥವಾ ಸ್ಥಪತಿ, ರೂವಾರಿಗಳ ಹೆಸರಾಗಿರಬಹುದು."[೧೮೯] ವ್ಯಕ್ತಿವಾಚಕ.

ಕೃಷ್ಣಾಪೂರ : ಕೃಷ್ಣಪ್ಪನ+ಊರು = ಕೃಷ್ಣಾಪೂರ>ಕೃಷ್ಣಾಪೂರ

ಕೃಷ್ಣಪ್ಪ ಎಂಬ ವ್ಯಕ್ತಿಯಿಂದ ಪ್ರಸಿದ್ಧವಾದ ಊರು. ವ್ಯಕ್ತಿವಾಚಕ.

ಕೂಡಲ ಸಂಗಮ : ಕೂಡಲ+ಸಂಗಮ = ಕೂಡಲಸಂಗಮ

ಕೃಷ್ಣ– ಮಲಪ್ರಭಾ ನದಿಗಳು ಇಲ್ಲಿ ಒಂದಾಗುವುದರಿಂದ ಇದಕ್ಕೆ ಕೂಡಲಸಂಗಮ ಎಂದು ಕರೆಯುವರು' 'ಕೂಡಲಸಂಗಮ' ಎನ್ನುವುದು ದ್ವಿರುಕ್ತಿಪದವಾಗಿದೆ. ಕೂಡಲ– ಅಚ್ಚಗನ್ನಡಪದ, ಸಂಗಮ ಅನ್ನುವುದು ಸಂಸ್ಕೃತ ಪದ. ಒಂದೇ ಅರ್ಥವುಳ್ಳ ಎರಡು ಭಾಷೆಯ ಪದಗಳು ಕೂಡಲ ಮತ್ತು ಸಂಗಮ ಪದಗಳೂ ಐಕ್ಯ, ಕೂಡು, ಎಂಬರ್ಥ ಸೂಚಿಸುತ್ತವೆ.ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಎರಡೂ ಸೇರಿ ಮುಂದೆ ಹರಿಯುತ್ತವೆ. ಈ ಪ್ರದೇಶದಲ್ಲಿ ಈಶ್ವರ ದೇವಸ್ಥಾನವಿದ್ದು ಅದಕ್ಕೆ ಸಂಗಮನಾಥ ದೇವರು ಎಂದು ಕರೆಯುವರು.

ಕೆಂಗಲ್ : ಕಚ್ಚನೆ ಕಲ್>ಕೆಂಗಲ್

ಕೆಂಪಾದ ಕಲ್ಲು ಬಂಡೆಗಳಿರುವ ಊರು ಕೆಂಗಲ್. ವರ್ಣ, ಶಿಲಾವಾಚಕ.

ಕೆಲೂರು : ಕೆಲ = ಪಕ್ಕ, ಆಜುಬಾಜು. ಸನಿಹ.

ಕೆಲದ+ಊರು = ಕೆಲೂರು ಪಕ್ಕದೂರು, ಸಮೀಪದ ಊರು

ಕೆಲವು ಊರುಗಳು ಕೂಡಿ ಕೆಲೂರು ಆಗಿದೆಯೆಂದು ಹೇಳುವ ಪ್ರತೀತಿಗೆ ತಕ್ಕಂತೆ ಇಲ್ಲಿ ಏಳು ಆಂಜನೇಯ ಗುಡಿಗಳಿರುವದರಿಂದ ಏಳು ಗ್ರಾಮಗಳ ಸಮ್ಮಿಲನದಿಂದ ಈ ಗ್ರಾಮ ಕೂಡಿದೆ,"[೯೦]

ಕೆಲೂರು ಗ್ರಾಮ ಪಂಚಾಯತಿಯ ಕಛೇರಿಯ ಮುಂಬಾಗದಲ್ಲಿ ಇಟ್ಟಿರುವ ಕಲ್ಲಿನ ಮೇಲೆ ಇರುವ (B.K.No. 57 of 1928–29; 273) ಕ್ರಿ.ಶ. ೧೮೨೪ರ ಈ ಶಾಸನದಲ್ಲಿ ಕುಂಪಣಿ ಸರ್ಕಾರವು "ಕೆಲೂರಿನ ಮೇಲೆ ಸಾಧಿಸಿದ ಜಯವನ್ನು ಇದು ಉಲ್ಲೇಖಿಸಿದೆ". ಇದರಲ್ಲಿ "ಕೆಲೂರು" ಎಂದು ಹೆಸರು ಇದೆ. ಅಲ್ಲೇ ಇರುವ ಇನ್ನೊಂದು (B.K.No. ೫೮ of 1928–29; 274) ಶಾಸನದಲ್ಲಿ 'ಕೆಲೂರು' ಎಂದು ಉಲ್ಲೇಖಿಸಿದೆ."[೯೧] ಈ ಎರಡು ಶಾಸನದಲ್ಲಿ ಕೆಲೂರು ಎಂದಿದೆ

ಕೆಸರಪೆಂಟೆ : ಕೆಸರಿನ+ಪೆಂಟೆ = ಕೆಸರಪೆಂಟೆ.

ಕೆಸರಿನಿಂದ ಕೂಡಿದ ಊರು. ಜಲವಾಚಕ.

ಕೆಸರಬಾವಿ : ಕೆಸರಿನ+ಬಾವಿ = ಕೆಸರಬಾವಿ

ಇಂತಹ ಕೆಸರು ತುಂಬಿದ ಬಾವಿ, ಕೆಸರಬಾವಿ.

ನೀರು ಮತ್ತು ಮಣ್ಣು ಸೇರಿ ಉಂಟಾದ ಪರಿಸರ

ನೀರು, ನಿರ್ಮಾಣವಾಚಕ.

ಕೊಡಗಲಿ : ಕೊಡುವಲ್ಲಿ+ಕಲಿ = ಕೊಡುಗಲಿ>ಕೊಡಗಲಿ

ಕೊಡುವವ = ದಾನಸೂರ

ಕೊಡುವಲ್ಲಿ ಕಲಿಯಾದವರ ಊರು.

ಕೊಣ್ಣೂರು : ಕೋಣ = ಒಂದು ಪ್ರಾಣಿ

ಕೋಣಿಗನ = ಊರು = ಕೊಣಗನ ಊರು>ಕೊಣಗನೂರು>ಕೊಣ್ಣೂರು.

ಪ್ರಾಣಿವಾಚಕ.

ಕೊಪ್ಪ: ಕೊಪ್ಪ = ಹಿಂದಿನ ಕಾಲದಲ್ಲಿ ನೀರಿನ ಪ್ರದೇಶದಲ್ಲಿ ಕೆಲವು ಮನೆಗಳಿದ್ದು ಜನರು ಒಂದಾಗಿ ವಾಸಿಸುತ್ತಿದ್ದರು. ಇಂಥವು ಕೊಪ್ಪ ಎಂದು ಕರೆಸಿಕೊಂಡಿವೆ. ವಸತಿವಾಚಕ.

ಕೋಡಿಹಾಳ: ಕೋಡಿಯಲ್ಲಿರುವ+ಹಾಳ = ಕೋಡಿಹಾಳ

ಕೊಡಿ = ಕೆರೆ, ಕಟ್ಟೆಗಳಿಂದ ನೀರು ಹೊರಗೆ ಹೋಗುವ ಸ್ಥಳ. ನಿರ್ಮಾಣವಾಚಕ.

ಕೌಜಗನೂರು: ಕೌಜಗ = ಒಂದು ಪಕ್ಷಿ

ಕೌಜಗನ+ಊರು = ಕೌಜಗನೂರು

ಕೌಜಗ ಪಕ್ಷಿಗಳು ಹೆಚ್ಚಾಗಿ ಇರುವ ಒಂದು ಊರು, ಇವು ಹೆಚ್ಚಾಗಿ ಗುಡ್ಡ, ನೀರಿನ ಸೌಲಭ್ಯವಿರುವ ಹಳ್ಳ, ಕೊಳ್ಳಗಳ ಪ್ರದೇಶಗಳಲ್ಲಿ ಇರುತ್ತವೆ. ಇಂತಹ ಒಂದು ಪ್ರದೇಶ ಈ ಊರಿನ ಸುತ್ತ ಮುತ್ತ ಇದೆ. ಪಕ್ಷಿವಾಚಕ.

ಖೈರವಾಡಗಿ : ಕೈರ = ಒಂದು ಜಾತಿಯ ಮರ

ಕೈರ+ವಾಡ+ಗಿ = ಕೈರವಾಡಗಿ>ಖೈರವಾಡಗಿ

ಖೈರದ ಮರಗಳು ಹೆಚ್ಚು ಬೆಳೆಯುವ ಪ್ರದೇಶ. “ಖೈರದ ಮರ (ಖೈರ) ಬಹಳ ಎತ್ತರವಾಗಿ ಬೆಳೆಯುವುದಿಲ್ಲ. ಕಟ್ಟಿಗೆ, ಬಿರುಸು, ಗಟ್ಟಿತೆಂಗಿನಂತೆ ತಾಳಿಕೆಯುಳ್ಳದ್ದು ಘನಘೂಟು ಬಲಿತ ಕಟ್ಟಿಗೆ ಸುಮಾರು ೮೦ ಪೌಂಡಿನ ತೂಕವಿರುತ್ತದೆ. ಈ ಕಟ್ಟಿಗೆಯನ್ನು ಕುದಿಸಿ ಕರೆ ಕಾಚು ಮಾಡುತ್ತಾರೆ. ಆ ಕಾಚು ವಿಳ್ಯೆಗೂ ಔಷಧಕ್ಕೂ ಬೇಕಾಗುತ್ತದೆ.”[೧೯೨] ಸಸ್ಯವಾಚಕ.

ಗಂಗೂರು : ಗಂಗನ+ಊರು = ಗಂಗೂರು>ಗಂಗೂರ

ಗಂಗಪ್ಪ ಎಂಬ ವ್ಯಕ್ತಿಯ ಹೆಸರಿನಲ್ಲಿ ಈ ಊರನ್ನು ಕರೆಯಲಾಗಿದೆ. ವ್ಯಕ್ತಿವಾಚಕ.

ಗಂಜಿಹಾಳ : ಗಂಜಿ = ಆಹಾರ

ಗಂಜಿ+ಹಾಳ = ಗಂಜಿಹಾಳ

ಬರಗಾಲದಲ್ಲಿ ಇಲ್ಲಿ ಗಂಜಿ ಕೇಂದ್ರವನ್ನು ಪ್ರಾರಂಭಿಸಿರಬಹುದು. ಇಲ್ಲವೆ ಯಾವುದಾದರೂ ದೇವರಿಗೆ, ಅರ್ಚಕರಿಗೆ ಆಹಾರಕ್ಕಾಗಿ ದಾನ, ದತ್ತಿ ಬಿಟ್ಟಿರಬಹುದು. ಆಹಾರವಾಚಕ.

ಗಡಿಸುಂಕಾಪುರ: ಗಡಿ = ಎಲ್ಲೆ, ಮೇರೆ, ಅಂಚು, ಸೀಮೆ,

ಸುಂಕ = ತೆರಿಗೆ, ಕರ, ಕಂದಾಯ, ಜಕಾತಿ

ಗಡಿ+ಸುಂಕಾಪುರ = ಗಡಿಸುಂಕಾಪುರ.

ಸುಂಕದ+ಪುರ = ಸುಂಕಾಪುರ

ಊರನ್ನು, ಪಟ್ಟಣವನ್ನು ಪ್ರವೇಶ ಮಾಡುವಾಗ ವ್ಯಾಪಾರಿಗಳು ತೆರಿಗೆ ಕೊಡಬೇಕಾಗುವುದು. ಅದನ್ನು ಈ ಊರಲ್ಲಿ ಹಿಂದಿನ ಕಾಲದಲ್ಲಿ ವಸೂಲು ಮಾಡುತ್ತಿದ್ದರು. ವಾಣಿಜ್ಯವಾಚಕ.

ಗಟ್ಟಿಗನೂರು: ಗಟ್ಟಿಗನ+ಊರು = ಗಟ್ಟಿಗನೂರು

ಗಟ್ಟಿಗ = ಶಕ್ತಿವಂತ, ಉತ್ಸಾಹಿ, ಶೂರ

ಶೂರನ ಊರು. ಗುಣವಾಚಕ.

ಗಾನದಾಳ : ಗಾನದ+ಹಾಳ = ಗಾನದಾಳ

ದಾನ ಕೊಡುವವರ ಊರು.

ಗುಂಡಾಲ : ಗುಂಡಾಲ = ಸುತ್ತಲೂ ಗುಡ್ಡವಿರುವ ಊರು. ಪ್ರಕೃತಿವಾಚಕ.

ಗುಗ್ಗಲಮರಿ : ಗುಗ್ಗಳ+ಮರ = ಗುಗ್ಗಳಮರ>ಗುಗ್ಗಲಮರಿ, ಸಸ್ಯವಾಚಕ.

ಗುಡೂರು : ಗುಡ್ಡದ+ಊರು = ಗುಡ್ಡದೂರು>ಗುಡ್ಡೂರುಗುಡೂರು

ಗುಡ್ಡಗಳಿಂದ ಕೂಡಿದ ಊರು. ಭೂಸ್ವರೂಪವಾಚಕ.

ಗುಡೂರು ಎಸ್.ಬಿ. ಮತ್ತು ಗುಡೂರು ಎಸ್.ಸಿ. ಎಂದು ಇವೆ.

ಗೊರಜನಾಳ: ಗೊರಜ = ವ್ಯಕ್ತಿ

ಗೊರಜನ+ಹಾಳ = ಗೊರಜನಾಳ ಇಲ್ಲಿ 'ಹ', ಲೋಪವಾಗಿದೆ. ವ್ಯಕ್ತಿವಾಚಕ

ಗೊರಬಾಳ: ಗೊರವನ+ಪಾಳ್ = ಗೊರವನಬಾಳ್>ಗೊರಬಾಳ್>ಗೊರಬಾಳ.

ಗೊರವ = ಶಿವ. 'ವ' ಲೋಪವಾಗಿದೆ ಮತ್ತು ಪ>ಬ ವಾಗಿದೆ. ದೈವವಾಚಕ

ಗೋನಾಳ : ಗೋವಿನ+ಹಾಳ = ಗೋನಾಳ 'ವ',ಲೋಪವಾಗಿದೆ.

ಆಕಳುಗಳುಳ್ಳ ಹಳ್ಳಿ, ಹಟ್ಟಿ. ಪ್ರಾಣಿವಾಚಕ.

ಗೋನಾಳ ಮೂರು ಇವೆ. ಗೋನಾಳ ಎಸ್.ಬಿ., ಗೋನಾಳ ಎಸ್.ಡಿ. ಮತ್ತು ಗೋನಾಳ ಎಸ್.ಕೆ.

ಗೋಪಸಾನಿ : ಗೋಪಸಾನಿ=ಗೋವುಗಳನ್ನು ಸಾಕುವವಳು. ಅವಳಿಂದ ಆ ಊರಿಗೆ ಆ ಹೆಸರು ಬಂದಿರಬಹುದು. ವೃತ್ತಿವಾಚಕ.

ಚಟ್ನಿಹಾಳ : ಚೊಟ್ಟ = ವ್ಯಕ್ತಿ ಹೆಸರು

ಚೊಟ್ಟನ+ಹಾಳ = ಚೊಟ್ಟನಹಾಳ>ಚೊಟ್ನಾಳ>ಚಟ್ನಿಹಾಳ

"ಚೊಟ್ಟನೆಂಬ ವ್ಯಕ್ತಿ ಈ ಹಳ್ಳಿಯನ್ನು ಆಳುತ್ತಿದ್ದ".[೧೯೩] ವ್ಯಕ್ತಿವಾಚಕ.

ಚಾಮಲಾಪುರ : ಶಾಮಲೆ>ಚಾಮಲೆ, ಸ್ತ್ರೀಲಿಂಗವಾಚಕ.

ಚಾಮಲೆಯ+ಪುರ = ಚಾಮಲೆಪುರ>ಚಾಮಲಾಪುರ

ಚಾಮಲೆ ಎಂಬ ರಾಣಿಯ ಹೆಸರಿನಿಂದ ಈ ಸ್ಥಳವನ್ನು ಕರೆದಿದ್ದಾರೆ. ವ್ಯಕ್ತಿವಾಚಕ.

ಚಿಂತಕಮಲದಿನ್ನಿ: ಚಿಂತ = ಒಂದು ಜನಾಂಗ.

ಕಮಲದಂತಿರುವ ದಿನ್ನಿ = ಕಮಲದಿನ್ನಿ

ಚಿಂತ ಜನಾಂಗದವರು ವಾಸಿಸುವ ಕಮಲದಂತಿರುವ ದಿನ್ನಿಯ ಊರು.

ಚಿಂತಕಮಲದಿನ್ನಿ. ಜನಾಂಗ, ಸಸ್ಯ, ಭೂಸ್ವರೂಪವಾಚಕ.

ಚಿಕ್ಕನಾಳ : ಚಿಕ್ಕನ+ಹಾಳ = ಚಿಕ್ಕನಹಾಳ>ಚಿಕ್ಕನಾಳ 'ಹ', ಲೋಪವಾಗಿದೆ. ವ್ಯಕ್ತಿವಾಚಕ.

ಚಿತ್ತರಗಿ : ಚಿತ್ತರು = ಒಂದು ಜನಾಂಗ

ಅಗಿ= ತದ್ಧಿತ ಪ್ರತ್ಯಯ, ಇರುವಿಕೆಯನ್ನು ಸೂಚಿಸುವುದು.

ಚಿತ್ತರು+ಅಗಿ = ಚಿತ್ತರಗಿ

ಚಿತ್ತರ ಜನಾಂಗವಿರುವ ಊರು. ಜನಾಂಗವಾಚಕ.

ಚಿತ್ತವಾಡಗಿ : ೧. ಚಿತ್ರ = ವಿವಿಧ, ಬಾಡ = ತೊಪ್ಪಲು

ಚಿತ್ರ+ಬಾಡ + ಅಗೆ = ಚಿತ್ತವಾಡಗೆ>ಚಿತ್ತವಾಡಗಿ

೨. ಚಿನ್ನಾದೇವಿವಾಡ>ಚಿಕ್ಕದೇವಿವಾಡ>ಚಿಕ್ಕವಾಡ>ಚಿಕ್ಕವಾಡಿ>ಚಿತ್ತವಾಡಿ>ಚಿತ್ತವಾಡಿಗಿ

"ಶ್ರೀ ಕೃಷ್ಣ ದೇವರಾಯರು ತಮ್ಮ ಪ್ರೀತಿಯ ರಾಣಿ ಚಿನ್ನಾದೇವಿ ಹೆಸರಿನಲ್ಲಿ ಸ್ಥಾಪಿಸಿದ ಉಪನಗರವೆಂದು ಸಂಶೋಧಕರ ಅಭಿಪ್ರಾಯ."[೧೯೪] ಬಳ್ಳಾರಿ ಜಿಲ್ಲೆ ಹೊಸಪೇಟೆಗೆ ಹೊಂದಿಕೊಂಡು ಚಿತ್ತವಾಡಗಿ ಇದೆ.

ಚೀಲಾಪುರ : "ಸೇವುಣರ ಜೈತುಗಿಯ ಹೆಂಡತಿ ಚೀಲಾದೇವಿ. ಈಕೆ ಕಟ್ಟಿಸಿದಿರಬೇಕು."[೧೯೫]
ವ್ಯಕ್ತಿವಾಚಕ.

ಚೆನ್ನಾಪೂರ : ಚೆನ್ನಪ್ಪನ+ಊರು = ಚೆನ್ನಪ್ಪೂರು>ಚೆನ್ನಾಪೂರ

ಚೆನ್ನಪ್ಪನೆಂಬ ಪ್ರಸಿದ್ಧವ್ಯಕ್ತಿ ಆಗಿಹೋಗಿರಬೇಕು. ಆದ್ದರಿಂದ ಅವನ ಹೆಸರಿನಿಂದ ಈ ನೆಲೆಯನ್ನು ಕರೆದಿರಬೇಕು. ವ್ಯಕ್ತಿವಾಚಕ.

ಚೆನ್ನಾಪೂರ ಎಸ್.ಟಿ. ಮತ್ತು ಚೆನ್ನಾಪೂರ ಎಸ್.ಕೆ ಎಂದಿದೆ.

ಚೌಕಮಲದಿನ್ನಿ: ನಾಲ್ಕು ಕಮಲಗಳ ದಿನ್ನೆ ಇರುವಂತಹ ಊರು. ಭೂ ಸ್ವರೂಪವಾಚಕ

ಜಂಬಲದಿನ್ನಿ : ಜಂಬಲ = ನೇರಳೆ, ಕೇದಗೆ, ಕೆಸರು, ಜುಡುಪು

ಗಿಡಗಂಟೆಗಳು ಇವುಗಳ ಜೊತೆಗೆ ದಿನ್ನೆ ಇರುವ ಊರು ಜಂಬಲದಿನ್ನಿ

ಜಂಬಲದ+ದಿನ್ನೆ = ಜಂಬಲದಿನ್ನೆ>ಜಂಬಲದಿನ್ನಿ

ದಿನ್ನೆ = ಗಿಡಗಂಟೆಗಳಿಂದ ಕೂಡಿದ ಊರು. ಸಸ್ಯ ಹಾಗೂ ಭೂಸ್ವರೂಪವಾಚಕ.

ಜಾಕಮಲದಿನ್ನಿ: ೧. ಯಕ್ಕಿ>ಜಕ್ಕಿ>ಜಾಕಲ>ಜಾಕಮಲ, ಎಂದು ಅರ್ಥಸುಗಮತೆಗೆ 'ಮ' ಸೇರಿಸಿರಬೇಕು.

೨. ಚಾರು = ಮನೋಹರ

ಚಾರು+ಕಮಲದ+ದಿನ್ನಿ = ಚಾರುಕಮಲದಿನ್ನಿ ಚಾರುಕಮಲದಿನ್ನಿ>ಜಾಕಮಲದಿನ್ನಿ ಅಂದರೆ ಮನೋಹರವಾದ ಕಮಲದದಿನ್ನಿ.

ಜಾಕಲದೇವಿಯ ವರ್ಣನೆ ಇಂಗಳಗಿ ಶಾಸನದಲ್ಲಿ (೧೦೯೪) ಬಹಳ ಪರಿಣಾಮಕಾರಿಯಾಗಿ ಬಂದಿದೆ. "೬ನೆಯ ವಿಕ್ರಮನ ರಾಣಿಯಾದ ಈಕೆ ಅಜಿಲ್ ಮುನ್ನೂರರೊಳಗಿನ ಇಂಗುಣಿಗೆಯಲ್ಲಿ ಆಳುತ್ತಿದ್ದಳು."[೧೯೬] ಜಾಕಲದೇವಿ ಕಟ್ಟಿಸಿದ ಊರು ಜಾಕಲದಿನ್ನಿ.

ಹುನಗುಂದ ತಾಲೂಕಿನಲ್ಲಿ 'ದಿನ್ನೆ' ಉತ್ತರಪದವಾಗಿರುವ ೯ ಊರುಗಳಿವೆ. ಹಾಗೆಯೆ ಕಮಲದಿನ್ನಿ, ಬೇಕಮಲದಿನ್ನಿ, ಚಿಂತಕಮಲದಿನ್ನಿ, ಇವುಗಳ ಪ್ರಭಾವದಿಂದ ಜಾಕಲದಿನ್ನಿ>ಜಾಕಮಲದಿನ್ನಿ ಆಗಿರಬೇಕು.

ತಳ್ಳಿಕೇರಿ : ತಳ್ಳಿ = ಚಾಡಿ, ಬಂಡಾಯ, ಉಪದ್ರವ, ಚಿಂತೆ

ತಳ್ಳಿಯ+ಕೇರಿ = ತಳ್ಳಿಕೇರಿ

೧. ತಳ್ಳಿಖೋರ = ಚಾಡಿಕೋರ, ಬಂಡಾಯಗಾರ.

ಬಂಡಾಯಗಾರರ ಊರು, ಅಂಥಮನೋಬಾವದ ಜನರಿರುವ ಊರು.

೨. ತಲ>ತಳ = ಕೇಳಭಾಗ, ಬುಡ.

ಕೇರಿ = ಊರು, ಕೆಳಬಾಗದ ಊರು, ತಲ>ತಳ>ತಳ್ಳಿ+ಕೇರಿ = ತಳ್ಳಿಕೇರಿ

ತಾರಿವಾಳ : ತಾರೆ = ಒಂದು ಗಿಡ

ತಾರೆಯ = ಪಾಳ್ = ತಾರೆವಾಳ>ತಾರಿವಾಳ. ವನಸ್ಪತಿವಾಚಕ.

ತಿಮ್ಮಾಪೂರ : ತಿಮ್ಮಪ್ಪನ+ಊರು = ತಿಮ್ಮಾಪೂರ. ವ್ಯಕ್ತಿವಾಚಕ.

ತುಂಬ : ೧. ತುಂಬಿ = ಕರೇಕುಂಬಳಕಾಯಿ

ಕರೇಕುಂಬಳಕಾಯಿ ಬೆಳೆಯುವ ಊರು. ಸಸ್ಯವಾಚಕ.

೨. ತುಂಬಿ>ತುಂಬ

ತುಂಬಿ = ಸಸ್ಯ

ತುಂಬಿ ಗಿಡಗಳಿಂದ ಕೂಡಿದ ಪ್ರದೇಶ

'ದುಂಬಿ'; ಬೃಂಗವನ್ನು ತುಂಬಿ ಎಂತಲೂ ಕರೆಯುವರು.

ಸಸ್ಯ, ಕೀಟವನ್ನು ಸೂಚಿಸುವದು.

ತುರಮರಿ : ತುರು = ದನ, ಪಶು, ದನಕರು, ಆಕಳು

ತುರು+ಮರಿ = ತುರುಮರಿ>ತುರಮರಿ

ದನಕರುಗಳು ಹೆಚ್ಚಾಗಿರುವ ಊರು. ಪ್ರಾಣಿವಾಚಕ.

ತುರುಡಗಿ : ತುರು = ಆಕಳು,

ಗಿ = ಇರುವಂಥದ್ದು

ಆಕಳುಗಳು ಹೆಚ್ಚು ಇರುವ ಊರು.

"ಕಂದಗಲ್ ವೀರಭದ್ರ ದೇವಾಲಯದ ಗೋಡೆಗೆ ಒರಗಿಸಿ ಇಟ್ಟಿರುವ ಕಲ್ಲಿನ ಮೇಲೆ ಇರುವ (B.K.No. 56 of 1928–29. SII,XV, 44) ಕ್ರಿ.ಶ. ೧೨ನೆಯ ಶತಮಾನದ ಈ ಶಾಸನದಲ್ಲಿ ತುಱುವಡಿಗೆ ಎಂದಿದೆ."[೧೯೬]

ತೊಂಡಿಹಾಳ: ತೊಂಡಿ = ಒಂದು ಬಗೆಯ ಕಾಯಿ ಬಿಡುವ ಬಳ್ಳಿ

ತೊಂಡಿಯ = ಹಾಳ = ತೊಂಡಿಹಾಳ

ತೊಂಡಿಬಳ್ಳಿ ಹೆಚ್ಚು ಬೆಳೆಯುವ ಊರು. ಸಸ್ಯವಾಚಕ.

ದಾಸಬಾಳ : ದಾಸಬಾಳ = ಒಂದು ಬಗೆಯ ಹೂವಿನ ಗಿಡ

ಈ ಹೂವಿನ ಗಿಡಗಳು ಹೆಚ್ಚು ಬೆಳೆಯುವ ಪ್ರದೇಶ. ಸಸ್ಯವಾಚಕ.

ಧನ್ನೂರು : ದನಗರ ಊರು, ಪಶುಪಾಲಕರ ಊರು.

ಧನ+ಊರು = ಧನ್ನೂರು. ಶ್ರೀಮಂತರ, ಸಮೃದ್ಧಿಯ ಊರು.

ಪ್ರಾಣಿವಾಚಕ, ಸಂಪತ್ತುವಾಚಕ.

ಧಮ್ಮೂರು: ಧರ್ಮ>ಧಮ್ಮ = ನ್ಯಾಯ ನೀತಿ.

ಧಮ್ಮ+ಊರು = ಧಮ್ಮೂರು

ಧರ್ಮಿಷ್ಟರು ಇರುವ, ಒಳ್ಳೆಯ ಜನರಿರುವ, ಆಡಳಿತವಿರುವ ಊರು. ಸಂಸ್ಕೃತಿವಾಚಕ.

ನಂದವಾಡಗಿ : ನಂದಿ+ಬಾಡ = ನಂದಿಬಾಡ>ನಂದಿವಾಡ>ನಂದವಾಡ

ನಂದವಾಡ+ಅಗೆ>ನಂದವಾಡಗೆ>ನಂದವಾಡಗಿ. ದೈವವಾಚಕ.

"ಊರಿನಾಚೆ ಒಂದು ನಂದಿ ವಿಗ್ರಹ ಭೂಮಿಯಿಂದ ಸ್ವಲ್ಪ-ಸ್ವಲ್ಪ ಮೇಲಕ್ಕೆ ಬಂದಿತು. ನಂದಿ ಮೇಲಕ್ಕೆ ಬಂದಂತೆ ಜನರ ದುಃಖ, ಚಿಂತೆ, ರೋಗರುಜೀನಗಳು, ಬರಗಾಲ ಕಡಿಮೆಯಾಗಿ ಸಿರಿ ಸಂಪತ್ತು ಹೆಚ್ಚಾಗಿ ಜನರು ನೆಮ್ಮದಿಯಿಂದ ಬದುಕತೊಡಗಿದರು. ಆ ದಿನಗಳಲ್ಲಿ ಶಿವಯೋಗಿಗಳೊಬ್ಬರು ನಂದಿ ಬೆಳೆದು ಬಂದ ಮಹಿಮೆಯೆ ಈ ನೆಮ್ಮದಿಗೆ ಕಾರಣವಾಗಿದೆ ಎಂದು ಆ ನಂದಿ ವಿಗ್ರಹವನ್ನು ಶಾಸ್ತ್ರೋಕ್ತವಾಗಿ ಪೂಜಿಸುತ್ತಾ ನಡೆದಿರುವಂಥ ಸಂದರ್ಭದಿಂದ ಕ್ರಮೇಣ ನಂದಿಬಾಡಗಿ>ನಂದವಾಡಗಿ ಎಂದಾಗಿದೆ."[೧೯೮]

ನಂದವಾಡಗಿ ಶಿವಾಲಯದ ಮುಂಬಾಗದಲ್ಲಿರುವ ಕಂಬದ ಮೇಲೆ ಇರುವ (B.K.No.171 of1926–27; SW-XI-I- 103) ಕ್ರಿ.ಶ. ೧೦೪೪ರಿಂದ ೧೦೬೮ರ ಒಳಗೆ ರಚಿತವಾದ ಈ ಶಾಸನದಲ್ಲಿ "ತ್ರೈಲೊಕ್ಯಮಲ್ಲನ ಮಹಾಮಂಡಳೆಶ್ವರನು ನಂದಿವಾಡಿಯಲ್ಲಿ ನಾಗಲೇಶ್ವರ ಮಠ ಕಟ್ಟಿಸಿದನು. ಭಾವನಗಂಧವಾರನ ಉಲ್ಲೇಖವಿದೆ."[೧೯೯] 'ಇದರಲ್ಲಿ 'ನನ್ದವಾಡಗೆ; ಎಂದಿದೆ. ನನ್ದವಾಡಗೆ> ನಂದವಾಡಗಿ ಆಗಿದೆ.

ನಂದರಾಜನೆಂಬ ಅರಸನು ಆಳುತ್ತಿದ್ದ. ಅಲ್ಲದೆ ಅವನ ರಾಜಧಾನಿಯಾಗಿದ್ದ ಸ್ಥಳ. ಅದಕ್ಕೆ ಈ ಗ್ರಾಮಕ್ಕೆ ಅವನ ಸಂಸ್ಮರಣೆಯಲ್ಲಿ 'ನಂದವಾಡಗಿ' ಎಂದು ಕರೆಯಲಾಗುತ್ತದೆ ಆದರೆ ನಂದರಾಜನ ಅರಮನೆಯಾಗಲಿ, ಮಹಾದ್ವಾರವಾಗಲಿ ಯಾವವು ಈಗ ದೊರೆಯುವದಿಲ್ಲ.

ನಂದನೂರು : ನಂದನ+ಊರು = ನಂದನೂರು

ನಂದ ಎಂಬ ವ್ಯಕ್ತಿಯಿಂದ ಹೆಸರು ಪಡೆದ ಊರು. ವ್ಯಕ್ತಿವಾಚಕ.

ನಂದವಾಡಗಿ ಶಿವಾಲಯದ ಮುಂಬಾಗದಲ್ಲಿರುವ ಕಂಬದ ಮೇಲೆ ಇರುವ (B.K.No. 171 of 1926–27; SII-XI I-103) ಕ್ರಿ.ಶ. ೧೦೪೪ರಿಂದ ೧೦೬೮ರ ಒಳಗೆ ರಚಿತವಾದ ಈ ಶಾಸನದಲ್ಲಿ "ತ್ರೈಲೊಕ್ಯಮಲ್ಲನ ಮಹಾಮಂಡಳೆಶ್ವರ. ಭಾವನಗಂದವಾರನು ನಂದಾಪುರದಲ್ಲಿ ಕೇತೇಶ್ವರನ ದೇವಾಲಯವನ್ನು ಕಟ್ಟಿಸಿದ ಉಲ್ಲೇಖವಿದೆ."[೨೦೦] ಇದರಲ್ಲಿ ನಂದಾಪುರ ಎಂದು ಹೆಸರಿದೆ. ಮುಂದೆ ನಂದಾಪುರ>ನಂದನೂರು ಆಗಿರಬಹುದು.

ನಾಗೂರ : ನಾಗ+ಊರು = ನಾಗೂರು

ನಾಗಗಳು (ಸರ್ಪಗಳು) ಇರುವ ಊರು. ಪ್ರಾಣಿವಾಚಕ.

ನಿಂಬಲಗುಂದಿ: ನಿಂಬ = ಬೇವು

ಗುಂದಿ = ಗುಡ್ಡ

ಬೇವು ಹೆಚ್ಚಾಗಿ ಬೆಳೆಯುವ ಪ್ರದೇಶದಲ್ಲಿರುವ ಊರು ನಿಂಬಲಗುಂದಿ. ಸಸ್ಯವಾಚಕ.

ನಿಡಸನೂರು : ನಿಡಸ = ನಿರಸ, ಎತ್ತರವಾದ, ಗಟ್ಟಿಮುಟ್ಟಾದ

ನಿಡಸನಾದವನ ಊರು = ನಿಡಸನೂರು. ಪ್ರಮಾಣವಾಚಕ.

ಪಾಪನಾಳ : ಪಾಪನ+ಹಾಳ = ಪಾಪನಾಳ 'ಹ' ಲೋಪವಾಗಿದೆ

ಪಾಪ – ಒಬ್ಬ ವ್ಯಕ್ತಿ. ವ್ಯಕ್ತಿವಾಚಕ.

ಪೋಚಾಪೂರು : ಪೋಚಪ್ಪನ+ಊರು=ಪೋಚಾಪೂರು. ವ್ಯಕ್ತಿವಾಚಕ.

ಬನ್ನಿಹಟ್ಟಿ : ಬನ್ನಿ = ಒಂದು ಗಿಡದ ಹೆಸರು

ಬನ್ನಿಯ+ಹಟ್ಟಿ = ಬನ್ನಿಹಟ್ಟಿ.

ಬನ್ನಿಯ ಗಿಡ ಪೂಜಿಸಲ್ಪಡುವುದು. ಇದರ ಸುತ್ತಮುತ್ತ ಊರು ಬೆಳೆದಿದೆ. ಸಸ್ಯವಾಚಕ.

ಬಲಕುಂದಿ : ಬಲಕಿನ+ಕುಂದಿ = ಬಲಕುಂದಿ

ಬಳ್ಳಾರಿ ತಾಲೂಕಿನಲ್ಲಿ ಬಲ್ಲಕುಂದೆ ಎಂಬ ಊರು ಬರುವದು. ಬಲ್ಲಕುಂದೆ ೩೦೦ರ ರಾಜಧಾನಿ ಕುರುಕೋಡು ಆಗಿದ್ದು, "೧೭೦೧–೦೨ರಲ್ಲಿ ಬಳ್ಳಾರಿಯ ಪಾಳೆಗಾರ ರೇವಪ್ಪನಾಯಕ ಕುರುಗೋಡು ಕೋಟೆ ಕಟ್ಟಿಸಿದನು."[೨೦೧] ಬಲ್ಲಕುಂದೆ>ಬಲಕುಂದೆ>ಬಲಕುಂದಿ ಎಂದಾಗಿರಬೇಕು. ಬಲಕಿರುವ ಕುಂದಿ = ಬಲಕುಂದಿಯಾಗಿರಲೂಬಹುದು. ದಿಗ್ವಾಚಕ.

ಬಸರಿಕಟ್ಟೆ : ಬಸರಿಯ+ಕಟ್ಟೆ = ಬಸರಿಕಟ್ಟೆ

ಬಸರಿ ಎಂಬ ಗಿಡಕ್ಕೆ ಕಟ್ಟೆಕಟ್ಟಿದ ಊರು. ಸಸ್ಯ, ನಿರ್ಮಾಣವಾಚಕ.

ಬಸವನಾಳ : ಬಸವನ+ಹಾಳ = ಬಸವನಾಳ 'ಹ' ಲೋಪವಾಗಿದೆ.

ಬಸವನೆಂಬ ಪ್ರಸಿದ್ಧ ವ್ಯಕ್ತಿಯಿಂದ ಈ ಊರಿಗೆ ಈ ಹೆಸರು ಬಂದಿದೆ. ವ್ಯಕ್ತಿವಾಚಕ.

ಬಾದವಾಡಗಿ : ೧. ಬಾದರ = ಬೋರೆ, ಎಲಚಿ

ಬಾದರ+ವಾಡ+ಗಿ = ಬಾದವಾಡಗಿ

ಎಲಚಿ ಮತ್ತು ಬೋರೆ ಹಣ್ಣಿನ ಗಿಡಗಳಿರುವ ಪ್ರದೇಶದಲ್ಲಿರುವ ಊರು. ಸಸ್ಯವಾಚಕ.

೨. ಬಾದ (ಬಾಧೆ) = ಅಡ್ಡಿ, ಕಷ್ಟ, ಪೀಡೆ.

ಬಾದ+ವಾಡ+ಗಿ = ಬಾದವಾಡಗಿ. ಬಾದವಾಡಗಿ = ಕಷ್ಟ, ಪೀಡೆ, ಅಡ್ಡಿ, ಆತಂಕಕ್ಕೆ ಒಳಗಾದ ಊರು.

ಬಿಂಜವಾಡಗಿ : ವಿಂದ್ಯಾ>ಬಿಂಜ = ಪರ್ವತ, ಅಡವಿ, ಅರಣ್ಯ.

ಬಾಡ = ಊರು.

ಬಿಂಜ+ವಾಡ+ಗಿ = ಬಿಂಜವಾಡಗಿ. ಪರ್ವತ, ಅರಣ್ಯ ಇರುವ ಊರು. ಪ್ರಕೃತಿವಾಚಕ.

ಬಿಸನಾಳಕೊಪ್ಪ : ಬಿಸಿಲಿನ+ಹಾಳ = ಬಿಸಿಲಿನಹಾಳ

ಕೊಪ್ಪ = ಊರು

ಬಿಸಿಲಿನಾಳಕೊಪ್ಪ>ಬಿಸಿನಾಳಕೊಪ್ಪ>ಬಿಸನಾಳಕೊಪ್ಪ ತುಂಬಾ ಬಿಸಿಲು ಇರುವ ಊರು. ನಿಸರ್ಗ ವಾಚಕ.

ಬಿಸಲದಿನ್ನಿ: ಬಿಸಲಪ್ಪ – ಒಬ್ಬ ವ್ಯಕ್ತಿ.

ಬಿಸಲನ+ದಿನ್ನೆ = ಬಿಸಲದಿನ್ನಿ. ವ್ಯಕ್ತಿವಾಚಕ.

ಬೂದಿಹಾಳ : ಬೂದಿ = ಬೂದಿಗುಡ್ಡೆಗಳಿರುವ ಊರು.

ಹಿಂದೆ ಕೈಗಾರಿಕೆ ಇರಬಹುದು ಇಲ್ಲವೆ ಯಜ್ಞಯಾಗಾದಿ ಮಾಡಿರಬೇಕು.

ಬೂದಿ+ಹಾಳ = ಬೂದಿಹಾಳ. ಕಾಲವಾಚಕ.

ಬೂದಿಹಾಳ ಮೂರು ಇವೆ. ಬೂದಿಹಾಳ ಎಸ್.ಕೆ., ಬೂದಿಹಾಳ ಎಸ್.ಆರ್. ಮತ್ತು ಬೂದಿಹಾಳ ಇನಾಂ.

ಬೆನಕನದೋಣಿ : ಬೆನಕ = ಅಂಡಾಕಾರದ, ನುಣುಪಾದ ಮೇಲ್ಮೈ ಹೊಂದಿರುವ ಕಲ್ಲುಗಳು

ಬೆನಕನ+ದೋಣಿ = ಬೆನಕನದೋಣಿ

ಬೆನಕಗಳು ದೊರೆಯುವ ದೋಣಿಯ ಊರು. ಶಿಲಾ, ಜಲವಾಚಕ.

ಬೆನಕನವಾರಿ : ಬೆನಕ = ಅಂಡಾಕಾರದ, ನುಣುಪಾದ ಮೇಲ್ಮೈ ಹೊಂದಿರುವ ಕಲ್ಲುಗಳು.

ವಾರಿ = ಇಳಜಾರು ಪ್ರದೇಶ, ಮೇರೆ ಸೀಮೆ, ನೀರು.

ಬೆನಕನ+ವಾರಿ = ಬೆನಕನವಾರಿ. ಅಂಡಾಕಾರದ ಬೆನಚುಕಲ್ಲಿರುವ ಈ ಪ್ರದೇಶ ಗುಡ್ಡದ ಓರೆಯಲ್ಲಿದೆ. ಭೂಸ್ವರೂಪ, ಶಿಲಾವಾಚಿ, ಜಲವಾಚಕ.

ಐಹೊಳೆ ಪರಶುರಾಮನ ಗುಡಿಯ ಹತ್ತಿರ ಸರ್ವೆ ನಂ. ೭೫ರಲ್ಲಿರುವ ಬಂಡೆಗಲ್ಲಿನ ಮೇಲೆ ಇರುವ (ಐ.ಕ.ಸಂ., ಪು. ೧೭೫) ಈ ಶಾಸನದಲ್ಲಿ "ಬೆರಿಗೆದೇವನಾಯಕ ವೊಡೆಯನು ರಾಮಲಿಂಗ (ದೇವರ) ಸ್ಥಾನಿಕ ಮಾಪೆಖಾನನ ಚಕ್ಕಸೋಮಂನಾಯಕನಿಗೆ ಬೆಸಕನವೊರೆ ಗ್ರಾಮದ ತುಸಬುರ್ ಚಿಕೆರೆಯ ಸ್ಥಳವನ್ನು ದಾನವಾಗಿ ನೀಡಿದ ಉಲ್ಲೇಖವಿದೆ."[೨೦೨]

ಇದರಲ್ಲಿ 'ಬೆಸಕನವೊರೆ' ಎಂದಿದೆ ಬೆಸಕನವೊರೆ>ಬೆನಕನವಾರಿ ಎಂದಾಗಿದೆ.

ಬೆಳಗಲ್ಲು : ಬಿಳಿದು>ಬೆಳಕಲ್ಲು = ಬೆಳಕಲ್ಲು

ಬಿಳಿಯ ಕಲ್ಲಿನಿಂದ ಕೂಡಿದ ಪ್ರದೇಶದಲ್ಲಿರುವ ಗ್ರಾಮ. ಶಿಲಾವಾಚಕ.

ನಂದವಾಡಗಿ ಶಿವಾಲಯದ ಮುಂಭಾಗದಲ್ಲಿರುವ ಕಂಬದ ಮೇಲೆ ಇರುವ (B.K.No. 171 of 1926–27; SII.XI-103) "ಕ್ರಿ.ಶ. ೧೦೪೪ರಿಂದ ೧೦೬೮ ಒಳಗೆ ರಚಿತವಾದ ಈ ಶಾಸನದಲ್ಲಿ ತ್ರೈಲೋಕ್ಯಮಲ್ಲನ ಮಹಾ ಮಂಡಳೇಶ್ವರನಾದ ಭಾವನಗಂಧವಾರಣನು ಬೆಳ್ಗಲ್ಲಿಯ ಕಪಿಲತೀರ್ಥದಲ್ಲಿ ಕೇತೇಶ್ವರನ ದೇವಾಲಯ ಕಟ್ಟಿಸಿದ ಉಲ್ಲೇಖವಿದೆ."[೨೦೩] ಇದರಲ್ಲಿ 'ಬೆಳ್ಗಲ್ಲಿ' ಎಂದಿದೆ.

ಬೇಕಮಲದಿನ್ನಿ : ಅಬ್ಬೆ – ಬೇ = ಅವ್ವ, ತಾಯಿ

ಅಬ್ಬೆಯ+ಕಮಲದ+ದಿನ್ನಿ = ಅಬ್ಬೆಕಮಲದಿನ್ನಿ = ಬೇಕಮಲದಿನ್ನಿ

ಅಬ್ಬೆಯ ಹೆಸರಿನಲ್ಲಿರುವ ಕಮಲಾಕಾರದ ದಿನ್ನಿ–ಬೇಕಮಲದಿನ್ನಿ. ಸಸ್ಯ, ಭೂಸ್ವರೂಪವಾಚಕ.

ಬೇವಿನಮಟ್ಟಿ : ಬೇವಿನ+ಮಟ್ಟಿ = ಬೇವಿನಮಟ್ಟಿ

ಬೇವು ಹೆಚ್ಚಾಗಿ ಬೆಳೆಯುವ ಪ್ರದೇಶ. ಸಸ್ಯವಾಚಕ.

ಬೇವಿನಹಾಳ : ಬೇವಿನ+ಹಾಳ = ಬೇವಿನಹಾಳ

ಬೇವಿನ ಮರಗಳು ಹೆಚ್ಚು ಬೆಳೆಯುವ ಊರು. ಸಸ್ಯವಾಚಕ.

ಭೀಮನಗಡ : ಭೀಮನ+ಗಡ = ಭೀಮನಗಡ

ಗಡ = ಕೋಟೆ

ಭೀಮನೆಂಬವನು ಕಟ್ಟಿಸಿದ ಗಡದ ಊರು ಭೀಮನಗಡ. ವ್ಯಕ್ತಿ, ನಿರ್ಮಾಣವಾಚಕ.

ಭೈರವಾಡಗಿ : ಭೈರವ = ವ್ಯಕ್ತಿ, ದೈವ.

ಭೈರವನ>ಭೈರನ+ವಾಡಗಿ = ಭೈರನವಾಡಗಿ>ಭೈರವಾಡಗಿ

ಭೈರನೆಂಬ ವ್ಯಕ್ತಿ ಪ್ರಸಿದ್ಧನಾಗಿ ಹೋದ ಊರು. ವ್ಯಕ್ತಿವಾಚಕ.

ಮನ್ಮಥನಾಳ : ಮನ್ಮಥ = ಒಬ್ಬ ವ್ಯಕ್ತಿ

ಮನ್ಮಥನ+ಹಾಳ = ಮನ್ಮಥನಾಳ 'ಹ' ಲೋಪವಾಗಿದೆ. ವ್ಯಕ್ತಿ, ಸ್ವರೂಪವಾಚಕ.

ಮರಟಗೇರಿ : ಮರಳು>ಮರಟ = ಉಸುಕು

ಮರಟರ+ಗೇರಿ = ಮರಟಗೇರಿ

ಉಸುಕಿನಿಂದ ಕೂಡಿದ ಪ್ರದೇಶ (ಭೂಮಿ) ಭೂಸ್ವರೂಪವಾಚಕ.

ಮರೋಳ : ಮರ+ಪೊಳಲು = ಮರಪೊಳಲು>ಮರವೊಳಲು>ಮರೋಳ

ಮರ = ವೃಕ್ಷ, ಗಿಡ

ಮರಗಳು ಹೆಚ್ಚಾಗಿರುವ ಊರು. ಸಸ್ಯವಾಚಕ.

ಮರೋಳ ರಾಮಲಿಂಗ ದೇವಾಲಯದ ಬಲಗೋಡೆಗೆ ಒರಗಿಸಿರುವ ಕಲ್ಲಿನ ಮೇಲೆ ಇರುವ (B.K.No.60 of 1928–29; SII, XI., No. 61) ಕ್ರಿ.ಶ. ೧೦೨೪ರ ಶಾಸನದಲ್ಲಿ "ಮರವೊಳಲ

ಬಸದಿಗೆ ಜಗದೇಕಮಲ್ಲನ ಪಾದಪದ್ಮೋಪಜೀವಿ ಘಟಿಯಂಕಕಾರನು ನೊಳಂಬವಾಡಿ ಮತ್ತು ಕರಿವಿಡಿ ೩೦ನ್ನು ಆಳುತ್ತಿದ್ದಾಗ ದಾನ ನೀಡಿದಂತೆ ತಿಳಿದುಬರುತ್ತದೆ."[೨೦೪] ಇದರಲ್ಲಿ ಮರವೊಳಲು ಎಂದಿದೆ. ಮರವೊಳಲು>ಮರೋಳ ಎಂದಾಗಿದೆ.

ಮಲ್ಲಗಿಹಾಳ: ಮಲ್ಲಿಗೆಯ+ಹಾಳ = ಮಲ್ಲಿಗೆಹಾಳ>ಮಲ್ಲಗಿಹಾಳ

ಮಲ್ಲಿಗೆ = ಹೂವು

ಮಲ್ಲಿಗೆ ಹೆಚ್ಚು ಬೆಳೆಯುವ ಊರು. ಸಸ್ಯವಾಚಕ

ಮಾದಾಪೂರ: ಮಾದಪ್ಪನೆಂಬ ವ್ಯಕ್ತಿಯಿಂದ ಪ್ರಸಿದ್ಧಿ ಪಡೆದ ಊರನ್ನು

ಮಾದಪ್ಪನ+ಊರು = ಮಾದಾಪೂರ. ಈ ಹೆಸರಿನಿಂದ ಕರೆಯಲಾಗಿದೆ. ವ್ಯಕ್ತಿವಾಚಕ.

ಮುರುಡಿ : ಮುರುಡಿ = ಪೊದರು

ಸಣ್ಣ ಸಣ್ಣ ಕಂಟಿಗಳು ಬೆಳೆದಿರುವ ಪೊದೆಗಳು

ಆಪೊದೆಗಳ ಊರು. ನಿಸರ್ಗವಾಚಿ.

ಮುಳ್ಳೂರು : ಮುಳ್ಳಿನ+ಊರು = ಮುಳ್ಳೂರು

ಮುಳ್ಳ ಕಂಟಿಗಳು ಹೆಚ್ಚು ಬೆಳೆಯುವ ಊರು. ಸಸ್ಯವಾಚಕ.

ಮೂಗನೂರು: ಮೂಗನ+ಊರು = ಮೂಗನೂರು

ಮೂಗ = ಮಾತನಾಡಲು ಧ್ವನಿಬರದ ವ್ಯಕ್ತಿಗೆ, ಮೂಗ ಎನ್ನುವರು. ಇವರು ಸನ್ನೆ ಮುಖಾಂತರ ಮತ್ತೊಬ್ಬರ ಭಾವನೆಗಳನ್ನು ಅರ್ಥೈಸಿಕೊಳ್ಳುತ್ತಾರೆ. ಇವರಿಗೆ 'ಮೂಕರು' ಎನ್ನುವರು. ಇಂಥ ಪ್ರತಿಭಾನ್ವಿತನಾದ ಮೂಗನು ವಾಸವಾಗಿದ್ದ ನೆಲೆಗೆ 'ಮೂಗನೂರು', ಎಂದು ಕರೆದಿರಬೇಕು. ವ್ಯಕ್ತಿ ವಾಚಕ.

ಮೇಧಿನಾಪುರ: ಮೇಧ = ಯಜ್ಞ, ಯಾಗ.

ಮೇಧಿನಿ = ಭೂಮಿ, ಪುರ = ಊರು.ಮೇಧಿನಿ = ಯಜ್ಞ–ಯಾಗ ಮಾಡುವ ಭೂಮಿ.

ಮೇಧಿನಿ+ಪುರ = ಮೇಧಿನಿಪುರ>ಮೇಧಿನಾಪುರ. ಸಂಸ್ಕೃತಿವಾಚಕ.

ಯಡಳ್ಳಿ : ಎಡ = ಎಡಭಾಗ

ಎಡಭಾಗದಲ್ಲಿರುವ ಹಳ್ಳಿ>ಎಡಹಳ್ಳಿ>ಯಡಳ್ಳಿ, ದಿಗ್ವಾಚಕ.

ಯರನಕೆರೆ : ಯರೆಯಪ್ಪನು ಕಟ್ಟಿಸಿದ ಕೆರೆ–ಯರನಕೆರೆ

ಎರೆಯಪ್ಪನ+ಕೆರೆ = ಎರೆಯಪ್ಪಕೆರೆ>ಎರೆಯನಕೆರೆ>ಯರನಕೆರೆ. ವ್ಯಕ್ತಿ, ನಿರ್ಮಾಣವಾಚಕ.

ಯರನಾಯಕನಹಾಳ : ಯರ–ಅಂಕಿತನಾಮ

ಯರ+ನಾಯಕನ+ಹಾಳ = ಯರನಾಯಕನಹಾಳ

'ಹ' ಲೋಪವಾಗಿದೆ. ವ್ಯಕ್ತಿವಾಚಕ.

ರಕ್ಕಸಗಿ : ರಕ್ಕಸ+ಇಗೆ =ರಕ್ಕಸಿಗೆ>ರಕ್ಕಸಗಿ

ರಕ್ಕಸ = ರಾಕ್ಷಸ, "ಶಿಲಾಹಾರರ ವಂಶಾವಳಿಯಲ್ಲಿ ರಕ್ಕಸನೆಂಬ ವ್ಯಕ್ತಿ ಇದ್ದಾನೆ."[೨೦೫]

ರಕ್ಕಸನಿಗೆ ಸಂಬಂಧಿಸಿದ ಊರು– ರಕ್ಕಸಗಿ. ವ್ಯಕ್ತಿವಾಚಕ.

ರಾಮತಾಳ : ತಾಳ<ಸ್ಥಾನ

ರಾಮನಸ್ಥಾನ>ರಾಮತಾಳ

ರಾಮನಿರುವ ಸ್ಥಾನ. ವ್ಯಕ್ತಿವಾಚಕ.

ರಾಮವಾಡಗಿ : ರಾಮನ+ವಾಡಗಿ = ರಾಮನವಾಡಗಿ>ರಾಮವಾಡಗಿ

ರಾಮ ದೈವ ಇಲ್ಲವೆ ರಾಮನೆಂಬ ಹೆಸರಿನ ಪ್ರಸಿದ್ಧ ವ್ಯಕ್ತಿಯ ಊರು. ದೈವ, ವ್ಯಕ್ತಿವಾಚಕ.

ರೇವಡಿಹಾಳ : ರೇವಡಿಯ+ಹಾಳ = ರೇವಡಿಹಾಳ

ರೇವಡಿ ಓವಜ್ಜ. "ಈತ ಪ್ರಸಿದ್ಧ ಶಿಲ್ಪಿ. ಸರ್ವಸಿದ್ದಿ ಆಚಾರ್ಯನ ಶಿಷ್ಯ."[೨೦೬] ಈತನ ಹೆಸರಿನಿಂದ ರೇವಡಿಹಾಳವನ್ನು ಕರೆದಿರಬಹುದು. ವ್ಯಕ್ತಿವಾಚಕ.

ಲವಳಸರ : ಲವಳಸರ = ಒಂದು ಸಸ್ಯ

ಲೋಳಸರ = ಒಂದು ಔಷಧಿಯ ಸಸ್ಯ

ಈ ನೆಲೆಯಲ್ಲಿ ಲವಳಸರ ಹೆಚ್ಚಾಗಿ ಬೆಳೆಯುವದರಿಂದ ಈ ಹೆಸರು ಬಂದಿದೆ. ಇದು ಗ್ರಾಮೀಣರ ಉಚ್ಚಾರದಲ್ಲಿ ಲೋಳಸರ ಎಂದಾಗಿದೆ. ಸಸ್ಯವಾಚಕ.

ವಜ್ಜಳ : ವಜ್ಜಳ = ವ್ಯಕ್ತಿ ಹೆಸರು, ಒಬ್ಬ ನೊಳಂಬ ರಾಜನ ಹೆಸರು.

"ಪೊಗಟ್ವೆನೊ ಧಾತ್ರಿಯೊಳ್ನೆಗಟ್ದಿ ವಜಟಿನಂ ಬಿಡೆಯಯೆಟ್ಟ ದೇಙ್ಗೆಯಂ,"[೨೦೭] ಎಂದಿದೆ.

ವಡಗೇರಿ: ವಡ್ಡ>ವಡ = ಕಲ್ಲುಕುಟಿಕ

ವಡ್ಡರ+ಕೇರಿ = ವಡ್ಡಗೇರಿ. ಜನಾಂಗವಾಚಕ.

ವರಗೋಡದಿನ್ನಿ : ಕೋಡ = ತುದಿ, ಅಗ್ರಭಾಗ

ವರ = ಹೆಚ್ಚಿನ, ಶ್ರೇಷ್ಟವಾದ, ದೊಡ್ಡದಾದ

ವರ+ಕೋಡ+ದಿನ್ನಿ = ವರಕೋಡದಿನ್ನಿ-ದೊಡ್ಡದಾದ

ಕೋಡಿನಂತಿರುವ ದಿನ್ನೆಯಲ್ಲಿರುವ ಊರು. ಪ್ರಮಾಣ, ನಿಸರ್ಗವಾಚಿ

ವೀರಾಪೂರ : ವೀರಪ್ಪನ+ಊರು = ವೀರಪ್ಪನೂರ>ವೀರಾಪೂರ. ವ್ಯಕ್ತಿವಾಚಕ.

ಸಂಕ್ಲಾಪುರ : ಸಂಕಲನ = ಕೂಡಿಸು, ಸರಪಳಿ, ಸೇತುವೆ.

ಸಂಕಲನ+ಪುರ = ಸಂಕಲಪುರ>ಸಂಕ್ಲಾಪುರ.

ಸಂಕ್ಲಾಪುರ = ಎರಡು ಮೂರು ಹಳ್ಳಿಗಳು ಕೂಡಿ(ಸೇರಿ) ಆಗಿರುವ ಊರು.

೧. ಸಂಕಣ - ಒಂದು ಹೆಸರು

ಸಂಕಣ+ಪುರ = ಸಂಕಣಾಪುರ>ಸಂಕಲಾಪುರ>ಸಂಕ್ಲಾಪುರ. ವ್ಯಕ್ತಿ, ನಿರ್ಮಾಣವಾಚಕ.

ಸಂಗಾಪೂರ: ಸಂಗಪ್ಪನ ಊರು ಸಂಗಾಪೂರ.

ಸಂಗಪ್ಪನ+ಊರು = ಸಂಗಪ್ಪೂರು>ಸಂಗಾಪೂರು. ವ್ಯಕ್ತಿವಾಚಕ.

ಸಿಂಗನಗುತ್ತಿ : ಸಿಂಗ = ಸಿಂಹ

ಸಿಂಗನ+ಗುತ್ತಿ = ಸಿಂಗನಗುತ್ತಿ

ಪೊದೆಗಳು ಬೆಳೆದಿರುವ ಪ್ರದೇಶದಲ್ಲಿ (ಹಿಂಸ್ರ)

ಪ್ರಾಣಿಗಳು ವಾಸಿಸುವುದು ಸಹಜ. ಇಲ್ಲಿ ಸಿಂಗವಾಸಿಸುವ ಪೊದೆಗಳುಳ್ಳದರಿಂದ ಸಿಂಗನಗುತ್ತಿ ಎಂದು ಕರೆಯಲಾಗಿದೆ. ಪ್ರಕೃತಿ, ಪ್ರಾಣಿವಾಚಕ.

ಸಿದ್ಧನಕೊಳ್ಳ : ಸಿದ್ಧ = ಸಿದ್ಧಿಪುರುಷ

ಸಿದ್ಧನ+ಕೊಳ್ಳ = ಸಿದ್ಧನಕೊಳ್ಳ.

ಸಿದ್ಧ ಎಂಬ ವ್ಯಕ್ತಿ ವಾಸಿಸುವ ಇಕ್ಕಟ್ಟಾದ ಪ್ರದೇಶ. ವ್ಯಕ್ತಿ, ಭೂಸ್ವರೂಪವಾಚಕ.

ಸುರುಳಿಕಲ್ಲು : ಸುರುಳಿ– ಸುರುಳಿಯಾದ ಕಲ್ಲಿನಿಂದ ಕೂಡಿದ ಊರು.

ಸುರುಳಿಕಲ್ಲು ಇದರ ಸಂಸ್ಕೃತ ರೂಪವೇ ಚಕ್ರಪಾಷಾಣ. ಮೊದಲು 'ಸುರುಳಿಕಲ್ಲು' ನಂತರ ಪಾಷಾಣ ಚಕ್ರಪಾಷಾಣ ಎಂದು ಕರೆದರು. ಸಂಸ್ಕೃತದಲ್ಲಿ ಕಲ್ಲು. ಇದು ಭೂವಾಚಕ ರೂಪವಾಗಿದೆ. ಸುರುಳಿ ಎಂಬುದು ಸ್ವರೂಪವಾಚಕವಾಗಿದೆ.

ಸೂಳಿಭಾವಿ : ಸೂಳೆಯ+ಬಾವಿ = ಸೊಳೆಬಾವಿ>ಸೂಳಿಬಾವಿ

ಸೂಳೆ = ಉಪಪತ್ನಿ, ವಿಲಾಸಿನಿ.

ಸೂಳೆಕಟ್ಟಿಸಿದ ಬಾವಿ ಇರುವ ಊರು

ಈ ಬಾವಿಯೇ ಪ್ರಧಾನವಾಗಿದ್ದಾಗ ಅದರಿಂದ ಈ ಊರನ್ನು ಗುರುತಿಸಲಾಗಿದೆ. ವ್ಯಕ್ತಿ, ನಿರ್ಮಾಣವಾಚಕ.

"ಊರಿನ ಶ್ರೀಮಂತ ವ್ಯಕ್ತಿ ಬಾವಿ ತೋಡಿಸಿದ. ಆ ಬಾವಿ ಸುಮಾರು ಆಳ ತೋಡಿಸಿದರೂ ನೀರೆ ಬರಲಿಲ್ಲ. ಒಬ್ಬ ಜ್ಯೋತಿಷಿ ಕುಂಡಲ ತೆಗೆದು ನೋಡಿದಾಗ ಒಬ್ಬ ಸೂಳಿಯನ್ನ ಬಾವಿಗೆ ಆಹುತಿಯಾಗಿ ನೀಡಿದರೆ ನೀರು ಬರುತ್ತದೆ ಎಂದು ಹೇಳಿದಾಗ ಅವನು ಹೇಳಿದ ಹಾಗೆಯೇ ಒಬ್ಬ ಸೂಳೆಯನ್ನು ಬಾವಿಗೆ ಆಹುತಿ ನೀಡಿದಾಗ ಆಬಾವಿ ತುಂಬ ನೀರು ಬಂತು. ಅದಕ್ಕಾಗಿ ಸೂಳಿಯ+ಬಾವಿ = ಸೂಳಿಬಾವಿ ಎಂದು ಈ ಊರಿಗೆ ಹೆಸರು ಬಂದಿದೆ."[೨೦೮]

ಇನ್ನೊಂದು ಅಭಿಪ್ರಾಯ– "ಒಬ್ಬ ಶ್ರೀಮಂತ ಸೂಳೆ ತನ್ನ ಕೇರಿಯ ಜನರಿಗೆ ಬಾವಿಯನ್ನು ತೋಡಿಸಿದ ಪರಿಣಾಮವಾಗಿ ಸೂಳೆಯ+ಬಾವಿ = ಸೂಳೆಭಾವಿ ಎಂದು ಈ ಊರಿಗೆ ಹೆಸರು ಬಂದಿದೆ."[೨೦೯] "ಏಳು ಗ್ರಾಮಗಳ ಸಮೂಹವೇ ಒಂದು ಗ್ರಾಮ. ಅದು 'ಸುಳಿಬಾವಿ'. ಇಲ್ಲಿ ಸುಲೇಶ್ವರ ದೇವಾಲಯವಿದ್ದು ಅದರ ಪಕ್ಕದಲೇ ಪಾಮಗೌಡ ಕಟ್ಟಿಸಿದ ಬಾವಿ ಇದೆ, ಇದರಿಂದಲೇ ಸುಲೇಬಾವಿ ಎಂದಿದ್ದು, ಕಾಲಾನುಕ್ರಮದಲ್ಲಿ ಸೂಳೆಬಾವಿಯೆಂದು ರೂಢಿಯಾಗಿರಬೇಕು. ಸುಳಿ ಎಂದರೆ ತಿರುಗು, ಸುತ್ತು ಎಂದು ಒಟ್ಟಾರೆಯಾಗಿ ಏಳು ಗ್ರಾಮಗಳ ಸಮುಚ್ಚಯ ಗ್ರಾಮವೇ ಸೂಳಿಬಾವಿಯೆಂದು ಜನರ ಅಭಿಪ್ರಾಯ."[೨೧೦] ಏಳು ಗ್ರಾಮ, ಪಾಮಗೌಡನಬಾವಿ, ಸುಳಿ ಇವು ಒಂದಕ್ಕೊಂದು ಹೊಂದಿಕೆಯಾಗುವುದಿಲ್ಲ.

ಸೋಮಲಾಪುರ: ಸೋಮಲೆ = ಒಬ್ಬ ಹೆಣ್ಣು ಮಗಳು.

ಸೋಮಲೆಯ+ಪುರ = ಸೋಮಲೆಪುರ>ಸೋಮಲಾಪುರ

ಸೋಮಲೆ ಎಂಬ ಸ್ತ್ರೀಯ ಹೆಸರಿನಿಂದ ಈ ನೆಲೆಯನ್ನು ಕರೆಯಲಾಗಿದೆ. ಸ್ತ್ರೀವ್ಯಕ್ತಿವಾಚಕ.

ಹಂಚಿನಾಳ : ಹಂಚ ಒಂದು ಸಸ್ಯ ಹುಲ್ಲುಜಾತಿ

ಹಂಚಿನ+ಹಾಳ = ಹಂಚಿನಾಳ. ಸಸ್ಯವಾಚಕ.

ಹಗೆದಾಳ : ಹಗೆದ+ಹಾಳ = ಹಗೆದಾಳ 'ಹ' ಲೋಪವಾಗಿದೆ.

ಹಗೆ – ಭೂಮಿಯಲ್ಲಿ ಕಾಳು ಇಡಲು ಮಾಡಿದ ಸಣ್ಣ ಕಜಣ. ನಿರ್ಮಾಣವಾಚಕ.

ಹಡಗಲಿ : ಪಡಗಲಿ>ಹಡಗಲಿ

ಹಡಗು ಕಟ್ಟುವಲ್ಲಿ ಅಥವಾ ನಡೆಸುವಲ್ಲಿ ಕಲಿಗಳಾಗಿರುವ ಊರು ಹಡಗಲಿ.

ಹನಮನಾಳ : ಹನಮನ+ಹಾಳ = ಹನಮನಾಳ 'ಹ', ಲೋಪವಾಗಿದೆ.

ಹನುಮ ಎಂಬುವವನ ಊರು, ಇಲ್ಲವೆ ಹನುಮಂತ ದೇವರು ಪ್ರಸಿದ್ದವಾಗಿರುವ ಊರು. ವ್ಯಕ್ತಿ, ದೈವವಾಚಕ.

ಹರಿಣಾಪುರ : ಹರಿಣ = ಜಿಂಕೆ

ಹರಿಣಗಳ+ಪುರ = ಹರಿಣಪುರ>ಹರಿಣಾಪುರ

ಜಿಂಕೆಗಳು ಹೆಚ್ಚಾಗಿ ವಾಸಿಸುವ ಊರು. ಪ್ರಾಣಿವಾಚಕ.

ಹಾವರಗಿ : ಹಾವರು+ಗಿ = ಹಾವರಗಿ

'ಹಾವರು' – ಒಂದು ಜನಾಂಗ, ಗಿ – ತದ್ಧಿತ ಪ್ರತ್ಯಯ ಇವರಿಂದ ಈ ಊರಿಗೆ ಹಾವರಿಗೆ ಎಂದು ಹೆಸರು ಬಂದಿದೆ. ಜನಾಂಗವಾಚಕ.

ಹಿರೇಮಾಗಿ : "ಹಿರೇಮಾಗಿಗೆ ಮೊದಲು 'ಮಗ್ಗೆ', ಎಂದು ಕರೆಯುತ್ತಿದ್ದರು, ಕ್ರಿ.ಶ.೧೫ನೇ ಶತಮಾನದ ಪೂರ್ವಾರ್ಧದಲ್ಲಿ ಬಾಳಿ ಬೆಳಗಿದ ಮಾಯಿದೇವ ಇದೇ ಊರಿನವನು."[೨೧೧]

ಹುನಕುಂಟೆ : ಪೊನ್>ಹೊನ್ನ – ಬಂಗಾರ

ಕುಂಟೆ – ಖಣಿ, ತಗ್ಗು

ಹೊನ್ನದ ಕುಂಟೆ>ಹೊನಕುಂಟೆ>ಹುನಕುಂಟೆ. ಬಂಗಾರ ದೊರೆಯುವ ಸ್ಥಳ.

ಹುನಗುಂದ : ಪೊನ್>ಹೊನ್ = ಬಂಗಾರ, ಚಿನ್ನ, ಕುಂದ = ಬೆಟ್ಟ

ಹೊನ್+ಕುಂದ = ಹೊನ್ನಕುಂದ>ಹೊನ್ನಗುಂದ>ಹುನಗುಂದ ಚಿನ್ನದ ಅದಿರುಳ್ಳ ಬೆಟ್ಟ, ಭೂಸ್ವರೂಪ, ಲೋಹವಾಚಕ.

"ಸದಾಕಾಲ ಜನಕಲ್ಯಾಣವನ್ನೇ ಬಯಸುವ ಇಲ್ಲಿನ ಮೂರು ಜನ ಸಹೋದರರಲ್ಲಿ ಒಬ್ಬ 'ಅಪ್ರತಿಮ ವೀರ', ನಾಗಿದ್ದನೆಂದೂ ಅವನ ಹೆಸರು 'ಪೊನ್ನ' ಎಂದಿತ್ತೆಂದು ಗ್ರಾಮದ ಜನರೆಲ್ಲರು ಆತನ ಸಂಸ್ಮರಣೆಗಾಗಿ ಗ್ರಾಮಕ್ಕೆ 'ಪೊನ್ನಗುಂದ' ಎಂದು ಕರೆದರು."[೨೧೧] ಬೆಟ್ಟದ ಮೇಲೆ ಋಷಿಯೊಬ್ಬ ವಾಸವಾಗಿದ್ದನಂತೆ. ನಿತ್ಯದಂತೆ ಅವನು ಅಡುಗೆ ಮಾಡಿಕೊಳ್ಳುವಾಗ ಒಂದು ದಿನ ಮಾಡಿದ ಅಡುಗೆ ಎಲ್ಲವೂ ಬಂಗಾರವಾಯಿತಂತೆ. ಅಂದಿನಿಂದ ಇದನ್ನು ಸುತ್ತುವರೆದ ಗ್ರಾಮಕ್ಕೆ 'ಬಂಗಾರ ಬೆಟ್ಟ' ಎಂದರೆ 'ಹೊನ್ನಗುಂದ' ಎಂದು ಹೆಸರಾಯಿತು"[೨೧೨] ಇದೊಂದು ದಂತಕಥೆ.

ಹುನಗುಂದ ಗುಡ್ಡದಲ್ಲಿ ಹಳದಿ ಬಣ್ಣದ ಮಣ್ಣು ಹುಡಿ ಇರುವುದರಿಂದ ಈ ಗುಡ್ಡದ ಸುತ್ತಮುತ್ತ ಕಬ್ಬಿಣದ ಅದಿರು ಗ್ರಾನೇಟ ಕಲ್ಲುಗಳು ದೊರೆಯುವುದರಿಂದ ಒಟ್ಟಾರೆಯಾಗಿ ಹೊನ್ನಗುಂದ>ಹುನಗುಂದ ಎಂದು ಕರೆಯಬಹುದು.

ಶಿರೂರು ಗ್ರಾಮದ ಸಿದ್ಧೇಶ್ವರ ದೇವಾಲಯ ದಕ್ಷಿಣ ಗೋಡೆಯಲ್ಲಿರುವ (B.K.No.244 of 1927–28;SII.X 1.1.85) ಕ್ರಿ.ಶ.೧೦೪೯ರ ಈ ಶಾಸನದಲ್ಲಿ "ಮಾರಸಿಂಘ ಪೊನುಗುಂದ ೩೦ರ ಮಧ್ಯದ ಶ್ರೀಪುರ ಎಂಬ ಹೆಸರಿನ ಗ್ರಾಮದಲ್ಲಿ ೩೦೦ ನಿವರ್ತನ ಭೂಮಿಯನ್ನು ಸಿದ್ಧೇಶ್ವರದೇವರ ಧೂಪ, ದೀಪ, ಜೀರ್ಣೋದ್ಧಾರಕ್ಕೆಂದು ದಾನ ನೀಡಿದ ಉಲ್ಲೇಖವಿದೆ."[೨೧೩] ಇದರಲ್ಲಿ 'ಪೊನುಗುಂದ' ಎಂದಿದೆ. ಪೊನುಗುಂದ>ಪೊನಗುಂದ>ಹುನಗುಂದ ಎಂದಾಗಿದೆ.

ಹುಲಗಿನಹಾಳ : ಹುಲಗಿ = ಹುಲಗಲಿ, ಹಾಳ = ಹಾಲ, ಹಳ್ಳಿ. ಸಸ್ಯವಾಚಕ.

ಪುಲಿಗಿಲ್>ಹುಲಿಗಿಲ್>ಹುಲಗಲಿ>ಹುಲಗಿಲ್ = ಹೊಂಗೆಮರ, ತಮಾಲವೃಕ್ಷ> ಹುಲಗಿಲ್> ಹುಲಗಿ+ಹಾಳ = ಹುಲಗಿಹಾಳ. ಹೊಂಗೆಮರವುಳ್ಳ ಊರು.

ಹುಲ್ಲೋಳಿ : ಹುಲ್ಲೆ = ಚಿಗರಿ, ಓಳಿ = ಸಾಲು, ಸಮೂಹ

ಹುಲ್ಲೆಗಳ+ಓಳಿ = ಹುಲ್ಲೋಳಿ

ಹುಲ್ಲೆಗಳು ಸಾಲುಸಾಲಾಗಿ, ಗುಂಪುಗುಂಪಾಗಿ ಇರುವ ಊರು.

ಈಗ ಹುಲ್ಲೆಗಳು ಕಾಣಸಿಗುವುದಿಲ್ಲ. ಪ್ರಾಣಿವಾಚಕ.

ಹೂವನೂರು : ೧. ಹೂವಿನ+ಊರು = ಹೂವಿನೂರು>ಹೂವನೂರು.

ಹೂವುಗಳು ಹೆಚ್ಚು ಬೆಳೆಯುವ ಊರು. ಸಸ್ಯ, ವ್ಯಕ್ತಿವಾಚಕ.

೨. ಹೂವಣ್ಣ, ಹೂವಪ್ಪ, ಎಂಬುವವನ ಊರು.

ಹೂವಣ್ಣನ+ಊರು = ಹೂವನೂರು. ಸಸ್ಯ, ವ್ಯಕ್ತಿವಾಚಕ.

ಹೂವಿನಹಳ್ಳಿ : ಹೂವಿನ+ಹಳ್ಳಿ = ಹೂವಿನಹಳ್ಳಿ

ಹೂವುಗಳು ಹೆಚ್ಚು ಬೆಳೆಯುವ ಊರು. ಸಸ್ಯವಾಚಕ.

ಹೇಮವಾಡಗಿ : ಹೇಮ = ಬಂಗಾರ, ಚಿನ್ನ

ಹೇಮದ+ಬಾಡಗಿ = ಹೇಮವಾಡಗಿ

ಸಮೃದ್ಧಿಯನಾಡು, ಸಂಪತ್ತಿನ ಊರು

ಹೇರೂರು : ಪಿರಿದು = ದೊಡ್ಡ

ಪಿರಿದು>ಪೇರ್+ಊರು = ಪೇರೂರು>ಹೇರೂರು

ಹಿರಿದಾದ = ಊರು = ಹಿರಿಯೂರು>ಹೇರೂರು. ಪ್ರಮಾಣವಾಚಕ.

ಬೇಲೂರು ಹನುಮಂತ ದೇವಾಲಯದ ಸಮೀಪದಲ್ಲಿರುವ ಕಲ್ಲಿನ ಮೇಲೆ ಇರುವ (I.A., xviii, p. 270–275) ಕ್ರಿ.ಶ. ೧೦೨೧ರ ಈ ಶಾಸನದಲ್ಲಿ ಜಯಸಿಂಹನ ಅಕ್ಕ ಅಕ್ಕಾದೇವಿಯನ್ನು ಹೊಗಳಲಾಗಿದೆ. "ಅಕ್ಕಾದೇವಿಯು ಕಿಸುಕಾಡೆಪ್ಪತ್ತನ್ನು ಆಳುತ್ತಿದ್ದಾಗ ತನ್ನ ಅಣ್ಣ ವಿಕ್ರಮಾದಿತ್ಯನಿಗೆ ಪರೋಕ್ಷವಿನಯವಾಗಿ ಪೇರೂರು ಅಗ್ರಹಾರವನ್ನು ಸರ್ವನಮಸ್ಯವಾಗಿ ಬಿಟ್ಟ ವಿವರಣೆ ಇದೆ."[೨೧೪] ಇದರಲ್ಲಿ ಪೇರೂರು ಎಂದಿದೆ. ಪೇರೂರು>ಹೇರೂರು ಮುಂದೆ ಗ್ರಾಮೀಣ ಜನರ ಬಾಯಿಯಲ್ಲಿ ಹೆರೂರು ಆಗಿದೆ. ನಂದವಾಡಗಿ ಶಿವಾಯಲದ ಮುಂಭಾಗದಲ್ಲಿರುವ ಕಂಬದ ಮೇಲೆ ಇರುವ (B.K.No.171 of 1926–27; SII.X 1.1.101) ಕ್ರಿ.ಶ. ೧೦೬೮ರ ಈ ಶಾಸನದಲ್ಲಿ "ತ್ರೈಳೋಕ್ಯಮಲ್ಲನ ಮಹಾ ಮಂಡಳೇಶ್ವರನಾದ ಭಾವನಗಂಧವಾರಣನು ಪೇರೂರಲ್ಲಿ ಕೇತೇಶ್ವರ ದೇವಾಲಯವನ್ನು ಕಟ್ಟಿಸಿದ ಉಲ್ಲೇಖವಿದೆ."[೨೧೫] ಇದರಲ್ಲಿ ಕೂಡ ಪೇರೂರು ಎಂದಿದೆ.

ಹೊನರಳ್ಳಿ : ಹೊನ್ನರು = ಒಂದು ಜನಾಂಗ

ಹೊನ್ನರ+ಹಳ್ಳಿ = ಹೊನ್ನರಹಳ್ಳಿ>ಹೊನರಳ್ಳಿ

ಪೊಣರು>ಹೊನರು = ಹೋರಾಟ, ಹೋರಾಡು.

ಹೊನರು+ಹಳ್ಳಿ = ಹೊನರುಹಳ್ಳಿ>ಹೊನರಳ್ಳಿ>ಹೊನರಳ್ಳಿ ಹೋರಾಟಗಾರರ ಸಾಹಸಿಗರ ಹಳ್ಳಿ ಎಂದೂ ಕರೆದಿರಲು ಸಾಧ್ಯತೆಯಿದೆ. ಜನಾಂಗವಾಚಕ.

ಸ್ಥಳನಾಮ ವ್ಯಾಸಂಗ ಮಾಡುತ್ತಾ ಮಾಡುತ್ತಾ ಹೋದಂತೆ ಅವುಗಳ ನಿಷ್ಪತ್ತಿ, ಪ್ರಾಚೀನತೆ, ಇತಿಹಾಸ, ಸಂಸ್ಕೃತಿ ಇವೆಲ್ಲ ಅರಿತನಂತರ ಇತರ ಶಾಸ್ತ್ರಗಳಾದ ಮಾನವಶಾಸ್ತ್ರ, ಭೂಗೋಲ,

ಭೂವಿಜ್ಞಾನ, ಸಮಾಜಶಾಸ್ತ್ರ ಮುಂತಾದವುಗಳ ಜೊತೆಗಿರುವ ಅಂತರ ಸಂಬಂಧ ತಿಳಿಯುತ್ತೇವೆ. ಇದರ ನಂತರ ಸ್ಥಳನಾಮಗಳ ಬಗ್ಗೆ ಮುಂದೇನು ಎಂಬ ಪ್ರಶ್ನೆ ಎದುರಾಗುತ್ತದೆ. ಏಕೆಂದರೆ ವಿಜ್ಞಾನದಲ್ಲಿ ಒಂದು ಸಂಶೋಧನೆಯು ಮುಂದಿನ ಅನೇಕ ಸಂಶೋಧನೆಗಳಿಗೆ ತಳಹದಿ ಆಗುವ ಹಾಗೆ, ಈ ಸ್ಥಳನಾಮಗಳ ಅಧ್ಯಯನವು ತನ್ನ ನೇರಕ್ಕೆ ಲಂಬವಾಗಿ ಬೆಳೆದು ಇನ್ನೊಂದು ಸಂಶೋಧನೆಗೆ ಸಹಾಯಕವಾಗಬಲ್ಲುದೇ? ಎಂಬ ಪ್ರಶ್ನೆ ನಮ್ಮದಾಗಿದೆ ಹಾಗೂ ಇನ್ನೊಂದು ಕುತೂಹಲವೆನಿಸಿದರೆ– ಸ್ಥಳನಾಮಗಳ ಅಧ್ಯಯನ ಇಂದು ಬಹುತೇಕ ರಾಷ್ಟ್ರಗಳಲ್ಲಿ ಮಹತ್ವವನ್ನು ಪಡೆದಿರುವ ಬಗ್ಗೆ ತಿಳಿಯುತ್ತದೆ.

ಏನೆಯಾಗಲಿ 'ಬಾಗಲಕೋಟೆ ಜಿಲ್ಲೆ'ಯ ಎಲ್ಲಾ ಸ್ಥಳನಾಮಗಳ ನಿಷ್ಪತ್ತಿಯನ್ನು ಕರಾರುವಾಕ್ಕಾಗಿ ಗುರುತಿಸಲು ಸಾಧ್ಯವಿದ್ದಷ್ಟು ಪ್ರಯತ್ನಿಸಿದೆ. ಯಾವುದೇ ಸ್ಥಳನಾಮದ ಬಗೆಗೆ ಚರ್ಚಿಸಲು ಕ್ಷೇತ್ರಕಾರ್ಯ ಮುಖ್ಯ. ಆಯಾ ಸ್ಥಳಗಳನ್ನು ಭೌಗೋಳಿಕ ವೀಕ್ಷಣೆಯಿಂದ, ದೊರೆತ ದಾಖಲೆಗಳಿಂದ, ಸ್ಥಳಿಕರ ಹೇಳಿಕೆಗಳಿಂದ, ಐತಿಹ್ಯಗಳಿಂದ, ಸ್ಮಾರಕಳಿಂದ, ಸ್ಥಳನಾಮದ ಖಚಿತತೆಯ ಬಗ್ಗೆ ಊಹಿಸಲಾಗಿದೆ. ಈ ದಿಸೆಯಲ್ಲಿ ಇದೊಂದು ಅಸಾಧಾರಣ ಪ್ರಯತ್ನವೆಂದು ಭಾವಿಸಿದ್ದೇನೆ.

ಸಂಕೀರ್ಣ ಸ್ಥಳನಾಮಗಳು

ಸ್ಥಳನಾಮಗಳ ಅರ್ಥದ ಮೂಲವನ್ನು ಕೆದಕುತ್ತಾ ಹೋದಂತೆ ಅನೇಕ ಗೂಢಾರ್ಥ ರಹಸ್ಯಗಳು ದೊರೆತು, ಸ್ಥಳನಾಮಗಳನ್ನು ಕರೆದುದರ ಹಿನ್ನೆಲೆಗಳು ತಿಳಿಯುತ್ತಾ ಹೋದವು. ಇನ್ನೂ ಕೆಲವು ಸ್ಥಳನಾಮಗಳ ಅರ್ಥಗಳು ತಿಳಿಯದೇ ಹೋಗಿವೆ. ಕಾರಣ ಯಾವ ಹಿನ್ನೆಲೆಗಳ ಅರ್ಥಕ್ಕೂ ಅವು ಸರಿಹೊಂದಿರುವುದಿಲ್ಲ. ಕಾರಣ ಕಾಲ, ದೇಶಗಳ ಬದಲಾವಣೆಯಲ್ಲಿ ಅವುಗಳ ಅರ್ಥದ ಮೂಲರೂಪ ಸವೆದು ಹೋದಂತಿದೆ ಹಾಗೂ ಅರ್ಥ ಸ್ಪಷ್ಟತೆ ಸಿಗದೆ ಹೋಗಿವೆ. ಅಂತಹ ಸ್ಥಳನಾಮಗಳನ್ನು **'ಸಂಕೀರ್ಣ'** ಸ್ಥಳನಾಮಗಳೆಂದು ಕರೆಯಲಾಗಿದೆ. ಈ ಸಂಕೀರ್ಣ ಸ್ಥಳನಾಮಗಳು ಪ್ರಸ್ತುತ ಬಾಗಲಕೋಟೆ ಜಿಲ್ಲೆಯಲ್ಲಿ ಕೆಲವು ಇವೆ. ಉದಾ:

ನಾಯನೇಗಲಿ, (ಬಾಗ)

ಯಂಕಂಚಿ (ಬಾಗ)

ನಸವಿ (ಬಾದ)

ಯಂಕಂಚಿ (ಬಾದ)

ಇಂದವಾರ (ಹುನ)

ಪಾಲ್ತಿ (ಹುನ)

ಅಡಿಟಿಪ್ಪಣಿಗಳು

೧. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೧೦

೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೧೦

೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೧೧

೪. ಲೋಕೋಪಕಾರ ೧೨. ೧೯

೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ .ದೇವರಕೊಂಡಾರೆಡ್ಡಿ, ಪು. ೧೦೨

೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡಿ, ಪು. ೧೨೩-೧೨೪

೭. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೯೯

೮. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೦೧-೧೦೨

೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೧೨

೧೦. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೦೨

೧೧. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೯೬

೧೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು-೯೫

೧೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೯೨

೧೪. ಕೆ.ಆರ್.ಹಾಲಭಾವಿ, ಮು.ಗು.ಕ.ಗಂ.ಮ. ಶಾಲೆ, ಗಣಿ

೧೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೨೩

೧೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೨೬

೧೭. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೧೫

೧೮. ಬಿ.ಸಿ.ಗೌಡರ, ಮು.ಗು.ಕ.ಗಂ.ಮ.ಶಾಲೆ, ಜಕನೂರು.

೧೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೦೪

೨೦. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೦೯

೨೧. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೦೨-೧೦೩

೨೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೨೭

೨೩. ಕೆ.ಎಸ್.ಹಿರೇಮಠ, ಮು.ಗು.ಸ.ಕ.ಗಂ.ಮ.ಶಾಲೆ, ತಮದಡ್ಡಿ

೨೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೨೧

೨೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೨೬

೨೬. ಊರು-ಕೇರಿ. ಕುಂತಳ, ತುಂಗಳ. ಡಾ. ಸಂಗಮೇಶ ಬಿರಾದಾರ, ಪು. ೬

೨೭. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೧೬

೨೮. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೧೭

೨೯. ಎಂ.ತಳವಾರ. ಸ.ಕ.ಗಂ.ಮ.ಶಾಲೆ, ದೇಸಾಯಿ ಕೆರೆ

೩೦. ನಾವಲಗಡ್ಡೆ-ಕನ್ನಡ ನಿಘಂಟು, ಸಂ-೫

೩೧. ಕ.ವಿ.ವಿ.ಶಾ.ಸಂ.೯ ಮು.ಸಂ.ಡಾ॥ದೇವರಕೊಂಡಾ ರೆಡ್ಡಿ. ಪು-೭೯

೩೨. B.K.No. 53 of 1938-39; SII. XX. 323 P. 100

೩೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೦೬

೩೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೨೨

೩೫. ಶಿವಾನಂದ ಮ. ದಾಶಾಳ, ಮು.ಗು.ಕ.ಗಂ.ಮ. ಶಾಲೆ, ರಬಕವಿ

೩೬. ಎಸ್.ಎನ್.ಜಮಖಂಡಿ. ಮು.ಗು., ಸ.ಕ.ಗಂ. ಶಾಲೆ. ಶೂರ್ಪಾಲಿ

೩೭. ತರ್ದವಾಡಿನಾಡು ಒಂದು ಅಧ್ಯಯನ: ಲೇ: ಡಾ. ಎಸ್.ಕೆ.ಕೊಪ್ಪಾ, ಪು. ೬೫

೩೮. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೦೨

೩೯. ಕ.ವಿ.ವಿ.. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೧೬

೪೦. ಬಿ.ಆರ್.ಇಂಗಳಗಿ, ಹಿ.ಪ್ರಾ.ಕ.ಗಂ.ಮ. ಶಾಲೆ, ಸಿದ್ದಾಪೂರ

೪೧. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೦೧

೪೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. xlv

೪೩. ಸಂಸ್ಕೃತಿ ಸಮೀಕ್ಷೆ: ಡಾ. ಎಚ್.ತಿಪ್ಪೆರುದ್ರಸ್ವಾಮಿ, ಪು. ೨೮೯

೪೪. ಬೆಳ್ವಲದ ಬೆಡಗು: ಲೇ: ಸಿದ್ಧರಾಜ ಪೂಜಾರಿ. ಜಯವಂತ ಕಾಡದೇವರು. ಪು. ೭

೪೫. ಬದಾಮಿ ಸಂಸ್ಕೃತಿಕ ಅಧ್ಯಯನ: ಶೀಲಾಕಾಂತ ಪತ್ತಾರ ಪು. ೪೪

೪೬. 'ಬಸವಸಿರಿ' ಸ್ಮರಣ ಸಂಚಿಕೆ: ೨೦೦೮ (ಗೌ.ಸಂ.) ಪ್ರಕಾಶ ಈ. ತಪಶೆಟ್ಟಿ, ಪು. ೧೬೪

೪೭. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೯೦

೪೮. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. xlv

೪೯. ತರ್ದವಾಡಿನಾಡು-ಒಂದು ಅಧ್ಯಯನ: ಲೇ. ಡಾ. ಎಸ್.ಕೆ.ಕೊಪ್ಪಾ, ಪು. ೮೯

೫೦. ಕನ್ನಡ ಕಂನುಡಿ: ಶಂಭಾ ಜೋಶಿ. ಪು. ೨೦೨

೫೧. ಬಿಜಾಪುರ ಜಿಲ್ಲಾ ಗ್ಯಾಜಿಟಿಯರ್: (ಸಂ) ಆರ್.ಮುನಿಸ್ವಾಮಿ ಕರ್ನಾಟಕ ರಾಜ್ಯ ಪ್ರಕಟಣೆ ಪು. ೧೧೦೭

೫೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೫೩

೫೩. ಗ್ಯಾಝಿಟೀಯರು ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು: (ಅನು) ವೆಂಕಟರಂಗೋ ಕಟ್ಟಿ, ಪು. ೨೧೩

೫೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೨೭

೫೫. ಕರ್ನಾಟಕ ಸಂಸ್ಕೃತಿ ಸಮೀಕ್ಷೆ: ಡಾ. ಎಚ್.ತಿಪ್ಪೇರುದ್ರಸ್ವಾಮಿ, ಪು. ೨೬೨

೫೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೨೨

೫೭. ಕೆ.ಎಸ್.ಮಜ್ಜಗಿ, ಶಿಕ್ಷಕರು, ಶಿರೂರು

೫೮. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೫

೫೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೮

೬೦. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೪-೪೫

೬೧. ಭಾರತದ ಗ್ಯಾಜೆಟಿಯರ್ ಕರ್ನಾಟಕ ರಾಜ್ಯ: ಬಿಜಾಪೂರ ಜಿಲ್ಲೆ, ಪು. ೧೧೦೭, (ಸಂ) ಡಾ. ಆರ್. ಮುನಿಸ್ವಾಮಿ, ಪ್ರ. ಕರ್ನಾಟಕ ರಾಜ್ಯ ಸರಕಾರ.

೬೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೫೪

೬೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೨

೬೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೪

೬೫. ಬಾದಾಮಿ ಸಾಂಸ್ಕೃತಿಕ ಒಂದು ಅಧ್ಯಯನ: (ಲೇ) ಡಾ. ಶೀಲಾಕಾಂತ ಪತ್ತಾರ, ಪು. ೧೬೨

೬೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೫೨

೬೭. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೫೩

೬೮. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೮೮

೬೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೫೧

೭೦. ಶ್ರೀ ಶಿವಾನಂದ ಗಚ್ಚನ್ನವರ. ಶಿಕ್ಷಕರು, ಆಲದಕಟ್ಟೆ

೭೧. ಸ್ಥಳನಾಮಗಳ ಅಧ್ಯಯನ (ಸಂ) ಪ್ರೊ. ಡಿ.ಲಿಂಗಯ್ಯ, ಚಕ್ಕೆರೆ ಶಿವಶಂಕರ, ಪು. ೧೦೫

೭೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೫೩

೭೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೭೦

೭೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೭೮

೭೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೮೩

೭೬. ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು: ಡಾ. ಜಾಜಿ ದೇವೇಂದ್ರಪ್ಪ, ಪು. ೮೦

೭೭. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೩೭

೭೮. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೪೭

೭೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೫೫

೮೦. ಶ್ರೀ ಲಕ್ಷ್ಮಣ ಧ. ಸೀತಿಮನಿ, ಕೋಟೆಕಲ್ಲು.

೮೧. ಎಕೆ III (R) ನಂಜನ ೧೦೨. ೧೨೦ ೧೫೭೬.

೮೨. ಶ್ರೀ ಸಾಬಣ್ಣ ಹುಳ್ಳಿ, ಗಂಗನಬೂದಿಹಾಳ.

೮೩. ಬಾದಾಮಿ ಸಾಂಸ್ಕೃತಿಕ ಒಂದು ಅಧ್ಯಯನ: ಲೇ: ಶೀಲಾಕಾಂತ ಪತ್ತಾರ, ಪು. ೧೪೯

೮೪. ತರ್ದವಾಡಿನಾಡು ಒಂದು ಅಧ್ಯಯನ: ಡಾ. ಎಸ್.ಕೆ.ಕೊಪ್ಪಾ, ಪು. ೮೨

೮೫. ಗುರುನಾಥ ಕವಿ: ಜಲಗೇರಿ.

೮೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೪೦

೮೭ ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೬೬

೮೮. ಕೆ.ಆರ್.ಕೆರಿಹೊಲದ: ನಂದಿಕೇಶ್ವರ.

೮೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೪೭

೯೦. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೪೪

೯೧. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೨೬೭

೯೨. ಆರ್.ಟಿ.ದೇಸಾಯಿಯವರು ಮಾಜಿ ಶಾಸಕರು, ಬಾದಾಮಿ

೯೩. ಎಸ್.ಎಂ.ಸಪ್ಪಡ್ಲ, ವಿಶ್ರಾಂತ ಶಿಕ್ಷಕರು, ನೀಲಗುಂದ

೯೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೪೪

೯೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೯೮

೯೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೨೧೮

೯೭. ಬಾಗಲಕೋಟೆ ಜಿಲ್ಲಾದರ್ಶನ ಪು. ೧೦೦

೯೮. ಸಂಯುಕ್ತ ಕರ್ನಾಟಕ-ಹುಬ್ಬಳ್ಳಿ, ೨೭-೧೨-೨೦೦೭, ಲೇ: ಗುರುರಾಜ ಪರ್ವತೀಕರ

೯೯. ಫಾತಿಮ ಅ. ರಾಘಪೂರ, ಫಕೀರಬೂದಿಹಾಳ

೯೯ಅ. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. lvi

೧೦೦. ಪ್ರಜಾವಾಣಿ. ದಿನಾಂಕ: ೨೪-೧೨-೨೦೦೭

೧೦೧ ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೩೫

೧೦೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೩೬

೧೦೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೧೧

೧೦೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೧೭

೧೦೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೨೮೭

೧೦೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೨೮೨

೧೦೭. ಬಿಜಾಪೂರ ಜಿಲ್ಲೆ ಗ್ಯಾಜಿಟೀಯರ್ ಪು. ೪೮-೪೯

೧೦೮. ಕನ್ನಡ ನಿಘಂಟು-೧, ಪು. ೬೩-೩೧

೧೦೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. IXV

೧೧೦. ಸ್ಥಳನಾಮಗಳ ಅಧ್ಯಯನ: ಪ್ರೊ. ಡಿ.ಲಿಂಗಯ್ಯ, ಡಾ. ಚಕ್ಕರೆ ಶಿವಶಂಕರ, ಪು. ೪೧

೧೧೧. ವಾಗರ್ಥ: ಡಾ. ಎಂ.ಚಿದಾನಂದಮೂರ್ತಿ

೧೧೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೨೨೪

೧೧೩. ಪ್ರಜಾವಾಣಿ: ೧೮.೦೫.೨೦೦೮ ಲೇ: ಪಾರ್ವತಿ ಅ. ಪಿಟಗಿ

೧೧೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೪೪

೧೧೫. ಬ.ವೀ.ಹಂಪನಗೌಡ್ರ, ಹಿರಿಯ ನಾಗರಿಕರು.

೧೧೬. ನಾರಾಯಣರಾವ್. ದೇಶಪಾಂಡೆ. ಹಿರಿಯ ನಾಗರಿಕರು, ಮುತ್ತಲಗೇರಿ

೧೧೭. ಜಿ.ಜೆ.ಗೌಡರ, ನಿವೃತ್ತ ಶಿಕ್ಷಕರು, ಮುತ್ತಲಗೇರಿ

೧೧೭ಅ. ವಿವೈವಿ-ಪು. ೧೫೬

೧೧೮. GAZETTEER OF THE BOMBAY KARNATIK: BY – MR. VENKAT RANGO KATTI, BOMBAY GOVERNMENT CENTRAL BOOK DEPOT, 1893, pp. 131

೧೧೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೪೯

೧೨೦. ಮಾರ್ಗ-೨: ಎಂ.ಎಂ.ಕಲಬುರ್ಗಿ, ಪು, ೧೯೨

೧೨೧. ರುದ್ರಯ್ಯ ಹಿರೇಮಠ, ಹಿರಿಯ ನಾಗರಿಕರು, ಲಖಮಾಪೂರ

೧೨೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೬೩

೧೨೩. ಬಾದಾಮಿಯ ಸಾಂಸ್ಕೃತಿಕ ಒಂದು ಅಧ್ಯಯನ: ಡಾ. ಶೀಲಾಕಾಂತ ಪತ್ತಾರ, ಪು. ೧೫೪

೧೨೪. ಗುರುನಾಥ ಕಡಬೂರ, ಪ್ರಜಾವಾಣಿ, ೧.೦೪.೨೦೧೦, ಪು. II

೧೨೫. ಹನಮಂತ ಹಟ್ಟಿ, ನಿವೃತ್ತ ಶಿಕ್ಷಕರು, ಸೂಳಿಕೇರಿ

೧೨೬. ಯಮನಪ್ಪ ಲಕ್ಷ್ಮಣ, ಮಾದರ, ಸೂಳಿಕೇರಿ

೧೨೭. ಯಲ್ಲಪ್ಪ, ಗೌಡರ, ಹಿರಿಯನಾಗರಿಕರು, ಸೂಳಿಕೇರಿ

೧೨೮. ಸ್ಥಳನಾಮ ವೀರರು ಡಾ. ಕೊಡ್ಲೂರು ವೆಂಕಟಪ್ಪ, ಪು. ೫

೧೨೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೫೪

೧೩೦. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೫೫

೧೩೧. ಸ್ಥಳನಾಮಗಳ ಅಧ್ಯಯನ: (ಸಂ) ಪ್ರೊ. ಡಿ.ಲಿಂಗಯ್ಯ, ಡಾ. ಚಕ್ಕರೆ ಶಿವಶಂಕರ, ಪು. ೬೯

೧೩೨. ಎಂ.ಡಿ. ಪಲ್ಲೇದ, ಉಪನ್ಯಾಸಕರು, ಹಂಸನೂರು

೧೩೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೧೮

೧೩೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೩೩

೧೩೫. ಸ್ಥಳನಾಮಗಳ ಅಧ್ಯಯನ: (ಸಂ) ಪ್ರೊ. ಡಿ.ಲಿಂಗಯ್ಯಾ, ಡಾ. ಚಕ್ಕರೆ ಶಿವಶಂಕರ, ಪು. ೭೦

೧೩೬. ಆಂಧ್ರ–ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು: ಡಾ. ಜಾಜಿ ದೇವೇಂದ್ರಪ್ಪ, ಪು. ೮೦

೧೩೭. ಕ.ಇ. ೧.೧೫.೬; ಪು. ೮೬೬

೧೩೮. ಸೌ.ಇ.ಇ.xi-i, ೧೦೩,೩೪, ೧೦೭೦

೧೩೯ ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೩೯

೧೪೦. ಎಡೆಗಳು ಹೇಳುವ ಕಂನಾಡಕಥೆ: ಶಂಭಾ ಜೋಷಿ, ಪು. ೧೭೭

೧೪೧. ಸಾಮರಸ್ಯ: ವಸಂತ ಕುಲಕರ್ಣಿ, ಪು. ೬೦

೧೪೨. ಶಂ.ಕ.ಶೆಟ್ಟರ, ಶಿಕ್ಷಕರು, ಗುಳಬಾಳ

೧೪೩. ಎಂ.ಆರ್.ಬುರ್ಲಿ, ಹಿ.ಪ್ರಾ. ಶಾಲೆ, ಜಾನಮಟ್ಟಿ

೧೪೪. ಬಿ.ವಾಯ್.ಶೆಲ್ಲಿಕೇರಿ, ಮು.ಗು.ಹಿ.ಪ್ರಾ. ಶಾಲೆ, ತುಮ್ಮರಮಟ್ಟಿ

೧೪೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೭೬

೧೪೬. ಎಂ.ಕೆ.ತೆಗ್ಗಿ, ಸ.ಶಿ.ಕ.ಗಂ. ಶಾಲೆ, ಬಾವಲತ್ತಿ

೧೪೭. ಹಲಾಯು, ೧೦೨–೬೦

೧೪೮. ಕೆನೆ ಮೊಸರು: ವಿಜಯಶ್ರೀ ಇಟ್ಟಣ್ಣವರ, ೬೯

೧೪೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೬೮

೧೫೦. ಆಯ್.ಎಲ್.ಕಂದಗಲ್, ಮು.ಗು. ಬಿ.ಎಸ್.ಬೀರಕಬ್ಬಿ

೧೫೧. ತರ್ದವಾಡಿನಾಡು ಒಂದು ಅಧ್ಯಯನ: ಡಾ. ಎಸ್.ಕೆ.ಕೊಪ್ಪಾ, ಪು. ೨೧೨

೧೫೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೧೬

೧೫೩. ಎ.ಸಿ.ಅಪ್ಪಣ್ಣಗೋಳ, ಮು.ಗು.ಕ.ಗಂ.ಮ. ಶಾಲೆ, ಮುಂಡಗನೂರು

೧೫೪. ಜಿ.ಆರ್.ಹೊಸಮನಿ, ಉಪನ್ಯಾಸಕರು, ಯಳ್ಳಿಗುತ್ತಿ

೧೫೫. ಮಂಗರಾಜ, ೯-೧೦

೧೫೬. ಕೆ.ಎಚ್.ಸಿಂಧೆನ್ನವರ, ಮು.ಗು.ಕ.ಹಿ.ಮ. ಶಾಲೆ, ಸುನಗ

೧೫೭. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೬೭

೧೫೮. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೬೫

೧೫೯. ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು: ಗುರುಮೂರ್ತಿ ಪೆಂಡಕೂರು, ಪು. ೩೦

೧೬೦. ಸಂಸ್ಕೃತಿ ಸಮೀಕ್ಷೆ: ಡಾ. ಎಚ್.ತಿಪ್ಪೇರುದ್ರಸ್ವಾಮಿ. ಪು. ೨೮೯

೧೬೧. ಶಿವಲಿಂಗಯ್ಯ ಕಂಬಾಳಿಮಠ, ಹಿರಿಯ ನಾಗರಿಕರು, ಉತ್ತೂರು

೧೬೨. ಮಂಗರಾಜನ ನಿಘಂಟು: ಪು. ೪೪-೪೫

೧೬೩. ಪ್ರಜಾವಾಣಿ: ೬.೦೩.೨೦೦೮, ಪು. ೨.

೧೬೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೯

೧೬೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೦೨

೧೬೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೩೯

೧೬೭. ಬಸವರಾಜ ದಲಾಲ, ಹಿರಿಯನಾಗರಿಕರು, ಮಹಾಲಿಂಪೂರ

೧೬೮. ಬೆಳವಲದ ಬೆಡಗು- ಬಿಜಾಪುರ ಜಿಲ್ಲಾ ದರ್ಶನ: ಲೇ: ಸಿದ್ಧರಾಜ ಪ್ರಜಾರಿ, ಜಯವಂತ ಕಾಡುದೇವರು, ಪು. ೯೮

೧೬೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೩೩

೧೭೦. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೩೭

೧೭೧. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು.೧೩೪

೧೭೨. ತರ್ದವಾಡಿ ಒಂದು ಅಧ್ಯಯನ ಲೇ: ಡಾ. ಎಸ್.ಕೆ.ಕೊಪ್ಪಾ, ಪು. ೧೧೪

೧೭೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೩೪

೧೭೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೪೬

೧೭೫. ಪ್ರಜಾವಾಣಿ: ೬.೦೩.೨೦೦೮, ಪು. ೨

೧೭೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೩೨

೧೭೭. ಹೊನ್ನಗುಂದ ತಾಲೂಕು ದರ್ಶನ, ಪು. ೪೬

೧೭೮. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೫೯

೧೭೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೬೨

೧೮೦. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. lxiii

೧೮೧. ಸಂಸ್ಕೃತಿ ಸಮೀಕ್ಷೆ: ಡಾ. ಎಚ್.ತಿಪ್ಪೆರುದ್ರಸ್ವಾಮಿ, ಪು. ೨೮೯

೧೮೨. ಬೆಳ್ವಲದ ಬೆಡಗು: ಲೇ: ಸಿದ್ಧರಾಜ ಪೂಜಾರಿ, ಜಯವಂತ ಕಾಡುದೇವರು, ಪು. ೭

೧೮೩. ಸಿದ್ಧಾರ್ಥ–೧೩

೧೮೪. ಬೆಳ್ವಲದ ಬೆಡಗು– ಬಿಜಾಪುರ ಜಿಲ್ಲಾ ದರ್ಶನ: ಲೇ: ಸಿದ್ದರಾಜ ಪೂಜಾರಿ, ಜಯವಂತ, ಪು.೭

೧೮೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ixiv

೧೮೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೪೨

೧೮೭. ಹೊನ್ನಗುಂದ ತಾಲೂಕು ದರ್ಶನ: ಪು. ೧೪೫

೧೮೮. ಹೊನ್ನಗುಂದ ತಾಲೂಕು ದರ್ಶನ: ಪು. ೮

೧೮೯. ಬಾದಾಮಿ ಸಾಂಸ್ಕೃತಿಕ ಅಧ್ಯಯನ: ಶೀಲಾಕಾಂತ ಪತ್ತಾರ, ಪು. ೬೯

೧೯೦. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಸಂಗಪ್ಪ ಪ. ಹೂಗಾರ: ದಿನಾಂಕ: ೮.೦೨.೨೦೦೯

೧೯೧. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೨೭

೧೯೨. Gazetter of the Bombay Karnataka: By Mr.Venkat Rango Katti, Bomaby Governament central Book Depot, 1893–pp 38

೧೯೩. ಹೊನ್ನೆಲೆಗಳು: ಡಾ. ಕೊಟ್ರೇಶ್ ಉತ್ತಂಗಿ, ಪು. ೧೨೬

೧೯೪. ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು: ಗುರುಮೂರ್ತಿ ಪೆಡಂಕೂರು, ಪು. ೩೯

೧೯೫. ತರ್ದವಾಡಿ ನಾಡು– ಒಂದು ಅಧ್ಯಯನ: ಡಾ. ಎಸ್.ಕೆ.ಕೊಪ್ಪಾ. ಪು. ೭೧

೧೯೬. ಕರ್ನಾಟಕ ಸಂಸ್ಕೃತಿ ಸಮೀಕ್ಷೆ: ಲೇ: ಡಾ. ಎಚ್.ತಿಪ್ಪೇರುದ್ರಸ್ವಾಮಿ, ಪು. ೨೮೯

೧೯೭. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೪೩

೧೯೮. ಮಲ್ಲಪ್ಪ ಕಂಬಾರ, ಹಿರಿಯ ನಾಯಕರು, ನಂದವಾಡಗಿ

೧೯೯. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೩೭

೨೦೦. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೩೯

೨೦೧. ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು: ಗುರುಮೂರ್ತಿ ಪೆಡಂಕೂರು, ಪು. ೨೯

೨೦೨. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೩೯೮

೨೦೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೩೭

೨೦೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೧೯

೨೦೫. ತರ್ದವಾಡಿ ನಾಡು– ಒಂದು ಅಧ್ಯಯನ: ಲೇ: ಡಾ. ಎಸ್.ಕೆ.ಕೊಪ್ಪಾ, ಪು. ೮೨

೨೦೬. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು.lii

೨೦೭. ಎಫಿಗ್ರಪಿ ಆಫ್ ಕರ್ನಾಟಕ-೨: ೫೯-೮೪: ಪು. ೯೭೪

೨೦೮. ಹೊಳೆಯಪ್ಪ ಬ. ಕೋರಿ, ಸೂಳಿಭಾವಿ

೨೦೯. ಯಮನಪ್ಪ ಮಾಗಿ, ಹಿರಿಯನಾಗರಿಕರು, ಸೂಳಿಭಾವಿ

೨೧೦. ಹೊನ್ನಗುಂದ ತಾಲೂಕ ದರ್ಶನ. ಶಂಕರ, ಸಂ. ಬಸುಪಟ್ಟದ, ಪು. ೧೩೩

೨೧೧. ಹೊನ್ನಗುಂದ ತಾಲೂಕು ದರ್ಶನ: ಎ.ಓ.ಬಿರಾದವರು, ಪು. ೬೧

೨೧೧ಅ. ಹೊನ್ನಗುಂದ ತಾಲೂಕು ದರ್ಶನ: ಪು. ೪

೨೧೨. ಹೊನ್ನಗುಂದ ತಾಲೂಕು ದರ್ಶನ: ಡಾ. ಶಂಭು ಬಳಿಗಾರ, ಪು. ೮

೨೧೩. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೪

೨೧೪. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೧೫೯

೨೧೫. ಕ.ವಿ.ವಿ. ಶಾ.ಸಂ. ೯ (ಮು.ಸಂ.) ಡಾ. ದೇವರಕೊಂಡಾರೆಡ್ಡಿ, ಪು. ೪೩೭

ಅಧ್ಯಾಯ ೬

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳ ಸಂಸ್ಕೃತಿ ಸ್ವರೂಪ ದರ್ಶನ

ಪ್ರಾಗೈತಿಹಾಸಿಕ ಸಂಸ್ಕೃತಿ

ಅರಣ್ಯ ಸಂಸ್ಕೃತಿ

ಪಂಚಾಯತ ರಾಜ್ಯ

ಪಶು ಸಂಸ್ಕೃತಿ

ಕೃಷಿ ಸಂಸ್ಕೃತಿ

ಋಷಿ ಸಂಸ್ಕೃತಿ

ಗುಡಿ ಸಂಸ್ಕೃತಿ

ಪುರಾಣ ಸಂಸ್ಕೃತಿ

ನಾಗರಿಕ ಸಂಸ್ಕೃತಿ

ಅಧ್ಯಾಯ ೬

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳ ಸಂಸ್ಕೃತಿ ಸ್ವರೂಪ ದರ್ಶನ

ಸಂಸ್ಕೃತಿ ಎಂಬುದು ಬುದ್ಧಿಯ ವಿಕಾಸ, ಮಾನಸಿಕ ಪಕ್ವತೆ. ಸಂಸ್ಕೃತಿಯನ್ನು ನಾಗರಿಕತೆ ಎನ್ನಲಾಗದು. ಸಂಸ್ಕೃತಿಗೂ ನಾಗರಿಕತೆಗೂ ಆತ್ಮಕ್ಕೂ ಭೌತಿಕವಸ್ತುಗಳಿಗೂ ಇರುವಷ್ಟು ಅಂತರವಿದೆ. ಒಂದು ವೇಳೆ, ನಾಗರಿಕತೆ ಸಂಸ್ಕೃತಿಯಾಗಲಪೇಕ್ಷಿಸಿದರೆ, ನಾಗರಿಕತೆಯಲ್ಲಿ ಆಧ್ಯಾತ್ಮಿಕ ಒಳ್ಳೆಯತನ ಸೇರಬೇಕು. ಆ ಒಳ್ಳೆಯತನವೇ ಸಂಸ್ಕೃತಿಯ ಸಾರ. ಆದ್ದರಿಂದ ಮಾನವನಲ್ಲಿ ತೋರಿಬರುವ ಮನೋವಿಕಾಸವನ್ನೇ ಸಂಸ್ಕೃತಿ ಎನ್ನಬಹುದು. ಅದು ಒಬ್ಬ ವ್ಯಕ್ತಿಯ, ಒಂದು ದೇಶದ ಅಥವಾ ಒಂದು ಜನಾಂಗದ ಮಾನಸಿಕವಾದ ಸಾಧನೆಯೂ ಆಗಬಹುದು. ಹೀಗೆ 'ಜೀವನವೇ ಲಯಬದ್ಧವಾಗಿ ಒಟ್ಟಂದದಿಂದ ಶೋಭಿಸಿದಾಗ, ಅದೇ ನಿಜವಾದ ಸಂಸ್ಕೃತಿಯ ಕುರುಹಾಗುವದು.' ಈ ಸಂಸ್ಕೃತಿಯು ಮನುಷ್ಯನ ನಡೆ-ನುಡಿ, ಆಚಾರ-ವಿಚಾರ ಕೃತಿ, ಕ್ರೀಡೆ, ಧರ್ಮ, ಆಡಳಿತ ಹೀಗೆ ಅನೇಕ ಕ್ಷೇತ್ರಗಳಲ್ಲಿ ಕಂಡುಬರುವುದು. ಮನುಷ್ಯ ಏನೆಲ್ಲಾ ಶ್ರಮಪಡುತ್ತಿರುವುದು ಒಟ್ಟಾರೆ ಉತ್ತಮ ಜೀವನ ನಡೆಸುವ ಸಲುವಾಗಿ, ಹಾಗೆಂದು ಮತ್ತೊಬ್ಬರಿಗೆ ತೊಂದರೆ ಕೊಡುವುದಲ್ಲ, 'ಸರ್ವೇಜನಾಃ ಸುಖಿನೋಭವಂತು' ಎಂಬ ತತ್ವವನ್ನಳವಡಿಸಿಕೊಂಡ ಬದುಕು ಸಾಂಸ್ಕೃತಿಕ ಬದುಕು ಎನಿಸುತ್ತದೆ.

ಇತಿಹಾಸಜ್ಞರು ಮತ್ತು ಮಾನವ ಶಾಸ್ತ್ರಜ್ಞರು ಸಂಸ್ಕೃತಿ ಪದವನ್ನು ಬೇರೆಯಾಗಿಯೇ ಬಳಸುತ್ತಾರೆ. ಮನುಷ್ಯ ನಿಸರ್ಗದಿಂದ ಏನನ್ನು ಪಡೆದಿರುತ್ತಾನೋ ಅದನ್ನೆ ತನ್ನ ಬದುಕಿಗೆ ಅನುಗುಣವಾಗಿ ಮಾರ್ಪಡಿಸಿಕೊಂಡು ಉಪಯೋಗಿಸುವುದು ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಇಂತಹ ಸಂಸ್ಕೃತಿಯನ್ನು ಸ್ಥಳಗಳಿಗೆ ಹಾಗೂ ವ್ಯಕ್ತಿಗಳಿಗೆ ಹೆಸರಿಡುವಲ್ಲಿಯೂ ಕಾಣುತ್ತೇವೆ. ಉದಾ: ನಿಸರ್ಗವು ಮನುಷ್ಯನಿಗೆ ಸ್ವಾಭಾವಿಕವಾಗಿ ಧ್ವನಿ ಹೊರಡಿಸುವ ಅವಕಾಶ ನೀಡಿದೆ. ಆ ಧ್ವನಿಯನ್ನು ಮಾನವ ಭಾಷೆಯಾಗಿ ಪರಿವರ್ತಿಸಿಕೊಂಡಿದ್ದಾನೆ. ಇದು ಮಾನವನೇ ಮಾಡಿಕೊಂಡ ಏರ್ಪಾಡು. ಇದು ಸಂಸ್ಕೃತಿ ಎನಿಸುತ್ತದೆ.

[illegible]

[illegible]

[illegible]

[illegible]

[illegible]

ಹಾಗೆಯೇ ನಿಸರ್ಗದತ್ತವಾದ ಕೊಡುಗೆಗಳಾದ ಗಂಡು–ಹೆಣ್ಣುಗಳ (ಪ್ರಾಣಿ–ಪಕ್ಷಿಗಳು ಸೇರಿ) ಆಕರ್ಷಣೆ. ಇದನ್ನು ಮಾನವ 'ವಿವಾಹ ಪದ್ಧತಿ'ಯನ್ನಾಗಿ ರೂಪಿಸಿಕೊಂಡಿದ್ದಾನೆ. ಆದ್ದರಿಂದ ಭಾಷೆ ಮತ್ತು ವಿವಾಹ ಇವುಗಳನ್ನು ಸಂಸ್ಕೃತಿಯ ಒಂದು ಭಾಗವೆಂದು ಪರಿಗಣಿಸಲಾಗಿದೆ.

ಸಂಸ್ಕೃತಿ ಎಂದರೆ ಮಾನವ ತನ್ನ ಅನುಕೂಲಕ್ಕಾಗಿ ನಿಸರ್ಗವನ್ನನುಸರಿಸಿ ಮಾಡಿಕೊಂಡ ಸುಧಾರಣೆಗಳು. ಸುಧಾರಣೆಗಳನ್ನು ಮಾಡಿಕೊಳ್ಳಲು ಎಷ್ಟೋ ಪ್ರಯತ್ನ, ಪ್ರಯೋಗ ಮಾಡಲು ಎಷ್ಟೋ ಸಾವಿರ ವರ್ಷಗಳನ್ನು ಕಳೆಯಬೇಕಾಯಿತು. ಉದಾ: ಗಿಡಗಳ ತೊಗಟೆ ಹಾಗೂ ಪ್ರಾಣಿಗಳ ಚರ್ಮಗಳನ್ನು ಅನುಸರಿಸಿ ಬಟ್ಟೆಯ ಕಲ್ಪನೆ, ಗಿಡಗಳ ಪೊಟರೆ ಹಾಗೂ ನೈಸರ್ಗಿಕ ಗುಹೆಗಳಿಂದ ಪ್ರಭಾವಿತನಾಗಿ ಮನೆಗಳ ಕಲ್ಪನೆ, ಹಕ್ಕಿಗಳ ಕೂಜನ ಅನುಸರಿಸಿ ಹಾಡುವುದನ್ನು, ನವಿಲನ್ನು ಕಂಡು ನರ್ತನವನ್ನು, ಜೇಡನನ್ನು ಕಂಡು ನೇಯುವಿಕೆಯನ್ನು, ಇಲಿ ಹಾಗೂ ಇರುವೆಗಳು ಆಹಾರ ಸಂಗ್ರಹಿಸುವುದನ್ನು ಕಂಡು ಮಾನವ ಕೂಡಾ ಆಹಾರ ಸಂಗ್ರಹಣೆಯನ್ನು ಮಾಡತೊಡಗಿದಂತೆ ತೋರುತ್ತದೆ. ಇವೆಲ್ಲವನ್ನು ಸಂಸ್ಕೃತಿ ಎಂಬ ಪದ ಒಳಗೊಳ್ಳುತ್ತದೆ. ನಿಸರ್ಗದಿಂದ ಬಂದು ಒದಗುವ ಪ್ರಕೋಪಗಳು ಮನುಷ್ಯನ ಸಾಂಸ್ಕೃತಿಕ (ಲೌಕಿಕ) ಜೀವನವನ್ನು ಒಮ್ಮೊಮ್ಮೆ ಹಿಮ್ಮೆಟ್ಟಿಸುತ್ತವೆ. ಅಂದರೆ ಬದುಕಿನ ಬಗ್ಗೆ ಮಾನವ ಜುಗುಪ್ಸೆ ಹೊಂದಿ ಆಧ್ಯಾತ್ಮಿಕದತ್ತ ಹೊರಳಬಹುದು. ಈ ಆಧ್ಯಾತ್ಮಿಕತೆಯಿಂದ ವಿವಿಧ ಮತ ಧರ್ಮಗಳು ಸೃಷ್ಠಿಯಾಗುತ್ತವೆ.

ಪ್ರಾಗೈತಿಹಾಸಿಕ ಸಂಸ್ಕೃತಿ

ಜಗತ್ತಿನ ನಾಗರಿಕತೆ ಅಥವಾ ಸಂಸ್ಕೃತಿಗಳು ನದಿ ತೀರಗಳಲ್ಲೇ ಕಂಡುಬಂದಿವೆ. ಪ್ರಸ್ತುತ ಬಾಗಲಕೋಟೆ ಜಿಲ್ಲೆಯಲ್ಲಿ ಹರಿದಿರುವ ನದಿಗಳಾದ ಕೃಷ್ಣಾ, ಘಟಪ್ರಭಾ ಹಾಗೂ ಮಲಪ್ರಭಾ ನದಿಗಳ ದಡದಲ್ಲಿ ಪ್ರಾಚೀನ ಸಂಸ್ಕೃತಿ ಬೆಳೆದು ಬಂದಿರುವದನ್ನು ೧೮೭೩ರಲ್ಲಿ ರಾಬರ್ಟ್ ಬ್ರೂಸ್‌ಫೂಟ್. ೧೯೪೯ರಲ್ಲಿ ಆರ್.ಎಸ್. ಪಂಚಮುಖಿ, ಅಲ್ಲದೆ ಆರ್.ವ್ಹಿ.ಜೋಶಿ, ಅ.ಸುಂದರ, ಎಂ.ಎನ್.ದೇಶಪಾಂಡೆ, ಕೆ.ಡಿ.ಬ್ಯಾನರ್ಜಿ, ಕರ್ನಲ್ ಮೆಡೋಸ್‌ಟೇಲರ್, ಜೇಮ್ಸ್ ಬರ್ಜೆಸ್, ವಿಷ್ಣುವಾಕಣಕರ, ಎರ್ವಿನ್ ನ್ಯೂ ಮೇಯರ್ ಮುಂತಾದವರು ಶೋಧಿಸಿ ಆಧಾರ ಒದಗಿಸಿದ್ದಾರೆ. ಇವಲ್ಲದೆ –ಕಲಾದಗಿ, ಅನಗವಾಡಿ, ಹೆರಕಲ್, ಕುಲ್ಹಳ್ಳಿ, ಹುನಗುಂದ, ತೇರದಾಳ, ಹಳಿಂಗಳಿ ಇವುಗಳೂ ಕೂಡಾ ಪ್ರಾಚೀನ ನಿವೇಶನಗಳನ್ನು ಹೊಂದಿವೆ. ಇಲ್ಲಿ ದೊರೆತಿರುವ ಅವಶೇಷಗಳು ಮಾನವನು ಆಹಾರಕ್ಕಾಗಿ, ಗುಂಪಿನ ಅರಿವಿಲ್ಲದೇ ಒಬ್ಬೊಂಟಿಗನಾಗಿ ಅಲೆದಾಡಿರಬಹುದಾದ ಸಂದರ್ಭವನ್ನು ನೆನಪಿಸುತ್ತವೆ.

ಸಂಸ್ಕೃತಿಗಳು ಬೆಳೆದು ಬರುವುದಕ್ಕಿಂತ ಪೂರ್ವದಲ್ಲಿ ಮನುಷ್ಯ ಅಲೆಮಾರಿಯಾಗಿದ್ದಾಗ ತನ್ನ ಹಸಿವನ್ನು ನೀಗಿಸಿಕೊಳ್ಳಲು ಪ್ರಾಣಿಗಳಂತೆ ನಿಸರ್ಗದಲ್ಲಿ ಆಹಾರ ಮೂಲಗಳನ್ನು ಅರಸಿಕೊಂಡು

ಅಲೆಯುತ್ತಿದ್ದ. ನಿಸರ್ಗದಲ್ಲಿ ನೇರವಾಗಿ ಹಣ್ಣು-ಹಂಪಲು, ಗಡ್ಡೆ-ಗೆಣಸು, ಮರದ ಚಿಗುರು, ಬೀಜ, ಸತ್ತ ಪ್ರಾಣಿಗಳು ಇವುಗಳೇ ಅವನ ಆಹಾರವಾಗಿದ್ದವು. ಆಗ ಜನವಸತಿ ವಿರಳವಾಗಿದ್ದುದರಿಂದ ಗುಡ್ಡದ ಕೆಳಗಡೆಯ ಪ್ರದೇಶದಲ್ಲಿರುವ ಗಿಡ-ಬಳ್ಳಿಗಳಿಂದ ಆಹಾರ ಪಡೆದುಕೊಂಡು, ಗಿಡಗಂಟಿಗಳಿಲ್ಲದಿರುವ ಗುಡ್ಡ ಪ್ರದೇಶದಲ್ಲಿ ಈತ ವಾಸಮಾಡುತ್ತಿದ್ದ. ಒಮ್ಮೊಮ್ಮೆ ಗುಡ್ಡಗಳ ಕಂಡಿಗಳಲ್ಲಿಯೂ ಇರುತ್ತಿದ್ದ.

ನಿಸರ್ಗದಲ್ಲುಂಟಾಗುವ ಪ್ರಕೃತಿವಿಕೋಪಗಳಾದ ಭೂಕಂಪ, ಅಗ್ನಿಪರ್ವತಗಳ ಕ್ರಿಯಾಶೀಲತೆ, ಅತೀವೃಷ್ಟಿ-ಅನಾವೃಷ್ಟಿಗಳಿಂದ ಮಾನವನ ಆಹಾರಕ್ಕೆ ಸಂಚಕಾರ ಬಂದೊದಗಿದಂತೆ ತೋರಿದಾಗ, ಮಾನವ ಆಲೋಚನೆಗೆ ತೊಡಗಿದ ಹಾಗೂ ಆಹಾರ ಸಂಗ್ರಹಣೆಗೆ ಮುಂದಾದ. ಸಂಗ್ರಹಿಸಿದ ಆಹಾರವನ್ನು ಕಲ್ಲಾಸರೆ, ಮರಗಳ ಪೊಟರೆಯಲ್ಲಿ ಅಡಗಿಸಿಟ್ಟು ಕಾಯುತ್ತ ಕುಳಿತಂತಿದೆ. ಇದರ ಕುರುಹುಗಳು ಬಾದಾಮಿಯ ಸುತ್ತಲಿನ ಪ್ರದೇಶದ ಮಹಾಕೂಟ, ಐಹೊಳೆ ಗವಿಗಳಲ್ಲಿ, ಕಲ್ಲಾಸರೆಗಳಲ್ಲಿ ಕಂಡುಬರುವ ಚಿತ್ರಗಳಿಂದ ಖಚಿತವಾಗುತ್ತವೆ. ಈ ಚಿತ್ರಗಳು ಕೆಮ್ಮಣ್ಣು ಹಾಗೂ ಸುಣ್ಣದಂತಹ ಬಿಳಿಬಣ್ಣದಿಂದ ಕೂಡಿದ್ದು, ಬೇಟೆಯ ರೇಖಾ ಚಿತ್ರಗಳಾಗಿವೆ. ಒಮ್ಮೊಮ್ಮೆ ಆಹಾರ ಸಂಗ್ರಹಣೆ ವೇಳೆಯಲ್ಲಿ ಕಾಡುಪ್ರಾಣಿಗಳಿಗೆ ಬಲಿಯಾಗುತ್ತಿದ್ದ. ಆಗ ಅವುಗಳಿಂದ ರಕ್ಷಿಸಿಕೊಳ್ಳಲು ಕಲ್ಲು, ಕಟ್ಟಿಗೆಗಳನ್ನು ಬಳಸಿದ. ಸಸ್ಯಾಹಾರ ಅತಿವೃಷ್ಟಿ ಅನಾವೃಷ್ಟಿಗಳಿಂದಾಗಿ ತೀರಿದಾಗ ಇಲ್ಲವೆ ಋತುಮಾನಕ್ಕನುಸಾರವಾಗಿ ಸಸ್ಯಾಹಾರ ಲಭ್ಯವಿಲ್ಲದಾಗ ಪ್ರಾಣಿಗಳ ಬೇಟೆಯನ್ನು ಪ್ರಾರಂಭಿಸಿದ. ಆತ್ಮ ರಕ್ಷಣೆಗಾಗಿ ಉಪಯೋಗಿಸಿದ ಕಲ್ಲು-ಕಟ್ಟಿಗೆಗಳನ್ನು ಆಯುಧಗಳಾಗಿ ಮಾರ್ಪಡಿಸಿಕೊಂಡು ಬೇಟೆಯಾಡಿ ಆಹಾರ ಸಂಗ್ರಹಿಸಿದ. ಆಗ ಆಯುಧಗಳ ಕಲ್ಪನೆ ಮೂಡಿತು. ಇಂತಹ ಆಯುಧಗಳು ಬಾದಾಮಿಯ ಸಮೀಪದಲ್ಲಿರುವ 'ಖ್ಯಾಡ' 'ಡಾಣಕಶಿರೂರ' ಮತ್ತು 'ಮೆಣಸಗಿ' ಭಾಗದಲ್ಲಿ ದೊರೆತಿವೆ. 'ಭದ್ರನಾಯಕನ ಜಾಲಿಹಾಳ' ಮತ್ತು 'ಐಹೊಳೆ'ಯಲ್ಲಿ ಶಿಲಾಯುಗದ ಕೈಗೊಡಲಿ, ಅಂಡಾಕಾರದ ದಪ್ಪ ಚಕ್ಕೆ ದೊರೆತಿವೆ. ಮಲಪ್ರಭಾ ದಡದ 'ತಮ್ಮಿನಹಾಳ'ದಲ್ಲಿ ಹಾಗೂ ಬಾದಾಮಿಯ 'ಸಿಡಿಲಫಡಿ'ಯಲ್ಲಿ ಮಧ್ಯಶಿಲಾಯುಗದ ಅವಶೇಷ ದೊರೆತಿವೆ. ಪ್ರಾಗೈತಿಹಾಸಿಕ ಕಾಲದ ಕುರುಹುಗಳು ಕೃಷ್ಣಾ, ಘಟಪ್ರಭಾ, ಮಲಪ್ರಭಾ ನದಿಗಳ ತೀರದ ಬೆಟ್ಟ ಪ್ರದೇಶಗಳಲ್ಲಿ ದೊರೆಯುತ್ತಿವೆಯಾದರೂ ಆ ಸಂಸ್ಕೃತಿಯನ್ನು ತಿಳಿಸುವ ಗ್ರಾಮನಾಮಗಳಿಲ್ಲ. ಅಥವಾ ಆ ಕಾಲದಲ್ಲಿ ಹೆಸರಿಸಿಕೊಳ್ಳಬಹುದಾದ ವಸತಿಗಳೇ ಇರಲಿಲ್ಲವೇನೊ. ಹೀಗಾಗಿ ಸ್ಥಳನಾಮಗಳು ಅಂದಿನ ಸಂಸ್ಕೃತಿಯನ್ನು ಗುರುತಿಸುವಲ್ಲಿ ಸಹಕಾರಿಯಾಗುವುದಿಲ್ಲ.

ಅರಣ್ಯ ಸಂಸ್ಕೃತಿ

ಕಲ್ಲಾಸರೆ ಹಾಗೂ ಮರಗಳ ಪೊಟರೆಗಳನ್ನೇ ಶಾಶ್ವತವಾಗಿ ವಾಸಕ್ಕೆ ಅವಲಂಬಿಸಿದಾಗ ಮಾನವ ಸಂಘಜೀವಿಯಾದಂತೆ ಕಂಡುಬರುತ್ತದೆ. ಬೇಟೆ ಸಂಸ್ಕೃತಿಯಲ್ಲಿದ್ದಾಗ ತಾನು ನೆಲೆನಿಂತ ಕ್ಷೇತ್ರಗಳನ್ನು

ಗುರುತಿಸಲು ಹೆಸರನ್ನು ಇಡಲು ಪ್ರಾರಂಭಿಸಿದ. ಮೊದಲು ಈ ಹೆಸರುಗಳು ನಿಸರ್ಗಕ್ಕೆ ಅತ್ಯಂತ ಸಮೀಪವಾಗಿದ್ದು, ಬದುಕಿನ ಪ್ರಾಥಮಿಕ ಹಂತದಲ್ಲಿದ್ದಾಗ ನಿಸರ್ಗ ನಿರ್ಮಿತ ಭೂ ಹಾಗೂ ಪ್ರಾಕೃತಿಕ ಹೆಸರುಗಳನ್ನೆ ತಾನು ನೆಲೆ ನಿಂತ ಸ್ಥಳಕ್ಕೆ ಇಟ್ಟನು. ಒಂದು ಗುಂಪು ತಾವಿರುವ ಗುಡ್ಡವನ್ನು ಇನ್ನೊಂದು ಗುಂಪಿಗೆ ಪರಿಚಯಿಸುವಾಗ, ತಮ್ಮ ಗುಡ್ಡಕ್ಕೇ ಒಂದು ವಿಶೇಷಣ ಸೇರಿಸುತ್ತಿದ್ದರು, ಹೀಗಾಗಿ ಕರಡಿಗುಡ್ಡ, ಚೊಳಚಗುಡ್ಡ ಎಂಬಂತೆ ತಾವು ತಮ್ಮನ್ನು ಗುರುತಿಸಿಕೊಂಡು ಆ ಸ್ಥಳಗಳನ್ನು ಹಾಗೆ ಕರೆದರು. ಬಾಗಲಕೋಟೆ ಜಿಲ್ಲೆಯಲ್ಲಿ 'ಗುಡ್ಡ' ಎಂಬುದು ಉತ್ತರಪದವಾಗಿರುವ ೮ ಊರುಗಳಲ್ಲಿ ೬ ಬಾದಾಮಿ ತಾಲೂಕಿನಲ್ಲಿಯೆ ಇರುತ್ತವೆ. ಮೆಟಗುಡ್ಡವೆಂಬುದು ಮುಧೋಳ ತಾಲೂಕಿನಲ್ಲಿಯೂ ಕಳ್ಳಿಗುಡ್ಡವೆಂಬುದು ಹುನಗುಂದ ತಾಲೂಕಿನಲ್ಲಿಯೂ ಇರುತ್ತವೆ. ಅನಂತಗಿರಿಯು ಬಾದಾಮಿ ತಾಲೂಕಿನಲ್ಲಿರುವುದನ್ನು ಇಲ್ಲಿ ಗಮನಿಸಬಹುದು. ಅಂದರೆ ಬಾದಾಮಿ ತಾಲೂಕಿನಿಂದಲೇ ಜನವಸತಿಯ ನೆಲೆಗಳು ಪ್ರಾರಂಭವಾದವೆಂದು ಹೇಳಬಹುದು. ಹಾಗೆಯೇ ಮುಚಖಂಡಿ(ಬಾಗ), ಚಿಂಚಖಂಡಿ(ಮುಧೋ), ಬಾಡಗಂಡಿ(ಬೀಳ), ಜಮಖಂಡಿ(ಜಮ), ಮದರಖಂಡಿ(ಜಮ) ಮತ್ತು ಹನಗಂಡಿ(ಜಮ)ಗಳಿಗೂ ಇದು ಮುಂದುವರಿದುದನ್ನು ಕಾಣುತ್ತೇವೆ.

ಇದೇ 'ಗುಡ್ಡ' ಎಂಬ ಅರ್ಥಕೊಡುವ ಗುಂದ, ಗುಂದಿ, ಗೊಂದಿ, ಕುಂದಿ ಉತ್ತಪದವಾಗಿರುವ ಊರುಗಳು ಬಾದಾಮಿ, ಹುನಗುಂದ, ಬಾಗಲಕೋಟೆ ತಾಲೂಕಗಳಲ್ಲಿಯೇ ಇರುವುದು ಒಂದು ವಿಶೇಷ. ಉದಾ: ನೀಲಗುಂದ(ಬಾದಾ), ಹುನಗುಂದ (ಹುನ), ನಕ್ಕರಗುಂದಿ(ಬಾಗ), ಸಾಲಗುಂದಿ (ಬಾಗ), ಲಾಯಗುಂದಿ(ಬಾದಾ), ನಿಂಬಲಗುಂದಿ(ಹುನ), ಸಂಗೊಂದಿ(ಬಾಗ), ಮತ್ತು ಬಲಕುಂದಿ (ಹುನ).

ಪಂಚಾಯತ ರಾಜ್ಯ

ಬಾಗಲಕೋಟೆ ಜಿಲ್ಲೆಯಲ್ಲಿ ಪಂಚಾಯತ ರಾಜ್ಯವು ಬಹು ಪ್ರಾಚೀನಕಾಲದಲ್ಲಿಯೆ ಇದ್ದಿತು. ಗ್ರಾಮಗಳು ನಿರ್ಮಾಣವಾಗುವದಕ್ಕೆ ಮೊದಲೆ, ಮಾನವನು ಅಲೆಮಾರಿಯಾಗಿದ್ದಾಗಲೆ ಈ ಪದ್ಧತಿ ಈ ಪ್ರದೇಶದಲ್ಲಿ ಇದ್ದಿತೆನ್ನುವುದಕ್ಕೆ ಆಧಾರಗಳು ದೊರೆಯುತ್ತವೆ. ಜನರು ತಮ್ಮ ತಮ್ಮಲ್ಲಿರುವ ನ್ಯಾಯವನ್ನು ತಾವೇ ನಿಭಾಯಿಸಿಕೊಳ್ಳುತ್ತಿದ್ದರು. ಗುಂಪಿನಲ್ಲಿ ಹಿರಿಯರಾದವರು ಒಂದೆಡೆ ಸೇರುತ್ತಿದ್ದರು. ಹೀಗೆ ಕೂಡುವದಕ್ಕೆ ಒಂದು ವಿಶಾಲವಾದ ಮರವನ್ನು ನೋಡಿ, ಅದರ ಕೆಳಗೆ ಒಂದು ಕಟ್ಟೆ ಕಟ್ಟುತ್ತಿದ್ದರು. ಅಲ್ಲಿ ತಮ್ಮ ನ್ಯಾಯವನ್ನು ನಿಭಾಯಿಸಿಕೊಳ್ಳುತ್ತಿದ್ದರು. ಯಾವ ಗಿಡದ ಕೆಳಗೆ ಇಂತಹ ಕಟ್ಟೆ ಇರುತ್ತಿದ್ದಿತೋ ಅದಕ್ಕೆ ಆ ಗಿಡದ ಕಟ್ಟೆ ಎಂದು ಕರೆಯುತ್ತಿದ್ದರು. ಕ್ರಮೇಣ ಅಲೆಮಾರಿತನ ಕಡಿಮೆಯಾಗಿ, ಇಂತಹ ಕಟ್ಟೆಯುಳ್ಳ ಸ್ಥಳಗಳಲ್ಲಿಯೆ ಸ್ಥಾಯಿಯಾಗಲು ತೊಡಗಿದ ಮೇಲೆ, ಆ ಗಿಡದ ಕಟ್ಟೆಯ ಹೆಸರೇ ಆ ಗ್ರಾಮಗಳಿಗೆ ಅಂಟಿಕೊಂಡವು. ಇಂತಹ ಅನೇಕ ಗ್ರಾಮನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿ ಇರುತ್ತವೆ.

ಉದಾ:

ಅರಳಿಕಟ್ಟಿ	(ಮುಧೋ)	ಆಲದಕಟ್ಟಿ	(ಬಾದಾ)	ಬೆನಕಟ್ಟಿ	(ಬಾದಾ)
ಚಿಂಚಲಕಟ್ಟಿ	(ಬಾದಾ)	ಜಾಲಿಕಟ್ಟಿ	(ಮುಧೋ)	ಬನ್ನಿಕಟ್ಟಿ	(ಬಾಗ)
ಬಸರಿಕಟ್ಟಿ	(ಬಾದಾ)	ಮತ್ತಿಕಟ್ಟಿ	(ಬಾದಾ)	ಹುಣಸಿಕಟ್ಟಿ	(ಬೀಳ)
ಹೊನ್ನಿಕಟ್ಟಿ	(ಬಾಗ)				

ಇಂತಹ ಕಟ್ಟಿಗಳು ವ್ಯಕ್ತಿಗಳ ಹೆಸರಿನಿಂದ, ಹಿರಿಯರ, ದೇವತೆಗಳ ಹೆಸರಿನಿಂದಲೂ ಇರುವದುಂಟು.
ಉದಾ:

ಚಿಮ್ಮನಕಟ್ಟಿ (ಬಾದಾ) ತಪಸಗಟ್ಟಿ (ಬಾದಾ)

ಊದು>ಉದಗಟ್ಟಿ (ಬಾಗ) ಬೆನಕನ>ಬೆನಕಟ್ಟಿ(ಬಾಗ)

ಜಮ್ಮನಕಟ್ಟಿ (ಬಾದಾ) –ಜಮ್ಮ ಎಂದರೆ ಉಂಬಳಿ. ಅಣ್ಣಪ್ಪ>ಅನಪಕಟ್ಟಿ(ಹುನ)

ಪಶು ಸಂಸ್ಕೃತಿ

ಬೇಟೆಯಾಡುತ್ತ ಹೋದಂತೆ ಪ್ರಾಣಿಗಳ ಸಂಖ್ಯೆ ಇಳಿಮುಖವಾದಂತೆ ಆಹಾರದ ಸಮಸ್ಯೆ ತಲೆದೋರಿತು. ಆಗ ಕೆಲವು ಸಾಧುಪ್ರಾಣಿಗಳನ್ನು ಪಳಗಿಸಿ ಪಶುಪಾಲನೆ ಪ್ರಾರಂಭಿಸಿದನು. ಹೀಗೆ (ಪಶು) ಹಸುಗಳಿಂದ ಆಹಾರ ಪಡೆದು ಗುಡ್ಡಗಳಲ್ಲಿ ವಾಸಿಸುತ್ತಿದ್ದ ಜನರಗುಂಪು ಗುಡ್ಡದಿಂದ ಕೆಳಕ್ಕೆ ಸರಿಯಿತು. ದಿನ್ನಿಗಳನ್ನು ಆಶ್ರಯಿಸಿತು. ಇದರ ಸಿಂಹಪಾಲು ಹುನಗುಂದ ತಾಲೂಕಿಗೆ ಸಲ್ಲುತ್ತದೆ. ಉತ್ತರಪದ 'ದಿನ್ನಿ' ಇರುವ ಊರುಗಳು ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು ೧೮ ಇವೆ.

ಇವುಗಳಲ್ಲಿ ೯ ಹುನಗುಂದ ತಾಲೂಕಿನಲ್ಲಿವೆ. ೬ ಬಾಗಲಕೋಟೆ, ೨ ಬೀಳಗಿ, ೧ ಮುಧೋಳ ತಾಲೂಕಿನಲ್ಲಿರುತ್ತವೆ(ಸ್ಥಳನಾಮ ವರ್ಗೀಕರಣ ನೋಡಿರಿ). ಹೆಸರಿಡುವಲ್ಲಿ ಇವರ ಸೌಂದರ್ಯಪ್ರಜ್ಞೆ ಬೆಳೆದಿರುವುದನ್ನು ಕಾಣಬಹುದಾಗಿದೆ. ಹುನಗುಂದ ತಾಲೂಕಿನಲ್ಲಿ ೫ ದಿನ್ನಿಗಳಲ್ಲಿ ಕಮಲಾಕಾರವನ್ನು ಕಂಡಿದ್ದಾರೆ. ಕಮಲದಿನ್ನಿ, (ಅ)ಬ್ಬೇಕಮಲದಿನ್ನಿ, ಚಿಂತಕಮಲದಿನ್ನಿ, ಜಾಕಮಲದಿನ್ನಿ, ಚೌಕಮಲದಿನ್ನಿ(ಹುನ) ಎಂದು ಅವನ್ನು ಹೆಸರಿಟ್ಟು ಕರೆದಿದ್ದಾರೆ. ಅಲ್ಲದೆ ಗೋವಿನದಿನ್ನಿ(ಬೀಳ), ಗೋಪಸಾನಿ(ಹುನ), ತುರುಮರಿ(ಹುನ), ಮುಂತಾಗಿ ಹೆಸರಿಸಿದರೂ ಇವುಗಳಲ್ಲಿ ಅವನ ವೃತ್ತಿಯ ಸೂಚನೆ ಕಂಡುಬರುವುದು. ಗೋವು ಸಂತಾನದ ದೃಷ್ಟಿಯಿಂದ ಎತ್ತು–ಆಕಳುಗಳನ್ನು, ಆಹಾರದ ದೃಷ್ಟಿಯಿಂದ ಹಾಲಿನ ಪದಾರ್ಥಗಳನ್ನು ಕೊಡುವುದು. ಒಟ್ಟಿನಲ್ಲಿ ಕೃಷಿನೆಲೆಗೊಳ್ಳಲು ಒಂದು ರೀತಿಯಿಂದ ಈ (ಹಸು) ಪಶುಪಾಲನೆ ಮೂಲಭೂತ ಆಧಾರವಾಯಿತು.

ಮಾನವ ಇನ್ನೂ ಮುಂದುವರಿದಾಗ ದಿನ್ನಿಯಿಂದ ಮಟ್ಟಿಗೆ ಪಯಣಿಸಿದ. ಮಟ್ಟಿಯೆಂದರೆ ಒಂದರ್ಥದಲ್ಲಿ ದಿನ್ನಿಯೇ ಆದರೂ ಸಾಗುವಳಿಗೆ ಯೋಗ್ಯವಾದ ಭೂಮಿಯುಳ್ಳ ಪ್ರದೇಶ. ಬಾಗಲಕೋಟೆ ತಾಲೂಕಿನಲ್ಲಿ ೫, ಬೀಳಗಿ ತಾಲೂಕಿನಲ್ಲಿ ೩, ಬಾದಾಮಿ ತಾಲೂಕಿನಲ್ಲಿ ೨, ಹುನಗುಂದ-ಮುಧೋಳ-ಜಮಖಂಡಿಗಳಲ್ಲಿ ತಲಾ ಒಂದೊಂದು ಇದ್ದು ಇಡೀ ಜಿಲ್ಲೆಯನ್ನು ವ್ಯಾಪಿಸಿದ್ದು ಕಂಡುಬರುತ್ತದೆ(ಸ್ಥಳನಾಮ ವರ್ಗೀಕರಣವನ್ನು ನೋಡಿರಿ). ಒಟ್ಟು ೧೩ ಮಟ್ಟಿಗಳಿವೆ. ಅಲ್ಲದೆ ಪಟ್ಟಿ-ವಟ್ಟಿ-ಮೆಟ್ಟಿ ಎಂಬ ಉತ್ತರಪದಗಳಿಂದ ಕೊನೆಗೊಳ್ಳುವ ೩ ಸ್ಥಳನಾಮಗಳಿವೆ-ಅವು ಕಡಪಟ್ಟಿ (ಬಾಗ, ಬಾದಾ, ಹುನ, ಜಮ), ವಡವಟ್ಟಿ(ಬಾದಾ), ಎಮ್ಮೆಟ್ಟಿ(ಹುನ). 'ಕಡಪಟ್ಟಿಯು ೪ ತಾಲೂಕುಗಳಲ್ಲಿ ಬಂದಿದೆ.

ಪಶುವಿಗಾಗಿ ಕೆಲವು ಋತುಗಳಲ್ಲಿ ಮಾತ್ರ ನೀರು-ಆಹಾರ ದೊರೆಯುತ್ತಿತ್ತು. ಇನ್ನು ಕೆಲವು ಋತುಗಳಲ್ಲಿ ನೀರು-ಆಹಾರಗಳ ಕೊರತೆಯುಂಟಾಗಿ ಇದನ್ನು ಪೂರೈಸುವ ಸಲುವಾಗಿ ಮಾನವ ಮತ್ತೆ ಆಲೋಚನೆ ಪ್ರಾರಂಭಿಸಿದ. ತನ್ನ ಪಶುಗಳಿಗಾಗಿ ಮೇವು ಲಭ್ಯವಿದ್ದಾಗ ನಿಸರ್ಗದಿಂದ ಸಂಗ್ರಹಿಸಿ ಒಂದೆಡೆ ಇಟ್ಟು ಅದನ್ನು ಇತರ ಪಶು ಹಾಗೂ ಪಶುಪಾಲಕರಿಂದ ರಕ್ಷಿಸಲು ಅಲ್ಲಿಯೇ ನೆಲೆಯೂರಿದನು. ತನ್ನ ಪಶುಗಳಿಗಾಗಿ ವಸತಿಯನ್ನು ಕಲ್ಪಿಸಿದನು. ಇಂತಹ ವಸತಿ ಕೇಂದ್ರಗಳಿಗೆ 'ಹಟ್ಟಿ' ಎಂದು ಕರೆದನು. ಈ ಹಟ್ಟಿಗಳಿಗೆ ಪೂರ್ವಪದವಾಗಿ ಅಂಕಿತನಾಮಗಳು ಇದ್ದು, ಹಟ್ಟಿಯ ಮಾಲಿಕನನ್ನು ಸೂಚಿಸುತ್ತವೆ. ಇವು ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು ೯ ಇವೆ(ಸ್ಥಳನಾಮ ವರ್ಗೀಕರಣವನ್ನು ನೋಡಿ). 'ಪಟ್ಟಿ' ಎಂಬ ಪದ 'ಹಟ್ಟಿ' ಎಂದಾಗಿದೆ. ಪಟ್ಟಿ ಎಂಬ ಉತ್ತರಪದವನ್ನು ಹೊಂದಿರುವ ಸ್ಥಳನಾಮಗಳು ಬಾಗಲಕೋಟೆ ಜಿಲ್ಲೆಯಲ್ಲಿ ನಾಲ್ಕು ತಾಲೂಕಗಳಲ್ಲಿ ಬಂದಿವೆ. ಜಮಖಂಡಿ, ಬಾಗಲಕೋಟೆ, ಬಾದಾಮಿ, ಹುನಗುಂದಗಳಲ್ಲಿ ತಲಾ ಒಂದರಂತೆ ಇವೆ, ಪಶುಗಳಿಂದ ಉತ್ಪಾದಿಸಿದ ಹಾಲಿನ ಹೆಸರಿನಿಂದ ಹಾಲಿಗೇರಿ(ಬಾದಾ), ತಮ್ಮನ ಪಶುಗಳ 'ದಡ್ಡಿ'ಯಿಂದ ತಮದಡ್ಡಿ (ಜಮ) ಎಂದೂ ಹಟ್ಟಿಗೆ ಸಂಬಂಧಿಸಿದಂತೆ ನೆಲೆಯನ್ನು ಕರೆದಿದ್ದಾನೆ. ದನಗಳ, ಅಥವಾ ಕುರಿಗಳ 'ದೊಡ್ಡಿ'ಗೆ ಗ್ರಾಮೀಣರು 'ದಡ್ಡಿ' ಎನ್ನುತ್ತಾರೆ. ಮುತ್ತತ್ತಿ (ಬಾಗ) ಇದು ಪ್ರಾಚೀನತೆಯನ್ನು ಸೂಚಿಸುವ ಹಟ್ಟಿಯಾಗಿದೆ.

ಮೂಲಭೂತ ಆವಶ್ಯಕತೆಗಳಲ್ಲಿ ನೀರು ಅತ್ಯಂತ ಪ್ರಮುಖವಾದುದು. ನೀರು ನಿಸರ್ಗದತ್ತ ಕೊಡುಗೆ. ಅದು ಲಭ್ಯವಿರುವ ಹಳ್ಳ, ಹೊಳೆ, ಕೆರೆಗಳು,ಇಲ್ಲದಂತಹ ಪ್ರದೇಶದಲ್ಲಿ ಮಾನವ ತಾನೇ ಬುದ್ಧಿವಂತಿಕೆಯಿಂದ ಕೃತಕ ಕೆರೆಗಳನ್ನು ನಿರ್ಮಿಸಿಯೋ ಬಾವಿಗಳನ್ನು ತೋಡಿಯೋ ನೀರನ್ನು ಪಡೆದಂತಿದೆ. ಹಾಗಾಗಿ ಕೆಸರಭಾವಿ(ಹುನ), ಮಧುಭಾವಿ(ಮುಧೋ), ಗೋಲಭಾವಿ(ಜಮ), ಸೂಳಿಭಾವಿ(ಹುನ) ಎಂದು ನೆಲಗಳನ್ನು ಹೆಸರಿಸಿದ್ದಾನೆ. ಉದಾ: ಯರನಕೆರೆ ದೇಸಾಯಿಕೆರೆ

ಸೂಳಿಕೆರೆ ಇಲ್ಲಿ ಮಾನವನ ಉಪಕಾರ ಸ್ಮರಣೆಯ ಗುಣ ಕಂಡುಬರುವುದು. ಇದು ಕೂಡಾ ಸಂಸ್ಕೃತಿಯ ಒಂದು ಭಾಗವೆ.

ನಿಸರ್ಗವನ್ನು ಅವಲೋಕಿಸಿದಾಗ ದಿನ್ನೆ, ಮಟ್ಟಿಗಳ ಅಡಿಗಳಲ್ಲಿ ಹಳ್ಳ-ಕೊಳ್ಳ ಸರೋವರಗಳು ಕಂಡುಬರುತ್ತವೆ. ದಿನ್ನೆಗಳ ಮೇಲೆ ಬಿದ್ದ ಮಳೆನೀರು ಸಹಜವಾಗಿ ಇಳಿಜಾರಿನ ಕಡೆಗೆ ಹರಿದು ಬರುವಾಗ ಇಕ್ಕಟ್ಟಿನ ಪ್ರದೇಶದಲ್ಲಿ ಹಳ್ಳ-ಕೊಳ್ಳಗಳನ್ನು ನಿರ್ಮಿಸಿದರೆ, ಸ್ವಲ್ಪ ತಗ್ಗಿರುವ ಪ್ರದೇಶದಲ್ಲಿ ಸರೋವರಗಳನ್ನು ನಿರ್ಮಿಸುತ್ತದೆ. ದಿನ್ನೆ, ಮಟ್ಟಿಗಳಲ್ಲಿ ವಾಸಿಸುತ್ತಿದ್ದ ಮಾನವ ನೀರಿನ ಆಶ್ರಯ ಅರಸಿ ಜಲ ಸಂಪನ್ಮೂಲಗಳಾದ ನಿಸರ್ಗ ನಿರ್ಮಿತ ಹಳ್ಳ-ಕೊಳ್ಳಗಳ ಅಕ್ಕ-ಪಕ್ಕಗಳಲ್ಲಿ ಜೀವನ ಪ್ರಾರಂಭಿಸಿದನು. ಅಲ್ಲಿ ತನಗೂ ಪಶುಗಳಿಗೂ ಅವಶ್ಯವಿರುವ ನೀರನ್ನು ಉಪಯೋಗಿಸುತ್ತಾ ಶಾಶ್ವತವಾಗಿ ನೆಲೆನಿಂತು ತನ್ನ ನೆಲೆಗಳನ್ನು ಜಲಸಂಬಂಧಿ ಹೆಸರುಗಳಿಂದ ಕರೆದನು. ಉದಾ: ಕೆಸರು ಇರುವ ಊರು 'ಕೆಸರನೂರು'(ಬಾಗ), ಕೆಸರಿನಕೊಪ್ಪ-ಕೆಸರಕೊಪ್ಪ(ಮುಧೋ), 'ಖಜ್ಜಿಡೋಣಿ' (ಬಾಗ), 'ಡೋಣಿ' ಇದು ನೀರನ್ನು ಸೂಚಿಸುವ ಪದ. ಅಮಲಝುರಿ(ಬೀಳ), ಗಿರಿಸಾಗರ(ಬಾಗ), ತಿಮ್ಮಸಾಗರ(ಬಾದಾ), ನವಿಲಹೊಳೆ(ಬಾದಾ), ಕಡಕೊಳ(ಜಮ), ಜಲಗೇರಿ(ಬಾದಾ), ಹುನಕುಂಟೆ (ಹುನ), ಸಿದ್ಧನಕೊಳ್ಳ(ಹುನ), ಕೋಡಿಹಾಳ(ಹುನ). ಇಲ್ಲಿಬಂದಿರುವ ಝುರಿ, ಸಾಗರ, ಹೊಳೆ ಕೆಸರು, ಕೊಳ, ಕೋಡಿ, ಇವು ಜಲವನ್ನು ನಿರ್ದೇಶಿಸುತ್ತವೆ. ಆದರೆ ಇವುಗಳು ನಿರ್ದಿಷ್ಟ ಇಲ್ಲವೆ ವಾರ್ಗಿಕಗಳ ಸ್ಥಾನದಲ್ಲಿ ನಿಯಮಿತವಾಗಿ ಬರದೆ ಒಮ್ಮೊಮ್ಮೆ ಉತ್ತರ ಪದವಾಗಿಯೂ ಒಮ್ಮೊಮ್ಮೆ ಪೂರ್ವಪದವಾಗಿಯೂ ಬರುತ್ತವೆ.

ಉದಾ: ನವಿಲಹೊಳೆ, ಕೆಸರಕೊಪ್ಪ, ಇಲ್ಲಿ 'ಹೊಳೆ' ಎಂಬ ಜಲವಾಚಿ ಉತ್ತರ ಪದದಲ್ಲಿದ್ದರೆ 'ಕೆಸರ' ಎಂಬ ಜಲವಾಚಿ ಪೂರ್ವಪದ ಸ್ಥಾನದಲ್ಲಿದೆ.

ಕೃಷಿ ಸಂಸ್ಕೃತಿ

ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳನ್ನು ಕುರಿತು ಎಷ್ಟೆಷ್ಟು ಚಿಂತನೆ ಮಾಡುತ್ತೇವೆಯೊ, ಆಳಕ್ಕಿಳಿಯುತ್ತೇವೆಯೊ ಅಷ್ಟಷ್ಟು ಅದರ ಪರಿಧಿ ವಿಸ್ತಾರಗೊಳ್ಳುತ್ತ ಹೋಗುತ್ತದೆ; ತಲಸ್ಪರ್ಶಿಯಾಗುತ್ತದೆ. ಇಲ್ಲಿಯ ಜನತೆ ನಿಸರ್ಗವನ್ನು ಬಹುವಾಗಿ ಪ್ರೀತಿಸಿದ್ದಾರೆ; ಜೀವಂತಿಕೆಯನ್ನು ಮೆಚ್ಚಿಕೊಂಡಿದ್ದಾರೆ; ನಿಸರ್ಗದಲ್ಲಿ ಬೆರೆತುಹೋಗಿದ್ದಾರೆ. ಅಂತೆಯೆ, ಎಪ್ಪತ್ತಕ್ಕಿಂತ ಹೆಚ್ಚು ಗ್ರಾಮಗಳು ಸಸ್ಯವರ್ಗವನ್ನು ಪ್ರತಿನಿಧಿಸುತ್ತವೆ. ಇಲ್ಲಿಯ ಜನರು ವನಸ್ಪತಿಗಳಲ್ಲಿ ಔಷಧೀಯ ಗುಣವನ್ನು ಕಂಡುಕೊಂಡಿದ್ದಾರೆ; ಆಹಾರವನ್ನು ಪಡೆದಿದ್ದಾರೆ; ಪಾವಿತ್ರ್ಯತೆಯನ್ನು ಅರಗಿಸಿಕೊಂಡಿದ್ದಾರೆ; ನಿತ್ಯೋಪಯುಕ್ತತೆಯನ್ನು ಅರಿತಿದ್ದಾರೆ. ಸೌಂದರ್ಯಪ್ರಜ್ಞೆಯನ್ನು ಮೆರೆದಿದ್ದಾರೆ. ಇವನ್ನು ತಮ್ಮ ಊರುಗಳಿಗೆ ಹೆಸರಿಸಿದ್ದಾರೆ.

[illegible]

ತುಳಸಿಯು ಎಲ್ಲರಿಗೂ ಗೊತ್ತಿರುವ ಔಷಧೀಯ ವನಸ್ಪತಿ, ಇದು ಹೆಚ್ಚಾಗಿ ಬೆಳೆಯುವ ಪ್ರದೇಶಕ್ಕೆ ಈ ಹೆಸರನ್ನೇ ಇರಿಸಿದ್ದಾರೆ. ತುಳಸಿಗೇರಿ(ಬಾಗ), ಚೊಳಚಗುಡ್ಡ(ಬಾದಾ) ಈ ಹೆಸರಿನಿಂದಲೇ ಪ್ರಸಿದ್ಧವಾಗಿವೆ. ಬೇವು ದಿವ್ಯೌಷಧ. ಇದು ತನ್ನ ವಿವಿಧ ಹೆಸರುಗಳಿಂದ ಕರೆಸಿಕೊಂಡಿದೆ. ಬೇವಿನಕಟ್ಟಿ(ಬಾಗ), ಬೇವೂರು(ಬಾಗ), ನಿಂಬಲಗುಂದಿ(ಹುನ), ಬೇವಿನಹಾಳ(ಹುನ) ಇವನ್ನು ಇಲ್ಲಿ ಹೆಸರಿಸಬಹುದು. ಹಾಗೆಯೆ ಲೋಳಸರವು ಒಳಪೆಟ್ಟಿಗೆ ಉತ್ತಮ ಮದ್ದು. ಲವಳಸರವೆಂದೇ ಒಂದು ಊರಿನ ಹೆಸರಿದೆ–ಹಂಗರು, ಚಿಕ್ಕಲ ಇವು ಹುಲ್ಲಿನ ಜಾತಿಯ ಔಷಧಗಳು. ಹಂಗರಗಿ (ಬಾದಾ) ಚಿಕ್ಕಲಕಿಗಳು(ಜಮ) ಇವನ್ನು ಪ್ರತಿನಿಧಿಸುತ್ತವೆ. ನಾವಲ ಎಂಬುದು ಒಂದು ಔಷಧೀಯ ಗಡ್ಡೆ. ನಾವಲಗಿಯು(ಜಮ) ಇದರಿಂದಲೆ ಹೆಸರು ವಾಸಿಯಾಗಿದೆ. ಹಾಗೆಯೇ ಸೋರಗಾವಿಯು (ಮುಧೋ) ಸೋರೆಗುಂಬಳದಿಂದ ಹೆಸರು ಪಡೆದಿದೆ. ನಿತ್ಯೋಪಯೋಗಿ ಹಣ್ಣಿನ ಗಿಡಗಳಲ್ಲಿ ಹುಣಸೆಹಣ್ಣಿಗೆ ಈ ಜಿಲ್ಲೆಯ ಜನ ಹೆಚ್ಚಿನ ಮಹತ್ವಕೊಟ್ಟಿದ್ದಾರೆ. ಉದಾ: ಹುಣಸಿಕಟ್ಟಿ(ಜಮ), ಚಿಂಚಲಕಟ್ಟಿ(ಬಾದಾ), ಚಿಂಚಖಂಡಿ (ಮುಧೋ) ಕೇವಲ ಹಣ್ಣಿಗಾಗಿ ಪ್ರಸಿದ್ಧವಾದುದು ನೇರಲೆಹಣ್ಣು. ಉದಾ: ಜಂಬಗಿ ಎನ್ನುವವೇ ಜಿಲ್ಲೆಯಲ್ಲಿ ಐದು ಇವೆ. ಜಮಖಂಡಿ ತಾಲೂಕಿನಲ್ಲಿ ಎರಡು, ಮುಧೋಳ ತಾಲೂಕಿನಲ್ಲಿ ಮೂರು. ಜಂಬುಖಂಡಿ(ಜಮ), ನೀರಲಕೇರಿ(ಬಾಗ), ನೀರಲಕೇರಿ (ಬಾದಾ) ಜಂಬಲದಿನ್ನಿ (ಹುನ). ಶ್ರೀಗಂಧ, ಬನ್ನಿ, ತುಳಸಿ, ಅರಳೆ ಗಿಡಗಳು ಪವಿತ್ರವಾದವುಗಳು. ಇವುಗಳನ್ನೂ ಗ್ರಾಮನಾಮಗಳಲ್ಲಿ ಕಂಡುಕೊಳ್ಳುತ್ತೇವೆ. ಉದಾ: ರೋಣಿಹಾಳ(ಬೀಳ), ರೋಹಿಣಿ> ರೋಣಿ=ಶ್ರೀಗಂಧ. ಬನ್ನಿಕಟ್ಟೆ(ಬಾಗ), ಬನ್ನಿದಿನ್ನೆ(ಬಾಗ), ಬನ್ನಿಹಟ್ಟಿ(ಹುನ), ತುಳಸಿಗೇರಿ (ಬಾಗ), ಚೊಳಚಗುಡ್ಡ(ಬಾದಾ), ಅರಳಿಕಟ್ಟಿ(ಮುಧೋ).

ರೈತಾಪಿ ಜನರು ಬೇವಿನ ಕಟ್ಟಿಗೆಯನ್ನು ಮನೆಗಳಿಗೆ, ಜಾಲಿಯ ಕಟ್ಟಿಗೆಯನ್ನು, ಒಕ್ಕಲುತನಕ್ಕೆ ಬಳಸಿಕೊಂಡಿದ್ದರೆ, ಬಿದಿರನ್ನು ಎರಡರಲ್ಲಿಯೂ ಬಳಸಿದ್ದಾರೆ. ಹೀಗಾಗಿ ಅವುಗಳು ಬೆಳೆಯಲು ಆಸ್ಪದಮಾಡಿಕೊಟ್ಟಿದ್ದಾರೆ. ಹೆಚ್ಚು ಬೆಳೆದಲ್ಲಿ ಅವೇ ಹೆಸರನ್ನಿರಿಸಿದ್ದಾರೆ. ಉದಾ: ಬೇವಿನಕಟ್ಟಿ(ಬಾಗ), ಬೇವೂರ(ಬಾಗ), ಬೇವಿನಹಾಳ(ಹುನ), ಜಾಲಿಕಟ್ಟಿ(ಮುಧೋ), ಜಾಲಿಬೇರ(ಮುಧೋ), ಜಾಲಿಹಾಳ (ಬಾದಾ); ಬಿದರಿ (ಜಮ). ದೊಡ್ಡಮರವಾಗುವ ಆಲದ ಮರವನ್ನೂ ಆಶ್ರಯಿಸಿ ಊರು ಕಟ್ಟಿ ಕೊಂಡಿದ್ದಾರೆ. ಉದಾ: ಆಲಗೂರ(ಜಮ), ಆಲಬಾಳ(ಜಮ), ಆಲೂರ(ಬಾಗ).

ನೈಸರ್ಗಿಕತೆಯಿಂದ ಕೃತ್ರಿಮತೆಯ ಕಡೆಗೆ ಬಂದಾಗಲೇ ಪ್ರಗತಿಯ ಪುನರುತ್ಥಾನ; ಸಂಸ್ಕೃತಿಯ ಆರಂಭ. ಅಂದರೆ ಮನುಷ್ಯ ಆಹಾರ ಧಾನ್ಯಗಳನ್ನು ಬೆಳೆಯಲು ತೊಡಗಿದಾಗಿನಿಂದ, ಒಕ್ಕಲುತನ ಪ್ರಾರಂಭವಾದಂದಿನಿಂದ. ಹೀಗೆ ಜಾನಪದ ಸಂಸ್ಕೃತಿಗೆ ಮೂಲವಾದುದು ಮೇಟಿ. ಇದು ಶಿಷ್ಟ ಸಂಪ್ರದಾಯದವರಿಗೂ ಮೂಲವಾಗಿದೆ. ಒಕ್ಕಲುತನ ಮಾಡುವ ನೆಲೆಗಳನ್ನು ತಾನು ಬೆಳೆಯುವ

ಆಹಾರ ಧಾನ್ಯಗಳ ಹೆಸರುಗಳಿಂದ ಕರೆದಿದ್ದಾನೆ. ಉದಾ: ಗುಳಬಾಳ (ಬಾಗ), ಅಕ್ಕಿಮರಡಿ(ಮುಧೋ), ಕಡ್ಲಿಮಟ್ಟಿ(ಬಾಗ), ಉತ್ತೂರು(ಮಧೋ), ಹುಲಸಗೇರಿ(ಬಾದಾ), ಬಾಡಗಿ(ಬೀಳ), ಬಾಡಗಂಡಿ(ಬೀಳ), ಇದು ವ್ಯವಸಾಯ ಯೋಗ್ಯತೆಯನ್ನು ತಿಳಿಸುತ್ತದೆ.

ಇನ್ನು ಮಾನವ ತಾನು ಸಿದ್ಧಪಡಿಸಿಕೊಳ್ಳುವ ಆಹಾರ ಪದಾರ್ಥದ ಹೆಸರಿಂದ ನೆಲೆಯನ್ನು ಕರೆದ್ದಿದಾನೆ. ಇಂಥವು ಒಟ್ಟು ೩ ಇವೆ. ಇವು ಹುನುಗುಂದ ತಾಲೂಕಿನಲ್ಲಿರುವುದು ವಿಶೇಷ. ಅವು-ಅಂಬಲಿಕೊಪ್ಪ, ಗಂಜಿಹಾಳ, ಚಟ್ನಿಹಾಳ. ಆಹಾರ ಧಾನ್ಯಗಳಿಗೆ ಸಂಸ್ಕಾರ ನೀಡಿ ಆಹಾರ ಪದಾರ್ಥಗಳನ್ನಾಗಿ ಮಾಡಿಕೊಳ್ಳುವ ಪೂರ್ವಕಾಲದಲ್ಲಿ ಹೀಗೆ ಕರೆದ ನೆಲೆಗಳು ಅಂದರೆ ಕೌಟುಂಬಿಕ ಜೀವನದ ಪ್ರಾರಂಭಿಕ ಹಂತವಾಗಿರಬೇಕು.

ಕೌಟುಂಬಿಕ ಜೀವನ ಪ್ರಾರಂಭಿಸಿದ ಮಾನವ ತನ್ನ ಉಪಯೋಗಕ್ಕಾಗಿ ನಾಯಿ, ಗಿಳಿ, ಹಂಸ, ಕೋಣ, ಎತ್ತು ಮುಂತಾದ ಪ್ರಾಣಿ-ಪಕ್ಷಿಗಳನ್ನು ಸಾಕಿದನು. ತನ್ನ ನೆಲೆಗಳನ್ನು ಪ್ರತ್ಯೇಕವಾಗಿ ಗುರುತಿಸಲು ಸಾಕಿದ ಪ್ರಾಣಿ-ಪಕ್ಷಿಗಳ ಹೆಸರಿನಿಂದ ಕರೆದಿದ್ದಾನೆ-ಕೊಣ್ಣೂರು(ಜಮ,ಹುನ), ಶುಕನಾದಗಿ (ಬಾಗ), ಸುನಗ(ಬೀಳ), ತುರಮರಿ(ಹುನ), ತುರುಡಗಿ(ಹುನ), ಗೋವಿನಹಾಳ(ಹುನ). ಕೋಣ, ಶುಕ, ಸುನಗ, ತುರುಗಳು ಮಾನವನಿಗೆ ಒಂದಿಲ್ಲ ಒಂದು ರೀತಿಯಲ್ಲಿ ಉಪಯೋಗವಾಗುತ್ತವೆ. ಸೊನಗ>ಸುನಗ ಅಂದರೆ ನಾಯಿಯು ನಂಬಿಗಸ್ಥ ಪ್ರಾಣಿಯಾಗಿದ್ದು, ಕಳ್ಳರಿಂದ ರಕ್ಷಿಸಲು, ಕುರಿಗಳನ್ನು ತೋಳಗಳಿಂದ ರಕ್ಷಿಸಲು ಕಾವಲುಗಾರನಾಗಿ ಉಪಯೋಗವಾಯಿತು. ಅದರಂತೆ ಕೋಣಗಳನ್ನು ನೀರೆತ್ತುವ, ಗಾಣ ತಿರುಗುವ, ಮುಂತಾದ ಕೆಲಸಗಳಿಗೆ ಉಪಯೋಗಿಸಿದನು. ಇನ್ನು ತುರುಗಳು (ಗೋವು) ಅವನ ಆಹಾರ ಪದಾರ್ಥಗಳಿಗೆ, ಆರ್ಥಿಕತೆಗೆ ಸಹಾಯವಾದವು. ಇವುಗಳ ಹೆಸರಿರುವ ನೆಲೆಗಳು ಹೆಚ್ಚಾಗಿ ಹುನಗುಂದ ತಾಲೂಕಿನಲ್ಲಿವೆ.

ಪಳಗದೇ ಇರುವ, ಸ್ವತಂತ್ರವಾಗಿ ಗುಡ್ಡ, ಅಡವಿಗಳಲ್ಲಿ ವಾಸಿಸುವ ಪ್ರಾಣಿಗಳನ್ನು ಕಂಡಮಾನವ ಅವುಗಳ ಹೆಸರಿನಿಂದ ಕರೆದ ಊರುಗಳಿವೆ. ಉದಾ: ತೋಳಮಟ್ಟಿ(ಬೀಳ), ಕರಡಿಗುಡ್ಡ(ಬಾದಾ), ಕರಡಿ(ಹುನ), ಹುಲ್ಯಾಳ(ಜಮ) ಇವು ಮಾನವನಿಗೆ ಉಪಕಾರಿಯಲ್ಲದ ಅಪಾಯಕಾರಿ ಪ್ರಾಣಿಗಳು. ಇನ್ನು ಸ್ವತಂತ್ರವಾಗಿ ಹಾರಾಡಬಲ್ಲ ಪಕ್ಷಿಗಳಿರುವ ಊರುಗಳು-ಬಾವಲತ್ತಿ(ಬೀಳ), ಗರುಡದಿನ್ನಿ (ಬೀಳ), ಗುಬ್ಬೇರಕೊಪ್ಪ(ಬಾದಾ), ಕೌಜಗನೂರು (ಹುನ), ಕಾಕನೂರು(ಬಾದಾ), ನವಿಲಹೊಳೆ (ಬಾದಾ) ಎಂದು ಗುರುತಿಸಿದನು. ಇಲಿಗಳಿರುವ ಊರು ಇಲಿಹಾಳ(ಹುನ,ಬಾಗ), ಓತಿಕಾಟ ಇರುವ ಊರು ಓತಗೇರಿ (ಹುನ), ಇವಲ್ಲದೆ- ಮಣಿನಾಗರ ಹಾವು, ಕರಡಿ ಇವುಗಳನ್ನು ಆಡಿಸಿ ಜನರನ್ನು ರಂಜಿಸಿ ತನ್ನ ಉಪಜೀವನ ನಡೆಸಿದನು. ಈ ಪ್ರಾಣಿಗಳ ಹೆಸರಿರುವ ಊರುಗಳು ಬಾದಾಮಿ ತಾಲೂಕಿನಲ್ಲಿವೆ.

ನೀರಿನ ಸೌಲಭ್ಯವಿದ್ದಲ್ಲಿ ಕೆಲವು ಕುಟುಂಬಗಳು ಒಂದು ಗೂಡಿ ಜೀವಿಸುತ್ತಿದ್ದ ನೆಲೆಗಳನ್ನು 'ಕೊಪ್ಪ' ಎಂದು ಕರೆದನು. ಅವು– ಕಳಸಕೊಪ್ಪ(ಬಾಗ), ಬಿಸನಾಳಕೊಪ್ಪ(ಹುನ), ಮುಮ್ಮರಡಿಕೊಪ್ಪ (ಬಾದಾ), ಬೆಳವಲಕೊಪ್ಪ(ಬಾದಾ), ಕರ್ಲಕೊಪ್ಪ(ಬಾದಾ) ಒಮ್ಮೊಮ್ಮೆ ಈ ಕೊಪ್ಪದಲ್ಲಿರುವ ಬಲಿಷ್ಠನಾದ ವ್ಯಕ್ತಿಯ ಹೆಸರಿನಿಂದ ಆ ನೆಲೆಯನ್ನು ಕರೆದನು. ಉದಾ: ಸೋಮನಕೊಪ್ಪ(ಬಾದಾ), ಯರಗೊಪ್ಪ (ಬಾದಾ), ಈ ಕೊಪ್ಪಗಳು ಹಳ್ಳಿಗಳಿಗಿಂತ ಚಿಕ್ಕ ಹಾಗೂ ಪ್ರಾಚೀನ ಎನಿಸುತ್ತವೆ. ಅಲ್ಲದೆ ಇಲ್ಲಿ ಯಾವುದಾದರೂ ಒಂದು ವೃತ್ತಿಯನ್ನು ಮಾಡುವ ಜನರು ಇರುವುದನ್ನು ಕಾಣುತ್ತೇವೆ. ಚಿನಿವಾಲಕೊಪ್ಪ (ಬೀಳ), ಕಾಡರಕೊಪ್ಪ(ಬಾದಾ) ಅಗಸರಕೊಪ್ಪ(ಬಾದಾ), ಗುಬ್ಬೇರಕೊಪ್ಪ (ಬಾದಾ). ಬಾದಾಮಿ ಯಲ್ಲಿಯೇ ೩ ಕೊಪ್ಪಗಳಿವೆ. ಇನ್ನು ಹಳ್ಳಗಳ ಪಕ್ಕದಲ್ಲಿ ನೆಲೆನಿಂತುದು ಹಳ್ಳಿಯಾಯಿತು. ಉದಾ: ಕುಲಹಳ್ಳಿ(ಜಮ), ಹಳ್ಳಿಯನ್ನು 'ಹಾಳ' ಎಂತಲೂ ಕರೆದಿದೆ. ಇದು ವ್ಯವಸಾಯ ಪ್ರಧಾನವಾಗಿದ್ದಾಗಿದೆ. ಜೊತೆಗೆ ವ್ಯವಸಾಯೋಪಕರಣ ತಯಾರಕರು ಹಾಗೂ ವ್ಯವಸಾಯೋತ್ಪನ್ನಗಳಿಂದ ಇತರ ವಸ್ತುತಯಾರಕರು ಇಲ್ಲಿ ನೆಲೆಸಿದ್ದು ಅವರ ಹೆಸರುಗಳಿಂದ ಹಳ್ಳಿಗಳನ್ನು ಕರೆಯಲಾಗಿದೆ. ಉದಾ– ರಂಜಣಗಿ(ಮುಧೋ) ಕುಂಬಾರಹಳ್ಳ (ಜಮ), ಕಂಬಳಿಹಾಳ(ಹುನ), ಗಾಣದಾಳ(ಹುನ), ಮುಂತಾದವು.

ಒಂದೇ ಸಂತತಿಯಿಂದ ಬೆಳೆದು, ಒಂದೇ ಮನಸ್ಥಿತಿ ಹಾಗೂ ಒಂದೇ ವೃತ್ತಿಕೈಗೊಂಡವರು, ಒಂದೇ ರೀತಿಯ ಪದ್ಧತಿಗಳನ್ನು ಜೀವನದಲ್ಲಿ ಅನುಸರಿಸಿ, ಒಂದು ಜನಾಂಗ ಎನಿಸಿಕೊಂಡು ಇತರರಿಗಿಂತ ಭಿನ್ನವಾಗಿ ಬದುಕುವರು. ಇಂತಹ ವಿವಿಧ ಜನಾಂಗಗಳು ನೆಲೆಸಿದ ಸ್ಥಳಗಳಿಗೆ ಆಯಾ ಜನಾಂಗಳ ಹೆಸರಿಟ್ಟು ಕರೆದಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ವಿವಿಧ ಜನಾಂಗದವರಿದ್ದಾರೆ. ಆದುದರಿಂದ ಅವರ ಹೆಸರಿನಿಂದ ಕರೆದ ಊರುಗಳು ೨೦ಕ್ಕಿಂತ ಹೆಚ್ಚಾಗಿವೆ. ಅವುಗಳು: ಹಿಪ್ಪರು ಇರುವ ಊರು ಹಿಪ್ಪರಗಿ. ಅದರಂತೆ ಟಕ್ಕರು–ಟಕ್ಕೋಡ(ಜಮ), ದಾಸರು–ದಾಸರಟ್ಟಿ (ಜಮ), ಹಂಟರು–ಹಂಟರಗಲ್ಲು(ಬಾಗ), ಹೊನ್ನರು–ಹೊನರಳ್ಳಿ(ಬಾಗ), ನಕ್ಕರು–ನಕ್ಕರಗುಂದಿ(ಬಾಗ), ಕಬ್ಬಿಲರು–ಕಬ್ಬಲಗೇರಿ(ಬಾದಾ), ಹಂಗರು–ಹಂಗರಗಿ(ಬಾದಾ), ಗುಬ್ಬೇರರು–ಗುಬ್ಬೇರಕೊಪ್ಪ(ಬಾದಾ), ನಾಗರು–ನಾಗೂರು(ಜಮ), ಇತ್ಯಾದಿ(ಸ್ಥಳನಾಮ ವರ್ಗೀಕರಣ ನೋಡಿರಿ). ಇವರಲ್ಲದೆ ಅನೇಕ ಬುಡಕಟ್ಟಿಗೆ ಸೇರಿದ ಜನ ತಮ್ಮ ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದರೆಂದು ತೋರುತ್ತದೆ. "ಆಸ್ಟ್ರಿಕ್ ಜನಾಂಗಕ್ಕೆ ಸೇರಿದ ಮುಂಡರು, ಕೋಲರು"[೧] ಇವರನ್ನು ಇಲ್ಲಿ ಹೆಸರಿಸಬಹುದು. ಕೋಲೂರು, ಮುಂಡಗನೂರು ಇವು ಇವರ ಕುರುಹುಗಳು.

ಕೃಷಿ ಸಂಸ್ಕೃತಿ ಬೆಳೆದ ಸ್ಥಳದಲ್ಲಿ ಕೃಷಿಗೆ ಸಹಾಯಕವಾಗುವ ಉಪಕರಣಗಳನ್ನು ಜನರು ಮಾಡಿಕೊಳ್ಳಲು ಪ್ರಾರಂಭಿಸಿದರು. ಕೆಲವರು ಉಪಕರಣಗಳನ್ನು ಮಾಡುವುದನ್ನೆ ಮೂಲಕಸಬಾಗಿ

ಮಾಡಿಕೊಂಡರು. ಮೂಲವಸ್ತುಗಳು ಹೆಚ್ಚು ದೊರೆಯುವ ಸ್ಥಳಗಳಲ್ಲಿ ಆಯಾ ವಸ್ತುಗಳು ಉತ್ಪಾದನೆ ಆಗ ತೊಡಗಿದವು. ಇದರಿಂದ ಆಯಾ ಮೂಲವಸ್ತುಗಳಿಗೆ ಅನುಸರಿಸಿ ಆಯಾ ನೆಲೆಯನ್ನು ಕರೆಯ ತೊಡಗಿದರು, ಅಲ್ಲಿಯೇ ಕೈಗಾರಿಕೆಗಳನ್ನು ಸ್ಥಾಪಿಸಿದರು. ಹೊನ್ನೆ–ಹೊನ್ಯಾಳ (ಬೀಳ), ಹೊನ್ನೆ–ಹೊನ್ನಿಕಟ್ಟಿ(ಬಾಗ), ಕಳಸ(ಬಾಗ), ಬೆಳ್ಳಿಕಿಂಡಿ(ಬಾದಾ), ಹವಳಕೋಡ(ಬಾದಾ), ಸೊನ್ನ (ಬೀಳ), ವಜ್ಜರಮಟ್ಟಿ (ಮುಧೋ), ಚಿನಗುಂಡಿ(ಜಮ), ಚಿನ್ನಾಪುರ(ಹುನ), ಹೇಮವಾಡಗಿ (ಹುನ), ಹುನಗುಂದ(ಹುನ) ಇತ್ಯಾದಿ.

ಸಿದ್ಧವಸ್ತುಗಳನ್ನು ಬೇರೆ ಸ್ಥಳಗಳಿಗೆ ಸಾಗಿಸಿ ವ್ಯಾಪಾರ ಮಾಡುತ್ತಿರಬೇಕು. ಇದಕ್ಕೆ ಸಾಕ್ಷಿ ಎಂಬಂತೆ ಆಯಾ ದೊರೆಗಳ ಕಾಲದ ನಾಣ್ಯಗಳು ದೊರೆಕಿವೆ. ಶಾಸನಗಳಲ್ಲಿ ಐಯ್ಯಾವೊಳೆ ಐನೂರ್ವರು ಎಂದು ವರ್ತಕರ ಸಂಘಗಳ ಬಗ್ಗೆ ಉಲ್ಲೇಖವಿದೆ. ವ್ಯಾಪಾರ ಸಂಬಂಧಿ ಹೆಸರುಗಳನ್ನು ವ್ಯಾಪಾರ ಮಾಡುವ ನೆಲೆಗಳಿಗೆ ಕರೆದಿದ್ದಾರೆ. ಬಳ್ಳ–ಬಳ್ಳೂರು(ಬೀಳ), ಹಾಗ–ಹಾಗನೂರು(ಬಾದಾ), ಸಂಸ್ಥೆ–ಸಂಶಿ(ಬಾಗ), ಆಸಂಗಿ(ಬಾದಾ), ಗದ್ಯಾಣ–ಗದ್ದನಕೇರಿ(ಬಾಗ), ಕಂಬಳಿಹಾಳ(ಹುನ), ಗಡಿ ಸುಂಕಾಪೂರ(ಹುನ), ಇವು ಅಂಕಿ ಸಂಖ್ಯೆ, ಮಾಪು, ನಾಣ್ಯ, ವಸ್ತುಗಳ ಹೆಸರನ್ನು ಸೂಚಿಸುತ್ತವೆ.

ಮಾನವ ಒಂದುಕಡೆ ನೆಲೆನಿಂತ ಮೇಲೆ ಕೃಷಿಕೈಗೊಂಡು ಈ ಕೃಷಿಗೆ ಬಳಸುವ ಉಪಕರಣಗಳನ್ನು ಉಪಯುಕ್ತತೆಗೆ ಕೃತಜ್ಞತೆ ಸೂಚಿಸುವ ಸಲುವಾಗಿ ಪೂಜಿಸಿದನು. ಈಗಲೂ ಕೃಷಿಕರು ಕೃಷಿಉಪಕರಣ, ಭೂದೇವಿ, ಹಾಗೂ ದನಗಳು, ದನಗಳ ಹಟ್ಟಿಯನ್ನು ಪೂಜಿಸುತ್ತಾರೆ. ನೇಗಿಲು, ಕೊಡಲಿ, ಮೊದಲಾದ ಔದ್ಯೋಗಿಕ ಉಪಕರಣಗಳನ್ನು ಪೌರಾಣಿಕ ಪುರುಷರಾದ ಬಲರಾಮ, ಪರಶುರಾಮರು ಆಯುಧಗಳನ್ನಾಗಿ ಹೊಂದಿದ್ದಾರೆ. 'ಹಲ' ಎಂದರೆ ನೇಗಿಲು, ಇದನ್ನು ನಿರ್ದೇಶಿಸುವ ಊರುಗಳು ಬಾಗಲಕೋಟೆ ಜಿಲ್ಲೆಯಲ್ಲಿವೆ. ಹಲಕಿ(ಮುಧೋ), ಹಲಕುರ್ಕಿ(ಬಾದಾ), ಹಲಗಲಿ(ಮುಧೋ).

ಋಷಿ ಸಂಸ್ಕೃತಿ

ಪ್ರಾಚೀನ ಕಾಲದ ಮಾನವ, ಪ್ರಕೃತಿಯೇ ದೇವರೆಂದೂ ಅದರಿಂದ ದೊರೆಯುವ ಗಾಳಿ, ಬೆಳಕು, ನೀರು, ಆಕಾಶ, ಭೂಮಿ, ಹಾಗೂ ವೃಕ್ಷ ಇವುಗಳ ಉಪಯುಕ್ತತೆಯನ್ನು ಕಂಡುಕೊಂಡನು. ಜೊತೆಗೆ ಅವುಗಳ ಉಪಕಾರ ಸ್ಮರಣೆಗಾಗಿ ಕೃತಜ್ಞತೆಯಿಂದ ಪೂಜಿಸತೊಡಗಿದನು. ಪಂಚಭೂತಗಳ ಜೊತೆಗೆ ಪ್ರಾಣಿಗಳನ್ನು ಆರಾಧಿಸತೊಡಗಿದನು. ಯಜ್ಞ–ಯಾಗಗಳನ್ನು ಮಾಡಿದನು. ಲಭ್ಯವಿದ್ದ ಭೂತಗಳ ನೆಲೆಗಳಿಗೆ ಆಯಾಭೂತಗಳ ಹೆಸರನ್ನೇ ಕರೆದನು. ಉದಾ: ಗಿರಿಸಾಗರ(ಬೀಳ), ಹನಮಸಾಗರ (ಬಾದಾ), ಬಿಸಲದಿನ್ನಿ(ಹುನ), ಬಿಸನಾಳಕೊಪ್ಪ(ಹುನ), ಜಾಡರ ಅರಳಿಕಟ್ಟಿ(ಮುಧೋ), ಬನ್ನಿಕಟ್ಟಿ (ಬಾಗ), ಬಸರಿಕಟ್ಟಿ(ಹುನ), ಪ್ರಾಚೀನ ಕಾಲದಲ್ಲಿ ಮಾನವ ಯಜ್ಞಮಾಡಿರಲು ಊಹಿಸಬಹುದಾದ ಊರುಗಳೆಂದರೆ–ಯಜ್ಞ>ಜನ್ನ–ಜನ್ನವಾಡ>ಜನವಾಡ(ಜಮ) ಅಗ್ನಿ–ಇಂಗಳಗಿ(ಬಾಗ, ಮುಧೋ,

ಹುನ), ಹಳಿಂಗಳಿ(ಜಮ), ಬೂದಿಹಾಳ(ಬಾದಾ,ಬೀಳ,ಹುನ), ಇದ್ದಲಗಿ(ಹುನ) ಈ ಊರುಗಳ ಪೂರ್ವ ಪದಗಳಾದ ಜನ್ನ, ಇಂಗಳ, ಬೂದಿ, ಇದ್ದಲ, ಇವು ಅಗ್ನಿ ಹೊತ್ತಿಸಿರುವುದರ ಕುರುಹುಗಳಾಗಿವೆ. ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು ೮ ಬೂದಿಹಾಳಗಳಿವೆ. ಬೀಳಗಿ ತಾಲೂಕಿನಲ್ಲಿ ೨, ಬಾದಾಮಿ ತಾಲೂಕಿನಲ್ಲಿ ೩, ಹುನಗುಂದ ತಾಲೂಕಿನಲ್ಲಿ ೩ ಇವೆ. ಹಳಿಂಗಳಿ (ಜಮ) ಇದು ಪ್ರಾಚೀನ ಅಗ್ನಿ ಹೊತ್ತಿಸಿದ ಅಗ್ನಿ ನೆಲೆಯಾಗಿರುವುದನ್ನು ಸೂಚಿಸುವುದು.

ಗುಡಿ ಸಂಸ್ಕೃತಿ

ಪ್ರಕೃತಿಯನ್ನು ಪೂಜಿಸುತ್ತಿದ್ದ ಮಾನವನು ಗುಡುಗು, ಮಿಂಚು, ಸಿಡಿಲು, ಬಿರುಗಾಳಿಗಳನ್ನು ಕಂಡು ಭಯಪಟ್ಟನು. ಅಲ್ಲದೇ ಪ್ರಕೃತಿಯಲ್ಲಿಯ ವಿಕೋಪಗಳನ್ನು ಕಂಡು ಯಾವುದೋ ಅಗೋಚರ ಶಕ್ತಿಯು ಪ್ರಕೃತಿಯನ್ನು ಆಳುತ್ತದೆ ಇಲ್ಲವೆ ನಿಯಂತ್ರಿಸುತ್ತದೆ. ಎಂದು ಭಾವಿಸಿದನು. ಹಾಗಾಗಿ ಆ ಅಗೋಚರ ಶಕ್ತಿಗಳಿಗೆ ವಿವಿಧ ಕಾಲ್ಪನಿಕ ರೂಪ ನೀಡಿ, ಅವುಗಳೂ ತನ್ನಂತೆಯೇ ಎಂದು ಕಲ್ಪಿಸಿ ಅವುಗಳಿಗಾಗಿ ಮನೆಗಳನ್ನು (ದೇವಸ್ಥಾನ) ನಿರ್ಮಿಸಿದನು. ಹಾಗೂ ಆ ಶಕ್ತಿಗಳಿಗೆ ಶಿಲೆಗಳಲ್ಲಿ ಒಂದು ರೂಪನೀಡಿ, ಮನೆಗಳಲ್ಲಿ ಪ್ರತಿಷ್ಠಾಪಿಸಿ ಪೂಜಿಸ ತೊಡಗಿದನು. ಹೀಗೆ ಪೂಜಿಸಲ್ಪಡುವ ಶಕ್ತಿಯನ್ನು ಕ್ರಮೇಣ ಮುಂದಿನ ತಲೆಮಾರಿನವರು ದೇವರೆಂದು ಭಾವಿಸಿ ಅದಕ್ಕೊಂದು ಹೆಸರು ನೀಡಿದರು. ಆ ದೇವರ ಹೆಸರನ್ನೇ ಆಯಾನೆಲೆಗಳಿಗೆ ಕರೆಯುತ್ತಾ ಬಂದರು. ಬನಶಂಕರಿ(ಬಾದಾ), ಲವಳೇಶ್ವರ(ಬಾಗ), ಹನಮಾಪುರ(ಬಾಗ), ಲಿಂಗಾಪೂರ(ಬಾದಾ), ಶಿವಪೂರ(ಬಾದಾ), ಲೋಕಾಪೂರ(ಮುಧೋ), ಮಹಾಲಿಂಗಪೂರ(ಮುಧೋ) ಈ ಎಲ್ಲ ಊರುಗಳು ಹಳ್ಳಿಯನ್ನಾಗಲಿ ಕೊಪ್ಪವನ್ನಾಗಲಿ ಸೂಚಿಸುವುದಿಲ್ಲ. ಅಂದರೆ ಮಾನವ ವ್ಯವಸಾಯಕ್ಕೆ ಮಹತ್ವಕೊಟ್ಟಷ್ಟೇ ದೇವರುಗಳಿಗೆ ಮಹತ್ವ ಕೊಟ್ಟದ್ದು ತಿಳಿಯುತ್ತದೆ. ಇಲ್ಲಿ ಪುರುಷ ದೇವತೆಯಾದ ಶಿವನ ಇತರ ನಾಮಗಳಾದ ಲಿಂಗಪ್ಪ, ಲೋಕಪ್ಪ, ಇವೆ ಹೆಚ್ಚಾಗಿದ್ದು ಶೈವಧರ್ಮದ ಪ್ರಸಾರ ಹೆಚ್ಚಿರುವುದನ್ನು ತಿಳಿಯಬಹುದು. ಶಿವಪ್ಪ ಇರುವ ಊರು 'ಶಿವಪೂರ' ಲಿಂಗಪ್ಪನ ಊರು 'ಲಿಂಗಾಪೂರ' ಎಂದು ನೆಲೆಗಳನ್ನು ಕರೆದಿದ್ದಾರೆ.

ಆರಂಭದಲ್ಲಿ ನಿಸರ್ಗವೇ ದೇವರೆಂದು ಭಾವಿಸಿದವನು ಮುಂದೆ ಪರಲೋಕದ ಕಲ್ಪನೆಹೊಂದಿ, ಆ ಲೋಕದಲ್ಲಿ ಸ್ಥಾನ ಪಡೆಯುವ ಆಸೆಯಿಂದ ತಾನೇ ಕೆಲವೊಂದು ಕಟ್ಟಳೆಗಳನ್ನು ಹಾಕಿಕೊಂಡನು. ಅವು ಅಹಿಂಸೆ, ಸಹಕಾರ, ಉಪಕಾರಸ್ಮರಣೆ, ನಾಯಕತ್ವಜೀವನ ಮುಂತಾದವು. ಇವೇ ಮುಂದೆ ನೈತಿಕ ತತ್ವಾಚರಣೆಗಳಾಗಿ ಕೆಲವು ಜನರಿಂದ ಪಾಲಿಸಲ್ಪಟ್ಟವು. ಇವುಗಳನ್ನು ಒಪ್ಪಿಕೊಂಡು ತತ್ವಪ್ರತಿಪಾದನೆ ಮಾಡುವ ವ್ಯಕ್ತಿಗಳು ಹುಟ್ಟಿಕೊಂಡು (ಮತ, ಧರ್ಮಗಳ ಹುಟ್ಟಿಗೆ ಕಾರಣರಾದರು. ಉದಾ: ಶಂಕರ, ಬಸವ, ಮಧ್ವ ಮುಂತಾದವರು) ವಿಭಿನ್ನ ಪ್ರದೇಶಗಳಲ್ಲಿ ವಿಭಿನ್ನ ತತ್ವಗಳು

[illegible]

ಉದಿಸಿದವು. ವಿಭಿನ್ನ ಮತಗಳು ಹುಟ್ಟಿದವು. ಅವುಗಳಲ್ಲಿ ವೈದಿಕ, ಜೈನ, ವೀರಶೈವ, ಬೌದ್ಧ, ಮುಂತಾದವು. ಕ್ರಮೇಣ ಒಂದು ಧರ್ಮದ ಅತಿರೇಕ, ಅರೆ-ಕೊರೆಗಳು ಮತ್ತೊಂದು ಧರ್ಮದ ಹುಟ್ಟಿಗೆ ಕಾರಣವಾದವು. ಉದಾ: ವೈದಿಕ ಧರ್ಮದಲ್ಲಿಯ ಅತಿರೇಕಗಳ ಫಲವಾಗಿ ಬೌದ್ಧಧರ್ಮ ಅಸ್ತಿತ್ವಕ್ಕೆ ಬಂದಿತು. ವಿವಿಧ ಧರ್ಮಗಳ ಆಚರಣೆ ಬೇರೆಯಾದರೂ ಅವುಗಳ ಉದ್ದೇಶ ಒಂದೇ ಇರುವುದನ್ನು ಕಾಣುತ್ತೇವೆ. ನಂತರ ಮಾನವರು ತಾವು ನಂಬಿದ ದೇವರನ್ನು ಕುರಿತು ತಪಸ್ಸು, ಆರಾಧನೆಯನ್ನು ಮಾಡಿದರು. ಅಂತಹ ನೆಲೆಗಳಿಗೆ ತಪಸಕಟ್ಟೆ(ಬಾದಾ), ಮಹಾಕೂಟ(ಬಾದಾ), ಸಿದ್ನಾಳ(ಬಾಗ), ಪಾದನಕಟ್ಟೆ(ಬಾದಾ) ಸಿದ್ಧನಕೊಳ್ಳ(ಹುನ), ಸಿದ್ಧಾಪೂರ(ಜಮ,ಬೀಳ) ಎಂದು ಹೆಸರಿಸಿದರು. ಇಲ್ಲಿ ತಪಗೈದ ಸಿದ್ಧಿಪುರುಷರ ಗದ್ದುಗೆಗಳು ಇವೆ, ಈ ಗದ್ದುಗೆಗಳಿಗೆ ಇಂದೂ ಕೂಡಾ ಪೂಜೆ ಸಲ್ಲುತ್ತಿದ್ದು ಶೈವಧರ್ಮ ಕೇಂದ್ರಗಳಾಗಿವೆ. ಹಲವು ವರ್ಷಗಳ ಕಾಲ ಕರ್ನಾಟಕವನ್ನು ಮುಸ್ಲಿಂ ಮನೆತನಗಳು ಕರ್ನಾಟಕವನ್ನು ಆಳಿದವು. ಮುಸ್ಲಿಂ ಮತಾನುಯಾಯಿಗಳು ತಮ್ಮ ಪ್ರವಾದಿಗಳ ಹೆಸರುಗಳಿಂದ ನೆಲೆಗಳನ್ನು ಕರೆದರು. ಅಡಿಹುಡಿ(ಜಮ)-ಖಾಜಿಬೂದಿಹಾಳ(ಬಾದಾ), ಫಕೀರ ಬೂದಿಹಾಳ(ಬಾದಾ), ಸೈದಾಪುರ(ಮುಧೋ), ಅಮೀನಗಡ (ಹುನ), ಇಸ್ಲಾಂಪೂರ(ಹುನ), ಬಾದಾಮಿ ತಾಲೂಕಿನಲ್ಲಿಯೇ ಇಬ್ಬರು ಪ್ರವಾದಿಗಳ ಹೆಸರುಳ್ಳ ಬೂದಿಹಾಳಗಳಿವೆ. ಇನ್ನು 'ಇಸ್ಲಾಂಪೂರ'ವು ಧರ್ಮದ ಹೆಸರನ್ನು ನೇರವಾಗಿ ತಿಳಿಸುವುದು ಸೋಜಿಗದ ಸಂಗತಿ.

ದೇವರುಗಳ ಹಾಗೂ ಪ್ರವಾದಿಗಳ, ಧರ್ಮಗುರುಗಳ ಹೆಸರನ್ನು ಅಭಿಮಾನಕ್ಕಾಗಿ ತಮ್ಮ ಮಕ್ಕಳಿಗೆ ಅಂಕಿತನಾಮವಾಗಿ ಇಟ್ಟರು. ಈಗಲೂ ಮಗುವಿಗೆ ನಾಮಕರಣದ ಸಂದರ್ಭದಲ್ಲಿ ಮೊದಲು ಐದು ದೇವರುಗಳ ಹೆಸರು ಹೇಳಿ, ನಂತರ ಪ್ರತ್ಯೇಕವಾದ ಹೆಸರನ್ನು ಅಂಕಿತನಾಮವಾಗಿ ಕರೆಯುವರು. ಈ ದೇವರುಗಳ ಹೆಸರನ್ನು ಅಂಕಿತನಾಮವಾಗಿ ಹೊತ್ತವರು ವಿಶೇಷವಾಗಿ ಅಂದರೆ ವೀರ, ಶೂರ, ಸಾಹಸಿಗರಾಗಿದ್ದರೆ. ಸಮಾಜದಲ್ಲಿ ಶ್ಲಾಘನೀಯ ಕೆಲಸಕಾರ್ಯಗಳನ್ನು ಮಾಡಿದ್ದರೆ, ಮೌಲ್ಯಯುತ ತತ್ವಗಳಿಗಾಗಿ ಬದುಕಿದ್ದರೆ, ಅವರ ಹೆಸರಿನಿಂದ ಅವರ ನೆಲೆಗಳನ್ನು ಗುರುತಿಸಿದ್ದಾರೆ. ನಾಗನೂರು (ಬಾದಾ), ನರಸಾಪೂರು(ಬಾದಾ), ಜಕನೂರು(ಬಾದಾ), ರಾಮತೀರ್ಥ(ಜಮ) ರಾಮಪೂರ (ಜಮ), ಲಕಮಾಪೂರು (ಬಾದಾ), ಚಾಮಲಾಪುರ(ಹುನ), ಇಲ್ಲಿ ಮೊದಲಿನ ಎಲ್ಲ ನೆಲೆಗಳ ಹೆಸರು ಪುರುಷವಾಚಿಯಾಗಿವೆ. ಚಾಮಲಾಪುರ ಮಾತ್ರ ಸ್ತ್ರೀವಾಚಿಯಾಗಿದೆ. ಹುನಗುಂದ ತಾಲೂಕಿನಲ್ಲಿ ೨ ಸ್ತ್ರೀವಾಚಿಗಳಿವೆ. ಚಾಮಲಾಪುರ ಹಾಗೂ ಅರಸಿಬೀದಿ. ಸ್ತ್ರೀಲಿಂಗವಾಚಿಯಾಗಿದ್ದು ಕರ್ನಾಟಕದಲ್ಲಿ ಹಿಂದೆ 'ಭಗವತಿ' ದೇವಾಲಯಗಳಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಅಯ್ಯಾವೊಳೆಯ ಐನೂರ್ವರೆಂಬ ವರ್ತಕರು 'ಭಗವತೀಲಬ್ಧ ವರಪ್ರಸಾದ' ರಾಗಿದ್ದರು. ಬಂದಣಿಕೆಯ ಮಾಂಡಳಿಕ ಸೋವಿದೇವ ಎಂಬಾತನಿಗೆ 'ಭಗವತಿಯಂಕಕಾಱ' ಎಂಬ ಬಿರುದಿತ್ತು. ಕೇರಳದ 'ಪರೈಯ'

[illegible]

ಎಂಬ ಜನರಿಗೆ ಭಗವತಿಯು ದೈವವಾಗಿದ್ದು, ಅವಳಿಗಾಗಿ ಜಾತ್ರೆಯನ್ನು ಮಾಡುತ್ತಾರೆ. ಭಗವತಿ ಹಬ್ಬವು ಕೊಡಗಿನಲ್ಲಿ ಸಾಕಷ್ಟು ಪ್ರಖ್ಯಾತವಾಗಿದೆ. ಈ ಹಬ್ಬದಲ್ಲಿ ದುರ್ಗೆಯ ಮೆರವಣಿಗೆ ಜೊತೆ ನೃತ್ಯಗಳೂ ನಡೆಯುತ್ತವೆ. ದುರ್ಗೆಯೇ 'ಭಗವತಿ' ಎನ್ನುವುದಾದರೆ, ದುರ್ಗವ್ವ, ದ್ಯಾಮವ್ವ ದೇವತೆಗಳು ಪ್ರತಿಯೊಂದು ಊರಲ್ಲಿ ಕಾಣಸಿಗುತ್ತವೆ. ಕ್ರಿ.ಶ. ೧೦೬೩-೬೪ರಲ್ಲಿ ರಚಿತವಾದ 'ಸುಕುಮಾರ ಚರಿತ' ದಲ್ಲಿ ತಾರಾಭಗವತಿಯ ಉಲ್ಲೇಖ ಬಂದಿದೆ. ಬಳ್ಳಿಗಾವೆ, ಬನವಾಸಿ, ಕೋಳಿವಾಡಗಳಲ್ಲಿ 'ತಾರಾಭಗವತಿ' ವಿಗ್ರಹಗಳು ದೊರೆತಿವೆ. ಡಂಬಳದ ಒಂದು ಶಾಸನದಲ್ಲಿ ತಾರಾಭಗವತಿಯನ್ನು 'ತಥಾಗತನ' ಹೃದಯದಲ್ಲಿ ನೆಲೆಸಿರತಕ್ಕವಳು ಎಂದು ವರ್ಣಿಸಲಾಗಿದೆ. ಇಂಥ ಒಂದು 'ಭಗವತಿ' (ಬಾಗ) ಎಂಬ ನೆಲೆ ಬಾಗಲಕೋಟೆ ಜಿಲ್ಲೆಯಲ್ಲಿದೆ.

'ಗದ್ದೆಮ್ಮ' ಎಂಬ ದೇವತೆಯನ್ನು ಈಗಲೂ ಬಾದಾಮಿ ತಾಲೂಕ 'ಹುಲ್ಲಿಕೇರಿ'ಯಲ್ಲಿ ಪೂಜಿಸುತ್ತಾರೆ. ಅಲ್ಲಿಯ ಜನ ತಮ್ಮ ಮಕ್ಕಳಿಗೆ ಈಗಲೂ 'ಗದ್ದೆಮ್ಮ', 'ಗದ್ದೆಪ್ಪ' ಎಂದು ಹೆಸರು ಇಡುತ್ತಾರೆ. ಈ ದೇವತೆಯಿಂದ ಗದಿಹಾಳ>ಗದ್ಯಾಳ(ಜಮ) ಎಂಬ ಹೆಸರು ಬಂದಿರಬೇಕು. ಗದ್ದೆಪ್ಪನಿರುವ ಊರು 'ಗದ್ದನಕೇರಿ'ಯಾಗಿರಬೇಕು. ಇದು ಬಾಗಲಕೋಟೆ ತಾಲೂಕಿನಲ್ಲಿ ಇದೆ.

ಸಾಂಕ್ರಾಮಿಕ ರೋಗಗಳಾದ-ಸಿಡುಬು, ಮೈಲಿಬೇನೆ, ಕಾಲರಾ ಮುಂತಾದ ರೋಗಗಳಿಗೆ ಕ್ಷುದ್ರದೇವತೆ(ಶಕ್ತಿ)ಗಳಾದ ಮರುಗಮ್ಮ, ಮಾರಮ್ಮ, ದುರಗಮ್ಮ, ಚೌಡಮ್ಮ ಇತ್ಯಾದಿ ದೇವತೆಗಳೇ ಕಾರಣವೆಂದೂ ಅವುಗಳ ಕೃಪೆ ಪಡೆಯಲೆಂದೂ ಅವುಗಳ ಮೂರ್ತಿಮಾಡಿ ಈಗಲೂ ಊರ ಅಗಸಿ ಹೊರಗೆ ಇಟ್ಟು ಗುಡಿ ಕಟ್ಟುವರು. ಇನ್ನು ಕೆಲವರು ಸುಣ್ಣ-ಬಣ್ಣ ಬಳಿದ ಗುಂಡುಕಲ್ಲುಗಳೇ ದೈವಗಳೆಂದು ಪೂಜಿಸುತ್ತಾರೆ. ಈ ದೇವತೆಗಳ ಹೆಸರಿನಿಂದ ಆಯಾ ಊರನ್ನು ಕರೆದಿದ್ದಾರೆ. ಈ ದೇವತೆಗಳ ಹೆಸರನ್ನು ತಮ್ಮ ಮಕ್ಕಳಿಗೂ ಈಗಲೂ ಇಡುತ್ತಾರೆ. ಈ ದೇವತೆಗಳ ಹೆಸರಿನಿಂದ ಕರೆಯಲ್ಪಡುವ ಊರುಗಳು ಬಾಗಲಕೋಟೆ ತಾಲೂಕಿನಲ್ಲಿವೆ. ಉದಾ: ಮಾರಾಪೂರ, ಚೌಡಾಪೂರ, ಭೈರಮಟ್ಟಿ, ದೇವಲಾಪೂರ, ದೇವನಾಳ, ಭಗವತಿ ಮುಂತಾದವು.

ಪುರಾಣ ಸಂಸ್ಕೃತಿ

ರಾಮಾಯಣವನ್ನು ನೆನಪಿಸುವ 'ರಾಂಪೂರ-ಲಕಮಾಪೂರ-ಸೀತಿಮನಿ, ರಾಘಾಪೂರ, ಹನಮನೇರಿ, ಹನಮಸಾಗರ ಎಂಬ ಊರುಗಳು ಬಾಗಲಕೋಟೆ ಜಿಲ್ಲೆಯಲ್ಲಿವೆ. ಜಮಖಂಡಿ ತಾಲೂಕಿನಲ್ಲಿ ಹೊಯ್ಸಳರ ಕಾಲದಲ್ಲಿ (೧೧ನೆಯ ಶತಮಾನ) ನಿರ್ಮಿತವಾದ 'ರಾಮತೀರ್ಥ' ಎಂಬ ಕ್ಷೇತ್ರವಿದ್ದು ಇಲ್ಲಿ ಲಿಂಗ-ನಂದಿಗಳಿವೆ. ಈ ಕ್ಷೇತ್ರಗ್ರಾಮಕ್ಕೆ ರಾಮತೀರ್ಥವೆಂದೇ ಹೆಸರಿದೆ. ಇದು ಶೈವ ಸಂಸ್ಕೃತಿಯನ್ನು ಸೂಚಿಸುತ್ತದೆ. ಈ ಭಾಗದಲ್ಲಿ ಶೈವರ ಸಂಖ್ಯೆ ಹೆಚ್ಚಾಗಿದೆ. ಸಂಸ್ಥಾನಿಕರ ಕಾಲದಲ್ಲಿ (೧೯ನೆಯ ಶತಮಾನ) ರಬಕವಿ-ಬನಹಟ್ಟಿಗಳ ಮಧ್ಯದಲ್ಲಿ ಒಂದು ರಾಮಪುರವು

ನಿರ್ಮಾಣವಾಯಿತು. ಜನರು ವಲಸೆ ಬಂದುದರಿಂದ ಸಾಂಗಲಿ ಹಾಗೂ 'ರಬಕವಿ' ಸಂಸ್ಥಾನಿಕರು ಅವರಿಗೆ ಸ್ಥಾನಕೊಟ್ಟು ಆಶ್ರಯ ನೀಡಿದರು. ಮತ್ತು ತಮಗೆ ಇಷ್ಟವಾದ ರಾಮನ ಹೆಸರನ್ನು ಆ ಊರಿಗೆ ಇರಿಸಿದರು. ಇಲ್ಲಿ ನೇಕಾರ ವಸತಿ ಹೆಚ್ಚಾಗಿದೆ. ಆಲಮಟ್ಟಿಯ ಹತ್ತಿರ 'ರಾಮಪುರ' 'ಸೀತಿಮನಿ'ಗಳಿದ್ದು, ಇವೆರಡು ಗ್ರಾಮಗಳು ಈಗ ಆಲಮಟ್ಟಿಯ ಜಲಾಶಯದಲ್ಲಿ ಮುಳುಗಿಹೋಗಿವೆ. 'ಸೀತಿಮನಿ'ಯಲ್ಲಿ ಸೀತೆಯ ಒಂದು ಗುಹಾಂತರ್ಗತ ದೇವಾಲಯವಿದ್ದಿತು. ಇದು ಶಕ್ತಿಯ ಜಾಗೃತ ಸ್ಥಳವೆಂದು ಪ್ರಸಿದ್ಧವಿದೆ. ವಿಜಾಪೂರ ಜಿಲ್ಲೆ, ಬಬಲಾದಿಯ ಚಿಕ್ಕಯ್ಯಸ್ವಾಮಿಗಳು ಈ ದೇವತೆಯ ಆರಾಧನೆ ಮಾಡಿ, ಅವಳನ್ನು ಒಲಿಸಿಕೊಂಡು, ಅವಳ ವರದಿಂದ ಬಬಲಾದಿಯ ಸುತ್ತ-ಮುತ್ತಲಿದ್ದ ಮಂಡರನ್ನು ದಂಡಿಸಿ, ಹತೋಟಿಗೆ ತಂದ ಚರಿತ್ರೆಯಿದೆ. ಇಂದು 'ಸೀತಿಮನಿ' ಗ್ರಾಮ, ಕ್ಷೇತ್ರ ಮುಳುಗಿರುವಂತೆ, ಈ ಜಲಾಶಯದ ಹಿನ್ನೀರಿನಲ್ಲಿ ಈ ಬಬಲಾದಿ ಕ್ಷೇತ್ರವೂ ಮುಳುಗಡೆಯಾಗಿದೆ. ಇಲ್ಲಿ ಚಂದ್ರವ್ವ ತಾಯಿಯ ದೇವಸ್ಥಾನವಿದೆ. ಚಿಕ್ಕಯ್ಯ ಸ್ವಾಮಿಗಳು ಶಕ್ತಿಯ ಆರಾಧಕರಿದ್ದರು. ಶಿವರಾತ್ರಿಯಂದು 'ಆಯಿ-ಮುತ್ತ್ಯಾ' ಎಂಬ ಹೆಸರಿಂದ ಜಂಗೀ ದನಗಳ ಜಾತ್ರೆಯಾಗುತ್ತದೆ. ಕಾಲಜ್ಞಾನವನ್ನು ಒಂದು ವರ್ಷದ ಮಟ್ಟಿಗೆ, ಪ್ರತಿ ವರುಷ ಸಾರಲಾಗುತ್ತದೆ. 'ಸೀತಿಮನಿ'ಗೆ ಸಮೀಪದಲ್ಲಿಯೆ 'ಜಡ್ರಾಮಕುಂಟೆ' ಎಂಬ ಗ್ರಾಮವಿದೆ. ಇದನ್ನು 'ಜಟಾಯು ರಾಮನ ಕುಂಟೆ' ಎಂದು ಗುರುತಿಸಲಾಗುತ್ತದೆ. ಸೀತೆಯ ಅಪಹರಣದ ಪ್ರಸಂಗದಲ್ಲಿ ಜಟಾಯು ಪಕ್ಷಿಯು ರಾವಣನೊಂದಿಗೆ ಕಾದಾಡಿ, ಇಲ್ಲಿಯೆ ಅಸುನೀಗಿತೆಂದು, ಸ್ಥಳೀಯರು ಕಥೆ ಹೇಳುತ್ತಾರೆ.

ಪಟ್ಟದಕಲ್ಲಿನಲ್ಲಿ ೪೨ನೆಯ ಶಾಸನದಿಂದ ೮ನೆಯ ಶಾಸನದವರೆಗಿರುವ (ಕೆಲವನ್ನು ಬಿಟ್ಟು) ೧೬ ಶಾಸನಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ವ್ಯಕ್ತಿಗಳ ಹೆಸರುಗಳು ಬರುತ್ತವೆ. ರಾಮ ಲಕ್ಷ್ಮಣ(ಲಕ್ಕಣನ್,) ಸೀತೆ; ಅಣುಮನ್(ಹನುಮ), ವಾಲಿ(ಬಾಲಿ), ಸುಗ್ರೀವ, ವಿಭೀಷಣನ್, ಜಟಾಯು; ರಾವಣ(ರಾಭಣ), ಶೂರ್ಪನಖಿ(ಸುಪ್ಪನಕ್ಕಿ, ಸುರ್ಪನಾಶಿ), ಕುಂಭಕರ್ಣನ್, ಖರದೂಷಣರ್ (ಕರದುಸಣನ್) ಇವರ ಹೆಸರುಗಳಿದ್ದು, ರಾಮನಿಂದ ಜಟಾಯುವಿನವರೆಗೆ ಒಂದು ಬಣವಾದರೆ, ರಾವಣನಿಂದ ಖರದೂಷಣರವರೆಗೆ ಇನ್ನೊಂದು ಬಣ. ಇವೆಲ್ಲ ಹೆಸರುಗಳು ದೇವಾಲಯಗಳ- ಪಾಪನಾಥ, ವಿರೂಪಾಕ್ಷ ಗೋಡೆ, ಕಂಬ, ಗವಾಕ್ಷಗಳಲ್ಲಿ ಕಂಡರಿಸಲ್ಪಟ್ಟಿವೆ. ಇವುಗಳನ್ನು ಬರೆಯುವದಕ್ಕೆ ಕಾರಣ ಹೇಳಿಲ್ಲ. ಈ ಹೆಸರುಗಳಿಂದ ರಾಮಾಯಣದ ಸ್ಥೂಲ ಪರಿಚಯವಾಗುತ್ತದೆ.

ರಾಮಾಯಣಕ್ಕೆ ಸಂಬಂಧಿಸಿದಂತೆ, ಬಾಗಲಕೋಟೆ ಸಮೀಪ ಕಟಗೇರಿಯಲ್ಲಿ ಕೆಲವು ಐತಿಹ್ಯಗಳಿರುತ್ತವೆ. ಹಾಗೂ ಮಾರೀಚ ದೇವಸ್ಥಾನವಿದೆ. ಆದರೆ ಅದಕ್ಕೆ ಸಂಬಂಧಿಸಿದ ಲಿಖಿತ ಆಧಾರಗಳು ದೊರೆಯುವದಿಲ್ಲ. ಪಟ್ಟದಕಲ್ಲಿನ ೬೭, ೮೪, ೮೫, ೮೬, ೮೭ ಮತ್ತು ಬಾದಾಮಿಯ ೧೩೩, ೧೪೧, ೧೪೪ನೆಯ ಶಾಸನಗಳಲ್ಲಿ ಭೀಷ್ಮ, ಶಲ್ಯ, ದ್ರೋಣ, ದ್ರೋಣಪುತ್ರ(ಅಶ್ವತ್ಥಾಮ);

[illegible]

ಭೀಮಸೇನ, ಅರ್ಜುನ, ಉತ್ತರ, ಹಿಡುಂಬಿ, ಕರ್ಣ ಇವರ ಹೆಸರುಗಳು ಬಂದಿದ್ದು ೮೫ ಮತ್ತು ೮೭ನೆಯ ಶಾಸನಗಳಲ್ಲಿ ಗೋಗ್ರಹಣ ಎಂದಿದೆ. ಹೆಚ್ಚಿನ ಯಾವ ವಿವರಗಳೂ ಇರುವದಿಲ್ಲ. ಇನ್ನು ೮೭ನೆಯ ಶಾಸನದಲ್ಲಿ ವಿಷ್ಣು, ಇಂದ್ರ, ತಿಲೋತ್ತಮೆಯರ ಹೆಸರುಗಳು ಮಾತ್ರ ಬಂದಿರುತ್ತವೆ. ಈ ರೀತಿ ಕೇವಲ ಹೆಸರುಗಳು ಬಂದಿರುವದು ವಿಶೇಷ. ಮಹಾಭಾರತದ ವ್ಯಕ್ತಿಗಳನ್ನು ನೆನಪಿಸುವ ಊರುಗಳು ಬಾಗಲಕೋಟೆ ಜಿಲ್ಲೆಯಲ್ಲಿ ಕೆಲವು ಇವೆ. ಭೀಮನಗಡ(ಹುನ), ಕುಂತಿ–ಕೊಂತಿಕಲ್ಲು(ಬೀಳ), ಕೃಷ್ಣಾಪುರ(ಹುನ), ಶಲ್ಯ–ಶಲ್ಲಿಕೇರಿ(ಬಾಗ), ಗೋಪಿಕೆ–ಗೋಪಸಾನಿ (ಹುನ). ಇವು ಕೇವಲ ಮಹಭಾರತದ ವ್ಯಕ್ತಿಗಳನ್ನು ನೆನಪಿಸುತ್ತವೆ. ಆದರೆ ಪೌರಾಣಿಕವಾದ ಈ ವ್ಯಕ್ತಿಗಳಿಗೆ ಸಂಬಂಧಿಸಿದ ಯಾವುದೇ ಐತಿಹ್ಯ ಅಥವಾ ಆಧಾರಗಳು ಇರುವುದಿಲ್ಲ.

ನಾಗರಿಕ ಸಂಸ್ಕೃತಿ

ಜೀವನ ಸುಧಾರಿಸಿದ ನಂತರ ಬುದ್ಧಿವಂತನಾದ ಮಾನವನಲ್ಲಿ ಸ್ವಾರ್ಥ ಹೆಚ್ಚಾಯಿತು. ತನ್ನ ಗುಂಪಿನ ಮೇಲೆ ಅಧಿಕಾರ ಚಲಾಯಿಸುತ್ತಾ ಬಂದಂತೆ ರಾಜತ್ವ ಪಟ್ಟ ಪಡೆದಿದ್ದಾನೆ. ತನ್ನ ಗುಂಪನ್ನು ಮತ್ತೊಂದು ಗುಂಪಿನಿಂದ ರಕ್ಷಿಸಲು ನಿಸರ್ಗ ನಿರ್ಮಿತ ಬೆಟ್ಟ ನದಿಗಳನ್ನು ಗಡಿಯಾಗಿಸಿ ಕೊಂಡು ಸುರಕ್ಷಿತವಾಗಿ ಬದುಕಲು ಕೋಟೆಗಳನ್ನು ಬುರುಜುಗಳನ್ನು ಕಟ್ಟಿಸಿಕೊಂಡಿದ್ದಾನೆ. ಹಾಗಾಗಿ ಆಯಾ ಊರುಗಳ ಹೆಸರುಗಳಲ್ಲಿ 'ಕೋಟೆ' ಎಂಬ ಪದಕೂಡಾ ಅಸ್ತಿತ್ವ ಪಡೆದಿದೆ. ಬಾಗಲಕೋಟೆ (ಬಾಗ), ಹೊಸಕೋಟೆ(ಬಾದಾ), ಕೋಟೆಕಲ್ಲು(ಬಾದಾ), ಚಿತ್ರಬಾನುಕೋಟೆ(ಮುಧೋ). ಇಲ್ಲೆಲ್ಲ ಕೋಟೆಗಳು ಬುರುಜುಗಳು ಈಗಲೂ ಶಿಥಿಲಾವಸ್ಥೆಯಲ್ಲಿವೆ.

ಬದುಕಲು ಮೂಲಭೂತ ಸೌಕರ್ಯಗಳನ್ನು ನಿಸರ್ಗದಿಂದ ಪಡೆದ ಮಾನವ, ಅವು ಲಭ್ಯವಿಲ್ಲದಾಗ ತಾನೇ ಬುದ್ಧಿವಂತಿಕೆಯಿಂದ ದೊರೆಕಿಸಿಕೊಂಡ. ಅವುಗಳನ್ನು ಪಡೆಯುವ ಹೆಣಗಾಟದಲ್ಲಿ ಮುಳಗಿದ ಅವನು ಅವುಗಳ ಕೊರತೆ ನೀಗಿಸಿಕೊಂಡು ನಂತರ ನಿರಾಳವಾಗಿ ಜೀವನ ಸಾಗಿಸುತ್ತಿರುವಾಗ ಸಾಕಷ್ಟು ಸಮಯವಿರಲಾಗಿ ತನ್ನಲ್ಲಿರುವ ವಿಶೇಷ ಪ್ರತಿಭೆಯನ್ನು ಚಿತ್ರಕಲೆ, ಕುಣಿತ, ಹಾಡು, ಶಿಲ್ಪ, ಕೆತ್ತನೆ, ಸಾಹಿತ್ಯ ನಿರ್ಮಿತಿಗಳ ಮೂಲಕ ಹೊರಹಾಕಿದ್ದಾನೆ. ಈ ಪ್ರತಿಭಾವಂತರಿಗೆ ರಾಜರು ಆಶ್ರಯ ನೀಡಿ ಪ್ರೋತ್ಸಾಹಿಸಿ ಸಾಂಸ್ಕೃತಿಕ ಸಂಪತ್ತನ್ನು ಹೆಚ್ಚಿಸಿದ್ದಾರೆ. ಕವಿಗಳನ್ನು ಪೋಷಿಸಿದ್ದಾರೆ. ದೊರೆಯ ಗುಣ, ಶೌರ್ಯ, ಸಾಹಸ, ಧೀಮಂತಿಕೆಗಳನ್ನು ಕವಿಗಳು ವರ್ಣಿಸಿದ್ದಾರೆ. ಅವೇ ಇನ್ನಿತರರಿಗೂ ಅನ್ವರ್ಥಕಗಳಾಗಿ ನಂತರ ಅಂಕಿತನಾಮಗಳಾಗಿ ಬಳಕೆಗೊಳ್ಳುತ್ತವೆ. ಅಂತಹ ಅಂಕಿತನಾಮ ಹೊಂದಿದ ವ್ಯಕ್ತಿಯ ಹೆಸರಿನಿಂದ ಆಯಾ ನೆಲೆಗಳನ್ನು ಕರೆದಿದ್ದಾರೆ. ಅನ್ವರ್ಥಕ ನಾಮಗಳಲ್ಲಿ ಬಂಟ–ಬಂಟನೂರು(ಮುಧೋ), ಗಟ್ಟಿಗ–ಗಟ್ಟಗನೂರು(ಹುನ), ನಿಡು–ನಿಡಸನೂರು (ಹುನ).

ಮನುಷ್ಯ 'ಕಲಿ'ತನವನ್ನು ಸಾಹಸವನ್ನು ಶೌರ್ಯವನ್ನು ಮೆರೆಯುವ ಗುಣ ಹೊಂದಿದ್ದಾನೆ. ಈ ವಿಚಾರವನ್ನು ಬಾದಾಮಿಯ ಕಪ್ಪೆಅರಭಟ್ಟನ ಶಾಸನದಲ್ಲಿ ವ್ಯಕ್ತಪಡಿಸಲಾಗಿದೆ. ಅಂತಹ ಕಲಿಗಳ ಅನ್ವರ್ಥಕ ನಾಮಗಳನ್ನು ನೆಲೆಳಿಗೆ ನೀಡಿದ್ದಾರೆ ನಮ್ಮ ಜನ. ಗಲಗಲಿ(ಬೀಳ), ಹಲಗಲಿ(ಮುಧೋ), ಬೆಳಗಲಿ(ಮುಧೋ). ಇಲ್ಲಿ ಬರುವ ಉತ್ತರಪದ 'ಗಲಿ' ಎಂಬುದು 'ಕಲಿ'ತನದ ಬಗ್ಗೆ ಹೇಳುತ್ತದೆ. ಇವರು ಯುದ್ಧದಲ್ಲಿ, ದಾನದಲ್ಲಿ, ಸಾಹಸದಲ್ಲಿ, 'ಕಲಿ'ಗಳಾಗಿರಬೆಕು. ಚಾಮರಾಜನಗರ ಜಿಲ್ಲೆಯ ಯಳಂದೂರಿನ ಕ್ರಿ.ಶ.೧೬೫೪ರ ಶಾಸನವೊಂದನ್ನು 'ಸಾಸಲಯ್ಯ' ಎಂಬ ಕವಿ ರಚಿಸಿದ್ದಾನೆ. ಬಾಗಲಕೋಟೆ ಜಿಲ್ಲೆಯಲ್ಲಿ ಸಾಸಲಟ್ಟಿ(ಜಮ), ಎಂಬ ಗ್ರಾಮವಿದೆ. ಇಲ್ಲಿ 'ಸಾಸ' ಎಂಬ ಪೂರ್ವ ಪದವು 'ಸಾಹಸ' ಎಂಬ ಪದದ ಸವೆದ ರೂಪ ಎನ್ನಬೇಕು. ಈಗ ರೂಢಿಯಲ್ಲಿ 'ಸಸಾಲಟ್ಟಿ'ಯಾಗಿದೆ. ಹಾಗೆಯೇ ಮಾದಾಪೂರ(ಹುನ), ಮನ್ಮಥನಾಳ (ಹುನ), ಮದನಮಟ್ಟಿ(ಜಮ) ಇಲ್ಲಿಯ ಪೂರ್ವಪದಗಳು 'ಕಾಮ' ಎಂಬ ಅರ್ಥವನ್ನು ಕೊಡುತ್ತವೆ. 'ಕಾಮ' ಎನ್ನುವುದು ಆಸೆ, ಸರ್ವಾಂಗ ಸುಂದರ ಎಂಬ ಅರ್ಥ ಕೊಡುವುದು. 'ಮದನ ವಿಲಾಸ' ಎಂಬ ವನದ ಹೆಸರು ಗಂಗಾಧರಂ ಶಾಸನದಲ್ಲಿ ಬರುವುದು. ಜಿನವಲ್ಲಭ ಅದನ್ನು ನಿರ್ಮಿಸಿದಂತೆ ಶಾಸನ ಹೇಳುವುದು. 'ಮದನಮಟ್ಟಿ' 'ಮನ್ಮಥನಾಳ' ಇವುಗಳು ವ್ಯಕ್ತಿಗುಣಗಳನ್ನು ಪ್ರತಿನಿಧಿಸುವ ಊರುಗಳಾಗಿವೆ.

'ವೀರಾಪೂರ', 'ಬೀರನೂರು', 'ಬೀರಕಬ್ಬಿ' ಇವುಗಳ ಪೂರ್ವಪದವಾದ ಬೀರ(ವೀರ) ಎನ್ನುವುದು ವಿಶೇಷಣವಾಗಿಯೂ, ಅನ್ವರ್ಥಕವಾಗಿಯೂ ಬಳಕೆ ಆಗಿದೆ. ಕ್ರಿ.ಶ. ೯೮೨ರ ಶ್ರವಣಬೆಳಗೊಳ ಶಾಸನವು ೧೦ನೆಯ ಶತಮಾನದ ರಾಷ್ಟ್ರಕೂಟ ಇಂದ್ರರಾಜನ ಸಲ್ಲೇಖನ ವ್ರತವನ್ನು ವರ್ಣಿಸುವುದರ ಜೊತೆಗೆ 'ಬೀರರ ಬೀರ' ಎಂದು ವರ್ಣಿಸಿದೆ. ಇಲ್ಲಿ 'ಬೀರರ ಬೀರ', ಎಂಬುದು ಮನುಷ್ಯನ ಗುಣವಿಶೇಷಣವನ್ನು ಹೇಳುತ್ತಿದ್ದು ಆರಂಭದಲ್ಲಿ ಅನ್ವರ್ಥಕ ನಾಮವಾಗಿದ್ದು ನಂತರ 'ವೀರಪ್ಪ', 'ಬೀರಪ್ಪ' ಎಂದು ಅಂಕಿತನಾಮವಾಗಿವೆ. ನಮ್ಮ ಜನಪದರು ಸಾಹಸ ಕಾರ್ಯಗಳ ಸಂದರ್ಭದಲ್ಲಿ ಪ್ರಾಣಾರ್ಪಣೆ ಮಾಡಿದ ವ್ಯಕ್ತಿ, ಪ್ರಾಣಿ, ಮೊದಲಾದವರಿಗೆ ಗೌರವ ಸಲ್ಲಿಸಿ ಅವರ ಹೆಸರನ್ನು ಶಾಸ್ವತವಾಗಿ ಉಳಿಸುವ ಉದ್ದೇಶದಿಂದ ಸ್ಥಳನಾಮಗಳಿಗೆ ಅವರ ಹೆಸರನ್ನು ಇಟ್ಟಿದ್ದಾರೆ 'ಮಾಸ್ತಿಹಾಳ' ಎಂಬ ಊರು ಬಾಗಲಕೋಟ ತಾಲೂಕಿನಲ್ಲಿದೆ. ಸ್ತ್ರೀಯೊಬ್ಬಳು 'ಮಹಾಸತಿ' ಪದ್ಧತಿ ಆಚರಿಸಿ ಸಮಾಜದಲ್ಲಿ ಗೌರವಕ್ಕೆ ಪಾತ್ರವಾದದ್ದರ ಸಂಕೇತವಾಗಿ, 'ಮಾಸ್ತಿಹಾಳ' ಎಂದು ಆ ಸ್ತ್ರೀ ನೆಲೆಸಿದ ಊರಿಗೆ ಕರೆದಿದ್ದಾರೆ.

ಮಲ್ಲಾಪೂರ(ಬಾಗ, ಬಾದಾ), ಮಾಲಾಪೂರ(ಮುಧೋ), ಗಟ್ಟಿಗನೂರ(ಹುನ), ಬಂಟನೂರು (ಮುಧೋ) ಇಲ್ಲಿಯ ಪೂರ್ವ ಪದಗಳಾದ 'ಮಲ್ಲ', 'ಗಟ್ಟಿಗ', 'ಬಂಟ' ಇವುಗಳು ಜಟ್ಟಿಯನ್ನು ನೆನಪಿಸುತ್ತವೆ. ಯುದ್ಧ ಹಾಗೂ ಕುಸ್ತಿ ಕಾಳಗಳಲ್ಲಿ ನಿಪುಣತೆ ಪಡೆದವರಿಗೆ 'ಮಲ್ಲ', 'ಜಟ್ಟಿ' ಎಂದು

ಅನ್ವರ್ಥಕನಾಮವಾಗಿ ಕರೆಯುತ್ತಾರೆ. ಇಂಥವನಿದ್ದ ಊರೇ ಮಲ್ಲಾಪೂರ, ಗಟ್ಟಿಗನೂರು ಎಂದಾಗಿವೆ. ಲಕ್ಕುಂಡಿಯನ್ನು ಆಳಿದ ಅತ್ತಿಮಬ್ಬೆಯ ತಂದೆಯ ಹೆಸರು 'ಮಲ್ಲಪ್ಪ' ಈತ ಸ್ವತಃ ಶಾಸ್ತ್ರ, ಶಸ್ತ್ರಗಳೆರಡಲ್ಲೂ ನಿಪುಣನಾಗಿದ್ದನು. "ಮಲ್ಲಪ್ಪನಲ್ಲದೆ ಪೆರನಾವನೂ ಶಸ್ತ್ರ ಶಾಸ್ತ್ರ ವಿದ್ಯಾಕುಶಲಂ"[1] ಅಲ್ಲದೆ ಅವಳ ಗಂಡ ನಾಗಿದೇವ'ನೂ ಶೂರನಾಗಿದ್ದು 'ಒರಟರ ಮಲ್ಲ'ನೆಂದೆ ಪ್ರಖ್ಯಾತನಾಗಿದ್ದ.

ಬಾಗಲಕೋಟೆ ಜಿಲ್ಲೆಯಲ್ಲಿ ಎಂಬತ್ತು ಪುರುಷವಾಚಕ ಗ್ರಾಮನಾಮಗಳಿದ್ದರೆ, ಕೇವಲ ಹತ್ತು ಮಾತ್ರ ಸ್ತ್ರೀವಾಚಕ ಗ್ರಾಮನಾಮಗಳಿರುತ್ತವೆ. ಇಲ್ಲಿ ಬರುವ ಸ್ತ್ರೀವಾಚಕ ಹೆಸರುಗಳಲ್ಲಿ ಅರಸಿ, ಸೋಮಲೆ, ಚೀಲಾದೇವಿ, ಚಾಮಲೆ, ಚಿನ್ನಾದೇವಿ, ದಾಮಲೆ, ಸಾವಳದೇವಿ ಎಂಬಂತೆ ರಾಜಮನೆತನದ ಸ್ತ್ರೀಯರ ಹೆಸರುಗಳೇ ಕಂಡುಬರುತ್ತವೆ. ಇದರಿಂದ ಸಾಮಾನ್ಯ ಸ್ತ್ರೀಯರಿಗೆ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನವಿರಲಿಲ್ಲವೆಂಬುದು ವ್ಯಕ್ತವಾಗುತ್ತದೆ.

ಪುರುಷವಾಚಕ ಹೆಸರುಗಳಲ್ಲಿ ಇಂದು ರೂಢಿಯಲ್ಲಿರದ ಕಂಕ, ಕನ್ನ, ಕುಂಚ, ಜಕ್ಕ, ಆಚ, ಕೊಟ್ಟ, ಜಮ್ಮ, ಬಂಕ, ಬಾಚ, ಹಾಗ, ಬದ್ದಿಗ, ಮಾಚಕ, ಗೊರಜ, ಚೊಟ್ಟ, ಪೋಚ ಎಂಬಂತಹ ಹೆಸರಿನ ಊರುಗಳು ಈ ಜಿಲ್ಲೆಯಲ್ಲಿರುವದು ಈ ಜಿಲ್ಲೆಯ ಪ್ರಾಚೀನ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ.

ಒಂದು ದೇಶ ಇಲ್ಲವೇ ಪ್ರದೇಶದ ಸಂಸ್ಕೃತಿ ಅರಿಯಬೇಕಾದರೆ ಎಲ್ಲ ರೀತಿಯ ಸಾಕ್ಷಿಗಳನ್ನು ಪರಿಶೀಲಿಸಬೇಕಾಗುವುದು. ಸಂಸ್ಕೃತಿ ಎನ್ನುವುದು ಅಂತರಂಗಕ್ಕೆ ಸಂಬಂಧಿಸಿದ್ದು, ಹಾಗೂ ವೈಯಕ್ತಿಕ ವಾದದ್ದು. ಬಾಗಲಕೋಟೆ ಜಿಲ್ಲೆಯಲ್ಲಿ ಐಹೊಳೆ, ಪಟ್ಟದಕಲ್ಲು, ಅನಗವಾಡಿ, ಗೊಂಬಿಗುಡ್ಡ, ಹೆರಕಲ್, ಖ್ಯಾಡ, ಡಾಣಕಶಿರೂರ ಈ ಎಲ್ಲ ನೆಲೆಗಳನ್ನು ಇವುಗಳಿಗೆ ಸಂಬಂಧಿಸಿದ ಶಾಸನಗಳನ್ನು ಈಗಾಗಲೇ ಅಧ್ಯಯನ ಮಾಡಿದ್ದಾರೆ. ಈ ಜಿಲ್ಲೆಯ ಐಹೊಳೆ ಎಂಬ ಗ್ರಾಮ 'ಶಿಲ್ಪಕಲಾ ತೊಟ್ಟಿಲು' ಎಂದು ಹೆಸರಾಗಿದೆ. ಸರ್ವಧರ್ಮಗಳ ಪೋಷಣೆಯನ್ನು ಈ ನಾಡನ್ನು ಆಳಿದವರು ಮಾಡಿರುವುದಕ್ಕೆ ಬಾದಾಮಿಯ ಗುಹಾಲಯಗಳು ಸಾಕ್ಷಿಯೊದಗಿಸುತ್ತವೆ. ಐಹೊಳೆಯ– ರವಿಕೀರ್ತಿ, ಪಟ್ಟದಕಲ್ಲಿನ– ಅಚಲನ್, ಬಾದಾಮಿಯ ಅರಭಟ್ಟ, ಮುಧೋಳದ ರನ್ನರು ತಮ್ಮ ಕೃತಿಗಳ ಮೂಲಕ ಕನ್ನಡಿಗರ ಮನಸ್ಥಿತಿ ಹಾಗೂ ಸಂಸ್ಕೃತಿಯನ್ನು ತಿಳಿಯಪಡಿಸಿದ್ದಾರೆ. ಈ ಜಿಲ್ಲೆಯಲ್ಲಿ 'ಗೊಂಬಿಗುಡ್ಡ'ವೆಂದು ಹೆಸರಾಗಿರುವ ಪ್ರದೇಶದಲ್ಲಿ ಬಂಡೆಗಲ್ಲುಗಳ ಮೇಲೆ ೧/೮ ಇಂಚು ಆಳವಾಗಿ ಕೆತ್ತಲಾಗಿರುವ ರೇಖಾಚಿತ್ರಗಳಿವೆ. ಉದ್ದವಾದ ಮೊನಚಾದ ಕೊಂಬುಗಳುಳ್ಳ ಕಾದಾಡುವ ಹೋರಿಗಳು, ಒಂಟೆಸವಾರರು, ಆನೆಗಳು, ಸಾರಂಗಗಳು, ಮೇಣೆ ಹೊತ್ತ ಜನರು ಮುಂತಾದ ರೇಖಾಚಿತ್ರಗಳಿವೆ. ಇದರಿಂದ ಈ ಪ್ರದೇಶಕ್ಕೆ ಅನ್ವರ್ಥಕನಾಮವಾಗಿ 'ಗೊಂಬಿಗುಡ್ಡ'ವೆಂದು ಕರೆದಿದ್ದಾರೆ.

[illegible]

ಪೃಥ್ವಿ ಹುಟ್ಟಿ, ಮಾನವ ಜೀವಿ ಸೃಷ್ಟಿಯಾದಂದಿನಿಂದ ಇಲ್ಲಿಯವರೆಗೆ ಹಲವಾರು ಸಾಂಸ್ಕೃತಿಕ ಸ್ತರಗಳನ್ನು ಕಂಡಂತಹ ಈ ಜಿಲ್ಲೆಯು ಮಲಪ್ರಭಾ, ಘಟಪ್ರಭಾ ಮತ್ತು ಕೃಷ್ಣಾನದಿ ತೀರಗಳ ವ್ಯಾಪ್ತಿಯಲ್ಲಿ ಪ್ರಾಗೈತಿಹಾಸಿಕ, ಐತಿಹಾಸಿಕ ಪೌರಾಣಿಕ ನೆಲೆಗಳನ್ನು ಹೊಂದಿದೆ. ರಾಮಾಯಣ–ಮಹಾಭಾರತಗಳ ಘಟನಾವಳಿಗಳನ್ನು ತನ್ನೊಳಗೆ ಇಟ್ಟುಕೊಂಡು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸ್ವಂತಿಕೆಯನ್ನು ಮೆರೆದಿದೆ. ನವಭಾರತ ನಿರ್ಮಾಣಕ್ಕಾಗಿ ಸ್ವಾತಂತ್ರ್ಯ ಸಂಗ್ರಾಮದ ಹಾಗೂ ರಾಷ್ಟ್ರೀಯ ಚಳುವಳಿಯ ಕೇಂದ್ರವಾಗಿ, ಐತಿಹಾಸಿಕ ಸಾಧಕರ ಆಡುಂಬೊಲವಾಗಿ ಬೆಳೆದು ಬಂದಿದೆ.

ಒಂದು ದೇಶದ, ಒಂದು ಜಾತಿಯ, ಒಂದು ಸಾಮಾಜಿಕ ಪರಿಸರದ ಸಂಸ್ಕೃತಿಯು ವಿಭಿನ್ನವಾಗಿಯೇ ಇರುತ್ತದೆ. ಇದು ಅವರವರ ಭಾಷೆಯಲ್ಲಿ ನಾಮಗಳ ಮುಖಾಂತರ ವ್ಯಕ್ತವಾಗುತ್ತದೆ. ಇದು ಇಂದು ನಿನ್ನೆಯದಲ್ಲ. ಎಂದು ಭಾಷೆ ಹುಟ್ಟಿದೆಯೊ ಅಂದಿನಿಂದಲೇ ಹುಟ್ಟಿ ಬಂದಿದೆ. ಅದು ವ್ಯಕ್ತಿನಾಮವಾಗಿರಬಹುದು, ಜನಾಂಗನಾಮವಾಗಿರಬಹುದು ಇಲ್ಲವೆ ಗ್ರಾಮ ನಾಮವಾಗಿರಬಹುದು. ಅಲ್ಲೆಲ್ಲ ಈ ಸಂಸ್ಕೃತಿಯನ್ನು ಗುರುತಿಸುತ್ತೇವೆ.

ಧರ್ಮರಾಜ, ಭೀಷ್ಮ, ದ್ರೋಣ, ಸೀತೆ ಮತ್ತು ದುರ್ಯೋಧನ, ದುಶ್ಯಾಸನ, ಶಕುನಿ, ಮಂಥರೆ, ಎಂದಾಗ ಆ ಹೆಸರುಗಳು ಅರ್ಥದ ಹಿಂದೆ ಮಡುಗಟ್ಟಿರುವ ಸಂಸ್ಕೃತಿಯ ಅರಿವಾಗದಿರದು. ಸಾಮಾನ್ಯವಾಗಿ ಯಾರೂ ದುಶ್ಯಾಸನ, ಶಕುನಿ, ಮಂಥರೆ ಈ ಹೆಸರುಗಳನ್ನಿಡುವುದಿಲ್ಲ. ಇದಕ್ಕೆ ಕಾರಣ ಈ ಹೆಸರುಗಳ ಹಿಂದಿರುವ ಇವರ ಸಂಸ್ಕೃತಿಯೇ ಆಗಿದೆ.

ಜಾನಾಂಗಿಕವಾಗಿ ಸುಮೇರಿಯನ್ನರು, ಪರ್ಶಿಯನ್ನರು, ಆರ್ಯರು, ದ್ರಾವಿಡರು ಹೀಗೆ ಪ್ರತಿಯೊಂದು ಜನಾಂಗವು ಜಾಗತಿಕ ಮಟ್ಟದಲ್ಲಿಯೇ ಸಾಂಸ್ಕೃತಿಕ ದೃಷ್ಟಿಯಿಂದ ವಿಭಿನ್ನವಾಗಿರುವದು ಸರ್ವರಿಗೂ ವಿದಿತವಾದ ವಿಷಯವೇ ಆಗಿರುತ್ತದೆ. ಒಂದು ಜನಾಂಗದ ಹೆಸರನ್ನು ಎತ್ತಿದಾಗ ಅದರ ಸಾಂಸ್ಕೃತಿಕ ಚಿತ್ರಣ ಕಣ್ಣ ಮುಂದೆ ಬಂದು ನಿಲ್ಲುತ್ತದೆ.

ಗ್ರಾಮಗಳೂ ಈ ಸಾಂಸ್ಕೃತಿಕ ಪರಿಧಿಯನ್ನು ಮೀರಿಲ್ಲವೆಂಬುದು ಆ ಗ್ರಾಮನಾಮಗಳ ಹಿಂದಿರುವ ಅರ್ಥದಿಂದ ದೃಗ್ಗೋಚಾರವಾಗುತ್ತದೆ. ನಿರುಕ್ತಿಯು ಇದನ್ನು ಎತ್ತಿತೋರಿಸುತ್ತದೆ. " 'ಹಟ್ಟಿ' = ದನ, ಕುರಿಗಳನ್ನು ಸಾಕುವವರ, 'ಗ್ರಾಮ' = ವ್ಯವಸಾಯಕ್ಕೆ ಜಮೀನುಗಳ ಮಧ್ಯ ಇರುವ ಜನರ, 'ಖರ್ವಟ' = ಪರ್ವತ ಪ್ರದೇಶದಲ್ಲಿ ಕಂದ = ಮೂಲಗಳನ್ನು, ಬೇಟೆಯಾಡಿ ಮಾಂಸವನ್ನು ತಿಂದು ಜೀವಿಸುವವರ, 'ಪುರ' = ಅನೇಕ ಮಾರುಕಟ್ಟೆಗಳಿಂದ ಕೂಡಿದ ವ್ಯಾಪಾರಸ್ಥರ, 'ನಗರ' = ನಾಗರಿಕರ, 'ದ್ರೋಣಮುಖ' = ನಾಲ್ಕಾರು ಗ್ರಾಮಗಳನ್ನೊಳಗೊಂಡ ಒಂದು ಮುಖ್ಯ ಪಟ್ಟಣಿಗರ

ಸಂಸ್ಕೃತಿಯನ್ನು ಎತ್ತಿ ತೋರಿಸುತ್ತವೆ."[೩] ಅಂದರೆ ಆಯಾ ವ್ಯಕ್ತಿಯ, ಜನಾಂಗದ, ಪರಿಸರದ ಸಂಸ್ಕೃತಿಯನ್ನು ಗುರುತಿಸಿ, ಹೆಸರನ್ನಿಡುತ್ತ ಬಂದಿದ್ದಾರೆ. ಹೀಗಿರುವದರಿಂದ "ಪ್ರಾಚೀನರು ರೂಪ ಮತ್ತು ಅರ್ಥಸ್ತರಗಳ ಅಧ್ಯಯನದಲ್ಲಿ ನಿರತರಾದರೆ, ಹೊರತು ಅರ್ಥದ ಹಿಂದೆ ಮಡುಗಟ್ಟಿರುವ ಸಂಸ್ಕೃತಿಯ ಅಧ್ಯಯನವೆಂಬ ಮೂರನೆ ಸ್ತರದ ಆಳಕ್ಕೆ ಇಳಿಯಲೇ ಇಲ್ಲ"[೪] ಎಂದು ಹೇಳುವದು ವಿಚಾರಣೀಯವೆನಿಸುತ್ತದೆ. "ಗುಂಪಿನಿಂದ ಒಂದು ವಸ್ತು, ಒಬ್ಬ ವ್ಯಕ್ತಿ, ಒಂದು ವಿಷಯ ಇವನ್ನು ಮತ್ತೊಂದು ವಸ್ತು ಮತ್ತೊಬ್ಬ ವ್ಯಕ್ತಿ ಹಾಗೆಯೆ ಮತ್ತೊಂದು ವಿಷಯದಿಂದ ಪ್ರತ್ಯೇಕಿಸುವ ಪ್ರಸಂಗದಲ್ಲಿ ಸ್ಥಳನಾಮ ಹೆಚ್ಚಿನ ಪ್ರಾಶಸ್ತ್ಯಪಡೆಯುತ್ತದೆ. ಇದಿಷ್ಟೇ ಇದರ ಕರ್ತವ್ಯವಲ್ಲ. ಆ ವಸ್ತು, ವ್ಯಕ್ತಿ, ವಿಷಯಗಳ-ರೂಪಗುಣಗಳನ್ನೂ ಹೆಸರಿಟ್ಟ ವ್ಯಕ್ತಿಗಳ ಭಾವನೆ ಉದ್ದೇಶಗಳನ್ನೂ ತಿಳಿಸಿಕೊಟ್ಟು, ತನ್ಮೂಲಕ ಸಂಸ್ಕೃತಿಯನ್ನು ತೋರಿಸಿಕೊಡುವ ಗವಾಕ್ಷವೇ ಆಗಿರುತ್ತದೆ."[೫]

ನಾವು ಈ ಪ್ರಬಂಧದಲ್ಲಿ ಆಯಾ ಪರಿಸರದಲ್ಲಿ ಆಯಾ ಕಾಲಘಟ್ಟದಲ್ಲಿ ಅಲ್ಲಿಯ ಜನರ ಮನೋಭೂಮಿಕೆಯನ್ನು ಅರ್ಥೈಯಿಸಿಕೊಂಡು ಆಯಾ ಗ್ರಾಮನಾಮಗಳ ಹಿಂದಿರುವ ಸಂಸ್ಕೃತಿಯನ್ನು ಎತ್ತಿ ತೋರಿಸುವುದೆ ಆಗಿದೆ. ಅದಕ್ಕಾಗಿಯೇ ಭಿನ್ನ ಭಿನ್ನ ವಿಷಯಗಳನ್ನೊಳಗೊಂಡ ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಪರಿಕರಗಳನ್ನು ಹೊಂದಿಸಿ ಇಟ್ಟುಕೊಂಡು ತನ್ಮೂಲಕ ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳಲ್ಲಿ ಕಂಡುಬರುವ ಸಂಸ್ಕೃತಿಯನ್ನು ಹೇಳಲಾಗಿದೆ.

ಅಡಿಟಿಪ್ಪಣಿಗಳು

೧. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಡಾ. ಎಚ್.ತಿಪ್ಪೇರುದ್ರಸ್ವಾಮಿ, ಪು. ೨೩-೨೪

೨. ಅಜಿತನಾಥ ಪುರಾಣ ತಿಲಕ: ಪು. ೧.೩೧

೩. ಸಂಸ್ಕೃತ ಕನ್ನಡ ನಿಘಂಟು

೪. ಕನ್ನಡ ನಾಮ ವಿಜ್ಞಾನ: ಡಾ. ಎಂ.ಎಂ.ಕಲಬುರ್ಗಿ, ಪು. ೧

೫. ಕನ್ನಡ ನಾಮ ವಿಜ್ಞಾನ: ಡಾ. ಎಂ.ಎಂ.ಕಲಬುರ್ಗಿ, ಪು. ೪

ಅಧ್ಯಾಯ ೭

ಸಮಾರೋಪ

ಅಧ್ಯಾಯ ೭

ಸಮಾರೋಪ

'ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು' ಎಂಬ ಮಹಾ ಪ್ರಭಂಧದ ಏಳನೆಯ ಹಾಗೂ ಕೊನೆಯ ಅಧ್ಯಾಯವೇ ಸಮಾರೋಪ. ಇದರ ಮೊದಲನೇ ಅಧ್ಯಾಯವಾದ 'ಉದ್ದೇಶ ಮತ್ತು ವ್ಯಾಪ್ತಿ' ಎಂಬ ಬಿತ್ತು ಮುಂದಿನ ಅದ್ಯಾಯಗಳಲ್ಲಿ ಮೊಳೆದೋರಿ, ಎಲೆಯಾಗಿ, ಟಿಸಿಲು ಟೊಂಗೆಗಳಾಗಿ, ಹೂದೋರಿ, ಕಾತು, ಹಣ್ಣಾಗಿ ಇಲ್ಲಿ ರುಚಿಯನೀಯುತ್ತಿದೆ. ಈ ಏಳು ಅಧ್ಯಾಯಗಳು "ಒಂದರೊಲು ಒಂದಿಲ್ಲ; ಒಂದುರೊಳು ಕುಂದಿಲ್ಲ. ಒಂದೊಂದು ಅಧ್ಯಾಯವು ತನತನಗೆ ಚಂದ"[1] ಇದೊಂದು ಸರಪಳಿ ಒಂದನ್ನೂ ತೆಗೆಯುವಂತಿಲ್ಲ; ಹಿಂದು ಮುಂದಾಗಿಸುವಂತಿಲ್ಲ, ಅಷ್ಟೊಂದು ಅನ್ಯೋನ್ಯ.

ಬಾಗಲಕೋಟೆ ಜಿಲ್ಲೆ ಪ್ರಾಗೈತಿಹಾಸಿಕ, ಐತಿಹಾಸಿಕ, ಪ್ರಾಕೃತಿಕ ಮತ್ತು ಸಾಂಸ್ಕೃತಿಕವಾಗಿ ಸಂಪದ್ಭರಿತವಾದುದು. ಇದನ್ನು ಮನನೊಂದ, ಹಿನ್ನೆಲೆಯಲ್ಲಿ ರೂಪಗೊಂಡ ಸ್ಥಳನಾಮಗಳ ಅಧ್ಯಯನ 'ಪರಿಣಾಮ ರಮಣೀಯ'[2] ಅದನ್ನು ಉಂಟು ಮಾಡಬಹುದೆಂಬ ಹೆಬ್ಬಯಕೆಯಿಂದ ಕೈಗೊಂಡ ಕಾರ್ಯ ನಿಜವಾಗಿಯೂ ನೆಮ್ಮದಿಯನ್ನೀಯುವಂತಹುದಾಗಿದೆ. ಇಲ್ಲಿ ಅನೇಕ ಅನರ್ಘ್ಯ ರತ್ನಗಳು ದೃಗ್ಗೋಚರವಾಗಿವೆ.

'ಸ್ಥಳನಾಮಗಳ ಇತಿಹಾಸದ ಅಧ್ಯಯನ'ವನ್ನು ಎರಡನೆಯ ಅಧ್ಯಾಯದಲ್ಲಿ ಅವಲೋಕಿಸಲಾಗಿದೆ. 'ಸ್ಥಳನಾಮವು' ಇತ್ತೀಚಿನ ಒಂದೆರಡು ಶತಮಾನಗಳಲ್ಲಿ ಹುಟ್ಟಿ, ಬೆಳೆದು ಬಂದ ಶಾಸ್ತ್ರವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ 'ನಾಮವಿಜ್ಞಾನ'ವು 'ನಿರುಕ್ತ'ಕ್ಕಿಂತ ಬೇರೆಯಲ್ಲ. ನಿರುಕ್ತವನ್ನು ಬರೆದವನು ಯಾಸ್ಕಮುನಿ. ಈತ ಭಾರತದ ಪ್ರಾಚೀನ ವಿದ್ವಾಂಸ. ಅಂದಿನಿಂದಲೇ ಇದು ಪ್ರಚುರ ವಾಗಿದ್ದರೂ ಪಾಶ್ಚಾತ್ಯ ಪಂಡಿತರಿಂದ 'ವಿಜ್ಞಾನ'ವಾಗಿ ಬೆಳೆದುದು ಇತ್ತೀಚೆಗೆ ಎಂದು ಹೇಳುವಂತಾಗಿದೆ. ಇದನ್ನು ಈ ಅಧ್ಯಾಯದಲ್ಲಿ ತಿಳಿಯಪಡಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, ಅಭ್ಯಾಸದ ಅನುಕೂಲತೆಯ ದೃಷ್ಟಿಯಿಂದ ಮಾಡಿಕೊಂಡ 'ಸ್ಥಳನಾಮಗಳು ವರ್ಗೀಕರಣ'ವು ಕಾಲಘಟ್ಟವನ್ನು ಸೂಚಿಸುತ್ತದೆ. ನಿರ್ವಸತಿ ವಾಚಕಗಳು ಸ್ಥಳನಾಮಗಳ ಪ್ರಾರಂಭದ ಘಟ್ಟವನ್ನು ಸೂಚಿಸಿದರೆ, ವಸತಿವಾಚಕ ಮತ್ತು ಸಂಸ್ಕೃತಿವಾಚಕಗಳು ಮುಂದಿನ ಘಟ್ಟಗಳ ಸೂಚಿಸುತ್ತವೆ. ಸಂಚಾರಿಯಾದ ಮನುಷ್ಯನು ಮೊದಲು ಗುಡ್ಡ, ಗಿರಿ, ದಿನ್ನಿಗಳನ್ನಾಶ್ರಯಿಸಿ ಕ್ರಮೇಣ ಕೆಳಗಿಳಿಯುತ್ತ ಬಂದಂತೆ ತೋರುತ್ತದೆ.

ನಿಷ್ಪತ್ತಿ ಶಾಸ್ತ್ರದಿಂದ ಕೆಲವು ಸ್ಥಳನಾಮಗಳನ್ನು ನಿಷ್ಪನ್ನ ಮಾಡಿದರೂ ಇಂದು ಆ ಸ್ಥಳಗಳ ಪರಿಸರ ತೀರಾ ವಿಭಿನ್ನವಾಗಿ ಸಂದೇಹಕ್ಕಾಸ್ಪದವಾಗುವಂತಾಗಿದೆ. ಉದಾ: ಚಿಕ್ಕಲಕಿ(ಜಮ), ಚಿಕ್ಕಲ-ಒಂದು ಬಗೆಯ ಔಷಧೀಯ ಹುಲ್ಲು. ಈಗ ಈ ಹುಲ್ಲು ಅಲ್ಲಿ ಸಿಗುವುದಿಲ್ಲ.

ಗಿಡ, ಕಂಟಿ, ಬಳ್ಳಿ, ಹೂ, ಕಾಯಿ, ಮುಂತಾದ ವನಸ್ಪತಿಗಳಿಂದ ಸೂಚಿತವಾದ ಗ್ರಾಮನಾಮಗಳು ೮೦ ಕ್ಕೂ ಹೆಚ್ಚಾಗಿರುವುದರಿಂದ ಇಲ್ಲಿಯ ಜನ (ವನಸ್ಪತಿ) ಪ್ರಕೃತಿಪ್ರಿಯರು, ಸೌಂದರ್ಯಪ್ರಿಯರು ಎನ್ನುವುದು ವ್ಯಕ್ತವಾಗುತ್ತದೆ. ಆದರೆ ಕಡಲೆ(೨), ಅಕ್ಕಿ(೧), ಜೀರಿಗೆ(೧), ಈ ಮೂರು ಆಹಾರ ಧಾನ್ಯಗಳನ್ನು ಸೂಚಿಸುವ ನಾಲ್ಕು ಊರುಗಳಿದ್ದು, ಬೇರೆ ಧಾನ್ಯಗಳ ಹೆಸರುಗಳು ಇಲ್ಲದಿರುವುದು ವಿಶೇಷ.

ಉಜ್ವಲವಾದ ರಾಜಕೀಯ ಪರಂಪರೆಯನ್ನು ಹೊಂದಿದ ಬಾಗಲಕೋಟೆ ಜಿಲ್ಲೆಯಲ್ಲಿ ಆರು ನೂರಕ್ಕೂ ಹೆಚ್ಚಾಗಿರುವ ಹಳ್ಳಿ-ಪಟ್ಟಣಗಳಲ್ಲಿ ಚಾಲುಕ್ಯ ದೊರೆ ವಿಕ್ರಮನ ಹೆಸರಿನಿಂದ ವಿಕ್ರಮಪುರ ಎಂಬ ಒಂದು ಗ್ರಾಮ ಮಾತ್ರ ಕಂಡುಬರುತ್ತದೆ. ಅದೂ ಕೂಡಾ ತನ್ನ ಸೋದರಿ ಅಕ್ಕಾದೇವಿಯಿಂದ 'ಅರಸಿಬೀದಿ'ಯೆಂದು ಕರೆಯಲ್ಪಟ್ಟು, ಈಗ ಹೆಸರಿಗೆ ಮಾತ್ರ ಉಳಿದಿರುವದು ಐತಿಹಾಸಿಕ ವೈಚಿತ್ರ್ಯಗಳಲ್ಲಿ ಒಂದಾಗಿದೆ. ರಾಣಿಯರ ಹೆಸರಿನಿಂದ ನಾಲ್ಕೈದು ಗ್ರಾಮಗಳು ದೊರೆಯುತ್ತಿವೆ. ಬಹುತರವಾಗಿ ರಾಜಮನೆತನದವರು ತಮ್ಮ ಹೆಸರಿನಿಂದ ಗ್ರಾಮಗಳನ್ನು ನಿರ್ಮಿಸುವಲ್ಲಿ, ನಿರ್ಮಿತ ಗ್ರಾಮಗಳಿಗೆ ಪುನರ್ನಾಮಕರಣ ಮಾಡುವಲ್ಲಿ ಆಸಕ್ತರಾಗಿರಲಿಲ್ಲ ಎಂದು ತೋರುತ್ತದೆ. ಇದರಿಂದಾಗಿ ಗ್ರಾಮ ನಾಮಗಳಿಂದ ಐತಿಹಾಸಿಕಾಂಶಗಳನ್ನು ತಿಳಿದುಕೊಳ್ಳಲು ದೊಡ್ಡಕಂದರ ಉಂಟಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಸುಮಾರು ಇಪ್ಪತ್ತೆರಡು ಜನಾಂಗಗಳಿದ್ದು ಅವರ ಹೆಸರಿನಿಂದ ಗ್ರಾಮನಾಮಗಳಿವೆ. ಆದರೆ ಇಂದು ಅಲ್ಲಿಯಾಗಲಿ, ಆ ಸುತ್ತ-ಮುತ್ತಲಾಗಲಿ ಆ ಯಾವ ಜನಾಂಗವೂ ಕಂಡುಬರುವದಿಲ್ಲ. ಜಿಲ್ಲೆಯ ೬೫೨ ಸ್ಥಳನಾಮಗಳಲ್ಲಿ ೧೦೦ ಗ್ರಾಮಗಳು ವ್ಯಕ್ತಿವಾಚಕಗಳಾಗಿವೆ. ಇವುಗಳಲ್ಲಿ ಕೇವಲ ಹತ್ತು ಗ್ರಾಮಗಳು ಸ್ತ್ರೀವಾಚಕವಾಗಿದ್ದರೆ ಉಳಿದವುಗಳು ಪುರುಷ ವಾಚಕಗಳಾಗಿವೆ. ಇದರಿಂದ ಪುರುಷ ಪ್ರಾಧಾನ್ಯತೆಯು ಎದ್ದು ಕಾಣುತ್ತದೆ. "ವ್ಯಕ್ತಿನಾಮ, ಜನಾಂಗನಾಮಗಳು

ಪ್ರಾಚೀನವಾಗಿದ್ದುದರಿಂದಲೇ ಗ್ರಾಮಗಳಿಗೆ ವ್ಯಕ್ತಿಗಳ, ಜನಾಂಗಗಳ ಹೆಸರು ಬಂದಿರುವುದು ಕಂಡು ಬರುತ್ತದೆ."[೩]

ನಾಲ್ಕನೆಯ ಅಧ್ಯಾಯವಾದ 'ಭಾಷಿಕ ವಿವೇಚನೆ'ಯಲ್ಲಿ ಸ್ಥಳನಾಮಗಳನ್ನು ೧. ಮೂಲಶಬ್ದಗಳು ೨. ತದ್ಧಿತಾಂತ ಶಬ್ದಗಳು ಮತ್ತು ೩. ಸಾಮಾಸಿಕ ಶಬ್ದಗಳು ಎಂದು ಮೂರು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಮೂಲ ಶಬ್ದಗಳನ್ನು ವಿಷಯಾನುಸಾರ ವಿಂಗಡಿಸಿ ಕೊಟ್ಟಿದೆ.

ಕಿ, ಇಗೆ ಮತ್ತು ಇ ಎಂಬಂತಹ ತದ್ಧಿತ ಪ್ರತ್ಯಯಗಳು ಹತ್ತಿ ಸಿದ್ಧವಾದ ಗ್ರಾಮನಾಮಗಳನ್ನು ಗುರುತಿಸಿ, ಅರ್ಥಾನುಗಮವಾಗಿ ವಿವರಿಸಿದ್ದು, ಇವು ಸಂಖ್ಯೆಯಲ್ಲಿ ಮೂಲಶಬ್ದಗಳಿಗಿಂತ ಹೆಚ್ಚಾಗಿರುತ್ತವೆ.

ಸಾಮಾಸಿಕ ಸ್ಥಳನಾಮಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಈ ಸಮಾಸ ವಿಧಾನದಿಂದ ಸ್ಥಳನಾಮಗಳ ಮೂಲಾರ್ಥವನ್ನು ತಿಳಿದುಕೊಳ್ಳಲು ಹೆಚ್ಚಿನ ಪ್ರಯೋಜನವಾಗುತ್ತದೆ.

೧. 'ಅರ್ಥವತ್ ಸಮಾಸ': ನಾಗೂರು (ಹುನ), ನಾಗನೂರು (ಜಮ) ಇವೆರಡರಲ್ಲಿ 'ನಾಗ' ಮತ್ತು 'ಊರು' ಸಮಾನವಾಗಿದ್ದು, ಮೊದಲನೆಯದು ನಾಗ+ಊರು = ನಾಗೂರು ಎಂದು ಪ್ರಾಣಿವಾಚಕವಾದರೆ, ಎರಡನೆಯದು ನಾಗನ+ಊರು = ನಾಗನೂರು ಎಂದು ವ್ಯಕ್ತಿವಾಚಕ ವಾಗುತ್ತದೆ. ಇದನ್ನು ಸಮಾಸ ವಿಧಾನದಿಂದಲೆ ತಿಳಿಯಲು ಸಾಧ್ಯ.

೨. ಹಳ್ಳೂರು(ಬಾಗ), ಹಳ್ಳದೂರು(ಬಾದಾ) ಇವೆರಡು ಸ್ಥಳನಾಮಗಳು. ಇವುಗಳಲ್ಲಿ 'ಹಳ್ಳ' ಮತ್ತು 'ಊರು' ಸಮಾನವಾಗಿಯೆ ಇವೆ. ಆದರೆ ಮೊದಲನೆಯದು ಲುಕ್ ಸಮಾಸವಾದರೆ, ಎರಡನೆಯದು ಅಲುಕ್ ಸಮಾಸ. ಇದರಿಂದ ಅವೆರಡು ಭಿನ್ನ-ಭಿನ್ನ ರೂಪತಾಳಿವೆ.

೩. ಗ್ರಾಮನಾಮಗಳ ಉತ್ತರ ಪದದಲ್ಲಿ ಪುರ ಮತ್ತು ಪೂರ ಎಂಬೆರಡು ಶಬ್ದಗಳು ಗೋಚರವಾಗುತ್ತವೆ. ಪುರ ಇದು ಸಂಸ್ಕೃತ ಶಬ್ದ. ಗ್ರಾಮ, ಪಟ್ಟಣ ಎಂಬರ್ಥ ಹೊಂದಿದೆ. ಎರಡನೆಯದು ತಿಮ್ಮಪ್ಪನ +ಊರು = ತಿಮ್ಮಪ್ಪನೂರು>ತಿಮ್ಮಾಪೂರು ಎಂದಾಗಿದೆ. ಇವೆರಡರ ವ್ಯತ್ಯಾಸವನ್ನು ಇಲ್ಲಿ ತೋರಿಸಲಾಗಿದೆ.

೪. ಪೂರ್ವೋತ್ತರ ಪದಗಳಿಂದ ಕೂಡಿದ ಸ್ಥಳನಾಮಗಳಲ್ಲಿ ಕೆಲವೊಮ್ಮೆ ಪೂರ್ವಪದವು ಉತ್ತರಪದಕ್ಕೆ ವಿಶೇಷಣವಾಗಿರುತ್ತದೆ. ಉತ್ತರಪದವನ್ನು ವರ್ಣಿಸುತ್ತದೆ. ಇದು ಕರ್ಮಧಾರವಲ್ಲದೆ ಬೇರೆಯಲ್ಲ. ಇದನ್ನು ಇಲ್ಲಿ ತಿಳಿಸಲಾಗಿದೆ.

೫. ಕೆಲಮ್ಮೊಮ್ಮೆ ಪೂರ್ವಪದವು ಸಂಖ್ಯಾವಾಚಕವಾಗಿರುತ್ತದೆ. ಇದು ದ್ವಿಗುಸಮಾಸ ವಿಧಾನ. ಇದನ್ನು ಇಲ್ಲಿ ವಿವರಿಸಲಾಗಿದೆ.

೬. ವಸತಿವಾಚಕವಲ್ಲದ ಗುಡ್ಡ, ದಿನ್ನಿ, ಏರಿ, ಗುಂದ ಮುಂತಾದವುಗಳು ಉತ್ತರ ಪದದಲ್ಲಿ ಬಂದು ಅನೇಕ ಸ್ಥಳನಾಮಗಳು ನಿರ್ಮಾಣಗೊಂಡಿವೆ. 'ಕರಡಿಗುಡ್ಡ' ಇದೊಂದು ಸ್ಥಳನಾಮ. ಇದರಲ್ಲಿ ಕರಡಿ ಮತ್ತು ಗುಡ್ಡ, ಎಂಬ ಎರಡು ಶಬ್ದಗಳಿದ್ದು ಇವೆರಡೂ 'ಊರು' ಎಂಬರ್ಥವನ್ನು ಕೊಡುವದಿಲ್ಲ. ಆದರೆ 'ಕರಡಿಗಳು ಇರುವ ಗುಡ್ಡದ ಊರು ಯಾವುದೋ ಅದು ಕರಡಿಗುಡ್ಡ' ಎಂದಾಗ ಮಾತ್ರ ಅದು ಊರಿನ ಅರ್ಥ ಕೊಡುತ್ತದೆ. ಇದು ಬಹುವ್ರೀಹಿ ಸಮಾಸ ವಿಧಾನ. ಇದನ್ನು ಇಲ್ಲಿ ಉದಾಹರಣೆಯೊಂದಿಗೆ ಸ್ಪಷ್ಟಪಡಿಸಲಾಗಿದೆ.

೭. ಒಮ್ಮೊಮ್ಮೆ ಎರಡಕ್ಕಿಂತ ಹೆಚ್ಚು ಶಬ್ದಗಳು ಕೂಡಿ ಸ್ಥಳನಾಮವಾಗಿರುವುದುಂಟು. ಇಂಥ ಸಂದರ್ಭದಲ್ಲಿ ದ್ವಿಸಮಾಸವಾಗಿರುವುದನ್ನು ಗಮನಿಸಲಾಗಿದೆ.

೮. ಸಮಸ್ತ ಪದವಾಗುವಾಗ ಲೋಪ, ಆಗಮ, ಮತ್ತು ಆದೇಶ ಎಂಬ ಸಂಧಿಕಾರ್ಯಗಳು ನಡೆಯುತ್ತವೆ. ಅವುಗಳನ್ನು ಇಲ್ಲಿ ಉದಾಹರಣೆ ಸಹಿತ ನೀಡಲಾಗಿದೆ.

ಸ್ಥಳನಾಮಗಳಲ್ಲಿ ಕೆಲವು ಪರಿವರ್ತನೆಗಳು ಸಂಭವಿಸುತ್ತವೆ. ಅವುಗಳನ್ನು ಸಾಧ್ಯಂತವಾಗಿ ತಿಳಿಯ ಪಡಿಸಿದೆ. 'ಗುಂಡನಪಲ್ಲಿ'ಯಲ್ಲಿಯ 'ಪಲ್ಲಿ' ಪರಿವರ್ತನೆಯಾಗಿರುವುದನ್ನು ಗಮನಿಸಲಾಗಿದೆ. ಹಾಗೆಯೆ ಸ್ಥಳನಾಮಗಳಲ್ಲಿರುವ ಸಾಪೇಕ್ಷ, ಸಂಕ್ಷೇಪೀಕರಣ ಮುಂತಾದವುಗಳನ್ನು ವಿವರಿಸಿ, ಬರಹದಲ್ಲಿರುವುದಕ್ಕೂ ಬಳಕೆಯಲ್ಲಿರುವುದಕ್ಕೂ ಇರುವ ವ್ಯತ್ಯಾಸವನ್ನು ಎತ್ತಿ ತೋರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸ್ಥಳನಾಮಗಳ ವರ್ಗೀಕರಣ ಮತ್ತು ಭಾಷಿಕ ವಿವೇಚನೆಯನ್ನು ಆಧಾರವಾಗಿರಿಸಿಕೊಂಡು 'ಸ್ಥಳನಾಮಗಳ ನಿಷ್ಪತ್ತಿ ನಿರೂಪಣೆ' ಮಾಡಲಾಗಿದೆ. ಇದರಿಂದ ಆ ಗ್ರಾಮ ಯಾವ ವರ್ಗಕ್ಕೆ ಸೇರಿದುದು ಎಂಬುದು ವ್ಯಕ್ತವಾಗುತ್ತದೆ. ಮತ್ತು ಪದ ವಿಗ್ರಹಿಸಿ ಅರ್ಥಹೇಳುವುದರಿಂದ ಅದರ ಮೂಲಾರ್ಥವು ಸ್ಪಷ್ಟವಾಗುತ್ತದೆ.

ಪ್ರಾಸಂಗಿಕವಾಗಿ ಸ್ಥಳಪುರಾಣವನ್ನು, ಐತಿಹ್ಯಗಳನ್ನು ಬಳಸಿಕೊಂಡು ಗ್ರಾಮನಾಮಗಳ ನಿಷ್ಪತ್ತಿಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಕನ್ನಡವು ಜೀವಂತ ಭಾಷೆಯಾಗಿದ್ದುದರಿಂದ, ಸಾಹಿತ್ಯಕವಾದುದರಿಂದ ಪರಿವರ್ತನೆಯನ್ನು ಕಾಣಲು ಸಾಧ್ಯ. ದೊರೆತ ಶಾಸನಗಳನ್ನು, ಸಾಹಿತ್ಯ ಕೃತಿಗಳನ್ನು ಆಧಾರವಾಗಿರಿಸಿಕೊಂಡು ಕೆಲವು ಗ್ರಾಮನಾಮಗಳಲ್ಲಿ ಉಂಟಾದ ಪರಿವರ್ತನೆಯನ್ನು ತಿಳಿಸಲಾಗಿದೆ.

ಇಂದು ಬಳಕೆಯಲ್ಲಿರದ ಕಂಕ, ಕನ್ನ, ಕುಂಚ, ಆಚ, ಡಮ್ಮ, ದಾಮಲೆ, ಚಾಮಲೆ ಮುಂತಾದ ಅಂಕಿತನಾಮಗಳನ್ನು ಗುರುತಿಸಿ ಸ್ಪಷ್ಟನೆ ನೀಡಲಾಗಿದೆ.

ಒಂದಕ್ಕಿಂತ ಹೆಚ್ಚು ಸಂಭಾವ್ಯತೆಗಳಿದ್ದಾಗ ಪ್ರಾಮುಖ್ಯತೆಗನುಸಾರವಾಗಿ ಎಲ್ಲವನ್ನೂ ಸ್ವೀಕರಿಸಲಾಗಿದೆ. ಅಲ್ಲದೆ ಆಲಮಟ್ಟಿ ಆಣೆಕಟ್ಟೆಯ ಯೋಜನೆಯಿಂದ ಮುಳುಗಡೆಯಾದ ಪ್ರದೇಶದಲ್ಲಿ ನವೀನವಾಗಿ ನಿರ್ಮಾಣಗೊಂಡು ನಾಮಕರಣ ಹೊಂದಿದ ಗ್ರಾಮಗಳನ್ನು ಗುರುತಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ 'ಬಾಗಲಕೋಟೆ ಜಿಲ್ಲೆಯ ಸಂಸ್ಕೃತಿ ಸ್ವರೂಪ ದರ್ಶನ' ಮಾಡಲಾಗಿದೆ. ಪ್ರಾಗೈತಿಹಾಸಿಕ ಕಾಲದ ಕುರುಹುಗಳು ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ನದಿಗಳ ತೀರದ ಬೆಟ್ಟ ಪ್ರದೇಶಗಳಲ್ಲಿ ದೊರೆಯುತ್ತಿವೆಯಾದರೂ ಆ ಸಂಸ್ಕೃತಿಯನ್ನು ತಿಳಿಸುವ ಗ್ರಾಮನಾಮಗಳಿಲ್ಲ.

ಮಾನವನ ಸಂಸ್ಕೃತಿ ಬೆಳೆದುದು, ಜಾಗತಿಕ ಇತಿಹಾಸವನ್ನು ಪರೀವೀಕ್ಷಿಸಿದಾಗ, ನದಿ ತೀರಗಳಲ್ಲಿ ಯಾದರೂ ಜನರು ಮೊದಲು ನೆಲೆ ನಿಂತುದು ಎತ್ತರದ ಪ್ರದೇಶಗಳಲ್ಲಿ. ಈ ದೃಷ್ಟಿಯಿಂದ ನೋಡಿದಾಗ ಬಾಗಲಕೋಟೆ ಜಿಲ್ಲೆಯಲ್ಲಿ ಬಾದಾಮಿ, ಹುನಗುಂದ, ಬಾಗಲಕೋಟೆ ತಾಲೂಕುಗಳಲ್ಲಿ ಗುಡ್ಡ-ದಿನ್ನೆಗಳ ಮೇಲೆ ಮೊದಲು ಜನವಸತಿಯಾಗಿದ್ದು, ಆನಂತರ ಕೃಷ್ಣಾ, ಘಟಪ್ರಭಾ, ಮಲಪ್ರಭಾ ನದೀ ತೀರಗಳಲ್ಲಿ ಸಂಸ್ಕೃತಿ ಬೆಳೆಯಿತು ಎಂಬುದನ್ನು ಇಲ್ಲಿ ವಿವೇಚಿಸಲಾಗಿದೆ.

ಗಿಡಗಳ ಬುಡಕ್ಕಿರುವ ಕಟ್ಟೆಗಳು ನ್ಯಾಯಪಂಚಾಯತಿಯ ಕಟ್ಟೆಗಳು. ಇಂತಹ ನ್ಯಾಯ ಪಂಚಾಯತಿಯು ಬಾಗಲಕೋಟೆ ಜಿಲ್ಲೆಯಲ್ಲಿ ಇದ್ದಿತೆಂಬುದನ್ನು ಗುರುತಿಸಲಾಗಿದೆ.

ಸಿಂಹ, ಹರಿಣ ಮುಂತಾದ ವನ್ಯ ಜೀವಿಗಳ ಜೊತೆಗೆ ಆಕಳು, ಎಮ್ಮೆ ಮುಂತಾದ ಸಾಕು ಪ್ರಾಣಿಗಳ ಹೆಸರುಗಳು ಗ್ರಾಮನಾಮಗಳಲ್ಲಿ ಸಾಕಷ್ಟಿವೆ, ಇವುಗಳಿಗೆ ಆಶ್ರಯವಾಗಿರುವ ಹಟ್ಟಿ, ದಡ್ಡಿಗಳೂ ಇವೆ. ಒಕ್ಕಲುತನಕ್ಕೆ ಬಳಕೆಯಾಗುವ 'ಹಲ'ದಿಂದಲೂ ಅನೇಕ ಊರುಗಳು ಕರೆಸಿಕೊಂಡಿವೆ. ಇವು ಪಶು-ಕೃಷಿ ಸಂಸ್ಕೃತಿಯನ್ನು ವ್ಯಕ್ತಪಡಿಸುತ್ತವೆ.

ಹಲವು ಗ್ರಾಮಗಳ ಪೂರ್ವಪದಗಳಾದ ಜನ್ನ, ಇಂಗಳ, ಬೂದಿ, ಇದ್ದಿಲು ಇವು ಅಗ್ನಿಯ ಕುರುಹುಗಳಾಗಿವೆ. ಇದರಿಂದ ಈ ಪ್ರದೇಶದ ಪ್ರಾಚೀನತೆ ವ್ಯಕ್ತವಾಗುವುದರ ಜೊತೆಗೆ ಋಷಿ ಸಂಸ್ಕೃತಿಯು ತಿಳಿಯಲ್ಪಡುತ್ತದೆ.

ಅನೇಕ ಗ್ರಾಮಗಳಿಗೆ ದೇವತೆಗಳ ಹೆಸರುಗಳನ್ನು ನೇರವಾಗಿ ಇಟ್ಟಿರುವುದನ್ನು ಕಾಣುತ್ತೇವೆ. ಇವು ಗುಡಿ ಸಂಸ್ಕೃತಿಯ ಕುರುಹುಗಳು. ರಾಮ, ಸೀತೆ, ಹನುಮಂತ, ಜಟಾಯು, ಮತ್ತು ಕೃಷ್ಣ, ಕುಂತಿ, ಭೀಮ, ಶಲ್ಯ ಇವು ಪುರಾಣ ಪುರುಷರನ್ನು ಸೂಚಿಸುತ್ತವೆ. ಈ ಸಂಸ್ಕೃತಿಯು ಬಾಗಲಕೋಟೆ ಜಿಲ್ಲೆಯಲ್ಲಿರುವುದು ಸ್ಥಳನಾಮಗಳಿಂದ ವ್ಯಕ್ತವಾಗುತ್ತದೆ.

ಕೋಟೆ, ಪುರ, ರಾಜ-ರಾಣಿಯರ ಹೆಸರುಗಳು ಗ್ರಾಮನಾಮಗಳಲ್ಲಿ ಕಂಡುಬರುತ್ತವೆ. ಇವು ನಾಗರಿಕ ಸಂಸ್ಕೃತಿಯ ಪ್ರತೀಕಗಳು.

'ಬಾಗಲಕೋಟೆ ಜಿಲ್ಲೆಯ ಸ್ಥಳನಾಮಗಳು' ಈ ವಿಷಯ ಕುರಿತು ಅಧ್ಯಯನ ಮಾಡುವಲ್ಲಿ ಮಾನವನ ಅಲೆಮಾರಿತನದ ಹಂತದಿಂದ ಇಂದಿನವರೆಗೆ ಸ್ಥಳನಾಮಗಳನ್ನು ಇಡುವಲ್ಲಿ ಅನುಸರಿಸಿರ ಬಹುದಾದ ಪ್ರಾಕೃತಿಕ, ಐತಿಹಾಸಿಕ, ಸಾಂಸ್ಕೃತಿಕ ಅಂಶಗಳ ಸ್ವರೂಪವನ್ನು ಸಾಧ್ಯವಿದ್ದಷ್ಟು ಆಧಾರ

ಸಹಿತ ವಿವೇಚಿಸಲಾಗಿದೆ. ಅದಕ್ಕಾಗಿ ಸ್ಥಳನಾಮಗಳ ಅಧ್ಯಯನದ ಇತಿಹಾಸ ಕೊಟ್ಟು, ಅಭ್ಯಾಸದ ಅನೂಕೂಲತೆಗಾಗಿ ಸ್ಥಳನಾಮಗಳನ್ನು ವರ್ಗೀಕರಿಸಿ, ಭಾಷಿಕವಿವೇಚನೆಯಿಂದ ಅವಕ್ಕೊಂದು ಖಚಿತತೆಯನ್ನು ತಂದುಕೊಟ್ಟು, ಸ್ಥಳಪುರಾಣ ಐತಿಹ್ಯಗಳನ್ನು ಜೊತೆಗಿರಿಸಿಕೊಂಡು, ಶಾಸನ, ಸಾಹಿತ್ಯಗಳ ಆಧಾರದಿಂದ ಗ್ರಾಮನಾಮಗಳಲ್ಲಿ ಉಂಟಾದ ಪರಿವರ್ತನೆಯನ್ನು ಅವಲೋಕಿಸಿ, ಇವೆಲ್ಲವುಗಳ ಪರಿಣಾಮವಾಗಿ ಹೊರಹೊಮ್ಮಿದ ಸಂಸ್ಕೃತಿ ಸ್ವರೂಪವನ್ನು ಸಾದರಪಡಿಸುವಲ್ಲಿ ಸಾಧ್ಯವಿದ್ದ ಮಟ್ಟಿಗೆ ಸಾಫಲ್ಯ ಪಡೆದಿದೆ ಎಂದು ಹೇಳಬಹುದಾಗಿದೆ.

ಅಡಿಟಿಪ್ಪಣಿ

೧. ಅಂಬಿಕಾತನಯದತ್ತ.

೨. ಕ್ಷಣೇಕ್ಷಣೇಯನ್ನವತಾಮುಪೈತಿ ತದೇವರಮಣೀಯತಾ.

೩. "ವ್ಯಕ್ತಿನಾಮ, ಕುಟುಂಬನಾಮಗಳಿಗಿಂತ ಗ್ರಾಮನಾಮ ಹೆಚ್ಚು ಪ್ರಾಚೀನವೂ ಹೆಚ್ಚು ಅನ್ವರ್ಥಕವೂ ಆಗಿರುವುದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಇದು ಹೆಚ್ಚು ಮಹತ್ವದ ಪಾತ್ರವಹಿಸುತ್ತದೆ." 'ಕನ್ನಡ ನಾಮ ವಿಜ್ಞಾನ': ಲೇ: ಡಾ. ಎಂ.ಎಂ.ಕಲಬುರ್ಗಿ, ಪು. ೮೧. ಈ ಹೇಳಿಕೆ ತಿರುವುಮುರುವಾಗಿದೆ.

ಅನುಬಂಧಗಳು

೧. ಬಾಗಲಕೋಟೆ ಜಿಲ್ಲೆಯ ತಾಲೂಕುವಾರು ಸ್ಥಳನಾಮಗಳು

ಅಖಂಡ ಬಿಜಾಪುರ ಜಿಲ್ಲೆಯಲ್ಲಿದ್ದ ಬಾಗಲಕೋಟೆಯು ಒಂದು ತಾಲೂಕಾಗಿತ್ತು. ೧೯೯೭ರ ನಂತರ ಬಾಗಲಕೋಟೆಯು ಆರು ತಾಲೂಕುಗಳನ್ನೊಳಗೊಂಡು ಒಂದು ಪರಿಪೂರ್ಣ ಜಿಲ್ಲೆಯಾಗಿ ಪರಿಣಮಿಸಿತು. ಇದರಲ್ಲಿ ಪುಣ್ಯಕ್ಷೇತ್ರಗಳನ್ನು ಹೊರತುಪಡಿಸಿ ಇನ್ನುಳಿದ ಊರುಗಳು ಹಾಗೂ ಪುನರ್ವಸತಿ ಕೇಂದ್ರಗಳನ್ನು ಸೇರಿಸಿ ಬಾಗಲಕೋಟೆ ಜಿಲ್ಲಾ ಆಡಳಿತವು ಊರುಗಳ ಪಟ್ಟಿಯನ್ನು ಸಿದ್ಧಪಡಿಸಿದೆ. ಆದ್ದರಿಂದ ಜಿಲ್ಲೆಯ ನಿರ್ದಿಷ್ಟ ಹಾಗೂ ಅಧಿಕೃತ ಊರುಗಳ ಹೆಸರುಗಳನ್ನು ತಾಲೂಕು ವಾರು ಈ ಕೆಳಗೆ ನೀಡಲಾಗಿದೆ.

೧. ಜಮಖಂಡಿ ತಾಲೂಕು – ೭೭

೨. ಬಾಗಲಕೋಟೆ ತಾಲೂಕು – ೧೦೧

೩. ಬಾದಾಮಿ ತಾಲೂಕು – ೧೫೫

೪. ಬೀಳಗಿ ತಾಲೂಕು – ೬೮

೫. ಮುಧೋಳ ತಾಲೂಕು – ೮೨

೬. ಹುನಗುಂದ ತಾಲೂಕು – ೧೬೯

ಊರುಗಳನ್ನು ಒಳಗೊಂಡಿವೆ. ಇನ್ನು ಈ ಜಿಲ್ಲೆಯಲ್ಲಿ ಪುಣ್ಯಕ್ಷೇತ್ರಗಳು: ಬನಶಂಕರಿ, ಮಹಾಕೂಟ, ಶಿವಯೋಗ ಮಂದಿರ, ಕೂಡಲಸಂಗಮ ಒಟ್ಟು ೪ ಇವೆ.

೧. ಜಮಖಂಡಿ ತಾಲೂಕು

ಊರಿನ ಹೆಸರು	ಊರಿನ ಹೆಸರು
ಅಡಿಹುಡಿ	ಗೋಠೆ
ಅಲಗೂರು	ಗೋಲಬಾವಿ
ಅಲಬಾಳ	ಚಿಕ್ಕಜಂಬಗಿ (ಕೆ.ಡಿ.)
ಅಸ್ಕಿ	ಚಿಕ್ಕಪಡಸಲಗಿ
ಆಸಂಗಿ	ಚಿಕ್ಕಲಕಿ
ಕಂಕಣವಾಡಿ	ಚಿನಗುಂಡಿ
ಕಡಕೋಳ	ಚಿಮ್ಮಡ
ಕಡಪಟ್ಟಿ	ಜಕ್ಕನೂರು
ಕನ್ನೊಳ್ಳಿ	ಜಗದಾಳ
ಕಲಬೆಳಿಗ್ಗೆ	ಜನವಾಡ
ಕಲ್ಲಹಟ್ಟಿ	ಜಮಖಂಡಿ
ಕಲ್ಲಹಳ್ಳಿ	ಟಕ್ಕಳಕಿ
ಕವಟಗಿ	ಟಕ್ಕೋಡ
ಕಾಜಿಬೆಳಿಗ್ಗೆ	ತಮದಡ್ಡಿ
ಕಾಲತಿಪ್ಪಿ	ತುಂಗಳ
ಕುಂಚನೂರು	ತುಬಚಿ
ಕುಂಬಾರಹಳ್ಳ	ತೇರದಾಳ
ಕುರಗೋಡ	ತೊದಲಬಾಗಿ
ಕುಲಹಳ್ಳಿ	ದಾಸರಕಟ್ಟಿ
ಕೊಣ್ಣೂರು	ದೇಸಾಯಿಕೆರೆ
ಗಣಿ	ನಾಕೂರ
ಗದ್ಯಾಳ	ನಾಗನೂರು

ನಾವಲಗಿ

ಬಂಡಿಗಣಿ

ಬನಹಟ್ಟಿ

ಬಿದರಿ

ಬುದ್ನಿ

ಮದನಮಟ್ಟಿ

ಮದರಖಂಡಿ

ಮರನೂರ

ಮರೆಗುದ್ದಿ

ಮುತ್ತೂರು

ಮೈಗೂರು

ಯರಗಟ್ಟಿ

ಯಲ್ಲಟ್ಟಿ

ರಬಕವಿ

ರಾಮತೀರ್ಥ

ರಾಮಪೂರ

ಲಿಂಗನೂರು

ಶಿರಗುಪ್ಪಿ

ಶೂರ್ಪಾಲಿ

ಸನಾಳ

ಸಸಾಲಟ್ಟಿ

ಸಾವಳಗಿ

ಸಿದ್ಧಾಪೂರ

ಹಂಚಿನಾಳ

ಹನಗಂಡಿ

ಹಳಿಂಗಳಿ

ಹಿಪ್ಪರಗಿ

ಹಿರೇಜಂಬಗಿ (ಬಿ.ಕೆ.)

ಹಿರೇಪಡಸಲಗಿ

ಹುಣಸಿಕಟ್ಟಿ

ಹುನ್ನೂರು

ಹುಲ್ಯಾಳ

ಹೊಸೂರು

೨. ಬಾಗಲಕೋಟೆ ತಾಲೂಕು

ಊರಿನ ಹೆಸರು	ಊರಿನ ಹೆಸರು
ಅಂಕಲಗಿ	ಚಿಟಕಿನಕೊಪ್ಪ
ಅಂಡಮುರನಾಳ	ಚೌಡಾಪೂರ
ಆಚನೂರು	ಛಬ್ಬಿ
ಆನದಿನ್ನಿ	ಜಡ್ರಾಮಕುಂಟಿ
ಆಲೂರು	ಡೊಮನಾಳ
ಇಂಗಳಗಿ	ತಿಮ್ಮಾಪೂರ
ಇಲಾಳ	ತುಗಲಟ್ಟಿ
ಉದಗಟ್ಟಿ	ತುಳಸಿಗೇರಿ
ಕಡ್ಲಿಮಟ್ಟಿ	ತೆಳಗಿನಹಾಳ
ಕದಂಪೂರ	ದೇವಲಾಪೂರ. ಎಸ್.ಬಿ.
ಕಲಾದಗಿ	ದೇವಲಾಪೂರ. ಎಸ್.ಎಂ.
ಕಳಸಕೊಪ್ಪ	ದೇವನಾಳ
ಕಿರಸೂರ	ನಕ್ಕರಗುಂದಿ
ಕೆಸರನೂರ	ನಾಗಸಂಪಿಗೆ
ಖಜ್ಜಿಡೋಣಿ	ನಾಗರಾಳ
ಗದ್ದನಕೇರಿ	ನಯನೂರ
ಗೋವನಕೊಪ್ಪ	ನಾಯನೇಗಲಿ
ಚಿಕ್ಕಗುಳಬಾಳ	ನೀರಲಕೇರಿ
ಚಿಕ್ಕಮೂರಮಟ್ಟಿ	ಬನ್ನಿಕಟ್ಟೆ
ಚಿಕ್ಕಮ್ಯಾಗೇರಿ	ಬನ್ನಿದಿನ್ನಿ
ಚಿಕ್ಕಹೊದ್ಲೂರು	ಬಾಗಲಕೋಟೆ
ಚಿಕ್ಕಶೆಲ್ಲಿಕೇರಿ	ಬಿಲ್ಲಕೆರೂರ
ಚಿಕ್ಕಸಂಶಿ	ಬೆಣ್ಣೂರು

ಬೆನಕಟ್ಟಿ
ಬೇವಿನಮಟ್ಟಿ
ಬೇವೂರು
ಬೊಮ್ಮಣಗಿ
ಬೋಡನಾಯಕನದಿನ್ನಿ
ಭಗವತಿ
ಭೈರನಟ್ಟಿ
ಮಂಕಣಿ
ಮನಹಳ್ಳಿ
ಮನ್ನಿಕಟ್ಟಿ
ಮಲ್ಲಾಪೂರ
ಮಾಗಿ
ಮಾರಾಪೂರ
ಮಾಸ್ತಿಹಾಳ
ಮ್ಯಾಗೇರಿ
ಮುಗಳೊಳ್ಳಿ
ಮುಚಖಂಡಿ
ಮುಡಪಲಜೀವಿ
ಮುತ್ತತ್ತಿ
ಮುದವಿನಕೊಪ್ಪ
ಮುಮ್ಮಣಿಗೆ
ಮುರನಾಳ
ಯಂಕಂಚಿ
ಯಡಹಳ್ಳಿ
ರಾಂಪೂರ
ಲವಳೇಶ್ವರ
ವೀರಾಪೂರ
ಶಾರದಾಳ
ಶಿರಗುಪ್ಪಿ
ಶಿರೂರ
ಸಂಗಾಪೂರ
ಸಂಗೊಂದಿ
ಸಂಶಿ
ಸಿಂಧಗಿ
ಸಿದ್ನಾಳ
ಸೀಗಿಕೇರಿ
ಸೀತಿಮನಿ
ಸೀಮಿಕೇರಿ
ಸುಕನಾದಗಿ
ಸುತಗುಂಡಾರ
ಸೋಮನಕೊಪ್ಪ
ಸೋರಕೊಪ್ಪ
ಹಂಟರಗಲ್ಲು
ಹಣಮಾಪೂರ
ಹವೇಲಿ
ಹಳ್ಳೂರು
ಹಿರೇಗುಳಬಾಳ
ಹಿರೇಮ್ಯಾಗೇರಿ
ಹಿರೇಮೂರಮಟ್ಟಿ
ಹಿರೇಶೆಲ್ಲಿಕೇರಿ
ಹಿರೇಸಂಶಿ
ಹಿರೇಹೊದ್ಲೂರು
ಹೊನರಳ್ಳಿ
ಹೊನ್ನಕಟ್ಟಿ
ಹೊಸೂರು

೩. ಬಾದಾಮಿ ತಾಲೂಕು

ಊರಿನ ಹೆಸರು	ಊರಿನ ಹೆಸರು
ಅಗಸನಕೊಪ್ಪ	ಕಾಟಾಪುರ
ಅನಂತಗಿರಿ	ಕಾಡರಕೊಪ್ಪ
ಅನವಾಲ	ಕಾತರಕಿ
ಆಡಗಲ್ಲು	ಕಿತ್ತಲಿ
ಆಲದಕಟ್ಟಿ	ಕುಟಕನಕೇರಿ
ಆಲೂರು ಎಸ್.ಪಿ.	ಕುಳಗೇರಿ
ಆಲೂರು ಎಸ್.ಕೆ.	ಕೆಂದೂರು
ಆಸಂಗಿ	ಕೆರಕಲಮಟ್ಟಿ
ಇಂಜಿನವಾರಿ	ಕೆರೂರು
ಉಗಲವಾಟ	ಕೆಲವಡಿ
ಕಗಲಗೊಂಬ	ಕೈನಕಟ್ಟಿ
ಕಟಗಿನಹಳ್ಳಿ	ಕೊಂಕಣಕೊಪ್ಪ
ಕಟಗೇರಿ	ಕೊಟ್ನಳ್ಳಿ
ಕಡಪಟ್ಟಿ	ಕೋಟಿಕಲ್ಲು
ಕಬ್ಬಲಗೇರಿ	ಖಾಜಿ ಬೂದಿಹಾಳ
ಕರಡಿಗುಡ್ಡ ಎಸ್.ಎನ್.	ಖಾನಾಪೂರ ಎಸ್.ಪಿ.
ಕರಡಿಗುಡ್ಡ ಎಸ್.ಎ.	ಖಾನಾಪೂರ ಎಸ್.ಕೆ.
ಕಲಬಂದಕೇರಿ	ಖ್ಯಾಡ
ಕಲ್ಲಾಪೂರ	ಗಂಗನ ಬೂದಿಹಾಳ
ಕರ್ಲಕೊಪ್ಪ	ಗಿಡ್ಡನಾಯಕನಹಾಳ
ಕಳಸ	ಗುಡ್ಡದ ಮಲ್ಲಾಪೂರ
ಕಾಕನೂರು	ಗುಬ್ಬೇರಕೊಪ್ಪ

ಗುಳೇದಗುಡ್ಡ
ಗೋನಾಳ
ಗೋವನಕೊಪ್ಪ
ಗೋವನಕಿ
ಚಿಂಚಲಕಟ್ಟಿ
ಚಿಕ್ಕನಸಬಿ
ಚಿಕ್ಕಮುಚ್ಚಳಗುಡ್ಡ
ಚಿಮ್ಮನಕಟ್ಟಿ
ಚಿಮ್ಮಲಗಿ
ಚಿರ್ಲಕೊಪ್ಪ
ಚೊಳಚಗುಡ್ಡ
ಜಂಗವಾಡ
ಜಕನೂರು
ಜಮ್ಮನಕಟ್ಟಿ
ಜಲಗೇರಿ
ಜಾಲಿಹಾಳ
ಢಾಣಕ ಶಿರೂರ
ತಪಸಗಟ್ಟಿ
ತಮಿನಾಳ
ತಳಕವಾಡ
ತಿಮ್ಮಸಾಗರ
ತಿಮ್ಮಾಪೂರ ಎಸ್.ಎನ್.
ತೂಗುಣಸಿ
ತೆಗ್ಗಿ
ನಂದಿಕೇಶ್ವರ
ನರಸಾಪೂರ
ನರೇನೂರ
ನವಿಲಹೊಳೆ
ನಸಗುನ್ನಿ
ನಾಗನೂರು
ನಾಗರಾಳ ಎಸ್.ಪಿ.
ನಾಗರಾಳ ಎಸ್.ಬಿ.
ನೀರಲಕೇರಿ
ನೀರಲಗಿ
ನೀರಬೂದಿಹಾಳ
ನೀಲಗುಂದ
ನೆಲುವಿಗಿ
ಪಟ್ಟದಕಲ್ಲು
ಪರ್ವತಿ
ಪಾದನಕಟ್ಟೆ
ಫಕೀರಬೂದಿಹಾಳ
ಬಂಕನೇರಿ
ಬಂದಕೇರಿ
ಬನಶಂಕರಿ
ಬಾಚನಗುಡ್ಡ
ಬಾದಾಮಿ
ಬೀರನೂರು
ಬೂದಿನಗಡ
ಬೂದಿಹಾಳ
ಬೆಳವಲಕೊಪ್ಪ
ಬೆಳ್ಳಿಕಿಂಡಿ
ಬೇಡರ ಬೂದಿಹಾಳ
ಬೇಲೂರು
ಭದ್ರನಾಯಕನಹಾಳ
ಮಂಗಳಗುಡ್ಡ
ಮಂಗಳೂರು
ಮಣಿನಾಗರ
ಮಣ್ಣೇರಿ
ಮತ್ತಿಕಟ್ಟಿ
ಮಮ್ಮಟಗೇರಿ

ಮಲ್ಲಾಪೂರ
ಮಹಾಕೂಟ
ಮಾಳಗಿ
ಮುತ್ತಲಗೇರಿ
ಮುಮ್ಮರಡಿಕೊಪ್ಪ
ಮುರಡಿ
ಮುಷ್ಟಿಗೇರಿ
ಯಂಕಂಚಿ
ಯಂಡಿಗೇರಿ
ಯರಗೊಪ್ಪ ಇನಾಂ
ಯರಗೊಪ್ಪ ಎಸ್.ಬಿ
ರಡ್ಡೇರ ತಿಮ್ಮಾಪೂರ
ರಾಘಾಪೂರ
ರಾಮತೀರ್ಥ
ಲಕ್ಕಸಕೊಪ್ಪ
ಲಖಮಾಪೂರ
ಲಾಯದಗುಂದಿ
ಲಿಂಗಾಪೂರ
ವಡವಟ್ಟಿ
ಶಿರಬಡಗಿ
ಶಿವಯೋಗ ಮಂದಿರ
ಸಬ್ಬಲಹುಣಸಿ
ಸೀಪರಮಟ್ಟಿ
ಸುಳ್ಳ
ಸೂಳಿಕೇರಿ

ಸೋಮನಕೊಪ್ಪ
ಹಂಗರಗಿ
ಹಂಸನೂರು
ಹನಮನೇರಿ
ಹನಮನೇರಿ ಇನಾಂ
ಹನಮಸಾಗರ
ಹರಡೊಳ್ಳಿ
ಹಲಕುರ್ಕಿ
ಹವಳಕೋಡ
ಹಳಗೇರಿ
ಹಳದೂರು
ಹಾಗನೂರು
ಹಾನಾಪುರ ಎಸ್.ಕೆ.
ಹಾನಾಪುರ ಎಸ್.ಪಿ.
ಹಾಲಿಗೇರಿ
ಹಿರೇನಸಬಿ
ಹಿರೇಬೂದಿಹಾಳ
ಹಿರೇಮುಚ್ಚಳಗುಡ್ಡ
ಹುಲಸಗೇರಿ
ಹುಲ್ಲಿಕೇರಿ ಎಸ್.ಪಿ.
ಹುಲ್ಲಿಕೇರಿ ಇನಾಂ
ಹೂಲಗೇರಿ
ಹೆಬ್ಬಳ್ಳಿ
ಹೊಸಕೋಟೆ
ಹೊಸೂರು

೪. ಬೀಳಗಿ ತಾಲೂಕು

ಊರಿನ ಹೆಸರು	ಊರಿನ ಹೆಸರು
ಅನಗವಾಡಿ	ಗುಡದಿನ್ನಿ
ಅಮಲಝುರಿ	ಗುಳಬಾಳ
ಅರಕೇರಿ	ಗೋಡಿಹಾಳ
ಅಳಗುಂಡಿ	ಗೋವಿನದಿನ್ನಿ
ಇನಾಂ ಹಂಚಿನಾಳ	ಚಿಕ್ಕಸಂಗಮ
ಕಂದಗಲ್ಲ	ಚಿಕ್ಕಹಂಚಿನಾಳ
ಕಡಪಟ್ಟಿ	ಚಿಕ್ಕಾಲಗುಂಡಿ
ಕಮದಾಳ	ಚಿನಿವಾಲಕೊಪ್ಪ
ಕಾತರಕಿ	ಚೌಡಾಪೂರ
ಕುಂದರಗಿ	ಜಾನಮಟ್ಟಿ
ಕೊಂತಿಕಲ್ಲ	ಟಕ್ಕಳಕಿ
ಕೊಪ್ಪ ಎಸ್.ಆರ್.	ಡವಳೇಶ್ವರ
ಕೊಪ್ಪ ಎಸ್.ಕೆ.	ತುಂಬರಮಟ್ಟಿ
ಕೊರ್ತಿ	ತೆಗ್ಗಿ
ಕೋಲೂರು	ತೋಳಮಟ್ಟಿ
ಕೋವಳ್ಳಿ	ನಾಗರಾಳ
ಗರಡದಿನ್ನಿ	ಬಳ್ಳೂರು
ಗಲಗಲಿ	ಬಾಡಗಂಡಿ
ಗಿರಿಗಾಂವ್	ಬಾಡಗಿ
ಗಿರಿಸಾಗರ	ಬಾದರದಿನ್ನಿ
ಗುಂಡನಪಲ್ಲಿ	ಬಾವಲತ್ತಿ

ಬಿಸನಾಳ
ಬೀರಕಬ್ಬಿ
ಬೀಳಗಿ
ಬೂದಿಹಾಳ ಎಸ್.ಜಿ.
ಬೂದಿಹಾಳ ಎಸ್.ಎಚ್.
ಮನ್ನಿಕೇರಿ
ಮಾನಗೂರು
ಮುಂಡಗನೂರು
ಮುತ್ತಲದಿನ್ನಿ
ಯಡಹಳ್ಳಿ
ಯತ್ನಟ್ಟಿ
ಯಳ್ಳಿಗುತ್ತಿ
ರಬಕವಿ
ರೊಳ್ಳಿ
ರೋಣಿಹಾಳ
ಲಿಂಗಾಪೂರ ಎಸ್.ಕೆ.
ಲಿಂಗಾಪೂರ ಎಸ್.ಆರ್.
ಶಿರಗುಪ್ಪಿ
ಸಿದ್ಧಾಪೂರ
ಸುನಗ
ಸೊನ್ನ
ಹದರಿಹಾಳ
ಹೆಗ್ಗೂರು
ಹೆರಕಲ್
ಹೊನರಹಳ್ಳಿ
ಹೊನ್ನಿಹಾಳ

೫. ಮುಧೋಳ ತಾಲೂಕು

ಊರಿನ ಹೆಸರು	ಊರಿನ ಹೆಸರು
ಅಂತಾಪೂರ	ಜಾಲಿಕಟ್ಟೆ ಬಿ.ಕೆ.
ಅಕ್ಕಿಮರಡಿ	ಜಾಲಿಕಟ್ಟೆ ಕೆ.ಡಿ.
ಆಲಗುಂಡಿ	ಜಾಲಿಬೇರ
ಇಂಗಳಗಿ	ಜೀರಗಾಳ
ಉತ್ತೂರು	ಜುನ್ನೂರು
ಒಂಟಿಗೋಡಿ	ಢವಳೇಶ್ವರ
ಒರ್ಚಗಲ್	ತಿಮ್ಮಾಪೂರ
ಕಣಬೂರು	ದಾದನಟ್ಟಿ
ಕನಸಗೇರಿ	ನಂದಗಾಂವ
ಕಿಸೋರಿ	ನಾಗಣಾಪುರ
ಕುಳಲಿ	ನಾಗರಾಳ
ಕೆಸರಕೊಪ್ಪ	ನಿಂಗಾಪೂರ
ಗುಳಗಾಲ ಜಂಬಗಿ	ಪಾಲಕಿ ಮಾನ್ಯ
ಚಿಂಚಕಂಡಿ ಕೆ.ಡಿ	ಪೆಟ್ಲೂರು
ಚಿಂಚಕಂಡಿ ಬಿ.ಕೆ	ಬಂಟನೂರು
ಚಿಕ್ಕೂರು	ಬದ್ನೂರು
ಚಿತ್ರಬಾಣಕೋಟೆ	ಬರಗಿ
ಚೆನ್ನಾಳ	ಬಾದರದಿನ್ನಿ
ಚೌಡಾಪೂರ	ಬಿದರಿ
ಜಂಜರಕೊಪ್ಪ	ಬಿಸನಾಳ
ಜಂಬಗಿ	ಬುದ್ನಿ ಬಿ.ಕೆ.
ಜಾಡರ ಅರಳಿಕಟ್ಟೆ	ಬುದ್ನಿ ಕೆ.ಡಿ.

ಬುದ್ನಿ ಪಿ.ಡಿ.
ಬುದ್ನಿ ಪಿ.ಎ.
ಬೆಳಗಲಿ
ಬೇಡರ ಅರಳಿಕಟ್ಟಿ
ಬೊಮ್ಮನದಿನ್ನಿ ಬುದ್ನಿ
ಮಂಟೂರು
ಮದನೂರು
ಮಧಬಾವಿ
ಮಲ್ಲಾಪೂರ ಪಿ.ಜಿ.
ಮಲ್ಲಾಪೂರ ಪಿ.ಎಲ್.
ಮರಿಕಬ್ಬಿ
ಮಹಾಲಿಂಗಪೂರ
ಮಳಲಿ
ಮಾಚಕನೂರು
ಮಾರಾಪೂರ
ಮಾಲಾಪೂರ
ಮಿರ್ಜಿ
ಮುಗಳಖೋಡ
ಮುದ್ದಾಪೂರ
ಮುಧೋಳ
ಮೆಟ್ಗುಡ್ಡ
ಮೆಳ್ಳಿಗೇರಿ
ಯಡಳ್ಳಿ
ರಂಜಣಗಿ
ರೂಗಿ
ಲಕ್ಷಾನಟ್ಟಿ
ಲೋಕಾಪೂರ
ವಂಚಗಾಳ
ವಜ್ಜರಮಟ್ಟಿ
ಶಿರೋಳ
ಸಂಗಾನಟ್ಟೆ
ಸಮೀರವಾಡಿ
ಸೈದಾಪೂರ
ಸೋರಗಾಂವ
ಹಲಕಿ
ಹಲಗಲಿ
ಹೆಬ್ಬಾಳ
ಹೊಸಕೋಟೆ

೬. ಹುನಗುಂದ ತಾಲೂಕು

ಊರಿನ ಹೆಸರು	ಊರಿನ ಹೆಸರು
ಅಂಬಲಿಕೊಪ್ಪ	ಕಟಗೂರು
ಅಡಿಹಾಳ	ಕಡಿವಾಲ
ಅನಪಕಟ್ಟಿ	ಕಡಿವಾಳ ಕಲ್ಲಾಪೂರ
ಅಮರವಾಡಗಿ	ಕಡ್ಲೆವಾಡ
ಅಮರಾವತಿ	ಕಜಗಲ್
ಅಮೀನಗಡ	ಕಮತಗಿ
ಅರಸಬೀದಿ	ಕಮಲದಿನ್ನಿ
ಇಂಗಳಗಿ	ಕರಡಿ
ಇಂದವಾರ	ಕಲ್ಲಗೋನಾಳ
ಇದ್ದಲಗಿ	ಕಳ್ಳಿಗುಡ್ಡ
ಇಲಾಳ	ಕ್ಯಾದಿಗ್ಗೇರಿ
ಇಸ್ಲಾಂಪೂರ	ಕಿರಸೂರು
ಇಳಕಲ್	ಕುಣಬೆಂಚಿ
ಉಪನಾಳ	ಕೂಡಲಸಂಗಮ
ಎಮ್ಮೆಟ್ಟಿ	ಕೃಷ್ಣಾಪೂರ
ಐಹೊಳೆ	ಕೆಂಗಲ್
ಒಡೆಯರಗೋನಾಳ	ಕೆಲೂರು
ಒಳಕಲದಿನ್ನಿ	ಕೆಸರಪೆಂಟಿ
ಕಂದಗಲ್ಲು	ಕೆಸರಭಾವಿ
ಕಂಬಳಿಹಾಳ	ಕೊಣ್ಣೂರು

ಕೊಪ್ಪ ಎಸ್.ಎಮ್.	ಚಿಕ್ಕಮಳಗಾಂವಿ
ಕೋಡಿಹಾಳ	ಚಿಕ್ಕಮಾಗಿ
ಕೌಜಗನೂರು	ಚಿಕ್ಕಯರನಕೇರಿ
ಖೈರವಾಡಗಿ	ಚಿಕ್ಕಸಿಂಗನಗುತ್ತಿ
ಗಂಗೂರು	ಚಿಕ್ಕಹುನಕುಂಟಿ
ಗಂಜಿಹಾಳ	ಚಿಕ್ಕನಾಳ
ಗಡಿಸುಂಕಾಪುರ	ಚಿತ್ತರಗಿ
ಗಟ್ಟಿಗನೂರು	ಚಿತ್ತವಾಡಗಿ
ಗಾನದಾಳ	ಚೀಲಾಪೂರ
ಗುಂಡಾಲ	ಚೆನ್ನಾಪೂರ ಎಸ್.ಕೆ.
ಗುಗ್ಗಲ ಮರಿ	ಚೆನ್ನಾಪೂರ ಎಸ್.ಟಿ.
ಗುಡೂರು ಎಸ್.ಬಿ.	ಚೌಕಮಲದಿನ್ನಿ
ಗುಡೂರು ಎಸ್.ಸಿ.	ಜಂಬಲದಿನ್ನಿ
ಗೊರಜನಾಳ	ಜಾಕಮಲದಿನ್ನಿ
ಗೊರಬಾಳ	ತಳ್ಳಿಕೇರಿ
ಗೋನಾಳ ಎಸ್.ಬಿ.	ತಾರಿವಾಳ
ಗೋನಾಳ ಎಸ್.ಟಿ.	ತಿಮ್ಮಾಪೂರ
ಗೋನಾಳ ಎಸ್.ಕೆ.	ತುಂಬ
ಗೋಪಸಾನಿ	ತುರಮರಿ
ಚಟ್ನಿಹಾಳ	ತುರಡಗಿ
ಚಾಮಲಾಪೂರ	ತೊಂಡಿಹಾಳ
ಚಿಂತಕಮಲದಿನ್ನಿ	ದಾಸಬಾಳ
ಚಿಕ್ಕಆದಾಪೂರ	ಧನ್ನೂರು
ಚಿಕ್ಕಓತಗೇರಿ	ಧಮ್ಮೂರು
ಚಿಕ್ಕಕೊಡಗಲಿ	ನಂದನೂರು
ಚಿಕ್ಕಬಾದವಾಡಗಿ	ನಂದವಾಡಗಿ

ನಾಗೂರು
ನಿಂಬಲಗುಂದಿ
ನಿಡಸನೂರು
ಪಾಪದನಾಳ
ಪಾಲ್ತಿ
ಪೋಚಾಪುರ
ಬನ್ನಿಹಟ್ಟಿ
ಬಲಕುಂದಿ
ಬಸರಿಕಟ್ಟೆ
ಬಸವನಾಳ
ಬಾದವಾಡಗಿ
ಬಿಂಜವಾಡಗಿ
ಬಿಸನಾಳಕೊಪ್ಪ
ಬಿಸಲದಿನ್ನಿ
ಬೂದಿಹಾಳ ಎಸ್.ಕೆ.
ಬೂದಿಹಾಳ ಎಸ್.ಆರ್
ಬೂದಿಹಾಳ ಇನಾಂ
ಬೆನಕನ ಡೋಣಿ
ಬೆನಕನ ವಾರಿ
ಬೆಳಗಲ್ಲು
ಬೇಕಮಲದಿನ್ನಿ
ಬೇವಿನಮಟ್ಟಿ
ಬೇವಿನಹಾಳ
ಭೀಮನಗಡ
ಭೈರವಾಡಗಿ
ಮನ್ಮಥನಾಳ

ಮರಟಗೇರಿ
ಮರೋಳ
ಮಲ್ಲಗಿಹಾಳ
ಮಾದಾಪೂರ
ಮುರಡಿ
ಮುಳ್ಳೂರು
ಮೂಗನೂರು
ಮೇಧಿನಾಪುರ
ಯಡಹಳ್ಳಿ
ಯರನಕೆರೆ
ಯರನಾಯಕನಹಾಳ
ರಕ್ಕಸಗಿ
ರಾಮತಾಳ
ರಾಮವಾಡಗಿ
ರೇವಡಿಹಾಳ
ಲವಳಸರ
ವಜ್ಜಳ
ವಡಗೇರಿ
ವರಗೋಡದಿನ್ನಿ
ವೀರಾಪೂರ
ಸಂಕ್ಲಾಪುರ
ಸಂಗಮ
ಸಂಗಾಪುರ
ಸಿಂಗನಗುತ್ತಿ
ಸಿದ್ಧನಕೊಳ್ಳ
ಸುರುಳಿಕಲ್ಲು

ಸೂಳಿಭಾವಿ

ಸೋಮಲಾಪುರ

ಹಂಚಿನಾಳ

ಹಗೆದಾಳ

ಹಡಗಲಿ

ಹನುಮನಾಳ ಎಸ್.ಟಿ

ಹರಿಣಾಪುರ

ಹಾವರಗಿ

ಹಿರೇಆದಾಪೂರ

ಹಿರೇಉಪನಾಳ

ಹಿರೇಓತಗೇರಿ

ಹಿರೇಕೊಡಗಲಿ

ಹಿರೇಬಾದವಾಡಗಿ

ಹಿರೇಮಳಗಾವಿ

ಹಿರೇಮಾಗಿ

ಹಿರೇಯರನಕೇರಿ

ಹಿರೇಸಿಂಗನಗುತ್ತಿ

ಹಿರೇಹುನಕುಂಟಿ

ಹುನಗುಂದ

ಹುಲಗಿನಹಾಳ

ಹುಲ್ಲೊಳ್ಳಿ

ಹೂವನೂರು

ಹೂವಿನಹಳ್ಳಿ

ಹೇಮವಾಡಗಿ

ಹೇರೂರು

ಹೊನರಳ್ಳಿ

೨. ಸಂಕೇತ ಸೂಚಿ

ಬಾಗ	–	ಬಾಗಲಕೋಟೆ
ಬಾದಾ	–	ಬಾದಾಮಿ
ಬೀಳ	–	ಬೀಳಗಿ
ಮುಧೋ	–	ಮುಧೋಳ
ಜಮ	–	ಜಮಖಂಡಿ
ಹುನ	–	ಹುನಗುಂದ
ಅ.ಸಂ.	–	ಅನುಕ್ರಮ ಸಂಖ್ಯೆ
ಪ್ರ.ಸಂ.	–	ಪ್ರಧಾನ ಸಂಪಾದಕರು
ಗೌ.ಸಂ.	–	ಗೌರವ ಸಂಪಾದಕರು
ಸಂ.	–	ಸಂಪಾದಕರು
ಮು.ಸಂ.	–	ಮುಖ್ಯ ಸಂಪಾದಕರು
ಶಾ.ಸಂ.	–	ಶಾಸನ ಸಂಪುಟ
ಕ.ಇ.	–	ಕರ್ನಾಟಕ ಇನ್‌ಕ್ರಿಪ್‌ಶನ್
ಸೌ.ಇ.ಇ.	–	ಸೌಥ ಇಂಡಿಯನ್ ಇನ್‌ಕ್ರಿಪ್‌ಶನ್
ಬಾ.ಸಾಂ.ಅ.	–	ಬಾದಾಮಿ ಸಾಂಸ್ಕೃತಿಕ ಅಧ್ಯಯನ
ಕ.ವಿ.ವಿ.	–	ಕನ್ನಡ ವಿಶ್ವವಿದ್ಯಾಲಯ

ಜಮಖಂಡಿ ತಾಲೂಕು

ಜಂಬಗಿ ಬಿ.ಕೆ.	–	ಬುದ್ರುಕ್ (ಹಿರೇ)
ಜಂಬಗಿ ಕೆ.ಡಿ.	–	ಖುರ್ದ (ಚಿಕ್ಕ)

ಬಾದಾಮಿ ತಾಲೂಕು

ಆಲೂರು ಎಸ್.ಪಿ.	–	ಸಮ್ಮತ್ ಪರ್ವತಿ
ಆಲೂರು ಎಸ್.ಕೆ.	–	ಸಮ್ಮತ್ ಕಾರ್ಲಕೊಪ್ಪ
ಕರಡಿಗುಡ್ಡ ಎಸ್.ಎ.	–	ಸಮ್ಮತ್ ಅನವಾಲ

ಕರಡಿಗುಡ್ಡ ಎಸ್.ಎನ್.	–	ಸಮ್ಮತ್ ನೀಲಗುಂದ
ಖಾನಾಪುರ ಎಸ್.ಪಿ.	–	ಸಮ್ಮತ್ ಪರ್ವತಿ
ತಿಮ್ಮಾಪೂರ ಎಸ್.ಎನ್.	–	ಸಮ್ಮತ್ ನೀಲಗುಂದ
ನಾಗರಾಳ ಎಸ್.ಬಿ.	–	ಸಮ್ಮತ್ ಬಾದಾಮಿ
ಬಿ.ಎನ್. ಜಾಲಿಹಾಳ	–	ಭದ್ರನಾಯಕನ ಜಾಲಿಹಾಳ
ಯರಗೊಪ್ಪ ಎಸ್.ಬಿ.	–	ಸಮ್ಮತ್ ಬಾದಾಮಿ

ಬೀಳಗಿ ತಾಲೂಕು

ಕೊಪ್ಪ ಎಸ್.ಕೆ.	–	ಸಮ್ಮತ್ ಕಾತರಕಿ
ಕೊಪ್ಪ ಎಸ್.ಆರ್.	–	ಸಮ್ಮತ್ ರೊಳ್ಳಿ
ಬೂದಿಹಾಳ ಎಸ್.ಜಿ.	–	ಸಮ್ಮತ್ ಗಲಗಲಿ
ಬೂದಿಹಾಳ ಎಸ್.ಎ.	–	ಸಮ್ಮತ್ ಅನಗವಾಡಿ
ಲಿಂಗಾಪೂರ ಎಸ್.ಕೆ.	–	ಸಮ್ಮತ್ ಕಾತರಕಿ
ಲಿಂಗಾಪೂರ ಎಸ್.ಆರ್.	–	ಸಮ್ಮತ್ ರೊಳ್ಳಿ

ಹುನಗುಂದ ತಾಲೂಕು

ಗುಡೂರ ಎಸ್.ಕೆ.	–	ಸಮ್ಮತ್ ಕೊಡಗಲಿ
ಗುಡೂರ ಎಸ್.ಸಿ.	–	ಸಮ್ಮತ್ ಚಿಕನಾಳ
ಗೋನಾಳ ಎಸ್.ಬಿ.	–	ಸಮ್ಮತ್ ಬಲಕುಂದಿ
ಗೋನಾಳ ಎಸ್.ಕೆ.	–	ಸಮ್ಮತ್ ಕಂದಗಲ್
ಚನ್ನಾಪೂರ ಎಸ್.ಕೆ.	–	ಸಮ್ಮತ್ ಕೆಸರಪಂಟಿ
ಬೂದಿಹಾಳ ಎಸ್.ಕೆ.	–	ಸಮ್ಮತ್ ಖೈರವಾಡಗಿ
ಬೂದಿಹಾಳ ಎಸ್.ಆರ್.	–	ಸಮ್ಮತ್ ರಾಯನಕೊಪ್ಪ
ಉಪನಾಳ ಎಸ್.ಸಿ.	–	ಸಮ್ಮತ್ ಚಿಕನಾಳ

೩. ಪ್ರಶ್ನಾವಳಿ

ಮಾಹಿತಿದಾರರ ವಿವರ

೧. ಹೆಸರು :
೨. ವಯಸ್ಸು :
೩. ಕೆಲಸ :
೪. ಸದ್ಯ ವಾಸವಿರುವ ಸ್ಥಳ :
೫. ಹುಟ್ಟೂರು :
೬. ಹುಟ್ಟೂರಿನಲ್ಲಿ ಕಳೆದ ಅವಧಿ :
೭. ಸಂಪರ್ಕ ವಿಳಾಸ :

ಊರಿನ ವಿವರ

೧. ಊರಿನ ಹೆಸರು (ಪರ್ಯಾಯ ಹೆಸರು ಸಹಿತ)
೨. ಹೆಸರಿನ ನಿಷ್ಪತ್ತಿ (ಜನಪದ ಶಿಷ್ಟಪದ)
೩. ತಾಲೂಕು
೪. ಜಿಲ್ಲೆ
೫. ಊರಿನಿಂದ ತಾಲೂಕಿಗೆ ಇರುವ ದೂರ
೬. ಭೌಗೋಳಿಕ ಸ್ವರೂಪ (ನದಿ, ಬೆಟ್ಟ, ಕಣಿವೆ, ಕಾಡು, ಕೆರೆ, ಹೊಳೆ)
೭. ಮಣ್ಣಿನ ಗುಣಧರ್ಮ
೮. ಬೆಳೆಯುವ ಬೆಳೆಗಳು
೯. ಶಾಸನಗಳು
೧೦. ರಾಜಕೀಯ ವಿವರ (ಆಳಿದ ರಾಜರು, ಪಾಳೆಯಗಾರರು ಇತ್ಯಾದಿ)
೧೧. ಜರುಗಿದ ರಾಜಕೀಯ ಘಟನೆಗಳು
೧೨. ಊರಿನ ಪ್ರಮುಖ ಜಾತಿ
೧೩. ಧಾರ್ಮಿಕ ವಿವರ (ದೇವರ, ಹಬ್ಬ, ಜಾತ್ರೆ, ಆಚರಣೆ, ವಿಶೇಷ ವದಂತಿಗಳು)

೧೪. ದೇವಾಲಯಗಳು (ಹೆಸರು, ಸ್ಥಿತಿ, ಶಿಲ್ಪಶೈಲಿ)

೧೫. ಆಧುನಿಕ ಕಾಲದಲ್ಲಿ ಗ್ರಾಮ ವಹಿಸಿದ ಪಾತ್ರ
(ಚಳುವಳಿ, ನಾಯಕರು, ಕಲಾವಿದರು ಇತ್ಯಾದಿ)

೧೬. ಆಧುನಿಕ ಸವಲತ್ತುಗಳು (ಶಾಲೆ, ಕಾಲೇಜು, ದವಾಖಾನೆ, ಬ್ಯಾಂಕ ಇತ್ಯಾದಿಗಳು)

೧೭. ಊರಿಗೆ ಹೆಸರು ಬರಲು ಕಥೆ.

೧೮. ಊರಿನ ಇತಿಹಾಸ (ಶಾಸನ, ಪುರಾಣ)

೧೯. ಊರಿಗೆ ಸಂಬಂಧಿಸಿದ ಗಾದೆ, ಒಗಟು, ಒಡಪು, ನುಡಿಗಟ್ಟು ಇತ್ಯಾದಿಗಳು

೪. ಗ್ರಂಥಋಣ

೧. ಆಂಧ್ರ–ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು : ಡಾ. ಜಾಜಿ ದೇವೇಂದ್ರಪ್ಪ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪

೨. ಇಂದಿನ ಕನ್ನಡ–ರಚನೆ ಮತ್ತು ಬಳಕೆ : ಡಾ. ಎಸ್.ಎನ್.ಶ್ರೀಧರ್, ಪ್ರಸಾರಾಂಗ, ಕ.ವಿ.ವಿ. ಹಂಪಿ, ೧೯೯೫

೩. ಊರು–ಕೇರಿ : ಡಾ. ಸಂಗಮೇಶ ಬಿರಾದಾರ, ಗೆಳೆಯರ ಬಳಗ, ತುಂಗಳ, ೨೦೦೯

೪. ಕಟ್ಟೋಣ ಬನ್ನಿ ಮತ್ತೊಮ್ಮೆ ಮುಳುಗುವ ಗುಡಿಗಳನ್ನು : ಶಿವಾನಂದ ಎಂ. ಜಾಮದಾರ, ಭಾ.ಆ.ಸೇ. ಆಯುಕ್ತರು, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟ, ೨೦೦೦

೫. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಡಾ.ಎಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೯೨

೬. ಕನ್ನಡ ಪರ ಚಿಂತನೆ ಮತ್ತು ಪರಂಪರೆ : ಡಾ. ಕಾ.ವೆಂ.ಶ್ರೀನಿವಾಸಮೂರ್ತಿ, ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ, ಸಿದ್ಧ ಸಂಸ್ಥಾನ ಮಠ, ಚಿಂಚಣಿ, ೨೦೦೦

೭. ಕನ್ನಡ ನಾಮವಿಜ್ಞಾನ : ಡಾ. ಎಂ.ಎಂ.ಕಲಬುರ್ಗಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೯

೮. ಕನ್ನಡ ವರ್ಣಗಳು : (ಪ್ರ.ಸಂ.) ಎಸ್.ಎಸ್.ಮಾಳವಾಡ, ಕನ್ನಡ ಸಂಶೋಧನೆ ಸಂಸ್ಥೆ, ಧಾರವಾಡ, ೧೯೫೫

೯. ಕನ್ನಡ ಶಾಸನಶಿಲ್ಪ : ಡಾ. ಡಿ.ವಿ.ಪರಮಶಿವಮೂರ್ತಿ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೯

೧೦. ಕನ್ನಡ ನಿಘಂಟು : ಒಂದನೆಯ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೮

೧೧. ಕನ್ನಡ ವಿ.ವಿ. ಶಾಸನ ಸಂಪುಟ-೯, ಬಾಗಲಕೋಟೆ ಜಿಲ್ಲೆ(ಮು.ಸಂ.) : ಡಾ. ದೇವರಕೊಂಡಾರೆಡ್ಡಿ, ಪ್ರಸಾರಾಂಗ: ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೧೨. ಕರ್ನಾಟಕದ ಸ್ಥಳನಾಮಗಳು- ಒಂದು ಅಧ್ಯಯನ : ಲೇಖಕರು: ಎಸ್.ಎಲ್.ದೇಶಪಾಂಡೆ, ಪ್ರಕಾಶಕರು-ಗೌರವ ಕಾರ್ಯದರ್ಶಿಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮

೧೩. ಕರ್ನಾಟಕ ಗ್ರಾಮಸೂಚಿ : ಲೇ: ಶ್ರೀನಿವಾಸ ರಿತ್ತಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫

೧೪. ಕರ್ನಾಟಕದ ಪುರಾತತ್ವ ನೆಲೆಗಳು : ಡಾ. ಕೆ.ಬಿ.ಶಿವತಾರಕ್, ಪ್ರಸಾರಾಂಗ: ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೫. ಕಾರ್ಕಳ ಒಂದು ಪ್ರಾದೇಶಿಕ ಅಧ್ಯಯನ : (ಸಂ) ಕೆ.ದಾಮೋದರ ಕಿಣಿ, ಶ್ರೀ ಭುವನೇಂದ್ರ ಕಾಲೇಜ್ ರಜತೋತ್ಸವ ಸ್ಮಾರಕ ಸಂಪುಟ, ಕಾರ್ಕಳ, ದಕ್ಷಿಣ ಕನ್ನಡ, ೧೯೮೫

೧೬. ಕುರುಬರ ಗುರು ಒಡೆಯರು : (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ವಿಕಾಸನ ಪ್ರಕಾಶನ, ಹೊಸಪೇಟೆ, ೨೦೦೭

೧೭. ಕೆನೆ ಮೊಸರು : (ಸಂ) ವೀರೇಂದ್ರ ಶೀಲವಂತ, ಪ್ರಕಾಶಕರು: ಸಿದ್ರಾಮ ಶಿರೋಳ, ಬೀಳಗಿ, ೨೦೦೫

೧೮. ಕೆಲವು ದೇಶನಾಮಗಳು : ಸೇಡಿಯಾಪು ಕೃಷ್ಣ ಭಟ್ಟ, ಸಾಹಿತ್ಯ ಸಂಘ, ಮಣಿಪಾಲ, ೧೯೭೫

೧೯. ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಡಾ. ಕೆಳದಿ ವೆಂಕಟೇಶ ಜೋಯಿಸ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬

೨೦. ಕೃಷ್ಣ ಪ್ರಭೆ, ನೆನಪಿನ ಸಂಚಿಕೆ : (ಪ್ರ.ಸಂ) ಡಾ. ಶೀಲಾಕಾಂತ ಪತ್ತಾರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೦

೨೧. ಗ್ಯಾಝೆಟೀಯರು : ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು: ವೆಂಕಟರಂಗೋ ಕಟ್ಟಿ, ಮುಂಬಯಿ ಗವರ್ನಮೆಂಟ್, ಸೆಂಟ್ರಲ್ ಬುಕ್ ಡಿಪೋ, ೧೮೯೩

೨೨.	ಗ್ರಾಮ ದೇವತೆಗಳು	: ಡಾ. ಸಿದ್ಧಲಿಂಗಯ್ಯ, ಅಂಕಿತ ಪುಸ್ತಕ, ಬೆಂಗಳೂರು, ೨೦೦೫
೨೩.	ಗೆಳೆಯರ ಬಳಗ, ತುಂಗಳ ದ್ವಾದಶ ವರ್ಷ ಮಹೋತ್ಸವ ಸ್ಮರಣ ಸಂಚಿಕೆ	: (ಸಂ) ಡಾ॥ ಸಂಗಮೇಶ ಬಿರಾದಾರ, ಪ್ರಕಾಶಕರು: ಎಸ್.ವಿ.ಮೈಗೂರು, ತುಂಗಳ, ೧೯೮೮
೨೪.	ಚಾಲುಕ್ಯ ಉತ್ಸವ ೨೦೦೮	: ತ್ರೈಲೋಕ್ಯ, ಪ್ರಕಾಶಕರು: ಚಾಲುಕ್ಯ ಉತ್ಸವ ಸಮಿತಿ, ಜಿಲ್ಲಾ ಭವನ, ಬಾಗಲಕೋಟೆ, ೨೦೦೮
೨೫.	ಚಾಲುಕ್ಯ ಉತ್ಸವ ೨೦೦೯	: (ಪ್ರ.ಸಂ.) ಡಾ. ವಿಜಯಕುಮಾರ ಕಟಗಿಹಳ್ಳಿ ಮಠ, ಚಾಲುಕ್ಯ ಉತ್ಸವ ಸಮಿತಿ, ಬಾಗಲಕೋಟೆ, ೨೦೦೯
೨೬.	ಚಾಲುಕ್ಯ ವಾಸ್ತುಶಿಲ್ಪ ವೈಭವ	: ಡಾ. ಕರವೀರಪ್ರಭು ಕ್ಯಾಲಕೊಂಡ, ಪ್ರಸಾರಾಂಗ, ಕ.ವಿ.ವಿ. ಹಂಪಿ, ೧೯೯೭
೨೭.	ಚಾಲಕ್ಯ ಶ್ರೀ	: ಬೆಳ್ಳಿಹಬ್ಬ ಪ್ರಕಟಣೆ, ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆ, ಬಾದಾಮಿ ೧೯೮೯
೨೮.	ಜನಪದ ಸಾಹಿತ್ಯ ದರ್ಶನ–೧೫	: (ಪ್ರ.ಸಂ) ಡಾ. ಎಸ್.ಎಂ...., (ಪ್ರ.ಸಂ) ಡಾ. ಎಸ್.ಎಂ.ವೃಷಭೇಂದ್ರಸ್ವಾಮಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪
೨೯.	ಜಮಖಂಡಿ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ	: ತೇರದಾಳ ಸಮ್ಮೇಳನಾಧ್ಯಕ್ಷರ ಭಾಷಣ, ೨೦೦೫
೩೦.	ತರ್ದವಾಡಿ ನಾಡು– ಒಂದು ಅಧ್ಯಯನ	: ಡಾ. ಎಸ್.ಕೆ.ಕೊಪ್ಪಾ, ಪ್ರಕಾಶಕರು: ಶ್ರೀಮತಿ ರಾಜೇಶ್ವರಿ ಕೊಪ್ಪಾ, ಪ್ರತಿಭಾ ಪ್ರಕಾಶನ, ಇಂಡಿ, ೧೯೯೦
೩೧.	ತುಳುನಾಡಿನ ಸ್ಥಳನಾಮಗಳು	: ಡಾ. ಕೆಮ್ತೂರು ರಘುಪತಿ ಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬

೩೨. ತ್ರೈಲೋಕ್ಯ : ಚಾಲುಕ್ಯ ಉತ್ಸವ–೨೦೦೮, ಸಂಸ್ಮರಣ ಸಂಪುಟ, (ಗೌ.ಸಂ) ಜಿ.ಎನ್.ನಾಯಕ್, ಪ್ರಕಾಶಕರು, ಚಾಲುಕ್ಯ ಉತ್ಸವ ಸಮಿತಿ–೨೦೦೮, ಬಾಗಲಕೋಟೆ

೩೩. ತೌಳವ ಸಂಸ್ಕೃತಿ : ಬಿ.ಎ.ವಿವೇಕ ರೈ, ಸಹ್ಯಾದ್ರಿ ಪ್ರಕಾಶನ, ಮೈಸೂರು.

೩೪. ದ್ರಾವಿಟ ನಿಘಂಟು : (ಸಂ) ಎ.ಸುಬ್ಬಣ್ಣ ರೈ, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೧

೩೫. ಪೂರ್ವದ ಹಳಗನ್ನಡ ಶಾಸನಗಳು : ಸಾಹಿತ್ಯಿಕ ಅಧ್ಯಯನ, ಡಾ. ಎಂ.ಬಿ. ನೇಗಿನಹಾಳ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

೩೬. ಬಸವ ಸಿರಿ, ಸ್ಮರಣ ಸಂಚಿಕೆ : (ಗೌ.ಸಂ) ಪ್ರಕಾಶ ಈ. ತಪಶೆಟ್ಟಿ, ಪ್ರಕಾಶಕರು, ಬ.ಸ. ಬ್ಯಾಂಕ ನಿ, ಬಾಗಲಕೋಟೆ, ೨೦೦೮

೩೭. ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು : ಗುರುಮೂರ್ತಿ ಪೆಂಡಕೂರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬

೩೮. ಬಾಗಲಕೋಟೆ ಜಿಲ್ಲಾ ದರ್ಶನ : (ಪ್ರ.ಸಂ) ಕಂಠಿ ಹನುಮಂತರಾಯ ಸ್ವಾಗತ ಸಮಿತಿ, ಅಖಿಲ ಭಾರತ ೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಬಾಗಲಕೋಟ, ೨೦೦೦

೩೯. ಬಾಗಿಲು : (ಪ್ರ.ಸಂ) ಮಲ್ಲಿಕಾರ್ಜುನ ಹಿರೇಮಠ, ಸ್ವಾಗತ ಸಮಿತಿ, ಅಖಿಲ ಭಾರತ ೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಬಾಗಲಕೋಟ, ೨೦೦೦

೪೦. ಬಾದಾಮಿ ಸಾಂಸ್ಕೃತಿಕ ಅಧ್ಯಯನ : ಡಾ. ಶೀಲಾಕಾಂತ ಪತ್ತಾರ, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೦

೪೧. ಬಾದಾಮಿ : ಡಾ. ಶೀಲಾಕಾಂತ ಪತ್ತಾರ, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೬

೪೨. ಬೀರದೇವರು ಸಂಪ್ರದಾಯ ಮತ್ತು ಆಚರಣೆಗಳು : ದೊಡ್ಡಣ್ಣ ಎಚ್. ಗದ್ದನಕೇರಿ, ಕಮಲ ಪ್ರಕಾಶನ, ಚಿತ್ತವಾಡಗಿ.

೪೩. ಬೆರಕೆಸೊಪ್ಪು : ಜವರೇಗೌಡ ದೇ., ಸುರುಚಿ ಪ್ರಕಾಶನ, ಮೈಸೂರು, ೧೯೭೧

೪೪. ಬೆಳವಲದ ಬೆಡಗು : ಲೇ: ಸಿದ್ಧರಾಜ ಪೂಜಾರಿ, ಜಯವಂತ ಕಾಡದೇವರ, ಅಖಿಲ ಭಾರತ ೬೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮುಧೋಳ, ೧೯೯೫

೪೫. ಮಂಗರಾಜ ನಿಘಂಟು : ಅಭಿನವಭಿದಾನಂ, ಲೇ. ಅಭಿನವ ಮಂಗರಾಜ, (ಸಂ) ಎಂ.ಮರಿಯಪ್ಪ ಭಟ್ಟ, ಪ್ರಕಾಶಕರು: ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್, ೧೯೫೨

೪೬. ಮಾರ್ಗ–೧ : ಡಾ. ಎಂ.ಎಂ.ಕಲಬುರ್ಗಿ, ಪ್ರಕಾಶಕರು: ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೫

೪೭. ಮಾರ್ಗ–೨ : ಡಾ. ಎಂ.ಎಂ.ಕಲಬುರ್ಗಿ, ಪ್ರಕಾಶಕರು: ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೫

೪೮. ಮುಚಖಂಡಿ ಶ್ರೀ ವೀರಭದ್ರೇಶ್ವರ ಮಹಾತ್ಮೆ : ಲೇ: ಗುರುಸ್ವಾಮಿ ಗಂಗಯ್ಯ ಗಣಾಚಾರಿ, ಕಾವ್ಯಶ್ರೀ ಪ್ರಕಾಶನ, ಮುಚಖಂಡಿ, ೧೯೯೧

೪೯. ರವಿಕೀರ್ತಿ : ಚಾಲುಕ್ಯ ಉತ್ಸವ ೨೦೦೭, ಸಂಸ್ಮರಣ ಸಂಪುಟ, (ಗೌ.ಸಂ) ಜಿ.ಎನ್.ನಾಯಕ ಪ್ರಕಾಶಕರು: ಚಾಲುಕ್ಯ ಉತ್ಸವ ಸಮಿತಿ ೨೦೦೭, ಬಾಗಲಕೋಟೆ

೫೦. ಲೋಕೋಪಕಾರ : ಲೇ: ಚಾವುಂಡರಾಯ, (ಸಂ) ಎಚ್.ಶೇಷ ಅಯ್ಯಂಗಾರ, ಒರೆಯಂಟಲ್ ಲೈಬ್ರರಿ, ಮದ್ರಾಸ್, ೧೯೫೦

೫೧. ವಾಗರ್ಥ : ಎಂ.ಚಿದಾನಂದಮೂರ್ತಿ, ಬಾಪ್ಕೋ ಪಬ್ಲಿಕೇಶನ್, ಬೆಂಗಳೂರು, ೧೯೮೧

೫೨. ವಿಜಾಪೂರ ಜಿಲ್ಲೆಯ ಜಾತ್ರೆಗಳು : ಡಾ. ಆರ್.ಆಯ್.ಚಪ್ಪರಬಂದ, ಯಾಸ್ಮಿನ್ ಪ್ರಕಾಶನ, ಬಿಜಾಪೂರ, ೨೦೦೬

೫೩. ವಿಜಾಪುರ ಜಿಲ್ಲೆ–ಕರ್ನಟಕ ರಾಜ್ಯ ಗ್ಯಾಸೆಟಿಯರ್ : (ಮು.ಸಂ) ಡಾ. ಆರ್.ಮುನಿಸ್ವಾಮಿ, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೯೯

೫೪. ಶಂಬಾ ಕೃತಿ ಸಂಪುಟ(೧–೪) : (ಸಂ) ಮಲ್ಲೇಪುರಂ ಜಿ. ವೆಂಕಟೇಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೫೫. ಶಾಸನ ಸಂಗ್ರಹ : (ಸಂ) ಎ.ಎಂ.ಅಣ್ಣಿಗೇರಿ, ಆರ್.ಶೇಷಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩

೫೬. ಸಕಲೇಶಪುರ ಪರಿಸರದ ಸ್ಥಳನಾಮಗಳು : ಡಾ. ವಿಶ್ವನಾಥ, ದೇವಿ ಪ್ರಕಾಶನ, ಮೈಸೂರು, ೧೯೯೬

೫೭. ಸ್ಥಳನಾಮಗಳು : ಡಾ. ವಿಶ್ವನಾಥ, ಸಂವಹನ ಪ್ರಕಾಶನ, ಮೈಸೂರು, ೧೯೯೬

೫೮. ಸ್ಥಳನಾಮಗಳ ಅಧ್ಯಯನ : ಲೇಖನಗಳ ಸಂಗ್ರಹ, (ಸಂ) ಪ್ರೊ. ಡಿ. ಲಿಂಗಯ್ಯ, ಡಾ. ಚಕ್ಕೆರೆ ಶಿವಶಂಕರ್, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೨೦೦೮

೫೯. ಸ್ಥಳನಾಮಗಳ ಅಧ್ಯಯನ ಮತ್ತಿತರ ಪ್ರಬಂಧಗಳು : ಡಾ. ಕೆ.ಜಿ.ಗುರುಮೂರ್ತಿ, ಕನ್ನಡ ಸಾಹಿತ್ಯ : ಪರಿಷತ್ತು, ಬೆಂಗಳೂರು, ೨೦೦೭

೬೦. ಸ್ಥಳನಾಮಗಳು ಪರಿವರ್ತನೆ ಮತ್ತು ಪ್ರಭಾವ : (ಸಂ) ಕೆ.ವಿ.ನಾರಾಯಣ, ಪ್ರಸಾರಾಂಗ ಕ.ವಿ.ವಿ., ಹಂಪಿ, ೧೯೯೯

೬೧. ಸ್ಥಳನಾಮ ವ್ಯಾಸಂಗ : ಡಾ. ದೇ. ಜವರೇಗೌಡ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೦

೬೨. ಸ್ಥಳನಾಮ ವೀರರು : ಡಾ. ಕೂಡ್ಲೂರು ವೆಂಕಟಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೭

೬೩. ಸಾಮರಸ್ಯ ನೆನಪಿನ ಸಂಚಿಕೆ : (ಸಂ) ಸತ್ಯಾನಂದ ಪಾತ್ರೋಟ, ಪ್ರಕಾಶಕರು: ಎಸ್.ಆರ್. ಪಾಟೀಲ, ಬಾಗಲಕೋಟ, ೨೦೦೧

೬೪. ಸಿದ್ಧಾರ್ಥ : (ಗೌ.ಸಂ) ರೇಣುಕಯ್ಯ ಎಸ್. ಶಾಸ್ತ್ರಿ, ಪ್ರಕಾಶಕರು: ಡಾ. ಸಾಹೇಬ ಅಂಬೇಡ್ಕರ್ ಸೇವಾ ಸಮಿತಿ, ಇಲಕಲ್ಲ, ೨೦೦೮

೬೫. ಸ್ವಸ್ತಿ : ದತ್ತಿ ಉಪನ್ಯಾಸ ಮಾಲಿಕೆ, (ಪ್ರಸಂ) ವಿಶ್ವನಾಥ ವಂಶಾಕೃತಮಠ ಬಾದಾಮಿ ತಾಲೂಕಾ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೮

೬೬. ಹಸುರು ಹೊನ್ನು : ಬಿ.ಜಿ.ಎಲ್.ಸ್ವಾಮಿ, ಪ್ರಕಾಶಕರು: ಮೈಸೂರು ಕಾವ್ಯಾಲಯ, ೧೯೭೬

೬೭. ಹಳ್ಳಿಯ ಅಧ್ಯಯನ ಕಾಗಿನೆಲೆ : ಹೊರೆಯಾಲ ದೊರೆಸ್ವಾಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೬೮. ಹೆಸರಿನಲ್ಲೇನಿದೆ.....? : ಆರ್ಕೆ ಮಣಿಪಾಲ, ನ್ಯೂ ಸ್ಟಾರ್ ಪಬ್ಲಿಕೇಶನ್ಸ್, ಬೆಂಗಳೂರು, ೧೯೮೯

೬೯. ಹೊನ್ನಗುಂದು ತಾಲೂಕು ದರ್ಶನ : ಪ್ರಕಾಶಕರು: ಹುನಗುಂದ ತಾಲೂಕು ೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಹುನಗುಂದ, ೨೦೦೮

೭೦. ಹೊನ್ನೆಲೆಗಳು : ಡಾ. ನಾ.ಕೋಟ್ರೇಶ್ ಉತ್ತಂಗಿ, ಪ್ರಕಾಶಕನ ಸಹನಾದ್ರಿ, ಹೊನ್ನಾಳಿ, ೨೦೦೪

೭೧. ಹೊಸತು ಹೊಸತು : ಎಂ.ಚಿದಾನಂದಮೂರ್ತಿ, ಪ್ರಕಾಶಕರು: ಚಿ.ಶ್ರೀನಿವಾಸರಾಜು, ನಿರ್ದೇಶಕರು, ಪ್ರಸಾರಾಂಗ, ಪ್ರಕಾಶಕರು: ಕನ್ನಡ ವಿಶ್ವವಿದ್ಯಾಲಯ, ಹಂಪಿ.